ಚಿಂತನ ಬಯಲು

ತ್ರೈಮಾಸಿಕ ISSN 2278-2192

ಸಂಪುಟ : 14, ಸಂಚಿಕೆ : 1 ಜುಲೈ–ಸಪ್ಟೆಂಬರ್ 2025
Volume : 14, Issue : 1 July - September 2025

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಹೆಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574219

CHINTHANA BAYALU
Kannada Quarterly; A Peer Reviewed Journal ISSN: 2278-2192

Volume 14, Issue 1, July - September 2025

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574219
Karnataka
Mobile : 8217703698
Email : chinthanabayalu@gmail.com
website: www.chinthanabayalu.in

© : Reserved

Size : Dy 1/8

Paper Used : 70 GSM

Pages : 232

Price : Rs. 50

Cover Photo : **Girish Bhat**
ದೆಹಲಿಯ ಕುತುಬ್‌ಮಿನಾರ್ ಬಳಿಯ ಗೋಡೆ

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2972002 / 7019225774

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಶಾಸನೋಕ್ತ ಹೊನ್ನತ್ತಿ – ಒಂದು ಅವಲೋಕನ
❖ **ಡಾ. ಸಿದ್ದಲಿಂಗಮ್ಮ ಬಿ.ಜಿ. / 9**

2. ಮೊಗಸಾಲೆಯವರ ಕಾದಂಬರಿಗಳು
❖ **ಡಾ. ಬಿ. ಜನಾರ್ದನ ಭಟ್ / 13**

3. ಕಲ್ಯಾಣ ಕರ್ನಾಟಕದಲ್ಲಿ ವಾದನಸಂಗೀತದ ಬೆಳವಣಿಗೆ
❖ **ಡಾ. ಜಯಮ್ಮ ಯಶವಂತಪ್ಪ ಡಿ. / 25**

4. ಆಧುನಿಕ ಮಹಾಕಾವ್ಯಗಳು: ವಸ್ತು–ವಿನ್ಯಾಸದ ವೈಶಿಷ್ಟ್ಯ
❖ **ಡಾ. ಬಸವರಾಜು ಕೆ. / 28**

5. ಕದಿರ ರೆಮ್ಮವ್ವೆ (ರೆಬ್ಬೆವ್ವೆ) ವಚನಗಳಲ್ಲಿ ಸತಿಪತಿ ಭಾವ ಮತ್ತು ಕಾಯಕನಿಷ್ಠೆ
❖ **ಡಾ. ಚಂದ್ರಶೇಖರ ವೈ / 34**

6. ನಡುಗನ್ನಡ ಕಾವ್ಯಗಳಲ್ಲಿ ಸಿದ್ಧರಾಮ
❖ **ಡಾ. ರಣಧೀರ / 38**

7. ತುಮಕೂರು ಜಿಲ್ಲೆಯ ಮೊದಲ ಸಂಸ್ಕೃತ ಶಿಲಾಶಾಸನ
❖ **ಸತೀಶ್ ಎ.ಎಂ. / 43**

8. ತೈಲೂರು ವೆಂಕಟಕೃಷ್ಣ ಅವರ 'ಅಗ್ನಿಕುಂಡ' ಕಾದಂಬರಿಯಲ್ಲಿ ಗಾಂಧಿ ಚಿಂತನೆಗಳು
❖ **ಡಾ. ಸುಂದರಿ ಡಿ. / 49**

9. 'ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ' ಕೃತಿಯ ಅವಲೋಕನ
❖ **ಡಾ. ಸುರೇಶ ಹನಗಂಡಿ / 54**

10. 'ಶರಪಂಜರ' ಸಿನಿಮಾ: ಒಂದು ವಿಮರ್ಶೆ
❖ **ಡಾ. ಸುಶ್ಮಿತಾ ವೈ / 57**

11. ಕುವೆಂಪು ಕವನಗಳಲ್ಲಿ ನೇಗಿಲಯೋಗಿ
❖ **ಡಾ. ಎಚ್.ಕೆ. ವೆಂಕಟೇಶ**
❖ **ಡಾ. ರವಿ ಎನ್.ಸಿ. / 63**

12. ಕೊಡಗಿನ ಬುಡಕಟ್ಟು ಸಮುದಾಯದವರ ವಿಶಿಷ್ಟ ಆಚರಣೆ ಬೇಡುಹಬ್ಬ (ಬೋಡುನಮ್ಮೆ, ಕುದುರೆ ಹಬ್ಬ)
❖ **ಡಾ. ವೆಂಕಟೇಶ್ ವಿ. / 68**

13. ಒಂದು ದೇಶ, ಒಂದು ಚುನಾವಣೆ : ಒಂದು ಅವಲೋಕನ
❖ **ಡಾ. ಡಿ. ಎಲ್. ಪವಾರ / 73**

14. ಮಾನವನ ಸಾಮಾಜಿಕ ಜೀವನ ಮತ್ತು ಸಂತೋಷ : ಒಂದು ವಿಶ್ಲೇಷಣೆ
❖ **ಡಾ. ಜಗದೀಶ ಎಂ. / 77**

15. ಮಳವಳ್ಳಿ ಪ್ರಾಂತ್ಯದ ಮ್ಯಾದರ ಭಾಷಿಕ ವಿಶ್ಲೇಷಣೆ
❖ **ಡಾ. ಶಿವಣ್ಣ ಕೆಂಸಿ / 82**

16. ಆಧುನಿಕ ಕನ್ನಡ ಸಾಹಿತ್ಯ ಮತ್ತು ಸ್ತ್ರೀಪರ ಚಿಂತನೆ
❖ **ಡಾ. ಅಶೋಕ ಎಸ್. ಕೋರೆ / 86**

17. ಕನ್ನಡ ಸಂಶೋಧನಾ ಘಟ್ಟಗಳು ಮತ್ತು ಮುಂದಿನ ಸಾಧ್ಯತೆಗಳು
❖ **ಡಾ. ಬಸವರಾಜ ಸಾಲವಾಡಗಿ / 91**

18. ಬಸವಣ್ಣನವರ ಬಹುಮುಖೀ ವ್ಯಕ್ತಿತ್ವ
❖ **ಡಾ. ಆನಂದಕುಮಾರ ಎಂ. ಜಕ್ಕಣ್ಣವರ / 96**

19. ನಾದದ ನದಿಯೊಂದು ನಡೆದ್ಹಾಂಗ: ವ್ಯಕ್ತ ಮಾಧ್ಯಮದಲ್ಲಿ ಅವ್ಯಕ್ತ ಸಂಗೀತ
❖ **ಡಾ. ಗೀತಾ ವಸಂತ / 100**

20. ರಾಷ್ಟ್ರನಿರ್ಮಾಣದಲ್ಲಿ ಭಾಷೆಯ ಪಾತ್ರ
❖ **ಡಾ. ಎಚ್.ಎಮ್. ಚನ್ನಪ್ಪಗೋಳ / 107**

21. ರಂಗ ಚರಿತ್ರೆಯನ್ನು ದಾಖಲಿಸುವ ಸಿದ್ದಲಿಂಗ ಪಟ್ಟಣಶೆಟ್ಟಿ ಅವರ 'ರಂಗಾಯಣ'
❖ **ಡಾ. ರಘುನಂದನ್ ಬಿ.ಆರ್. / 111**

22. ನಿರಂಜನರ 'ಚಿರಸ್ಮರಣೆ' ಕಾದಂಬರಿಯಲ್ಲಿ ಭೂ ಸಂಘರ್ಷ
❖ **ಡಾ. ಸಂದೀಪ್ ಡಿ.ಡಿ. / 115**

23. ಯುರೋಪಿನ ಫ್ಯಾಂಟಸಿ ಕತೆಗಳಲ್ಲಿನ ಸಂರಚನೆಗಳು:
Hansel and Gartel ಕತೆಯ ಓದು
❖ **ಸರಸ್ವತಿ ಕೆ.ಬಿ. / 120**

24. ಜಾನಪದ ಸಂಸ್ಕೃತಿ ಮತ್ತು ಜಾಗತೀಕರಣ
❖ **ಡಾ. ಸೌಮ್ಯ ಕೆ.ಸಿ. / 125**

25. ಹಠಮಾರಿ ಹೆಣ್ಣು ಬೇವಿನಹಟ್ಟಿ ಕಾಳಮ್ಮ
❖ **ಡಾ. ಎಂ.ವೈ. ಶಿವರಾಮು / 129**

26. ಶಿಶುನಾಳ ಶರೀಫರಲ್ಲಿನ ಸಾಮೂಹಿಕ ಪ್ರಜ್ಞೆ
(ಸುಗ್ಗಿ ಮಾಡೋಣ ಬಾರವ್ವ ಕೀರ್ತನೆಯ ಹಿನ್ನೆಲೆಯಲ್ಲಿ)
❖ **ಡಾ. ಶಬೀನಾ / 134**

27. ವಚನಕಾರರಲ್ಲಿ ಜಾತಿಯ ಪರಿಕಲ್ಪನೆಯ ಸ್ವರೂಪ
❖ **ಡಾ. ಶಾಂತಮ್ಮ ಟಿ.ಆರ್. / 137**

28. 'ವಿಮುಕ್ತಿ'ಯ ಸೀತೆ
❖ **ಡಾ. ಶಶಿಕಲಾ ಆರ್. / 139**

29. ಕನ್ನಡ ಜೈನ ಸಾಹಿತ್ಯದ ಹಿಂದಿರುವ ಕರ್ಮಸಿದ್ಧಾಂತ
❖ **ಮಹಾವೀರ ಜೈನ್ / 142**
30. ಶಾಂತಿನಾಥ ದೇಸಾಯಿ ಕಥೆಗಳಲ್ಲಿನ ಸ್ತ್ರೀ ಪಾತ್ರಗಳಸಂಘರ್ಷದ ನೆಲೆಗಳು
❖ **ಶ್ರೀಮತಿ ಲಕ್ಷ್ಮಿ ಎ.ಎಂ.**
❖ **ಡಾ. ಅಜ್ಜಪ್ಪ ಜಿ.ಇ. / 147**
31. ಮಂಟೇಸ್ವಾಮಿ ಕಾವ್ಯದಲ್ಲಿ ಮಂಟೇದಯ್ಯನವರು ಕೆಂಪಾಚಾರಿಯನ್ನು ಶಿಶುಮಗನಾಗಿ ಪಡೆಯುವ ಪ್ರಸಂಗ
❖ **ಡಾ. ಶಾರದಮ್ಮ / 152**
32. ಭಾರತೀಯ ಸಿನಿಮಾದಲ್ಲಿ ಕ್ರೌರ್ಯ ಮನೋ–ಸಾಮಾಜಿಕ ವಿಶ್ಲೇಷಣೆ
❖ **ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್.ಕೆ. / 157**
33. ಶಾಸನ ಮತ್ತು ಸ್ಥಳೀಯ ಇತಿಹಾಸದಲ್ಲಿ ಕುಕ್ಕೆ ಸುಬ್ರಹ್ಮಣ್ಯ
❖ **ಡಾ. ಪ್ರಸಾದ ಎನ್. / 163**
34. ಅಂಬಿಗರ ಚೌಡಯ್ಯನ ವಚನಗಳಲ್ಲಿ ಲೋಕನೀತಿ
❖ **ಡಾ. ಮಂಜುನಾಥ ಎಂ.ಎಂ. / 171**
35. ಯಶವಂತ ಚಿತ್ತಾಲರ 'ಮೂರುದಾರಿಗಳು' ಕಾದಂಬರಿಯಲ್ಲಿ ನಿರ್ಮಲೆಯ ಅಪ್ರಬುದ್ಧ ಬಂಡಾಯ
❖ **ಡಾ. ವರುಣ್ ಎಂ. / 175**
36. ಸು.ರಂ. ಎಕ್ಕುಂಡಿಯವರ ಕಾವ್ಯ
❖ **ಡಾ. ತೇಜಾವತಿ ಕೆ. / 180**
37. ಭಾಷಾಂತರದಲ್ಲಿ ಮೇಲು ಕೀಳಿನ ಪ್ರಶ್ನೆ
❖ **ಡಾ. ಅಮರೇಂದ್ರ ಶೆಟ್ಟಿ ಆರ್. / 186**
38. ನಾಟ್ಯಮಯೂರಿ ಹೊಯ್ಸಳೇಶ್ವರ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ಕಥನ
❖ **ಕಿರಣ ವಲ್ಲೇಪುರೆ / 197**
39. ಹರಿದಾಸ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಐತಿಹಾಸಿಕ ಅಧ್ಯಯನ
❖ **ಮೋಹನ ರೆಡ್ಡಿ ಜಿ. / 201**
40. ಕೊಕಟನೂರ ಗ್ರಾಮದ ಪ್ರಾದೇಶಿಕ ಚರಿತ್ರೆ
❖ **ಡಾ. ಸದ್ದಾಮ ಹುಸೇನ ಇ. ಮುಜಾವರ / 206**
41. ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಒಂದು ಒಳನೋಟ
❖ **ಡಾ. ಸುಂದ್ರೇಶ ಎನ್. / 211**
42. ಜನ್ನನ 'ಯಶೋಧರ ಚರಿತೆ' ಕಾವ್ಯದ ಹೆಚ್ಚುಗಾರಿಕೆ
❖ **ಡಾ. ವಿಜಯೇಂದ್ರ ಕುಮಾರ್ ಜಿ.ಎಲ್. / 216**
43. ಸಣ್ಣಕತೆಗಾರರಾಗಿ ತ.ರಾ. ಸುಬ್ಬರಾಯ
❖ **ಡಾ. ತಿಪ್ಪೇಸ್ವಾಮಿ ಡಿ.ಎಸ್./ 222**
44. ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ
❖ **ಡಾ. ಕಲ್ಲಯ್ಯ ಎಸ್. ಹಿರೇಮಠ / 225**
45. ಪಂಜೆಯವರ ಬಾಲಕಥೆಗಳು
❖ **ರೇಶ್ಮಾ ಭಟ್ / 230**

ಸಂಪಾದಕೀಯ

ಕನ್ನಡದ ಬೌದ್ಧಿಕ ವಲಯದಲ್ಲಿ ಸಾಹಿತ್ಯ–ಸಂಸ್ಕೃತಿಗಳ ಬಗೆಗಿನ ಚಿಂತನೆಯನ್ನು ಬೆಳೆಸುವಲ್ಲಿ ಹಾಗೂ ಸಂಶೋಧನಪ್ರವೃತ್ತಿಯನ್ನು ಉತ್ತೇಜಿಸುವಲ್ಲಿ 'ಚಿಂತನ ಬಯಲು' ತ್ರೈಮಾಸಿಕವು ತನ್ನದೇ ಆದ ರೀತಿಯಲ್ಲಿ ಕೊಡುಗೆಯನ್ನು ನೀಡುತ್ತ ಬಂದಿದೆಯೆಂಬುದು ಓದುಗರಿಗೆಲ್ಲ ತಿಳಿದ ವಿಚಾರವೇ ಆಗಿದೆ. ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣದ ಹಂತದಲ್ಲಿ ಸಾಹಿತ್ಯ ಮತ್ತು ಸಮಾಜವಿಜ್ಞಾನ ವಿಷಯಗಳನ್ನು ಕಲಿಯಲು ಪ್ರತಿಭಾವಂತರು ಏನೇನೂ ಆಸಕ್ತಿ ತೋರಿಸುತ್ತಿಲ್ಲ. ಅಂದರೆ ಒಟ್ಟಾರೆಯಾಗಿ ಸದ್ಯದ ನಮ್ಮ ಶೈಕ್ಷಣಿಕ ವಾತಾವರಣವು ಇಂತಹ ವಿಷಯಗಳ ಮಟ್ಟಿಗೆ ಉತ್ಸಾಹ ಹುಟ್ಟಿಸುವಂತೆ ಇಲ್ಲ. ವಾಟ್ಸಪ್, ಫೇಸುಬುಕ್ ಇಂತಹ ವೇದಿಕೆಗಳಲ್ಲಿ ತಮ್ಮ 'ಅಭಿಪ್ರಾಯ'ಗಳನ್ನು ಮಂಡಿಸುವವರೇ ಸಾಹಿತ್ಯ ಚಿಂತಕರು ಮತ್ತು ಸಮಾಜವಿಜ್ಞಾನಿಗಳು ಎಂದು ಕರೆಸಿಕೊಳ್ಳುವ ಕಾಲದಲ್ಲಿ ನಾವಿದ್ದೇವೆ. ತಮ್ಮ ತಮ್ಮ ಉದ್ಯೋಗ, ಪಿಎಚ್.ಡಿ. ಇಂತಹ ಅಗತ್ಯಗಳಿಗಾಗಿ ವಿಮರ್ಶೆ ಅಥವಾ ಸಂಶೋಧನ ಲೇಖನಗಳನ್ನು ಬರೆಯುವವರು ಬೇಕಾದಷ್ಟು ಮಂದಿ ಇದ್ದಾರೆ. ಆದರೆ ಅಂತಹ ಲೇಖನಗಳನ್ನು ಓದುವವರು ಮತ್ತು ಓದಿಸುವವರು ಎಷ್ಟು ಮಂದಿ ಇದ್ದಾರೆ ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗ ಬರುವ ಉತ್ತರ ತೀರಾ ನಿರಾಸೆಯನ್ನು ಉಂಟುಮಾಡುತ್ತದೆ.

ಈ ಸಂಚಿಕೆಯಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ವೈವಿಧ್ಯಮಯ ಲೇಖನಗಳಿವೆ. ಓದುಗರ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತೇವೆ.

–ಸಂ.

ಶಾಸನೋಕ್ತ ಹೊನ್ನತ್ತಿ – ಒಂದು ಅವಲೋಕನ

ಡಾ. ಸಿದ್ದಲಿಂಗಮ್ಮ ಬಿ.ಜಿ.
ಇತಿಹಾಸ ಸಹ ಪ್ರಾಧ್ಯಾಪಕರು, ಸ.ಪ್ರ.ದ. ಮಹಿಳಾ ಕಾಲೇಜು, ದಾವಣಗೆರೆ–04

ದೇಶದ ಸಾಂಸ್ಕೃತಿಕ ಇತಿಹಾಸರಚನೆಯಲ್ಲಿ ಗ್ರಾಮಗಳ ಪಾತ್ರ ಬಹು ದೊಡ್ಡದು. ಸ್ಥಳನಾಮಗಳ ಮೇಲೆ ಪ್ರಾಕೃತಿಕ ಹಾಗೂ ಭೌಗೋಳಿಕ ಅಂಶಗಳು ಬಹಳಷ್ಟು ಪ್ರಭಾವ ಬೀರಿರುವುದನ್ನು ಗಮನಿಸುತ್ತೇವೆ. ಹಾಗೆಯೇ ಒಂದು ಪ್ರದೇಶದ ಆರ್ಥಿಕ ಸಿರಿ, ಸಂಪತ್ತನ್ನು ಗಮನದಲ್ಲಿಟ್ಟುಕೊಂಡು ಆ ಹಿನ್ನೆಲೆಯಲ್ಲಿ ರೂಪಗೊಂಡ ಸ್ಥಳನಾಮಗಳಲ್ಲಿ ಹೊನ್ನತ್ತಿಯು ಒಂದು.

ಹೊನ್ನತ್ತಿಯು ಇಂದಿನ ಹಾವೇರಿ ಜಿಲ್ಲೆಯ ರಾಣೇಬೆನ್ನೂರಿನಿಂದ ಉತ್ತರಕ್ಕೆ 14 ಕಿ.ಮೀ ದೂರದಲ್ಲಿದೆ. ಈ ಊರು ರಾಷ್ಟ್ರಕೂಟರ ಕಾಲದಷ್ಟು ಪ್ರಾಚೀನವಾಗಿದೆ. ಪ್ರಾಚೀನ ಸ್ಮಾರಕಗಳನ್ನು ಸಮೃದ್ಧವಾಗಿ ಹೊಂದಿರುವ ಈ ಗ್ರಾಮವು 10–11ನೆಯ ಶತಮಾನದಲ್ಲಿ ಪ್ರಮುಖ ಪಟ್ಟಣವಾಗಿತ್ತು ಎಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. ಶಾಸನಗಳಲ್ಲಿ 'ಪುನ್ನಮನ್ತಿ',[1] 'ಅಗ್ರಹಾರ ಹೊನವತ್ತಿ'[2], 'ಪೊಂನವತ್ತಿ',[3] 'ಪೊನ್ನವರ್ತಿ', 'ಹೊಂನವತ್ತಿ'[4] ಎಂದೆಲ್ಲಾ ಉಲ್ಲೇಖಗೊಂಡಿರುವ 'ಹೊನ್ನತ್ತಿ' ಯ ಪ್ರಾಚೀನರೂಪ 'ಪುನ್ನವನ್ತಿ'[5], ಪೊನ್ನವರ್ತಿ ಎಂದರೆ ಹೊನ್ನಿನ ಚಿಲುಮೆ ಎಂದು ಅರ್ಥವಿದ್ದು, ಒರತೆಯಿಂದಾಗಿ ಈ ಹೆಸರು ಬಂದಿರುವಂತೆ ತೋರುತ್ತದೆ. ರಾಷ್ಟ್ರಕೂಟ ಎರಡನೆ ಕೃಷ್ಣನ ಕಾಲದಲ್ಲಿ 'ಪುನ್ನಮನ್ತಿ' ಎಂದು ಉಲ್ಲೇಖಗೊಂಡು ಮುಂದೆ 'ಪೊನ್ನವರ್ತಿ', 'ಹೊಂನವತ್ತಿ', 'ಹೊನವತಿ', ಎಂದು ಬದಲಾವಣೆಗೊಳ್ಳುತ್ತ ಈಗ 'ಹೊನ್ನತ್ತಿ' ಎಂದು ಕರೆಯಲ್ಪಡುತ್ತದೆ.

ಹನ್ನೆರಡು ಗ್ರಾಮಗಳಿಗೆ ಮುಖ್ಯ ಗ್ರಾಮವಾದ ಇದು ಬನವಾಸಿ ಹನ್ನೆರಡು ಸಾವಿರದೊಳಗಿನ ಚಿಕ್ಕ ವಿಭಾಗ. ಇದರ ಉಲ್ಲೇಖ ಹೊನ್ನತ್ತಿ ಶಾಸನದಲ್ಲಿ 'ಬನವಾಸೆನಾಡ ಬಳಿಯನಾದಿಯಗ್ರಹಾರಂ ಹೊನ್ನವರ್ತ್ತಿಯಂ'[6] ಎಂದೂ, 'ಪೊನ್ನವರ್ತಿ ಪನ್ನೆರಡಂ"[7] ಎಂದೂ ಬರುತ್ತದೆ. ರಾಷ್ಟ್ರಕೂಟರ 2ನೇ ಕೃಷ್ಣನ ಕಾಲದಲ್ಲಿ ಬನವಾಸಿ ಹನ್ನೆರಡು ಸಾವಿರದ ಆಡಳಿತ ವಿಭಾಗವಾಗಿ 'ಪುನ್ನವನ್ತಿ ಪನ್ನೆರಡು'[8] ಎಂದು ಗುರುತಿಸಿಕೊಂಡಿದೆ. ಚೆಲ್ಲಕೇತನ ವಂಶದ ಲೋಕಟೆಯು ಬನವಾಸಿ ಹನ್ನೆರಡು ಸಾವಿರವನ್ನು ಆಳುತ್ತಿರುವಾಗ ಅವನ ಮಗನಾದ ಕಲಿಬಿಟ್ಟನು 'ಪುನ್ನವನ್ತಿ ಪನ್ನೆರಡು' ವಿಭಾಗದ ಆಡಳಿತವನ್ನು ನಡೆಸುತ್ತಿದ್ದನೆಂದು ಶಾಸನದ ಉಲ್ಲೇಖವಿದೆ.

ಕಲ್ಯಾಣಿ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಕ್ರಿ.ಶ.1024ರ ಶಾಸನದಿಂದ[9] ಹೊನ್ನತ್ತಿಯು ಚಾಲುಕ್ಯ ಸಾಮಂತರಾದ ಗುತ್ತಲದ ಗುತ್ತರ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿಯುತ್ತದೆ. ಗುತ್ತರಸ ಮಲ್ಲಿದೇವನ ಸಹೋದರನಾದ ಜೋಯಿದೇವನ ಪ್ರಧಾನರಾದ ದೇಕಣ್ಣ ಮತ್ತು ನಾಕಣ್ಣರಿಂದ ಪ್ರತಿಷ್ಠಾಪಿಸಲ್ಪಟ್ಟ ಚಾಮೇಶ್ವರ ದೇವರಿಗೆ ಬಿಟ್ಟ ದಾನವನ್ನು ಉಲ್ಲೇಖಿಸುವ ಶಾಸನವು ಹೊನ್ನತ್ತಿ ಊರನ್ನು ಬಹುವಾಗಿ ವರ್ಣಿಸಿದೆ.

"ಕುಂತಳ ವಿಷಯವಧೂಟೀಕಾಂತಿಸಮೇತಾನನಕ್ಕೆ ಮೂಗಿನವೋಲೆ ಚೆಲ್ವಂ

ತಳೆದು ತೋರ್ಪುದಖಿಳಾಸಾನ್ತಾವೃತಕೀರ್ತಿ ಪೊನ್ನವರ್ತ್ತಿಗ್ರಾಮ// ಸುರಪುರಮಂ ಪಳಂಚಲೆದು ಭೋಗವತೀಪುರಮಂ ತಗುಳ್ದುಧಿಕ್ಕರಿಸಿ ಕುಬೇರನಿಕ್ಕೆಯ ಯಳಕಾಪುರಮಂ ಪಳಿದೆಯ್ದೆ ತನ್ನ ಬಿತ್ತರಮನೆ ಲೋಕದೊಳ್ಮೆರೆದುರಂಜಿಸುವಗ್ಗದ ಪೊನ್ನವರ್ತ್ತಿಯಂ..."

ಕುಂತಲದೇಶವು ವಧುವಾದರೆ ಪೊನ್ನವರ್ತ್ತಿ ಗ್ರಾಮವು ಅವಳ ಮೂಗಿನ ಓಲೆಯಾಗಿತ್ತು. ಕುಬೇರನ ಸುರಪುರ, ಭೋಗವತಿಪುರವನ್ನು ನಾಚಿಸುವಷ್ಟು ಸಂಪತ್ತಿನಿಂದ ಕೂಡಿತ್ತು. ಊರುಗಳ ಚಕ್ರವರ್ತಿ ಇದೆಂದು ಶಾಸನವು ಬಣ್ಣಿಸಿದೆ. ಅಲ್ಲದೆ ಇಲ್ಲಿ ಶೈವ, ವೈಷ್ಣವ, ಜೈನ, ಬೌದ್ಧ ದೇವಾಲಯಗಳನ್ನು ನಿರ್ಮಿಸಲಾಗಿತ್ತು. ಸರ್ವಧರ್ಮಗಳ ಸಾಮರಸ್ಯ ಇಲ್ಲಿ ಇತ್ತೆಂದು ಶಾಸನ ತಿಳಿಸುತ್ತದೆ.

ಕ್ರಿ.ಶ.1187ರ ಗುತ್ತರಸ ಎರಡನೆ ಜೋಯಿದೇವನ ಕಾಲದ ಶಾಸನವು[10] ಹೊನ್ನತ್ತಿಯನ್ನು 'ಹೊನವತಿ' ಎಂದು ಉಲ್ಲೇಖಿಸಿದೆ. ಇಲ್ಲಿ ಸರ್ವಪ್ರಧಾನ ತಿಪ್ಪರಸರು 'ಹೊನವತಿ'ಯ ಚಾಮೇಶ್ವರದೇವರ ಸಮೀಪದಲು ರಾಜೇಶ್ವರದೇವರ ಪ್ರತಿಷ್ಟೆಯನ್ನು ಮಾಡಿ ದಾನಬಿಟ್ಟ ವಿಷಯವನ್ನು ದಾಖಲಿಸಿದೆ.

ಅಗ್ರಹಾರವಾಗಿ ಹೊನ್ನತ್ತಿ

ಅಗ್ರಹಾರ ಇದರ ಮೂಲರೂಪ 'ಅಗ್ರಾಹಾರ' ಎಂದಿರಬೇಕೆಂದೂ, ಅದು ಅಗ್ರ+ಆಹಾರ ಎಂಬ ಎರಡು ಪದಗಳ ಸಮಾನವೆಂದೂ ಪ್ರೊ.ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. 'ಅಗ್ರ' ಎಂದರೆ ಶ್ರೇಷ್ಠ. ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ ಅಥವಾ ಊರು ಎಂದರ್ಥ.

ಬ್ರಾಹ್ಮಣರಿಗೆ ದತ್ತಿಯಾಗಿ ಬಿಟ್ಟುಕೊಟ್ಟ ಊರುಗಳೇ ಅಗ್ರಹಾರಗಳು. ಆ ಊರಿನ ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸಲ್ಲುತ್ತಿದ್ದಿತು. ಅಗ್ರಹಾರಗಳ ಒಡೆಯರು 'ಮಹಾಜನ'ರು. ಮಹಾಜನ ಎನ್ನುವ ಈ ಸಂಸ್ಥೆಯ ರಚನೆ ಏನು ಎನ್ನುವುದು ಸ್ಪಷ್ಟವಾಗದೆ ಇದ್ದರೂ, ಆ ಸಂಸ್ಥೆಯಲ್ಲಿ ಹತ್ತರಿಂದ ಐದುನೂರು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಮಹಾಜನರಿರುತ್ತಿದ್ದರು. ಆ ಊರಿನ ಸಮಸ್ತ ಚಟುವಟಿಕೆಗಳೆಲ್ಲವನ್ನೂ ಆ ಮಹಾಜನರು ನಿಯಂತ್ರಿಸುತ್ತಿದ್ದರು. ದೇವಸ್ಥಾನ ನಿರ್ಮಾಣ, ವಿದ್ಯಾಭ್ಯಾಸ ಇತ್ಯಾದಿ ಸಾಂಸ್ಕೃತಿಕ ಕಾರ್ಯಗಳಿಗೆ ಮಹಾಜನರು ಬೇಕಾದಷ್ಟು ದತ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ. ಅಗ್ರಹಾರದ ನ್ಯಾಯಪರಿಪಾಲನೆಯು ಮಹಾಜನರ ಕರ್ತವ್ಯಗಳಲ್ಲೊಂದಾಗಿತ್ತು.[11]

ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಕಾಲದ ತೇದಿರಹಿತ ಶಾಸನವು[12] ಲೋಕಟೆ ಬನವಾಸಿಯನ್ನಾಳುತ್ತಿದ್ದಾಗ ಅವನ ಮಗ ಕಲಿವಿಟ್ಟನು ಪೊನ್ನವನ್ತಿ–12 ಅನ್ನು ಆಳುತ್ತಿರಲು ಅಧಿಕಾರಿಗಳು ಭೂಮಿದಾನ ಮಾಡಿದ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ.1190ರ ಇಮ್ಮಡಿ ಬಲ್ಲಾಳನ ಕಾಲದ ಒಂದು ಶಾಸನ[13] ಹೊಯ್ಸಳ ಅಧಿಕಾರಿ ದಾವಂಣ್ಣ ಹೊನವತ್ತಿಯ ಶ್ರೀಕೇಶವ ದೇವರಿಗೆ ನಂದಾದೀಪಕ್ಕೆ ಗಾಣವೊಂದನ್ನು ಬಿಟ್ಟ ವಿಷಯವನ್ನು ತಿಳಿಸುತ್ತದೆ. ಕ್ರಿ.ಶ.1187ರ ಶಾಸನದಿಂದ[14] ಸರ್ವಾಧಿಕಾರಿ ಬೀಚಿಸೆಟ್ಟಿಯ ಅಪೇಕ್ಷೆಯಂತೆ ಪ್ರಧಾನ ತಿಪ್ಪರಸ ಚಾಮೇಶ್ವರದ ಬಳಿ ರಾಜೇಶ್ವರದೇವರ ಪ್ರತಿಷ್ಟೆ ಮಾಡಿ ಗಂಗನ ನಾಲ್ಕು ಮತ್ತರು ಭೂಮಿ ಹಾಗೂ ಜಲವಾರು ದಾನಗಳನ್ನೂ ಮಾಡಿದ ವಿಷಯ ತಿಳಿದುಬರುತ್ತದೆ.

ಕ್ರಿ.ಶ.1124ರ ಆರನೆಯ ವಿಕ್ರಮಾದಿತ್ಯನ ಶಾಸನವು[15] ಇಲ್ಲಿನ ಮಹಾಜನಗಳ ಗುಣವಿಶೇಷತೆಗಳನ್ನು ಹೀಗೆ ತಿಳಿಸುತ್ತದೆ. 'ವೇದಾರ್ತ್ಥಶಾಸ್ತ್ರ ನೀತಿಪುರಾಣಾದ್ಯುಲ್ಲಸಿತ ಸಕಳವಿದ್ಯೋತ್ಫುಲ್ಲಾಂಬುಜ ಷಣ್ಡ ಕೇಳಿಲೋಳ ಮರಾಳರ್// ಸ್ವಸ್ತಿ ಯಮನಿಯಮ –ಸ್ವಾಧ್ಯಾಯಧ್ಯಾನಧಾರಣ ಮೋನಾನುಷ್ಠಾಣ ಜಪಸಮಾಧಿಶೀಲ ಸಂಪನ್ನರು ಸುಜನನ ಸುಪ್ರಸನ್ನರು ಮನುಚರಿತ್ರಾಧರೀಕ್ರಿತವಿಶುದ್ಧಚರಿತ್ರರು ಸಕಲವರ್ಣ್ಣಾಶ್ರಮಪವಿತ್ರರು ಸ್ವರ್ಗ್ಗಾಪವರ್ಗ್ಗಮಾರ್ಗ್ಗೈಕ ಸಾಧಕರು ಹರಿಹರ ಪಾದಾಂಬುಜಾರಾದಕರುಯಜ(ನ*) ಯಾಜನಅಧ್ಯಯನಾಧ್ಯಾಪನದಾನ ಪ್ರತಿಗ್ರಹ ಷಟ್ಕರ್ಮ್ಮನಿರತರು ವಿನಿರ್ಮ್ಮುಕ್ತದುರಿತರು ಮದವಸಹಿತಕುಳಸಂಹರಣರು ಚತುಸ್ಸಮಯಸಮುದ್ಧರಣರುದಾನಗುಣತಟಿನೀ ಪ್ರಭೂತ ಹಿಮವನ್ತರ್ ಸಾಹಿತ್ಯವಿದ್ಯಾಲತಾವಸನ್ತರು ಇತ್ಯಾದ್ಯನೇಕನಾಆಮಾವಳೀ ವಿರಾಜಿತರಪ್ಪ ಶ್ರೀಮದನಾದಿಯಗ್ರಹಾರಂಪೊನ್ನವರ್ತ್ತಿಯೂರೊಡೆಯ ಪ್ರಮುಖ ಮಹಾಜನವಿನ್ನೂರ್ವ್ವರು// ಎಂದು ಅಲ್ಲಿನ ಮಹಾಜನರನ್ನು ಹೊಗಳಿದ್ದನ್ನು ಕಾಣಬಹುದು. ಅದರಂತೆ ಹೊಲ ಗದ್ದೆತೋಟ, ಉದ್ಯಾನವನ, ತಟಾಕಗಳಿಂದ ಕೂಡಿದರಮಣೀಯ ಸ್ಥಳವೆಂದು ವರ್ಣಿಸಿದೆ.

ಹೊನ್ನವರ್ತಿಯ ಊರೊಡೆಯನಾಗಿದ್ದ ವಿಕ್ರಮಾಂಕ ದಂಡಾಧಿಪ ಚೋಮದೇವನ ಪ್ರಧಾನರಾದ ದೇಕಣ ಮತ್ತು ನಾಕಣ್ಣ ಸೋದರರು ಚಾಮೇಶ್ವರದೇವರ ಗುಡಿ ನಿರ್ಮಿಸಿ ಸ್ಥಾನಚಾರ್ಯ ಬ್ರಹ್ಮರಾಶಿಜೀಯರಿಗೆ ಕಚ್ಚವಿಯಗಳೆಯಲ್ಲಿ ದಾನ ಮಾಡಿದ ಭೂಮಿಯ ಗಡಿ, ಕಲಿದೇವರು, ಕೇಶವ ಹಾಗೂ ಬಾಣೇಶ್ವರ ದೇವರ ಪಡುವಲು, ಕಿಸುಕಾಡು ಮತ್ತರೊಂದು, ದೇವರ ಪರಿಸೂತ್ರದಿಂ ಮೂಡಲು ಹೂವಿನ ತೋಂಟ, ಕಮ್ಮ ಹತ್ತು, ಊರೊಳಗೆ ಒಂದು ತೆಲ್ಲಿಗರಲ್ಲಿ ಸೊಂಟ್ಟಗೆ ಎಣ್ಣೆ ಮೊದಲಾದವುಗಳನ್ನು ಧಾರಾಪೂರ್ವಕವಾಗಿ ಕೊಡಲಾಯಿತು.

ಈ ಮೇಲಿನ ವಿಶೇಷಣಗಳನ್ನು ನೋಡಿದರೆ ಮಹಾಜನರು ದೊಡ್ಡ ವಿದ್ವಾಂಸರಾಗಿದ್ದಿರಬೇಕು. ಅವರಿಗೆ ಊರಿನಲ್ಲಿ ತುಂಬಾ ಗೌರವವಿದ್ದಿತೆಂದು ಈ ಮೂಲಕ ತಿಳಿಯುತ್ತದೆ.

ಅಗ್ರಹಾರಗಳು ವೈದಿಕ ಸಂಪ್ರದಾಯದ ವಿದ್ಯಾಕೇಂದ್ರಗಳು. ಮಹಾಜನರು ಮಹಾವಿದ್ವಾಂಸರಾಗಿದ್ದರೆಂದು ಗೊತ್ತಾಗುತ್ತದೆ. ಅವರು ಷಟ್ಕರ್ಮ ನಿರತರು. ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಇವೇ ಆ ಆರು ಕರ್ಮಗಳು. ಇವು ಪ್ರತಿಯೊಬ್ಬ ಬ್ರಾಹ್ಮಣನೂ ಮಾಡಲೇಬೇಕಾದ ವಿಧಿಗಳು. ಇವುಗಳಲ್ಲಿ ಅಧ್ಯಯನ ಎನ್ನುವುದು ಜ್ಞಾನಾರ್ಜನೆಯನ್ನೂ, 'ಅಧ್ಯಾಪನ' ಎನ್ನುವುದು ಜ್ಞಾನದಾನವನ್ನೂ ಸೂಚಿಸುತ್ತದೆ. ಹೀಗೆ ಅನೇಕ ವಿಚಾರಗಳು ಈ ಪ್ರದೇಶದಲ್ಲಿ ದೊರೆತ ಶಾಸನಗಳಿಂದ ತಿಳಿಯುತ್ತದೆ.

ಪ್ರಾಚೀನ ಕಾಲದಲ್ಲಿ ರಾಜ್ಯವು ವಿದ್ಯಾಭ್ಯಾಸದ ಹೊಣೆಯನ್ನು ಪ್ರತ್ಯಕ್ಷವಾಗಿ ವಹಿಸದಿದ್ದರೂ, ಅಗ್ರಹಾರಗಳನ್ನು ಸ್ಥಾಪಿಸುವುದರ ಮೂಲಕ ಪರೋಕ್ಷವಾಗಿ ಸಹಾಯಮಾಡಿದೆ ಎನ್ನಬಹುದು.

ಪರಾಮರ್ಶನ ಗ್ರಂಥಗಳು

1. ಎಸ್.ಐ.ಐ.18. ನಂ.326. ಗುಡಗೂರು. ರಾಣೇಬೆನ್ನೂರು(ತಾ), ಕಾಲ:10ನೇ ಶ.ಪು.421.
2. ಎಸ್.ಐ.ಐ.18. ನಂ.299. ಚೌಡದಾನಪುರ. ರಾಣೇಬೆನ್ನೂರು(ತಾ), ಕ್ರಿ.ಶ.1192. ಪು.399.
3. ಎಸ್.ಐ.ಐ.18. ನಂ.297. ಗುತ್ತಲ. ಹಾವೇರಿ (ತಾ), ಕ್ರಿ.ಶ.1189. ಪು.393.
4. ಎಸ್.ಐ.ಐ.18. ನಂ.194. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1197. ಪು.272.
5. ಎಸ್.ಐ.ಐ.18. ನಂ.17. ಹೊನ್ನತ್ತಿ. ರಾಣೇಬೆನ್ನೂರು (ತಾ), ಕಾಲ: ಕನ್ನರದೇವ. ಪು.11.
6. ಎಸ್.ಐ.ಐ.18. ನಂ.124. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1124. ಪು.151.
7. ಎಸ್.ಐ.ಐ.18. ನಂ.293. ಗುತ್ತಲ. ಹಾವೇರಿ (ತಾ), ಕ್ರಿ.ಶ.1162. ಪು.376.
8. ಎಸ್.ಐ.ಐ.18. ನಂ.17. ಹೊನ್ನತ್ತಿ. ರಾಣೇಬೆನ್ನೂರು (ತಾ), ಕಾಲ:ಕನ್ನರದೇವ. ಪು.11.
9. ಎಸ್.ಐ.ಐ.18. ನಂ.124. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1124. ಪು.151.
10. ಎಸ್.ಐ.ಐ.18. ನಂ.302. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1187. ಪು.412.
11. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸರಾಂಗ. ಮೈಸೂರು ವಿ.ವಿ. 1979.ಪು.352.
12. ಎಸ್.ಐ.ಐ.18. ನಂ.17. ಹೊನ್ನತ್ತಿ. ರಾಣೇಬೆನ್ನೂರು (ತಾ), ಕಾಲ: ಕನ್ನರದೇವ. ಪು.11.
13. ಎಸ್.ಐ.ಐ.18. ನಂ.194. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1197. ಪು.272
14. ಎಸ್.ಐ.ಐ.18. ನಂ.302. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1187. ಪು.412.
15. ಎಸ್.ಐ.ಐ.18. ನಂ.124. ಹೊನ್ನತ್ತಿ. ರಾಣೇಬೆನ್ನೂರು (ತಾ), ಕ್ರಿ.ಶ.1124. ಪು.151.

❖❖❖

ಮರದೆಲೆಯಾಡುತಿದೆ
ಇಳೆಗಾಳಿಯ ಜತೆಗೆ
ಬಿಳಲು ಜೋತಾಡುತಿದೆ
ಮೆಲುಗಾಳಿಯ ಗತಿಗೆ

ಮೊಗಸಾಲೆಯವರ ಕಾದಂಬರಿಗಳು

ಡಾ. ಬಿ. ಜನಾರ್ದನ ಭಟ್
ಬೆಳ್ಮಣ್ಣು, ಕಾರ್ಕಳ ತಾಲೂಕು, ಉಡುಪಿ ಜಿಲ್ಲೆ

ಭಾಗ–2

ನವ್ಯ ಕಾದಂಬರಿಗಳು

ಇನ್ನು ಇಂದ್ರಿಯ ಸುಖಾನ್ವೇಷಣೆಯನ್ನೇ ನವ್ಯದ ಅನುಭವಪ್ರಾಮಾಣ್ಯ ಎಂದು ಗ್ರಹಿಕೆಯುಳ್ಳ ಪಾತ್ರಗಳ ವ್ಯಕ್ತಿಚರಿತ್ರೆಯ ಕಾದಂಬರಿಗಳು ಇನ್ನೊಂದು ಬಗೆಯ ದರ್ಶನವನ್ನು ನೀಡಿವೆ. ಅದೇನೆಂದರೆ ಈ ಕಾದಂಬರಿಗಳ ವ್ಯಕ್ತಿಗಳು ಪ್ರೇಮದ ಮೌಲ್ಯವನ್ನು ಕಡೆಗಣಿಸಿ ಕಾಮದ ಬೆನ್ನುಹತ್ತುವುದೇ ಅವರ ಸಮಸ್ಯೆಗಳಿಗೆ ಕಾರಣ. ಅನ್ವೇಷಿಸಬೇಕಾದದ್ದು ಕಾಮಾತೀತ ಭಾವನಾತ್ಮಕ ಸಂಬಂಧಗಳೆಂದು ಅರಿಯದೆ ಒದ್ದಾಡುವವರ ಕಥಾನಕಗಳು ಈ ಬಗೆಯ ಕಾದಂಬರಿಗಳು. ಮೂರನೆಯ ಘಟ್ಟದ 'ಧಾತು' ಕಾದಂಬರಿಯಲ್ಲಿ ಹಿರಿಯ ವಯಸ್ಸಿನ ನಾಯಕ ಮತ್ತು ನಾಯಕಿ ಈ ಸತ್ಯವನ್ನು ಕಂಡುಕೊಳ್ಳುತ್ತಾರೆ.

ನನ್ನದಲ್ಲದ್ದು (1977)

ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದ 'ನನ್ನದಲ್ಲದ್ದು' ಕಾದಂಬರಿಯು ಮೊಗಸಾಲೆಯವರನ್ನು ಗಣ್ಯ ನವ್ಯ ಕಾದಂಬರಿಕಾರನೆಂದು ಗುರುತಿಸುವಂತೆ ಮಾಡಿತು. 'ನನ್ನದಲ್ಲದ್ದು' ಕಾದಂಬರಿಯ ಶೇಖರ್ ಮಂಗ್ಳೂರ್ಕರ್ ಪತ್ರಕರ್ತ, ಸಾಹಿತಿಯಾಗಿದ್ದು ಅವನಿಗೆ ಡಾಕ್ಟರ್ ಶ್ರೀನಿವಾಸ್‌ನ ಪರಿಚಯವಾಗುತ್ತದೆ. ಕಾದಂಬರಿಯ ನಡುನಡುವೆ ನವ್ಯ ಸಾಹಿತ್ಯ ಚಳುವಳಿಯ ಕುರಿತಾದ ಚರ್ಚೆ ಕೂಡ ನಡೆಯುವುದು ಗಮನಾರ್ಹ. ಕಾದಂಬರಿಯಲ್ಲಿ ಇವರಿಬ್ಬರ ನಡುವೆ ನಡೆಯುವ ಚರ್ಚೆಯಲ್ಲಿ ಅಸಂಗತ ನಾಟಕಗಳ ಕುರಿತಾದ ಚರ್ಚೆ, ನವ್ಯ ಸಾಹಿತ್ಯ ಪ್ರವರ್ತಕರ ಕೃತಿಗಳ ಕುರಿತಾಗಿ ವಿಮರ್ಶೆ ಇತ್ಯಾದಿಗಳಿವೆ.

ಡಾಕ್ಟರ್ ಶ್ರೀನಿವಾಸ್ ವೈದ್ಯಶಾಸ್ತ್ರವನ್ನು ಕಲಿತವನು. ತನ್ನ ತಂದೆಗೆ ಮಧುಮೇಹ ಇದ್ದದ್ದರಿಂದ ಗ್ಯಾಂಗ್ರೀನ್ ರೋಗಕ್ಕೆ ಒಳಗಾಗಿ ಅವನ ಕಾಲು ಕತ್ತರಿಸಬೇಕಾಗುತ್ತದೆ. ಮಧುಮೇಹ ಆನುವಂಶೀಯವಾಗಿ ಬರುವುದರಿಂದ ತನಗೂ ಅದು ಬಂದೇ ಬರುತ್ತದೆ; ತನಗೆ ರೋಗಗ್ರಸ್ಥ ಮಕ್ಕಳು ಹುಟ್ಟಬಹುದು ಎಂಬ ಭೀತಿಯಿಂದ ಮದುವೆಯ ಮೊದಲೇ ವ್ಯಾಸೆಕ್ಟಮಿ ಮಾಡಿಸಿಕೊಳ್ಳುತ್ತಾನೆ. ಆದರೆ ಲೈಂಗಿಕ ಅನುಭವಗಳನ್ನು ಸಾಧ್ಯವಾದಲ್ಲೆಲ್ಲ ಪಡೆದುಕೊಳ್ಳುವ 'ನವ್ಯ' ಮಾನಸಿಕತೆ ಅವನದು. ವ್ಯಾಸೆಕ್ಟಮಿಯ ವಿಷಯವನ್ನು ಮುಚ್ಚಿಟ್ಟು ವತ್ಸಲಾ ಎಂಬವಳನ್ನು ವಿವಾಹವಾಗುತ್ತಾನೆ. ತಾಯಿಯಾಗಬೇಕೆಂದು ಅವಳು ಬಯಸಿದಾಗ ತನಗೆ ಸಂತಾನಹರಣವಾಗಿರುವ ವಿಷಯವನ್ನು ಹೇಳುತ್ತಾನೆ. ಆಘಾತಕ್ಕೊಳಗಾದ ವತ್ಸಲಾಳಿಂದ ಅವನಿಗೆ ಮುಂದೆ ಲೈಂಗಿಕ ಸುಖ, ಸಂಸಾರಿಕ ನೆಮ್ಮದಿ ಸಿಗುವುದಿಲ್ಲ. ವಿವಾಹಪೂರ್ವದಲ್ಲಿಯೇ ಲೈಂಗಿಕ

ಸುಖವನ್ನು ಅನುಭವಿಸಿದ್ದ ಶ್ರೀನಿವಾಸ್ ಹೊರಗೆ ಕಾಮತೃಪ್ತಿಗೆ ಪ್ರಯತ್ನಿಸುತ್ತಾನೆ. ತಾನು ಯಾವ ತಂದೆಯ ಮಧುಮೇಹಕ್ಕೆ ಹೆದರಿದ್ದನೋ ಆತನ ಮಗನೇ ಅಲ್ಲ ಎನ್ನುವ ಸತ್ಯವೂ ಅವನಿಗೆ ತಿಳಿಯುತ್ತದೆ. ಕೊನೆಗೆ ಜೀವನದಲ್ಲಿ ಸೋತು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಶ್ರೀನಿವಾಸನ ಆತ್ಮಹತ್ಯೆ ಶೇಖರ್‌ನಲ್ಲಿ ಮರಳಿ ಜೀವನಪ್ರೀತಿಯನ್ನು ಮೂಡಿಸುವುದಕ್ಕೆ ಕಾರಣವಾಗುತ್ತದೆ. ಶ್ರೀನಿವಾಸ ಉಳಿಸಿಹೋಗಿರುವ ಆಸ್ತಿಯನ್ನು ಮಾರಿ ವಂಜಾರಕಟ್ಟೆಯಲ್ಲೊಂದು ಹೈಸ್ಕೂಲು ಆರಂಭವಾಗುವ ಕನಸಿನೊಂದಿಗೆ ಮುಗಿಯುತ್ತದೆ.

ಹದ್ದು (1980)

'ಹದ್ದು' ಎಂಬ ಶೀರ್ಷಿಕೆಯನ್ನು ಒಳಗೊಂಡಂತೆ ಸಂಕೇತಗಳನ್ನು ಈ ಕಾದಂಬರಿ ಬಳಸಿಕೊಂಡಿದೆ. ದನ, ಹೋರಿಗಳ ಸಾಂಕೇತಿಕತೆ, ದನವನ್ನು ಹುಲಿ ಹಿಡಿಯುವುದರಲ್ಲಿರುವ ಸಾಂಕೇತಿಕತೆ ಮತ್ತು ಹದ್ದು ಶೀರ್ಷಿಕೆಯ ಸಾಂಕೇತಿಕತೆ – ಇವು ನವ್ಯ ಸಾಹಿತ್ಯದ ದಟ್ಟವಾದ ಪ್ರಭಾವವನ್ನು ಸೂಚಿಸುತ್ತವೆ. ಇಂಗ್ಲಿಷ್ ಓದಿ ಪಟ್ಟಣದಲ್ಲಿರುವ ವಿಶ್ವನಾಥ ನೆರೆ ಮನೆಯ ಸಂಪ್ರದಾಯನಿಷ್ಠ ಅರ್ಚಕರಾದ ಶಾಸ್ತ್ರಿಗಳ ಮಗಳು ಜಾನಕಿಯನ್ನು ನೋಡಿದ ಶಾಸ್ತ್ರ ಮಾಡಿ, ತಿರಸ್ಕರಿಸಲು ನಿರ್ಧರಿಸಿ ಬಂದವನು ಅವಳ ಸೌಂದರ್ಯಕ್ಕೆ ಮನಸೋತು ಮದುವೆಯಾಗುವ ನಿಶ್ಚಯಕ್ಕೆ ಬರುತ್ತಾನೆ. ಪಟ್ಟಣದಲ್ಲಿ ಕಾಮ ಸುಖವನ್ನು ಸಾಕಷ್ಟು ಅನುಭವಿಸಿದ ವಿಶ್ವ ಊರಲ್ಲಿಯೂ ಕ್ರಿಶ್ಚಿಯನ್ ಹೆಣ್ಣೊಬ್ಬಳ ಜತೆಗೆ ಸಂಬಂಧ ಬೆಳೆಸುತ್ತಾನೆ. ಅಷ್ಟರಲ್ಲಿ ಜಾನಕಿ ಕೆಲಸದಾಳಿನ ಜತೆಗೆ ಓಡಿಹೋಗುತ್ತಾಳೆ. ಊರಿನ ಪಟೇಲರ ಮಗಳು ಮತ್ತೊಬ್ಬ ಕೆಲಸದಾಳಿನ ಜತೆಗೆ ಲೈಂಗಿಕ ಕ್ರಿಯೆ ನಡೆಸುತ್ತಿರುವುದನ್ನು ಶಾಸ್ತ್ರಿಗಳು ಕಂಡರೆಂದು ಅವಳು ಶಾಸ್ತ್ರಿಗಳ ಮೇಲೆಯೆ ಅಪವಾದ ಹೊರಿಸುತ್ತಾಳೆ. ಈ ಕಾದಂಬರಿಯಲ್ಲಿ ವಿಶ್ವನ ನಿಲುವು ಸಮಾಜವು ಮುಕ್ತ ಕಾಮವನ್ನು ಒಪ್ಪಿಕೊಳ್ಳಬೇಕು, ದೈಹಿಕ ಬಯಕೆಗಳಿಗೆ ಕಟ್ಟುಪಾಡು ವಿಧಿಸುವುದೇ ಅಸಹಜ ಎನ್ನುವುದಾಗಿದೆ. ಅಸ್ತಿತ್ವವಾದಿ ಸಾಹಿತಿಗಳಾದ ಕಾಮು ಮತ್ತು ಕಾಫ್ಕರ ಸಿದ್ಧಾಂತಗಳನ್ನು ಈ ಕಾದಂಬರಿ ಉಲ್ಲೇಖಿಸುತ್ತದೆ. ಶಾಸ್ತ್ರಿಗಳ ಮನಸ್ಸು ಕೂಡ ಚಂಚಲವಾಗುವುದು ಅವರ ಹಗಲುಗನಸುಗಳಲ್ಲಿ ಅಭಿವ್ಯಕ್ತವಾಗಿದೆ. ನವ್ಯ ಸಾಹಿತ್ಯದ ತಂತ್ರಗಳನ್ನೆಲ್ಲ ಬಳಸಿಕೊಳ್ಳುವ ಈ ಕಾದಂಬರಿ ಹಳ್ಳಿಯ ಜನರ ಮನಸ್ಸು ಕೂಡ ಸಂಕೀರ್ಣವಾಗಿದೆ; ವ್ಯಕ್ತಿ ಸ್ವಾತಂತ್ರ್ಯವನ್ನು ಅನ್ವೇಷಿಸುತ್ತಿದೆ; ಸಾಂಪ್ರದಾಯಿಕ ಮೌಲ್ಯಗಳು ಛಿದ್ರವಾಗುತ್ತಿವೆ; ಗೌರವಾನ್ವಿತ ಎನ್ನುವ ಮಾನದಂಡಗಳೇ ಉಳಿದಿಲ್ಲ ಎನ್ನುವ ಭಯಾವಹವಾದ ಆಂತರ್ಯದ ದರ್ಶನ ಮಾಡಿಸುತ್ತದೆ.

ಪ್ರಕೃತಿ (1984)

ಈ ಕಾದಂಬರಿಯು ಮತ್ತೊಂದು ನವ್ಯ ಸಾಹಿತ್ಯ ಕೃತಿಯಾಗಿದೆ. ವೃತ್ತಿಯಲ್ಲಿ ಪ್ರಾಧ್ಯಾಪಕ, ಸಾಹಿತಿಯೂ ಆಗಿರುವ ಶಂಕರ ಪಾಟೀಲ ಕಾರವಾರದಲ್ಲಿ ಕಾರಂತರ ಮನೆಯಲ್ಲಿ ನೆಲೆಸಿದ್ದ ವೇಳೆ ಕಾರಂತರ ಮಗಳು ಉಪನ್ಯಾಸಕಿ ಶೀಲಾಳೇ ಮುಂದುವರಿದು ಪಾಟೀಲರೊಂದಿಗೆ ದೈಹಿಕ ಸಂಪರ್ಕ ಇರಿಸಿಕೊಳ್ಳುತ್ತಾಳೆ. ಅವಳ ಗಂಡ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಆಕೆ ಹಲವರೊಂದಿಗೆ ಸಂಪರ್ಕವಿಸಿರಿಸಿಕೊಂಡು ದೈಹಿಕ

ಆಸೆಯನ್ನು ಪೂರೈಸಿಕೊಳ್ಳುತ್ತಿರುತ್ತಾಳೆ. ಕಾರಂತರ ಹೆಂಡತಿಯೂ ಗಂಡನ ಗೆಳೆಯನ ಜತೆಗೆ ಸಂಬಂಧವಿರಿಸಿಕೊಂಡಿದ್ದು, ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಕೊನೆಯಲ್ಲಿ ಇಳಿವಯಸ್ಸಿನ ಕಾರಂತರೇ ನರ್ಸ್ ಒಬ್ಬಳ ಜತೆಗೆ ಓಡಿಹೋಗುತ್ತಾರೆ. ದೈಹಿಕ ಬಯಕೆಯನ್ನು ಬಯಸಿದವರೊಡನೆ ಪಡೆಯುವುದರಲ್ಲಿ ತಪ್ಪಿಲ್ಲ ಎನ್ನುವ 'ಹದ್ದು' ಕಾದಂಬರಿಯ ನಿಲುವು ಇಲ್ಲಿಯೂ ಕಾಣಿಸುತ್ತದೆ. ಕಾರಂತರನ್ನು ಮದುವೆಯಾದ ನರ್ಸ್ ಗೀತಾ ಮೆಂಡನ್ ಅವರನ್ನು ನಿಜವಾಗಿಯೂ ಪ್ರೀತಿಸಿದ್ದಳೆನ್ನುವುದೇ ಈ ಜಗತ್ತಿನ ಪಾತ್ರಗಳಿಗೆ ಕೊನೆಯಲ್ಲಿ ಆಘಾತಕರವಾದ ಸತ್ಯದಂತೆ ಗೋಚರವಾಗುವುದೇ ಕುತೂಹಲಕರವಾದ ವ್ಯಂಗ್ಯವಾಗಿದೆ!

ನೆಲಮುಗಿಲುಗಳ ಮಧ್ಯೆ (1985)

ಇದು ಮತ್ತೊಂದು ನವ್ಯ ಕಾದಂಬರಿ. ಈ ಕಾದಂಬರಿಯಲ್ಲಿ ಪ್ರಕಾಶ ಪ್ರತಿಷ್ಠಿತ ಕಂಪನಿಯಲ್ಲಿ ಸೇಲ್ಸ್ ಮ್ಯಾನೇಜರ್. ಆಕೆಯ ಜತೆಗೆ ಹೋಟೆಲ್ ಕೋಣೆಯಲ್ಲಿ ಕೂಡುತ್ತಾನೆ. ಆಕೆ ಡಾಕ್ಟರ್. ಅವಳನ್ನು ಅವಳ ಮಾವ ಮತಾಂತರ ಮಾಡುತ್ತಾನೆಂಬ ಸಿಟ್ಟಿನಲ್ಲಿ ಒಮ್ಮೆ ನಾಲ್ವರು ಅತ್ಯಾಚಾರ ಮಾಡಿರುತ್ತಾರೆ. ಅವಳು ಗಂಡನನ್ನು ಕಳೆದುಕೊಂಡು, ಇನ್ನೊಬ್ಬನನ್ನು ಕಟ್ಟಿಕೊಂಡು, ಅವನನ್ನೂ ಬಿಟ್ಟು ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿರುತ್ತಾಳೆ. ಪ್ರಕಾಶನ ಜತೆಗಿನ ಸಂಬಂಧ ಅವಳಲ್ಲಿ ಬದುಕುವ ಆಸೆಯನ್ನು ಚಿಗುರಿಸುತ್ತದೆ. ಆದರೆ ಪ್ರಕಾಶ ಅದೇ ರಾತ್ರಿ ಹೃದಯಾಘಾತವಾಗಿ ಸಾಯುತ್ತಾನೆ. ಇದೇನೂ ತಾರ್ಕಿಕ ಅಂತ್ಯವಲ್ಲ. ಬದುಕು ತರ್ಕಬದ್ಧವಲ್ಲ ಎಂಬ ಕಾಮುವಿನ ಅಸಂಗತ ತಾತ್ವಿಕತೆಗೆ ಉದಾಹರಣೆಯಂತಿದೆ. 'ನನ್ನದಲ್ಲದ್ದು' ಮತ್ತು 'ನೆಲಮುಗಿಲುಗಳ ಮಧ್ಯೆ' ಕಾದಂಬರಿಯಲ್ಲಿ ಸಾಕಷ್ಟು ಸಾಮ್ಯತೆಗಳಿವೆ. 'ನೆಲಮುಗಿಲುಗಳ ಮಧ್ಯೆ'ಯ ಡಾ.ಎಲಿಜಾ ಪಾತ್ರ 'ನನ್ನದಲ್ಲದ್ದು'ವಿನ ಡಾ. ಶ್ರೀನಿವಾಸ್‌ನ ಮಹಿಳಾ ಆವೃತ್ತಿಯ ಹಾಗೆ ಕಾಣಿಸಿಕೊಳ್ಳುತ್ತಾಳೆಹಿ, ಎಂದು ಡಾ. ರವಿಶಂಕರ್ ಜಿ. ಕೆ. ಸರಿಯಾಗಿ ಗುರುತಿಸಿದ್ದಾರೆ.

ಹೀಗೆ ಕಾಮ ಸಂಬಂಧಗಳಿಂದ ಮತ್ತು ಪ್ರೇಮವಿಲ್ಲದ ಸಂಬಂಧಗಳಿಂದ ಬದುಕಿನಲ್ಲಿ ಸಮಾಧಾನ ಸಿಗದ ಹಲವು ಚಿತ್ರಣಗಳು ಮೊಗಸಾಲೆಯವರಲ್ಲಿವೆ. ಒಟ್ಟಿನಲ್ಲಿ ಈ ಪಾತ್ರಗಳಿಗೆ ತಾವು ಅನ್ವೇಷಿಸಬೇಕಾಗಿರುವುದು ಪ್ರೇಮವನ್ನೇ ಹೊರತು ಕಾಮವನ್ನಲ್ಲ ಎನ್ನುವ ಸತ್ಯದ ಅರಿವಿಲ್ಲದಿರುವುದೇ ಈ ಪಾತ್ರಗಳ ದುರಂತಗಳಿಗೆ ಕಾರಣ ಅನಿಸುತ್ತದೆ.

ಮೂರನೆಯ ಘಟ್ಟದ 'ನೀರಿನೊಳಗಿನ ಮಂಜು' ಕಾದಂಬರಿಯೂ ಇಂತಹದೇ ಸಮಸ್ಯೆಗಳ ಕತೆಯುಳ್ಳ ಕಾದಂಬರಿಯಾಗಿದೆ. ಇಂತಹ ಹುಡುಕಾಟಗಳಿಗೆ ಉತ್ತರವಾಗಿ 'ಧಾತು' ಕಾದಂಬರಿ ಬಂದಿದೆ ಅನಿಸುತ್ತದೆ.

ದೃಷ್ಟಿ (1991)

'ದೃಷ್ಟಿ' ಕಾದಂಬರಿಯನ್ನು ಬ್ರಿಟಿಷರ ವಿರುದ್ಧ ಪತ್ರಿಕಾ ಮಾಧ್ಯಮದ ಹೋರಾಟ, ಬಂಧನ, ಜನರ ಪ್ರತಿಭಟನೆ, ಬಿಡುಗಡೆ ಮುಂತಾದ ಕತೆಗಳಿರುವುದರಿಂದ ರಾಜಕೀಯ ಕಾದಂಬರಿಗಳ ಸಾಲಿಗೆ ಸೇರಿಸಬಹುದು. ಆದರೆ ನಂತರ ಇದು ಸಂಬಂಧಗಳ

ಜಟಿಲತೆಯ ಚಿತ್ರಣವಾಗಿ ನವ್ಯದ ಲಕ್ಷಣವನ್ನೂ, ಕೌಟುಂಬಿಕ ಸಂಬಂಧಗಳ ನಿರ್ವಹಣೆಯಂತಹ ಅಭಿಜಾತ ವಾಸ್ತವವಾದಿ ಕಥನಗಳ ಲಕ್ಷಣವನ್ನೂ ಹೊಂದಿರುವ ಸಂಕೀರ್ಣ ಕಾದಂಬರಿಯಾಗಿದೆ. ಇದರ ಕಥೆಯನ್ನು ನಿರೂಪಿಸುವುದು ಕೂಡ ಕಷ್ಟವೆನಿಸುವಂತೆ ಘಟನೆಗಳು ನಡೆಯುತ್ತಾ ಇರುತ್ತವೆ. ಇದರ ಒಟ್ಟೂ ಆಶಯವನ್ನು ಡಾ. ರವಿಶಂಕರ್ ಜಿ.ಕೆ. ಹೀಗೆ ಗ್ರಹಿಸುತ್ತಾರೆ: ವಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾಜ ಅದನ್ನು ಪರಿಭಾವಿಸುವ ರೀತಿಯ ಕುರಿತು 'ದೃಷ್ಟಿ' ಕಾದಂಬರಿ ಗಮನಹರಿಸುತ್ತದೆ. ಮುಂಬೈಯಂತಹ ಮಹಾನಗರದಲ್ಲಿ ವ್ಯಕ್ತಿ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದಕ್ಕೆ ಇರುವ ಸಾಧ್ಯತೆಗಳು ಮತ್ತು ಕೊಳ್ಯೂರು ಸೀಮೆಯ ಈರೋಡಿನಂತಹ ಹಳ್ಳಿಯಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಸಿಗುವ ಮಾನ್ಯತೆಗಳು ಎಷ್ಟರ ಮಟ್ಟಿಗಿವೆ ಎಂಬುದನ್ನು ತೌಲನಿಕವಾಗಿ ಪರಿಶೀಲಿಸುತ್ತದೆ.ಹಿ (ಹೊಳೆಯ ಮೇಲಿನ ಮಳೆ). ವ್ಯಕ್ತಿ ಸ್ವಾತಂತ್ರ್ಯದ ಪರಿಶೀಲನೆ ನವ್ಯದ ಒಂದು ಜನಪ್ರಿಯ ವಸ್ತುವಾಗಿದೆ.

ಉಪ್ಪು (1995) – ರಾಜಕೀಯ ಕಾದಂಬರಿ

ರಾಜಕೀಯ ಕಾದಂಬರಿ ಮತ್ತು ವಿಡಂಬನಾತ್ಮಕ ಕಾದಂಬರಿಗಳು ನವ್ಯದ ಪ್ರಶ್ನಿಸುವ ಮನೋಭಾವಕ್ಕೆ ಹೊಂದಿಕೊಂಡಿದ್ದುದರಿಂದ ನವ್ಯ ಸಾಹಿತ್ಯದಲ್ಲಿ ರಾಜಕೀಯ ಕಾದಂಬರಿಗಳು ಬಂದವು. ಮೊಗಸಾಲೆಯವರ 'ಉಪ್ಪು' ಒಂದು ಮುಖ್ಯ ರಾಜಕೀಯ ಕಾದಂಬರಿಯಾಗಿದೆ. ತಮ್ಮ ನಿಲುವಿಗೆ ಒಂದು ಉದಾಹರಣೆಯಾಗಿ ಇಲ್ಲಿ ಎಂಬ ಕಾಲ್ಪನಿಕ ರಾಜಕೀಯ ನಾಯಕನ ಬದುಕನ್ನು ಅವರು ಬಳಸಿಕೊಂಡಿದ್ದಾರೆ. ಮಂಗಳೂರಿನ ಉದ್ಯಾವರದವನಾದ ವಾಮನ ಹೊಳ್ಳ ಹೈಸ್ಕೂಲ್ ಓದುತ್ತಿರುವಾಗಲೇ ಕಮ್ಯುನಿಸಂ ಸಿದ್ಧಾಂತಗಳತ್ತ ಆಕರ್ಷಿತನಾಗುತ್ತಾನೆ. ರಾಜ್ಯ ಕಮ್ಯುನಿಸ್ಟ್ ಪಕ್ಷದ ಸಹಕಾರ್ಯದರ್ಶಿಯಾಗಿದ್ದ ರಾಜರಾಮ ಶೆಣೈಯ ಸಂಪರ್ಕ ಅವನಿಗೆ ಕಮ್ಯುನಿಸಂ ಸಿದ್ಧಾಂತದ ಮೇಲಿದ್ದ ಆಕರ್ಷಣೆಯನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ. ಆತ ಕಾಲೇಜು ಮೆಟ್ಟಿಲು ಹತ್ತಿದ ಸಂದರ್ಭದಲ್ಲಿ ಕಾಂಗ್ರೇಸ್ ಕಾರ್ಯಕರ್ತರು ಗಾಂಧಿವಾದದ ಆದರ್ಶದಲ್ಲಿ ದಲಿತರನ್ನು ದೇವಾಲಯ ಪ್ರವೇಶಿಸುವುದಕ್ಕೆ ಸಿದ್ಧತೆಯಲ್ಲಿರುವಾಗ ಶೆಣೈ ಧರ್ಮದ ಅಮಲಿನಿಂದ ಜನರನ್ನು ಹೊರತರಬೇಕೆಂದು ರಾತ್ರಿ ರಹಸ್ಯವಾಗಿ ದೇವಾಲಯಕ್ಕೆ ಬೆಂಕಿ ಹಚ್ಚುತ್ತಾನೆ. ಆದರೆ ದಲಿತರ ದೇವಾಲಯ ಪ್ರವೇಶಕ್ಕೆ ಮುಂದಾಗಿದ್ದ ಕಾಂಗ್ರೇಸ್ ಮುಂದಾಳು ಪಟೇಲ್ ತಿಮ್ಮಪ್ಪ ಶೆಟ್ಟಿ ಮತ್ತು ಪ್ರವೇಶದ ವಿಷಯದಲ್ಲಿ ಯಥಾಸ್ಥಿತಿ ಪ್ರತಿಪಾದಿಸುತ್ತಿದ್ದ ಜಸ್ಟೀಸ್ ಪಾರ್ಟಿಯ ನಾರಾಯಣ ಬೈಪಡಿತ್ತಾಯ ಇಬ್ಬರೂ ಸೇರಿ ದೇವಾಲಯದ ಪುನರ್ನಿರ್ಮಾಣಕಾರ್ಯಕ್ಕೆ ಮುಂದಾಗುತ್ತಾರೆ. ಈ ಸನ್ನಿವೇಶ ಅನಂತಮೂರ್ತಿಯವರ 'ಭಾರತೀಪುರ'ದ ನಾಯಕ ಜಗನ್ನಾಥನನ್ನು ನೆನಪಿಸುತ್ತದೆ.

ತನ್ನ ಜನಿವಾರವನ್ನು ಕಿತ್ತೆಸೆದು ಊರು ಬಿಟ್ಟು ಹೊರಟ ವಾಮನ ಹೊಳ್ಳ ವಿವಿಧ ಪ್ರದೇಶಗಳಲ್ಲಿ ವಿವಿಧ ಅನುಭವಗಳನ್ನು ಪಡೆಯುತ್ತಾನೆ. ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಗೋಪಾಲ ನಾಯ್ಡುವಿನ ಪರಿಚಯವಾಗಿ ಆತ ನಡೆಸುತ್ತಿದ್ದ ಪತ್ರಿಕೆಯಲ್ಲಿ ನೌಕರನಾಗುತ್ತಾನೆ. ಸಿದ್ಧಾಂತಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಗೋಪಾಲ ನಾಯ್ಡು ಸಮಾಜವಾದದ ಹೆಸರಿನಲ್ಲಿ ಬಂಡವಾಳ ಶಾಹಿಗಳಿಂದ ಹಣ ಪಡೆದು

ಸಮಾವೇಶ ಮಾಡುತ್ತಿರುವ ಸತ್ಯ ತಿಳಿದಾಗ ಪತ್ರಿಕೆಯ ಕೆಲಸವನ್ನು ಬಿಟ್ಟು ಅಕಸ್ಮಾತ್ ಪರಿಚಯವಾಗುವ ಮಲ್ಲಿಕಾ ಮೆನನ್ನ ಜೊತೆ ಕೊಚ್ಚಿಯತ್ತ ತೆರಳುತ್ತಾನೆ. ಮಲ್ಲಿಕಾ ಮೆನನ್ ಅಣ್ಣನ ಸಹಾಯದಿಂದ ಭೂಮಿತಾಯಿ ಪತ್ರಿಕೆಯ ಉಪಸಂಪಾದಕ ಸ್ಥಾನವನ್ನು ಪಡೆಯುತ್ತಾರೆ. ಮಲ್ಲಿಕಾ ಮೆನನ್‌ಳ ಪರಿಚಯ ಪ್ರೀತಿಗೆ ತಿರುಗಿ ಅವಳ ಜೊತೆಗೆ ಮದುವೆಯೂ ಆಗುತ್ತದೆ. ಎ.ಐ.ಎಸ್.ಪಿ. ಪಕ್ಷದ ಬಾಪಟ್‌ನ ಜೊತೆಗೆ ಮಲ್ಲಿಕಾ ಮೆನನ್ ದೈಹಿಕ ಸಂಬಂಧ ಹೊಂದಿರುವುದು ತಿಳಿದಾಗ ವಿಷಣ್ಣನಾಗುತ್ತಾನೆ. ಇದೇ ಕಾರಣವನ್ನು ಮುಂದಿಟ್ಟು ಮೆನನ್ ಬಾಪಟ್‌ನ ಜೊತೆಗೆ ತೆರಳುತ್ತಾಳೆ. ಮಲ್ಲಿಕಾ ಮೆನನ್, ಬಾಪಟ್‌ನ ಮರಣದಿಂದಾಗಿ ರಾಜಕೀಯ ಭವಿಷ್ಯ ಮುಸುಕಾದ ಕಾರಣದಿಂದ ಸಿನಿಮಾರಂಗವನ್ನು ಪ್ರವೇಶಿಸುತ್ತಾಳೆ. ಆಕೆ ಚಿತ್ರದ ನಿರ್ದೇಶಕನ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿರುವುದು ಬಹಿರಂಗವಾದಾಗ ಅವನ ಪತ್ನಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಮಲ್ಲಿಕಾ ಕೂಡ ಆತ್ಮಹತ್ಯೆಗೆ ಶರಣಾಗುತ್ತಾಳೆ.

ತುರ್ತುಪರಿಸ್ಥಿತಿ ಮುಗಿದ ಮೇಲೆ ರಾಜಕೀಯದಲ್ಲಿ ವಿರಕ್ತನಾಗುವ ವಾಮನ ಹೊಳ್ಳ ಮಧ್ಯಪ್ರದೇಶವನ್ನು ಬಿಟ್ಟು ಹುಟ್ಟೂರಿನಲ್ಲಿ ಅನಾಮಧೇಯನಾಗಿ ಬಾಲ್ಯದ ಗೆಳೆಯನಾಗಿರುವ ಡಾಕ್ಟರ್ ಶ್ರೀಧರ ರಾವ್‌ನ ಸಹಾಯದೊಂದಿಗೆ ನೆಲೆಸುತ್ತಾನೆ. ಆದರೆ ಇದೇ ಕ್ಷೇತ್ರದಲ್ಲಿ ಮುಖ್ಯಮಂತ್ರಿಗಳನ್ನು ಸೋಲಿಸಲು ವಿರೋಧ ಪಕ್ಷಗಳು ಒಟ್ಟಾಗಿ ಸಮರ್ಥ ಅಭ್ಯರ್ಥಿಯನ್ನು ಹುಡುಕುತ್ತಿದ್ದಾಗ ವಿ.ಆರ್. ಸೂಕ್ತ ವ್ಯಕ್ತಿ ಎಂಬುದರ ತೀರ್ಮಾನವಾಗಿ ದೊಡ್ಡ ಸಮಾವೇಶ ನಡೆಸಿ ಅವನನ್ನೇ ಅಭ್ಯರ್ಥಿಯಾಗಿ ಘೋಷಿಸಲಾಗುತ್ತದೆ. ಚುನಾವಣೆಯ ದಿನಾಂಕ ಹತ್ತಿರವಾಗುತ್ತಿದ್ದಂತೆ ವಿ.ಆರ್. ನಿಗೂಢವಾಗಿ ಸಾವಿಗೀಡಾಗುತ್ತಾನೆ. ವಿರೋಧ ಪಕ್ಷಗಳು ಒಟ್ಟಾಗಿ ಕಾದಂಬರಿಯ ನಿರೂಪಕನಾಗಿರುವ, ವಾಮನ ಹೊಳ್ಳನ ಗೆಳೆಯ ಡಾಕ್ಟರ್ ಶ್ರೀಧರ್ ರಾವ್ ಅವರನ್ನು ಅಭ್ಯರ್ಥಿಯಾಗುವಂತೆ ವಿನಂತಿಸುತ್ತವೆ. ಶ್ರೀಧರ್ ರಾವ್ ನಾಮಿನೇಶನ್ ಪತ್ರಕ್ಕೆ ಸಹಿ ಹಾಕುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಒಟ್ಟಿನಲ್ಲಿ ವ್ಯಕ್ತಿ ಚರಿತ್ರೆಯಂತೆ ಇದು ವಿವರಗಳಲ್ಲಿ ಮತ್ತು ತಿರುವುಗಳಲ್ಲಿ ಚೆಲ್ಲಿಹೋದ ಹಾಗೆ ಕಾಣಿಸುತ್ತದೆ. ಆದರೆ ಈ ಕಥಾನಕ ಮೊಗಸಾಲೆಯವರಿಗೆ ಆಧುನಿಕ ರಾಜಕೀಯ ತಾತ್ತ್ವಿಕತೆಯ ಹಿಡಿತಕ್ಕೆ ಸಿಕ್ಕದೆ ಸ್ವಾರ್ಥಗಳ ಆಟವಾಗಿದೆ; ಗೊತ್ತುಗುರಿಯಿಲ್ಲದೆ ಸಾಗಿದೆ ಎಂದು ತೋರಿಸುವುದಕ್ಕೆ ಒದಗಿಬಂದಿದೆ.

ಮೂರನೆಯ ಘಟ್ಟ. 2002 ರಿಂದ ಇದುವರೆಗೆ : ಸಾಂಸ್ಕೃತಿಕ ವಾಸ್ತವವಾದದ ಘಟ್ಟ

ಮೊಗಸಾಲೆಯವರು ಹಳ್ಳಿಯಲ್ಲಿರುವುದರಿಂದ ಕನ್ನಡ ಸಾಹಿತ್ಯದ ಚಳುವಳಿಗಳ ಅಲೆಗಳು ತಡವಾಗಿ ಕಾಂತಾವರಕ್ಕೆ ಬಡಿದವು. ಮೊಗಸಾಲೆಯವರು ನವ್ಯ ಕಾದಂಬರಿಗಳ ವಿನ್ಯಾಸವನ್ನು ಮೈಗೂಡಿಸಿಕೊಂಡು ಬರೆಯಲಾರಂಭಿಸಿದ್ದು 1975ರ ನಂತರ. ಕನ್ನಡ ಸಾಹಿತ್ಯದಲ್ಲಿ 1960ರ ದಶಕದಲ್ಲಿ ನವ್ಯ ಸಾಹಿತ್ಯದ ಪ್ರಮುಖ ಕೃತಿಗಳು ಬಂದಿದ್ದವು.

ಹಾಗೆಯೇ ನವ ಚಾರಿತ್ರಿಕ ಚಳುವಳಿಯು 1990ರ ನಂತರ ಕನ್ನಡದಲ್ಲಿ ಕಾಣಿಸಿಕೊಂಡಿತು. ಮೊಗಸಾಲೆಯವರು 2002ರಲ್ಲಿ ತಾವು ನಿವೃತ್ತರಾದ ಮೇಲೆ ಅದಕ್ಕೆ ಸ್ಪಂದಿಸಿದರು ಎಂದು ಆಟೊಬಯಾಗ್ರಫಿಕಲ್ ಮಾಹಿತಿಗಳನ್ನು ಸಾಹಿತ್ಯ ಕೃತಿಗಳ ಓದಿನಲ್ಲಿ ಬಳಸುವುದನ್ನು ಒಪ್ಪದ ಸಾಹಿತ್ಯದ ವಿದ್ಯಾರ್ಥಿಗಳು ಪರಿಗಣಿಸಬಹುದು.

ಅವರ ಬದುಕಿನ ಕಾಲಘಟ್ಟವೊಂದನ್ನು ಈ ಹಂತದ ಕಾದಂಬರಿಗಳ ಬರವಣಿಗೆಯ ನೆಲೆಯಾಗಿ ಪರಿಗಣಿಸಿದಾಗ ಅವರು ತಮ್ಮ 'ಬಯಲ ಬೆಟ್ಟ'(2005) ಎಂಬ ಬೃಹತ್ ಆತ್ಮಚರಿತ್ರೆಯನ್ನು ಬರೆದ ನಂತರ ಬಾಲ್ಯದ ಮತ್ತು ತಾಯಿನೆಲದ ಸ್ಮೃತಿಕೋಶಕ್ಕೆ ಲಗ್ಗೆ ಹಾಕಿದರು ಎಂದು ಅರ್ಥವಾಗುತ್ತದೆ. ಊರಿನ ಸರಕಾರಿ ವೈದ್ಯರಾಗಿದ್ದಾಗ ರಾಜಕೀಯ ಸಂಚಲನಗಳನ್ನು ಗ್ರಹಿಸುತ್ತಾ, ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸಬೇಕಾದ ಅನಿವಾರ್ಯತೆ ಮತ್ತು ಒತ್ತಡದಲ್ಲಿದ್ದ ಮೊಗಸಾಲೆಯವರು ಆಗ ತಮ್ಮ ಗ್ರಹಿಕೆಗೆ ಸಿಕ್ಕಿದ ಸಮಾಜವನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದರು. ಈಗ ನಿವೃತ್ತ ಜೀವನವನ್ನು ತಮ್ಮ ಅಂತರಂಗದ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಬದುಕುವ ಅವಕಾಶ ಅವರಿಗೆ ಸಿಕ್ಕಿತು. ಈ ವಿರಾಮದಲ್ಲಿ, ಈ ಧ್ಯಾನದಲ್ಲಿ ಅವರ 'ಉಲ್ಲಂಘನೆ'(2008) ಮತ್ತು 'ಮುಖಾಂತರ'(2014) ಎಂಬ ಬೃಹತ್ ಕಾದಂಬರಿಗಳು ಹುಟ್ಟಿದವು.

ಈ ಘಟ್ಟದ ಕಾದಂಬರಿಗಳು: 15) ಉಲ್ಲಂಘನೆ–2008, 16) ಮುಖಾಂತರ –2014, 17) ಧಾತು–2016, 18) ಧರ್ಮಯುದ್ಧ–2021, 19)ಇದ್ದೂ ಇಲ್ಲದ್ದು–2022, 20. ನೀರಿನೊಳಗಿನ ಮಂಜು–2022, 21. ನೀರು–2023, 22. ಭಾರತ ಕಥಾ –2023, 23. ಕೊಪ್ಪರಿಗೆ ಮನೆ–2023, 24) 'ವಿಶ್ವಂಭರ' (ಇಸ್ಕಾನ್ ಸಂಸ್ಥೆಗಾಗಿ ಚೈತನ್ಯ ಮಹಾಪ್ರಭುಗಳ ಜೀವನಚರಿತ್ರೆಯನ್ನು ಆಧಾರವಾಗಿರಿಸಿಕೊಂಡು 2019ರಲ್ಲಿ ಬರೆದುಕೊಟ್ಟಿರುವ ಕಾದಂಬರಿ–ಅಪ್ರಕಟಿತ), 25. ಪತನ (ಅಪ್ರಕಟಿತ–ಗ್ರಾಮ ಸಮಾಜದ ಪಲ್ಲಟಗಳ ಕಥನ, ಮೌಲ್ಯಗಳ ಪತನವನ್ನು ಚಿತ್ರಿಸುವುದು ಕಾದಂಬರಿಕಾರನ ಆಶಯ).

ಇದು ಮರು ಪರಿಶೀಲನೆ ಹಾಗೂ ಸ್ವಾನುಭವ ಕಥನಗಳ ಘಟ್ಟವೂ ಹೌದು. ತಮ್ಮ 'ಬಯಲ ಬೆಟ್ಟ' ಆತ್ಮಕಥೆಯಲ್ಲಿ ದಾಖಲಾಗದ ವೈಯಕ್ತಿಕ ಬದುಕಿಗೆ ಸಂಬಂಧಿಸಿದ ಕೆಲವು ಮುಖ್ಯ ಘಟನೆಗಳು ಅವರ 'ಭಾರತ ಕಥಾ' ಮತ್ತು 'ನೀರು' ಕಾದಂಬರಿಗಳಲ್ಲಿ ದಾಖಲಾಗಿವೆ. ಹಾಗೆಯೇ ತಮ್ಮ 'ಉಲ್ಲಂಘನೆ', 'ಮುಖಾಂತರ' ಕಾದಂಬರಿಗಳಲ್ಲಿ ದಾಖಲಾಗದ ಸಾಮಾಜಿಕ ಇತಿಹಾಸದ ಸಂಗತಿಗಳನ್ನು ಅವರು 'ಕೊಪ್ಪರಿಗೆ ಮನೆ' ಮತ್ತು 'ಪತನ' ಕಾದಂಬರಿಗಳಲ್ಲಿ ದಾಖಲಿಸಿದ್ದಾರೆ.

ಇಲ್ಲಿ ನಾನು ಕಾದಂಬರಿಯು ನಿರ್ವಹಿಸುವ ಸಾಂಸ್ಕೃತಿಕ ಜವಾಬ್ದಾರಿಯ ಬಗ್ಗೆ ಹೇಳಬೇಕು. ಲಯನೆಲ್ ಟ್ರಿಲಿಂಗ್ ಇದನ್ನು ಖಚಿತವಾಗಿ ಹೇಳಿದ ಬಹುಮುಖ್ಯ ವಿಮರ್ಶಕ. ಅವನ ಪ್ರಕಾರ–ವಿಸಾಹಿತ್ಯದಲ್ಲಿ ವೈಯಕ್ತಿಕ, ರಾಷ್ಟ್ರೀಯ, ಜಾಗತಿಕ ಘಟನೆಗಳ ದಾಖಲೆ ಇರುತ್ತದೆ. ಜೊತೆಗೆ ದಾಖಲೆಗಳನ್ನು ಅರ್ಥೈಸುವ ಪ್ರಯತ್ನ ಇರುತ್ತದೆ. (The poet is a chronicler of events..... Literature records and interprets personal, national and cosmological events) - ಎಂದು ಟ್ರಿಲಿಂಗ್ ಹೇಳುತ್ತಾನೆ.

ಕಾದಂಬರಿ ಬಹುಮುಖ್ಯ ಸಾಹಿತ್ಯ ಪ್ರಕಾರ ಮತ್ತು ಅದು ಸಂಸ್ಕೃತಿಯ ದಾಖಲೆ ಎಂದು ಟ್ರಿಲಿಂಗ್ ಪರಿಗಣಿಸುತ್ತಾನೆ. ಆ ಹಿನ್ನೆಲೆಯಲ್ಲಿ ಮೊಗಸಾಲೆಯವರ 'ಉಲ್ಲಂಘನೆ', 'ಮುಖಾಂತರ' ಮತ್ತು 'ಇದ್ದೂ ಇಲ್ಲದ್ದು' ಕಾದಂಬರಿಗಳು ಸಾಂಸ್ಕೃತಿಕ ದಾಖಲೆಗಳಾಗಿವೆ. ಕೇವಲ ಸಾಂಸ್ಕೃತಿಕ ದಾಖಲೆಗಳು ಮಾತ್ರವಲ್ಲ, ಅವನ್ನು ಗ್ರಹಿಸುವ ನೆಲೆಗಳನ್ನೂ ಕಾದಂಬರಿಕಾರ ಅಳವಡಿಸಿಕೊಂಡಿರುವುದರಿಂದ ಅದು ಕಾದಂಬರಿ ಎಂಬ ಕಲೆಯಾಗುತ್ತದೆ.

ಉಲ್ಲಂಘನೆ (2008)

ಮೊಗಸಾಲಯೆವರ 'ಉಲ್ಲಂಘನೆ' ಕಾದಂಬರಿಯಲ್ಲಿ ಒಂದು ಸಾಂಸ್ಕೃತಿಕ ಚರಿತ್ರೆ ಇದೆ ಎಂದು ಡಾ. ರವಿಶಂಕರ್ ಜಿ.ಕೆ. ಹೇಳಿರುವುದು ಈ ಹಿನ್ನೆಲೆಯಲ್ಲಿ ಹೆಚ್ಚು ಸ್ಪಷ್ಟವಾಗುತ್ತದೆ. ಅವರು ಅದನ್ನು ಪಟ್ಟಿ ಮಾಡಿರುವುದು ಹೀಗೆ: "ಸಾಂತೇರುಗುತ್ತಿನ ಮನೆಯನ್ನು ಪ್ರತಿನಿಧಿಯಾಗಿಟ್ಟುಕೊಂಡಿರುವ 'ಉಲ್ಲಂಘನೆ'ಯು ಕರಾವಳಿಯ ಒಂದೂವರೆ ಶತಮಾನದ ಸಮಗ್ರವಾದ ಚಿತ್ರವನ್ನು ಕಣ್ಣಮುಂದೆ ತಂದು ನಿಲ್ಲಿಸುವುದರಿಂದ ಈ ಕೃತಿಯನ್ನು ಕರಾವಳಿಯ ಸಾಂಸ್ಕೃತಿಕ ಚರಿತ್ರೆ ಎಂದೇ ಕರೆಯಬಹುದು. ಗುತ್ತಿನ ಮನೆಯ ದೈನಂದಿನ ವ್ಯವಹಾರಗಳ ಆರಂಭದಿಂದ ತೊಡಗಿ, ಗುತ್ತಿನ ಗದ್ದೆ–ವ್ಯವಸಾಯ, ಜಾನುವಾರುಗಳ ಸಾಕಣೆ, ಓ ಬೆಲೆ–ಮಂಜೊಟ್ಟಿ–ಪಾಡ್ದನಗಳು, ಹೊಸ ಅಕ್ಕಿಯ ಊಟ, ತೋಡಿಗೆ ಕಟ್ಟ ಕಟ್ಟುವುದು, ಭತ್ತಗಳ ವಿಧ, ಮಳೆಗಾಲದ ಸಿದ್ಧತೆ, ಕಂಡ ಕೋರುವ ಕ್ರಮ, ಕರಾವಳಿಯ ಪಾಕೃತಿಕ ಸೊಬಗು, ಮಳೆಗಾಲದ ಅಬ್ಬರ, ಗುತ್ತಿನ ಮನೆ ಮತ್ತು ಕೆಲಸದಾಳುಗಳ ನಡುವಿನ ಸಂಬಂಧ–ಒಡನಾಟಗಳು, ಜೈನ ಮತ್ತು ಬಂಟ ಸಮುದಾಯದ ನಡುವಿನ ಸಾಮರಸ್ಯ, ಉಡುಪಿ ಮಠದ ವ್ಯವಸ್ಥೆ, ಗುತ್ತಿನ ಮನೆಯ ಗಡಿ ಹಿಡಿಯುವ ಧಾರ್ಮಿಕ ಆಚರಣೆ, ಗುತ್ತಿನ ಜಮೀನಿನ ಗೇಣಿ ವ್ಯವಸ್ಥೆ, ಸಾಲರೂಪದ ಅಕ್ಕಿ ಕೊಡುವ ಪೋಲಿ ಪದ್ಧತಿ, ತುಳುನಾಡಿನ ಯುಗಾದಿ–ಬಿಸುಪರ್ಬ–ಪತ್ತನಾಜೆ–ದೀಪಾವಳಿಗಳ ಆಚರಣೆ, ಯಕ್ಷಗಾನ–ತಾಳಮದ್ದಳೆ, ಕಂಬಳ, ಕೋಳಿ ಅಂಕ, ನಾಗಮಂಡಲ, ಆಟಿ ಅಮಾಸೆ, ಸೋಣದ ಆಚರಣೆ, ಗುತ್ತಿನ ಮನೆಯ ಸದಸ್ಯರ ಜೀವನಾವರ್ತನ ವಿವರಣೆಗಳು, ಸಾಮಾಜಿಕ ವರ್ಗಕ್ಕೆ ಅನುಗುಣವಾಗಿ ರೂಪಿತಗೊಂಡಿರುವ ಸಂಸ್ಕಾರದ ವಿಧಿ ವಿಧಾನಗಳು, ಆಧುನಿಕ ಶಿಕ್ಷಣ ವ್ಯವಸ್ಥೆಯ ಆರಂಭ, ಕಲ್ಲಿದ್ದಲಿನ ಬಸ್ಸಿನ ಆರಂಭ–ಸಂಚಾರ ವ್ಯವಸ್ಥೆಯ ಪ್ರಗತಿ, ಕಾಲಾಂತರದಲ್ಲಿ ಗುತ್ತಿನ ಮನೆಯ ವ್ಯವಸ್ಥೆಯಲ್ಲಿ ಆದಂತಹ ಬದಲಾವಣೆಗಳು, ಗಾಂಧೀಜಿ ಕರಾವಳಿಗೆ ಬಂದದ್ದು, ಗುತ್ತಿನ ಹೆಣ್ಣುಮಗಳು ಬ್ರಿಟಿಷ್ ದೊರೆಯೊಬ್ಬನನ್ನು ವಿವಾಹವಾಗುವುದು, ಮುಸ್ಲಿಂ ಸಮುದಾಯ ಕರಾವಳಿಯಲ್ಲಿ ವ್ಯಾಪಾರದ ಮೂಲಕವಾಗಿ ನೆಲೆ ಕಂಡುಕೊಂಡದ್ದು, ಸಾಂತೇರುಗುತ್ತಿನಲ್ಲಿ ಚರ್ಚ್ ಹುಟ್ಟಿಕೊಳ್ಳುವುದು, ಶಿಕ್ಷಣ ಮತ್ತು ಭೂಮಸೂದೆಗಳು ಗುತ್ತಿನ ವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳು, ಹೊಸ ವ್ಯವಸ್ಥೆಗಳಿಗೆ ಮತ್ತು ಬದಲಾವಣೆಗಳಿಗೆ ತೆರೆದುಕೊಳ್ಳುವಾಗಿನ ಗುತ್ತಿನ ಮನೆಯು ಎದುರಿಸುವ ತಲ್ಲಣಗಳು, ಬತ್ತದ ಕೃಷಿಯಿಂದ ಅಡಕೆ ಕೃಷಿಯ ಕಡೆಗೆ ಹೊರಳಿಕೊಂಡದ್ದು, ಬೆಟ್ಟು ಗದ್ದೆಗಳು ಕೆಂಪು ಕಲ್ಲಿನ ಕೋರೆಗಳಾದದ್ದು, ಕರಾವಳಿಗರು ಹೋಟೇಲ್ ಉದ್ಯಮದತ್ತ ಹೊರಳಿಕೊಂಡದ್ದು, ಮರದ ವ್ಯಾಪಾರ ಮತ್ತು ಮರದ ಕಳ್ಳತನ ಆರಂಭವಾದದ್ದು, ಕರಾವಳಿಯಲ್ಲಿ ಕೋಮುವಾದ ಮೊಳಕೆಯೊಡೆಯಲಾರಂಭಿಸಿದ್ದು, ಎಸ್.ಇ.ಜೆಡ್.ನಂತಹ ಯೋಜನೆಗಳು ಕೃಷಿಭೂಮಿಗಳನ್ನು ಒಂದೊಂದಾಗಿ ನುಂಗಿ ಹಾಕಲಾರಂಭಿಸಿದ್ದು ಮುಂತಾಗಿ ಬಹುದೊಡ್ಡ ಕ್ಯಾನ್ವಾಸ್‌ನಲ್ಲಿ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ದಾಖಲಿಸುತ್ತಾ ಕರಾವಳಿಯ ಸಂಸ್ಕೃತಿಯನ್ನು ಕಟ್ಟಿಕೊಡುತ್ತದೆ" – ಇದು ರವಿಶಂಕರ್ ಅವರ ಗ್ರಹಿಕೆ.

'ಉಲ್ಲಂಘನೆ' ಪ್ರಕಟವಾದದ್ದು 2008ರಲ್ಲಿ. ಕರಾವಳಿಯ ಪ್ರಭಾವಶಾಲಿ ಸಮುದಾಯವಾದ ಬಂಟ ಸಮಾಜವನ್ನು ಕೇಂದ್ರದಲ್ಲಿಟ್ಟುಕೊಂಡು ಈ

ಕಾದಂಬರಿಯನ್ನು ಕಟ್ಟಲಾಗಿದೆ. ಕಾಸರಗೋಡು ಸೀಮೆಯ ಒಂಬತ್ತುಕೆರೆ ಗ್ರಾಮದ ಸಾಂತೇರುಗುತ್ತು ಇಲ್ಲಿನ ಕಥನಕೇಂದ್ರ. ಅಂಬಕ್ಕೆ ಗುತ್ತಿನ ಮನೆಯ ಯಜಮಾನಿತಿ. ಆಕೆಯ ಅಣ್ಣ ಸಂಕಪ್ಪ ಹೆಗ್ಗಡೆ ಗಾಂಧೀವಾದವನ್ನು ಒಪ್ಪಿಕೊಂಡಿರುವ ಕಾರಣದಿಂದ ವರ್ತಮಾನದಲ್ಲಿ ಗುತ್ತಿನ ಪಾಳೇಗಾರಿಕೆ, ಅಸ್ಪೃಶ್ಯತೆ ಆಚರಣೆ ಇತ್ಯಾದಿಗಳು ಬದಲಾಗಿವೆ. ಎರಡನೇ ಭಾಗದಲ್ಲಿ ಆಧುನಿಕತೆಯ ಪ್ರವೇಶದ ಚಿತ್ರಣ ಇದೆ. ಆಧುನಿಕ ಶಿಕ್ಷಣ, ಭೂಮಸೂದೆಗಳು, ಜಾಗತೀಕರಣ, ನಗರೀಕರಣ ಮುಂತಾದವು ಸಮಾಜದಲ್ಲಿ ಮಾಡುವ ಬದಲಾವಣೆಗಳ ಚಿತ್ರಣ ಈ ಭಾಗದಲ್ಲಿದೆ.

ಮೂರನೇ ಭಾಗದಲ್ಲಿ ಗುತ್ತಿನ ಮನೆಯ ಹೊಸ ಪೀಳಿಗೆಯ ಪ್ರಶಾಂತ ಶೆಟ್ಟಿ ಮುಂಬಯಿಯಲ್ಲಿ ಉದ್ಯಮಿಯಾಗಿದ್ದವನು ಗುತ್ತನ್ನು ನಾಶಮಾಡಿ, ವಿಶೇಷ ಆರ್ಥಿಕ ವಲಯವಾಗಿಸಿ ಕೈಗಾರಿಕೆಗಳನ್ನು ಸ್ಥಾಪಿಸಲು ಮುಂದಾಗುತ್ತಾನೆ. ಮಾತೃಪ್ರಧಾನ ಗುತ್ತಿಗೆ ಮಗನ ಮಗನಿಗೆ ಹಕ್ಕಿಲ್ಲದಿದ್ದರೂ ಅವನಿಗೂ ಅರ್ಧಪಾಲು ಕೊಡಲು ಅಂಬಕ್ಕೆ ತೀರ್ಮಾನಿಸಿರುತ್ತಾಳೆ. ಹಕ್ಕುದಾರಳಾದ ಅವನ ಸೋದರತ್ತೆಯ ಮಗಳು ಪ್ರಜ್ಞಾ ಸಾಂತೇರ್ ಒಬ್ಬ ಜೈನ ಯುವಕನನ್ನು ಮದುವೆಯಾಗಿ, ಸಾಂತೇರ್ ಗುತ್ತನ್ನು ಉಳಿಸಿಕೊಳ್ಳಲು ನಿರ್ಧರಿಸುತ್ತಾಳೆ. ಮೂಲದಲ್ಲಿ ಜೈನರದ್ದೇ ಆಗಿತ್ತು ಎನ್ನಲ್ಪಡುವ ಸಾಂತೇರ್‌ಗುತ್ತು ಮರಳಿ ಜೈನಸಮುದಾಯಕ್ಕೇ ಸೇರುತ್ತದೆ ಎಂಬ ಸೂಚನೆ ಕಾದಂಬರಿಯಲ್ಲಿದೆ.

ಮುಖಾಂತರ (2014)

'ಮುಖಾಂತರ' ಕಾದಂಬರಿಯಲ್ಲಿ ಮೊಗಸಾಲೆಯವರು ಕರಾವಳಿಯ ಸ್ವಾತಂತ್ರ್ಯ ಹೋರಾಟದ ಆಯಾಮವನ್ನು ವಿಸ್ತೃತವಾಗಿ ಪರಿಶೀಲಿಸಿದ್ದಾರೆ. 'ಉಲ್ಲಂಘನೆ'ಯಲ್ಲಿ ಸಂಕಪ್ಪ ಸೆಟ್ಟರು ಗಾಂಧೀವಾದಿ ಎನ್ನುವ ಅಂಶವಷ್ಟೇ ಪ್ರಸ್ತಾಪವಾಗಿತ್ತು, ಆದರೆ ಸ್ವಾತಂತ್ರ್ಯ ಹೋರಾಟದ ಚಿತ್ರಣ ಅಲ್ಲಿ ಬಂದಿರಲಿಲ್ಲ. 'ಮುಖಾಂತರ' ಕಾದಂಬರಿಯಲ್ಲಿ ಹವ್ಯಕ ಬ್ರಾಹ್ಮಣ ಕುಟುಂಬವೊಂದರ ಕೆಲವು ತಲೆಮಾರುಗಳ ಕಥೆ ಇದೆ. ಹಾಗಾಗಿ ಇದೊಂದು ಕೌಟುಂಬಿಕ ಸಾಗಾ ಆಗಿದೆ. ಆದರೆ ಸಾಮಾಜಿಕ ಆಯಾಮ ಉಳ್ಳದ್ದು. ಬಂಟರ ಗುತ್ತು ಕೂಡ ಇಲ್ಲಿದೆ. ಯಾಕೆಂದರೆ ಹಿಂದಿನ ಕಾಲದಲ್ಲಿ ಹಳ್ಳಿಯ ಬದುಕಿಗೆ ಸರಕಾರದ ಮಾದರಿಯಲ್ಲಿ ಗುತ್ತುಗಳು ಪ್ರಸ್ತುತವಾಗುತ್ತಿದ್ದವು. ಎರಡೂ ಕುಟುಂಬಗಳ ನಾಲ್ಕನೇ ತಲೆಮಾರು ಸ್ವಾತಂತ್ರ್ಯ ಹೋರಾಟದಲ್ಲಿ, ಸಮಾಜ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಗುತ್ತಿನ ಮನೆಯ ಮಂಜುನಾಥ ಮತ್ತು ಈಶ್ವರಿಮೂಲೆ ಕೃಷ್ಣಯ್ಯರ ಪಾತ್ರಗಳ ಮೂಲಕ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಪ್ರಾತಿನಿಧಿಕ ಚಿತ್ರಣ ಕಾದಂಬರಿಯಲ್ಲಿ ಬಂದಿದೆ. ಗಾಂಧಿ ಸಿದ್ಧಾಂತದ ಪ್ರಚಾರಕ್ಕೆ ಜೀವನವನ್ನು ಮುಡಿಪಾಗಿಟ್ಟ ಟೊಪ್ಪಿ ಶಂಭಟ್ಟ, ಕಾರ್ನಾಡ್ ಸದಾಶಿವ ರಾಯರು, ಕುದ್ಮಲ್ ರಂಗರಾಯರು, ಸಾಂತ್ಯಾರು ಅನಂತಪದ್ಮನಾಭ ಭಟ್ಟರು, ಶ್ರೀನಿವಾಸ ಉಪಾಧ್ಯಾಯ ಪಣಿಯಾಡಿಯವರು, ಕೆ.ಕೆ. ಶೆಟ್ಟರು, ಎನ್.ಎಸ್. ಕಿಲ್ಲೆಯವರು ಮುಂತಾದ ನಿಜವಾದ ಸ್ವಾತಂತ್ರ್ಯ ಹೋರಾಟಗಾರರು ಕಾದಂಬರಿಯಲ್ಲಿ ಪಾತ್ರಗಳಾಗುತ್ತಾರೆ. ಕಾರ್ನಾಡು ಸದಾಶಿವ ರಾಯರು ಮತ್ತು ಕುದ್ಮಲ್ ರಂಗರಾಯರು ನಡೆಸಿದ ಅಸ್ಪೃಶ್ಯತಾ ನಿವಾರಣೆಯ ಚಟುವಟಿಕೆಗಳು, ರಾಜಾಜಿಯವರು ಮಂಗಳೂರಿಗೆ

ಬಂದು ಸ್ವಾತಂತ್ರ್ಯ ಹೋರಾಟದ ಕುರಿತಾಗಿ ಮಾಡಿದ ಭಾಷಣ, ಆಗ ನಡೆದ ಗೋಲೀಬಾರು ಮುಂತಾದ ಐತಿಹಾಸಿಕ ಘಟನೆಗಳು ಕಾದಂಬರಿಯಲ್ಲಿ ಸವಿವರವಾಗಿ ದಾಖಲಾಗಿವೆ.

ಇದ್ದೂ ಇಲ್ಲದ್ದು (2022)

'ಇದ್ದೂ ಇಲ್ಲದ್ದು' ಕಾದಂಬರಿಯಲ್ಲಿ ಉಡುಪಿ ಜಿಲ್ಲೆಯ ಶಿವಳ್ಳಿ ಬ್ರಾಹ್ಮಣ ಸಮುದಾಯ, ಮಾಧ್ವ ಮಠಗಳು ಅವರ ಬದುಕಿನಲ್ಲಿ ನಿರ್ವಹಿಸಿದ ಪಾತ್ರ, ಅವರ ಮನೆದೇವರ ಪೂಜೆಯ ವಿಚಾರ, ತಲೆಮಾರಿನ ವರ್ತಮಾನದ ಕೊಂಡಿಯಾದ ರಮಾನಂದ ಕ್ರೈಸ್ತ ಯುವತಿಯನ್ನು ಮದುವೆಯಾಗಿ ಬೆಂಗಳೂರು ಸೇರಿರುವುದರಿಂದ ಮನೆದೇವರ ಅದನ್ನು ನಿಲ್ಲಿಸುವ ಆಲೋಚನೆ, ಅದನ್ನು ಹೇಗೆ ನಿಲ್ಲಿಸುವುದೆಂಬ ತಾಂತ್ರಿಕ ಸಮಸ್ಯೆ ಇತ್ಯಾದಿಗಳು ಈ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಎರಡನೆಯ ತಲೆಮಾರಿನ ಹರಿದಾಸಭಟ್ಟರು ವೃತ್ತಿಯಲ್ಲಿ ಅಧ್ಯಾಪಕರು; ಜತೆಗೆ ಕೃಷಿಕ. ಸಮಾಜ ಸುಧಾರಕ ಎಂದರೂ ತಪ್ಪಾಗದು; ಯಾಕೆಂದರೆ ಅವರು ತಮ್ಮ ಜಮೀನಿನಲ್ಲಿ ಸ್ವಲ್ಪಭಾಗವನ್ನು ಬಿಡು ಒಕ್ಕಲುಗಳಿಗೆ ಹಂಚುತ್ತಾರೆ. ಅಧ್ಯಾಪನದ ಜೊತೆಗೆ ಯುವಕ ಮಂಡಲವನ್ನು ಸ್ಥಾಪಿಸಿ ಗ್ರಾಮಾಭಿವೃದ್ಧಿಗೆ ಶ್ರಮಿಸುತ್ತಾರೆ. ಅಸ್ಪೃಶ್ಯತೆ ಮುಂತಾದ ಇತರ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಶ್ರಮಿಸುತ್ತಾರೆ. ಒಂದು ರೀತಿಯಲ್ಲಿ ಕಾದಂಬರಿಯ ಸಾಮಾಜಿಕ – ಸಾಂಸ್ಕೃತಿಕ ಆಯಾಮ ಈ ತಲೆಮಾರಿನ ಚಿತ್ರಣದಲ್ಲಿದೆ. ದೊಡ್ಡ ರಮಾನಂದ ಭಟ್ಟರು ಮತ್ತು ಚಿಕ್ಕ ರಮಾನಂದ ಭಟ್ಟರ ಕಾಲ ಕೌಟುಂಬಿಕ ಜೀವನದ ಸಾರ್ಥಕ್ಯದ ಪರಿಶೀಲನೆಗೆ ಮೀಸಲಾಗುತ್ತದೆ. (ಕಾದಂಬರಿಯಲ್ಲಿ ಕೇಂದ್ರ ನೆಲೆಯು ದೇವರ ಪೂಜೆ ಎಂಬ ಸಾಂಕೇತಿಕತೆಯ ಮೂಲಕ ಪರಿಶೀಲಿಸುವ ಪಲ್ಲಟದ ಚಿತ್ರಣವಾಗಿದೆ. ಸರಳವಾಗಿ ನೋಡಿದಾಗ ಇದು ಕುಟುಂಬವೊಂದರ ಮೂರು ತಲೆಮಾರುಗಳ 'ಸಾಗಾ' ಆಗಿದೆ).

ಕಾದಂಬರಿಗಳ ನಿಲುವು ಮತ್ತು ಅಂತ್ಯಗಳು

ಮೊಗಸಾಲೆಯವರ ಕಾದಂಬರಿಗಳ ಮೂರು ಘಟ್ಟಗಳಲ್ಲಿ ಪ್ರಾರಂಭದ ಘಟ್ಟ ವಾಸ್ತವವಾದಿ ಅಭಿಜಾತ ಕಾದಂಬರಿಗಳ ಮಾದರಿಯಲ್ಲಿ ಬರೆದ ಕಾದಂಬರಿಗಳು. ಆ ಘಟ್ಟದಲ್ಲಿ 'ಸಿನ್ಸಿಯಾರಿಟಿ'(ಪ್ರಾಮಾಣಿಕತೆ) ಮೊಗಸಾಲೆಯವರಿಗೆ ಮುಖ್ಯ ನೈತಿಕ ನೆಲೆಯಾಗಿತ್ತು. ಎರಡನೆಯ ಘಟ್ಟದಲ್ಲಿ 'ಅಥೆಂಟಿಸಿಟಿ'ಯೇ ಪ್ರಾಮಾಣ್ಯ ಎನ್ನುವ ನವ್ಯದ ಪ್ರಭಾವದಿಂದ ಅವರು ವಾಸತವವಾದಿ–ನವ್ಯ ಕಾದಂಬರಿಗಳನ್ನು ಬರೆದರು. ಮೂರನೆಯ ಘಟ್ಟದಲ್ಲಿ ಅವರು 'ಸಾಂಸ್ಕೃತಿಕ ದಾಖಲೀಕರಣ'ದ ಮಾದರಿಯನ್ನು ಸ್ವೀಕರಿಸಿದರು ಮತ್ತು 'ಸಿನ್ಸಿಯಾರಿಟಿ'ಯನ್ನು ಮುಖ್ಯ ನೈತಿಕ ನೆಲೆಯಾಗಿ ಸ್ವೀಕರಿಸಿದರು. ಈ ಬದಲಾವಣೆಗಳನ್ನು ಅವರ ಕಾದಂಬರಿಗಳು ಅಂತ್ಯವಾಗುವ ರೀತಿಯಲ್ಲಿಯೂ ನೋಡಬಹುದು.

ನವ್ಯ ಕಾಲಘಟ್ಟದ ಕಾದಂಬರಿಗಳ ಅಂತ್ಯಗಳು ತಾರ್ಕಿಕ ಅಂತ್ಯಗಳಾಗದೆ ಸಾಂಕೇತಿಕ ಗೊಂದಲದಲ್ಲಿ ಮುಗಿಯುತ್ತವೆ. ಯಾಕೆಂದರೆ ನವ್ಯದ ತಾತ್ವಿಕತೆ ಅಸ್ತಿತ್ವವಾದದ ಜತೆಗೆ ತಳಕು ಹಾಕಿಕೊಂಡಿರುವುದರಿಂದ ಜಗತ್ತು ಒಪ್ಪಿದ ತಾರ್ಕಿಕತೆಗೆ ಅಲ್ಲಿ ಬೆಲೆಯಿಲ್ಲ; ಮುಂದಿನ ನಡೆಗಳು ಪಾತ್ರಗಳ ಆ ಕ್ಷಣದ ಪ್ರತಿಕ್ರಿಯೆಯಿಂದ ನಿರ್ಧಾರವಾಗುತ್ತವೆ.

ಉದಾಹರಣೆ 1: 'ದಿಗಂತ' ಕಾದಂಬರಿಯ ಅಂತ್ಯ–ಎತ್ತಂಗಡಿ ಪೇಟೆಯಿಡೀ ನೀರಿನಿಂದಾವೃತವಾಗಿ ಎಲ್ಲರೂ ಮುಳುಗುವ ಸ್ವಪ್ನವಾಸ್ತವ ಮಾದರಿಯ ಕೊನೆಯಿದೆ. ಹೊಸ ಸೂರ್ಯೋದಯಕ್ಕಾಗಿ ಹಂಬಲಿಸುತ್ತಾ ದಿಗಂತವನ್ನು ನೋಡುತ್ತಾ ಮುಖ್ಯ ಪಾತ್ರಗಳು ಕಾಯುತ್ತವೆ.

ಉದಾಹರಣೆ 2: 'ಪಂಥ' ಕಾದಂಬರಿಯ ಅಂತ್ಯ–ಶಾಸ್ತ್ರಿಗಳಿಗೂ ಹೊನ್ನಿಗೂ ಅಕ್ರಮ ಸಂಬಂಧ ಇದೆ ಎಂಬ ಅನಾಮಧೇಯ ಪತ್ರ ಶಾಸ್ತ್ರಿಗಳಿಗೆ ಬರುತ್ತದೆ. ಇದರಿಂದ ನೊಂದುಕೊಳ್ಳುವ ಶಾಸ್ತ್ರಿಗಳು ದೇವಾಲಯದ ಪೂಜೆ ಮಾಡುತ್ತಿರುವಾಗ ಪಕ್ಷಾಘಾತಕ್ಕೆ ಒಳಗಾಗುತ್ತಾರೆ. ಹೊನ್ನಿಗೂ ಅದೇ ಪತ್ರ ಬಂದಿದ್ದರಿಂದ ಅವಳ ಸಂಶಯ ವೆಂಕಪ್ಪನ ಕಡೆಗೆ ತಿರುಗುತ್ತದೆ. ಹತಾಶಳಾದ ಹೊನ್ನಿ ಇಡೀ ಊರಿಗೆ ಚಪ್ಪಲಿಯಲ್ಲಿ ಹೊಡೆಯುವ ಕನಸು ಕಾಣುತ್ತಾಳೆ. ಹೊನ್ನಿಯ ಕನಸಿನಲ್ಲಿ ಶಂಕರನಾರಾಯಣ ಶಾಸ್ತ್ರಿಗಳು ತೀರಿಕೊಂಡಿದ್ದು, ಅವರ ಸಂಸ್ಮರಣಾ ಭಾಷಣ ಮಾಡಲು ಮುಂದಾಗುವ ನಾಗೋಜಿ ರಾವ್‌ಗೆ ಮೊದಲಿಗೆ ಅವಳು ಚಪ್ಪಲಿಯಲ್ಲಿ ಹೊಡೆಯುತ್ತಾಳೆ; ತಡೆಯಲು ಬಂದ ಕಾಮತ್, ವೆಂಕಪ್ಪನನ್ನು, ಅಷ್ಟೇಕೆ ಇಡೀ ಊರಿನವರಿಗೆಲ್ಲ ಅವಳು ಚಪ್ಪಲಿಯಿಂದ ಹೊಡೆಯುತ್ತಾಳೆ.

ಉದಾಹರಣೆ 3: 'ಹದ್ದು' ಕಾದಂಬರಿಯ ಅಂತ್ಯ–ವಿಶ್ವನಾಥನಿಗೆ ದುಸ್ವಪ್ನ ಬೀಳುತ್ತದೆ. ಲಿಲ್ಲಿಯನ್ನು ಬಲಾತ್ಕಾರದಿಂದ ಅವನಿಗೆ ಮದುವೆ ಮಾಡಿಸುವ ಕನಸಿಗೆ ಬೆಚ್ಚಿಬಿದ್ದು ಊರು ಬಿಡಲು ಹೋದಾಗ ಯಾವ ಬಸ್ಸಿಗೂ ಹತ್ತಲಾಗದೆ ಅತಂತ್ರನಾಗಿ ಊರಿನಲ್ಲಿಯೇಉಳಿದುಬಿಡುತ್ತಾನೆ. ಲಿಲ್ಲಿಯ ಗಂಡ ರೈಲಿನಡಿಗೆ ಬಿದ್ದು ಸಾಯುತ್ತಾನೆ. ಹೀಗೆ ಗೊಂದಲಗಳು ಹೆಚ್ಚಾಗುವಂತಹ ಅಂತ್ಯ ಇದೆ.

ಉದಾಹರಣೆ 4: 'ಧರ್ಮಯುದ್ಧ' ಕಾದಂಬರಿಯ ಅಂತ್ಯ. ದೈವದ ಗುಡಿಯ ಬ್ರಹ್ಮಕಲಶೋತ್ಸವವು ಹೆಜ್ಜೇನು ದಾಳಿಯಿಂದ ನಿಂತುಹೋಗುತ್ತದೆ. ಎಲ್ಲರೂ ದಿಕ್ಕಾಪಾಲಾಗಿ ಓಡುತ್ತಾರೆ.

ಸಾಂಸ್ಕೃತಿಕ ದಾಖಲೀಕರಣದ ವಾಸ್ತವವಾದಿ ಕಾದಂಬರಿಗಳ ಅಂತ್ಯವು ತಾರ್ಕಿಕ ಅಂತ್ಯಗಳಾಗಿರುತ್ತವೆ. ಒಂದು ವೇಳೆ 'ಮಣ್ಣಿನ ಮಕ್ಕಳು' ಕಾದಂಬರಿಯಲ್ಲಿ ಇರುವಂತೆ ಅಂತ್ಯವು ದುರಂತವಾಗಿರುವುದು ಅಸಹಜವಲ್ಲ; ಅದು ಗಾಢವಾದ ಪರಿಣಾಮ ಬೀರಲಿಕ್ಕೆ ಲೇಖಕ ಬಳಸಿಕೊಳ್ಳುವ ತಂತ್ರವಾಗಿರುತ್ತದೆ. ಕೆಲವು ಉದಾಹರಣೆಗಳನ್ನು ನೋಡೋಣ –

1. 'ಉಲ್ಲಂಘನೆ' ಕಾದಂಬರಿಯ ಅಂತ್ಯ–ಸಾಂತೇರುಗುತ್ತಿನ ಮುಂದಿನ ಯಾಜಮಾನಿ ಆಗಬೇಕಾಗಿದ್ದ ಪ್ರಜ್ಞಾ ಸಾಂತೇರ್ ಜೈನ ಧರ್ಮದ ಹುಡುಗನನ್ನು ಪ್ರೇಮಿಸಿ ವಿವಾಹವಾಗುವ ಸೂಚನೆಯೊಂದಿಗೆ ಕಾದಂಬರಿ ಕೊನೆಯಾಗುತ್ತದೆ. ಆ ಮೂಲಕ ಮೂಲದಲ್ಲಿ ಜೈನರದ್ದೇ ಆಗಿತ್ತು ಎನ್ನಲ್ಪಡುವ ಸಾಂತೇರ್‌ಗುತ್ತು ಮರಳಿ ಜೈನಸಮುದಾಯಕ್ಕೇ ಸೇರುತ್ತದೆ ಎಂಬ ಸೂಚನೆ ಕಾದಂಬರಿಯಲ್ಲಿದೆ. ಗುತ್ತಿನ ಮನೆ ವಾಣಿಜ್ಯೋದ್ಯಮಕ್ಕೆ ಬಳಕೆಯಾಗದೆ ಹಾಗೆಯೆ ಉಳಿಯುತ್ತದೆ.

2. 'ಮುಖಾಂತರ' ಕಾದಂಬರಿಯ ಅಂತ್ಯ: ಈಶ್ವರಿಮೂಲೆ ಎಂಬಲ್ಲಿನ ಆಸ್ತಿಯ ವ್ಯಭಿಚಾರಿಪುತ್ರನ ಕವಲಿನ ಕೇಚಣ್ಣನ ಮೊಮ್ಮಗ ಪುತ್ತುಭಟ್ಟ, ಅಧಿಕೃತ ಪುತ್ರನ ಉತ್ತರಾಧಿಕಾರಿಯಾದ ಬಂಗಾರಣ್ಣನ ಮೇಲೆ ದಾಯಾದಿ ಮತ್ಸರವನ್ನು ಬೆಳೆಸಿಕೊಂಡು

ತಮ್ಮ ಆಸ್ತಿಯ ಮೂಲದಾಖಲೆಗಾಗಿ ಹುಡುಕುತ್ತಿರುವ ಸಂಗತಿ ತಿಳಿದು ಬಂಗಾರಣ್ಣನೂ ಆ ದಾಖಲೆಗಾಗಿ ಹುಡುಕಾಡುತ್ತಾನೆ. ಅದು ಲಭಿಸದೆ ಆ ಪ್ರಯತ್ನವನ್ನು ಅರ್ಧದಲ್ಲಿ ಬಿಡುತ್ತಾನೆ. ಆದರೆ ಬಂಗಾರಣ್ಣನ ಸ್ನೇಹಿತ ಗೋವಿಂದಾಚಾರ್ಯ ದಾಖಲೆಯನ್ನು ಹುಡುಕಿ ತೆಗೆದದ್ದರಿಂದ ಈಶ್ವರಿಮೂಲೆಯ ಮೂಲ ಪುರುಷ ತಿರುಮಲೇಶ್ವರ ಭಟ್ಟರು ಇಡೀ ಆಸ್ತಿಯನ್ನು ಬಂಗಾರಣ್ಣನ ಪೂರ್ವಜರಾದ ಕೃಷ್ಣಯ್ಯನಿಗೆ ಮಾತ್ರ ಬರೆದುಕೊಟ್ಟಿರುವುದು ತಿಳಿಯುತ್ತದೆ. ಪ್ರಾರಂಭದಲ್ಲಿ ಉದ್ಭವಿಸಿದ ಸಮಸ್ಯೆ ಕೊನೆಯಲ್ಲಿ ಪರಿಹಾರವಾಗುತ್ತದೆ.

3. 'ಇದ್ದೂ ಇಲ್ಲದ್ದು' ಕಾದಂಬರಿಯ ಅಂತ್ಯ – ಮನೆದೇವರನ್ನು ಬಾವಿಗೆ ಅಥವಾ ಸಮುದ್ರಕ್ಕೆ ಹಾಕಿ, ಆ ಸಮಸ್ಯೆಯನ್ನು ಪರಿಹರಿಸಲು ರಮಾನಂದ ಪತ್ರ ಬರೆಯುತ್ತಾನೆ. ದೇವರ ಪೂಜೆ ಮಾಡುತ್ತ ಮನೆ ನೋಡಿಕೊಳ್ಳುತ್ತಿದ್ದ ಕುಪ್ಪಣ್ಣಾಚಾರ್ಯರಿಗೆ ಸಾಕಷ್ಟು ಹಣ ಕೊಡುತ್ತಾನೆ. ಮುಂದೆ ಮನೆದೇವರ ಪೂಜೆ ಮಾಡುವುದಾದರೆ ಆಸ್ತಿಯಿಡೀ ಅವರದೇ ಎಂಬ ಆಯ್ಕೆಯನ್ನೂ ಕೊಡುತ್ತಾನೆ. ಕುಪ್ಪಣ್ಣಾಚಾರ್ಯರು ಯಾವ ಆಯ್ಕೆಯನ್ನು ಮಾಡಿದರು ಎನ್ನುವುದನ್ನು ವಿವರಿಸದಿದ್ದರೂ ಯಾವ ಆಯ್ಕೆಯಿಂದಲೂ ಕಾದಂಬರಿಯ ಆಶಯ ಮತ್ತು ಪರಿಣಾಮಗಳು ಬದಲಾಗುವುದಿಲ್ಲ. ಪ್ರಾರಂಭದಲ್ಲಿ ಉದ್ಭವವಾದ ಸಮಸ್ಯೆಗೆ ಕೊನೆಯಲ್ಲಿ ಪರಿಹಾರವಿದೆ.

4. 'ನೀರು' ಕಾದಂಬರಿಯ ಅಂತ್ಯ: ಅಣ್ಣನ ಮೇಲೆ ಪ್ರತೀಕಾರಕ್ಕೆ ಹೊರಟ ಗೋವಿಂದಯ್ಯನನ್ನು ತಡೆದು, ಜಿದ್ದು ಸಾಧಿಸುವುದಿಲ್ಲವೆಂಬ ವಾಗ್ದಾನ ತೆಗೆದುಕೊಳ್ಳುತ್ತಾಳೆ. ಅಣ್ಣನಿಗೆ ಮದಗದಿಂದ ನೀರು ಪಡೆಯಲು ತಮ್ಮ ಅವಕಾಶ ಮಾಡಿಕೊಡುತ್ತಾನೆ ಎಂಬ ಸೂಚನೆಯೊಂದಿಗೆ ಕಾದಂಬರಿಯ ಸಮಸ್ಯೆ ಪರಿಹಾರವಾಗುತ್ತದೆ.

ಮೊಗಸಾಲೆಯವರು ಕರಾವಳಿಯ ಬದುಕನ್ನು ತಮ್ಮದೇ ಆದ ರೀತಿಯಲ್ಲಿ ಗ್ರಹಿಸಿ ದಾಖಲಿಸುತ್ತಾ ಬಂದಿದ್ದಾರೆ. ಸಾಂಸ್ಕೃತಿಕ ದಾಖಲೆಗಳಾಗಿ ಅವರ ಕಾದಂಬರಿಗಳು ಮೌಲಿಕವಾಗಿವೆ.

ಮೊಗಸಾಲೆಯವರು ಯಾವುದೇ ಸನ್ನಿವೇಶವನ್ನು ಅದರ ಎಲ್ಲ ಆಯಾಮಗಳೊಂದಿಗೆ, ಭಾವಸ್ಫುರಣೆಯಾಗುವಂತೆ ಚಿತ್ರಿಸುವ ಕಲೆಗಾರಿಕೆಯನ್ನು ಹೊಂದಿದ್ದಾರೆ. ಈ ಸನ್ನಿವೇಶ ನಿರ್ಮಾಣ ಕೌಶಲ ಅವರ ಮೊದಲನೆಯ ಕಾದಂಬರಿಯ ಮೊದಲನೆಯ ಸನ್ನಿವೇಶದಿಂದಲೇ ಓದುಗರ ಗಮನ ಸೆಳೆದಿದೆ. 'ಮಣ್ಣಿನ ಮಕ್ಕಳು' ಕಾದಂಬರಿಯ ಪ್ರಾರಂಭದಲ್ಲಿ ಆ ಕಾಲದಲ್ಲಿ ಕೋಳ್ಯೂರಿನ ಮಂಡಲಪೂಜೆಯ (ಈಗಲೂ ಪ್ರತಿವರ್ಷ ಜನವರಿ 2ರಂದು ನಡೆಯುವ ಸೀಮೆಗೆಲ್ಲ ಪ್ರಸಿದ್ಧವಾಗಿರುವ ಜಾತ್ರೆ) ರಾತ್ರಿ, ಬಲಿ ಉತ್ಸವಗಳೆಲ್ಲ ಮುಗಿದು ಜಮೀನುದಾರ ಸಂಕಪ್ಪ ಶೆಟ್ಟರೂ ಅವರ ಭಾವ ರಾಮಣ್ಣನೂ ಸೂಟೆ ಹಿಡಿದುಕೊಂಡು ಮನೆಗೆ ಮರಳುವ ದಾರಿಯಲ್ಲಿ ಡಬೋ ಡಬೋ ಎಂಬ ಶಬ್ದ ಊರಿಡೀ ಲಾಗ ಹಾಕುತ್ತಿರುವುದನ್ನು ಕೇಳಿಸಿಕೊಳ್ಳುತ್ತಾರೆ. ಅದರ ಜಾಡು ಹಿಡಿದು ಹೋದಾಗ ಅವರಿಗೆ ಶೆಟ್ಟರ್ ಅಒಕ್ಕಲು ಮಂಜಪ್ಪ ಬೆಳಗಿನ ಜಾವ ಚಿಮಿಣಿ ದೀಪ ಹತ್ತಿಸಿಟ್ಟುಕೊಂಡು ಅವಲಕ್ಕಿ ಕುಟ್ಟುವ ಶಬ್ದ ಅದು ಎಂದು ತಿಳಿಯುತ್ತದೆ. ಹೀಗೆ ಸನ್ನಿವೇಶ ನಿರ್ಮಾಣ ಮಾಡಿ, ಪಾತ್ರಗಳನ್ನು ಪರಿಚಯಿಸಿದ ರೀತಿ ಮೊದಲ ಕಾದಂಬರಿ ಬರೆಯುತ್ತಿದ್ದ ತರುಣನಿಗೇ ಸಿದ್ಧಿಸಿತ್ತು. ಈ ಕಲೆಗಾರಿಕೆಯೆ ಅವರ ಕಾದಂಬರಿಗಳ ಬಹಳ ದೊಡ್ಡ ಶಕ್ತಿಯಾಗಿದೆ. ಇದರ ಜತೆಗೆ ಕಥನಗಳನ್ನು ನಿರೂಪಿಸುವ

ಭಾಷಾ ಪ್ರೌಢಿಮೆ ಮತ್ತು ನಿರೂಪಣೆಯ ತಂತ್ರಗಾರಿಕೆ ಕೂಡ ಮೊಗಸಾಲೆಯವರಿಗೆ ಪ್ರಾರಂಭದಿಂದಲೂ ಸಿದ್ಧಿಸಿತ್ತು. ಹಾಗಾಗಿ ಅವರ ಕಾದಂಬರಿಗಳ ವಾಚನೀಯತೆ ಉನ್ನತ ಮಟ್ಟದ್ದಾಗಿದೆ.

ಹೀಗೆ ಮೊಗಸಾಲೆಯವರು ಕನ್ನಡದ ಒಬ್ಬ ಮುಖ್ಯ ಕಾದಂಬರಿಕಾರರಾಗಿ ಸಾಹಿತ್ಯ ಸೇವೆ ಮಾಡಿದ್ದಾರೆ.

(ಮೊಗಸಾಲೆ 80 ಅಭಿನಂದನ ಸಮಾರಂಭದಲ್ಲಿ ಬದಿಯಡ್ಕ ಮತ್ತು ಮೂಡುಬಿದಿರೆಗಳಲ್ಲಿ ನೀಡಿದ ಉಪನ್ಯಾಸದ ಲಿಖಿತ ರೂಪ–ಅಗಸ್ಟ್ ಮತ್ತು 21.9.2024)

ಗ್ರಂಥಋಣ

1. ಮೊಗಸಾಲೆಯವರ ಮೂಲ ಕೃತಿಗಳು
2. ಸಾಹಿತ್ಯದ ಬಯಲ ಬೆಟ್ಟ. ಡಾ. ಬಿ. ಜನಾರ್ದನ ಭಟ್. ದ.ಕ.ಸಾ.ಪ. ಬೆಳ್ತಂಗಡಿ ತಾಲೂಕು ಘಟಕ, ಉಜಿರೆ. 2020
3. ಹೊಳೆಯ ಮೇಲಿನ ಮಳೆ. ಡಾ. ರವಿಶಂಕರ್ ಜಿ.ಕೆ. ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ. 2024.
4. ರುಜುವಾತು (ತ್ರೈಮಾಸಿಕ). ಮೈಸೂರು. ಅಕ್ಟೋಬರ್– ಡಿಸೆಂಬರ್ 1982. ಸಂಪಾದಕರು: ಡಾ.ಯು.ಆರ್. ಅನಂತಮೂರ್ತಿ. ಇದರಲ್ಲಿ ಶಾಂತಿನಾಥ ದೇಸಾಯಿ ಅವರ ಲೇಖನ– 'ಲಾಯನಲ್ ಟ್ರಿಲಿಂಗ್: ಒಬ್ಬ ಸಂಸ್ಕೃತಿನಿಷ್ಠ ವಿಮರ್ಶಕ.'

❖❖❖

ನೀಲಾಗಸವನೆ ಅಳೆದು
ನೆಲದೊಳು ತಣ್ಣನೆ ಬೆಸೆದು
ಬಿಳಲದು ನೆಲವನೆ ಬಗೆಯುತಿದೆ
ಅಂತರಗಂಗೆಯ ಹುಡುಕುತಿದೆ

ಕಲ್ಯಾಣ ಕರ್ನಾಟಕದಲ್ಲಿ ವಾದನಸಂಗೀತದ ಬೆಳವಣಿಗೆ

ಡಾ. ಜಯಮ್ಮ ಯಶವಂತಪ್ಪ ಡಿ.
ಅತಿಥಿ ಉಪನ್ಯಾಸಕರು, ಸಂಗೀತ ವಿಭಾಗ, ಗುಲಬುರ್ಗಾವಿಶ್ವವಿದ್ಯಾಲಯ, ಕಲಬುರ್ಗಿ–585106

ಕನ್ನಡ ನಾಡಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ವಿಶಿಷ್ಟವಾದ ಪರಂಪರೆಯಿದೆ. ಪ್ರಥಮ ಕೃತಿಯಾದ "ಕವಿರಾಜಮಾರ್ಗ"ವನ್ನು ಕೊಟ್ಟದ್ದು ಇದೇ ಪ್ರದೇಶ, ಶರಣರ, ದಾಸರ, ಸೂಫಿಗಳ, ಸಂತರ ಕಾರ್ಯಕ್ಷೇತ್ರವಾದ ಈ ಪ್ರದೇಶವು ತತ್ವಪದಕಾರರ ತಾಣವೂ ಹೌದು. ಆಗಿನ ಕಾಲದ ಶರಣರ ಚಳುವಳಿ ಹಾಗೂ ವಚನ ಚಳುವಳಿಯ ಕೇಂದ್ರಸ್ಥಾನ ಈ ಕಲ್ಯಾಣ ಕರ್ನಾಟಕ ಪ್ರದೇಶವೇ ಆಗಿತ್ತು. ಈ ಪ್ರದೇಶವು ಆರ್ಥಿಕವಾಗಿ ಹಿಂದುಳಿದಿರಬಹುದು. ಆದರೆ ಇದು ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪಕಲೆ, ನಾಟಕ, ರೂಪಕ, ಜನಪದ ಸಂಗೀತ ಈ ಎಲ್ಲಾ ಕಲಾ ಪ್ರಕಾರಗಳಲ್ಲಿ ಅತ್ಯಂತ ಶ್ರೀಮಂತಿಕೆಯಿಂದ ಮೆರೆಯುವ ನಾಡಾಗಿದೆ.

ಇನ್ನು ಸಂಗೀತದ ವಿಚಾರಕ್ಕೆ ಬರುವುದಾದರೆ ಕಲ್ಯಾಣ ಕರ್ನಾಟಕದಲ್ಲಿ ಕೇವಲ ಹಿಂದೂಸ್ತಾನಿ ಗಾಯನ ಸಂಗೀತವಷ್ಟೇ ಅಲ್ಲದೇ ವಾದನಕ್ಷೇತ್ರವು ಬೆಳೆದುನಿಂತಿದೆ. ಕಲ್ಯಾಣ ಕರ್ನಾಟಕದ ಕಲೆಗಳಲ್ಲಿ ವಾದನಸಂಗೀತಕ್ಕೆ ತನ್ನದೇ ಆದ ವೈಶಿಷ್ಟ್ಯವಿದೆ. ಅಂತೆಯೇ ಈ ಭಾಗದಲ್ಲಿ ಅನೇಕ ಕಲಾವಿದರು ವಾದನಕ್ಷೇತ್ರದಲ್ಲಿ ತಮ್ಮ ಹಿರಿಮೆಯನ್ನು ಸಾಧಿಸಿದ್ದಾರೆ. ಸಂಗೀತವೆಂದರೆ ಕೇವಲ ಹಾಡುವುದಷ್ಟೇ ಅಲ್ಲ, ಗಾಯನದ ಜೊತೆ ವಾದನ ಅಗತ್ಯ. ಗಾಯನ, ವಾದನ ಕಲೆಗಳು ಒಂದನ್ನೊಂದು ಆಶ್ರಯಿಸಿಕೊಂಡು ಬೆಳೆದುಬಂದಂಥವುಗಳು, ವಾದ್ಯಗಳಲ್ಲದೆ ಪೂರ್ಣಪ್ರಮಾಣದ ಸಂಗೀತವನ್ನು ಪ್ರಸ್ತುತಪಡಿಸಲು ಸಾಧ್ಯವಿಲ್ಲ. ವಾದ್ಯಗಳ ಸಹಮೇಳವಿಲ್ಲದೆ ಶಾಸ್ತ್ರೀಯಸಂಗೀತವಾಗಲಿ, ಜನಪದಸಂಗೀತವಾಗಲೀ ಅಷ್ಟಾಗಿ ಶೋಭಿಸುವುದಿಲ್ಲ. ಗಾಯನ ಹೇಗೆ ಒಂದು ಸ್ವತಂತ್ರ ಕಲೆಯೋ ಹಾಗೆಯೇ ವಾದನವು ಒಂದು ಸ್ವತಂತ್ರ ಕಲೆಯಾಗಿ ಬೆಳೆದು ನಿಂತಿದೆ. ಸಂಗೀತ ಇತಿಹಾಸದುದ್ದಕ್ಕೂ ವಾದ್ಯಗಳು ಸಂಗೀತದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದ್ದು ಕಂಡುಬರುತ್ತದೆ. ವಾದ್ಯಗಳು ವಿವಿಧ ಗಾಯನಶೈಲಿಗಳ ಹುಟ್ಟಿಗೆ ಪ್ರೇರಣೆ ಒದಗಿಸಿವೆ.

ವಾದ್ಯ ಎಂದ ಕೊಡಲೇ ಗಮನಕ್ಕೆ ಬರುವುದು ಪುರಾಣ ಕಾಲದಿಂದಲೂ ನಾರದನೊಂದಿಗೆ ತಂಬೂರಿ, ಕೃಷ್ಣನೊಡನೆ ಕೊಳಲು, ಶಿವನೊಂದಿಗೆ ಢಮರುಗ, ನಂದಿಯೊಂದಿಗೆ ಮೃದಂಗ, ಸರಸ್ವತಿಯೊಂದಿಗೆ ವೀಣೆ– ಹೀಗೆ. ಇವುಗಳಿಲ್ಲದೇ ಈ ದೇವತೆಗಳನ್ನು ಯೋಚಿಸಲೂ ಅಸಾಧ್ಯವಾಗಿ ವಾದ್ಯಗಳಿಗೆ ಸಂಗೀತದಲ್ಲಿ ಮುಖ್ಯವಾದ ಸ್ಥಾನ ದೊರೆಕಿದೆ ಎಂದು ಹೇಳಬಹುದು.[1] 'ವಾದ್ಯ' ಪದದ ಅರ್ಥವಿಶಾಲವಾದದು. 'ವದ್' ಧಾತುವಿನಿಂದ 'ವಾದ್ಯ' ಉತ್ಪತ್ತಿಯಾಗಿದೆ. ವದ್–ಎಂದರೆ, 'ಮಾತಾಡು'. ವಾದ್ಯ ಎಂದರೇನು? ಮಾನವನಕಂಠ ಹೊರತುಪಡಿಸಿ ನಾದೋತ್ಪತ್ತಿ ಮಾಡುವ ಯಾವುದೇ ಉಪಕರಣಕ್ಕೆ ವಾದ್ಯ ಎಂದು ಕರೆಯಬಹುದು. ಮೊದಲು ಒರಟು ಒರಟಾಗಿದ್ದ ವಾದ್ಯಗಳು ಕ್ರಮೇಣ ವಿಕಸನಗೊಳ್ಳುತ್ತ ಸ್ವರ ತಾಳಗಳನ್ನು ಅಭಿವ್ಯಕ್ತಿಸಬಲ್ಲವಾದವು.[2]

ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿಗೆ ಲಯವಿದೆ. ಲಯ ಸಂಗೀತದ ಮಹತ್ವದ

ಅಂಗ. ಸಂಗೀತದಲ್ಲಿ 'ಶ್ರುತಿ ಮಾತಾ ಲಯಪಿತ' ಹೇಳುವಂತೆ ವಾದ್ಯಗಳು ಲಯ ಎನ್ನುವ ಭಾಪನ್ನು ಮೂಡಿಸಿ ವಾದನಕಾರರು ಸಂಗೀತ ಕಲಾವಿದರ ವೈವಿದ್ಯಪೂರ್ಣ ಕಲ್ಪನಾವಿಲಾಸವನ್ನು ತಮ್ಮ ವಾದನದ ಪ್ರಯೋಗಗಳ ಮೂಲಕ ಸಂಗೀತದಲ್ಲಿ ಬೆಳಗುತ್ತಾರೆ. ಹಿಂದೂಸ್ತಾನಿ ಸಂಗೀತದಲ್ಲಿ ಪುರಾತನ ಶಾಸ್ತ್ರಕಾರರು ತತ್‌ವಾದ್ಯ. ಸುಷಿರವಾದ್ಯ, ಘನವಾದ್ಯ, ಅವನದ್ಧ ವಾದ್ಯ ಎಂದು ನಾಲ್ಕು ಪ್ರಕಾರಗಳಲ್ಲಿ ವಿಭಾಗಿಸಿದ್ದಾರೆ; ವಾದನ ಎಂಬ ವಿಷಯ ಬಂದರೆ ವಾದನಕ್ಕೆ ವಾದ್ಯವೇ ಮೂಲ.

ತತ್ ವಾದ್ಯ: ತತ್ ವಾದ್ಯಗಳೆಂದರೆ 'ತಂತಿ ವಾದ್ಯಗಳು' ಎಂದರ್ಥ ಇದರಲ್ಲಿ ಎರಡು ಪ್ರಕಾರಗಳಿವೆ. 1) ಬೆರಳಿನಿಂದ ನುಡಿಸುವ ವಾದ್ಯಗಳು: ಅವುಗಳಲ್ಲಿ ವೀಣ ಸಿತಾರೆ ಸರೋದ, ತಂಬೂರಿ. 2) ಕಮಾನಿನಿಂದ ನುಡಿಸುವ ವಾದ್ಯಗಳು: ಅವುಗಳಲ್ಲಿ– ಸಾರಂಗಿ, ಇಸರಾಜ, ಪೀಟೀಲು, ದಿಲ್ರುಬಾ ಮುಂತಾದವುಗಳು. **ಸುಷಿರ ವಾದ್ಯಗಳು:** ಗಾಳಿಯಿಂದ ಊದಿ ಬಾರಿಸುವ ವಾದ್ಯಗಳನ್ನು ಸುಶಿರ ವಾದ್ಯಗಳೆಂದು ಕರೆಯುವರು. ಅವುಗಳಲ್ಲಿ: ಕೊಳಲು, ಶಹನಾಯಿ, ಹಾರ್ಮೊನಿಯಂ, ಕ್ಲಾರಿಯೋನೆಟ್. **ಅವನದ್ಧ ವಾದ್ಯ:** ಲೋಹದ ಬಾಯಿಗೆ ಚರ್ಮದ ಹೊದಿಕೆಯನ್ನು ಹಾಕಿ ನುಡಿಸುವ ವಾದ್ಯಗಳು. ಇಂಥವುಗಳಲ್ಲಿ: ತಬಲಾ, ಮೃದಂಗ, ಡೋಲಕ, ಖಂಜಿರ, ಢಮರು, ನಗಾರಿ, ಡೊಳ್ಳು. **ಘನವಾದ್ಯ:** ವಾದ್ಯಗಳಿಗೆ ಆಘಾತ ಕೊಟ್ಟು ನುಡಿಸುವ ವಾದ್ಯಗಳು. ಇವುಗಳಲ್ಲಿ ಜಲತರಂಗ, ಮಂಜರಿ, ಕರತಾಲ, ಘಂಟಾತರಂಗ, ಝಾಂಝಾಂ ಮುಂತಾದವುಗಳು ಬರುತ್ತವೆ.

*****

ವಾದನ ಕ್ಷೇತ್ರಕ್ಕೆ ಕಲ್ಯಾಣ ಕರ್ನಾಟಕದ ಕೊಡುಗೆ ಅಪಾರ ಹಾಗೂ ಅನನ್ಯ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸುಪ್ರಸಿದ್ಧ ಗಾಯಕರಂತೆ ಹೆಸರಾಂತ ವಾದನಕಾರರಿಗೆ ಕಲ್ಯಾಣ ಕರ್ನಾಟಕ ಕರ್ಮಭೂಮಿ. ತಬಲಾ ಕ್ಲಾರಿಯೋನೆಟ್, ಸಿತಾರ, ಬಾನ್ಸುರಿ, ಹಾರ್ಮೋನಿಯಂ ವಾದನಕಾರರು ಈ ನೆಲದಿಂದಲೇ ಸ್ಫೂರ್ತಿ ಪಡೆದು ರಾಷ್ಟ್ರೀಯ, ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಪ್ರಸಿದ್ಧ ಪಡೆದಿದ್ದಾರೆ, ಈ ಭಾಗದ ಎಲ್ಲ ಸಂಪದ್ಭರಿತ ಜಿಲ್ಲೆಗಳಲ್ಲಿ ವಾದನಕಾರರು ಸಂಗೀತಕ್ಕೆಂದೇ ಅವತರಿಸಿ ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಲೋಕವನ್ನು ನಾಡಿನಾದ್ಯಂತ ಪ್ರಜ್ವಲಿಸುವಂತೆ ಸಾಧಿಸಿದ್ದಾರೆ.

ಕಲ್ಯಾಣ ಕರ್ನಾಟಕದ ಕಲಾವಿದರಿಗೆ ಮುಖ್ಯ ಭೂಮಿಕೆಯಾಗಿ ಆಕಾಶವಾಣಿ, ದೂರದರ್ಶನದಂಥ ಮಾಧ್ಯಮಗಳು ಪೂರಕವಾದ ವಾತಾವರಣವನ್ನು ನಿರ್ಮಿಸಿದಂಥವುಗಳು. ಈ ಭಾಗದ ಹಿರಿಯ ಕಲಾವಿದರಾದ ಉಭಯ ಕಲಾ ಭೂಷಣರಾದ ಪೂಜ್ಯ ಪಂಚಾಕ್ಷರಿ ಗವಾಯಿಗಳು, ಪೂಜ್ಯ ಪುಟ್ಟರಾಜ ಗವಾಯಿಗಳನ್ನು ಸ್ಮರಿಸಲೇಬೇಕು. ಅದೇರೀತಿ ಪಂಡಿತ ಕೆ.ಎಸ್. ಹಡಪದ, ನಾಡೋಜ ರಾಜೀವ್ ತಾರಾನಾಥ, ಪಂಡಿತ ನರಸಿಂಹಲು ವಡವಾಟಿ, ಪಂಡಿತ ಸಾತಲಿಂಗಪ್ಪ ದೇಸಾಯಿ ಕಲ್ಲೂರ, ಶೇಖ್ ಅಬ್ದುಲ್ಲಾ ಖಾಜಿ, ಸಿದ್ಧಣ್ಣ ಹೂಗಾರ, ಭಗವಂತಪ್ಪ ಹೂಗಾರ, ಜಡೇಶಹೂಗಾರ, ಸದಾಶಿವ ಪಾಟೀಲ, ಪಂಡಿತ ಎಂ.ಎಸ್. ಪೊಲೀಸ್ ಪಾಟೀಲ, ಜಯರಾವ ಕುಲಕರ್ಣಿ, ರಾಘವೇಂದ್ರ ಅನಂತರಾವ್ ಕುಲಕರ್ಣಿ, ರವೀಂದ್ರ ಕುಲಕರ್ಣಿ ನಿಖಿಲ್ ಕೋಲ್ಹಾರಕರ, ಗೋಪಾಲರಾವ್ ಗುಡಿಬಂಡೆ, ವಿಜಯ ವಿಠ್ಠಲ ಅವದಾನಿ, ಭೀಮಾಶಂಕರಬಿದನೂರ, ಜಗದೀಶ ಹೂಗಾರ ಹೀಗೆ ಅನೇಕರು ವಾದನ ಕ್ಷೇತ್ರದಲ್ಲಿ

ತಮ್ಮನ್ನು ತಾವು ತೊಡಗಿಸಿಕೊಂಡು ಕಲ್ಯಾಣ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ಹಿರಿಯ ತಲೆಮಾರಿನ ಕಲಾವಿದರ ಸಾಧನೆಯನ್ನು ಮನಗಂಡು ಇಂದು ಹಲವಾರು ವಾದನಕಾರರು ಇವರು ನಡೆದ ಸಾಧಿಸಿದ ಸಾಧನೆಯನ್ನೇ ಸ್ಫೂರ್ತಿಯಾಗಿಸಿಕೊಂಡು ಮುನ್ನಡೆಯುತ್ತಿರುವುದು ಸಂಗೀತ ಕ್ಷೇತ್ರಕ್ಕೆ ದೊಡ್ಡ ಕೊಡುಗೆಯೆಂದೇ ಹೇಳಬಹುದು. ಕೆ.ಎಸ್. ಹಡಪದರಂತಹ ಶ್ರೇಷ್ಠ ತಬಲಾ ಕಲಾವಿದ ಪಂಡಿತ ಸಿದ್ಧರಾಮ ಜಂಬಲದಿನ್ನಿ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ, ಪ್ರಭಾಅತ್ರೆ, ಡಿ.ಆರ್. ಪರ್ವತಿಕರಂತಹ ಮಹಾನ್ ಗಾಯಕರಿಗೆ ತಬಲಾ ಸಾಥ್ ನೀಡುವ ಮೂಲಕ ಈ ಭಾಗದ ಸಂಗೀತದ ಬೆಳವಣಿಗೆಯನ್ನು ಇಮ್ಮಡಿಗೊಳಿಸಿದರು. ಅಂತೆಯೇ ಖ್ಯಾತ ಸರೋದ್ ವಾದಕ ನಾಡೋಜ ರಾಜೀವ್ ತಾರಾನಾಥರು ವೃತ್ತಿಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಪ್ರವೃತ್ತಿಯಲ್ಲಿ ಸರೋದ ವಾದಕರಾಗಿ ಜಗತ್ತಿನಾದ್ಯಂತ ತಮ್ಮ ಸರೋದ್ ವಾದನದ ಕಂಪನ್ನು ಬೀರಿದವರು. ಬಾನುರಿ ವಾದಕರಾದ ಪಂಡಿತ ಶೇಖ್ ಅಬ್ದುಲ್ಲಾ ಖಾಜಿಯವರು ತಮ್ಮ ಬಾನ್ಸುರಿ ವಾದನದ ಮೂಲಕ ಸಂಗೀತ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದ್ದಾರೆ. ಇನ್ನೂ ಪಂಡಿತ ನರಸಿಂಹರು ವಡವಟಿಯವರು ಕ್ಲಾರಿಯೋನೆಟ್ ಎಂಬ ವಾದನದಿಂದ ಜಗತ್ ಪ್ರಸಿದ್ಧಿ ಪಡೆದ ಮಹಾನ್ ಸಾಧಕರು. ತಮ್ಮದೇ ಆದ ಶೋಧನೆಯಿಂದ ವಿದೇಶಿ ವಾದ್ಯಕ್ಕೆ ಭಾರತೀಯ ಸಂಸ್ಕೃತಿಯ ಹಿಂದೂಸ್ತಾನಿ ಸಂಗೀತದ ದೀಕ್ಷೆಯನ್ನು ನೀಡಿದ ಕ್ಲಾರಿಯೋನೆಟ್‌ಗೆ ಏಕಲವ್ಯ, ಇವರ ಕ್ಲಾರಿಯೋನೆಟ್ ಕೇಳುವುದು ಎಂದರೆ ಏಕಕಾಲಕ್ಕೆ ಗಾಯನ ಮತ್ತು ವಾದನ ಎರಡನ್ನು ಕೇಳಿದ ಅನುಭವಕ್ಕೆ ಕೊಂಡೊಯ್ಯುತ್ತದೆ. ಸಂಗೀತ ವಿಮರ್ಶಕರು ವಡವಾಟಿಯರ ವಾದನವನ್ನು **"ಗಾಯಕಿ ಶೈಲಿಯ ಕ್ಲಾರಿಯೋನೆಟ್"** ಎಂದು ಗುರುತಿಸುತ್ತಾರೆ. ಹೀಗೆಯೇ ತಬಲಾ ವಾದನದಲ್ಲಿಯೂ ಸಾತಲಿಂಗಪ್ಪ ದೇಸಾಯಿ ಕಲ್ಲೂರ, ಸದಾಶಿವ ಪಾಟೀಲ, ಪ್ರೊ. ಎಂ.ಎಸ್. ಪೊಲೀಸ್ ಪಾಟೀಲ, ಜಡೇಶ ಹೂಗಾರರಂತಹ ಇನ್ನೂ ಮಹಾನ್ ಸಾಧಕರು ರಾಷ್ಟ್ರ–ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ್ದು ಕಲ್ಯಾಣ ಕರ್ನಾಟಕದ ಸಾಂಸ್ಕೃತಿಕ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಮುಂಬರುವ ಯುವ ಸಂಗೀತಗಾರರಿಗೆ ಈ ಬೆಳವಣಿಗೆ ಹೆಚ್ಚು ಅನುಕರಣೀಯವಾಗುತ್ತದೆ.

ಅಡಿಟಿಪ್ಪಣಿ

1. ಎಸ್. ಬಾಲಿ, ಸುಗಮಸಂಗೀತದ ಹಾಡು ಮೂಡುವ ಹಾದಿ, ಪು.ಸು.:108
2. ಸದಾನಂದ ಕನವಳ್ಳಿ ವಾದ್ಯಾಲಾಪ ಪು.ಸಂ.7.

ಪರಾಮರ್ಶನ ಗ್ರಂಥಗಳು:

1) ಪುರಂದರೆ ಎ.ಎಂ, 1974, ಭಾರತೀಯ ವಾದ್ಯಗಳು, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2) ಸದಾನಂದ ಕನವಳ್ಳಿ, 2007, ವಾದ್ಯಾಲಾಪ, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು.
3) ಸೋಮಶೇಖರ ಪಾಟೀಲ್ ಬೇನೂರ, 2009, ತಬಲಾ ವಾದನ ತರಂಗ, ಶ್ರೀ ಗುರು ಪಂಚಾಕ್ಷರಿ ಸಂಗೀತ ಮಹಾವಿದ್ಯಾಲಯ, ಸಿಂಧನೂರು.
4) ಉಮಾ ಅನಂತ, 2013, ವಾದ್ಯ ವೈವಿಧ್ಯ, ವಿಕಾಸ ಪ್ರಕಾಶನ ಬೆಂಗಳೂರು.

❖❖❖

ಆಧುನಿಕ ಮಹಾಕಾವ್ಯಗಳು: ವಸ್ತು–ವಿನ್ಯಾಸದ ವೈಶಿಷ್ಟ್ಯ

ಡಾ. ಬಸವರಾಜು ಕೆ.
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿರಾಜಪೇಟೆ

ಕನ್ನಡ ಭಾಷೆ ಮತ್ತು ಸಾಹಿತ್ಯವು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿದೆ. 19ನೇ ಶತಮಾನದ ನಂತರದ ಕನ್ನಡ ಸಾಹಿತ್ಯವು ಇಂಗ್ಲಿಷ್ ಭಾಷೆ, ಪಾಶ್ಚಾತ್ಯ ಭಾಷೆ ಮತ್ತು ಸಾಹಿತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ವಿಶಿಷ್ಟವಾಗಿ ಬೆಳೆಯಿತು. ಈ ಕಾಲಘಟ್ಟದ ಸಾಹಿತ್ಯವೇ ಆಧುನಿಕ ಸಾಹಿತ್ಯವಾಗಿದೆ. ಈ ಕಾಲಘಟ್ಟದಲ್ಲಿ ರಚನೆಯಾದ ಮಹಾಕಾವ್ಯಗಳೇ ಆಧುನಿಕ ಮಹಾಕಾವ್ಯಗಳಾಗಿವೆ. ಹೊಸಗನ್ನಡದ ಮಹಾಕಾವ್ಯಗಳಿಗೆ ರಾಮಾಯಣ, ಮಹಾಭಾರತದ ವಿಷಯಗಳನ್ನು ವಿಭಿನ್ನವಾಗಿ ಕಟ್ಟಿಕೊಡುವುದು ಹಾಗೂ ಬುದ್ಧ, ಬಸವರಂತಹ ಮಹಾನ್ ಪುರುಷರ ವಿಷಯಗಳು ಪ್ರೇರಣೆಯಾಗಿದೆ. ಕಾವ್ಯದ ರಚನಾ ವಿನ್ಯಾಸದಲ್ಲಿ ಛಂದಸ್ಸು, ಅಲಂಕಾರ, ವ್ಯಾಕರಣ, ರಸಗಳು, ವರ್ಣನೆಗಳು ಹಾಗೂ ಪ್ರಾರ್ಥನೆ, ಪೂರ್ವಕವಿ ನೆನಕೆ, ಕಾವ್ಯ ಪ್ರವೇಶ, ಬೆಳವಣಿಗೆ, ಅಂತ್ಯ ಇತ್ಯಾದಿಗಳು ಆಧುನಿಕ ಮಹಾಕಾವ್ಯಗಳಲ್ಲಿ ಕೂಡ ಕಂಡುಬರುತ್ತವೆ.

ಇಲ್ಲಿ ಆಧುನಿಕವೆಂದರೆ 20ನೇ ಶತಮಾನದ ಆದಿಭಾಗದಿಂದ ಇಂದಿನವರೆಗಿನ ಕಾಲವೆಂದು ಗ್ರಹಿಸಲಾಗಿದೆ.

ಆಧುನಿಕ ಸಾಹಿತ್ಯ–ಮಹಾಕಾವ್ಯ

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಸಮೃದ್ಧವಾದುದು ಜೊತೆಗೆ ಪ್ರಾಚೀನತೆಯನ್ನು ಹೊಂದಿರುವಂಥದ್ದು. ಸದ್ಯದ ಮಟ್ಟಿಗೆ ಮೂರನೇ ಶತಮಾನದಿಂದ ಸ್ಪಷ್ಟವಾಗಿ ಅದರ ಇತಿಹಾಸ ಗೋಚರವಾಗುತ್ತದೆ.[1] ಅಲ್ಲಿಂದ ಮೊದಲುಗೊಂಡು ಇಲ್ಲಿಯವರೆಗೆ ಕನ್ನಡ ಸದಾ ಬದಲಾಗುತ್ತಾ, ಹಳೆಯದನ್ನು ತನ್ನೊಳಗೆ ಅಡಗಿಸಿಕೊಂಡು ಹೊಸದನ್ನು ಅಷ್ಟೇ ಪ್ರೀತಿಯಿಂದ ಸ್ವೀಕರಿಸುತ್ತಾ ಬೆಳವಣಿಗೆ ಹೊಂದುತ್ತಾ ಸಾಗಿದೆ. ಆದ್ದರಿಂದಲೇ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹೀಗೆ ನಾಲ್ಕು ಭಾಷಾ ಅವಸ್ಥಾಂತರಗಳನ್ನು ಇದರ ಬೆಳವಣಿಗೆಯಲ್ಲಿ ಗುರುತಿಸುತ್ತೇವೆ.

12ರಿಂದ ಸುಮಾರು 19ನೇ ಶತಮಾನದವರೆಗೆ ಸಂಸ್ಕೃತ, ತಮಿಳು, ತೆಲುಗು ಹೀಗೆ ವಿವಿಧ ಭಾಷೆಗಳ ಪ್ರಭಾವದಿಂದ ಕನ್ನಡ ಸಾಹಿತ್ಯ ಬೆಳವಣಿಗೆಯಾಗಿದೆ. ಭಾಷಿಕ ದೃಷ್ಟಿಯಿಂದ ಇದನ್ನು ಮಧ್ಯಕಾಲೀನ ಕನ್ನಡವೆಂದು ಕರೆಯಲಾಗಿದೆ. ಇಲ್ಲಿ ಹಳಗನ್ನಡ ಭಾಷೆಯ ಸರಳತೆಯಿದೆ, ದೇಸೀತನಕ್ಕೆ ಹೆಚ್ಚು ಒತ್ತಿದೆ, ತ್ರಿಪದಿ, ಸಾಂಗತ್ಯ ರಚನೆ ಇತ್ಯಾದಿಗಳ ಬಳಕೆಯಾಗಿದೆ. 19ರ ನಂತರ 20ನೇ ಶತಮಾನದಿಂದ ಕನ್ನಡ ಭಾಷೆ ಮತ್ತು ಸಾಹಿತ್ಯ ಇಂಗ್ಲಿಷಿನ ಪ್ರಭಾವಕ್ಕೆ ಒಳಗಾಗಿದೆ. ಕೇವಲ ಇಂಗ್ಲಿಷ್ ಮಾತ್ರವಲ್ಲ ಪಾಶ್ಚಾತ್ಯ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಭಾವಕ್ಕೂ ಕನ್ನಡ ಭಾಷೆ ಮತ್ತು ಸಾಹಿತ್ಯ ಒಳಗಾಗಿದೆ. ಈ ಕಾಲಘಟ್ಟದ ಸಾಹಿತ್ಯವನ್ನು ಆಧುನಿಕ ಸಾಹಿತ್ಯ ಎಂದು ಕರೆಯಲಾಗಿದೆ.

ಆಧುನಿಕ ಸಾಹಿತ್ಯ ಎಂದಾಗ ಹೊಸ ಸಾಹಿತ್ಯ ಎಂದರ್ಥವಾಗುತ್ತದೆ. ಹಾಗೆಂದಾಗ ಎಲ್ಲವೂ ಹೊಸದೇನಲ್ಲ. ಭಾಷೆ, ವಸ್ತು, ಕೆಲವೊಮ್ಮೆ ಅಭಿವ್ಯಕ್ತಿ ಮಾಧ್ಯಮ ಹಳೆಯದೇ ಇದೆ. ಹಳೆಯದೆನ್ನೆಲ್ಲ ಎಸೆದು ಹೊಸದನ್ನು ತಂದ ವಸ್ತುವಲ್ಲವಿದು. ಹಳೆಯದನ್ನೇ ದುರಸ್ತಿ ಮಾಡಿಸಿ ಇಟ್ಟುಕೊಂಡಿರುವುದು. ಹಾಗೇ ನೋಡಿದಾಗ ಆಧುನಿಕ ಎನ್ನುವುದು ಹೆಚ್ಚಾಗಿ ಅಭಿವ್ಯಕ್ತಿಕ್ರಮದಲ್ಲಿದೆ, ಧೋರಣೆಯಲ್ಲಿದೆ, ಆಯ್ಕೆ ಮಾಡಿಕೊಂಡ ವಸ್ತುವಿನಲ್ಲಿದೆ. ಆ ಹಿನ್ನೆಲೆಯಲ್ಲಿ ಹೇಳುವುದಾದರೆ ಪಾಶ್ಚಾತ್ಯ ಚಿಂತನೆ, ಇಂಗ್ಲಿಷ್ ಪ್ರಭಾವ, ಬದಲಾದ ಪರಿಸ್ಥಿತಿಯೊಂದಿಗೆ 19ನೇ ಶತಮಾನದ ಅಂತ್ಯದ ನಂತರ ಬಂದಿರುವ ಸಾಹಿತ್ಯಕ್ಕೆ ಇಲ್ಲಿ ಒಂದು ಹೆಸರಾಗಿ 'ಆಧುನಿಕ ಸಾಹಿತ್ಯ' ಎಂಬ ಪದವನ್ನು ಬಳಸಲಾಗಿದೆ. "ಈಗ 19ನೆಯ ಶತಮಾನದಲ್ಲಿ ಇಂಗ್ಲಿಷರ ಆಳ್ವಿಕೆಯಲ್ಲಿ ಪಾಶ್ಚಾತ್ಯರ ನಾಗರಿಕತೆ, ಐಹಿಕ ಸಾಧನ ಸಂಪತ್ತು, ರಾಜ್ಯಶಾಸ್ತ್ರ, ಕಲೆ, ಸಾಹಿತ್ಯ, ಮತ ಮುಂತಾದವುವುಗಳಿಗೆ ಸಂಬಂಧಪಟ್ಟ ನವೀನ ಜ್ಞಾನದ ಸೆಳೆತಕ್ಕೆ ಮಿಕ್ಕ ದೇಶಭಾಷೆಗಳಂತೆಯೇ ಕನ್ನಡವೂ ಸಿಕ್ಕಿ ಒಂದು ಹೊಸ ದೇಶಾಬಿಮಾನವನ್ನೂ ಹೊಸ ರುಚಿಯನ್ನು ಕಲಿತು ಹೊಸ ರೀತಿಗಳಲ್ಲಿ ಕಾವ್ಯ ಸೃಷ್ಟಿಯನ್ನು ಅಭ್ಯಾಸ ಮಾಡುತ್ತಿದೆ"[2] ಈ ದೃಷ್ಟಿಕೋನದ ಸಾಹಿತ್ಯವನ್ನು ಸದ್ಯದ ಸಂದರ್ಭದಲ್ಲಿ ಆಧುನಿಕ ಸಾಹಿತ್ಯವೆಂದು ಕರೆಯಲಾಗಿದೆ.

ಆಧುನಿಕ ಮಹಾಕಾವ್ಯದ ಸಂದರ್ಭದಲ್ಲಿ ಮುದ್ದಣ್ಣನೇ ನಮಗೆ ಮೊದಲನೆಯವನಾಗುತ್ತಾನೆ. ಆತನು ಮೂರು ಮಹಾಕಾವ್ಯಗಳಾದ ಶ್ರೀರಾಮಾಶ್ವಮೇಧ, ಶ್ರೀರಾಮಪಟ್ಟಾಭಿಷೇಕ, ಮತ್ತು ಅದ್ಭುತ ರಾಮಾಯಣ ಈ ಮೂರು ಕೃತಿಗಳು ರಾಮಾಯಣವನ್ನೇ ಆಧರಿಸಿ ರಚಿತವಾದ ಮಹಾಕಾವ್ಯಗಳಾಗಿವೆ. ಆದರೆ ಈ ಮೂರು ಮಹಾಕಾವ್ಯಗಳಲ್ಲಿ ಆಧುನಿಕ ಮಹಾಕಾವ್ಯದ ಹೊಸ್ತಿಲಿನಲ್ಲಿ ಮೊದಲು ನಿಲ್ಲಿಸಬೇಕಾದ ಆತನ ಕೃತಿ ಶ್ರೀರಾಮಾಶ್ವಮೇಧ. ಅದಕ್ಕೆ ಕಾರಣ ಆತ ಆ ಮಹಾಕಾವ್ಯದಲ್ಲಿ ಆಧುನಿಕ ದೃಷ್ಟಿಕೋನವನ್ನು ಹೊಂದಿದ್ದಾನೆ. ಅದುವರೆಗೆ ಇದ್ದ ಪದ್ಯ ಪ್ರಕಾರವನ್ನು ತೊರೆದು ಗದ್ಯಪ್ರಕಾರದಲ್ಲಿ ಬರೆಯುತ್ತಾನೆ. ಜನ ಸಾಮಾನ್ಯರಿಗೆ ಅರ್ಥವಾಗಬೇಕೆಂಬುದೇ ಆತನ ಮುಖ್ಯ ಉದ್ದೇಶವಾಗಿದೆ. "ಕಾವ್ಯಸೃಷ್ಟಿಗೆ ಅಗತ್ಯವಾದ ಭಾಷೆಯ ವಿಚಾರದಲ್ಲಿ ಕವಿ ತಳೆದಿರುವ ಭಾವನೆ ಸರ್ವಜನಾದರಣೀಯವಾದುದು"[3] ಜೊತೆಗೆ ಸಂಸ್ಕೃತದ ವ್ಯಾಮೋಹವನ್ನು ತೊರೆದು ಕನ್ನಡದಲ್ಲಿ ಕಾವ್ಯ ಹೇಳಬೇಕೆಂದು ಸಹೃದಯಿ ಮನೋರಮೆ ಬಯಸುವುದು ಆಧುನಿಕ ಮಹಾಕಾವ್ಯದ ವಿನ್ಯಾಸವನ್ನು ತಿಳಿಸುತ್ತದೆ. ಜೊತೆಗೆ ಮುದ್ದಣ್ಣ ಮನೋರಮೆಯ ಸಂಭಾಷಣೆ ಮಹಾಕಾವ್ಯದ ಆಧುನಿಕತೆಯ ಪ್ರಜ್ಞೆಯನ್ನು ನೀಡುತ್ತದೆ.

ಹೀಗೆ ಮುದ್ದಣ್ಣನನ್ನು ಮೊದಲು ಪರಿಗಣಿಸಿ ಆತನ ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮಾಶ್ವಮೇಧ, ಅದ್ಭುತ ರಾಮಾಯಣ, ಕುವೆಂಪುರವರ ಶ್ರೀ ರಾಮಾಯಣ ದರ್ಶನಂ, ಮಾಸ್ತಿಯವರ ಶ್ರೀರಾಮ ಪಟ್ಟಾಭಿಷೇಕ, ಪು.ತಿ.ನ.ರವರ ಶ್ರೀಹರಿಚರಿತೆ, ವಿ.ಕೃ. ಗೋಕಾಕ್‌ರ ಭಾರತ ಸಿಂಧು ರಶ್ಮಿ, ಎಸ್.ಎಸ್. ಭೂಸನೂರಮಠರವರ ಭವ್ಯಮಾನವ, ಸುಜನಾರವರ ಯುಗಸಂಧ್ಯಾ, ಸಮೇತನಹಳ್ಳಿ ರಾಮರಾಯರ ಶಾಕುಂತಲಾ, ಲತಾ ರಾಜಶೇಖರ್‌ರವರ ಬಸವದರ್ಶನ, ಬುದ್ಧದರ್ಶನ ಹೀಗೆ ಅನೇಕ ಮಹಾಕಾವ್ಯಗಳು ಆಧುನಿಕ ಸಂದರ್ಭದಲ್ಲಿಯೂ ರಚನೆಯಾಗಿ ಮಹಾಕಾವ್ಯ ಪರಂಪರೆ ಬತ್ತದಂತೆ ಇರುವುದು ಕನ್ನಡ ಸಾಹಿತ್ಯದ ವೈಶಿಷ್ಟ್ಯವಾಗಿದೆ.

ಆಧುನಿಕ ಮಹಾಕಾವ್ಯದ ವಸ್ತು

"ಮಹಾಕಾವ್ಯದ ವಸ್ತು, ಮಹಾಕವಿಗೆ ಪ್ರಾಚೀನದಿಂದ ಪ್ರಾಪ್ತವಾದದ್ದಾಗಿರುತ್ತದೆ; ಅಷ್ಟೇ ಅಲ್ಲ, ಬಹುಕಾಲ ಪರಂಪರೆಯಲ್ಲಿ ತೇಲುತ್ತಾ ಬಂದು, ಅನೇಕ ಮನಸ್ಸುಗಳಿಂದ ಒಂದು ರೀತಿಯಲ್ಲಿ ರೂಪಿತವಾಗುತ್ತದೆ. ಹೀಗೆ ಮಹಾಕಾವ್ಯದ ವಸ್ತು, ಅದನ್ನು ಬರೆಯುವವನಿಗೆ ಪರಂಪರೆಯಿಂದ ದತ್ತವಾದುದು ಎನ್ನುವುದು ಬಹುಮುಖ್ಯವಾದ ಅಂಶ"[4] ಇದು ಒಂದು ಮುಖವಾದರೆ ಮಹಾಕವಿ ತನ್ನ ಪ್ರತಿಭೆಯಿಂದ, ದರ್ಶನದಿಂದ ಹೊಸಕಥೆಯನ್ನು ಸೃಷ್ಟಿಸಿ ಮಹಾಕಾವ್ಯ ಮಾಡಬಲ್ಲನು. ಆದ್ದರಿಂದ ಮಹಾಕಾವ್ಯಕ್ಕೆ ವಸ್ತುವಿನ ಆಯ್ಕೆಗೆ ಸಂಬಂಧಿಸಿದಂತೆ ಇಂತಹದ್ದೇ ಎಂಬ ನಿರ್ದಿಷ್ಟ ನಿಯಮಗಳೇನೂ ಇಲ್ಲ. ಆದರೆ ಉದಾತ್ತ ಆದರ್ಶವೊಂದು ಕಾವ್ಯದಲ್ಲಿ ವ್ಯಕ್ತವಾಗಿರಬೇಕು. ಹಿಂದಿನ ಲಾಕ್ಷಣಿಕರ ವಿಚಾರಗಳನ್ನು ಅವಲೋಕಿಸಿದಾಗ ಮಹಾಕಾವ್ಯವನ್ನು ಅವರು ಪರಿಭಾವಿಸಿರುವ ನೆಲೆ ಭಿನ್ನವಾದುದು. ಅಷ್ಟಾದಶ ವರ್ಣನೆಗಳು, ನವರಸಗಳು ಇದ್ದರೆ ಅದಕ್ಕೆ ಮಹಾಕಾವ್ಯದ ಸ್ಥಾನವನ್ನು ನೀಡುತ್ತಿದ್ದರು. ವಸ್ತುವನ್ನು ಆಯ್ಕೆ ಮಾಡಿಕೊಳ್ಳುವಾಗ ಮುಖ್ಯವಾಗಿ ಕಥಾವಸ್ತುವಿನ ನಾಯಕ ಸನ್ಮಾರ್ಗಿಯಾಗಿರಬೇಕು. ಮಹಾಕಾವ್ಯದ ವಸ್ತುವಿನ ಆಯ್ಕೆಯಲ್ಲಿ ಇದು ಪ್ರಮುಖವಾದ ಲಕ್ಷಣ. ಆಯ್ಕೆ ಮಾಡಿಕೊಂಡ ವಸ್ತುವಿನ ಕಥಾನಾಯಕ ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು. ಯಾವುದೇ ಕಾರಣಕ್ಕೂ ಆ ಮಾರ್ಗವನ್ನು ಬಿಟ್ಟು ಹೋಗಬಾರದು. ರಾಮಾಯಣದ ರಾಮ, ಮಹಾಭಾರತದ ಧರ್ಮರಾಯ ಇವುಗಳು ಅಂತಹ ಪಾತ್ರಗಳು.

ನಾಯಕನು ಧರ್ಮವಿಜಯಿಯಾಗಿರಬೇಕು. ನಾಯಕ ಧರ್ಮ ಸ್ಥಾಪನೆಯನ್ನು ಮಾಡಬೇಕು. ಒಳಿತು ಕೆಡುಕುಗಳ ನಡುವೆ ಹೋರಾಟ ನಡೆದಾಗ ಅಲ್ಲಿ ಒಳಿತೇ ಗೆಲ್ಲಬೇಕು; ಧರ್ಮಕ್ಕೆ ಜಯ ಸಲ್ಲಬೇಕು. "ನಾಯಕೋ ಧರ್ಮವಿಜಯೀ ಸತಾಂ ಪಂಥಾನಮಾಶ್ರಿತಃ"[5] ಎಂದು ವಿಷ್ಣುಧರ್ಮೋತ್ತರ ಮಹಾಪುರಾಣದಲ್ಲಿ ಹೇಳಿದೆ. ಪಾಂಡವರಿಗಿಂತ ಕೌರವರಲ್ಲಿ ಬಲ ಹೆಚ್ಚಿದ್ದರೂ ಜಯ ಪಾಂಡವರಿಗೆ; ಕಾರಣ ಅದು ಧರ್ಮಕ್ಕೆ ಸಂದ ಜಯ. ಇದು ಮಹಾಕಾವ್ಯದ ಮೂಲ ಉದ್ದೇಶವೂ ಕೂಡ.

ಕಥಾ ವಸ್ತುವನ್ನು ಆಯ್ಕೆ ಮಾಡಿಕೊಳ್ಳುವಾಗ ನಾಯಕನ ವಿರುದ್ಧವಾದ ಪ್ರತಿನಾಯಕ ಜಗದ್ವಿಜಯಿಯಾಗಿರಬೇಕು. ಪ್ರತಿನಾಯಕ ಆತ ಸಾಮಾನ್ಯನಲ್ಲ ಆತನೂ ಅಸಾಧ್ಯನಾಗಿರಬೇಕು. ಆತನಲ್ಲಿ ವೀರ ಪರಾಕ್ರಮ ಮಡುಗಟ್ಟಿರಬೇಕು. ನಾಯಕನನ್ನು ಬಿಟ್ಟರೆ ಪ್ರತಿನಾಯಕನು ಆ ವಲಯದಲ್ಲಿ ಹೆಸರುವಾಸಿಯಾದ ವ್ಯಕ್ತಿಯಾಗಿರಬೇಕು. "ತಥಾ ಚ ಲೋಕವಿಜಯೀ ವಿಜ್ಞೇಯಃ ಪ್ರತಿನಾಯಕ:"[6] ಎಂದು ವಿಷ್ಣುಧರ್ಮೋತ್ತರ ಮಹಾಪುರಾಣ ಹೇಳುತ್ತದೆ. ರಾವಣನಾಗಬಹುದು ದುರ್ಯೋಧನನಾಗಬಹುದು ಇವರೆಲ್ಲರೂ ಅಸಮಬಲಶೂರರೇ ಆಗಿದ್ದಾರೆ. ಅಂತಹ ಪಾತ್ರಗಳನ್ನೇ ಮಹಾಕಾವ್ಯ ಸೃಷ್ಟಿಸಬೇಕು.

ಆದರೆ ಆಧುನಿಕ ಕವಿಗಳು ಮಹಾಕಾವ್ಯ ರಚಿಸುವಾಗ ವೈವಿಧ್ಯಮಯವಾದ ವಸ್ತುವಿನ ಆಯ್ಕೆಗೆ ಒತ್ತು ಕೊಟ್ಟಿರುವುದನ್ನು ಕಾಣುತ್ತೇವೆ. ಪ್ರಾಚೀನ ಮಹಾಕಾವ್ಯಗಳಲ್ಲಿ ನಾಯಕ ಪ್ರತಿನಾಯಕ ಇರಲೇಬೇಕು. ಹಾಗಿದ್ದಾಗಲೇ ಅದು ಮಹಾಕಾವ್ಯ. ಆದರೆ ಆಧುನಿಕವಾಗಿ ಇದನ್ನು ಮೀರಲಾಗಿದೆ. ನಾಯಕ ಮಾತ್ರ ಇರುವ ಮಹಾಕಾವ್ಯಗಳಿವೆ. ಲತಾ ರಾಜಶೇಖರ್‌ರವರ ಬಸವದರ್ಶನದಲ್ಲಿ ಬಸವಣ್ಣನೇ ನಾಯಕ. ಆತನಿಗೆ

ಪ್ರತಿನಾಯಕರಿಲ್ಲ. ಇದು ಮಹಾಕಾವ್ಯವೇ. ಯುಗಸಂಧ್ಯದಲ್ಲಿ ನಾಯಕನೇ ಇಲ್ಲ. ಧರ್ಮರಾಯನನ್ನು ಒಂದು ನೆಲೆಯಲ್ಲಿ ಮತ್ತೊಂದು ನೆಲೆಯಲ್ಲಿ ಶ್ರೀಕೃಷ್ಣನನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ ಆಧುನಿಕ ಮಹಾಕಾವ್ಯಗಳು ಪ್ರಾಚೀನ ಮಹಾಕಾವ್ಯಗಳು ವಸ್ತುವಿಷಯ ಆಯ್ಕೆ ಕುರಿತ ಚಿಂತನೆಯನ್ನು ಮೀರಿವೆ. ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆಯನ್ನು ಕಾಣುತ್ತೇವೆ. ಆಧುನಿಕ ಮಹಾಕಾವ್ಯಗಳ ವಸ್ತುವಿಷಯವನ್ನು ಮುಖ್ಯವಾಗಿ ನಾಲ್ಕು ನೆಲೆಯಲ್ಲಿ ನೋಡಬಹುದು.

1. ಭಾರತದ ಪ್ರಾಚೀನ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣ ಆಧಾರಿತ ಮಹಾಕಾವ್ಯಗಳು
2. ಪುರಾಣಾಧಾರಿತ ಇತರೆ ಮಹಾಕಾವ್ಯಗಳು
3. ಚಾರಿತ್ರಿಕ ಮಹಾನಾಯಕರ ಮಹಾಕಾವ್ಯಗಳು
4. ಸಂಕೀರ್ಣ ಮಹಾಕಾವ್ಯಗಳು

ಆಧುನಿಕ ಮಹಾಕಾವ್ಯದ ಮೂಲ ಪುರುಷನಾದ ಮುದ್ದಣ್ಣನು ತನ್ನ ಮಹಾಕಾವ್ಯಗಳ ರಚನೆಗೆ ರಾಮಾಯಣವನ್ನು ಆಧರಿಸಿದ್ದಾನೆ. ಆದರೆ ಹೇಳುವ ಮಾದರಿಯಲ್ಲಿ ಹೊಸತನವಿದೆ. ಮಾಸ್ತಿಯವರು ಕೂಡ ಶ್ರೀರಾಮಪಟ್ಟಾಭಿಷೇಕವನ್ನು ಮುಖ್ಯವಾಗಿಟ್ಟುಕೊಂಡು ಸಿಂಹಾವಲೋಕನ ಕ್ರಮದಲ್ಲಿ ರಾಮಾಯಣವನ್ನು ಅವಲೋಕಿಸಿ ಶ್ರೀರಾಮ ಪಟ್ಟಾಭಿಷೇಕ ಮಹಾಕಾವ್ಯವನ್ನು ಬರೆದಿದ್ದಾರೆ. ಇನ್ನು ಇಡೀ ರಾಮಾಯಣವನ್ನು ಹೊಸ ದರ್ಶನದಲ್ಲಿ ಸೃಜಿಸಿದ ಕುವೆಂಪು ಅವರು ಆಧುನಿಕ ವಾಲ್ಮೀಕಿ ಎನಿಸಿ ಶ್ರೀರಾಮಾಯಣದರ್ಶನಂ ಕೃತಿಯನ್ನು ರಚಿಸಿರುವುದು ವಾಲ್ಮೀಕಿ ರಾಮಾಯಣ ಆಧರಿಸಿಯೇ ಆಗಿದೆ. ವೀರಪ್ಪ ಮೊಯಿಲಿಯವರ ಶ್ರೀ ರಾಮಾಯಣ ಮಹಾನ್ವೇಷಣಂ ಈ ವರ್ಗಕ್ಕೆ ಸೇರುವ ಕೃತಿಯಾಗಿದೆ.

ಪುರಾಣವನ್ನು ಆಧರಿಸಿ ಬರೆದ ಮಹಾಕಾವ್ಯಗಳಲ್ಲಿ ಆಧುನಿಕ ಸಂದರ್ಭದಲ್ಲಿ ನಮಗೆ ಮೊದಲಿಗೆ ನೆನಪಾಗುವುದು ಪು.ತಿ.ನರಸಿಂಹಾಚಾರ್ ಅವರ ಶ್ರೀಹರಿಚರಿತ. ಶ್ರೀಕೃಷ್ಣನನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಪ್ರಕೃತಿ ವ್ಯಾಪಾರದಲ್ಲಿ ಆತನ ಪ್ರಧಾನ ಪಾತ್ರವನ್ನು ಮತ್ತು ಲೀಲೆಗಳನ್ನು ಕುರಿತು ಕಾವ್ಯರಚಿಸಿದ್ದಾರೆ. ಅಂತೆಯೇ ಲತಾ ರಾಜಶೇಖರ್ ಅವರು ಮಹಾವೀರನನ್ನು ಕುರಿತು ಮಹಾವೀರ ದರ್ಶನ, ರಾಮನನ್ನು ಕುರಿತು ರಾಮದರ್ಶನ ಮಹಾಕಾವ್ಯಗಳನ್ನು ರಚಿಸಿದ್ದಾರೆ. ಹನುಮನನ್ನು ಕುರಿತು ಹನುಮ ದರ್ಶನ ರಚನೆಯ ಹಂತದಲ್ಲಿದೆ.

ಚಾರಿತ್ರಿಕ ಮಹಾಪುರುಷರನ್ನು ಆಧರಿಸಿ ಮಹಾಕಾವ್ಯಗಳು ರಚನೆಯಾಗಿವೆ. ಇವರಲ್ಲಿ ಧಾರ್ಮಿಕ ಪುರುಷರ ಕಥೆಗೆ ಒತ್ತು ಕೊಡಲಾಗಿದೆ. ಲತಾ ರಾಜಶೇಖರ್ ಅವರು ಗೌತಮ ಬುದ್ಧನ ಜೀವನವನ್ನು ಆಧರಿಸಿ ಬುದ್ಧ ದರ್ಶನ, ಬಸವನ ಬದುಕನ್ನು ಆಧರಿಸಿ ಬಸವದರ್ಶನ, ಯೇಸುವಿನ ಬದುಕನ್ನು ಆಧರಿಸಿ ಯೇಸುದರ್ಶನ ಮಹಾಕಾವ್ಯಗಳನ್ನು ರಚಿಸಿದ್ದಾರೆ.

'ಭಾರತಸಿಂಧುರಶ್ಮಿ' ಸಂಕೀರ್ಣ ವ್ಯವಸ್ಥೆಯ ಮಹಾಕಾವ್ಯಕ್ಕೆ ಉದಾಹರಣೆಯಾಗಿದೆ ವಿಶ್ವಾಮಿತ್ರರನ್ನು ನಾಯಕನನ್ನಾಗಿ ಮಾಡಿಕೊಂಡು ಋಗ್ವೇದ ಕಾಲದ ಜನಜೀವನವನ್ನು ಈ ಕಾವ್ಯದಲ್ಲಿ ವಿ.ಕೃ. ಗೋಕಾಕರು ಹೇಳಿದ್ದಾರೆ.

ಆಧುನಿಕ ಮಹಾಕಾವ್ಯದ ವಿನ್ಯಾಸ

ಒಂದು ಮಹಾಕಾವ್ಯ ಎಂದಾಗ ಅದರ ರೀತಿಯನ್ನು ಒಳಗೊಂಡಂತೆ ಅದರ ಒಟ್ಟು ವಿನ್ಯಾಸವನ್ನು ಕುರಿತು ಶಾಸ್ತ್ರಜ್ಞರು ಚರ್ಚಿಸಿದ್ದಾರೆ. ಛಂದಸ್ಸು, ಅಲಂಕಾರ, ವ್ಯಾಕರಣ ಮತ್ತು ಕಾವ್ಯ ಆದಿ, ಬೆಳವಣಿಗೆ ಮತ್ತು ಅಂತ್ಯಕ್ಕೆ ಸಂಬಂಧಿಸಿದಂತೆ ಇತ್ಯಾದಿ ವಿಷಯಗಳಲ್ಲಿ ಮಹಾಕಾವ್ಯಕ್ಕೆ ಅದರದೇ ಆದ ನಿರ್ದಿಷ್ಟತೆಯನ್ನು ತಿಳಿಸಿದ್ದಾರೆ. ಪ್ರಾಚೀನ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಚಂಪೂಪ್ರಕಾರದಲ್ಲಿಯೇ ಕಾವ್ಯಗಳೆಲ್ಲವೂ ರಚನೆಯಾಗಿವೆ. ಜೊತೆಗೆ ಛಂದಸ್ಸಿನ ಆಯ್ಕೆಯಲ್ಲಿ ಮಾರ್ಗಕ್ಕೆ ಒತ್ತುಕೊಟ್ಟಿದ್ದರು.

ಈ ಮೇಲೆ ಹೇಳಿದ ಅಂಶಗಳು ಒಟ್ಟು ಮಹಾಕಾವ್ಯದ ವಿನ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಆಧುನಿಕವಾಗಿಯೂ ಇವೆಲ್ಲವೂ ಇರಬೇಕಾದವೇ. ಭಾಷೆಯನ್ನು ಬಳಸುವಾಗ ಪದಪ್ರಯೋಗ, ಅರ್ಥ ದೋಷ ಮುಕ್ತವಾಗಿರಬೇಕು. ಅಪಾರ್ಥಗಳನ್ನು ನೀಡಬಾರದು. ಗ್ರಾಮ್ಯ ಬಳಸಬಾರದೆಂಬುದನ್ನು ಇಂದು ಮೀರಲಾಗಿದೆ. ಗ್ರಾಮ್ಯ ಪದವೂ ಮಹತ್ವವೆನಿಸಿ ಪ್ರಯೋಗಿಸಲ್ಪಡುತ್ತಿದೆ. ನಾನಾ ವಿಧವಾದ ಕಲೆಗಳನ್ನು ಪ್ರದರ್ಶನ ಮಾಡಬೇಕು, ನವರಸಗಳಿರಬೇಕು, ಅಲಂಕಾರಗಳಿರಬೇಕು ಇಂಬಿತ್ಯಾದಿ ನಿಯಮಗಳನ್ನು ಆಧುನಿಕ ಮಹಾಕವಿಗಳು ಮೀರಿದ್ದಾರೆ. ಉದ್ದೇಶಪೂರ್ವಕವಾಗಿ ಇವುಗಳನ್ನು ತರಲೇಬೇಕೆಂದು ಪ್ರಯತ್ನಿಸುವುದಿಲ್ಲ. ಸಾಂದರ್ಭಿಕವಾಗಿ ಬಂದಿರಬಹುದು.

ಸಂಸ್ಕೃತಪದಗಳು ಇದ್ದರೂ ಸಾಮಾನ್ಯರಿಗೆ ಅರ್ಥವಾಗುವ ಸರಳ ಭಾಷೆ, ಹಿತಮಿತ ಅಲಂಕಾರಗಳು, ರಸಗಳು, ವರ್ಣನೆಗಳು, ಸರಳ ಛಂದಸ್ಸು ಇವುಗಳನ್ನು ಆಧುನಿಕ ಮಹಾಕಾವ್ಯಗಳಲ್ಲಿ ಕಾಣುತ್ತೇವೆ. ಅಂತೆಯೇ ಪ್ರಾರ್ಥನೆ, ಪೂರ್ವಕವಿ ನೆನಕೆ, ಕಾವ್ಯಪ್ರವೇಶ, ಬೆಳವಣಿಗೆ, ಅಂತ್ಯ ಇತ್ಯಾದಿಗಳು ಆಧುನಿಕ ಮಹಾಕಾವ್ಯಗಳಲ್ಲಿಯೂ ಕಂಡುಬರುತ್ತದೆ.

ಪ್ರಾಚೀನ ಕವಿಗಳು ತಮ್ಮ ಕಾವ್ಯಗಳನ್ನು ಪ್ರರಂಭಿಸುವ ಮೊದಲು ಪ್ರಾರ್ಥನಾ ಪದ್ಯಗಳನ್ನು ಹೇಳುತ್ತಿದ್ದರು. ಸಂಸ್ಕೃತ ವೇದ ಸಾಹಿತ್ಯ, ರಾಮಾಯಣ ಮಹಾಭಾರತಾಧಾರಿತ ವೈದಿಕ ನೆಲೆಯ ಕಾವ್ಯಗಳಲ್ಲಿ ಸರಸ್ವತಿ, ಬ್ರಹ್ಮ, ವಿಷ್ಣು ಮೊದಲಾದವರನ್ನು ಪ್ರಾರ್ಥಿಸಿರುವ ಪದ್ಯಗಳನ್ನು ಕಾಣುತ್ತೇವೆ. ದಂಡಿಯು ತನ್ನ ಕಾವ್ಯಾದರ್ಶದಲ್ಲಿ "ಆಶೀರ್ನಮಸ್ಕ್ರಯಾವಸ್ತುನಿದೇಶೋ ವಾಪಿ ತನ್ಮುಖಮ್"[7] ಎಂದು ಇದನ್ನು ಒಂದು ಲಕ್ಷಣವಾಗಿ ಹೇಳಿದ್ದಾನೆ. ಅಂತೆಯೇ ತಮ್ಮ ಹಿಂದಿನ ಕವಿಗಳ ನೆನೆಕೆಯೂ ಜೊತೆಗೇ ಇರುತ್ತಿತ್ತು. ಜೈನ ಕಾವ್ಯಗಳು ಇದನ್ನು ಮೀರಿದವು. ದೇವತಾ ಸ್ತುತಿಗಳ ಸ್ಥಾನದಲ್ಲಿ ಜೈನ ಚಿಂತನೆಗಳನ್ನು ಕಾಣುತ್ತೇವೆ. ಕನ್ನಡದಲ್ಲಿ ಮೊದಲು ಬಂದ ಕಾವ್ಯಗಳನ್ನು ಬರೆದ ಕವಿಗಳು ಜೈನ ಕವಿಗಳೇ. ಆದ್ದರಿಂದ ಕನ್ನಡದ ಮೊದಲ ಕಾವ್ಯಗಳಲ್ಲಿ ಆ ಚಿಂತನೆಗಳನ್ನು ಕಾಣುತ್ತೇವೆ. ಪಂಪನಿಂದ ಮೊದಲುಗೊಂಡು ಅನೇಕರು ಈ ನೆಲೆಯನ್ನು ತುಳಿದಿದ್ದಾರೆ. ಆಧುನಿಕ ಮಹಾಕಾವ್ಯಗಳೂ ಕೂಡ ಇದಕ್ಕೆ ಹೊರತಲ್ಲ. ತಾವು ನಂಬಿದ ಚಿಂತನೆ, ದೇವರುಗಳು, ತಮಗೆ ಗುರುರೂಪದಲ್ಲಿ ಇರುವವರನ್ನು ಸಾಹಿತ್ಯ ಲೋಕದಲ್ಲಿ ಆರಾಧಿಸಬೇಕೆಂದವರನ್ನು ನೆನೆಯುತ್ತಾರೆ.

ಹೀಗೆ ಎಲ್ಲಾ ಮಹಾಕಾವ್ಯಗಳಲ್ಲೂ ಸಾಮಾನ್ಯವಾಗಿ ಗುರು ಸ್ಮರಣೆ, ದೇವಸ್ಮರಣೆ, ಕಥಾ ಹಿನ್ನೆಲೆ, ಹಿರಿಯ ಕವಿಗಳ ನೆನಕೆ ಇತ್ಯಾದಿ ವಿಷಯಗಳು ಕಾವ್ಯದ ಪ್ರಾರಂಭದಲ್ಲಿ ಬರುತ್ತವೆ. ನಂತರ ಕಥೆಯು ಮುಂದುವರೆದು ಪ್ರಾರಂಭ, ಬೆಳವಣಿಗೆ ಮತ್ತು ಸಾರ್ಥಕ

ಮತ್ತು ಸ್ಪಷ್ಟವಾದ ಅಂತ್ಯವನ್ನು ಒಳಗೊಂಡಿರುತ್ತದೆ. ಅಂತ್ಯವು ಕಥಾ ನಾಯಕನ ಅಭ್ಯುದಯದಿಂದಲೇ ಅಂತ್ಯವಾಗಬೇಕೆಂಬುದು ಲಾಕ್ಷಣಿಕರ ಅಭಿಪ್ರಾಯ. ಅಂತೆಯೇ ಹಲವು ಮಹಾಕಾವ್ಯಗಳ ಅಂತ್ಯವಿರುತ್ತದೆ. ಇನ್ನೂ ಕೆಲವನ್ನು ಸಾರ್ಥಕವಾದ ದೃಷ್ಟಿಕೋನದೊಂದಿಗೆ, ಚಿಂತನೆಯೊಂದಿಗೆ ಪೂರ್ಣಗೊಳಿಸಿದ್ದಾರೆ.

ಕೊನೆಟಿಪ್ಪಣಿಗಳು

1. ತಾಳಗುಂದದ ಪ್ರಣವೇಶ್ವರ ದೇವಾಲಯದಲ್ಲಿ ದೊರೆತಿರುವ ಶಾಸನ ಹಲ್ಮಿಡಿಗಿಂತ ಪೂರ್ವದ್ದೆಂದು ತೀರ್ಮಾನವಾಗಿದ್ದು ಕನ್ನಡಬಾಷೆಯ ಇತಿಹಾಸ ಐದನೇ ಶತಮಾನಕ್ಕಿಂತ ಹಿಂದಕ್ಕೆ ಸರಿದಿದೆ.
2. ಬಿ.ಎಂ.ಶ್ರೀ–ಕನ್ನಡ ಕೈಪಿಡಿ, 1927, ಸಂ–2: ಪು.469
3. ತ.ಸು.ಶಾಮರಾಯ–ಕನ್ನಡ ಸಾಹಿತ್ಯ ಚರಿತ್ರೆ, 1993: ಪು.348
4. ಜಿ.ಎಸ್.ಶಿವರುದ್ರಪ್ಪ–ಮಹಾಕಾವ್ಯ ಸ್ವರೂಪ, 2012: ಪು.49
5. ಶ್ರೀವಿಷ್ಣು ಧರ್ಮೋತ್ತರ ಮಹಾಪುರಾಣ–ತೃತೀಯ ಕಾಂಡ–ಅಧ್ಯಾಯ–15: ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರೀ–ಮಹಾಕಾವ್ಯ ಲಕ್ಷಣದಲ್ಲಿ ಉದೃತ, 2001: ಪು.ಸಂ.91
6. –ಅದೇ–
7. ದಂಡಿ–ಕಾವ್ಯಾದರ್ಶ–ಪರಿಚ್ಛೇದ 1–ಡಾ.ಟಿ.ವಿ.ವೆಂಕಟಾಚಲಶಾಸ್ತ್ರೀ–ಮಹಾಕಾವ್ಯ ಲಕ್ಷಣದಲ್ಲಿ ಉದೃತ, 2001: ಪು.93

ಪರಾಮರ್ಶನ ಗ್ರಂಥಗಳು:

1. ಬಿ.ಎಂ.ಶ್ರೀಕಂಠಯ್ಯ, ಕನ್ನಡ ಕೈಪಿಡಿ, ಕನ್ನಡ ಸಾಹಿತ್ಯ ಪರಿಷತ್ತು, ಸಂ–2 1927.
2. ತ.ಸು.ಶಾಮರಾಯ, ಕನ್ನಡ ಸಾಹಿತ್ಯ ಚರಿತ್ರೆ, ರಾಮಕೃಷ್ಣ ಆಶ್ರಮ, ಮೈಸೂರು–20, 1993.
3. ಜಿ.ಎಸ್.ಶಿವರುದ್ರಪ್ಪ, ಮಹಾಕಾವ್ಯ ಸ್ವರೂಪ, ಸಪ್ನ ಬುಕ್‌ಹೌಸ್, ಬೆಂಗಳೂರು, 2012.
4. ಟಿ.ವಿ.ವೆಂಕಟಾಚಲ ಶಾಸ್ತ್ರೀ, ಮಹಾಕಾವ್ಯ ಲಕ್ಷಣ, ಡಿ.ವಿ.ಕೆ.ಮೂರ್ತಿ ಪ್ರಕಾಶನ, 2001.
5. –ಅದೇ–
6. ಸು.ಜ.ನಾ., ಯುಗಸಂಧ್ಯಾ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 2015

❖❖❖

ಕದಿರ ರೆಮ್ಮವ್ವೆ (ರೆಬ್ಬವ್ವೆ) ವಚನಗಳಲ್ಲಿ ಸತಿಪತಿ ಭಾವ ಮತ್ತು ಕಾಯಕನಿಷ್ಠೆ

ಡಾ. ಚಂದ್ರಶೇಖರ ವೈ.
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ
ಶಿವಾನಂದ ಮಹಾವಿದ್ಯಾಲಯ, ಕಾಗವಾಡ, ಬೆಳಗಾವಿ

ಪ್ರಸ್ತಾವನೆ

12ನೇ ಶತಮಾನದ ವಚನ ಕ್ರಾಂತಿಯಲ್ಲಿ ಕದಿರ ರೆಮ್ಮೆವ್ವೆಯ ಪಾತ್ರ ಅನುಪಮವಾದುದು. ರೆಮ್ಮವ್ವೆ ಓರ್ವ ನಿಷ್ಠಾವಂತ ಕಾಯಕ ಜೀವಿಯಾಗಿದ್ದವಳು ಎಂಬುದನ್ನು ಈಕೆಯ ಹೆಸರಿನ ಹಿಂದಿರುವ ವಿಶೇಷಣದಿಂದಲೇ ಅರಿವಾಗುತ್ತದೆ. ಈಕೆ ರಾಟೆಯಿಂದ ನೂಲು ತೆಗೆಯುವ ಕಸುಬಿನಿಂದ ಬಂದವಳು ಎಂದು. ಅದರಿಂದ ಬಂದಂತಹ ವರಮಾನದಿಂದ ಶರಣ ದಾಸೋಹ ಸೇವೆ ಮಾಡುವುದು, ಜೊತೆಗೆ ಮಹಾನ್ ಶರಣ–ಶರಣೆಯರ ಅನುಭಾವ ಗೋಷ್ಠಿಯಲ್ಲಿ ಪಾಲ್ಗೋಳ್ಳುವುದು ಅವಳ ನಿತ್ಯದ ಬದುಕಾಗಿತ್ತು. ಈ ನಿಟ್ಟಿನಲ್ಲಿ ಮಹಾನ್ ಶರಣೆ ಕದಿರ ರೆಮ್ಮವ್ವೆಯ ಲಭ್ಯವಿರುವ ನಾಲ್ಕು ವಚನಗಳನ್ನೇ ಆಧಾರವಾಗಿರಿಸಿಕೊಂಡು ಅವುಗಳಲ್ಲಿ ವ್ಯಕ್ತವಾಗಿರುವ ಸತಿ–ಪತಿ ಭಾವ ಹಾಗೂ ಅವಳ ಕಾಯಕ ನಿಷ್ಠೆಯ ಪರಾಕಾಷ್ಠೆಯನ್ನು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಆರಂಭಿಕ ಜೀವನ ಮತ್ತು ಹಿನ್ನಲೆ

ಕದಿರ ರೆಮ್ಮವ್ವೆಯನ್ನು ರೆಬ್ಬವ್ವೆ ಎಂತಲೂ ಕರೆಯಲಾಗುತ್ತದೆ. ಆದರೆ ಈಕೆಯ ಕಾಲಘಟ್ಟದ ಕುರಿತಾಗಿ ಸ್ಪಷ್ಟತೆಯಿಲ್ಲ. ಬಹುಪಾಲು ವಿದ್ವಾಂಸರುಗಳು ಈಕೆಯ ಕಾಲವನ್ನು ಬಸವಾದಿ ಪ್ರಮಥರ ಕಾಲವೆಂದೂ ನಂಬಿರುತ್ತಾರೆ. ಡಾ. ಎಲ್. ಬಸವರಾಜು ಅವರು ರೆಮ್ಮವ್ವೆಯ ವಚನಗಳಲ್ಲಿ ಬಳಕೆಗೊಂಡ 'ಪರದಳ ವಿಭಾಡ' 'ಗಜವಂಟೇಕಾರ' ಎಂಬ ಪದಗಳನ್ನು ಸೂಕ್ಷ್ಮವಾಗಿ ಗಮನಿಸಿ ಇವು ವಿಜಯನಗರದ ಅರಸರ ಕಾಲದಲ್ಲಿ ಬೆಳಕಿಗೆ ಬಂದ ಬಿರುದಾವಳಿಗಳು. ಆದುದರಿಂದ ಈಕೆಯು ಸುಮಾರು ಕ್ರಿ.ಶ.1430 ರಲ್ಲಿದ್ದಿರಬೇಕೆಂದು ಅಂದಾಜಿಸುತ್ತಾರೆ.

ಹರಿಹರ ಕವಿಯ ತನ್ನ ಪ್ರಮುಖ ರಚನೆಗಳಲ್ಲಿ ಒಂದಾದ "ಲಿಂಗಾರ್ಚನೆಯ ರಗಳೆಯಲ್ಲಿ "ಇತರೆ ಶರಣೆಯರ ಜೊತೆಗೆ ರೆಮ್ಮವ್ವೆಯನ್ನು ಸ್ಮರಿಸಿರುವುದರಿಂದ ಆರ್. ನರಸಿಂಹಾಚಾರ್ ಹೇಳುವಂತೆ ಈಕೆ ಬಸವಣ್ಣವರ ಸಮಕಾಲೀನಳೆಂದು ಹೇಳಬಹುದು. ಅಲ್ಲದೇ ಪಾಲ್ಕುರಿಕೆ ಸೋಮನಾಥ ತನ್ನ 'ಪಂಡಿತಾರಾಧ್ಯ ಚಾರಿತ್ರ್ಯ'ದಲ್ಲಿನ ಗಣಸಹಸ್ರನಾಮದಲ್ಲಿ ರೆಮ್ಮವ್ವೆಯ ಹೆಸರನ್ನು ಉಲ್ಲೇಖಿಸಿರುವುದು ವ್ಯಕ್ತವಾಗಿದೆ. ಈ ಹಿನ್ನಲೆಯಲ್ಲಿ ಕವಿ ಚರಿತ್ರೆಕಾರರ ಮುಖ್ಯ ಅಭಿಪ್ರಾಯದಂತೆ ಈಕೆಯು ಬಸವಾದಿ ಪ್ರಮಥರ ಸಮಕಾಲೀನಳೆಂದು ಅರ್ಥೈಸುವುದೇ ಸೂಕ್ತವೆಂದೆನಿಸುತ್ತದೆ. ಬಸವಾದಿ ಶರಣರ ವಚನಗಳ ಜೊತೆ ಈಕೆಯ ವಚನಗಳೂ 'ಸಕಲಪುರಾತನರ ವಚನಗಳು'

ಮತ್ತು ಇತರ ಸ್ಥಲಕಟ್ಟಿನ ಕೃತಿಗಳಲ್ಲಿ ಸಮಾವೇಶಗೊಂಡಿರುವುದು ಇದೆ.

ಸುಮಾರು ಕ್ರಿ.ಶ.1620ರ ಆಸುಪಾಸಿನಲ್ಲಿದ್ದ ಶಂಕರದೇವನ "ಇಷ್ಟಲಿಂಗ ಚಾರಿತ್ರ್ಯ" ಅಜ್ಞಾತ ಕವಿಯ 'ನೂರೆಂಟು ಶರಣೆಯರ ಅಷ್ಟಕ' ಎಂಬ ಮಹೋನ್ನತ ಕೃತಿಗಳಲ್ಲಿಯೂ ಈಕೆಯ ನಾಮ ಉಲ್ಲೇಖವಾಗಿದೆ. ಇದೆಲ್ಲವನ್ನೂ ಗಮನಿಸಿದರೆ ರೆಮ್ಮವ್ವೆಯು ನಿಸ್ಸಂದೇಹವಾಗಿ ಬಸವಾದಿ ಪ್ರಮಥರ ಕಾಲದಲ್ಲಿ ಪ್ರಮುಖ ಶಿವಶರಣೆಯಾಗಿ ಕಂಡುಬರುತ್ತಾಳೆ. ಇವಳ ವಚನಗಳು ನಾಲ್ಕಾದರೂ ಅವುಗಳು ಗಟ್ಟಿ ವಚನಗಳಾಗಿ ನಿಲ್ಲುತ್ತವೆ.

ರೆಮ್ಮವ್ವೆ ವಿರಚಿತ ನಾಲ್ಕು ಪ್ರಮುಖ ವಚನಗಳು ಲಭ್ಯವಾಗುತ್ತವೆ. ಸಹಜವಾಗಿ ಎಲ್ಲಾ ವಚನಕಾರಂತೆ ರೆಮ್ಮೆಯು ಸಹ "ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ" ಎಂಬ ಅಂಕಿತನಾಮದಿಂದ ವಚನಗಳನ್ನು ರಚಿಸಿರುವುದು ಕಂಡು ಬರುತ್ತದೆ.

ಸತಿಪತಿ ಭಾವ

ಸತಿ–ಪತಿ ಒಂದಾದ ಭಾವ ವಚನಕಾರರ ದೃಷ್ಟಿಕೋನ ಎಂಬುದು ಬಸವಾದಿ ಶರಣರ ಅನೇಕ ವಚನಗಳಲ್ಲಿ ವ್ಯಕ್ತವಾಗಿರುವುದನ್ನು ಗುರುತಿಸಬಹುದಾಗಿದೆ. ಇದಕ್ಕೆ ರೆಮ್ಮವ್ವೆಯು ಹೊರತಾಗಿಲ್ಲ. ಉಡುಗಣಿ ಅಕ್ಕಮಹಾದೇವಿಯು ಯಾವ ರೀತಿಯಾಗಿ ತನ್ನ ಗಂಡನೆಂದು ಚೆನ್ನಮಲ್ಲಿಕಾರ್ಜುನನ್ನು ಅಣು–ಅಣುವಿನಲ್ಲಿ ಪೂಜಿಸದಳೋ ಅದರಂತೆ ಕದಿರ ರೆಮ್ಮವ್ವೆಯು ತನ್ನ ಹರಿತವಾದ ವಚನಗಳ ಮುಖೇನ ಸತಿ–ಪತಿ ಭಾವವನ್ನು ಸಮದೃಷ್ಟಿ ಕೋನದಿಂದ ಪ್ರತಿಪಾದಿಸುತ್ತಾಳೆ.

'ಎಲ್ಲರ ಹೆಂಡಿರು ತೋಳಸಿಕ್ಕುವರ;
ಎನ್ನ ಗಂಡಂಗೆ ತೊಳಸುವುದಿಲ್ಲ.
ಎಲ್ಲರ ಗಂಡಂದಿರಿಗೆ ಬಸಿವರು;
ಎಲ್ಲರ ಗಂಡಂದಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ;
ಎನ್ನ ಗಂಡ ಕೆಳೆಗೆ, ನಾ ಮೇಲೆ.
ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ'

ಈ ಮೇಲಿನ ವಚನಗಳ ಸಾಲುಗಳನ್ನು ತುಂಬಾ ಸೂಕ್ಷ್ಮವಾಗಿ ಗಮನಿಸಿದಾಗ, ಅಂದಿನ ಕಾಲದ ಪ್ರತಿಯೊಬ್ಬ ಮಡದಿ ತಾನು ಪತಿದೇವರ ದಾಸಿ ಎಂಬುದಾಗಿ ಭಾವಿಸುವುದು ತೀರಾ ಸಾಮಾನ್ಯವಾಗಿದ್ದಿತು. ಆದರೆ ಇಲ್ಲಿ ಕದಿರ ರೆಮ್ಮವ್ವೆ ತಾನು ಯಾವುದೇ ಕಾರಣಕ್ಕೂ ಗಂಡನ ದಾಸಿಯಾಗುವುದಿಲ್ಲ ಎಂಬ ಊಕ್ತಿಯನ್ನು ಖಾತ್ರಿಗೊಳಿಸುತ್ತಾಳೆ. ಎಲ್ಲ ಗಂಡಂದಿರರಿಂದ ಹೆಂಡತಿ ಬಸಿರಾಗುವಳು, ಆದರೆ ತಾನು ತನ್ನ ಗಂಡನಿಗೆ ಕೇವಲ ಬಸಿರಾಗಲು ಅಥವಾ ಗರ್ಭಧರಿಸಲು ಬದುಕಿಲ್ಲ ಎನ್ನುತ್ತಾಳೆ. ಮುಂದುವರೆದು ತನ್ನ ಗಂಡ ಕೇವಲ ವಿಷಯಾದಿಗಳ ಜನನ– ಮರಣಕ್ಕೆ ಕಾರಣವಾಗುವ ವ್ಯಕ್ತಿ ಅಲ್ಲ ಎಂದು ವಾದಿಸುತ್ತಾಳೆ. ಜಗದ ಎಲ್ಲ ಗಂಡರಿಗೆ ಉತ್ಪತ್ತಿಯ ಬೀಜವಿದೆ, ಆದರೆ ತನ್ನ ಗಂಡನಿಗೆ ಅಂಡದ ಅಂದರೆ ಕೇವಲ ಉತ್ಪತ್ತಿಗೆ ಬೇಕಾದ ಬೀಜ (ಫಲವಂತಿಕೆಗೆ) ಇಲ್ಲವೆಂದೆನ್ನುತ್ತಾಳೆ. ಇಷ್ಟೇ ಅಲ್ಲದೇ ಎಲ್ಲರ ಗಂಡಂದಿರು ಮೇಲೆ

ಅಥವಾ ಪುರುಷರೇ ಶ್ರೇಷ್ಠರು ಎಂಬುದಾಗಿ ನಂಬಿರುವ ನಾರಿಯರಿಗೆ ಶರಣೆ ಕದಿರ ರೆಮ್ಮವ್ವೆ ಆಶ್ಚರ್ಯದ ಸವಾಲಾಗಿ ತೋರುತ್ತಾಳೆ. ತನ್ನ ಗಂಡ ಕೆಳೆಗೆ ತಾನು ಮೇಲೆ ಎಂದು ಹೇಳುವ ಮುಖೇನ ತಾನು ಯಾವುದರಲ್ಲೂ ಕಡಿಮೆಯಿಲ್ಲ, ಪುರುಷರಂತೆಯೇ ಸಮಾನ ಅವಕಾಶ ತನಗೂ ಇದೆ ಎಂದು ಹೇಳುವುದರ ಮೂಲಕ ತಾನು ಲಿಂಗ ಭೇದ ನಿರಾಕರಿಸಿ ನಿರಾಕಾರ ಸ್ವರೂಪದ ಸಾಕಾರದ ಲಿಂಗವನ್ನೇ ತನ್ನ ನಿಜಗಂಡನನ್ನಾಗಿಸಿ ಕೊಂಡವಳೆಂದು ತನ್ನ ವಿಚಾರಶೀಲತೆಯನ್ನು ತೋರ್ಪಡಿಸುತ್ತಾಳೆ.

ಕದಿರ ರೆಮ್ಮವ್ವೆ ಮತ್ತೊಂದು ಪ್ರಮುಖವಾದ ವಚನದಲ್ಲಿ ತನ್ನ ಗಂಡನಿಗೂ ಹಾಗೂ ಇತರರ ಗಂಡಂದಿರಿಗೂ ಇರುವ ಭಿನ್ನತೆಗಳ ರಾಶಿಯನ್ನು ಹೆಕ್ಕಿ ತೆಗೆದಿದ್ದಾಳೆ.

ಎಲ್ಲ ಗಂಡಂದಿರು ಪರದಳ ವಿಭಾಡರು;
ಎನ್ನ ಗಂಡ ಮನದಳವಿಭಾಡ
ಎಲ್ಲರ ಗಂಡಂದಿರು ಗಜವೇಂಟೆಕಾರರು;
ಎನ್ನ ಗಂಡ ಮನವೇಂಟೆಕಾರ.
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು;
ಎನ್ನ ಗಂಡ ತಾರದೆ ಇಕ್ಕಿಸಿಕೊಂಬ.
ಎಲ್ಲರ ಗಂಡಂದಿರೆಗೆ ಮೂರು;
ಎನ್ನ ಗಂಡನಿಗೆ ಅದೊಂದೆ
ಅದೊಂದೊ ಸಂದೇಹ, ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ.

ಜಗದೆಲ್ಲ ಗಂಡಂದಿರು ಇತರರ ಅಥವಾ ಪರರ ಅಳಲನ್ನು ವಿನಾಶ ಮಾಡಿದರೆ, ತನ್ನ ಗಂಡ ಸ್ವಯಂ ತನ್ನ ಮನದ ಅಳಲನ್ನು ನಾಶಮಾಡುತ್ತಾನೆ. ಎಲ್ಲರ ಗಂಡಂದಿರು ಗಜ ಅಥವಾ ಆನೆಯನ್ನು ಬೇಟೆಯಾಡಿದರೆ, ತನ್ನ ಗಂಡನು ವಿಷಯಾದಿ ಅಂಶಗಳನ್ನು ತುಂಬಿದ ಮನದ ಬೇಟೆಯಾಡುತ್ತಾನೆ. ಮಿಕ್ಕ ಗಂಡಂದಿರು ತಂದದ್ದನ್ನು ತಿನ್ನುವವರು ತನ್ನ ಗಂಡ ತಾರದೆ ತಿನ್ನುವವರು ತನ್ನ ಗಂಡ ತಾರದೆ ತಿನ್ನುವವನು ಎಲ್ಲರ ಗಂಡಂದಿರು ಸೃಷ್ಟಿ, ಸ್ಥಿತಿ, ಲಯ, ಹಾಗು ಕಾರಣವೆಂಬ ಶರೀರಕ್ಕೆ ಅಂಟಿಕೊಂಡವರು. ಆದರೆ ತನ್ನ ಗಂಡ ಮಾತ್ರ ಕಾರಣ ಶರೀರಕ್ಕೆ ನಿಂತ ಅದಮ್ಯ ಚೈತನ್ಯ ಚೇತನವೆನ್ನುತ್ತಾಳೆ. ಹೀಗೆ ಶರಣೆ ರೆಮ್ಮವ್ವೆ ತನ್ನ ವಚನಗಳ ಸಾಲಿನಲ್ಲಿ ಪತಿ ಧರ್ಮದ ಬಗೆಗಿನ ನಿರ್ವಿಕಲ್ಪನೆಗಳು ಹೊತ್ತು ಅಕ್ಕನ ಆಧ್ಯಾತ್ಮಿಕ ಚಿತ್ತದ ಚನ್ನಮಲ್ಲಿಕಾರ್ಜುನನ್ನು ಅನುಭ್ರವಿಸಿದಂತೆ ತನ್ನ ನಿರಾಕಾರ ಪತಿಯ ಬಗೆಗಿನ ಆಂಗಿಕ ಭಾವನೆಯನ್ನು ಯಾವುದೇ ಎಡರು–ತೊಡರಿಲ್ಲದೆ ನಿರ್ಭೀತವಾಗಿ ನಿಷ್ಠೆ ಮೆರೆದಿದ್ದಾಳೆ.

ಕಾಯಕ ನಿಷ್ಠೆ

ಕದಿರ ರೆಮ್ಮವ್ವೆ ಕಾಯಕ ತತ್ವವನ್ನು ತನ್ನ ಉಸಿರಾಗಿಸಿಕೊಂಡಿದ್ದಳು. ತನ್ನ ಕಾಯಕದಲ್ಲಿ ಅನಂತವಾದ ಆನಂದ ಕಂಡಿದ್ದಂತಹ ಕದಿರ ರೆಮ್ಮವ್ವೆ ರಾಟಿಯಿಂದ ನೂಲು ತೆಗೆಯುವ ಮಾಟದಲ್ಲಿ ಜೀವನದ ದಿಗ್ದರ್ಶನವನ್ನೇ ತೋರ್ಪಡಿಸಿದ್ದಾಳೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ;
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು,
ನಿಂದ ಬೊಂಬೆ ಮಹಾರುದ್ರ;

ರುದ್ರನ ಬೆಂಬಳಿಯವರೆಡು ಸೂತ್ರಕರ್ಣ,
ಅರಿವೆಂಬ ಕದಿರು, ಭಕ್ತಿಯಂಬ ಕೈಯಲ್ಲಿ ತಿರುಹುಲಾಗಿ;
ಸುತ್ತಿತ್ತು ನೂಲು ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ
ಇನ್ನೇವೆ ಕದಿರ ರೆಮ್ಮೆಯೊಡೆಯ ಗುಮ್ಮೇಶ್ವರಾ.

ಕದಿರ ರೆಮ್ಮವ್ವೆ ತನ್ನ ಬದುಕಿನ ಕಾಯಕದ ನಿತ್ಯ ಸತ್ಯವನ್ನು ವಚನದಲ್ಲಿ ವ್ಯಕ್ತಪಡಿಸಿದರೂ, ಆ ವಚನಗಳ ತರ್ಕ ನಿಜಾರ್ಥ, ಸತ್ಯಕ್ಕೆ ಸಮೀಪವಾಗಿದ್ದಿತು ಎಂಬ ವಿಷಯ ಈ ಮೇಲಿನ ವಚನದ ವಿಶ್ಲೇಷಣೆಯಿಂದ ಕಂಡಬರುತ್ತದೆ. ತನ್ನ ಮೂಲ ಕಸಬು ರಾಟೆಯ ತಿರುಹುತ್ತಾ ಆ ರಾಟೆಯ ಕುಲಜಾತಿಗೆ ಮತ್ತದರ ಕುಲದ ಮೂಲಕ್ಕೆ ಆತ್ಮ ಸ್ಥೈರ್ಯದ ಪ್ರತೀಕವಾಗಿ ಪ್ರಶ್ನೆ ಕೇಳಿದ್ದಾಳೆ. ಅದರೊಟ್ಟಿಗೆ ತಿರುಹುವ ರಾಟೆಗೆ ಅದರಡಿಯ ಹಲಗೆ ಬ್ರಹ್ಮ ಅದಕ್ಕೆ ಕಟ್ಟಿದ ತೋರಣವೇ ವಿಷ್ಣು ಮತ್ತು ರಾಟೆಗೆ ಕಟ್ಟಿದಬೊಂಬೆ ಮಹಾರುದ್ರ, ರುದ್ರನ ಬೆಂಬಲಕ್ಕೆ ಎರಡು ಸೂತ್ರ ಕರ್ಣಗಳು ಇಂತಹ ಅದ್ಭುತವಾದ ರಾಟೆಯಿಂದ ನೂತಾಗ ಹೊರಡುವಂತಹ ಅರಿವೇ ಕದಿರಾಗಿದೆ. ಬ್ರಹ್ಮ ವಿಷ್ಣು ರುದ್ರರ ದೈವ ಲೀಲೆಯನ್ನು ಹೇಳಿದ್ದಾಳೆ.

ಸಮಾರೋಪ

ಅಲ್ಲಮಪ್ರಭು ದೇವರ ಪರಮ ಅನುಯಾಯಿಯಾಗಿ ಈಕೆಯು ಅಲ್ಲಮರು ಶ್ರೀಶೈಲಕ್ಕೆ ತೆರಳುವ ಸಮಯದಲ್ಲಿ 'ತೇರದಾಳ' ಎಂಬ ಪ್ರದೇಶದಲ್ಲಿ ತಂಗುತ್ತಾರೆ. ಅಲ್ಲಮರ ಮಾತಿನಂತೆ ರೆಮ್ಮವ್ವೆಯು 'ತೇರದಾಳ' ಪಕ್ಕದ 'ರಬಕವಿ'(ರೆಬ್ಬವನ ಗವಿ)ಗೆ ಬಂದು ನೆಲೆನಿಂತು ಅಲ್ಲಿಯ ಜನರಿಗೆ ಬಸವಾದಿ ಪ್ರಮಥರ ಶರಣ ಸಾರವನ್ನು ತಿಳಿಸುತ್ತಾ ಕೊನೆಯಲ್ಲಿ ಅಲ್ಲಿಯೇ ಶಿವೈಕ್ಯಳಾಗುತ್ತಾಳೆ. ರೆಬ್ಬವ್ವನ ಗವಿಯು ಕಾಲಾನಂತರದಲ್ಲಿ ರಬಕವಿಯಾಗಿರುತ್ತದೆ. ರೆಬ್ಬವ್ವೆಯ ಕದಿರು ತೆಗೆಯುವ ಕಾಯಕದ ಪ್ರಭಾವಳಿಯಿಂದ ಇಂದಿಗೂ ಕೂಡ ರಬಕವಿ ಬನಹಟ್ಟಿ ಪ್ರದೇಶದಲ್ಲಿ ಜನರು ನೇಯ್ಗೆ ಕದಿರು ಕಾಯಕವನ್ನು ಮುಂದುವರೆಸಿಕೊಂಡು ಬಂದಿರುತ್ತಾರೆ. ಈ ನಿಟ್ಟಿನಲ್ಲಿ ಕದಿರ ರೆಮ್ಮವ್ವೆಯ ಕಾಯಕ ನಿಷ್ಠೆ, ಪತಿ ಧರ್ಮ ಇವುಗಳನ್ನು ಲಭ್ಯವಿರುವ ನಾಲ್ಕು ವಚನಗಳಲ್ಲಿ ವ್ಯಕ್ತವಾಗಿರುವ ಅಂಶಗಳನ್ನು ಅರಿಯಬಹುದಾಗಿದೆ. ಇಲ್ಲಿನ ವಚನಗಳ ಭಾಷೆ ಸರಳವಾಗಿದ್ದರೂ ಅದರ ಗೂಢಾರ್ಥ ಮಾತ್ರ ವಿಶಿಷ್ಟ. ಲೌಕಿಕ ಪಾರಲೌಕಿಕಗಳನ್ನು ಒಂದುಮಾಡಿಕೊಳ್ಳಲು ಬಳಸಿದ ಬೆಡಗಿನ ಕ್ರಮ ಸಮರ್ಪಕವಾಗಿದೆ.

ಪರಾಮರ್ಶನ ಗ್ರಂಥಗಳು

1. ಕಲಬುರ್ಗಿ ಎಂ.ಎಂ., ಬಸವ ಯುಗದ ವಚನ ಮಹಾ ಸಂಪುಟ–01(ಶಿವಶರಣೆಯರ ವಚನ ಸಂಪುಟ), ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2016
2. ಬಸವರಾಜು ಎಲ್(ಸಂ), 'ಅಕ್ಕನ ವಚನಗಳು', ಗೀತಾ ಬುಕ್ ಹೌಸ್, ಮೈಸೂರು, 1966
3. ಹಿರೇಮಠ, ಆರ್.ಸಿ.,(ಸಂ), 'ನೀಲಮ್ಮನ ವಚನಗಳು' (ಶಿವಶರಣೆಯರ ವಚನಗಳು ಸಮಗ್ರ ಸಂಪುಟ), ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ ಧಾರವಾಡ, 1968

❖❖❖

ನಡುಗನ್ನಡ ಕಾವ್ಯಗಳಲ್ಲಿ ಸಿದ್ಧರಾಮ

ಡಾ. ರಣಧೀರ
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ವಿಭಾಗ, ಎ.ವಿ. ಕಮಲಮ್ಮ ಮಹಿಳಾ ಕಾಲೇಜು, ದಾವಣಗೆರೆ

ಹನ್ನೆರಡನೆಯ ಶತಮಾನದ ಪ್ರಸಿದ್ಧ ಶಿವಶರಣ ಹಾಗೂ ವಚನಕಾರನೆನಿಸಿದ್ದ ಸೊನ್ನಲಿಗೆ ಸಿದ್ಧರಾಮನದ್ದು ಶಿಖರ ಸಾಧನೆಯ ಬದುಕು. ಸೊಡ್ಡಳ ಬಾಚರಸನು ಶಿವಯೋಗಿ ಸಿದ್ಧರಾಮನನ್ನು "ಯೋಗಿಗಳ ಯೋಗಿ ಶಿವಯೋಗಿ ಸೊಡ್ಡಳಾ, ಸಿದ್ಧರಾಮನೊಬ್ಬನೆ ಯೋಗಿ"(ಸ.ವ.ಸಂ–9, ವಚನ ಸಂಖ್ಯೆ–737) ಎಂದು ಮನದುಂಬಿ ಹೊಗಳಿರುವನು. ಸಿದ್ಧರಾಮ ಕೇವಲ ಶಿವಯೋಗಿ ಮಾತ್ರವಲ್ಲ ಕಾಯಕಯೋಗಿ, ಮಹಾಜಂಗಮಯೋಗಿ, ಅನುಭಾವದ ಘನಿಕೃತ ರೂಪ ಎಂದು ಕನ್ನಡ ಸಾಹಿತ್ಯವು ಅಭಿದಾನ ಮಾಡಿದೆ. ಸಿದ್ಧರಾಮನ ಬದುಕನ್ನು ಎರಡು ಘಟ್ಟಗಳಲ್ಲಿ ನಾವು ಕಾಣಬಹುದು. ಮೊದಲನೆಯ ಘಟ್ಟ ತನ್ನ ಸ್ವಸಾಮರ್ಥ್ಯ ಮತ್ತು ಸಾಧನೆಯ ಮೂಲಕ ಕಟ್ಟಿಕೊಂಡ ಧಾರ್ಮಿಕ–ಸಾಮಾಜಿಕ ಅಡಿಪಾಯ(ಅಲ್ಲಮಪ್ರಭುವಿನ ಸಖ್ಯ ಪೂರ್ವ), ಎರಡನೆಯ ಘಟ್ಟ ಶರಣರ ಪ್ರಭಾವಕ್ಕೆ ಒಳಗಾಗಿ ಷಟ್‌ಸ್ಥಲ ಬ್ರಹ್ಮಿಯಾದದ್ದು (ಅಲ್ಲಮಪ್ರಭುವಿನ ಸಖ್ಯ ನಂತರ). ಈ ಎರಡೂ ಘಟ್ಟಗಳಲ್ಲಿ ಸಿದ್ಧರಾಮನೇ ಹೇಳಿದಂತೆ–

"ಯೋಗಿಯ ಶರೀರ ವೃಥಾಯ ಹೋಗಲಾಗದಯ್ಯಾ.
ಪುಣ್ಯವ ಪುಣ್ಯವ ಮಾಡುವುದು ಲೋಕಕ್ಕೆ.
ಆದಿಯ ಹಾದಿಯ ಹತ್ತುವುದಯ್ಯಾ.
ಆ ಲೋಕಕ್ಕೆ ಸೋಪಾನವ ಕೊಡುವ ಎನ್ನ ಕಪಿಲಸಿದ್ಧನಾಥಯ್ಯನು"

(ಬ.ಯು.ವ.ಮ.ಸಂಪುಟ–1, ವಚನ ಸಂಖ್ಯೆ–948, ಪುಟ–647)

ಎಂಬಲ್ಲಿ ಅವನ ಬದುಕಿನ ನಿತ್ಯಮಂತ್ರ 'ಸಮಾಜಮುಖಿ ಕಾಯಕ' ಮತ್ತು 'ಆತ್ಮಸಾಕ್ಷಾತ್ಕಾರ'ಕ್ಕೆ ಧಾರ್ಮಿಕ–ಆಧ್ಯಾತ್ಮಿಕ ಸಾಧನೆ ಗುರಿಯಾಗಿದ್ದಿತು ಎಂದು ಅರಿಯಬಹುದಾಗಿದೆ.

ಸಿದ್ಧರಾಮನು ತನ್ನ ಬದುಕಿನ ಪೂರ್ಣ ಅವಧಿಯಲ್ಲಿ ಲೋಕೋಪಕಾರನಾಗಿ ಬದುಕಿದ್ದು ನಮ್ಮ ಮುಂದೆ ಅನೇಕ ಕುರುಹುಗಳ ರೂಪದಲ್ಲಿ ನಿದರ್ಶನಗಳಿವೆ. ತಾನು ಅರಸನಾಗಿ ಪ್ರಜಾಸ್ನೇಹಿಯಾಗಿ ಕಟ್ಟಿದ ಕೆರೆ–ಕಟ್ಟೆಗಳು–ದೇವಾಲಯಗಳು ಜನೋಪಯೋಗಿಯಾಗಿ ಇಂದಿಗೂ ಉಳಿದಿವೆ. ಕುಗ್ರಾಮವಾಗಿದ್ದ ಸೊನ್ನಲಿಗೆಯನ್ನು ಪ್ರಸಿದ್ಧ ಪಟ್ಟಣವಾಗಿ ಭೂಕೈಲಾಸವಾಗಿ ಕಟ್ಟಿ ಬೆಳಸಿದ ಕನಸುಗಾರ ಸಿದ್ಧರಾಮ.

ಕನ್ನಡ ಸಾಹಿತ್ಯ ಕೃತಿಗಳಲ್ಲಿ ಸೊನ್ನಲಿಗೆ ಸಿದ್ಧರಾಮ ಶಿವಯೋಗಿಯನ್ನು ವಿವಿಧ ಅಭಿದಾನಗಳಲ್ಲಿ ಸ್ತುತಿಸಲಾಗಿದೆ. ಕನ್ನಡದ ಶಿವಕವಿಗಳು ಸಿದ್ಧರಾಮನನ್ನು ಕುರಿತು ತಾವು ಕಂಡಷ್ಟು, ಪರರಿಂದ ಕೇಳಿದಷ್ಟು ತಮ್ಮ–ತಮ್ಮ ಕಾವ್ಯ–ಪುರಾಣಗಳಲ್ಲಿ ವಿಸ್ತರಿಸಿ ಒಂದು ಪ್ರಭಾವಳಿಯನ್ನು ನಮಗೆ ನೀಡಿದ್ದಾರೆ. ಹರಿಹರ ಕವಿಯಾದಿಯಾಗಿ ಹಲವು ಕವಿಗಳು ಸಿದ್ಧರಾಮನನ್ನು ಉತ್ತುಂಗ ಶಿಖರಕ್ಕೆ ಎತ್ತರಿಸಿ ಅವನ ವ್ಯಕ್ತಿತ್ವವನ್ನು ಸಾಧನೆಯನ್ನು

ನಿರೂಪಿಸಿರುವುದು ಕಾಣುತ್ತೇವೆ. ಸಿದ್ಧರಾಮನ ಕಾಯಕ ಮತ್ತು ಅಲೌಕಿಕ ಶಕ್ತಿ ಎಂತಹದ್ದೆಂದರೆ, ಆತನು ಸೊನ್ನಲಿಗೆಯಲ್ಲಿ ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯಕ್ಕೆ ಜನರು ಕೂಡ ದಾನ–ದತ್ತಿಗಳನ್ನು ಬಿಟ್ಟಿರುವುದು ಅನೇಕ ಶಾಸನಾಧಾರಗಳಿಂದ ತಿಳಿಯಬಹುದು. ಸೊನ್ನಲಿಗೆ ಪುರವನ್ನು ಎರಡನೆಯ ಕಲ್ಯಾಣಪುರವನ್ನಾಗಿಸಿದ ಕೀರ್ತಿ ಶಿವಯೋಗಿ ಸಿದ್ಧರಾಮನಿಗೆ ಸಲ್ಲುತ್ತದೆ. ಅವನ ಬದುಕಿನ ಒಟ್ಟು ನೋಟವನ್ನು ಈ ಕೆಳಗಿನ ಕಾವ್ಯಗಳಲ್ಲಿ ಹೀಗೆ ನೋಡಬಹುದಾಗಿದೆ.

ರಾಘವಾಂಕನ ಸಿದ್ಧರಾಮ ಚಾರಿತ್ರ

ಕವಿ ರಾಘವಾಂಕನ 'ಸಿದ್ಧರಾಮ ಚಾರಿತ್ರ' ಷಟ್ಪದಿ ಕಾವ್ಯವು ಸಿದ್ಧರಾಮನ ವಿಶಿಷ್ಟ ಜೀವನದ ದರ್ಶನದಿಂದ ಕೂಡಿದೆ. ಸೊನ್ನಲಿಗೆ ಸಿದ್ಧರಾಮನ ಜನನ, ಬಾಲ್ಯ, ಸಾಧನೆ, ಸಿದ್ಧಿ ಈ ಕಾವ್ಯದ ತಿರುಳಾಗಿದೆ. ಕಥೆಗಳು–ಉಪಕಥೆಗಳಿಂದ ತುಂಬಿಕೊಂಡಿರುವ 'ಸಿದ್ಧರಾಮ ಚಾರಿತ್ರ'ವು ಶರಣರ ಕಾಯಕವೇ ಕೈಲಾಸ ಎನ್ನುವ ಧ್ಯೇಯ ಹೊಂದಿದ ಜೀವನ ಕಥನವಾಗಿದೆ. ರಾಘವಾಂಕನು ಒಟ್ಟು 8 ಗತಿಯಲ್ಲಿ ಈ ಕಾವ್ಯವನ್ನು ನಿರೂಪಿಸಿರುವನು.

ಕಥಾವಸ್ತು: ಹರನ ಸಭೆಗೆ ಸುಖದಿಂದ ಅದ್ರಿಶಿರ ಮತ್ತು ಊರ್ಧ್ವಶಿರರೆಂಬ ಇಬ್ಬರು ಗಂಧರ್ವರು ಅಗ್ರೇಶನ ಆಸ್ಥಾನಕ್ಕೆ ಬರುವಾಗ ತಮಗೆ ಎದುರಾದ ಭೃಂಗಿಯನ್ನು ಕಂಡು ನಸುನಕ್ಕರು. ಇದರಿಂದ ಕುಪಿತನಾದ ಭೃಂಗಿಯು ಅಜ್ಞಾನಮಯವಪ್ಪ ನರಜನ್ಮದೊಳು ಬಂದು ಭವಿಸತಿಪತಿಗಳಾಗಿ ನೀವೆಂದು ಶಾಪ ಕೊಡುತ್ತಾನೆ. ಎಚ್ಚೆತ್ತುಕೊಂಡ ಗಂಧರ್ವರು ಬೇಸರಗೊಳ್ಳುತ್ತಾರೆ ಮತ್ತೆ ಅವರು ವಿಶಾಪವನ್ನು ಕರುಣಿಸಿರೆಂದು ಕೇಳಿಕೊಳ್ಳುತ್ತಾರೆ. ವಿಸಾಪದಿಂದಾಗಿ ಗಂಧರ್ವರು ಮುಂದೆ ಭೂಲೋಕದಲ್ಲಿ ಮೊರಡಿ ಮುದ್ದ ಮತ್ತು ಸುಗ್ಗವ್ವೆಯರಾಗಿ (ಸಿದ್ಧರಾಮನ ತಂದೆ–ತಾಯಿಯಾಗಿ) ಜನಿಸುತ್ತಾರೆ. ಇವರಿಬ್ಬರಿಗೆ ವಿವಾಹವೂ ಆಗುತ್ತದೆ. ಒಮ್ಮೆ ರೇವಣಸಿದ್ಧರು ಊರಿಗೆ ಬಂದು ಈ ಸೊನ್ನಲಿಗೆ ಕ್ಷೇತ್ರದಲ್ಲಿ ಸಿದ್ಧನೊಬ್ಬನ ಜನ್ಮವಾಗುತ್ತದೆ. (ಹರಿಹರನ ರೇವಣಸಿದ್ಧೇಶ್ವರನ ರಗಳೆ ನೆನಪಿಸಿಕೊಳ್ಳಿ) ಅವನು ಈ ಊರಿನ ಸಂಪತ್ತಿನ ಕುರುಹಾಗಿ ಪುಣ್ಯದ ಆಗರವಾಗಿ ಮೆರೆಯುವ ಮುಕ್ತಿ ಕ್ಷೇತ್ರವನ್ನಾಗಿಸುತ್ತಾನೆಂದು ಶಿಷ್ಯರಿಗೆ ಹೇಳುತ್ತಾ ಮುಂದೆ ಸಾಗುತ್ತಾ ಸುಗ್ಗವ್ವೆಯ ಮನೆಗೆ ಬಂದು ಆಕೆಯ ಪುಣ್ಯಗರ್ಭವನ್ನು ಮುಟ್ಟಿ ನಮಸ್ಕರಿಸುತ್ತಾನೆ. "ನಿನ್ನ ಉದರಲ್ಲಿ ಮಹಾಸಿದ್ಧನ ಜನನವಾಗುತ್ತದೆ" ಎಂದು ಹೇಳಿದನು.

ಮುಂದೆ ಸುಗ್ಗವ್ವೆ ಗರ್ಭದಲ್ಲಿ ಐದು ತಿಂಗಳಿಗೆ ಸಿದ್ಧರಾಮನ ಜನನವಾಗುತ್ತದೆ. ಈ ಸನ್ನಿವೇಶದ ಸಂದರ್ಭದಲ್ಲಿ ರಾಘವಾಂಕನು ಅತಿ ಹೆಚ್ಚು ಅಲೌಕೀಕತೆಯನ್ನು ಚಿತ್ರಿಸಿರುವನು. ಲೋಕವನ್ನು ಉದ್ಧರಿಸಲು ಶಿವನೇ ಅವತರಿಸಿದಂತೆ ಸಿದ್ಧರಾಮನ ಜನನವಾಗಿದೆ ಎಂಬುದನ್ನು ಸೂರ್ಯನ ಉದಯಕ್ಕೆ ಹೋಲಿಸಿದ್ದಾನೆ. ಸೂತಕಾತೀತನಾದ ಸಿದ್ಧರಾಮನಿಗೆ ಪಾರ್ವತಿದೇವಿ ನೀಡಿದ ಹೆಸರನ್ನು ಬಿಟ್ಟು ತಂದೆ ಮುದ್ದಗೌಡ ತನ್ನ ಕುಲದೈವನಾದ 'ಧೂಳಿಮಾಕಾಳ' ಎಂದು ಕರೆಯುತ್ತಾನೆ. ಶಿಶು ಸಿದ್ಧರಾಮ ಬೆಳೆಯತೊಡಗುತ್ತಾನೆ. ಆತ ಮಹಾಮಹಿಮ ಪುರುಷ. ನಿತ್ಯತೃಪ್ತ. ತಾಯಿ ಎದೆಹಾಲು ಕುಡಿಯುವುದರಲ್ಲಿ ಸದಾ ಜಾಗೃತ. ನಿದ್ದೆ ಮಾಡುವುದರಲ್ಲಿ ಕ್ಲೇಶರಹಿತ. ಸದಾಕಾಲವೂ ಮೌನಿ. ಅವನು ಲಿಂಗವೇ ಪ್ರಾಣವಾಗುಳ್ಳವನು. ಅವನು ಅಶರೀರಿ.

ಇದನೆಲ್ಲಾ ಕಂಡ ತಂದೆ–ತಾಯಿಗೆ ಆಶ್ಚರ್ಯ. ಮಗು ಬೆಳೆದಂತೆಲ್ಲಾ ತಂದೆ–ತಾಯಿಗಳ ಕೀರ್ತಿ ಹಬ್ಬಿತು. ಆತನ ಬೆಳವಣಿಗೆಯನ್ನು ಕುರಿತು ಕವಿ "ಒಂದೆರಡು ಸಂವತ್ಸರಂಗಳಲೆ ಹತ್ತೈದು ವರುಷದ ಹರೆಯವಂ ತಳೆದನನುಪಮ ಸ್ವಾತಂತ್ರನು." (ರಾ.ಸ.ಕಾ–ಸಿ.ಚಾ–ಗತಿ–2, ಪದ್ಯ–11, ಪುಟ–182) ಎಂದು ಹೇಳುತ್ತಾನೆ. ಗತಿ–2ರಲ್ಲಿ ಭೂಮಿಯ ಚರಾಚರವನ್ನು ಉದ್ಧರಿಸಿ ಹಲವು ಸಾಮರ್ಥ್ಯವನ್ನು ತೋರಿದ ಪರಿಯನ್ನು ವರ್ಣಿಸಲಾಗಿದೆ. ಗತಿ–3ರಲ್ಲಿ ಸೊನ್ನಲಿಗೆ ಪುರದಲ್ಲಿ ಶ್ರೀಶೈಲ ಮಲ್ಲಿಕಾರ್ಜುನನ ದೇವಾಲಯ ನಿರ್ಮಿಸಿದ ಕಥಾಪ್ರಸಂಗವಿದೆ. ಗತಿ–4ರಲ್ಲಿ ಶಾಪಹತರಾದ ಗಂಧರ್ವರಿಗೆ ನಿಜವಿತ್ತು, ಕೋಪದಿಂದ ಬಂದ ಮನ್ಮಥನ ಬಿಲ್ಲ ಬಿಸುಡಿಸಿದ ಸನ್ನಿವೇಶ ನಿರೂಪಿತಗೊಂಡಿದೆ. ಗತಿ–5ರಲ್ಲಿ ಗಿರಿಜೆ ನಡೆಸುವ ಯೋಗ ಮಜ್ಜನದ ಚೌಕಮಂ ಪುರದೊಳಗೆ ಮಲ್ಲಿನಾಥನಿಗೆ ನೇಮದಿಂದ ನಡೆಸಿ, ಹರನಿಂದ ವಿಷಪ್ರಸಾದವ ಮಾಡಿ ಎಕ್ಕಳಿಂಡಿಗೆ ಕೊಟ್ಟ ಸಿದ್ಧೇಂದ್ರನ ಪವಾಡ ಪ್ರಸಂಗವಿದೆ. ಗತಿ–6ರಲ್ಲಿ ರೋಷದಿಂದ ಬಂದ ಖರ್ಪರನನ್ನು ಕೃಪೆಯಿಂದ ಎತ್ತಿದ, ಸುರಿಗೆಯನ್ನು ಸಿಡಿಲನ್ನು ಎದುರಿಸಿದ ಕಾಳನನ್ನು ಸಲಹಿದ ಕಥಾ ಪ್ರಸಂಗಗಳಿವೆ. ಗತಿ–7ರಲ್ಲಿ ಸೊನ್ನಲಿಗೆ ಮಲ್ಲಿಕಾರ್ಜುನನಿಗೆ ತುಪ್ಪದ ಅಭಿಷೇಕ ಮಾಡಿದ ಮತ್ತು ಜನರಿಗೆ ದಾನ–ಧರ್ಮ ಮಾಡಿದ ಪ್ರಸಂಗಗಳು ಇವೆ. ಇನ್ನೂ ಕೊನೆಯ 8ನೇ ಗತಿಯಲ್ಲಿ ಅಲ್ಲಮಪ್ರಭುದೇವರ ಸಖ್ಯದ ಭೇಟಿ ಪ್ರಸಂಗ ಮತ್ತು ಮಲ್ಲಿಕಾರ್ಜುನನಲ್ಲಿ ಶಿವಯೋಗಿಸಿದ್ಧರಾಮ ಐಕ್ಯ ಹೊಂದಿದ ವಿಸ್ತಾರ ಕಥೆಯು ಇಲ್ಲಿದೆ. ಒಟ್ಟು 8 ಗತಿಯಲ್ಲಿ ಹಬ್ಬಿರುವ ಸಿದ್ಧರಾಮ ಶಿವಯೋಗಿಯ ಕಥೆಯು ಅವನ ಘನ ವ್ಯಕ್ತಿತ್ವವನ್ನು ಸಮಾಜಕಲ್ಯಾಣ ಮತ್ತು ಲೋಕಕಲ್ಯಾಣದ ಜೊತೆಗೆ ಆತ್ಮಕಲ್ಯಾಣ ಹೊಂದಿದ ಪರಿಯೊಂದಿಗೆ ಮುಕ್ತಾಯವಾಗುವುದು ನೋಡುತ್ತೇವೆ.

ಕರ್ಮಯೋಗಿ–ಶಿವಯೋಗಿ: ರಾಘವಾಂಕನ ಸಿದ್ಧರಾಮ ಒಬ್ಬ ಕಾರಣಿಕ ಪುರುಷ ಎಂಬುದನ್ನು ಆತನ ಜನನದ ಉದ್ದೇಶದಿಂದಲೇ ತಿಳಿದಿದ್ದೇವೆ. ಹರಿಹರನ ರಗಳೆಗಳನ್ನು ಗಮನಿಸಿದರೆ ಶರಣರೆಲ್ಲರೂ ಕೈಲಾಸದಲ್ಲಿ ಏನಾದರೂಂದು ತಪ್ಪು ಎಸಗಿ ಅದರ ಪರಿಹಾರಕ್ಕಾಗಿ ಮರ್ತ್ಯದಲ್ಲಿ ಜನಿಸುವರು. ಆದರೆ ರಾಘವಾಂಕನಲ್ಲಿ ಸಿದ್ಧರಾಮನು ಕೈಲಾಸದಲ್ಲಿ ಯಾವುದೇ ತಪ್ಪು ಎಸಗಿಲ್ಲ. ಆದರೆ ಗಂಧರ್ವ ಈರ್ವರು (ಅದ್ರಿಶಿರ ಮತ್ತು ಊರ್ಧ್ವಶಿರ) ಭೃಂಗಿಗೆ ಅಪಹಾಸ್ಯ ಮಾಡಿದ ಕಾರಣಕ್ಕೆ ಅವನ ತಂದೆ–ತಾಯಿ (ಮುದ್ದಗೌಡ–ಸುಗ್ಗವ್ವೆ)ಯಾಗಿ ಭೂಲೋಕದಲ್ಲಿ ಜನಿಸುತ್ತಾರೆ. ಅವರ ವಿಶಾಪದ(ಮೋಕ್ಷಕ್ಕಾಗಿ) ಕಾರಣವಾಗಿ ಹಾಗೂ ಲೋಕಕಲ್ಯಾಣಕ್ಕಾಗಿ ಮರ್ತ್ಯದಲ್ಲಿ ಜನ್ಮ ತಾಳುತ್ತಾನೆಂದು ಕವಿ ತಿಳಿಸಿರಿವನು. ಒಟ್ಟಿನಲ್ಲಿ ಕವಿ ರಾಘವಾಂಕನ ಕಾವ್ಯದ ನಾಯಕನು ಮಹಿಮಾತೀತನು, ಮಹಾಚೇತನನು ಆಗಿರುವನೆಂದು ತಿಳಿಯಬಹುದು.

ಕಾಯಕ ತತ್ವವನ್ನು ಚಾಚು ತಪ್ಪದೇ ಪಾಲಿಸಿದ ಸಿದ್ಧರಾಮನು "ಶಿವಯೋಗಿಯ ಶರೀರಂ ವೃಥಾ ಸವೆಯಲಾಗದನುಗೊಂಬನಿತು ಕಾಯಕಂ ನಡೆಯುತ್ತಿರಬೇಕು" ಎನ್ನುತ್ತಾನೆ. ಹೀಗೆ ಕರ್ಮಯೋಗದ ಬೆಳವಣಿಗೆಯ ಮೂಲಕ ಸಾಗುತ್ತಾ–ಸಾಗುತ್ತಾ ಕವಿ ತನ್ನ ನಾಯಕನನ್ನು 'ಶಿವಯೋಗ'ದ ಕಡೆಗೆ ತಿರುಗಿಸುವುದು ಕೃತಿಯ ವೈಶಿಷ್ಟ್ಯ.

ರಾಘವಾಂಕನು 'ಸಿದ್ಧರಾಮ ಚಾರಿತ್ರ'ದಲ್ಲಿ ಅಲ್ಲಮನ ಆಧ್ಯಾತ್ಮಿಕ ಸ್ವರೂಪವನ್ನು ಸಿದ್ಧರಾಮನಿಗಾಗಿಯೇ ಚಿತ್ರಿಸಿದ್ದಾನೆ ಎನಿಸುವಷ್ಟು ಮೂಡಿಬಂದಿದೆ. ಆತ್ಮಸುಖಿ ಅಲ್ಲಮನು ಸಿದ್ಧರಾಮನನ್ನು ನೋಡಲು ಸೊನ್ನಲಿಗೆಗೆ ಬರುತ್ತಾನೆ. ಬಂದು ಅವನಿಗೆ

ಲಿಂಗದ ಮಹಿಮೆಯನ್ನು ಅರುಹುತ್ತಾನೆ. ಆ ಕ್ಷಣದ ಇಬ್ಬರ ನಡುವಿನ ಸಂವಾದದ ನುಡಿಗಳು ಓದುಗರನ್ನು ಮನಸೂರೆಗೊಳ್ಳುವಂತೆ ಹಿಡಿದಿಡುತ್ತವೆ. ಕಣ್ಣಿನ ಮುಂದೆ ಬೃಹತ್ ಚಿತ್ರಪಟವೇ ಮೂಡುತ್ತದೆ. ಒಂದು ರೀತಿಯ ನಾಟಕೀಯ ಶೈಲಿಯನ್ನು ಕವಿ ಇಲ್ಲಿ ತಂದಿರುವನು. ಅಲ್ಲಮನ ತಿಳುವಳಿಕೆಯ ಮಾತಿಗೆ ಪ್ರತಿವಾದಿಸಿದ ಸಿದ್ಧರಾಮನು, ಅಲ್ಲಮಪ್ರಭುವೇ ಬೆರಗು ಗೊಳಿಸುವಂತೆ ಮಾಡಿತು ಎನ್ನುತ್ತಾನೆ ಕವಿ ರಾಘವಾಂಕನು. ಕೊನೆಗೆ ಸಿದ್ಧರಾಮ ಶಿವಯೋಗಿಯು ತಾನು ಕಟ್ಟಿಸಿದ ಕೆರೆಯನ್ನು ಅಲ್ಲಮನಿಗೆ ತೋರಿಸುವನು. ಅಲ್ಲಮದೇವ ಹೊರಟು ಹೋದ ನಂತರ ಚಿಂತಿಸಿ, ಅದೇ ಕೆರೆಯ ಮಧ್ಯದಲ್ಲಿ ಸಮಾಧಿಯನ್ನು ಮಾಡಿಸಿ ಐಕ್ಯನಾಗಲು ನಿರ್ಧರಿಸುತ್ತಾನೆ. ಒಟ್ಟಾರೆ ಸಿದ್ಧರಾಮನ ಬದುಕು ಕರ್ಮಯೋಗವನ್ನು ದಾಟಿ ಶಿವಯೋಗದಲ್ಲಿ ಐಕ್ಯವಾಗುತ್ತದೆ ಎಂದು ರಾಘವಾಂಕನು ತಿಳಿಸಿದ್ದಾನೆ.

ಚಾಮರಸನ ಪ್ರಭುಲಿಂಗಲೀಲೆ:

ನೂರೊಂದು ವಿರಕ್ತರಲ್ಲಿ ಒಬ್ಬನಾದ ಚಾಮರಸ ಕವಿಯು ಅಲ್ಲಮಪ್ರಭುದೇವರನ್ನು ಕಾವ್ಯದ ನಾಯಕನನ್ನಾಗಿ ಆಯ್ದುಕೊಂಡು 'ಪ್ರಭುಲಿಂಗಲೀಲೆ' ಎಂಬ ಮಹಾಕಾವ್ಯವನ್ನು ರಚಿಸಿರುವನು. ಚಾಮರಸನು ಪ್ರಭುದೇವನ ಲಿಂಗಲೀಲೆಯನ್ನು ಹೇಳುತ್ತಾ ಸಾಗುವಾಗ ಸೊನ್ನಲಿಗೆ ಸಿದ್ಧರಾಮನೊಂದಿಗೆ ಅಲ್ಲಮ ಮುಖಾಮುಖಿಯಾದ ಪ್ರಸಂಗವನ್ನು ನಿರೂಪಿಸಿರುವನು. 13ನೇ ಗತಿಯು ಸಂಪೂರ್ಣವಾಗಿ ಸಿದ್ಧರಾಮ ಮತು ಅಲ್ಲಮಪ್ರಭುದೇವರಿಬ್ಬರ ಸಂವಾದದಿಂದ ಕೂಡಿರುವುದು. ಬಾಹ್ಯದಲ್ಲಿ ನಡೆದಂತೆ ಕಾಯಕವು ಅಂತರಂಗದಲ್ಲೂ ನಡೆಯಬೇಕು ಎಂಬುದು ಅಲ್ಲಮನ ನಿಶ್ಚಲ ನಿಲುವು. ಹಾಗಾಗಿ ಬಹಿರಂಗ ಕಾಯಕದಲ್ಲಿ ಮಗ್ನನಾಗಿರುವ ಸೊನ್ನಲಿಗೆ ಸಿದ್ಧರಾಮನಿಗೆ ಇಷ್ಟಲಿಂಗದ ಮಹತಿಯನ್ನು ತೋರಿದ ಸಂದರ್ಭ ಇಲ್ಲಿ ಸುದೀರ್ಘವಾಗಿ ಚಿತ್ರಣಗೊಂಡಿದೆ. ಕರ್ಮಯೋಗಿಯೂ, ರಾಜನೂ ಆಗಿರುವ ಸಿದ್ಧರಾಮನ ಆಲೋಚನೆಗಳಿಗೆ, ಕಾರ್ಯಗಳಿಗೆ ಅನುಭಾವಿ ಅಲ್ಲಮನ ವಿರೋಧವಿದೆ. ಸಾಧಕನಾದ ಸಿದ್ಧರಾಮನು ಮಾಡುವ ನಿತ್ಯ ಸತ್ಯದ ಕಾಯಕ ಬೇರೆಯದ್ದೇ ಆಗಿದೆಯೆಂದು ಸೈದ್ಧಾಂತಿಕವಾಗಿ ಅಲ್ಲಮಪ್ರಭುದೇವನು ಉಪದೇಶಿಸುತ್ತಾನೆ.

ಸ್ಥಾವರ ನಿರಾಕರಣೆಯನ್ನು ಕಾವ್ಯದಲ್ಲಿ ತಂದಿರುವ ಚಾಮರಸನಿಗೆ 12ನೇ ಶತಮಾನದ ಶರಣರ "ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ" ಎಂಬ ತತ್ವ ಪ್ರೇರಣೆ ಮತ್ತು ಪ್ರಭಾವ ಬೀರಿದೆ. ಕರ್ಮಯೋಗಿ ಸಿದ್ಧರಾಮನು ಕೆರೆ–ಕಟ್ಟೆ–ಬಾವಿ–ದೇವಾಲಯಗಳ ನಿರ್ಮಾಣದಲ್ಲಿ ಮುಳಿಗಿರುತ್ತಾನೆ. ಆ ಸಂದರ್ಭದಲ್ಲಿ ಅಲ್ಲಮನು ಸೊನ್ನಲಿಗೆಗೆ ಬಂದು ಸಿದ್ಧರಾಮನ ಶಿಷ್ಯರಿಗೆ "ನಿಮ್ಮ ಗುರು ಎಲ್ಲಾ ಕಲ್ಲುಗಳನ್ನು ಕೆತ್ತಿ ಅದಕ್ಕೆ ಶಿಖರವಾಗಿ ದೇವಾಲಯವನ್ನು ನಿರ್ಮಿಸಿ ಹೆಚ್ಚುತ್ತಿರುವವರು ಒಡ್ಡರಲ್ಲದೆ ಸಿದ್ಧರಲ್ಲ" (ಚಾ.ಪ್ರ.ಲೀ–ಗತಿ–13, ಪದ್ಯ–9, ಪುಟ–183) ಎಂದು ನುಡಿದನು. ಹೀಗೆ ಪ್ರಾರಂಭವಾದ ವಾಗ್ವಾದವು ಅಲ್ಲಿನ ಪ್ರಜೆಗಳಿಗೂ ಮತ್ತು ಅಲ್ಲಮನಿಗೂ ದೊಡ್ಡ ಸಂಘರ್ಷಕ್ಕೆ ಈಡುಮಾಡುತ್ತದೆ. ಅಲ್ಲಮನು ಸಂಘರ್ಷದಲ್ಲಿ ತೋರಿದ ಮಹಿಮೆಗೆ (ಕಲ್ಲುಗಳಿಂದ ಜನರು ಹೊಡೆದಾಗ ಆ ಕಲ್ಲುಗಳನ್ನು ಗುಡ್ಡೆಯಾಗಿಸಿಕೊಂಡು ಆ ಗುಡ್ಡೆಯ ಮೇಲೆ ನಿಂತ ಪ್ರಸಂಗ) ಬೆರೆಗಾದ ಪ್ರಜೆಗಳು ಸಿದ್ಧರಾಮನಿಗೆ ಮಾಹಿತಿ ನೀಡುತ್ತಾರೆ. ಆಗ

ಸಿದ್ಧರಾಮನ ಪ್ರವೇಶವಾಗುತ್ತದೆ. ಕಾಯಕಯೋಗಿ ಸಿದ್ಧರಾಮನಿಗೆ ತನ್ನ ಅಂಹಕಾರ ಅಳಿದು ಹೋಗುತ್ತದೆ. ಅಲ್ಲಮನು ಸಿದ್ಧರಾಮನಿಗೆ ಇಂದ್ರಿಯಂಗಳ ಸುಖಗಳಲ್ಲಿ ಮುಳುಗಿದ ವ್ಯಕ್ತಿಗೆ ಶರಣರ ನಡೆ–ನುಡಿ ತಿಳಿಯಲಾರವು ಮುಂತಾಗಿ ಬೋಧಿಸುತ್ತಾನೆ. ಸಿದ್ಧರಾಮ ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಕರುಣೆಯಿಂದ ಉಪದೇಶಮಾಡುವನು. ಆಗ ಸಿದ್ಧರಾಮನ ಬುದ್ಧಿಯೆಂಬ ಮಾನಸ ಸರೋವರವು ತಿಳಿಯಾಯಿತು. ಜ್ಞಾನಿಯ ಛಾಯೆ ಅವನಿಗೆ ಹೊಳೆಯಿತು. ಹೃದಯವು ಹೊಂದಿದ ಒಂಭತ್ತು ಬಗೆಯ ಚಕ್ರಕಮಲಗಳ ಸಮೂಹವನ್ನು ಸಿದ್ಧರಾಮನು ಅಲ್ಲಮನ ಉಪದೇಶದಿಂದ ತಿಳಿದನು ಎಂದು ಚಾಮರಸನು ಮನೋಜ್ಞವಾಗಿ ಪ್ರಸ್ತಾಪಿಸಿರುವನು.

ಸಿದ್ಧರಾಮ ಶಿವಯೋಗಿಯ ಜೀವನ ವೃತ್ತಾಂತವು ಈ ಮೇಲಿನ ಕಾವ್ಯಗಳಲ್ಲದೆ ಹರಿಹರನ ರಗಳೆ, ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ, ಭೀಮಕವಿಯ ಬಸವ ಪುರಾಣ, ಕಲ್ಲುಮಠದ ಪ್ರಭುದೇವನ ಲಿಂಗಲೀಲಾ ವಿಲಾಸ ಚಾರಿತ್ರ, ಶೂನ್ಯ ಸಂಪಾದನೆಯ ನಾಲ್ಕು ಕೃತಿಗಳು, ಷಡಕ್ಷರದೇವನ ಬಸವರಾಜ ವಿಜಯಂ, ಚಿಕ್ಕಸಿದ್ಧ ನಂಜೇಶನ ರಾಘವಾಂಕ ಚಾರಿತ್ರ, ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ, ಗುಬ್ಬಿಯ ಮಲ್ಲಣಾರ್ಯನ ವೀರಶೈವಾಮೃತ ಪುರಾಣ, ಮುರಿಗೆದೇಶಿಕೇಂದ್ರನ ಹಮ್ಮೀರ ಕಾವ್ಯದಲ್ಲಿ, ಬೊಮ್ಮರಸನ ಸೌಂದರ ಪುರಾಣದಲ್ಲಿಇನ್ನೂ ಮುಂತಾದ ಗ್ರಂಥಗಳಲ್ಲಿ ಚಾರಿತ್ರಿಕವಾಗಿಯೂ ಅನುಷಂಗಿಕವಾಗಿಯೂ ಉಲ್ಲೇಖಗೊಂಡಿರುವುದು ನೋಡುತ್ತೇವೆ.

ಪರಾಮರ್ಶನ ಗ್ರಂಥಗಳು

1. ವಿವೇಕ ರೈ ಬಿ.ಎ., ರಾಘವಾಂಕನ ಸಮಗ್ರ ಕಾವ್ಯ–(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2004
2. ಸದಾನಂದ ಪಾಟೀಲ, ಹರಿಹರನ ಶರಣ ರಗಳೆಗಳು–ಗದ್ಯಾನುವಾದ, ಬಸವ ಸಮಿತಿ, ಬೆಂಗಳೂರು, 2021
3. ವಿದ್ಯಾಶಂಕರ ಎಸ್., (ಸಂ), ಚಾಮರಸನ ಪ್ರಭುಲಿಂಗಲೀಲೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2010
4. ನಾಗಾರ್ಜುನ ಹಾ.ಮ.,(ಸಂ), ಸಿದ್ಧರಾಮ ಸತ್ಪಥ, ಶ್ರೀ ನಂದಿ ವಿದ್ಯಾಸಂಸ್ಥೆ, ಶಿವಮೊಗ್ಗ, 2015
5. ಹಿರೇಮಠ ಆರ್.ಸಿ., ಮಹಾಕವಿ ಷಡಕ್ಷರಿದೇವ ವಿರಚಿತ ಬಸವರಾಜ ವಿಜಯಂ, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಾಶನ, ಧಾರವಾಡ, 1968

❖❖❖

ತುಮಕೂರು ಜಿಲ್ಲೆಯ ಮೊದಲ ಸಂಸ್ಕೃತ ಶಿಲಾಶಾಸನ

ಸತೀಶ್ ಎ.ಎಂ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬುಕ್ಕಾಪಟ್ಟಣ, ತುಮಕೂರು ಜಿಲ್ಲೆ

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಹೋಬಳಿಯ ಪುಟ್ಟ ಗ್ರಾಮ ಕ್ಯಾಶವಾರ. ಗ್ರಾಮದ ಹತ್ತಿರದಲ್ಲಿ ಸುವರ್ಣಮುಖಿ ಜಯಮಂಗಲಿ ಮತ್ತು ರೌಪ್ಯ[1] ನದಿಗಳ ತ್ರಿವೇಣಿ ಸಂಗಮಸ್ಥಾನವಿದೆ. ಈ ಊರಲ್ಲಿ ಭಗ್ನಗೊಂಡಿರುವ 8ನೇ ಶತಮಾನದ ವಿಷ್ಣುಶಿಲ್ಪ ಮತ್ತು ಕನ್ನಡ–ಸಂಸ್ಕೃತ ಮಿಶ್ರಿತ ಭಾಷೆಯಲ್ಲಿ ರಚನೆಯಾದ ಶಾಸನವಿದೆ. ಈ ಶಾಸನ ತುಮಕೂರು ಜಿಲ್ಲೆಯ ಮೊದಲ ಸಂಸ್ಕೃತ ಶಿಲಾಶಾಸನವಾಗಿದೆ. ಅಷ್ಟು ಮಾತ್ರವಲ್ಲದೆ ರಾಮಾನುಜಾಚಾರ್ಯರ ಪೂರ್ವದಲ್ಲಿಯೇ ವಿಷ್ಣುವಿನ ಆರಾಧನೆ ಈ ಪ್ರದೇಶದಲ್ಲಿತ್ತು ಎಂಬುದಕ್ಕೆ ಈ ಶಾಸನ ದಾಖಲೆಯಾಗಿದೆ.

ತುಮಕೂರು ಜಿಲ್ಲೆಯಲ್ಲಿ ಸುಮಾರು ಇಪ್ಪತ್ತು ಸಂಸ್ಕೃತ ಶಾಸನಗಳಿವೆ. ಗಂಗರ ಶಾಸನದಿಂದ ಪ್ರಾರಂಭವಾಗಿ ವಿಜಯನಗರದ ಕಾಲದವರೆಗೆ ಇದು ಸೇರುತ್ತದೆ. ಅತ್ಯಂತ ಹೆಚ್ಚು ಪ್ರಮಾಣದಲ್ಲಿ ಸಂಸ್ಕೃತ ಶಾಸನಗಳು ದೊರೆತಿರುವುದೆಂದರೆ ವಿಜಯನಗರ ಕಾಲದಲ್ಲಿ. ಹೊಯ್ಸಳರ ಕಾಲದ ಒಂದು ಶಿಲಾಶಾಸನವನ್ನು ಬಿಟ್ಟರೆ ಉಳಿದ ಎಲ್ಲಾ ಶಾಸನಗಳು ತಾಮ್ರಪಟದಲ್ಲಿ ಬರೆಯಲ್ಪಟ್ಟಿವೆ.[2] ಈ ನಿಟ್ಟಿನಲ್ಲಿ ಕ್ಯಾಶವಾರದಲ್ಲಿನ ಶಾಸನ ತುಮಕೂರು ಜಿಲ್ಲೆಯ ಮೊದಲ ಸಂಸ್ಕೃತ ಶಿಲಾಶಾಸನ ಎಂಬ ಹೆಗ್ಗಳಿಕೆಗೆ ಪಾತ್ರವಾಗುತ್ತದೆ. ಶಾಸನ, ಶಾಸನ ಸಂಬಂಧಿತವಾದ ಐತಿಹ್ಯ ಹಾಗೂ ಶಾಸನದ ಪಕ್ಕದಲ್ಲೇ ಭಗ್ನಗೊಂಡಿರುವ ಕೇಶವಶಿಲ್ಪ ಇವುಗಳ ಬಗೆಗಿನ ಅಧ್ಯಯನದ ಮಾಹಿತಿಯನ್ನು ಪ್ರಸ್ತುತ ಪಡಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಕ್ಯಾಶವಾರದಲ್ಲಿ ರಾಮದೇವರ ಅಸಿಗೆ ಜಮೀನಿನಲ್ಲಿ ಭಗ್ನಗೊಂಡಿರುವ ವಿಷ್ಣುಶಿಲ್ಪದ ಬಳಿಯೇ ಲಿಪಿಯಿರುವ ಶಾಸನದ ಕಲ್ಲು ಅಂಗಾತವಾಗಿ ನೆಲಕ್ಕಂಟಿಕೊಂಡಿದೆ. ಈ ಜಮೀನಿನಲ್ಲಿ ಕೃಷಿ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿರುವುದರಿಂದ ಶಾಸನ ಕಲ್ಲು ಈಗ ಮಣ್ಣಿನಿಂದ ಮುಚ್ಚಿಹೋಗಿದೆ. ಕೆ.ಎನ್. ಭಗವಾನ್‌ರವರು ಈ ಶಾಸನದ ಪೋಟೋ ತೆಗೆದು ಅದರ ಪ್ರತಿಯನ್ನು ಅಧ್ಯಯನಕ್ಕಾಗಿ ಡಾ. ಹೆಚ್.ಎಸ್. ಗೋಪಾಲ ರಾವ್, ಡಾ.ಪಿ.ವಿ. ಕೃಷ್ಣಮೂರ್ತಿ ಮತ್ತು ಮೈಸೂರಿನ ಪ್ರಾಚ್ಯವಸ್ತು ಇಲಾಖೆಯ ವಿದ್ವಾಂಸರುಗಳಾದ ಎಸ್.ಜಗನ್ನಾಥ್ ಮತ್ತು ಎಂ.ವಿ.ವಿಶ್ವೇಶ್ವರ ಅವರಿಗೆ ಕಳುಹಿಸಿ ಅವರು ಅಧ್ಯಯನ ಮಾಡಿ ನೀಡಿದ ವಿವರ ಸಂಗ್ರಹಿಸಿರುತ್ತಾರೆ. ಪಿ.ವಿ ಕೃಷ್ಣಮೂರ್ತಿರವರು ಈ ಶಾಸನದ ಬಗ್ಗೆ ಲೇಖನ ಬರೆದು ಇತಿಹಾಸದರ್ಶನದಲ್ಲಿ ಪ್ರಕಟಿಸಿರುತ್ತಾರೆ. ಈ ಶಾಸನದಲ್ಲಿ ಕಾಲಗಣನೆಯ ಯಾವ ಅಂಶಗಳು ಇಲ್ಲದಿರುವುದರಿಂದ ಲಿಪಿಯ ಆಧಾರದ ಮೇಲೆ ಈ ಶಾಸನ 8–9ನೆಯ ಶತಮಾನದ ಗಂಗರ ಕಾಲದ ಶಾಸನ ಎಂದು ಶಾಸನ ಓದಿದ ಮೂವರು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಈ ಮೂವರು ವಿದ್ವಾಂಸರ ಶಾಸನ ಪಾಠ ಇಂತಿದೆ.

ಶಾಸನದ ಪಾಠ

1. ಸ್ವಸ್ತಿ ಶ್ರೀ/ ವಿಷ್ಣುವೇದಿತಾಯ/ ಶಿವಶಮ್ಮದೋನಿಭೂಂ/ ಜರಿಯರದತ್ತಾಗಿ/ ಕಾಯ್ದರಿ ಸಂದಾಪ/ ರಕ್ಷವ ಮಹ[3]
   (ಶುಭವಾಗಲಿ, ವಿಷ್ಣುವಿನ ಸಾಕ್ಷಿಯಾಗಿ ಶಿವಶರ್ಮ ಎಂಬಾತನಿಗೆ ಭೂಮಿಯನ್ನು ಹಿರಿಯರು ದಾನವಾಗಿ ಕೊಡಲ್ಪಟ್ಟಿದೆ. ಆ ಕಾರಣದಿಂದ ರಕ್ಷಿಸಿ ಕಾಪಾಡುವುದು.)
2. ಸ್ವಸ್ತಿ ಶ್ರೀ/ ವಿಷ್ಣವೇ ದೀಪಾಯ/ ಶಿವಶಮ್ಮಣಾ ಭೂ/ ಮಿರಿಯಮ್ದತ್ತಾ/ {ತ್ತಾರ್ಯ}ರಿಯಮ್ಧರ್ಮ್ಮರಕ್ಷ/ಣೀಯಃ[4]
   (ಸ್ವಸ್ತಿ. ಶಿವಶರ್ಮನಿಂದ ವಿಷ್ಣುದೇವರ ದೀಪಕ್ಕಾಗಿ ಈ ಭೂಮಿಯನ್ನು ಕೊಡಲ್ಪಟ್ಟಿದೆ. ಈ ಧರ್ಮವು ರಕ್ಷಿಸಲ್ಪಡಬೇಕು.)
3. ಸ್ವಸ್ತಿ ಶ್ರೀ/ ವಿಷ್ಣವೇ ದೀಪಾಯ/ ಶಿವಶಮ್ಮಣಾ ಭೂ/ ಮಿರಿಯಂದತ್ತಾ/ ತ್ತಾರ್ಯರಿಯಮ್ಧರ್ಮ್ಮ/ ರಕ್ಷಣೀಯಂ.[5]
   (ಶುಭವಾಗಲಿ, ಶಿವಶರ್ಮನಿಂದ ವಿಷ್ಣುದೇವರ ದೀಪಕ್ಕಾಗಿ ಈ ಭೂಮಿಯು ಕೊಡಲ್ಪಟ್ಟಿದೆ. ಈ ಧರ್ಮವು ರಕ್ಷಿಸಲ್ಪಡಬೇಕು.)

ಈ ಶಾಸನದಲ್ಲಿ ಅಕ್ಷರಗಳನ್ನು ಆಳವಾಗಿ ಸ್ಪಷ್ಟವಾಗಿ ಕಂಡರಿಸಲಾಗಿದ್ದರೂ ಅಕ್ಷರಗಳ ಕಂಡರಣೆ ಒಂದೇ ಗಾತ್ರದಲ್ಲಿ ಮೂಡಿಲ್ಲ ಇದರಿಂದಾಗಿ ಒಂದೆರಡು ಕಡೆ ಅಸ್ಪಷ್ಟತೆಯಿದೆ. ಮೂರನೇ ಸಾಲಿನಲ್ಲಿ ಶಿವಶಮ್ಮಣಾ ಎಂದಿರುವುದು ಪ್ರಾಕೃತ ಭಾಷೆಯ ರೂಪವಾಗಿದೆ. ಐದನೇ ಸಾಲಿನ ಮೊದಲೆರಡು ಅಕ್ಷರಗಳನ್ನು ತೀರಾ ಒತ್ತಾಗಿ ಕಂಡರಿಸಿರುವ ಕಾರಣ ಸ್ಪಷ್ಟವಾಗಿ ಓದಲು ಸಾಧ್ಯವಾಗುತ್ತಿಲ್ಲ. ಆರನೇ ಸಾಲಿನಲ್ಲಿ ಕೆಲವು ಅಕ್ಷರಗಳು ಇರುವಂತೆ ಕಾಣುತ್ತದೆಯಾದರೂ ಅವು ಸಂಪೂರ್ಣವಾಗಿ ಸವೆದು ಹೋಗಿದೆ.[6] ಈ ಶಾಸನವನ್ನು ಓದಿದ ವಿದ್ವಾಂಸರುಗಳಲ್ಲಿ ಗೋಪಾಲರಾಯರು "ಹಿರಿಯರು ಶಿವಶರ್ಮನಿಗೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ." ಎಂದು ಹೇಳಿದರೆ ಪಿ.ವಿ. ಕೃಷ್ಣಮೂರ್ತಿರವರು ಮತ್ತು ಮೈಸೂರು ಪ್ರಾಚ್ಯವಸ್ತು ಇಲಾಖೆಯ ವಿದ್ವಾಂಸರು "ವಿಷ್ಣುದೇವರ ದೀಪಕ್ಕಾಗಿ ಶಿವಶರ್ಮನಿಂದಲೇ ಈ ಭೂಮಿದಾನವಾಗಿ ಕೊಡಲ್ಪಟ್ಟಿದೆ" ಎಂದು ಹೇಳಿದ್ದಾರೆ. "ಭೂಮಿಯನ್ನು ದಾನವಾಗಿ ನೀಡಿದ್ದು ಯಾರು," ಮತ್ತು "ದೀಪಸೇವೆ" ಎಂಬ ಸಂಗತಿಯಲ್ಲಿ ಮಾತ್ರ ಗೋಪಾಲರಾಯರು ಮತ್ತು ಇಬ್ಬರು ವಿದ್ವಾಂಸರ ಶಾಸನದ ಅರ್ಥ ಮತ್ತು ಅಭಿಪ್ರಾಯಗಳಲ್ಲಿ ವ್ಯತ್ಯಾಸವಿದೆ. ಉಳಿದಂತೆ ಒಂದೇ ಆಗಿರುವುದನ್ನು ಗಮನಿಸಬಹುದು. ಶಾಸನದ ಮೂರು ಪಾಠಗಳನ್ನು ಗಮನಿಸಿದಾಗ ಈ ಪ್ರದೇಶದಲ್ಲಿ ವಿಷ್ಣುದೇಗುಲವಿದ್ದುದ್ದರ ಬಗ್ಗೆ ಮತ್ತು ವಿಷ್ಣು ಆರಾಧನೆಯ ಬಗ್ಗೆ ಮಾಹಿತಿ ಖಚಿತವಾಗುತ್ತದೆ. ಈ ಶಾಸನದಲ್ಲಿ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಯ ಬಳಕೆ ಗೋಚರಿಸುತ್ತಿರುವುದರಿಂದ ಇದು ತ್ರಿಭಾಷಾ ಶಾಸನವಾಗಿಯೂ ಕಂಡುಬರುತ್ತದೆ.

ಇನ್ನು ಶಾಸನದ ಪಕ್ಕದಲ್ಲಿ ಭಗ್ನಗೊಂಡಿರುವ ವಿಷ್ಣುಶಿಲ್ಪದ ಸ್ವರೂಪ ಹೀಗಿದೆ. ವಿಷ್ಣುಶಿಲ್ಪದ ಮೂರ್ತಿಯ ಹಣೆ, ಕಣ್ಣು, ಕಿರೀಟಗಳ ಭಾಗ ಭಿನ್ನವಾಗಿದೆ. ಮಕರಕುಂಡಲ ಕಂಠಾಭರಣ, ಕೇಯೂರ ಕಂಕಣಗಳು ದಪ್ಪ ಯಜ್ಞೋಪವೀತ, ಉದರ ಬಂಧ ಹಾಗೂ ಕಟಿಬಂಧಗಳು ಕಂಡುಬರುತ್ತವೆ. ಭಿನ್ನವಾಗಿದ್ದರೂ ಕ್ರಿ.ಶ ಸುಮಾರು 8ನೆಯ ಶತಮಾನದ ತಲಕಾಡು ಗಂಗ–ನೊಳಂಬ ಶೈಲಿಯ ಶಿಲ್ಪಲಕ್ಷಣಗಳನ್ನು ಹೊಂದಿದೆ.

ಮೂರ್ತಿಯು ಸಮಭಂಗದಲ್ಲಿ ನಿಂತಿದ್ದು ಕಟಿಪ್ರದೇಶದಿಂದ ಕೆಳಗೆ ಹೂತುಹೋಗಿದ್ದು ಬಹುಶಃ ಗದೆ, ಕಾಲು ಮತ್ತು ಪೀಠವಿರುವ ಭಾಗ ಕೂಡ ಹೂತುಹೋಗಿರುವಂತಿದೆ. ಮೂರ್ತಿಯ ಮೇಲಿನ ಬಲಗೈಲ್ಲಿ ಚಕ್ರ ಕೆಳಗಿನ ಬಲಗೈಯಲ್ಲಿ ಅಭಯ/ ಪದ್ಮ, ಮೇಲಿನ ಎಡಗೈಯಲ್ಲಿ ಶಂಖ, ಕೆಳಗಿನ ಎಡಗೈಯಲ್ಲಿ ಗದೆ(?) ಇದೆ. ಮೇಲಿನ ಲಕ್ಷಣಗಳಿಂದ ಕೂಡಿರುವ ಇದನ್ನು ಜನಾರ್ಧನ ಮೂರ್ತಿ ಶಿಲ್ಪವೆಂದು ಹೇಳಬಹುದು.[7] ಈ ಶಿಲ್ಪವೂ ಸುಮಾರು 1.2 ಮೀಟರ್‌ಎತ್ತರ, 70 ಸೆಂಟಿಮೀಟರ್ ಹಾಗೂ ಎದೆಯ ಭಾಗವೂ ಸುಮಾರು 30 ಸೆಂಟಿಮೀಟರ್ ದಪ್ಪವಿದೆ.ಈ ಸ್ವರೂಪ ಹೊಂದಿರುವ ಶಿಲ್ಪವನ್ನು ಜನಾರ್ಧನ/ಕೇಶವ ಶಿಲ್ಪ ಎಂದು ಕರೆದಿದ್ದಾರೆ. ಈ ಶಾಸನ ಮತ್ತು ವಿಷ್ಣುಶಿಲ್ಪ ಎರಡೂ ಒಂದೇ ಕಾಲಘಟ್ಟಕ್ಕೆ ಸೇರಿರುವುದರಿಂದ ಈ ಕಾಲದಲ್ಲಿ ವಿಷ್ಣುವಿನ ದೇಗುಲ ಈ ಪ್ರದೇಶದಲ್ಲಿತ್ತು ಎಂಬುದರ ಬಗ್ಗೆ ಇನ್ನಷ್ಟು ಖಚಿತತೆ ದೊರೆಯುತ್ತದೆ.

ಕ್ಯಾಶವಾರಕ್ಕೆ ಕ್ಷೇತ್ರಕಾರ್ಯಕ್ಕೆ ಹೋಗಿದ್ದಾಗ ಅಲ್ಲಿನ ಸ್ಥಳೀಯರು ನನಗೆ ಈ ಶಾಸನವಿರುವ ಸ್ಥಳವನ್ನು ಭಗ್ನಗೊಂಡಿರುವ ವಿಷ್ಣುಶಿಲ್ಪವನ್ನು ತೋರಿಸಿ ಶಾಸನದ ಬಗ್ಗೆ ಇರುವ ಐತಿಹ್ಯವನ್ನು ಹೇಳಿದರು. ಈ ಐತಿಹ್ಯ ಇಂತಿದೆ. ಕ್ಯಾಶವಾರದಲ್ಲಿ ಕೇಶವಭಟ್ಟ ಎಂಬ ವ್ಯಕ್ತಿ ಇದ್ದರಂತೆ. ರಾಮದೇವರ ಅಸಿಗೆಯಲ್ಲಿರುವ ಸಂಸ್ಕೃತ ಶಾಸನ ಕೇಶವ ಭಟ್ಟರಿಗೆ ಸಂಬಂಧಿಸಿದ ಶಾಸನ. ಅವರಿಗೆ ಹಿರಿಯರು ಭೂಮಿಯನ್ನು ನೀಡಿದ್ದರ ಬಗ್ಗೆ ಅದರಲ್ಲಿ ಬರೆದಿದೆಯಂತೆ, ಆ ಶಾಸನದ ಕೆಳಗೆ ಏಳು ಕೊಪ್ಪರಿಗೆ ನಿಧಿ ಇದೆ. ಶಾಸನದ ಕಲ್ಲಿನ ಮೇಲೆ ಬರೆದಿರುವ ಲಿಪಿ ನಿಧಿಗೆ ಸಂಬಂಧಿಸಿದ ಒಗಟಂತೆ. ಆ ಒಗಟನ್ನು ಯಾರು ಓದಿ ಅದಕ್ಕೆ ಉತ್ತರ ಹೇಳುತ್ತಾರೋ ಅವರಿಗೆ ನಿಧಿ ಸಿಗುತ್ತಂತೆ, ಕೇಶವ ಭಟ್ಟರು ಈ ಭೂಮಿಯನ್ನು ದೇವರ ಪೂಜೆಗೆ ಕೊಟ್ಟರಂತೆ. ಕೇಶವ ಭಟ್ಟರ ನಂತರ ವಾರಸುದಾರರು ಯಾರು ಇಲ್ಲದಿದ್ದರಿಂದ ಕೇಶವ ಭಟ್ಟರ ಜಮೀನು ಕಳ್ಳಿಪಾಳ್ಯದ ತಿಮ್ಮಮ್ಮ ಎಂಬಾಕೆಗೆ ವರ್ಗಾವಣೆಯಾಯಿತಂತೆ. ನಂತರದಲ್ಲಿ ತಿಮ್ಮಮ್ಮ ಆ ಜಮೀನನ್ನು ಈಗಿರುವ ಈಶ್ವರ ದೇವಾಲಯಕ್ಕೆ ಕೊಟ್ರಂತೆ.

ಈಗಲೂ ಈ ಜಮೀನಿನಲ್ಲಿ ಬರುವ ಆದಾಯ ದೇಗುಲದ ಪೂಜೆಗೆ ಮತ್ತು ಅರ್ಚಕರ ವೇತನಕ್ಕೆ ಬಳಸುತ್ತಿದ್ದಾರೆ ಎಂದು ಸ್ಥಳೀಕರು ಹೇಳಿದರು. ಶಾಸನದಲ್ಲಿ ದಾನ ನೀಡಿರುವ ವ್ಯಕ್ತಿ ಶಿವಶರ್ಮ ಎಂದಿದೆ, ಐತಿಹ್ಯದಲ್ಲಿ ಕೇಶವಭಟ್ಟ ಎಂದಿದೆ. ಶಾಸನಕ್ಕೂ ಮತ್ತು ಐತಿಹ್ಯಕ್ಕೂ ಈ ವಿಚಾರದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಇದನ್ನು ಹೊರತುಪಡಿಸಿದರೆ ಉಳಿದ ವಿಚಾರಗಳಲ್ಲಿ ಶಾಸನ ಮತ್ತು ಐತಿಹ್ಯಕ್ಕೆ ಸಾಮ್ಯತೆಯಿರುವುದು ಕಂಡುಬರುತ್ತದೆ.

ಈ ಶಾಸನ, ಭಗ್ನಗೊಂಡಿರುವ ವಿಷ್ಣುಶಿಲ್ಪ ಮತ್ತು ಸ್ಥಳೀಯ ಶಾಸನಸಂಬಂಧಿತವಾದ ಐತಿಹ್ಯಅಲ್ಲಿ ವಿಷ್ಣುದೇಗುಲವಿದ್ದುದರ ಬಗ್ಗೆ ನಿಖರವಾಗಿ ಹೇಳುತ್ತದೆ. ಶಾಸನ ಮತ್ತು ಶಿಲ್ಪದ ಕಾಲ ಸಾ.ಶ ಎಂಟನೇ ಶತಮಾನ. ರಾಮಾನುಜಾಚಾರ್ಯರು ಕರ್ನಾಟಕಕ್ಕೆ ಬರುವ ಮುನ್ನವೇ ಈ ಪ್ರದೇಶದಲ್ಲಿ ವಿಷ್ಣದೇಗುಲವಿದ್ದುದರ ಬಗ್ಗೆ ಈ ದಾಖಲೆಗಳು ತಿಳಿಸುತ್ತವೆ. ಅಷ್ಟೇ ಅಲ್ಲದೆ, ಹಲವು ವಿಚಾರಗಳ ಮೇಲೆ ಈ ಶಾಸನ ಬೆಳಕು ಬೀರಲು ಸಹಾಯಕವಾಗಿದೆ.

ಹೈದರಾಲಿಯ ಪ್ರಧಾನರಾಗಿದ್ದ ವೆಂಕಪ್ಪಯ್ಯನವರ ಪೂರ್ವಿಕರಾದ ಹಂಪಾರ್ಯ ಮತ್ತು ರಾಮದಾಸಯ್ಯ ಸೋದರರರು ಗೋದಾವರಿಕ್ಷೇತ್ರದಿಂದ ಗಜಾರಣ್ಯಕ್ಷೇತ್ರಕ್ಕೆ[8]

ವಲಸೆ ಬಂದರೆಂದು ಹೇಳಲಾಗಿದೆ.[9] ಇವರು ವಲಸೆ ಬಂದ ಕಾಲ ಸಾ.ಶ. ಎಂಟು ಅಥವಾ ಒಂಭತ್ತನೇ ಶತಮಾನ ಎಂದು ಗುರುತಿಸಲಾಗಿದೆ. ವಲಸೆ ಬಂದ ವೆಂಕಪ್ಪಯ್ಯನ ಪೂರ್ವಿಕರಿಂದ ಕ್ಯಾಶವಾರದಲ್ಲಿ ವಿಷ್ಣು ದೇಗುಲ ನಿರ್ಮಾಣವಾಗಿರುವ ಸಾಧ್ಯತೆ ಇರಬಹುದು. ಕಾರಣವಿಷ್ಟೇ, ಇವರ ಪೂರ್ವಿಕರಿಂದಲೇ ಅಕ್ಕಿರಾಂಪುರದಲ್ಲಿ ವೆಂಕಟೇಶ್ವರ ಸ್ವಾಮಿಯ ದೇಗುಲ ನಿರ್ಮಾಣವಾಗಿದೆ. ಈ ಕ್ಯಾಶವಾರ ಅಕ್ಕಿರಾಂಪುರದಿಂದ ಎರಡು ಅಥವಾ ಮೂರು ಕಿ.ಮೀ. ದೂರದಲ್ಲಿದೆ. ಈ ಭಾಗಕ್ಕೆ ವಲಸೆ ಬಂದ ಅವರ ಪೂರ್ವಿಕರು ಮೊದಲು ಕ್ಯಾಶವಾರ ಪ್ರದೇಶದಲ್ಲಿ ನೆಲೆಸಿದ್ದು ಅಲ್ಲಿದೇಗುಲ ನಿರ್ಮಾಣ ಮಾಡಿ ಆರಾಧನೆ ಮಾಡುತ್ತಿದ್ದು, ನದಿಯ ಪ್ರವಾಹಕ್ಕೋ ಪ್ರಕೃತಿವಿಕೋಪಕ್ಕೋ ಅಥವಾ ಇತರೆ ಕಾರಣಗಳಿಂದಲೋ ದೇವಾಲಯ ನಾಶಹೊಂದಿದ ಮೇಲೆ ಅವರು ಮತ್ತೆ ತಮ್ಮ ದೈವ ಆರಾಧನೆಗಾಗಿ ಅಕ್ಕಿರಾಂಪುರದ ಪ್ರದೇಶಕ್ಕೆ ಬಂದು ವೆಂಕಟೇಶ್ವರ ಸ್ವಾಮಿಯ ದೇಗುಲ ನಿರ್ಮಾಣ ಮಾಡಿರಬಹುದು ಎಂದು ಊಹಿಸಬಹುದಾಗಿದೆ.

ಮಂಡ್ಯಜಿಲ್ಲೆಯ ಹಳ್ಳಿಗೆರೆಯ ಶಾಸನ. ಈ ಶಾಸನದ ಕಾಲ ಸಾ.ಶ.713 ಅಂದರೆ ಎಂಟನೇ ಶತಮಾನ. ಇದು ತಾಮ್ರಪಟದ ಮೇಲೆ ಕೊರೆದಿರುವ ದಾನಶಾಸನವಾಗಿದೆ. ಈ ಶಾಸನದಲ್ಲಿ 68 ಸಾಲುಗಳಿವೆ. ಶಾಸನದ ಮೊದಲ ಮೂವತ್ತಮೂರು ಸಾಲುಗಳು ಪ್ರಶಸ್ತಿಗೆಂದು ಮೀಸಲಾಗಿದೆ. ಇಲ್ಲಿ ಆರಂಭದಿಂದ ಮೊದಲನೇ ಶಿವಮಾರನವರೆಗಿನ ಗಂಗ ಮನೆತನದ ಅರಸುಗಳ ವಂಶಾವಳಿಯನ್ನು ಸವಿಸ್ತಾರವಾಗಿ ನಿರೂಪಿಸಲಾಗಿದೆ. ಮೂವತ್ತನಾಲ್ಕನೆಯ ಸಾಲಿನಿಂದ ದಾನದ ವಿವರಣೆಯಿದೆ. ಈ ಶಾಸನದಲ್ಲಿ ಅನೇಕ ಮಂದಿ ಬ್ರಾಹ್ಮಣರಿಗೆ ನೀರೆರೆದು ಭೂಮಿಯನ್ನು ದಾನ ನೀಡಿರುವ ವಿವರವಿದೆ.[10] ಶಾಸನದ ಐವತ್ತೊಂದನೇ ಸಾಲು ಮತ್ತು ಐವತ್ತಾರನೇ ಸಾಲಿನಲ್ಲಿ ಶಿವಮಾರಶರ್ಮ್ಮಣಾ ಮತ್ತು ಶಿವಶರ್ಮ್ಮಣೇ ಎಂಬ ಹೆಸರಿನ ಉಲ್ಲೇಖ ಬರುತ್ತದೆ. ಶಿವಶರ್ಮ್ಮ ಎಂಬ ವ್ಯಕ್ತಿ ಇಲ್ಲಿ ದಾನವನ್ನು ಪಡೆದಿರುವುದರ ವಿವರವಿದೆ. ಕ್ಯಾಶವಾರ ಶಾಸನದಲ್ಲಿ ಉಲ್ಲೇಖವಾಗಿರುವ ವ್ಯಕ್ತಿಯ ಹೆಸರೂ ಕೂಡ ಶಿವಶರ್ಮ್ಮ ಎಂದು. ಎರಡೂ ಶಾಸನಗಳು ಎಂಟನೇ ಶತಮಾನಕ್ಕೆ ಸೇರಿದ್ದು ಗಂಗರ ಕಾಲದ ಶಾಸನಗಳೇ ಆಗಿರುವುದರಿಂದ ಎರಡೂ ಶಾಸನದಲ್ಲಿನ ಶಿವಶರ್ಮ್ಮಾ ಒಬ್ಬನೇ ಇರಬಹುದಾ ಎಂಬುದು ನಮ್ಮ ಊಹೆಯಾಗಿದೆ. ಈ ಶಿವಶರ್ಮ್ಮನಿಂದಲೇ ಅಲ್ಲಿ ವಿಷ್ಣುದೇವಾಲಯ ನಿರ್ಮಾಣವಾಗಿರಬಹುದು ಅಥವಾ ನಿರ್ಮಾಣವಾಗಿರುವ ದೇವಾಲಯದ ಅಭಿವೃದ್ಧಿಗೆ ಈತ ಭೂಮಿಯನ್ನು ದಾನ ನೀಡಿರಬಹದಾದ ಸಾಧ್ಯತೆ ಇದೆ.

ಚೋಳ ಆಳ್ವಿಕೆಯ ಪ್ರಾರಂಭದ ರಾಜರು ವೈಷ್ಣವ ಧರ್ಮಕ್ಕೆ ಬೆಂಬಲ ನೀಡುತ್ತಿದ್ದರಷ್ಟೇ ಅಲ್ಲದೆ ತಮಿಳು ವಲಸಿಗರ ಆರ್ಥಿಕ ಆಸಕ್ತಿಗಳಿಗೆ ಮತ್ತು ಅವರ ಭಾಷೆ ಹಾಗೂ ಸಂಸ್ಕೃತಿಯನ್ನು ಬೆಳೆಸುವುದಕ್ಕೆ ಪೂರ್ತಿಯಾಗಿ ಒತ್ತಾಸೆ ನೀಡಿದ್ದರು ಎಂದು ತೋರುತ್ತದೆ.[11] ಎಂದು ಹೇಳಿ ಷ.ಶೆಟ್ಟರ್‌ರವರು ರಾಮಾನಜಾಚಾರ್ಯರ ಪೂರ್ವದಲ್ಲಿಯೇ ಕರ್ನಾಟಕದಲ್ಲಿ ವಿಷ್ಣುದೇಗುಲಗಳ ಸ್ಥಾಪನೆ ಮತ್ತು ಆರಾಧನೆಯ ಬಗ್ಗೆ ಆಧಾರಸಹಿತ ವಿವರಣೆ ನೀಡಿದ್ದಾರೆ.

ಕ್ಯಾಶವಾರದಲ್ಲಿರುವ ಭಗ್ನಗೊಂಡಿರುವ ವಿಷ್ಣುಶಿಲ್ಪ ಮತ್ತು ಶಾಸನ ತುಂಬಾ ಮುಖ್ಯವಾದದ್ದು. ಇದರಿಂದ ಕ್ಯಾಶವಾರದಲ್ಲಿ ವಿಷ್ಣುದೇಗುಲವಿದ್ದುದು ಖಚಿತವಾಗುತ್ತದೆ. ಈ ದೇಗುಲ ನದಿಯ ಪ್ರವಾಹಕ್ಕೆ ಸಿಲುಕಿಯೋ ಅಥವಾ ಬೇರೆ ಕಾರಣಗಳಿಂದಲೋ

ನಾಶವಾಗಿರಬಹುದು. ಈ ಕಾಲಘಟ್ಟದಲ್ಲಿ ತುಮಕೂರು ಜಿಲ್ಲೆಯಲ್ಲಿ ಶಿವನಿಗೆ ಸಂಬಂಧಿತ ದೇಗುಲ ಮತ್ತು ಶಿಲ್ಪಗಳು ಹಾಗೂ ಜೈನರ ಬಸದಿ ಮತ್ತು ಶಿಲ್ಪಗಳು ಅಧಿಕವಾಗಿದೊರೆಯುತ್ತದೆ. 8 ರಿಂದ 10ನೆಯ ಶತಮಾನದ ಅವಧಿಯಲ್ಲಿ ತುರುವೇಕೆರೆ ತಾಲ್ಲೂಕು ಹುಲಿಕಲ್ಲು ಗ್ರಾಮದಲ್ಲಿ ಗಂಗರ ಕಾಲದ ಜನಾರ್ಧನಮೂರ್ತಿಯ ಶಿಲ್ಪ ಕಂಡುಬಂದಿದೆ.[12] ಅದನ್ನು ಹೊರತುಪಡಿಸಿದರೆ ತುಮಕೂರು ಜಿಲ್ಲೆಯಲ್ಲಿ ವಿಷ್ಣುಸಂಬಂಧಿತ ಪ್ರಾಚೀನಶಿಲ್ಪಗಳು ಕಂಡುಬಂದಿರುವುದು ತುಂಬಾ ವಿರಳ. ಈ ಹಿನ್ನಲೆಯಲ್ಲಿ ಭಗ್ನಗೊಂಡಿರುವ ಜನಾರ್ಧನಮೂರ್ತಿ ಮತ್ತು ಶಾಸನ ತುಂಬಾ ಮಹತ್ವವನ್ನು ಪಡೆಯುತ್ತದೆ.

ಈ ಎಲ್ಲಾ ಉಲ್ಲೇಖಗಳು ಮತ್ತು ಕ್ಯಾಶವಾರದ ಶಾಸನ, ಭಗ್ನಗೊಂಡಿರುವ ವಿಷ್ಣುಶಿಲ್ಪ ಮತ್ತು ಶಾಸನ ಸಂಬಂಧಿತ ಐತಿಹ್ಯದ ಆಧಾರದ ಮೇಲೆ ಈ ಪ್ರದೇಶದಲ್ಲಿ ಎಂಟನೇ ಶತಮಾನದಲ್ಲಿಯೇ ವಿಷ್ಣುದೇಗುಲವಿದ್ದು ಜನರು ವಿಷ್ಣುವಿನ ಪೂಜೆ ಆರಾಧನೆಯಲ್ಲಿ ತೊಡಗಿದ್ದರು ಎಂಬುದು ತಿಳಿಯುತ್ತದೆ. ಈ ಶಾಸನದಲ್ಲಿ ಕನ್ನಡ, ಸಂಸ್ಕೃತ ಮತ್ತು ಪ್ರಾಕೃತ ಭಾಷೆಯ ಬಳಕೆಯಿರುವುದರಿಂದ ಭಾಷಾದೃಷ್ಟಿಯಿಂದಲೂ ಈ ಶಾಸನ ಅತ್ಯಂತ ಮಹತ್ವವನ್ನು ಪಡೆದುಕೊಂಡಿದೆ. ಈ ನಿಟ್ಟಿನಲ್ಲಿ ಈ ಪ್ರದೇಶದಲ್ಲಿ ಉತ್ಖನನಗಳು ಜರುಗಿ ಆಳವಾದ ಸಂಶೋಧನೆಗಳು ನಡೆದರೆ ವಿಷ್ಣು ಆರಾಧನೆ, ಅಂದಿನ ಜನಜೀವನ, ಸಂಸ್ಕೃತಿ ಮತ್ತು ಈ ಮೂರು ಭಾಷೆಯ ಬೆಳವಣಿಗೆ ಮತ್ತು ಬಳಕೆಯ ಬಗ್ಗೆ ಮತ್ತಷ್ಟು ಹೆಚ್ಚಿನ ಮಾಹಿತಿಗಳು ಲಭ್ಯವಾಗುವುದರಲ್ಲಿ ಸಂಶಯವಿಲ್ಲ.

ಕೊನೆಟಿಪ್ಪಣಿ ಹಾಗೂ ಪರಾಮರ್ಶನ ಗ್ರಂಥಗಳು

1. ಅಕ್ಕಿರಾಂಪುರದ ವೆಂಕಟೇಶ್ವರ ಚರಿತೆ ಪುಸ್ತಕದಲ್ಲಿ ರೌಪ್ಯನದಿ ಗುಪ್ತಗಾಮಿನಿಯಾಗಿ ಹರಿಯುತ್ತಿತ್ತು ಎಂಬುದರ ಬಗ್ಗೆ ಉಲ್ಲೇಖವಿದೆ. ಹೆಚ್ಚಿನ ವಿವರಗಳಿಗೆ ಲ.ನ. ಸ್ವಾಮಿಯವರ ವೆಂಕಮಾತ್ಯ ಪುಸ್ತಕ ನೋಡಬಹುದು.
2. ಗೋಪಾಲ್ ಆರ್. (ಸಂ) ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ, 2009, ಲೇ: ರವಿಶಂಕರ್ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ ಮೈಸೂರು. ಪು.30
3. ಗೋಪಾಲರಾವ್ ಹೆಚ್.ಎಸ್. ರವರು ಓದಿ ಅರ್ಥೈಸಿರುವ ಶಾಸನ ಪಾಠ.
4. ಕೃಷ್ಣಮೂರ್ತಿ ಪಿ.ವಿ. ರವರು ಓದಿ ಅರ್ಥೈಸಿರುವ ಶಾಸನ ಪಾಠ.
5. ಮೈಸೂರು ಪ್ರಾಚ್ಯವಸ್ತು ಇಲಾಖೆಯ ವಿದ್ವಾಂಸರಾದ ಎಸ್.ಜಗನ್ನಾಥ್ ಮತ್ತು ಎಂ.ವಿ.ವಿಶ್ವೇಶ್ವರರವರು ಓದಿ ಅರ್ಥೈಸಿರುವ ಶಾಸನ ಪಾಠ.
6. ಕೃಷ್ಣಮೂರ್ತಿ ಪಿ.ವಿ. ಮತ್ತು ಕಾರ್ತೀಕ್ ಎಸ್. ಕ್ಯಾಸವಾರಗ್ರಾಮದ ಅಪ್ರಕಟಿತ ಶಾಸನ ಮತ್ತು ವಿಷ್ಣುಶಿಲ್ಪ. 2012, ಇತಿಹಾಸ ದರ್ಶನ, ಸಂಪುಟ–27, ಡಾ.ಪಿ.ವಿಕೃಷ್ಣಮೂರ್ತಿ ಮತ್ತು ಜಿ. ಕೆ. ದೇವರಾಜಸ್ವಾಮಿ, (ಸಂ.) ಕರ್ನಾಟಕ ಇತಿಹಾಸ ಅಕಾಡೆಮಿ (ರಿ.) ಬೆಂಗಳೂರು, ಪು. 63.
7. ಕೃಷ್ಣಮೂರ್ತಿ ಪಿ.ವಿ. ಮತ್ತು ಕಾರ್ತೀಕ್ ಎಸ್. ಕ್ಯಾಸವಾರ ಗ್ರಾಮದ ಅಪ್ರಕಟಿತ ಶಾಸನ ಮತ್ತು ವಿಷ್ಣುಶಿಲ್ಪ. 2012, ಇತಿಹಾಸ ದರ್ಶನ, ಪೂರ್ವೋಕ್ತ ಪು. 63.
8. ಗಜಾರಣ್ಯಕ್ಷೇತ್ರ ಎಂಬುದು ಕೊರಟಗೆರೆ ತಾಲ್ಲೂಕಿನಲ್ಲಿರುವ ಅಕ್ಕಿರಾಂಪುರದ ಪ್ರಾಚೀನ ಹೆಸರಾಗಿದೆ. ಗಜಾರಣ್ಯಕ್ಷೇತ್ರ–ರಾಮನಾಯಕನಹಳ್ಳಿ– ಅಕ್ಕಿರಾಂಪುರ ಹೀಗೆ ಈ ಪ್ರದೇಶಕ್ಕೆ ಸ್ಥಳನಾಮದ ಹಿನ್ನಲೆಯಿದೆ.

9. ಲ.ನ.ಸ್ವಾಮಿ, ಮೈಸೂರು ಸಂಸ್ಥಾನದ ರಾಜಕಾರ್ಯದುರಂಧರ ವೆಂಕಮಾತ್ಯ, 2022, ಸುಹಾಸ್ ಗ್ರಾಫಿಕ್ಸ್ ಬೆಂಗಳೂರು.ಪು.74.
10. ಚಂದ್ರಶೇಖರ್ ಎಸ್ ಮತ್ತು ಸುರೇಂದ್ರ ರಾವ್ ಬಿ, (ಸಂ) ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, 2016, ಲೇ:ಮನು ವಿ.ದೇವದೇವನ್, ಭೂನಿಯಂತ್ರಣ, ಕೃಷಿ, ಉತ್ಪಾದನೆ–ಪ್ರಭುತ್ವದ ನೆಲೆಗಳಲ್ಲಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು. ಪು.223.
11. ಷ.ಶೆಟ್ಟರ್, ವೈಷ್ಣವದಿಂದ ಶ್ರೀವೈಷ್ಣವಕ್ಕೆ, 2020, ಅಭಿನವ ಬೆಂಗಳೂರು. ಪು.2 &3
12. ಕಲ್ಪಸಿರಿ, 2002, (ಸಂ) ಬಿ ನಂಜುಂಡಸ್ವಾಮಿ, ಲೇಖನ, ತುಮಕೂರು ಜಿಲ್ಲೆಯ ವಾಸ್ತುಶಿಲ್ಪ, ಪ್ರೊ. ಡಿ.ವಿ. ಪರಮಶಿವಮೂರ್ತಿ, ಕ.ಸಾ.ಪ. ಬೆಂಗಳೂರು, ಪು. 185.

❖❖❖

ನೆಲದಲಿ ನೆರಳನು ಹರಡೆ
ಗೆಲ್ಲುಗಳಲಿ ಪಲ್ಲವವೇ
ಬಯಲಿನ ಬೆಳುದಿಂಗಳಲೂ
ಕಪ್ಪನೆ ಎಲೆ ಹಂದರವೇ

ತೈಲೂರು ವೆಂಕಟಕೃಷ್ಣ ಅವರ 'ಅಗ್ನಿಕುಂಡ' ಕಾದಂಬರಿಯಲ್ಲಿ ಗಾಂಧಿ ಚಿಂತನೆಗಳು

ಡಾ. ಸುಂದರಿ ಡಿ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಊರು 'ತೈಲೂರು', ಇದು ಸ್ಥಳನಾಮವಾಗಿ, ವ್ಯಕ್ತಿನಾಮವಾಗಿ ಜನಮನಕ್ಕೆ ಹತ್ತಿರವಾಗಿದ್ದು ಶ್ರೀಯುತ ಹೆಚ್. ವೆಂಕಟಕೃಷ್ಣೇ ಗೌಡ ಅವರಿಂದ. ಇವರು ತೈಲೂರು ವೆಂಕಟಕೃಷ್ಣ ಎಂದೇ ಜನಜನಿತವಾದವರು. 20ನೇ ಶತಮಾನದ ಉತ್ತರಾರ್ಧದಲ್ಲಿ ಬರವಣಿಗೆಗಿಳಿದ ಇವರು ಕಾದಂಬರಿಗಳು, ಸಂಶೋಧನಾ ಗ್ರಂಥಗಳು, ಸಣ್ಣ ಕಥೆಗಳು, ಲೇಖನಗಳು ಮೊದಲಾದ ಪ್ರಕಾರಗಳಲ್ಲಿ ಕೃತಿರಚನೆ ಮಾಡಿ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

ತೈಲೂರರವಿ ಮೊದಲ ಕಾದಂಬರಿ 'ಅಗ್ನಿಕುಂಡ' ಇದು ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆ. ಹಳ್ಳಿಯ ಜನ ಬರದ ಅಗ್ನಿಕುಂಡದಲ್ಲಿ ಬಿದ್ದು ಬೆಂದ ಕಥೆ ಇದಾಗಿದ್ದು ಗ್ರಾಮೀಣ ಬದುಕಿನ ನೈಜ ಚಿತ್ರಣದೊಡನೆ ಜಾಗತೀಕರಣದ ಪ್ರಭಾವದಿಂದ ಹಳ್ಳಿಗಳು ಅತಂತ್ರ ಸ್ಥಿತಿ ತಲುಪಿರುವ ಕಠೋರ ಸತ್ಯವನ್ನು ಕಾಣಿಸುತ್ತದೆ. ಇದರಲ್ಲಿ ಗಾಂಧಿಯವರ ಚಿಂತನೆಗಳ ದಟ್ಟ ಪ್ರಭಾವವನ್ನೂ ಕಾಣಬಹುದು.

ಗಾಂಧಿ ದೃಷ್ಟಿಯಲ್ಲಿನ 'ಗ್ರಾಮ ಸ್ವರಾಜ್ಯ' ಅದೊಂದು ಪರಿಪೂರ್ಣ ಪ್ರಜಾರಾಜ್ಯ. ತನ್ನ ಪ್ರಧಾನ ಅವಶ್ಯಕತೆಗಳಲ್ಲಿ ಅದು ಸ್ವತಂತ್ರ, ನೆರೆ–ಹೊರೆಯವರನ್ನದು ಅವಲಂಬಿಸದು. ಆದರೂ ಅವಲಂಬನೆ ಅಗತ್ಯವಾದ ಎಷ್ಟೋ ವಿಷಯಗಳಲ್ಲಿ ಪರಸ್ಪರಾವಲಂಬಿ, ಪ್ರತಿಯೊಂದು ಕೆಲಸವನ್ನೂ ಸಹಕಾರತತ್ತ್ವದ ಆಧಾರದ ಮೇಲೆಯೇ ಕೈಗೊಳ್ಳಲಾದೀತು.

ತನ್ನ ಆಹಾರದ ಬೆಳೆ ತಾನೇ ಬೆಳೆಯುವುದು. ಬಟ್ಟೆಗಾಗಿ ಹತ್ತಿ ಬೆಳೆಯುವುದು ಪ್ರತೀ ಹಳ್ಳಿಯ ಪ್ರಥಮ ಲಕ್ಷ್ಯ. ದನಕರುಗಳಿಗಾಗಿ ಹುಲ್ಲುಗಾವಲು, ಮಕ್ಕಳಿಗಾಗಿ ಆಟಕ್ಕೆ ಮನರಂಜನೆಗೆ ಸ್ಥಳ ಇರಬೇಕು. ಇದಕ್ಕೆಲ್ಲಾ ಆಗಿ ಹೆಚ್ಚು ಭೂಮಿ ಮಿಕ್ಕರೆ ಅದರಲ್ಲಿ ಗಾಂಜಾ, ಅಫೀಮು, ತಂಬಾಕುಗಳನ್ನು ಬಿಟ್ಟು ಇತರ ಉಪಯೋಗಕರ ಹಣದ ಬೆಳೆಗಳನ್ನು ಬೆಳೆಯಬಹುದು. ಹಳ್ಳಿ–ಹಳ್ಳಿಯಲ್ಲೂ ನಾಟಕಮಂದಿರ, ಶಾಲೆ, ಸಭಾಭವನ ಇದ್ದಾವು. ಶುದ್ಧ ನೀರನ್ನು ಒದಗಿಸುವ ನೀರಿನ ಪೂರೈಕೆ ಕೇಂದ್ರ ಇದ್ದೀತು. ಮೂಲ ಶಿಕ್ಷಣದ ಅವಧಿಯಲ್ಲಿ ಶಿಕ್ಷಣ ಪೂರಾ ಕಡ್ಡಾಯ. ಜೊತೆಗೆ ತಮ್ಮ ಸನ್ನಿವೇಶಕ್ಕೆ ತಕ್ಕಂಥ ವೃತ್ತಿ ಶಿಕ್ಷಣವನ್ನು ಮಕ್ಕಳಿಗೆ ಕೊಡಬೇಕು. ಸಮಗ್ರ ಗ್ರಾಮಾಭ್ಯುದಯ, ಹಣದ ಸ್ಥಾನ, ಗ್ರಾಮಸ್ವಚ್ಛತೆ, ವೈದ್ಯಕೀಯ ಪರಿಹಾರ, ನಿಸರ್ಗ ಚಿಕಿತ್ಸೆ ಆರೋಗ್ಯ ನಿಯಮ, ಗ್ರಾಮದ ಆಹಾರ, ಸ್ಥಳೀಯ ಉತ್ಪಾದಕತೆಗಳ ಬಳಕೆ, ಸಿದ್ದವಿರುವ ಶಕ್ತಿಯ ಬಳಕೆ– ಹೀಗೆ ಗಾಂಧಿಯ ಇಂತಹ ಹಲವು ಚಿಂತನೆಗಳು ತೈಲೂರರ 'ಅಗ್ನಿಕುಂಡ' ಕಾದಂಬರಿಯಲ್ಲಿ ದಟ್ಟವಾಗಿ ಅಭಿವ್ಯಕ್ತವಾಗಿರುವುದನ್ನು ಕಾಣಬಹುದಾಗಿದೆ.

ಹೊನ್ನಾಳಿ ದೊಡ್ಡಿಯಲ್ಲಿ ಹಿಂದೆ ಗೋಸಂಪತ್ತು ಅಧಿಕವಾಗಿದ್ದಾಗ

ಗೋವುಗಳನ್ನು ಕೂಡಿ ಹಾಕಲಾಗುತ್ತಿದ್ದ ಊರು. ಆ ಊರಿನ ಗಂಗವ್ವ ಹೊನ್ನಾಳಿ ಗ್ರಾಮದ ಬೊಮ್ಮನಾಯಕನನ್ನು ಕೈಹಿಡಿದು 55 ವರ್ಷಗಳಾಗಿವೆ. ಇಬ್ಬರ ಊರೂ ಸುಭಿಕ್ಷವಾಗಿದ್ದವುಗಳೇ. ಇದ್ದಾಗ ಕೊಡುಗೈದಾನಿಗಳಾಗಿದ್ದವರು. ಆದರೀಗ ಮಳೆ, ಬೆಳೆ ಇಲ್ಲದೇ ಇಕ್ಕಟ್ಟಿಗೆ ಸಿಲುಕಿದ್ದಾರೆ.

ಕಾದಂಬರಿಯ ಆರಂಭವೇ ಮೊದಲ ತಲೆಮಾರಿನ ಅಜ್ಜ ಬೊಮ್ಮನಾಯಕ ಮತ್ತು ಮೂರನೇ ತಲೆಮಾರಿನ ಮೊಮ್ಮಗ ಗೋಪಾಲನ ಸಂಭಾಷಣೆಯೊಂದಿಗೆ ಆರಂಭವಾಗುವುದು ವಿಶೇಷ. ಭಾರೀ ಗಾತ್ರದ ಅರಳೀಮರ ಕಂಡು ತಾತನು ಮೊಮ್ಮಗನಿಗೆ 'ಎಷ್ಟೋ ಮಾತುಗಳು ನಡೆದು ಬಗೆಹರಿಯದ ಎಷ್ಟೋ ವ್ಯಾಜ್ಯಗಳೂ ತೀರ್ಮಾನವಾಗಿದ್ದವು'.(ಅಗ್ನಿಕುಂಡ ಪು–5) ಎಂದು ಹೇಳುತ್ತಾ ಹಳೆಯದನ್ನು ಮೆಲುಕು ಹಾಕುತ್ತಾನೆ. ಇದೇ ಗಾಂಧಿ ಕಲ್ಪನೆಯ ನ್ಯಾಯ ನಿರ್ಣಯದ ಪರಿಯೂ ಆಗಿದ್ದಿತು. ಗಾಂದಿ ಕಲ್ಪನೆಯಲ್ಲಿ ಅರಳೀಕಟ್ಟೆಯೇ ನ್ಯಾಯನಿರ್ಣಯದ ಕೇಂದ್ರಸ್ಥಾನವಾಗಬೇಕು. ಇಲ್ಲಿ ವ್ಯಾಜ್ಯ, ಕೋರ್ಟು, ಪೊಲೀಸರು, ಬೇಕಾಗಿಲ್ಲವೆಂಬ ಆಲೋಚನಾಕ್ರಮ ಇದೆ.

ತಾತ ಮೊಮ್ಮಗನ ಮೂತುಕತೆ ಮುಂದುವರಿದು ಸರ್ಕಾರದಿಂದ ಒಂದು ಕೊಳವೆ ಬಾವಿ ವಿಫಲವಾದ ವರದಿಯನ್ನು ಗೋಪಾಲ–ತಾತನಿಗೆ ನೀಡಿದರೆ ತಾತ ಹೇಳುವ ಮಾತು "ಅದೆಂಗೆ ನೀರ್ ಸಿಕ್ಕಾತು? ಆಕಾಶಕ್ಕೂ ಭೂಮ್ಗೂ ನಂಟು ಕಿತ್ತೋಗದ" (ಪು.6). ಈ ನಂಟು ಕೀಳಲು ಮಾನವನ ಅತ್ಯಾಸೆಯೇ ಕಾರಣ ಎನ್ನುವ ವಿಷಾದವನ್ನು ಲೇಖಕರು ಬೊಮ್ಮನಾಯಕನ ಮಾತಿನ ಮೂಲಕ ಹೀಗೆ ಹೊರಹಾಕುತ್ತಾರೆ. "ಥತ್ ಅವರು ಎಕ್ಕುಟ್ಟೋಗ.... ಬೋರೆದ್ಯಾವು ಬಂಡೇನೆಲ್ಲ ಹೊಡದಾಕುದ್ರು ಬೆಣ್ಣೆ ಕರಗ್ದಂಗೆ ಕರಗೋಯ್ತು! ಅದೆಲ್ಗೆ ಹೊತ್ಗ ಹೋದಾರೋ!! ಊರ್ ತೋಪು, ಗೋಮಾಳನೆಲ್ಲ ನುಂಗಾಕಂಡ್ರು... ಬೆಟ್ಟದ ಕೆಳಗಲ ಕಾಡು ಎಂಗಿತ್ತು? ಹಸ್ರಮಯ! ಎಂತೆಂಥ ಮರಗಳಿದ್ವೋ? ಬೋಳ್ಸಾಕುದ್ರು, ಯಾಚಾಟಿ ಕಾಡಂದಿ ಇದ್ದೋ. ಎಲ್ಲಾ ಹೊಡ್ದು ಉರುಳುಸುದ್ರು... ನವಿಲು, ಮೊಲ, ಹಕ್ಕಿ ಎಲ್ಲಾ ತೀರ್ಸುದ್ರು.... ದ್ಯಾವರು ಮಾಡಿದ್ದೆಲ್ಲ ಹಾಳ್ ಮಾಡುದ್ರು, ಮಳೆ ಬಾ ಅಂದ್ರೆ ಎಂಗ್ ಬತ್ತೈತೆ? ಬೆಟ್ಟಗುಡ್ಡ ಕಾಡು ಉಳೀಲಿ ಅಂಥ ದ್ಯಾವರ್ನ ಕೂರುಸುದ್ರೂ ಅದ್ನೂ ಬುಡಾಕಿಲ್ಲ ಅಂತಾರೆ ದರಿದ್ರ ಜನ...!(ಪು.20). ಆದರೆ ಗಾಂಧಿ ಕಲ್ಪನೆಯಲ್ಲಿ ಗೊಬ್ಬರದ ರಾಶಿಗಳಾಗಿರುವ ಹಳ್ಳಿಗಳು ನಾಳೆ ಯಾರೂ ವಂಚಿಸಲಾಗದ, ಶೋಷಿಸಲಾಗದ, ಉನ್ನತಮಟ್ಟದ ಬುದ್ದಿವಂತರಿರುವ ಸಣ್ಣ ಸುಂದರ ಉದ್ಯಾನವನಗಳಾಗಬೇಕು. ಗ್ರಾಮನಿರ್ಮಾಣದ ಕೆಲಸ ತಾತ್ಕಾಲಿಕ ರೀತಿಯಲ್ಲಲ್ಲ.

ಮನುಷ್ಯನ ದುರಾಸೆಯಿಂದ ಕಳಸಾಪುರದ ಹಳ್ಳ, ಬೆಣ್ಣೆಹಳ್ಳವೂ ನಾಶವಾಗಿದೆ. ಇದರ ಬಗೆಗೆ ಬೊಮ್ಮನಾಯಕ ವಿಷಾದ ವ್ಯಕ್ತಪಡಿಸುತ್ತಾನೆ. "ಹೇಗಿತ್ತು ಹಳ್ಳ! ಮನೆಯಾಳ್ ಬಡ್ದೀ ಮಕ್ಳು ಎಲ್ಲಾ ಗುಡ್ಸಿ ಗುಂಡಾಂತರ ಮಾಡವ್ರೆ.... ಮಳೆ ಬಾ ಅಂದ್ರೆ ಎಂಗ್ ಬತ್ತೈತೆ? ಎಲ್ರೂ ಮಣ್ ಬುಟ್ಟು! ಮರಳು ಹಿಡುದ್ರು"(ಪು.53) ಈ ಮಾತುಗಳಲ್ಲಿ ಮನುಷ್ಯ ಮಣ್ಣುನಂಬಿ ನೇಗಿಲಯೋಗಿಯಾಗಿ ದುಡಿಯುತ್ತಿದ್ದವನು ಮರಳು ಮಾರಿ ಬದುಕಹೊರಟಿರುವ ಸಂಗತಿ ಬಯಲಾಗುತ್ತದೆ. ದನ, ಕುರಿ, ಸಾಮಾನುಗಳನ್ನು ಕಡಿಮೆ ಬೆಲೆಗೆ ಕೊಳ್ಳಲು ಬಂದ ಸೇಠುಗಳ ಬಳಿಯೇ ದುಡಿದು ತಿನ್ನುತ್ತಿದ್ದ ಜವರ "ಸೇಠು ನಾನು ನಿಂ ಜೊತೆಯಾಗೆ ಬತ್ತೀನಿ ನೀವೇಳ, ಕೆಲ್ಸಾನೆಲ್ಲ ಮಾಡ್ತೀನಿ... ಒಂದೊತ್ತು ಹಿಟ್ಟಾಕುದ್ರೆ ಸಾಕು... ನಿಮ್ ದಯೆ"(ಪು.28) ಎಂದು

ಬೇಡುವುದು ತೇಪೆದಾರಿ ಹನುಮನಿಗೆ "ನಂಗೇನೋ ಕೆಲ್ಸ ಸಿಕ್ಕೈತೆ. ರಸ್ತೆ ಮ್ಯಾಕೆ ಮಣ್ ಹಾಕೋ ಕೆಲ್ಸ ಯಾರೋ ಕಂತ್ರಾಟ್ರು ಮಾಡಸುತವನೆ ಹೊತ್ತಾದ್ರೆ ಉಗಿತಾನೆ...."(ಪು. 54) ಹೇಳುವ ಈ ಮಾತುಗಳು "ಗ್ರಾಮೋದ್ಯೋಗಗಳು ನಿರ್ನಾಮಗೊಂಡವೆಂದರೆ ಹಳ್ಳಿಗಳ ವಿನಾಶ ಪೂರ್ಣಗೊಂಡಂತೆಯೇ" ಎಂದು ಗಾಂಧಿ ಹೇಳಿದ ಮಾತುಗಳನ್ನು ನೆನಪಿಗೆ ತರುತ್ತವೆ.

ಹನುಮನ ತಂಗಿ ಸರೋಜಳ ಗಂಡ ರಾಮಯ್ಯ ಬರದ ಪರಿಸ್ಥಿತಿ ಕುರಿತು ಅಧಿಕಾರಿಗಳು ಮತ್ತು ರಾಜಕೀಯ ಮುಖಂಡರ ಬಳಿ ಹೇಳಿಕೊಳ್ಳುವಾಗ ರಾಮಯ್ಯ ಹೇಳುವ ಮಾತು ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂಬಂತೆ ಲೇಖಕರು ಚಿತ್ರಿಸಿದ್ದಾರೆ. "ನೀವು ನಮ್ಗೆ ಕೂಲಿ, ಕಾಳು, ಮ್ಯಾಲೆ, ಕೆಲ್ಸ ಕೊಟ್ಟು ರಸ್ತೆ ಮ್ಯಾಲೆ ಮಣ್ ಹಾಕೋಕ್ಕಿಂತ ಕೆರೆಕಟ್ಟೆ ಹೂಳ್ ತೆಗಿಯೋ ಕೆಲ್ಸ ಕೊಡಿ ಮುಂದ್ಕೆ ಅನುಕೂಲ ಆಯ್ತದೆ...."(ಪು.56) ಎಂದು ಕಡ್ಡಿ ತುಂಡಾದಂತೆ ಮಾತನಾಡಿದರೆ ಅಲ್ಲಿದ್ದ ಮುಖಂಡ 'ಹಾಗಿದ್ದರೆ ರಸ್ತೆ ಬೇಡವೇ?' ಬಂದು ಕೇಳುವ ಪ್ರಶ್ನೆಗೆ ರಾಮಯ್ಯ "ಸರಿ ಮಾಡ್ಸಿ ಗುಳೇ ಹೋಗೋಕೆ ಅನುಕೂಲ ಆಯ್ತದೆ"(ಪು.56) ಎಂದು ಸಿಟ್ಟು ಮತ್ತು ವ್ಯಂಗವಾಗಿ ಹೇಳಿದ ಮಾತುಗಳ ಹಿಂದೆ, ಇಡೀ ಬರಪೀಡಿತ ಪ್ರದೇಶದಲ್ಲಿ ಉದ್ಯೋಗ, ಆಹಾರ, ನೀರು, ಇಲ್ಲದ ಪ್ರಾಣ ಉಳಿಸಿಕೊಳ್ಳಲು ಎಲ್ಲ ಊರುಗಳಲ್ಲೂ ಗುಳೇ ಹೋಗಿರುವ ಮತ್ತು ಸರ್ಕಾರದಿಂದ ಸರಿಯಾದ ಕ್ರಮ ಜರುಗದಿರುವುದ ಬಗೆಗೆ ಬಲವಾದ ಅಸಮಾಧಾನ ಇದೆ.

ನಾಯಕನ ಮಕ್ಕಳಾದ ಬೊಮ್ಮ, ಬೋರರು, ಕೆಲಸ ಹುಡುಕಲು ಊರುಬಿಟ್ಟು ಹೋಗಿರುವ ವಿಚಾರ ತಿಳಿದ ಬೊಮ್ಮನಾಯಕ "ಇವರಿಗ್ಯಾವ ಕೆಲ್ಸ ಬಂದೀತು? ಹೊಲ ಉತ್ತು ಗೊಬ್ರ ಹೊರೋದ್ ಬುಟ್ರೆ"(ಪು.21) ಎಂದು ಹೇಳುವಲ್ಲಿ ಮನುಕುಲದ ಜೀವಸಲೆಗೇ ಬೆನ್ನಲುಬಾದ ರೈತನ ಕೈಗಳಿಗೇ ದುಡಿಮೆಯಿಲ್ಲದಂತಾಗಿರುವ ಸ್ಥಿತಿಯನ್ನು ಅನಾವರಣಗೊಳಿಸುತ್ತಾರೆ.

ಹನುಮನೊಟ್ಟಿಗಿನ ಮಾತುಕತೆಯಲ್ಲಿ ರಾಮಯ್ಯ ಎತ್ತುವ ಪ್ರಶ್ನೆ "ಕಾಡು, ಮೇಡು, ಗುಡ್ಡ, ಬೆಟ್ಟ ಅಗೆಯೋಕ್ಕೆ ಪರವಾನಗಿ ಕೊಟ್ಮ್ಯಾಲೆ ಇದ್ಕೂ(ಬರ) ಅವರೇ ಏನಾರ ಮಾಡ್ಬೇಕು. ಬುದ್ಧಿ ಅದ್ಕೈತೆ! ಇದ್ಯಾಕ್ಕಿಲ್ಲ?"(ಪು.59). ಇಲ್ಲಿ ಬಡವನನ್ನು ಬಲಿಕೊಟ್ಟು ಕಿಸೆತುಂಬಿಸಿಕೊಳ್ಳುವುದು ಯುಕ್ತವೇ? ಎಂಬ ಬಲವಾದ ಪ್ರಶ್ನೆಯಿದ್ದು ಗ್ರಾಮಗಳಿಗೆ ಸಲ್ಲಿಸಬೇಕಾದ ಕರ್ತವ್ಯ ಉಪೇಕ್ಷಿಸಿದ ನಮ್ಮ ನಾಶವನ್ನು ನಾವೇ ತಂದಿಟ್ಟುಕೊಂಡಂತೆ ಎಂಬ ಪ್ರಬಲವಾದ ಎಚ್ಚರವಿದೆ.

ಹನುಮನು ತಂಗಿ ಸರೋಜ ಗರ್ಭಿಣಿಯಾದ ಕಾರಣ ಆಕೆಯನ್ನು ಇಡೀ ಬಯಲಿನಲ್ಲಿ ನೆರಳಲ್ಲಿ ಕೂರಿಸಲು ಹುಡುಕಿದರೂ ನೆರಳಿಲ್ಲದ ಸ್ಥಿತಿ, ಹನುಮ ಮನೆಯವರ ಹೊಟ್ಟೆಗಾಗಿ ಅಜ್ಜಿಯ ಗುಂಡುಸರ, ಹೆಂಡತಿ ಸುಬ್ಬಿಯ ತಾಳಿಯ ಕಾಸುಗಳನ್ನೂ ಮಾರುವಂತೆ ಮಾಡಿದ ಬರ, ಹನುಮ, ತಂಗಿ ಪಾರ್ವತಿ, ಬೊಮ್ಮನಾಯಕ, ಮೊಮ್ಮಗ ಗೋಪಾಲ ಎಲ್ಲರೂ ಕೆಲಸಕ್ಕೆ ಹೋಗುವಂತೆ ಮಾಡಿದ ಬರ, ಕೆಲಸ ನೀಡಿದವರಾದರೂ ಯಾರು? ಗುತ್ತಿಗೆದಾರರು. ಇದನ್ನೇ ಲೇಖಕರು ವಿಡಂಬನಾತ್ಮಕವಾಗಿ ಹೇಳುವುದು ಹೀಗೆ: "ಅಭಾವದ ಬರಭೂಮಿಯಲ್ಲಿ ಬೆಳೆದಿರುವ ಸಿರಿಬೆಳೆ ಎಂದರೆ ಗುತ್ತಿಗೆದಾರರು, ಮಳೆಯಿಲ್ಲದ ಬೆಳೆಯಂತೆ ಅವರ ಸಂಖ್ಯೆ ಬೆಳೆದಿತ್ತು" (ಪು.80).

ಇಂತಹ ಹಣದ ದಾಹಕ್ಕೆ ಬಲಿಯಾದ ಕಾರಣದಿಂದಲೇ ಕಲ್ಗಿರಿ ಪಟ್ಟಣದ

ದೊಡ್ಡ ಕೆರೆಯ ಏರಿ, ಕೋಡಿ ಒಡೆದು ಕೆರೆ ಒಣಗಿಸಿ ಸೈಟು ಮಾಡಿ ಪಟ್ಟಣ ಬೆಳೆಸಿ, ಅಲ್ಲಿಗೆ 15 ಮೈಲಿ ದೂರದಿಂದ ಕುಡಿವ ನೀರು ತರಿಸಲಾಗುತ್ತಿದೆ. ಅಭಿವೃದ್ಧಿ ಎಂದರೆ ಇದೆಯೇ? ಎಂಬ ಪ್ರಶ್ನೆಯನ್ನು ಲೇಖಕರು ನಮ್ಮ ಮುಂದೆ ಇಡುತ್ತಾರೆ. 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಕೈಗೆ ಹತ್ತಿಪ್ಪತ್ತು ಕೊಟ್ಟು ತಲಾ ಒಂದು ಕೆ.ಜಿ. ಜೋಳದ ಹಿಟ್ಟು ಕೊಟ್ಟು ರಸ್ತೆ ರಿಪೇರಿ ಮಾಡಿಸುವುದನ್ನು ಕಂಡ ನಾಯಕ "ಇದಕ್ಕಿಂತಲೂ ಕೆರೆ ಕಟ್ಟೆಗಳ ಹೂಳು ಎತ್ತಿದ್ದರೆ ಮಳೆಗಾಲಕ್ಕೆ ನೀರಾದರೂ ತುಂಬುತ್ತಿತ್ತು"(ಪು.90) ಎಂದುಕೊಳ್ಳುವಲ್ಲಿ ಆಗಬೇಕಾದುದರ ಸೂಚನೆ ನೀಡುತ್ತಾರೆ.

ಜಾಗತೀಕರಣದ ಪ್ರಭಾವಕ್ಕೊಳಗಾದ ಹಳ್ಳಿಗಳ ಸ್ಥಿತಿಯು ಈ ಕಾದಂಬರಿಯಲ್ಲಿ ಅನಾವರಣಗೊಳ್ಳುತ್ತವೆ. "ನನ್ ಮಗ ಅವನೆಂಡ್ತಿ ಮಕ್ಕಳ್ನ ಕರ್ಕೊಂಡು ರಾತ್ರಿನಾಗ ಎಲ್ಲೋ ಒಂಟೋಗವ್ನೆ... ನನ್‌ಬುಟ್ಟು"(ಪು.7) ಎಂದು ಗೋಳಾಡುವ ನಂಜಿ, ಬೊಮ್ಮನಾಯಕ ಮೊಮ್ಮಗಳಿಗೆ "ಕಣ್ಣದೊಳಗೆ ಇಳ್ದು ಚೊಕ್ವಾಗಿ ಗುಡಿಸ್ಕಂಡ್ರೆ ಏನಾರ ವಸಿ ಸಿಕ್ಬವ್ದು ನೋಡ್ರವ್ವ" ಎನ್ನುವುದು ಅದಕ್ಕೆ ಉತ್ತರವಾಗಿ ಗೌರಿ "ಏಣಿ ಹಾಕಿ ನಾವೇ ಇಳ್ದು ಕಣ್ಣಾನ ಗುಡಿಸ್ಕಂಡು ಕೇರ್ಕೊಂಡು ಎಲ್ಲಾ ಮುಗ್ದೋಗದೆ ತಾತ.... ಈಗ ಗುಡುಸೋಕೋದ್ರೆ ಬರೀ ತೊಪ್ಪೆಚಿಕ್ಕೆ ಸಿಕ್ತದೆ ಅಷ್ಟೆ"(ಪು.19) ಎನ್ನುವುದು, ಬೊಮ್ಮನಾಯಕನ ಮನೆಯ ಕುರಿ, ಕೋಳಿ, ಕಂಚು ಮುಟ್ಟನ್ನು ಸೇಠುಗಳಿಗೆ ಮಾರುವುದು, ನೀರಿಗಾಗಿ ಊರೂರು ಅಲೆಯುವುದು, ಬೊಮ್ಮ–ಲಚ್ಚಿ ತಮ್ಮ ಮಗುವನ್ನು ಮಾರಿಕೊಳ್ಳುವ ಸ್ಥಿತಿಗೆ ತಲುಪುವುದು ಈ ಎಲ್ಲಾ ಘಟನೆಗಳು ಒಂದಾದ ನಂತರ ಒಂದು ಕಾದಂಬರಿಯುದ್ದಕ್ಕೂ ನಡೆದುಹೋಗುತ್ತವೆ. ಇದಕ್ಕೆ ಕಾರಣವೇನೆಂದು ಹುಡುಕಹೊರಟರೆ ಬೊಮ್ಮನಾಯಕನ ಮಾತಿನ ಮೂಲಕವೇ ಉತ್ತರ ಸಿಕ್ಕುತ್ತದೆ "ತಾತಾಮುತ್ತಾತರ ಮಾತಿರ್ಲಿ... ಹೆತ್ತ ಅವ್ವ ಅಪ್ಪನ್ನ ಮರೆಯೋ ಬುದ್ಧಿ ಹೆಚ್ಚಾಗೈತೆ... ಓದ್ದೋರೇನೋ ಜಾಸ್ತಿಯಾಗವ್ರೆ! ಆದ್ರೂ ಎಲ್ಲಾ ವಡಕಲು ಸಂಸಾರ" (ಪು.47) ಶಿಕ್ಷಣ ಇದೆ; ಆದರೆ ಅದು ಕಟ್ಟುವ ಕೆಲಸ ಮಾಡುತ್ತಿಲ್ಲವೆಂಬುದನ್ನು ಈ ಮಾತುಗಳು ಧ್ವನಿಸುತ್ತವೆ.

"ತಮಟೆ, ನಗಾರಿ, ತಾರಸಿಗಳು ಅಟ್ಟ ಸೇರಿವೆ. ಮ್ಯಾದಕೇರಿಯ ಬಿದಿರುದಬ್ಬೆಗಳು ಒಣಗಿ ಕುಟ್ಟೆ ಹಿಡಿದು ನಿಂತಿವೆ, ಕುಂಬಾರಗೇರಿಯ ಚಕ್ರ ಮುರಿದುಬಿದ್ದಿದೆ, ಆಚಾರ್ರ ಕುಲುಮೆ ಹಾಳುಬಿದ್ದಿದೆ, ಐನೋರು ಎಂದೋ ನಾಪತ್ತೆ! ಈ ಊರಲ್ಲಿದ್ದ ಕೊಟ್ಟಣಗೇರಿಯು ಹಿಂದೆ ಬತ್ತ ಕುಟ್ಟಿ ಅಕ್ಕಿ ಮಾಡಿಕೊಡುವ ಮನೆಗಳಿದ್ದವಂತೆ. ಈಗ ಯಂತ್ರ ಬಂದು ಅವೆಲ್ಲ ಚರಿತ್ರೆಗೆ ಸೇರಿಹೋಗಿವೆ"(ಪು.118) ಎಂಬಲ್ಲಿಯೂ ಜಾಗತೀಕರಣದಿಂದಾಗಿ ಗ್ರಾಮೋದ್ಯೋಗಕ್ಕೆ ಬಿದ್ದ ಬಲವಾದ ಪೆಟ್ಟನ್ನು ಲೇಖಕರು ಚಿತ್ರಿಸಿದ್ದಾರೆ.

ಬರದ ಸ್ಥಿತಿಯನ್ನರಿಯಲು ಬಂದ ಪ್ರೆಸ್‌ನವರು ಹನುಮನಿಗೆ "ಹಣ ಸಂಪಾದನೆಗೆ ಬೇರೆ ದಾರಿ ಇಲ್ಲವೆ?"(ಪು.115) ಎಂದು ಪ್ರಶ್ನಿಸುತ್ತಾರೆ. ನೀರಿಗಾಗಿ ಊರೂರು ಅಲೆವ ಇವರ ಕಷ್ಟ ವಾಹನಗಳಲ್ಲಿ ಕಂಪನಿಯ ಬಾಟಲಿ ನೀರುಗಳನ್ನು ಇಟ್ಟು ಬೇಕೆಂದಾಗ ತೆಗೆದು ಕುಡಿಯುವ ಇವರಿಗೆಲ್ಲಿ ಅರ್ಥವಾದೀತು? ಗಾಂಧಿ ಕಲ್ಪನೆಯಲ್ಲಿ ಸ್ವಾತಂತ್ರ್ಯವೆಂದರೆ ತೀರಾ ಕೆಳಗಿರುವ ಹಳ್ಳಿಗನಿಗೂ ಗುಲಾಮಗಿರಿಯಿಂದ ಬಿಡುಗಡೆಯಾಗಿ ಪಟ್ಟಣ, ನಗರಗಳ ಸೇವೆಗಾಗಿ ಹುಟ್ಟಿದ ಆಳು ತಾನಲ್ಲ ಎಂಬುದನ್ನು ತೋರಿಸಿಕೊಡಬೇಕು ಜೊತೆಗೆ ಸಾಧ್ಯವಾದಷ್ಟು ಮಟ್ಟಿಗೆ ಪ್ರತಿಯೊಂದು ಕೆಲಸವನ್ನೂ ಸಹಕಾರತತ್ತ್ವದ ಆಧಾರದ ಮೇಲೆಯೇ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿಯೇ ಊರಿನಲ್ಲಿ ಬರದಿಂದ

ಸತ್ತ ದನ–ಕರು, ಕುರಿಗಳನ್ನು ಹೂಳಲು ಯಾವ ಜಾತಿಯವರೂ ಇಲ್ಲವೆ? ಎಂಬ ಹನುಮನ ಹೊಯ್ದಾಟಕ್ಕೆ ಗೌರಿ ಕೊಡುವ ಉತ್ತರ "ಈ ಹೊತ್ನಲ್ಲಿ ಯಾವ್ ಜಾತಿ ನಡಿ ಅಪ್ಪಯ್ಯ..... ಎಲ್ಲ ನರಮನುಸ್ರೆ ಕಣಾ"(ಅಗ್ನಿಕುಂಡ–ಪು.49) ಎಂಬ ಮಾತುಗಳು, ಊರ ಬಾವಿಗಳಲ್ಲೆಲ್ಲಾ ನೀರಿಲ್ಲವಾಗಿ ಉಳಿದೊಂದೇ ಬಾವಿಯಲ್ಲಿ ನೀರು ಎಂದು ಗೋಪಾಲ ತಾತನಿಗೆ "ತಾತ.... ಈಗ ಎಲ್ರುಗೂ ಒಂದೇ ಬಾವಿ, ಕೆರೆತಡಿ ಬಾವಿಯೇ ಗತಿ, ಉಳ್ದವು ಎಲ್ಲಾ ಬತ್ತೋಗವೆ... ಯಾರೂ ಜಾತಿಗೀತಿ ನೋಡ್ವಂಗಿಲ್ಲ"(ಅಗ್ನಿಕುಂಡ–ಪು.6) ಎಂದು ಹೇಳುವ ಮಾತು, ಜೊತೆಗೆ ಬೊಮ್ಮನಾಯಕ, ಹನುಮ, ಪಾರ್ವತಿ, ಗೋಪಾಲ ಎಲ್ಲರೂ ಗುತ್ತಿಗೆದಾರರ ಬಳಿ ಕೆಲಸಕ್ಕೆ ಹೋದಾಗ ಊಟದ ವಿರಾಮದಲ್ಲಿ "ಎಲ್ಲರ ಕೈಗಳಿಗೂ ಒಣ ಎಲೆ ಮತ್ತು ಸಿಲ್ವರ್ ಲೋಟಗಳು ವಿತರಣೆಯಾದವು, ಇಲ್ಲಿ ಜಾತಿ–ಗೀತಿ, ಮೇಲು–ಕೀಳು ಎಂಬ ಸೊಲ್ಲೇ ಇಲ್ಲ ಪರಿಸ್ಥಿತಿ ವಿಶ್ವಮಾನವರನ್ನಾಗಿ ಮಾಡಿದೆ"(ಅಗ್ನಿಕುಂಡ–ಪು.95) ಎಂದು ಹೇಳಿಸುವ ಲೇಖಕರು ನೀರು ತರಲು ಹೋದ ಗೌರಿ, ಸರಸ್ವತಿಯರನ್ನು ಸೇತುಗಳಿಂದ ಅಸ್ಪೃಶ್ಯನಾದ ಚಲುವ ರಕ್ಷಿಸುವುದು ಈ ಎಲ್ಲಾ ಚಿತ್ರಣಗಳನ್ನು ತರುವ ಮೂಲಕ ಲೇಖಕರು ಅಸ್ಪೃಶ್ಯತೆಯನ್ನು ಮೀರುವ ಚಿತ್ರಣವನ್ನು ನೀಡಿದ್ದಾರೆ.

ಹತ್ತು ವರ್ಷಗಳುರುಳಿವೆ. ಆದರೆ ಬೊಮ್ಮನಾಯಕ ಈಗಿಲ್ಲ. ಒಳ್ಳೆಯ ದಿನಗಳಿಗಾಗಿ ಹಾರೈಸಿ ಕಣ್ಣುಮುಚ್ಚಿದ್ದಾನೆ. ಹೊನ್ನಾಳಿ ಬದುಕು ಮತ್ತೆ ಬೆಳಕು ಕಂಡಿದೆ, ಬರಗಾಲದ ಸಂಕಷ್ಟ ಹಲವು ಪಾಠಗಳನ್ನು ಕಲಿಸಿದೆಯೆಂದು ಹೇಳುವ ಮುಖೇನ ಕಾದಂಬರಿಯು ಮುಕ್ತಾಯಗೊಳ್ಳುತ್ತದೆ. "ಬರಗಾಲದ ಸಂಕಷ್ಟ ಹಲವು ಪಾಠಗಳನ್ನು ಕಲಿಸಿದೆ" ಎಂಬ ಮಾತನ್ನು ಕೃತಿಯ ಅಂತ್ಯದಲ್ಲಿ ತರುವ ಉದ್ದೇಶ ಅಗಾಧವಾದದ್ದು. ಎಲ್ಲರೂ ಈ ಪಾಠ ಕಲಿಯಬೇಕಿದೆ. ಅಳಿವಿಗೆ ಕಾರಣವೇನು? ಉಳಿವಿಗೆ ಕಾರಣವೇನು? ಎಂದು ತಿಳಿದು ಎಚ್ಚರದ ಹೆಜ್ಜೆಗಳನ್ನಿಡಬೇಕಾದ ಜಾಗ್ರತೆಯ ಚಿಹ್ನೆಯನ್ನು ನಮ್ಮ ಕಣ್ಣಮುಂದೆ ತಂದು ನಿಲ್ಲಿಸುತ್ತಾರೆ.

ಹೀಗೆ ತೈಲೂರರ 'ಅಗ್ನಿಕುಂಡ' ಕಾದಂಬರಿಯಲ್ಲಿ ದಾರ್ಶನಿಕ, ವೈಜ್ಞಾನಿಕ ಮತ್ತು ಗಾಂಧಿ ಚಿಂತನೆಗಳು ಮುಪ್ಪರಿಯಾಗಿ ಸೇರಿದ್ದು ವಾಸ್ತವಿಕ ಚಿತ್ರಣಗಳೊಟ್ಟಿಗೆ ಓದುಗನ ಮನಃಪರಿವರ್ತನೆಗೆ ಪ್ರೇರೇಪಿಸುತ್ತದೆ.

ಪರಾಮರ್ಶನ ಗ್ರಂಥಗಳು

1. ಗಾಂಧಿ ಗ್ರಂಥಮಾಲೆ–1 : ಸಂಕ್ಷಿಪ್ತ ಆತ್ಮಕಥನ, ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ, 1967
2. ಗಾಂಧಿ ಗ್ರಂಥಮಾಲೆ–10: ಮಹಿಳೆಯರು, ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ, 1969
3. ಗಾಂಧಿ ಗ್ರಂಥಮಾಲೆ–14 : ರಾಜನೀತಿ, ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ, 1961
4. ತೈಲೂರು ವೆಂಕಟಕೃಷ್ಣ : ಅಗ್ನಿಕುಂಡ, ಭಾನು ಪ್ರಕಾಶನ, ನಂ.2958, ನೆಹರು ನಗರ, ಮಂಡ್ಯ
5. ಮೋಹನದಾಸ ಕರಮಚಂದ ಗಾಂಧಿ : ಸತ್ಯಾಗ್ರಹ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಶಾಖೆ, 1989

❖❖❖

'ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ' ಕೃತಿಯ ಅವಲೋಕನ

ಡಾ. ಸುರೇಶ ಹನಗಂಡಿ
ಕನ್ನಡ ಅಧ್ಯಾಪಕರು, ಎಸ್.ಆರ್.ಇ.ಎಸ್, ಪ್ರಥಮ ದರ್ಜೆ ಕಾಲೇಜು, ಕಲ್ಲೋಳಿ
ತಾ: ಮೂಡಲಗಿ ಜಿ: ಬೆಳಗಾವಿ

'ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ' ಎಂಬ ಕೃತಿಯನ್ನು ಕನ್ನಡ ವಿದ್ವತ್ ಲೋಕಕ್ಕೆ ಸಾದರಪಡಿಸಿದವರು ಡಾ. ಎಸ್.ಎಸ್. ಅಂಗಡಿ ಅವರು. ಈ ಕೃತಿಯು ಹಸ್ತಪ್ರತಿಗಳ ಭಾಷಿಕ ಅಧ್ಯಯನಕ್ಕೆ ಸಂಬಂಧಿಸಿದ ಮೊದಲನೆಯ ಕೃತಿಯಾಗಿದೆ. ಹಸ್ತಪ್ರತಿ ಅಧ್ಯಯನ ಇತ್ತೀಚಿನ ವರ್ಷಗಳಲ್ಲಿ ವಿಫುಲವಾಗಿ ನಡೆದಿವೆ. ಅವುಗಳಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಅನಾವರಣಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಅಧ್ಯಯನಗಳು ಕಂಡುಬರುತ್ತವೆ. ಆದರೆ ಭಾಷಿಕವಾಗಿ ಹಸ್ತಪ್ರತಿಯನ್ನು ಇಟ್ಟುಕೊಂಡು ಅದರ ಸಾಧ್ಯತೆಯನ್ನು ಗುರುತಿಸುವ ಮತ್ತು ಉಲ್ಲೇಖಿಸುವ ಪ್ರಯತ್ನ ಇಲ್ಲಿಯವರೆಗೆ ಅಷ್ಟಾಗಿ ನಡೆದಿರುವುದಿಲ್ಲ. ಆ ಒಂದು ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಈ ಕೃತಿಯು ರಚನೆಗೊಂಡಿರುತ್ತದೆ. ಕೃತಿಯು 13 ಅಧ್ಯಾಯಗಳನ್ನು ಒಳಗೊಂಡಿದ್ದು, ಮುನ್ನುಡಿಯನ್ನು ಬಿ.ಎ. ವಿವೇಕರೈ ಅವರು ಬರೆದಿದ್ದಾರೆ. ಹಸ್ತಪ್ರತಿಗಳ ಭಾಷೆ ಮತ್ತು ಸಂಸ್ಕೃತಿ, ಮಾತು–ಬರೆಹ–ಸಂಪಾದನೆ, ಭಿನ್ನಪಾಠಗಳು, ಪಾಠಾಂತರಗಳು ಹಾಗೂ ಪಾಠ ಪರಿಷ್ಕರಣೆಯಲ್ಲಿ ವ್ಯಾಕರಣ, ಛಂದಸ್ಸು, ನಿಘಂಟು ಪಾತ್ರ ಕುರಿತು ಕೃತಿಯಲ್ಲಿ ಚರ್ಚೆ ಬೆಳೆದಿದೆ. ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಉಲ್ಲೇಖಿತವಾದ ಭಾಷಿಕ ಅಂಶಗಳ ರಾಚನಿಕ ವಿನ್ಯಾಸ ಕುರಿತು ನಡೆದ ಅಧ್ಯಯನವು ಈ ಕ್ಷೇತ್ರದ ಅಧ್ಯಯನಕ್ಕೊಂದು ಹೊಸ ಆಯಾಮಗಳನ್ನು ನೀಡುವಂತಿದೆ.

ಕನ್ನಡ ಭಾಷೆಯ ಹಸ್ತಪ್ರತಿಗಳಲ್ಲಿ ಆಡುನುಡಿ ಹಾಗೂ ಕಾಲಕ್ಕೆ ತಕ್ಕ ಪ್ರಮಾಣಭಾಷೆಯನ್ನು ಗಟ್ಟಿಯಾಗಿ ತೋರಿಸಿದ್ದು ಮಹತ್ವದ ಅಂಶವಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನದಲ್ಲಿ ಕೃತಿಕಾರರು ಹಸ್ತಪ್ರತಿಗಳಲ್ಲಿ ಕಂಡುಬರುವ ಸಾಮಾಜಿಕ ಹಾಗೂ ಭಾಷಿಕ ಅಂಶಗಳ ವಿಶ್ಲೇಷಣೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ಹಸ್ತಪ್ರತಿಗಳ ಮುಖೇನ ಭಾಷೆಯ ಬೆಳವಣಿಗೆಯ ವಿಕಾಸಕ್ರಮ ಹಾಗೂ ಲಿಪಿಯ ಸ್ವರೂಪದ ಪರಿಚಯ ಕೃತಿಯಲ್ಲಿದೆ. ಹಸ್ತಪ್ರತಿ ಲಿಪಿಕಾರರು ಒಂದು ಕಾಲಘಟ್ಟದ ಭಾಷಿಕ ಸಂಕಥನಕಾರರು. ಅನೇಕ ಸಂದರ್ಭದಲ್ಲಿ ಪ್ರತಿ ಮಾಡುವಾಗ ಮೂಲಕೃತಿಯ ಭಾಷೆಯನ್ನು ತಮ್ಮ ಕಾಲದ ಉಚ್ಚಾರಣೆಯ ಭಾಷೆಗೆ ತಕ್ಕಂತೆ ಬದಲಾಯಿಸಿಕೊಳ್ಳುತ್ತಾರೆ. ಇದು ಲಿಪಿಕಾರರು ಭಾಷಾ ಬೆಳವಣಿಗೆಯಲ್ಲಿ ಮಾಡಿದ ಒಂದು ದೊಡ್ಡ ಕ್ರಾಂತಿಯಾಗಿದೆ. ಈ ದೃಷ್ಟಿಯಿಂದ ಭಾಷೆ–ಸಂಸ್ಕೃತಿ–ಸಮಾಜ ಮುಂತಾದ ಅಂಶಗಳನ್ನು ಕೃತಿಕಾರರು ಚರ್ಚಿಸಿದ್ದಾರೆ.

ಮಾತು–ಬರೆಹ–ಸಂಪಾದನೆಯಲ್ಲಿ ಪ್ರಮುಖವಾಗಿ ನಾಲ್ಕು ಭಾಷಾ ಕೌಶಲ್ಯಗಳು ಕಂಡುಬರುತ್ತವೆ. ಗ್ರಹಿಸುವುದು ಮತ್ತು ಮಾತನಾಡುವುದು ಪ್ರಧಾನ ಕೌಶಲ್ಯಗಳಾದರೆ, ಓದುವುದು ಹಾಗೂ ಬರೆಯುವುದು ಗೌಣ ಕೌಶಲ್ಯಗಳಾಗಿವೆ. ಪ್ರಧಾನ ಮತ್ತು ಗೌಣ

ಕೌಶಲ್ಯಗಳ ವ್ಯತ್ಯಾಸಕ್ಕೆ ಲಿಪಿ ಕಾರಣವಾಗುತ್ತದೆ. ಓದು–ಬರೆಹ ಬರದಿದ್ದರೂ ಭಾಷಿಕರು ವ್ಯವಹರಿಸಬಲ್ಲರು. ಆದರೆ ಗ್ರಹಿಕೆ ಮತ್ತು ಮಾತು ಇರದಿದ್ದರೆ ಭಾಷಾ ವ್ಯವಹಾರ ನಡೆಯುವುದಿಲ್ಲ. ಆದ್ದರಿಂದ ಭಾಷಿಕ ಸಮುದಾಯದಲ್ಲಿ ಮಾತಿಗೆ ಬೆಲೆಯಿದೆ. ಆದರೆ ಅಧಿಕಾರ ಕೇಂದ್ರಿಕೃತ ಪರಿಸರದಲ್ಲಿ ಬರೆಹ ಮುಖ್ಯವಾಗಿದೆ. ಹಾಗಾಗಿ ಮಾತು–ಬರೆಹಗಳ ಸಂಬಂಧ ಸಂಕರಣವಾಗಿದೆ. ನಮ್ಮ ಪಾರಂಪರಿಕ ಜ್ಞಾನ ಸಂಪತ್ತು ಮೌಖಿಕ ಪರಂಪರೆಯಲ್ಲಿರುವಂತೆ ಲಿಖಿತ ಪರಂಪರೆಯಲ್ಲಿಯೂ ಇದೆ. ಪ್ರಸ್ತುತ ಮೌಖಿಕ ಪರಂಪರೆ ಲಿಪಿಕರಣ ಹೊಂದಿ, ಸ್ಥಿರಪಠ್ಯವಾಗಿ ರೂಪ ತಾಳುತ್ತಿದೆ. ಈ ಹಿನ್ನಲೆಯಲ್ಲಿ ಜಾನಪದ ಪಠ್ಯ ಸ್ಥಿರಪಠ್ಯವಾದಾಗ ಅವುಗಳನ್ನು ಸಂಪಾದನೆ ಮಾಡುವ ಸಂದಭವನ್ನು ಮುಖ್ಯವಾಗಿಟ್ಟುಕೊಂಡು ಹರಿಶ್ಚಂದ್ರಕಾವ್ಯ, ಮಲೆಮಾದೇಶ್ವರ ಕಾವ್ಯ, ಸಂಗ್ಯಾಬಾಳ್ಯಾ ನಾಟಕ ಮುಂತಾದವುಗಳನ್ನು ಉದಾಹರಿಸಿ ಹೊಸ ಚರ್ಚೆಯನ್ನು ಹುಟ್ಟುಹಾಕಿದ್ದಾರೆ.

ಒಪ್ಪಿತಪಾಠ, ಭಿನ್ನಪಾಠದ ಕೆಲವು ಆಲೋಚನೆ ಕುರಿತು ಚರ್ಚಿಸುವಾಗ ಪ್ರಾಚೀನ ಕೃತಿಗಳ ಸಂಪಾದನೆಯ ವಿಧಾನ ಮತ್ತು ಮೌಖಿಕ ಕಾವ್ಯಗಳ ಸಂಪಾದನೆಯಲ್ಲಿ ಅನುಸರಿಸಬೇಕಾದ ಬೇರೆ ಬೇರೆ ವಿಧಾನವನ್ನು ಇಲ್ಲಿ ಚರ್ಚಿಸುತ್ತಾರೆ. ಪ್ರಾಚೀನ ಕೃತಿಗಳ ಸಂಪಾದನೆಯಲ್ಲಿ ಒಪ್ಪಿತಪಾಠಕ್ಕೆ ಪ್ರಾಮುಖ್ಯವಿದ್ದರೆ, ಮೌಖಿಕ ಕಾವ್ಯಗಳ ಸಂಪಾದನೆಯಲ್ಲಿ ಭಿನ್ನ ಪಾಠಗಳಿಗೆ ಪ್ರಾಮುಖ್ಯವಿದೆ ಎಂಬುದನ್ನು ಒತ್ತಿ ಹೇಳುತ್ತಾರೆ. 'ಮೂಲ' ಪಠ್ಯವನ್ನು ಲಿಪಿಕಾರ ಪ್ರತಿಮಾಡುವಾಗ ತನ್ನ ಪ್ರಾದೇಶಿಕತೆ ಮತ್ತು ಸಮಕಾಲೀನ ಸಂದರ್ಭವನ್ನು ಅನುಲಕ್ಷಿಸಿ ರೂಪಾಂತರಗೊಂಡ ಪ್ರಕ್ರಿಯೆಯಿಂದ ಸಹಜವಾಗಿ ಭಾಷಿಕ ಸ್ಥಿತ್ಯಂತರಗಳು ಉಂಟಾಗುತ್ತವೆ.

ಹಸ್ತಪ್ರತಿ ಅಧ್ಯಯನ ಮತ್ತು ಭಾಷೆಯ ಆಧುನೀಕರಣ ಸಂದರ್ಭದಲ್ಲಿ ಗಣಕಯಂತ್ರದ ಮುಖೇನ ಹಸ್ತಪ್ರತಿಯನ್ನು ಮುಂದಿನ ಜನಾಂಗಕ್ಕೆ ಕೊಂಡೊಯ್ಯುವ ತಂತ್ರಜ್ಞಾನದ ಅವಶ್ಯಕತೆ ಈ ಹೊತ್ತಿನ ಸಂದರ್ಭದಲ್ಲಿ ಮುಖ್ಯವಾಗಿದೆ. ಹಸ್ತಪ್ರತಿ ಮತ್ತು ಅರ್ಥಗ್ರಹಣ ಸಾಮರ್ಥ್ಯವು ಹಸ್ತಪ್ರತಿಯನ್ನು ಓದುವ ರೀತಿ ಮತ್ತು ಅರ್ಥೈಸಿಕೊಳ್ಳುವ ವಿಧಾನದ ಮಾನದಂಡಗಳ ಕುರಿತು ತಿಳಿಸುತ್ತದೆ. ಪಾಠಪರಿಷ್ಕರಣದಲ್ಲಿ ವ್ಯಾಕರಣ, ಛಂದಸ್ಸು, ನಿಘಂಟುವಿನ ಪಾತ್ರ ಮಹತ್ವದ್ದು. ಯಾವ ವಿಧಾನವನ್ನು ಹೀಗೆ ಅನುಸರಿಸಬೇಕೆಂಬುದನ್ನು ಹಾಗೂ ಸಂಪಾದಕ ಅಳವಡಿಸಕೊಳ್ಳಬೇಕಾದ ಕ್ರಮವನ್ನು ಇಲ್ಲಿ ದಾಖಲಿಸುತ್ತಾರೆ. ಸಂಪಾದನೆಯಲ್ಲಿ ಕವಿಪಾಠವನ್ನು ಹುಡುಕುವುದು ಹಲವು ಪಾಠಗಳನ್ನಾಧರಿಸಿ ಒಪ್ಪಿತ ಪಾಠವನ್ನು ಕಂಡುಕೊಳ್ಳುವುದು ಸುಲಭದ ಕಾರ್ಯವಲ್ಲ. ಆದ್ದರಿಂದ ಒಪ್ಪಿತ ಪಾಠಶೋಧಕ್ಕೆ ಸಂಪಾದಕನಿಗೆ ವ್ಯಾಕರಣ, ಛಂದಸ್ಸುಗಳ ಜೊತೆ ನಿಘಂಟುಶಾಸ್ತ್ರದ ತಿಳುವಳಿಕೆ ಇರಬೇಕಾಗುತ್ತದೆ. ಧ್ವನಿಮಾ, ಆಕೃತಿಮಾ, ಧ್ವನಿರಚನೆ, ಪದರಚನೆ, ಅರ್ಥಪ್ರಭೇದ, ಗಣಗಳ ಸ್ವರೂಪ, ಶಬ್ದ ಅರ್ಥ, ಪ್ರಾದೇಶಿಕ ಭಾಷೆಯ ತಿಳುವಳಿಕೆ ಮುಂತಾದವುಗಳನ್ನು ಅವಶ್ಯಕವಾಗಿ ತಿಳಿಸುಕೊಂಡಿರಬೇಕು ಎನ್ನುವುದು ಈ ಕೃತಿಯ ಆಶಯವಾಗಿದೆ.

ಹಸ್ತಪ್ರತಿ ಪ್ರಶಸ್ತಿಗಳಲ್ಲಿ ಒಳಗೊಂಡಿರುವ ವಿಶೇಷಣಗಳು ಕಂಡುಬರುವುದು ಹಸ್ತಪ್ರತಿಯ ಆದಿ ಮತ್ತು ಅಂತ್ಯದ ಪದ್ಯಗಳಲ್ಲಿ. ಲಿಪಿಕಾರ ಪ್ರತಿ ರಚನೆ ಮಾಡುವಾಗ ತಾನು ಅನುಸರಿಸಿದ ವಿಶಿಷ್ಟತೆಯನ್ನು ಪ್ರಸ್ತಾಪಿಸುತ್ತಾನೆ. ಭಾಷೆ ಮತ್ತು ಲಿಪಿಯು ಒಂದು ನಾಡಿನ ಅಧ್ಯಯನಕ್ಕೆ ಆ ನಾಡಿನ ಸಾಹಿತ್ಯಿಕ ಬೆಳವಣಿಗೆಗೆ ಮಹತ್ವದ್ದಾಗಿವೆ. ಲಿಪಿ

ವ್ಯವಸ್ಥೆಯ ಬದಲಾವಣೆಗಳನ್ನು ಕೋಷ್ಠಕದ ಮುಖೇನ ಹಾಗೂ ಬಿ.ಎಂ.ಶ್ರೀ ಅವರ ಲಿಪಿ ಸುಧಾರಣೆಯ ಕುರಿತು ಇಲ್ಲಿ ಉದಾಹರಣೆಯ ಮೂಲಕ ಸಾದರಪಡಿಸುತ್ತಾರೆ.

ವಚನ ಸಾಹಿತ್ಯ ಸಂಪಾದನೆಯನ್ನು ಭಾಷಾಶಾಸ್ತ್ರದ ನೆಲೆಯಲ್ಲಿ ನೋಡುವಾಗ ಕೆಲ ವಿಧಾನವನ್ನು ಕಂಡುಕೊಳ್ಳಬೇಕಾಗುತ್ತದೆ. ಸ್ವರ ವಚನಗಳು ಹಾಡುಗಬ್ಬ ಪರಂಪರೆಗೆ ಸೇರಿರುವುದರಿಂದ ಅವು ಚಲನಶೀಲವಾಗಿರುತ್ತವೆ. ಅವುಗಳ ಆಂತರಿಕ ರಚನೆಗಳನ್ನು ಪರಿಶೀಲಿಸಿದಾಗ ಮಾರ್ಗಸಾಹಿತ್ಯ ಸಂಪಾದನೆಕ್ಕಿಂತ ಸ್ವರ ವಚನಗಳ ಸಂಪಾದನೆ ಭಿನ್ನವಾಗುತ್ತದೆ. ದಾಸಸಾಹಿತ್ಯ ಸಂಪಾದನೆಯನ್ನು ಮಾಡುವಾಗ ಹಸ್ತಪ್ರತಿಯಲ್ಲಿರುವ ರಾಗ, ತಾಳಗಳನ್ನು ಉಳಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಕನ್ನಡ ಕಾವ್ಯಗಳು ಕೇಳುವ ಸಂಸ್ಕೃತಿವುಳ್ಳವುಗಳಾಗಿವೆ ಎಂಬುದನ್ನು ಗಮನಿಸಬೇಕಾಗುತ್ತದೆ. ದಾಸರ ಹಾಡುಗಳು ಚರಪಠ್ಯವಾಗಿರುವುದರಿಂದ ಮಾರ್ಗಸಾಹಿತ್ಯ ಸಂಪಾದನೆಗಿಂತ ಭಿನ್ನವಾದ ವಿಧಾನವನ್ನು ಅನುಸರಿಸಬೇಕಾಗುತ್ತದೆ.

ಕೃತಿಯ ವೈಶಿಷ್ಟ್ಯ: 1) ಕನ್ನಡ ವಿದ್ವತ್ ಪರಂಪರೆಯು ಹೊಸ ಆಲೋಚನೆಯನ್ನು ಮಾಡಲು ಈ ಕೃತಿ ಪ್ರೇರಕವಾಗುತ್ತದೆ. 2) ಲಿಪಿಕಾರರ ಮನೋಧರ್ಮದ ಹಿನ್ನಲೆಯಲ್ಲಿ ಕರ್ನಾಟಕದ ಜನಜೀವನದ ಅರಿವನ್ನು ಈ ಕೃತಿಯು ಮೂಡಿಸುತ್ತದೆ. 3) ಕನ್ನಡ ಭಾಷೆ ಮತ್ತು ಲಿಪಿಯ ವಿಕಾಸಕ್ರಮವನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. 4) ಹಸ್ತಪ್ರತಿಯಲ್ಲಿ ಧಾಖಲಾದ ಸ್ಥಳನಾಮ, ವ್ಯಕ್ತಿನಾಮ, ಕುಲನಾಮವನ್ನು ಸಂಸ್ಕೃತಿಯ ಹಿನ್ನಲೆಯಲ್ಲಿ ಕಟ್ಟಿಕೊಡುತ್ತಾರೆ. 5) ಸಂಪಾದನೆಯಲ್ಲಿ ಛಂದಸ್ಸು, ವ್ಯಾಕರಣ, ನಿಘಂಟುವಿನ ಮಹತ್ವವನ್ನು ತಿಳಿಯಪಡಿಸುತ್ತದೆ. 6) ಮೌಖಿಕ ಭಾಷೆ ಮತ್ತು ಹಸ್ತಪ್ರತಿ ಬರೆಹದ ಭಾಷೆಗೆ ಸಂಬಂಧಿಸಿದಂತೆ ಚರ್ಚಿಸಿರುವುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ.

ಒಟ್ಟಿನಲ್ಲಿ ಈ ಕೃತಿಯು ಹಸ್ತಪ್ರತಿಯನ್ನು ಭಾಷಿಕವಾಗಿ ಅಧ್ಯಯನ ಮಾಡಿದ ವಿದ್ವತ್‌ಪೂರ್ಣ ಕೃತಿಯಾಗಿದ್ದು, ಇಲ್ಲಿ ಚರ್ಚಿಸಿರುವ ಅಧ್ಯಯನಗಳು ಬಿಡಿಬಿಡಿಯಾಗಿ ಪ್ರತ್ಯೇಕವಾಗಿ ವಿಸ್ತಾರ ರೂಪ ಪಡೆದರೆ ಹಸ್ತಪ್ರತಿಗಳ ಬಗೆಗಿನ ವಿದ್ವತ್ತು ಬೆಳೆಯಲು ಅನುಕೂಲವಾದೀತು.

ಆಕರ ಗ್ರಂಥ

1. ಡಾ. ಎಸ್.ಎಸ್. ಅಂಗಡಿ, ಕನ್ನಡ ಹಸ್ತಪ್ರತಿ ರಚನೆ: ಭಾಷಿಕ ವಿವೇಚನೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ–2006.

❖❖❖

'ಶರಪಂಜರ' ಸಿನಿಮಾ : ಒಂದು ವಿಮರ್ಶೆ

ಡಾ. ಸುಶ್ಮಿತಾ ವೈ.
ಸುಳುಗೋಡು ಗ್ರಾಮ, ಹೊಸನಗರ ತಾಲೂಕು, ಶಿವಮೊಗ್ಗ ಜಿಲ್ಲೆ –577425

ತ್ರಿವೇಣಿ ಅವರ ಕಾದಂಬರಿ ಆಧರಿಸಿ 'ಶರಪಂಜರ' ಸಿನಿಮಾ 1971ರಲ್ಲಿ ಪುಟ್ಟಣ್ಣ ಕಣಗಾಲರಿಂದ ನಿರ್ದೇಶನಗೊಂಡಿದೆ. ಈ ಸಿನಿಮಾದ ವಸ್ತು 'ಹಿಸ್ಟೀರಿಯಾ' ಎನ್ನುವ ಮನೋರೋಗವನ್ನು ಕುರಿತಾಗಿದೆ. ಮನೋರೋಗಿಗಳನ್ನು ಸಮಾಜ, ಕುಟುಂಬ ನಡೆಸಿಕೊಳ್ಳುವ ಕ್ರಮ, ಅದರಿಂದ ಉಂಟಾಗುವ ಸಮಸ್ಯೆಗಳನ್ನು ತಿಳಿಸುವ ಕಾದಂಬರಿಯ ಉದ್ದೇಶವನ್ನೇ ಸಿನಿಮಾವು ಹೊಂದಿದೆ. ಮನೋರೋಗಗಳು ಉಂಟಾಗಲು ಮತ್ತು ಉಲ್ಬಣಗೊಳ್ಳಲು ಸಮಾಜ, ಕುಟುಂಬ ಹೇಗೆ ಕಾರಣವಾಗುತ್ತದೆ ಎನ್ನುವುದನ್ನು ಸಿನಿಮಾದಲ್ಲಿ ನಿರೂಪಿಸಲಾಗಿದೆ.

ನಟಿ ಕಲ್ಪನಾ ಅವರ ಅಭಿನಯದ ಮೂಲಕ ನಿರ್ದೇಶಕರು ಹಿಸ್ಟೀರಿಯಾ ಕಾಯಿಲೆಗೆ ಒಳಗಾದವರ ಪರಿಸ್ಥಿತಿ ಹಾಗೂ ಮನಸ್ಥಿತಿಯನ್ನು ಪ್ರೇಕ್ಷಕರ ಮನಮುಟ್ಟುವಂತೆ ಕಟ್ಟಿಕೊಡುವ ಪ್ರಯತ್ನ ನಡೆಸಿದ್ದು ಗಮನಾರ್ಹ. ಕಥೆ ಒಂದೇ ಆದರೂ ಕಾದಂಬರಿಯ ನಿರೂಪಣೆಗೂ ಸಿನಿಮಾದ ಚಿತ್ರಕಥೆಯ ನಿರ್ವಹಣೆಗೂ ವ್ಯತ್ಯಾಸವಿದೆ. 1972ರಲ್ಲಿ ಶರಪಂಜರ ಸಿನಿಮಾ 'ಅತ್ಯುತ್ತಮ ಚಿತ್ರ' ಎಂದು ರಾಷ್ಟ್ರ ಮಟ್ಟದಲ್ಲಿ ಗುರುತಿಸಿಗೊಂಡು ಪ್ರಶಸ್ತಿ ಗಳಿಸಿದ್ದು ಗಮನಾರ್ಹ. ಇದು 'ಬೆಳ್ಳಿಮೋಡ' ಸಿನಿಮಾದಂತೆ ಹೆಚ್ಚು ಜನಪ್ರಿಯಗೊಂಡ, ಪ್ರೇಕ್ಷಕರನ್ನು ಸೆಳೆಯುವಲ್ಲಿ ಹೆಚ್ಚು ಯಶಸ್ವಿಯಾದ ಸಿನಿಮಾ. 'ಶರಪಂಜರ' ಚಿತ್ರ ತೆಲುಗಿನಲ್ಲಿ ಮಧುಸೂದನ್ ರಾವ್ ನಿರ್ದೇಶನದಲ್ಲಿ 'ಕೃಷ್ಣವೇಣಿ' ಎಂಬ ಶೀರ್ಷಿಕೆಯಲ್ಲಿ 1974ರಲ್ಲಿ ರಿಮೇಕ್ ಆಗಿದೆ.

ಮಹಿಳೆಯರ ಮನದ ತುಮುಲಗಳನ್ನು ಮನೋವೈಜ್ಞಾನಿಕ ನೆಲೆಯಲ್ಲಿ ಮೂಡಿಸುವುದರಲ್ಲಿ ತ್ರಿವೇಣಿಯವರಿಗೆ ಹೆಚ್ಚು ಆಸಕ್ತಿ. ತ್ರಿವೇಣಿ ಅವರ ಶರಪಂಜರ ಕಾದಂಬರಿ ಇದಕ್ಕೆ ಉತ್ತಮ ಉದಾಹರಣೆ. ಇಂತಹ ಮನೋವೈಜ್ಞಾನಿಕ ತಳಹದಿಯ ಕಥೆಯನ್ನು ಒಬ್ಬ ಪ್ರತಿಭಾವಂತ ನಿರ್ದೇಶಕ ಚಿತ್ರಕ್ಕೆ ಅಳವಡಿಸಿದಾಗ ಅದರ ಸಾಧ್ಯತೆಗಳು ಹೇಗಿರಬಹುದು ಎಂಬ ಕುತೂಹಲ ಸಹಜವಾಗಿ ಮೂಡುತ್ತದೆ. ಶರಪಂಜರ ಸಿನಿಮಾ ಹಲವು ಕಾರಣಗಳಿಗೆ ಒಂದು ಉತ್ತಮ ಸಿನಿಮಾ ಎಂದು ಗುರುತಿಸಲ್ಪಟ್ಟಿದೆ. ತ್ರಿವೇಣಿ ಅವರು ಮನಶಾಸ್ತ್ರದ ವಿದ್ಯಾರ್ಥಿಯಾದ್ದರಿಂದ ಕಾದಂಬರಿಯನ್ನು ಚಿತ್ರಿಸಿದ ಬಗೆ ಮನಶಾಸ್ತ್ರದ ಸೈದ್ಧಾಂತಿಕತೆಯ ಒಳಗೆ ಕಂಡುಬರುತ್ತದೆ. ಪುಟ್ಟಣ್ಣ ಈ ಹಿನ್ನೆಲೆಯಿಂದ ಬಂದವರಲ್ಲ. ಆದರೆ ಅವರಲ್ಲಿ ಅತ್ಯುತ್ತಮ ಎನ್ನಬಹುದಾದ ನಿರ್ದೇಶನದ ಕೌಶಲ್ಯಗಳಿದ್ದವು. ಸನ್ನಿವೇಶಗಳನ್ನು ಭಾವೋದ್ರೇಕಗೊಳಿಸುವ ಅಪವಾದವೊಂದನ್ನು ಹೊರತುಪಡಿಸಿದರೆ, ಯಾವುದೇ ಸನ್ನಿವೇಶವನ್ನಾದರೂ ಕಲಾತ್ಮಕವಾಗಿ ಕಟ್ಟಿಕೊಡುವ ಕಲೆ ಅವರಿಗೆ ಸಿದ್ಧಿಸಿತ್ತು. ತ್ರಿವೇಣಿ ಅವರು ಕಾದಂಬರಿಯಲ್ಲಿ ನಿರೂಪಿಸಿದ ಮನೋವೈಜ್ಞಾನಿಕ ತಳಹದಿಯನ್ನು ಪುಟ್ಟಣ್ಣ ಗ್ರಹಿಸಿದ್ದಾರೆ ಎಂಬುದು ಸಿನಿಮಾದಲ್ಲಿ, ಅದರಲ್ಲೂ ಕಾವೇರಿಯ ಪಾತ್ರಚಿತ್ರಣದಲ್ಲಿ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ.

ಸಿನಿಮಾ ಮಾಧ್ಯಮಕ್ಕೆ ಕೆಲವು ಸಹಜ ಮಿತಿಗಳಿವೆ. ಒಂದು ಕಾದಂಬರಿಯ ಎಲ್ಲವನ್ನೂ ಎರಡು ಎರಡೂವರೆ ಗಂಟೆಯ ಅವಧಿಯಲ್ಲಿ ಕಟ್ಟಿಕೊಡಲು ಸಾಧ್ಯವಾಗುವುದಿಲ್ಲ. ಹಾಗಾಗಿ ತ್ರಿವೇಣಿ ಅವರ ಶರಪಂಜರ ಕಾದಂಬರಿಯ ಅನೇಕ ವಿವರಗಳು ಸಿನಿಮಾದಲ್ಲಿ ಇಲ್ಲವಾಗಿವೆ, ಹಾಗೂ ಕೆಲವು ವಿವರಗಳನ್ನು ಸೂಚ್ಯವಾಗಿ, ಸಾಂಕೇತಿಕವಾಗಿ ಚಿತ್ರಿಸಲಾಗಿದೆ.

ಸಿನಿಮಾದಲ್ಲಿ ಕಥೆಯ ಸಂಕ್ಷಿಪ್ತತೆಯೂ ಸಿನಿಮಾದ ಚೌಕಟ್ಟಿಗೆ ಅಗತ್ಯವಾದ ಗುಣವಾಗಿರುತ್ತದೆ. ಹಾಗಾಗಿ ಮೊದಲಿಗೆ ಶರಪಂಜರ ಸಿನಿಮಾದಲ್ಲಿ ನಿರ್ದೇಶಕರು ಕಾದಂಬರಿಯ ಕಥೆಯನ್ನು ಚಿತ್ರಕಥೆಯಲ್ಲಿ ಬಳಸಿಕೊಂಡ ಬಗೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ಬಿಡಿಸಿಕೊಳ್ಳಬಹುದು. ಸಿನಿಮಾ ಆರಂಭವಾಗುವುದು ಕಾವೇರಿ ಕೊಡಗಿನ ಸ್ನೇಹಿತೆಯ ಮದುವೆಗೆ ಬಸ್ಸಿನಲ್ಲಿ ಪ್ರಯಾಣಿಸುವ ಮೂಲಕ. ಆಕಸ್ಮಿಕವೆಂಬಂತೆ ನಾಯಕನೂ ಅದೇ ಮದುವೆಗೆ, ಅದೇ ಬಸ್ಸಿನಲ್ಲಿ ಪ್ರಯಾಣ ಬೆಳೆಸುತ್ತಿರುತ್ತಾನೆ. ಕಾವೇರಿ ಪ್ರಯಾಣ ಮಧ್ಯೆ ಕೊಡಗಿನಲ್ಲಿ ಹಣ್ಣನ್ನು ಮಾರಲು ಬಂದ ವ್ಯಾಪಾರಿಯಿಂದ ಕಿತ್ತಳೆಹಣ್ಣನ್ನು ಕೊಂಡು ತಿನ್ನಲು ಸಿಪ್ಪೆ ಬಿಡಿಸುವಾಗ ಅದರ ರಸ ನಾಯಕನ ಕಣ್ಣಿಗೆ ಹಾರುತ್ತದೆ. ಇಲ್ಲಿಂದ ಆರಂಭವಾಗುವ ಈ ಇಬ್ಬರ ಮಾತುಕತೆ, ಹಾಸ್ಯ, ಸ್ನೇಹಿತೆಯ ಮದುವೆ ಮುಗಿಯುವ ವೇಳೆಗೆ ಪ್ರೇಮವಾಗಿ ಬದಲಾಗುತ್ತದೆ. ನಾಯಕ ಅಲ್ಲಿಯೇ ತನ್ನ ಪ್ರೇಮ ನಿವೇದನೆಯನ್ನು ಮಾಡಿ ಅವಳ ಒಪ್ಪಿಗೆಯನ್ನು ಪಡೆಯುತ್ತಾನೆ, ಊರಿಗೆ ಮರಳಿದ ಮೇಲೆ ಎರಡು ಕುಟುಂಬದವರ ಒಪ್ಪಿಗೆ ಮೇರೆಗೆ ಕಾವೇರಿ ಮತ್ತು ಸತೀಶನ ವಿವಾಹ ನಡೆಯುತ್ತದೆ. ಕಾವೇರಿ ಮತ್ತು ಸತೀಶನ ಸುಖ ದಾಂಪತ್ಯ ನೋಡುಗರ ಕಣ್ಣುಕುಕ್ಕುವಂತಿರುತ್ತವೆ. ಕಾವೇರಿ ತನ್ನ ಗಂಡನ ಪ್ರೀತಿಯ ಮಡದಿಯಾಗಿ, ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವ ಮನೆಯ ಯಜಮಾನಿಯಾಗಿ, ಎರಡು ಮಕ್ಕಳ ತಾಯಾಗಿ ಸುಖಸಂಸಾರದ ಅಮಲಿನಲ್ಲಿ ಮುಳುಗೇಳುತ್ತಿರುತ್ತಾಳೆ.

ಹೀಗಿರುವಾಗ, ಕಾವೇರಿ ಎರಡನೆಯ ಹೆರಿಗೆಯ ನಂತರ ಮಾನಸಿಕ ಹಾಗೂ ದೈಹಿಕ ದುರ್ಬಲತೆಗೆ ಒಳಗಾಗುತ್ತಾಳೆ. ಹೆಣ್ಣು ಮಗುವಾಗಲಿಲ್ಲ ಎನ್ನುವ ಕೊರಗು ಹಾಗೂ ಅವಳ ವಿವಾಹಪೂರ್ವದಲ್ಲಿ ಒಮ್ಮೆ ತಿಳಿಯದೇ ನಡೆದ ಲೈಂಗಿಕ ಸಂಬಂಧ ಅವಳ ಮಾನಸಿಕ ಸ್ಥಿತಿಯನ್ನು ಹದಗೆಡಿಸುತ್ತವೆ. ಈ ನಡುವೆ ಸತೀಶನ ಆಫೀಸಿನ ಉದ್ಯೋಗಿ ವಿಮಲಾಳ ಕಣ್ಣು ಮೊದಲಿನಿಂದ ಸತೀಶನ ಮೇಲೆ ಬಿದ್ದಿರುತ್ತವೆ. ಸತೀಶ ಅವಳ ವರ್ತನೆ ಅರಿತು ಮೊದಲಿನಿಂದಲೂ ವಿಮಲಳೊಂದಿಗೆ ಅಂತರ ಕಾಯ್ದುಕೊಂಡವನು. ಕಾವೇರಿ ಬಂದ ಮೇಲೆಯೂ ಅವನ ನಿಷ್ಠೆ ಹಾಗೆ ಉಳಿಯುತ್ತದೆ. ಆದರೆ ಎಲ್ಲವೂ ಸರಿಯಾಗಿದೆ ಎನ್ನುವಾಗ ಕಾವೇರಿ ಹಿಸ್ಟೀರಿಯಾ ಕಾಯಿಲೆಗೆ ಒಳಗಾಗುತ್ತಾಳೆ.

ಈ ಕಾರಣದಿಂದ ಕಾವೇರಿಯ ಶೀಲದ ಬಗೆಗೆ ಅನುಮಾನಿಸುವ ಸತೀಶನಿಗೆ ಕಾವೇರಿಯ ಮೇಲಿದ್ದ ಮೊದಲಿನ ಪ್ರೀತಿ, ನಂಬಿಕೆ ಸಂಪೂರ್ಣವಾಗಿ ಕುಸಿಯಲು ಕಾರಣವಾಗುತ್ತದೆ. ಕಾವೇರಿ ಆಸ್ಪತ್ರೆ ಸೇರಿಸಲ್ಪಟ್ಟು ಗುಣವಾಗಿ ಬರುತ್ತಾಳೆ. ಆದರೆ ತನ್ನ ಹಿಂದಿನ ಬದುಕು ಮಾತ್ರ ಅವಳಿಗೆ ದೊರಕುವುದಿಲ್ಲ. ಸತೀಶ ವಿಮಲಾಳ ಹಿಂದೆ ಹೋಗುತ್ತಾನೆ. ಕುಟುಂಬ, ಸಮಾಜದ ವರ್ತನೆಗಳು ಅವಳ ಮನಸ್ಥಿತಿ ಹದಗೆಡಲು ಮುಖ್ಯ ಕಾರಣವಾಗುತ್ತದೆ. ಸಮಾಜದ ಕಾರುಣ್ಯದ ನೋಟವನ್ನು, ತಿರಸ್ಕಾರವನ್ನು ಸಹಿಸಲಾಗದೇ ಮತ್ತೆ ಹಿಸ್ಟೀರಿಯಾಕ್ಕೆ ಒಳಗಾಗುತ್ತಾಳೆ. ಸತೀಶ ಹಾಗೂ ವಿಮಲಾಳ

ಸಂಬಂಧ ಅವಳನ್ನು ಅಂತಿಮವಾಗಿ ಹುಚ್ಚಾಸ್ಪತ್ರೆಗೆ ಸೇರುವಂತೆ ಮಾಡುತ್ತದೆ. ಇದು ಸಿನಿಮಾದ ಸಂಕ್ಷಿಪ್ತ ಕಥಾ ಹಂದರ. ಈ ಚಿತ್ರಕಥೆಯ ಸ್ವರೂಪವನ್ನು, ಕಾದಂಬರಿಗಿಂತ ಭಿನ್ನವಾದ ಕೆಲವು ಮುಖ್ಯ ಸಂಗತಿಗಳನ್ನು, ಶರಪಂಜರ ಸಿನಿಮಾದ ವಿಶಿಷ್ಟ ಅಂಶಗಳನ್ನು ಕೆಳಗಿನಂತೆ ಗಮನಿಸಬಹುದು.

ಸಿನಿಮಾದ ಆರಂಭಿಕ ದೃಶ್ಯ–ಕಾವೇರಿ ಕೊಡಗಿನ ಕಿತ್ತಳೆಯನ್ನು ಕೊಂಡು ತಿನ್ನಲು ಸಿಪ್ಪೆ ಬಿಡಿಸುವಾಗ ಅದೇ ಬಸ್ಸಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದ ಸತೀಶನ ಕಣ್ಣಿಗೆ ಆ ಹಣ್ಣಿನ ರಸ ಹಾರುವ ದೃಶ್ಯ. ಇದು ಪುಟ್ಟಣ್ಣ ಕಣಗಾಲರು ಸೃಷ್ಟಿಸಿಕೊಂಡ ಸ್ವತಂತ್ರ ಸನ್ನಿವೇಶ. ಸಿನಿಮಾದಲ್ಲಿ ಈ ದೃಶ್ಯವನ್ನು ಸಾಂಕೇತಿಕವಾಗಿ ಬಳಸಿಕೊಂಡಿದ್ದಾರೆ. ಈ ದೃಶ್ಯದಲ್ಲಿ ಮುಂದಿನ ಕಥೆಯ ತಿರುಳನ್ನು ಹಿಡಿದಿಟ್ಟಿದ್ದಾರೆ. ಇಲ್ಲಿ ಕಿತ್ತಳೆ ಹಣ್ಣನ್ನು ಪ್ರೇಮದ ಸಂಕೇತವಾಗಿ ಬಳಸಿಕೊಳ್ಳಲಾಗಿದೆ. ರುಚಿಯಾದ ಹಣ್ಣನ್ನು ಬಯಸುವವರು ಅದರ ಮೇಲಿನ ಕಹಿ ಪದರವನ್ನು ಒಪ್ಪಿಕೊಳ್ಳಲೇಬೇಕು. ಬದುಕಿನ ಕಹಿ ಘಟನೆಗಳನ್ನು ಮರೆತರೆ ಮಾತ್ರ ಸಿಹಿಯಾದ ಬದುಕು ಎಲ್ಲರದ್ದಾಗುತ್ತದೆ. ಇಲ್ಲವಾದರೆ ಹಣ್ಣಿನ ಕಹಿ ಪದರವನ್ನು ಬಿಡಿಸುವಾಗ ಹಾರುವ ರಸವನ್ನು ಕುರಿತು ಚಿಂತಿಸಿ ಹಣ್ಣನ್ನು ತೊರೆದರೆ ಅದರೊಳಗಿನ ಸಿಹಿ ಹೇಗೆ ದೊರೆಯುವುದಿಲ್ಲವೋ ಹಾಗೆ ಬದುಕಿನ ಕಷ್ಟ ಹಾಗೂ ಕಹಿ ಘಟನೆಗಳಿಗೆ ಹೆಚ್ಚು ಮಹತ್ವ ನೀಡಿ, ಅವುಗಳನ್ನೇ ನೆನೆಯುತ್ತಾ, ಇರುವ ಸುಖವನ್ನು ಲಕ್ಷಿಸದೇ ಬದುಕುವ ಬದುಕಿನಂತಾಗುತ್ತದೆ. ಇಲ್ಲಿ ಸತೀಶ ಮಾಡುವುದೂ ಅದನ್ನೇ, ಕಾವೇರಿಯ ಒಂದು ತಪ್ಪಿನಿಂದಾಗಿ ಅವಳನ್ನು ತಿರಸ್ಕರಿಸಿ, ತಾನೂ ನೈತಿಕ ಅಧಃಪತನಕ್ಕೆ ಇಳಿಯುತ್ತಾನೆ. ಬದುಕಿನ ಕಹಿಯನ್ನು ನೆನೆಯುತ್ತಾ ಸಿಹಿಯನ್ನು ದೂರ ತಳ್ಳುತ್ತಾನೆ.

ಈ ಮೇಲಿನ ಮೊದಲಿನ ದೃಶ್ಯದ ತಾತ್ಪರ್ಯವನ್ನು ಸಿನಿಮಾದ ಕೊನೆಯ ದೃಶ್ಯ ಸಂದರ್ಭದಲ್ಲಿಯೂ ಮತ್ತೆ ಗಮನಿಸಬಹುದು. ಮಕ್ಕಳು ತಂದೆಯ ಬಳಿ ಅಮ್ಮನಿಗೆ ಕಿತ್ತಳೆಹಣ್ಣನ್ನು ಕೊಡು ಎಂದು ಹೇಳುವುದು, ಕಹಿಯನ್ನು ಮರೆತು ಮತ್ತೆ ಅವಳಿಗೆ ಪ್ರೇಮವನ್ನು ಕೊಡು ಎನ್ನುವುದೇ ಆಗಿದೆ. ಕಾವೇರಿ ಹಿಸ್ಟೀರಿಯಾದಿಂದ ಗುಣಮುಖಳಾಗಿ ಬಂದ ಮೇಲೆ ಬದಲಾಗಿರುವ ಸತೀಶನ ಪ್ರೇಮವನ್ನು ಹಂಬಲಿಸಿ ಅವನನ್ನು ಮೊದಲಿನ ಪ್ರೀತಿಗಾಗಿ ಪೀಡಿಸುತ್ತಾಳೆ. ಸತೀಶ ಅವಳು ಪ್ರೀತಿಗಾಗಿ ಮಾಡುತ್ತಿರುವ ಹಠವನ್ನು ತಡೆಯಲಾಗದೇ ಪ್ರೇಮಿಯಂತೆ ನಟಿಸುತ್ತಾನೆ. ಆ ಸಂದರ್ಭದ ಹಾಡು 'ಸಂದೇಶ.. ಮೇಘ ಸಂದೇಶ.. ಆಶಾ ಜೀವನ.. ಮೇಘ ಸಂದೇಶ' ಎನ್ನುವುದು. ಈ ಹಾಡಿನ ಚಿತ್ರೀಕರಣ ಸಂದರ್ಭದಲ್ಲಿ ಬೆಟ್ಟದ ಮೇಲಿಂದ ಕಿತ್ತಳೆ ಹಣ್ಣುಗಳ ರಾಶಿರಾಶಿಯನ್ನೇ ಸುರಿಸಿ ಕಾವೇರಿಯು ಮೊದಲಿನ ಪ್ರೇಮ ಮತ್ತೆ ದೊರಕಿತೆಂಬ ಭ್ರಮೆಯಲ್ಲಿ ಕನಸು ಕಾಣುವುದನ್ನು ಚಿತ್ರಿಸಲಾಗಿದೆ. ಸಿನಿಮಾದ ಈ ಮೇಲಿನ ಮೂರು ದೃಶ್ಯಗಳನ್ನು ಗಮನಿಸಿದಾಗ ಕಿತ್ತಳೆ ಹಣ್ಣು ಪ್ರೇಮದ ರೂಪಕವಾಗಿ, ಬದುಕಿನ ಕಷ್ಟ–ಸುಖ, ಸಿಹಿ–ಕಹಿ, ನೋವು–ನಲಿವುಗಳ ಸಂಕೇತವಾಗಿ ಕಂಡುಬರುತ್ತದೆ ಎನ್ನಬಹುದು. ಇಂತಹ ಸಾಂಕೇತಿಕತೆಗಳನ್ನು ಬಳಸಿಕೊಂಡು ಚಿತ್ರದ ಸನ್ನಿವೇಶ, ಸಂದರ್ಭಗಳನ್ನು ನಿರ್ವಚಿಸಿರುವ ನಿರ್ದೇಶಕರ ಜಾಣ್ಮೆಯನ್ನು ಇಲ್ಲಿ ಗಮನಿಸಬಹುದು.

ಕಾದಂಬರಿಯ ಆರಂಭವು ಮಾನಸಿಕ ಆಸ್ಪತ್ರೆಯಿಂದ ಕಾವೇರಿ ಮರುಳುವ ಸನ್ನಿವೇಶದಿಂದ ಆರಂಭವಾಗಿ ಕಾವೇರಿ ಮತ್ತೆ ಮಾನಸಿಕರೋಗಿಯಾಗಿ ಆಸ್ಪತ್ರೆಗೆ ಸೇರಲ್ಪಡುವ ಸೂಚನೆಯೊಂದಿಗೆ ಕಾದಂಬರಿ ಮುಗಿಯುತ್ತದೆ. ಆದರೆ ಸಿನಿಮಾದಲ್ಲಿ

ಕಥೆ ಆರಂಭವಾಗುವುದು ಕಾವೇರಿ ಹಾಗೂ ಸತೀಶನ ಪ್ರೇಮದ ಆರಂಭದ ಸೂಚನೆಯ ಸನ್ನಿವೇಶದ ಮೂಲಕ. ಈ ಸಂದರ್ಭ ಕಾದಂಬರಿಯ ಮಧ್ಯಭಾಗದಲ್ಲಿ ಬರುತ್ತದೆ. ಕಾವೇರಿ ಬಿಡಿಸುತ್ತಿದ್ದ ಕಿತ್ತಳೆ ಹಣ್ಣಿನ ರಸ ಸತೀಶನಿಗೆ ಹಾರುವ ಸನ್ನಿವೇಶ, ಮದುವೆ ಮುಗಿಸಿ ಹೊರಡುವಾಗ ಸತೀಶ ಕಾವೇರಿಗೆ ಹಣ್ಣು ಕೊಟ್ಟು ಪ್ರೇಮ ನಿವೇದಿಸುವ ದೃಶ್ಯ ಕಾದಂಬರಿಯಲ್ಲಿಲ್ಲ.

ಕಾದಂಬರಿಯಲ್ಲಿ ಕಾವೇರಿಯ ಸುಂದರ ಸಂಸಾರದ ಪೂರ್ವಕತೆಯನ್ನು ಹೇಳುವಾಗ 'ಫ್ಲ್ಯಾಷ್ ಬ್ಯಾಕ್' ತಂತ್ರವನ್ನು ಅನುಸರಿಸಲಾಗಿದೆ. ಕಾದಂಬರಿಯ ಕಥಾನಿರೂಪಣೆಯ ಮಧ್ಯದಲ್ಲಿ ಈ ಕತೆ ಬರುತ್ತದೆ. ಆದರೆ ಶರಪಂಜರ ಸಿನಿಮಾ ಆರಂಭವಾಗುವುದೇ ಪ್ರೇಮದ ನೆಲೆಯಲ್ಲಿ. ಸಿನಿಮಾದ ಮೊದಲ ಅರ್ಧ ಕಾವೇರಿಯ ಸುಂದರ ಸಂಸಾರದ ಚಿತ್ರಣವಿದ್ದರೆ ಕೊನೆಯ ಅರ್ಧದಲ್ಲಿ ಅವಳು ಮನೋರೋಗಿಯಾಗಿ ಅನುಭವಿಸುವ ಯಾತನೆಗಳ ಚಿತ್ರಣವಿದೆ. ಸನ್ನಿವೇಶಗಳ ಅಗತ್ಯಕ್ಕನುಗುಣವಾಗಿ ಈ ತಂತ್ರವನ್ನು ಅಲ್ಲಲ್ಲಿ ನಿರ್ದೇಶಕರು ಬಳಸಿಕೊಂಡಿದ್ದಾರೆ. ಉದಾಹರಣೆಗೆ, ಕಾವೇರಿ ಹಿಂದೆ ನಡೆದ ಘಟನೆಯನ್ನು ನೆನಪಿಸಿಕೊಳ್ಳುವ ಸಂದರ್ಭ ಮತ್ತು ಸತೀಶನೊಂದಿಗಿನ ಮೊದಲಿನ ಪ್ರೇಮ–ಪ್ರಣಯವನ್ನು ನೆನಪಿಸಿಕೊಳ್ಳುವ ದೃಶ್ಯಗಳು, ಸತೀಶ ತನ್ನ ಗೆಳೆಯರು ಕಾವೇರಿ ಬಗೆಗೆ ಹೇಳಿದ ಮಾತುಗಳನ್ನು ಆಕೆ ಹಿಸ್ಟೀರಿಯಾಕ್ಕೆ ಒಳಗಾದಾಗ ನೆನಪಿಸಿಕೊಳ್ಳುವ ಸನ್ನಿವೇಶಗಳು ಇತ್ಯಾದಿ ಸಂದರ್ಭಗಳಲ್ಲಿ ಈ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಈ ತಂತ್ರ ಸಿನಿಮಾದಲ್ಲಿ ದೃಶ್ಯಗಳನ್ನು ಪರಿಣಾಮಕಾರಿಯಾಗಿ ಮೂಡಿಸಲು ಯಶಸ್ವಿಯಾಗಿದೆ. ಕಾದಂಬರಿಯ ನಿರೂಪಣೆಗಳು ಇಲ್ಲಿ ಸೂಚ್ಯವಾಗಿವೆ.

ಅರವತ್ತು–ಎಪ್ಪತ್ತರ ದಶಕದ ಸಿನಿಮಾಗಳು ನಾಯಕನ ಸಾಹಸ ಪ್ರದರ್ಶನವನ್ನೇ ಮುಖ್ಯವಾಗಿ ಬಿಂಬಿಸುತ್ತಿದ್ದ ಕ್ರಮ ಈ ಸಿನಿಮಾದಲ್ಲಿ ಇಲ್ಲವಾಗಿದೆ. ಯಾವುದೇ ಪರಂಪರೆಯನ್ನು, ಸಿದ್ಧ ಮಾದರಿಗಳನ್ನು ಪುಟ್ಟಣ್ಣ ಕಣಗಾಲ್ ಕಣ್ಣುಮುಚ್ಚಿಕೊಂಡು ಪಾಲಿಸದೇ ಪ್ರಯೋಗಶೀಲತೆಯನ್ನು, ಹೊಸತನವನ್ನು ಕಾಯ್ದುಕೊಂಡವರು ಎನ್ನುವುದಕ್ಕೆ ಅವರ 'ಬೆಳ್ಳಿಮೋಡ', 'ಶರಪಂಜರ', 'ಗೆಜ್ಜೆಪೂಜೆ'ಯಂತಹ ಸಿನಿಮಾಗಳೇ ಸಾಕ್ಷಿಯಾಗಿವೆ.

ಈ ಸಿನಿಮಾದಲ್ಲಿ ಮಾನಸಿಕ ಆಸ್ಪತ್ರೆ ದೃಶ್ಯದ ಸಂದರ್ಭದಲ್ಲಿ ಮನೋರೋಗಗಳನ್ನು, ಮನೋರೋಗಿಗಳನ್ನು ನೋಡುವ ಕ್ರಮದ ಬಗ್ಗೆ ಇರುವ ಜನರ ಮನಸ್ಥಿತಿಯನ್ನು ತಿದ್ದಲು ಪ್ರಯತ್ನಿಸಲಾಗಿದೆ. "ಹುಚ್ಚಾಸ್ಪತ್ರೆ ಎಂದರೆ ಬಂದಿಖಾನೆ ಎಂಬ ಭಯಂಕರ ಮನೋಭಾವನೆ ಜನರ ಮನಸ್ಸಿನಲ್ಲಿ ಭದ್ರವಾಗಿ ಬೇರೂರಿದೆ. ಹುಚ್ಚಾಸ್ಪತ್ರೆ ಬಂದಿಖಾನೆಯಲ್ಲ. ಮಾನಸಿಕ ರೋಗದಿಂದ ನರಳುವವರಿಗೆ ನವ ಚೈತನ್ಯ ನೀಡುವ ಮಾನಸ ಸರೋವರ"[1] ಎನ್ನುವ ನಿರೂಪಣೆಯ ಮೂಲಕ ಮಾನಸಿಕ ರೋಗದ ಆಸ್ಪತ್ರೆಗಳ ಬಗ್ಗೆ ಇರುವ ತಪ್ಪು ಕಲ್ಪನೆಯನ್ನು ಒಡೆಯಲಾಗಿದೆ. ನಂತರ "ನಿಮಗೆ ಕಾರಣ ಮುಖ್ಯವೋ ಅವಳು ಗುಣವಾಗುವುದು ಮುಖ್ಯವೋ"[2] ಎನ್ನುವ ವೈದ್ಯರ ಮಾತಿನ ಮೂಲಕ ರೋಗಿಯ ಮನೋರೋಗಗಳನ್ನು ಕುರಿತು ಅನವಶ್ಯಕ ಕಾರಣವನ್ನು ಕೆದಕಿಕೊಂಡು ಹೋಗುವುದರ ಮೂಲಕ ಸಮಸ್ಯೆಗಳು ಉಲ್ಬಣವಾಗುತ್ತವೆ ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ. ಆದರೆ ಸತೀಶ ಆ ರೋಗದ ಕಾರಣವನ್ನು ಹುಡುಕಿ ಹೋದದ್ದೇ ಕಾವೇರಿ ಮತ್ತು ಸತೀಶರ ಸಂಬಂಧ ಹದಗೆಡಲು, ಕಾವೇರಿ

ಹುಚ್ಚಿಯಾಗಲು ಕಾರಣವಾಗುತ್ತದೆ. ಸಿನಿಮಾದಲ್ಲಿ ಹುಚ್ಚು ವಂಶಪಾರಂಪರ್ಯವೆನ್ನುವ ಸಮಾಜದ ಕಲ್ಪನೆಯನ್ನು ಅನೇಕ ಸಂದರ್ಭಗಳಲ್ಲಿ ಒಡೆಯಲಾಗಿದೆ.

ಈ ಸಿನಿಮಾದಲ್ಲಿ ಗಮನಿಸಬೇಕಾದ ಕೆಲವು ಮುಖ್ಯ ಅಂಶಗಳೆಂದರೆ, ದೇಸಿಯತೆಗೆ, ಕರ್ನಾಟಕದ ಪ್ರಾಕೃತಿಕ ಸೌಂದರ್ಯಕ್ಕೆ ಹೆಚ್ಚು ಒತ್ತು ನೀಡಿರುವುದು, ಚಲನಚಿತ್ರಗೀತೆಗಳ ಮೂಲಕವೂ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವುದಕ್ಕೆ ಮುಂದಾಗಿರುವುದು. ಕಾದಂಬರಿಯಲ್ಲಿ ಇದರ ಸುಳಿವೇನು ನಮಗೆ ಸಿಗುವುದಿಲ್ಲ. ಇದು ನಿರ್ದೇಶಕರ ಸ್ವತಂತ್ರ ಸೃಷ್ಟಿ. ಸಿನಿಮಾದ ಗಂಭೀರವಾದ ಚಿತ್ರಕಥೆಯ ಸಂದರ್ಭದಲ್ಲಿಯೂ ದೇಸಿಯತೆಯನ್ನು, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸಿರುವುದು, ಕರ್ನಾಟಕದ ಪ್ರಾಕೃತಿಕ ಸಂಪತ್ತು–ಸೌಂದರ್ಯಗಳನ್ನು ತೋರಿಸಿರುವುದು ನಿರ್ದೇಶಕರ ಸಾಂಸ್ಕೃತಿಕ ಪ್ರಜ್ಞೆ ಮತ್ತು ಕಾಳಜಿ, ಪ್ರಾದೇಶಿಕ ಒಲವು, ಸೌಂದರ್ಯ ಪ್ರಜ್ಞೆ ಹಾಗೂ ಪ್ರಯೋಗಶೀಲತೆಗೆ ಸಾಕ್ಷಿಯಾಗಿದೆ.

ಉದಾಹರಣೆಗೆ, ಕೊಡಗಿನ ಮದುವೆ ಸಂಪ್ರದಾಯ, ಅವರ ನೃತ್ಯ ಮತ್ತು ಹಾಡುಗಳು, ಅಲ್ಲಿನ ಪ್ರಾಕೃತಿಕ ಸೊಬಗು ಹಾಗೂ ಜನಜೀವನ ಮತ್ತು ಅಲ್ಲಿನ ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ಔಚಿತ್ಯಪೂರ್ಣವಾಗಿ ತೋರಿಸಲಾಗಿದೆ. 'ಕೊಡಗಿನ ಕಾವೇರಿ.. ನೀ ಬೆಡಗಿನ ವೈಯ್ಯಾರಿ' ಎನ್ನುವ ಹಾಡಿನ ಮೂಲಕ ಪ್ರೇಮ ಪ್ರಣಯಗಳನ್ನು ನಿರೂಪಿಸಿದರೂ ಅದು ಕಾವೇರಿ ನದಿಯನ್ನು, ಅದರ ಉಪಯುಕ್ತತೆ ಹಾಗೂ ಸೌಂದರ್ಯವನ್ನು ವರ್ಣಿಸುತ್ತದೆ. ಕಣಗಾಲರು ಈ ಹಾಡಿನ ಒಂದೊಂದು ಪದವನ್ನು ಹೀಗೆ ಇರಬೇಕೆಂದು ಬರೆಸಿದ್ದರಂತೆ. "ನನ್ನ ಊರು ಕಣಗಾಲು. ಅದು ಕಾವೇರಿ ತೀರದಲ್ಲಿದೆ. ....ಆ ಕಾವೇರಿ ನದಿ, ಆ ಪ್ರದೇಶದ ಸೊಬಗು ನನಗೆ ಸದಾ ಜ್ಞಾಪಕಕ್ಕೆ ಬರುತ್ತೆ. ನಾನು ಅವಳನ್ನು ತಾಯಿಯಾಗಿ ಪೂಜಿಸ್ತೀನಿ ಎಷ್ಟೋ ಸಾರಿ ಅವಳಲ್ಲಿ ಗೆಳತಿಯನ್ನೂ, ಪ್ರೇಯಸಿಯನ್ನೂ ಕಂಡಿದ್ದೀನಿ. ಹಾಗಾಗಿ, ಕಾವೇರಿಯನ್ನು ನಾನು ಗುಟ್ಟಾಗಿ ಪ್ರೀತಿಸ್ತೀನಿ"[3] ಎನ್ನುತ್ತಾರೆ ಕಣಗಾಲರು.

ಕಾದಂಬರಿ ಮನೋವೈಜ್ಞಾನಿಕ ನೆಲೆಯಲ್ಲಿ ಕಾವೇರಿ ಮತ್ತು ಸತೀಶನ ದಾಂಪತ್ಯ, ಪ್ರೇಮ, ವಿರಹ, ವಿಷಾದಗಳನ್ನು ದಾಖಲಿಸಿದರೆ, ಸಿನಿಮಾ ಈ ಎರಡು ಪಾತ್ರಗಳನ್ನೇ ಮುಖ್ಯವಾಗಿ ಕೇಂದ್ರೀಕರಿಸಿಕೊಂಡರೂ, ಆ ಪಾತ್ರಗಳ ಚಿತ್ರಣ ಸಂದರ್ಭದಲ್ಲಿ ಕರ್ನಾಟಕದ ಪ್ರಾಕೃತಿಕ ಪರಿಸರ, ಸಮಾಜ, ಜನಜೀವನ, ಸಂಸ್ಕೃತಿ, ಸ್ಥಳ ವೈಶಿಷ್ಟ್ಯತೆಗಳು, ಪರಂಪರೆ ಹಾಗೂ ವಿಶಿಷ್ಟ ಆಚಾರ–ವಿಚಾರಗಳ ಪರಿಚಯವನ್ನು ಪೂರಕವಾಗಿ ಮಾಡಿಕೊಡುತ್ತದೆ.

ಸಿನಿಮಾದಲ್ಲಿನ ಸಂಭಾಷಣೆಗಳು ಸಹ ಅರ್ಥಭರಿತವಾಗಿವೆ. ಹಾಗೂ ಒಂದು ಸಂಭಾಷಣೆ ಹಲವು ಒಳಾರ್ಥಗಳನ್ನು, ಸಾಂಕೇತಿಕತೆಗಳನ್ನು ತನ್ನಲ್ಲಿ ಅಡಗಿಸಿಕೊಂಡು ಸಿನಿಮಾದ ಹಿಂದಿನ ಅಥವಾ ಮುಂದಿನ ಯಾವುದೋ ಘಟನೆ, ಸನ್ನಿವೇಶಗಳನ್ನು ಸೂಚ್ಯವಾಗಿ ಹೇಳುತ್ತಿರುತ್ತದೆ. ಈ ತಂತ್ರ ಸಿನಿಮಾದ ಹಲವು ಸನ್ನಿವೇಶದಲ್ಲಿ ಬಳಕೆಯಾಗಿದೆ. ಉದ್ದವಾದ ನಿರೂಪಣೆಗಳ ಬದಲು ಹಾವಭಾವಗಳಲ್ಲಿಯೇ ಸನ್ನಿವೇಶಗಳನ್ನು ನಿರ್ವಹಿಸುವ ಕಲೆ ಪುಟ್ಟಣ್ಣನವರದ್ದು. ಉದಾಹರಣೆಗೆ ಸತೀಶನ ಪ್ರೇಮ ನಿವೇದನೆಯ ದೃಶ್ಯ, ಕಾವೇರಿ ಹಿಸ್ಟೀರಿಯಾಕ್ಕೆ ಒಳಗಾಗುವ ದೃಶ್ಯ, ಸತೀಶ ಕಾವೇರಿಯನ್ನು ತಿರಸ್ಕರಿಸುವ ದೃಶ್ಯಗಳನ್ನು ಗಮನಿಸಬಹುದು. ಕಾವೇರಿ–ಸತೀಶರ ಮದುವೆ ದೃಶ್ಯಗಳ ಬದಲು ನೇರವಾಗಿ ವಿವಾಹ ನಂತರದ ಓಕುಳಿ ಶಾಸ್ತ್ರವನ್ನು

ತೋರಿಸುವುದು ದೃಶ್ಯಗಳ ಸಂಕ್ಷಿಪ್ತತೆಗೆ ಉತ್ತಮ ಉದಾಹರಣೆಯಾಗಿದೆ.

ಸಿನಿಮಾದ ಕೊನೆಯ ದೃಶ್ಯ ಪರಿಣಾಮಕಾರಿಯಾಗಿದೆ. ಕಾವೇರಿಯನ್ನು ಮತ್ತೆ ಮಾನಸಿಕ ಆಸ್ಪತ್ರೆಗೆ ಕಳಿಸಲು ಅವಳನ್ನು ವ್ಯಾನಿನ ಬಳಿ ಎಳೆದೊಯ್ಯುವ ದೃಶ್ಯ ಮನಕಲುಕುವಂತಿದೆ. ಅದಕ್ಕೂ ಮುನ್ನ ಅವರ ಮಕ್ಕಳ ಕೈಯಲ್ಲಿ ಸತೀಶನಿಗೆ ಕಿತ್ತಳೆಹಣ್ಣನ್ನು ನೀಡಿ 'ಅಪ್ಪಾ ಅಮ್ಮನಿಗೆ ಈ ಹಣ್ಣು ಕೊಡಪ್ಪ', 'ಅಮ್ಮನಿಗೆ ಅಳಬೇಡ ಅಂತ ಹೇಳಪ್ಪ' ಎಂದು ಹೇಳಿಸುವ ಮೂಲಕ ಕಾವೇರಿಗೆ ಪ್ರೀತಿಯ ಅಗತ್ಯವಿದೆ ಎಂದು, ಅದು ಸಿಕ್ಕರೆ ಮತ್ತೆ ಅವಳು ಮೊದಲಿನಂತಾಗುತ್ತಾಳೆ ಎಂದು ಈ ಮೂಲಕ ಧ್ವನಿಸಲಾಗಿದೆ. ಅಲ್ಲದೇ ಸತೀಶ ಮಕ್ಕಳ ಮುಖ ನೋಡಿ ವ್ಯಥೆ ಪಟ್ಟುಕೊಳ್ಳುವಲ್ಲಿ ಮುಂದೆ ಆತನ ಮನಸ್ಸು ಬದಲಾಯಿಸಬಹುದಾದ ಸಣ್ಣ ಆಶಾವಾದದ ಎಳೆ ಸಿನಿಮಾದ ಕೊನೆಯ ಈ ದೃಶ್ಯದಲ್ಲಿ ಮೂಡಿದೆ. ಕಾದಂಬರಿಯಲ್ಲಿ ಈ ಆಶಾವಾದದ ಸೂಚನೆಗಳಿಲ್ಲ.

ಒಟ್ಟಿನಲ್ಲಿ 'ಶರಪಂಜರ' ಸಿನಿಮಾವು ಕಾದಂಬರಿಯ ಕಥೆಯನ್ನು ತೆಗೆದುಕೊಂಡು, ಚಿತ್ರಕಥೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ತಂದುಕೊಂಡರೂ ಮೂಲ ಕಥೆಯ ಆಶಯಕ್ಕೆ ಪೂರಕವಾಗಿಯೇ ಮೂಡಿದೆ.

ಅಡಿ ಟಿಪ್ಪಣಿಗಳು

1. ಶರಪಂಜರ ಸಿನಿಮಾ (1971).
2. ಅದೇ.
3. manigulabi.wordpress.com

ಪರಾಮರ್ಶನ ಗ್ರಂಥಗಳು

4. ಬರಗೂರು ರಾಮಚಂದ್ರಪ್ಪ (2016). ಸಿನಿಮಾ ಒಂದು ಜಾನಪದ ಕಲೆ. ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
5. ಪ್ರಶಾಂತ ನಾಯಕ, ಜಿ. (2009). ಕನ್ನಡ ಸಿನಿಮಾ ಲೋಕ. ರಚನಾ ಪ್ರಕಾಶನ, ಮೈಸೂರು.
6. ಪ್ರಸನ್ನ, ಎ.ಎನ್. (2017). ಚಿತ್ರಕಥೆಯ ಸ್ವರೂಪ. ಕಣ್ವ ಪ್ರಕಾಶನ, ಬೆಂಗಳೂರು.
7. ಬಸವೇಗೌಡ, ಡಿ.ಬಿ. (2011). ನಾ ಕಂಡ ಪುಟ್ಟಣ್ಣ ಕಣಗಾಲ್. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರ.
8. ಪಾರ್ವತಿ, ಎಚ್.ಎಸ್. (ಸಂ.) (1991). ಸುರಗಿ. ಇಳಾ ಪ್ರಕಾಶನ, ಬೆಂಗಳೂರು.
9. ಬರಗೂರು ರಾಮಚಂದ್ರಪ್ಪ (2012). ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ. ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.
10. ಪ್ರಶಾಂತ ನಾಯಕ, ಜಿ. (2018). ಸಿನಿ ಸಂಪದ. ಉಷಾ ಪ್ರಕಾಶನ, ಮೈಸೂರು.

❖❖❖

ಕುವೆಂಪು ಕವನಗಳಲ್ಲಿ ನೇಗಿಲಯೋಗಿ

ಡಾ. ಎಚ್.ಕೆ. ವೆಂಕಟೇಶ
ಕನ್ನಡ ಸಹ ಪ್ರಾಧ್ಯಾಪಕರು
ಸ.ಮಹಿಳಾ ಪ್ರ.ದ.ಕಾಲೇಜು, ಹಾಸನ

ಡಾ. ರವಿ ಎನ್.ಸಿ.
ಕನ್ನಡ ಸಹ ಪ್ರಾಧ್ಯಾಪಕರು
ಸ.ವಿಜ್ಞಾನ ಕಾಲೇಜು(ಸ್ವಾಯತ್ತ), ಹಾಸನ

ಆಧುನಿಕ ಕನ್ನಡ ಸಾರಸ್ವತ ಲೋಕದಲ್ಲಿ ಯುಗಪರಂಪರೆಯನ್ನು ಸೃಜಿಸಿದ ಕವಿಚೇತನ ಕುವೆಂಪು. ಕಾವ್ಯ, ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಜೀವನಚರಿತ್ರೆ, ಆತ್ಮಚರಿತ್ರೆ, ಮಹಾಕಾವ್ಯ... ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿ ಕುವೆಂಪು ಅವರದು ಗಣನೀಯ ಸಾಧನೆ. "ಪರಂಪರೆಯ ಆಳವಾದ ತಳಪಾಯದ ಮೇಲೆ ನಿರ್ಮಿತವಾದ ಗಗನಚುಂಬಿ ಕಾವ್ಯಮಂದಿರ ಕುವೆಂಪು ಸಾಹಿತ್ಯ." ಕುವೆಂಪು ಸಾಮಾಜಿಕ ಕಳಕಳಿ ಉಳ್ಳ ನವೋದಯ ಕವಿ ಎಂಬುದರಲ್ಲಿ ಎರಡು ಮಾತಿಲ್ಲ.

'ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ' ಯನ್ನು ಸಾರುವ ಕವಿ ಕುವೆಂಪು ಜಾತಿ–ಮತ–ಪಂಥ, ವರ್ಗ, ವರ್ಣ, ದೇಶ, ಭಾಷೆ ಮೀರಿದ ವ್ಯಕ್ತಿತ್ವ ನಿರ್ಮಿಸಿಕೊಳ್ಳಬೇಕು ಹಾಗೂ ಇವುಗಳನ್ನು ಮೀರಿದ ಸಾಹಿತ್ಯ ಸೃಷ್ಟಿಯ ದೃಷ್ಟಿಯನ್ನು ಧರಿಸಬೇಕೆಂದು ಹೇಳಿದರು. ಆದುದರಿಂದ ಶ್ರೀಸಾಮಾನ್ಯನ ಕುರಿತ ಕಾವ್ಯರಚನೆಯ ತುಡಿತ ಇವರಲ್ಲಿ ಹೆಚ್ಚು.

ಈವರೆಗಿನ ವಿದ್ವಾಂಸರು ಕುವೆಂಪು ಅವರ ಕವನಗಳಲ್ಲಿ ಕೆಳಗಿನ ನಾಲ್ಕು ಪ್ರಧಾನಾಂಶಗಳನ್ನು ಗುರುತಿಸುತ್ತಾ ಬಂದಿದ್ದಾರೆ. 1. ಕುವೆಂಪು ಕವನಗಳಲ್ಲಿ ನಿಸರ್ಗ 2. ಕುವೆಂಪು ಕವನಗಳಲ್ಲಿ ಅಧ್ಯಾತ್ಮ 3. ಕುವೆಂಪು ಕವನಗಳಲ್ಲಿ ಪ್ರೇಮ 4. ಕುವೆಂಪು ಕವನಗಳಲ್ಲಿ ವೈಚಾರಿಕತೆ. ಇಲ್ಲಿ ಕುವೆಂಪು ಅವರ ಕವನಗಳಲ್ಲಿ ನೇಗಿಲಯೋಗಿ ಪರವಾದ ನಿಲುವುಗಳನ್ನು ಹೆಕ್ಕಿ ತೆಗೆಯುವುದು ಈ ಲೇಖನದ ಪ್ರಧಾನೋದ್ದೇಶ.

ಕುವೆಂಪು ಅವರ ಕವನಗಳಲ್ಲಿ ಈ ಪ್ರಮುಖ ಅಂಶಗಳನ್ನು ಹಲವರು ಬಿಡಿಯಾಗಿ, ಇಡಿಯಾಗಿ ಗುರುತಿಸಿದ್ದಾರೆ. ಅವರ ಕವನಗಳಲ್ಲಿ ಅಂತರ್‌ವಾಹಿನಿಯಂತೆ ಗುಪ್ತಗಾಮಿನಿಯಾಗಿ ಹರಿದುಬಂದಿರುವ ರೈತರ, ಶೋಷಿತರ ಪರವಾದ ಕವನಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಕುವೆಂಪು ಅವರ 'ನೇಗಿಲಯೋಗಿ', 'ಸುಗ್ಗಿಹಾಡು', 'ಜಡವಾದಿ', 'ಕಲ್ಕಿ', 'ರಕ್ತಧುನಿ', 'ಕಿಟ್ಟಯ್ಯ', 'ರೈತನ ದೃಷ್ಟಿ', 'ಕೋಗಿಲೆ ಮತ್ತು ಸೋವಿಯತ್ ರಷ್ಯಾ', 'ಗೊಬ್ಬರ', 'ಓ, ಬನ್ನಿ, ಸೋದರರೆ, ಬೇಗ ಬನ್ನಿ!', 'ಹೊಸಬಾಳಿನ ಗೀತೆ', 'ಕ್ರಾಂತಿಕಾಳಿ', 'ಬೆಕ್ಕು–ಇಲಿ', 'ಲೆನಿನ್', 'ಶ್ರೀಸಾಮಾನ್ಯರ ದೀಕ್ಷಾಗೀತೆ', 'ರೈತನ ದೃಷ್ಟಿ', 'ಬ್ರಾಹ್ಮನಾಯಿ–ಶೂದ್ರಕೋಳಿ', 'ದೇವರು–ಪೂಜಾರಿ', 'ಅಷ್ಟಗ್ರಹಯೋಗಸಿದ್ಧಿ', 'ಮಠಾಧಿಪತಿ', 'ಕರಿಸಿದ್ಧ', 'ನಾಗಿ', 'ಅಮಲನ ಕಥೆ', 'ಹಾಳೂರು' – ಪ್ರಮುಖವಾಗಿ ಈ ಕವನಗಳಲ್ಲಿ ರೈತರ, ಶೋಷಿತರ ಪರವಾದ ಧ್ವನಿ ಅಭಿವ್ಯಕ್ತಗೊಂಡಿದೆ.

ಕುವೆಂಪು ಅವರ ರೈತಪರವಾದ ಕವನಗಳು

ರೈತರ ಸಮಸ್ಯೆ ಬಹುಮುಖವಾದುದು. 'ಕಿಟ್ಟಯ್ಯ', 'ಗೊಬ್ಬರ', 'ನೇಗಿಲಯೋಗಿ'...

ಮೊದಲಾದ ಕವನಗಳಲ್ಲಿ ಕುವೆಂಪು ಬಡರೈತರ ಪರ ಧ್ವನಿ ಎತ್ತಿದ್ದಾರೆ. "ಕುವೆಂಪು ಒಂದು ರೀತಿ 'ಎಚ್ಚರದ ಪ್ರಜ್ಞೆ'ಯಾಗಿ ತಮ್ಮ ಕವಿತೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಅದು ಕೆಲವೊಮ್ಮೆ ಉದ್ಘೋಷದ, ಸಂದೇಶದ ರೂಪ ತಾಳಿಬಿಡುತ್ತದೆ. ಜೊತೆಗೆ ಕುವೆಂಪು ತಮ್ಮ ಕಾಲದ ಸಾಮಾಜಿಕ ಘಟನೆಗಳಿಗೆ ಉದ್ದಕ್ಕೂ ತೀವ್ರವಾಗಿ ಸ್ಪಂದಿಸಿದ್ದಾರೆ; ಪ್ರತಿಕ್ರಿಯಿಸಿದ್ದಾರೆ. ಈ ಸ್ಪಂದನ, ಪ್ರತಿಕ್ರಿಯೆಗಳು ಕವಿತೆಯ ರೂಪ ತಾಳಿವೆ. ಬಹುಶಃ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರಂತೆ ಸಮಕಾಲೀನ ಘಟನೆಗಳಿಗೆ ಇಷ್ಟೊಂದು ತೀವ್ರವಾಗಿ ಸ್ಪಂದಿಸಿ ಪ್ರತಿಕ್ರಿಯಿಸಿದ ಮತ್ತೊಂದು ಉದಾಹರಣೆ ಕಷ್ಟ...".

ಕುವೆಂಪು ಅವರಿಗೆ ಸಾಮಾಜಿಕ ಅಡಿಪಾಯದ ಅರಿವಿನ ಮಹತ್ವ ತಿಳಿದಿತ್ತು. ಆದುದರಿಂದಲೇ ಅವರು

"ಕವಿಗರಸುಗಿರಸುಗಳ ಋಣವಿಲ್ಲ!
ಅವನಗ್ನಿಮುಖಿ!
ಪ್ರಳಯ ಶಿಖಿ!"

'ಚಕ್ರವರ್ತಿಯ ವಿಪುಲ ಸಂಪತ್ತು ಕವಿಯ ಕಾಲ್ಗಳಡಿ' ಎಂದು ದಿಟ್ಟತನದಿಂದ ಹೇಳಲು ಸಾಧ್ಯವಾಯಿತು.

"ರೈತನನ್ನು 'ನೇಗಿಲಯೋಗಿ' ಎಂದು ಕರೆದು ಗೌರವಿಸಿದ ಮೊದಲ ಕವಿ ಕುವೆಂಪು. ಹಾಗೆಯೇ ಸ್ವಾತಂತ್ರ್ಯೋತ್ತರ ಭಾರತದ ಸಾಮಾನ್ಯ ಜನಸಮುದಾಯವನ್ನು 'ಶ್ರೀಸಾಮಾನ್ಯ'ರೆಂದು ಹೊಸ ಹೆಸರಿನಿಂದ ಕರೆದು, ಅವರೊಂದಿಗೆ ತಮ್ಮನ್ನು ಸಮೀಕರಿಸಿಕೊಂಡವರು ಕುವೆಂಪು. ಈ 'ನೇಗಿಲ–ಯೋಗಿ'ಯಾದ ರೈತ ಮತ್ತು ಈ ದೇಶದ ಅಸಂಖ್ಯಾತ ಶ್ರೀ ಸಾಮಾನ್ಯರು ಮೇಲುವರ್ಗದವರಿಂದ ಶತಶತಮಾನಗಳ ಕಾಲ ಶೋಷಣೆಗೆ ಗುರಿಯಾದ ಪರಿಯನ್ನು ಶೂದ್ರವರ್ಗದ ರೈತನ ಮನೆತನದಿಂದ ಬಂದ ಕುವೆಂಪು ತಮ್ಮ ಅನೇಕ ಕವಿತೆಗಳಲ್ಲಿ, ಗ್ರಹಿಸಿ ಅಭಿವ್ಯಕ್ತಿಸಿದ್ದಾರೆಂಬುದು ಗಮನಿಸಬೇಕಾದ ಸಂಗತಿಯಾಗಿದೆ" ಎಂಬ ಜಿ.ಎಸ್.ಶಿವರುದ್ರಪ್ಪನವರ ಮಾತು ಗಮನಾರ್ಹವಾದುದು.

ಕನ್ನಡ ನವೋದಯ ಸಾಹಿತ್ಯ ಸಂದರ್ಭದಲ್ಲಿ ವಸ್ತು, ಭಾಷೆ ಇವುಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳಾಗಿದ್ದರೂ ಕುವೆಂಪು ಎದುರಿಸಿದ ಸವಾಲು ಉಳಿದವರೆಲ್ಲರಿಗಿಂತಲೂ ಭಿನ್ನವಾದುದು. 'ಗೊಬ್ಬರದ ಮೇಲೆ ಬರೆವುದೆ ಕಬ್ಬಮಂ?' ಎಂಬ ಪ್ರಶ್ನೆ ಅವರ ಮುಂದಿತ್ತು. ಸಾಮಾನ್ಯವಾಗಿ ಕವನದ ವಸ್ತು ಉನ್ನತವಾಗಿರುತ್ತದೆ. ವರ್ಣನೆ, ರಮ್ಯತೆ, ಸೌಂದರ್ಯಾದಿಗಳಿಂದ ಅದು ತುಂಬಿರುವುದು. ಇಂಥ ಸನ್ನಿವೇಶದಲ್ಲಿ ಸಾಮಾನ್ಯ ಜನರ ನಿತ್ಯವಸ್ತು 'ಗೊಬ್ಬರ'ವನ್ನು ಕುರಿತು ಕವನ ಬರೆಯುವ ಮೂಲಕ ಕುವೆಂಪು ಹೊಸದಾರಿಯನ್ನು ತುಳಿದರು.

ಕುವೆಂಪು ಅವರಲ್ಲಿದ್ದ ಸಾಮಾಜಿಕ ಕಾಳಜಿಯಿಂದಾಗಿ ಅವರು ಕರಿಸಿದ್ದ, ಕಿಟ್ಟಯ್ಯರಂಥ ಸಾಮಾನ್ಯರನ್ನೂ ಕುರಿತು ಬರೆಯುವಂತಾಯಿತು. "ನಿರ್ಮಲ ಸರಸ್ವತಿಯ ವೀಣೆಯಂ ಶೂದ್ರಂ ಕಸಿದುಕೊಂಡು ಗೊಬ್ಬರದ ಗುಂಡಿಯನ್ನಗೆಯೆ ಗುದ್ದಲಿಯ ಮಾಡಿಹನಲ್ಲ!' – ಇದು ಸರಿಯೇ? ಇದುವರೆಗೆ ಕವಿತೆ 'ಕೈ ಕೆಸರು ಮಾಡಿಕೊಳ್ಳದೆಯೆ ಮೊಸರನುಣುತಿರ್ದ ಪಂಡಿತರ ದಿವ್ಯ ಜಿಹ್ವಾಲಸದ್ರಂಗದಲಿ ಕುಣಿದಾಡಿ, ನಲಿದಾಡುತ್ತಿತ್ತು'. ಆದರೆ ಈಗ 'ಕೊಳೆತು ನಾರುವ ರೈತನೊಡಗೂಡಿ ಒದ್ದಾಡಿ ಗಂಧ ಪುನುಗು ಜವಾದಿ

ಕಸ್ತೂರಿಗಳನುಳಿದು ಸೆಗಣಿಗಂಪಾಘ್ರಾಣಿಪಂತಾಯ್ತೆ?''

''ಕಬ್ಬಿಲರು ಕಬ್ಬಿಗರು ತಾವೆನುತ್ತಬ್ಬರಿಸಿ
ಬೊಬ್ಬಿರಿಯೆ ಕಬ್ಬವಾದುದೆ? ಗೊಬ್ಬರದ ಮೇಲೆ
ಕಬ್ಬವಪ್ಪೊಡೆ ಗಂಡು ಗಬ್ಬವಾದಂತಲ್ತೆ?
ಅಬ್ಬಬ್ಬ, ಕಲಿಕಾಲಕೇನಾದರಾಗುತದೆ!'' **(ಕು.ಸ.ಕಾವ್ಯ. ಸಂ–1, ಗೊಬ್ಬರ, ಪು. 361)**

ಇಲ್ಲಿ ಗೊಬ್ಬರ ಶೋಷಿತ ವರ್ಗದ ಸಂಕೇತ. ಕುವೆಂಪು ಈ ಜನರೊಂದಿಗೆ ತಮ್ಮ ಅಭಿನ್ನತೆ ಕಲ್ಪಿಸಿಕೊಳ್ಳುತ್ತಾರೆ. ಜನಪರ ಆಶಯಗಳು ಇಲ್ಲಿ ಸ್ಪಷ್ಟ. ''ಇಲ್ಲಿಯ 'ಗೊಬ್ಬರ' ಮತ್ತು 'ಹೂವು'ಗಳು 'ದುಡಿಮೆಗಾರ' ಮತ್ತು 'ಶ್ರೀಮಂತ' ವರ್ಗಗಳನ್ನು ಸಂಕೇತಿಸುತ್ತವೆ. ಗೊಬ್ಬರವನ್ನು ಹೀರಿ ಹೂವು ಸುಂದರವಾಗಿರುವಂತೆ, ದುಡಿಮೆಗಾರರ 'ಶ್ರಮ'ದಿಂದಲೇ 'ಶ್ರೀಮಂತ' ವರ್ಗ ಕೊಬ್ಬಿರುತ್ತದೆ ಎಂಬ ಕಲ್ಪನೆ ಮೂಡುತ್ತದೆ. ಶ್ರೀಮಂತ ವರ್ಗದಿಂದಾಗುವ ದುಡಿಮೆಗಾರರ ಶೋಷಣೆಯನ್ನು ಇದು ಧ್ವನಿಸುವುದು.''

ಮುಂದೆ ಕವಿತೆ ಕೊಡುವ ಕಾಣ್ಕೆ ಬಹಳ ಅರ್ಥಪೂರ್ಣವಾದದ್ದು.

''...ಇಂದೊ ನಾಳೆಯೊ ನೀನು ಕೆಳಗುರುಳಿ
ಗೊಬ್ಬರದೊಳೊಂದಾಗುವಾ ಮುಂದೆ ಕಾದಿಹುದು!'' **(ಪು. ಅದೇ)**

''ಹೂವು ಕಾವ್ಯಕ್ಕೆ ವಸ್ತುವಾಗಬೇಕಾದರೆ, ಗೊಬ್ಬರವೇಕಾಗಬಾರದು?... ಬಡಜನರ ರಕ್ತಹೀರಿ ಕೊಬ್ಬಿ ಬೆಳೆದ ವ್ಯಕ್ತಿ, ಗೊಬ್ಬರವನ್ನು ಹೀರಿ ಬೆಳೆದ ಹೂವಿನಂತೆಯೇ ಕೆಳಗುರುಳಿ ಗೊಬ್ಬರದಲ್ಲಿ ಬೆರೆಯಲೇಬೇಕು.''

ರೈತರ ಕುರಿತ ಕವಿಯ ಮಾತುಗಳು ಮೌಲಿಕ ಜಿಜ್ಞಾಸೆಯನ್ನು ಮನದಲ್ಲಿ ಬಿತ್ತುತ್ತವೆ. ಆ ಮೂಲಕ ಮನಸ್ಸನ್ನು ಶ್ರಮಸಂಸ್ಕೃತಿಯ ಬಗೆಗೆ ಮಂಥನ ಕಾರ್ಯಕ್ಕೆ ಹಚ್ಚುತ್ತದೆ. ಕುವೆಂಪು ಅವರ 'ಕಿಟ್ಟಯ್ಯ' ಕವನ ಕುವೆಂಪು ಅವರ ಆಸಕ್ತಿ, ಆಲೋಚನೆಗಳ ಪ್ರತಿಬಿಂಬ. ಸಾಮಾನ್ಯ ರೈತನ ಬಡತನ, ದೈನ್ಯತೆ, ಕಷ್ಟನಿಷ್ಠುರತೆ, ನಿಷ್ಠೆ, ನಮ್ರತೆಗಳು ಇಲ್ಲಿ ಅಭಿವ್ಯಕ್ತಗೊಂಡಿವೆ.

''ನಾನವಗೆ ನುಡಿದಂತೆ ಬಹುಜನಕೆ ನುಡಿದಿಲ್ಲ;
ಅವನಿಗೆ ಕರಗಿದಂತೆ ಬಹುಜನಕೆ ಕರಗಿಲ್ಲ!'' **(ಕು.ಸ.ಕಾ.ಸಂ.1, ಕಿಟ್ಟಯ್ಯ, ಪು. 320)**

ಈ ಮಾತುಗಳು ಕಲೆಗಾಗಿ ಕಲೆ ಮಾತ್ರವಲ್ಲ, ಬದುಕಿಗಾಗಿ ಕಲೆ ಎಂಬ ಅವರ ಮಾತನ್ನು ಮತ್ತೆ ಮತ್ತೆ ಒತ್ತಿ ಹೇಳುವುದು.

ಕವಿ ಕುವೆಂಪು ಮತ್ತು ಕತೆಗಾರ ಆನಂದ ಇವರಿಬ್ಬರೂ ವಾಯುವಿಹಾರಕ್ಕೆ ಹೋಗಿದ್ದಾಗ ಮೈಸೂರಿನ ಒಂಟಿಕೊಪ್ಪಲಿನಾಚೆ ಇರುವ ರೈತನ ನಿಜಮನೆಯಾದ ಹೊಲದಲ್ಲಿ ನಡೆದ ಘಟನೆ ಈ ಕವನದ ವಸ್ತು. ಕಬ್ಬಿಗ– ಕತೆಗಾರರಿಗೆ ಸ್ವಾಗತವೀಯುವ ರೈತನ ಸ್ಥಿತಿ ಇದು.

''.....ನೂರಾರು
ನೋವುಗಳ ಸಹಿಸಿ ಮೊರಡಾದ ಮುಖ.....
.....
ಆತನಾ ಕಣ್ಣುಗಳೊ ಪಾತಾಳದಲಿ ಕುಳಿತು
ಸ್ವರ್ಗದ ಅಸೀಮತೆಯನೀಕ್ಷಿಸಿ ನಿರೀಕ್ಷಿಸುವ
ತೆರನಿದ್ದುವು ತಲೆಯೊ ತೈಲವನೆ ಕಾಣದೆಯೆ

ಮುಡಿಗೆದರಿಕೊಂಡಿತ್ತು. ಕೆಂಪು ವಸ್ತ್ರವದೊಂದು
ಸುತ್ತಲಾರದೆ ಅದನು ಮುತ್ತಿಕೊಂಡಂತಿತ್ತು
ಅವನ ಮೈಯಲಿ ಹರಕು ಅಂಗಿ; ಮೊಳಕಾಲಿನಲಿ
ಚಿಂದಿ ಪಂಚೆ.....'' (ಅದೇ, ಪು. 314–15)

ಮತ್ತೆ ಕವಿ–ರೈತರಲ್ಲಿ ಸಂಭಾಷಣೆ ಮುಂದುವರಿಯುತ್ತದೆ. ಕವಿ ಕೆಲವು ಪ್ರಶ್ನೆಗಳ ಮೂಲಕ ರೈತನಿಂದ ಅವನ ಬದುಕಿನ ವಿವರಗಳನ್ನು ಪಡೆಯುತ್ತಾ ಹೊಗುತ್ತಾರೆ. "ಬಯಲು ಸೀಮೆಯ ರೈತನೊಬ್ಬನ ಬವಣೆ, ಭಾವನೆ, ಅಭಿಮಾನ, ಆರ್ದ್ರತೆ ಎಲ್ಲವೂ ಮಾತುಕತೆಯಲ್ಲಿ ಮೈತಾಳುತ್ತದೆ. ನೆಲದೊಂದಿಗಿನ ರೈತನ ಸಂಬಂಧ ಕೇವಲ ವ್ಯಾವಹಾರಿಕವಾದುದಲ್ಲ, ಭಾವನಾತ್ಮಕವಾದುದು ಎಂಬ ಸತ್ಯ ಕವಿಗೆ ಮನವರಿಕೆಯಾಗುತ್ತದೆ."

ಭೂಮಿ ಇದ್ದರೆ ರೈತನ ಬದುಕು, ಇಲ್ಲದಿದ್ದರೆ ಇಲ್ಲ. ಈ ಭೂಮಿಯ ರಕ್ಷಣೆಗಾಗಿ
''ಹೊಟ್ಟೆ ಬಟ್ಟೆಯ ಹಿಡಿದು, ಮಕ್ಕಳುಣಿಸನೆ ಕಡಿದು,
ಕಂದಾಯ ಕೊಡಬೇಕು. ಮಳೆ ಬರಲಿ, ಬರದಿರಲಿ,
ಬೆಳೆ ಕೊಡಲಿ, ಬೆಳೆ ಸುಡಲಿ, ಕಂದಾಯ ತಪ್ಪದಿದೆ!'' (ಅದೇ, ಪು. 317)

ಎಂಬ ರೈತನ ಮಾತುಗಳು ಆತನ ಬಡಸ್ಥಿತಿಯನ್ನು ತಿಳಿಸಿಕೊಡುತ್ತವೆ. ಮಳೆ ಬೆಳೆ ಬಂದಾಗ ರೈತ ಕಂದಾಯ ಕೊಡಲಾರನೆನ್ನುವನೇ? ಹೀಗೆ ಬಯಲುಸೀಮೆಯ ರೈತರ ನಿಜಸ್ಥಿತಿ ಇರುತ್ತದೆ. ಮಳೆ ಬಂದರೆ ಬದುಕು, ಇಲ್ಲದಿದ್ದರೆ ಬವಣೆ. ಮಳೆ–ಬೆಳೆ ಇರಲಿ ಇರದಿರಲಿ ಕಂದಾಯ ಕಡ್ಡಾಯ

ರೈತನ ಈ ಸ್ಥಿತಿ ಕೇಳಿ ಮರುಗಿದ ಕವಿ ತನ್ನೂರಿನ ಮಲೆನಾಡಿನ ಚಿತ್ರಣವನ್ನು ಬಯಲುಸೀಮೆಯ ಈ ರೈತನಿಗೆ ವಿವರಿಸುತ್ತಾರೆ. ಎಲ್ಲೆಲ್ಲಿಯೂ ಮಳೆ, ಸುತ್ತಮುತ್ತಲೂ ಹಸುರು, ಕಬ್ಬು, ಭತ್ತ, ಅಡಕೆ, ತೆಂಗು–ತೋಟ, ನೀರಿನ ಸಮೃದ್ಧಿ ಎಲ್ಲವನ್ನೂ ವಿವರಿಸಿದಾಗ ರೈತನ ಪ್ರತಿಕ್ರಿಯೆಯನ್ನು ಕವಿ 'ಅವನೊಳಿದ್ದುದು ಬೆರಗು ಕರುಬಲ್ಲ' ಎಂದು ಗುರುತಿಸಿರುವುದು ರೈತನ ನಿಷ್ಕಲ್ಮಶ, ವಿಶಾಲ ಮನಸ್ಸನ್ನು ತೋರಿಸುತ್ತದೆ. ಈ ರೈತ ಬಡವನಾದರೂ ಹೃದಯಶ್ರೀಮಂತಿಕೆ ತುಂಬಿದೆ. "ಕಿಟ್ಟಯ್ಯನ ಮೂಲಕ ಭಾರತಮಾತೆಯ ಕುತ್ತಿಗೆಯಲ್ಲಿ ಮಿಡುಕುವ ನಮ್ಮ ದೇಶದ ಬಡರೈತನ ದುಃಸ್ಥಿತಿಯನ್ನು ಅರಿಯಬಹುದಾಗಿದೆ. ದೇಶದ ಬೆನ್ನುಮೂಳೆಯಾಗಿರುವ ರೈತನ ಸುಧಾರಣೆಯಾಗದ ಹೊರತು ಭರತಖಂಡಕ್ಕೆ ಕ್ಷೇಮವಿಲ್ಲ. ಕೃಷೀವಲಯದ ಗೋಳಿನ ಬಾಳು, ಅವನ ಅಂತರಂಗದ ಮಾನವೀಯಗುಣ ಇವುಗಳಿಂದ ಹೊರಹೊಮ್ಮುವ ಮಣ್ಣಿನ ವಾಸನೆಯ ಯಥಾರ್ಥತೆಯ ಅರಿವು 'ಕಿಟ್ಟಯ್ಯ' ಕವನದಿಂದ ಅರಿವಾಗದೆ ಇರದು."

'ರೈತನ ದೃಷ್ಟಿ' ಕವನದ ಸಾಲುಗಳು ಹೀಗಿವೆ.
''ಕರಿಯರದೊ ಬಿಳಿಯರದೋ ಯಾರದಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ!
ಕತ್ತಿ ಪರದೇಶಿಯಾದರೆ ಮಾತ್ರ ನೋವೆ!
ನಮ್ಮವರೆ ಹದಹಾಕಿ ತಿವಿದರದು ಹೂವೆ?'' (ಕು.ಸ.ಕಾ.ಸಂ–1, ರೈತನ ದೃಷ್ಟಿ, ಪು. 359)

ಆಳ್ವಿಕೆ ಯಾರದಾದರೂ ಆಗಿರಲಿ ರೈತರ ಶೋಷಣೆ ನಿರಂತರ ಎಂದು ಸಾರುತ್ತದೆ ಈ ಕವಿತೆ. "'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಇರುವುದೆಲ್ಲ ಬೂಸಾ' ಎಂದ ಬಸವಲಿಂಗಪ್ಪನವರನ್ನು ಕುವೆಂಪು ಬೆಂಬಲಿಸಿದ್ದು, ಈ ಬಗೆಯ ಆಂತರಿಕ ಶೋಷಣೆಯ ಕುರಿತಾಗಿನ ವಾಸ್ತವಿಕ ಎಚ್ಚರದಿಂದಲೇ." ದೇಶದಲ್ಲಿ ಯಾರೇ ಅಧಿಕಾರಕ್ಕೆ ಬರಲಿ, ಅಧಿಕಾರ ತ್ಯಜಿಸಲಿ ರೈತರ, ಶೋಷಿತರ ಸ್ಥಿತಿ ಎಂದಿನಂತೆಯೇ ಇರುತ್ತದೆ.

ಹೀಗೆ ರೈತ ಪರವಾದ ಕವನಗಳಲ್ಲಿ ಕುವೆಂಪು ತಮ್ಮ ಅಂತಃಸತ್ವವನ್ನು ತೋರ್ಪಡಿಸಿದ್ದಾರೆ. ಅವರ ಕಾವ್ಯದಲ್ಲಿ ಬರುವ ರೈತ ಸಾಮಾನ್ಯ ಜೀವಿ, ಬದುಕಿಗಾಗಿ ಬಹಳ ಕಷ್ಟಪಡುತ್ತಿರುವವನು, ಬಡತನದಲ್ಲಿ ನರಳುತ್ತಿರುವವನು. ಆದುದರಿಂದ ಇವರ ಬದುಕು ಸುಧಾರಿಸಬೇಕೆಂಬುದು ಕವಿಯ ಪ್ರಧಾನಾಶಯ. ಭಾರತ ಬೆಳೆಯಬೇಕಾದರೆ ಹಳ್ಳಿಗಳ ಏಳ್ಗೆ ಅವಶ್ಯಕ. ಹಳ್ಳಿಗಳು ಅಭಿವೃದ್ಧಿಗೆ ಸ್ಪಂದಿಸಬೇಕಾದರೆ ರೈತರೆಲ್ಲರ ಬದುಕು ಹಸನಾಗಿರಬೇಕು. ಕುವೆಂಪು ಅವರ 'ನೇಗಿಲಯೋಗಿ' ಅಂತಹ ಬಾಳಿಗಾಗಿ ಸದಾ ತುಡಿಯುತ್ತಿರುವ ಜೀವಂತ ಜೀವಿ.

ಪರಾಮರ್ಶನ ಗ್ರಂಥಗಳು

1. ಕುವೆಂಪು ಕುವೆಂಪು ಸಮಗ್ರಕಾವ್ಯ ಸಂ–1 ಮತ್ತು 2, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ ಹಂಪಿ, 2000
2. ಜವರೇಗೌಡ ದೇ. (ಸಂ) ಸಹ್ಯಾದ್ರಿ–ಕುವೆಂಪು ಅಭಿನಂದನಗ್ರಂಥ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು, 1975
3. ಜವರೇಗೌಡ ದೇ. (ಸಂ) ಗಂಗೋತ್ರಿ–ಕುವೆಂಪು ಅಭಿನಂದನ ಗ್ರಂಥ, ಗೀತಾಬುಕ್ ಹೌಸ್, ಮೈಸೂರು, 1968
4. ನರಹಳ್ಳಿ ಬಾಲಸುಬ್ರಹ್ಮಣ್ಯ, ಕುವೆಂಪು ಕಾವ್ಯ–ಸಂಸ್ಕೃತಿ ಚರಿತ್ರೆಯರೂಪಕ, ಅಂಕಿತ ಪುಸ್ತಕ, ಬೆಂಗಳೂರು, 2004
5. ನಾಗಭೂಷಣ ಡಿ.ಎಸ್.(ಸಂ), ಕುವೆಂಪು ಒಂದು ಪುನರನ್ವೇಷಣೆ, ಲೋಹಿಯಾ ಪ್ರಕಾಶನ, ಬಳ್ಳಾರಿ, 2005
6. ಜವರೇಗೌಡ ದೇ. (ಸಂ), ಕುವೆಂಪು ಕವನಗಳು : ಆನ್ವಯಿಕ ವಿಮರ್ಶೆ, ಸಹ್ಯಾದ್ರಿ ಪ್ರಕಾಶನ, ಮೈಸೂರು, 1978
7. ಜವರೇಗೌಡ ದೇ. (ಸಂ), ಶ್ರೀಕುವೆಂಪು ಸಾಹಿತ್ಯದಲ್ಲಿ ರೈತ, ಪ್ರತಿಧ್ವನಿ ಪ್ರಕಾಶನ, ಮೈಸೂರು, 1986

❖❖❖

ಕೊಡಗಿನ ಬುಡಕಟ್ಟು ಸಮುದಾಯದವರ ವಿಶಿಷ್ಟ ಆಚರಣೆ ಬೇಡುಹಬ್ಬ (ಬೋಡುನಮ್ಮೆ, ಕುದುರೆ ಹಬ್ಬ)

ಡಾ. ವೆಂಕಟೇಶ್ ವಿ.

ಉಪನ್ಯಾಸಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು–575001

ಕೊಡಗಿನ ಮೂಲನಿವಾಸಿಗಳಾದ ಬೆಟ್ಟಕುರುಬರು ಆಚರಿಸುವ ಬೇಡುಹಬ್ಬಕ್ಕೆ ಮಹತ್ವದ ಸ್ಥಾನವಿದೆ. ಕೊಡಗಿನಲ್ಲಿ ಕೆಲವು ಕಾಡುಗಳು ಹಿಂದಿನಿಂದಲೂ 'ದೇವರಕಾಡು' ಎಂದು ಘೋಷಿಸಲ್ಪಟ್ಟಿವೆ. ಇಂತಹ ಕಾಡನ್ನು ಸಂರಕ್ಷಿಸುವ ನಿಟ್ಟಿನಲ್ಲಿ ತಮ್ಮ ಸ್ಥಳೀಯ ದೇವತೆಗಳನ್ನು ಆರಾಧಿಸುವ ಬುಡಕಟ್ಟು ಸಮುದಾಯದವರು ಅತ್ಯಮೂಲ್ಯವಾದ ವನ್ಯಸಂಪತ್ತನ್ನು ರಕ್ಷಿಸುವ ಕಾಳಜಿಯಿಂದ ಈ ಹಬ್ಬವನ್ನು ಆಚರಿಸುತ್ತಾರೆ. ದಕ್ಷಿಣ ಕೊಡಗಿನ ಗೋಣಿಕೊಪ್ಪಲಿನಿಂದ ಸುಮಾರು ಆರು ಕಿಲೋಮೀಟರ್ ದೂರದ ದೇವರಪುರದಲ್ಲಿ ನಡೆಯುವ ಈ ಬೇಡು ಹಬ್ಬವು ಕೊಡಗಿನಾದ್ಯಂತ ವಿಶೇಷ ಜನಮನ್ನಣೆಗೆ ಪಾತ್ರವಾಗಿದೆ. ಕೊಡಗಿನ ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ ತಾಲೂಕುಗಳಲ್ಲಿರುವ ಹಾಗೂ ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣದ ಸುತ್ತಮುತ್ತಲಿನ ಬುಡಕಟ್ಟು ಸಮುದಾಯದವರು ಮತ್ತು ಇತರೆ ಸಮುದಾಯದ ಜನರು ಈ ಹಬ್ಬದಲ್ಲಿ ಭಾಗವಹಿಸುತ್ತಾರೆ.

ಬೇಡುಹಬ್ಬವನ್ನು ಬೆಟ್ಟಕುರುಬರ ಭಾಷೆಯಲ್ಲಿ 'ಬೋಡುನಮ್ಮೆ', 'ಕುದುರೆ ಹಬ್ಬ' ಎಂದು ಕರೆಯುತ್ತಾರೆ. ಸ್ಥಳೀಯರು ಈ ಹಬ್ಬವನ್ನು ಕುಂಡೆ ಹಬ್ಬ ಎಂದು ಕರೆಯುವರು. ಬೆಟ್ಟಕುರುಬರು ತಾವು ಆರಾಧಿಸುವ ದೈವಗಳ ಹರಕೆಯನ್ನು ಈಡೇರಿಸಲು ಹಾಡಿಯ ಪ್ರತಿ ಮನೆಗಳಲ್ಲೂ ಅಕ್ಕಿ, ಹಣವನ್ನು ಬೇಡಿ ಸಂಗ್ರಹಿಸಿ ದೇವರ ಭಂಡಾರಕ್ಕೆ ಸಲ್ಲಿಸುವುದೇ ಬೇಡು ಹಬ್ಬದ ಮೂಲ ಆಶಯವಾಗಿದೆ.

ನೂರಾರು ವರ್ಷಗಳ ಇತಿಹಾಸವಿರುವ ಬೆಟ್ಟಕುರುಬರ ಬೇಡುಹಬ್ಬದ ಆಚರಣೆಯ ಹಿನ್ನಲೆಯು ಅನನ್ಯವಾಗಿದೆ. ಈ ಹಬ್ಬವು ಬೆಟ್ಟಕುರುಬರ ಮೂಲನೆಲೆಯಾದ ಪ್ರಸ್ತುತ ಕೊಡಗಿನ ಗಡಿಭಾಗಕ್ಕೆ ಹೊಂದಿಕೊಂಡಂತಿರುವ ಕುಟ್ಟ ಎಂಬ ಸ್ಥಳದಲ್ಲಿ ಬೆಟ್ಟಕುರುಬರು ತಮ್ಮ ಪೂರ್ವಿಕರಿಗೆ ಎಡೆ ಇಡುವ ಆಚರಣೆಯೊಂದಿಗೆ ಆರಂಭಗೊಳ್ಳುತ್ತದೆ. ಇದನ್ನು 'ಕುಟ್ಟ ಜಾತ್ರೆ' ಎಂಬ ಹೆಸರಿನಿಂದ ಕರೆಯುತ್ತಾರೆ. ಇದಾದ ಎಂಟು ದಿನಗಳ ತರುವಾಯ ಕೊಡಗಿನ ಮಾಯಾಮುಡಿಯ ಕಮಟೆ ಹಾಡಿಯಲ್ಲಿ ಕುದುರೆ ಕಟ್ಟುವ ಆಚರಣೆ ಮೊದಲ್ಗೊಂಡು, ಚೆನ್ನಂಗೋಲಿ ಎಂಬಲ್ಲಿ ಕಟ್ಟಿದ ಬೆತ್ತದ ಕುದುರೆಯನ್ನು ಬಿಚ್ಚುವುದರೊಂದಿಗೆ ಮುಕ್ತಾಯವಾಗುತ್ತದೆ. ಮಾಯಾಮುಡಿಯಲ್ಲಿ ಮೊದಲು ಕುದುರೆ ಕಟ್ಟುವ ಸಂಪ್ರದಾಯ ನೆರವೇರಿಸದೆ ದೇವರಪುರದಲ್ಲಿ ಬೇಡುಹಬ್ಬವನ್ನು ನಡೆಸುವಂತಿಲ್ಲ ಎಂಬ ನಿಯಮವನ್ನು ಬೆಟ್ಟಕುರುಬರು ಇಂದಿಗೂ ಪಾಲಿಸಿಕೊಂಡು ಬಂದಿದ್ದಾರೆ.

ಮಾಯಾಮುಡಿಯಿಂದ ಎರಡು ಕಿ.ಮಿ ದೂರದಲ್ಲಿರುವ ದೊಡ್ಡಮಾಡು ಎಂಬ ಸ್ಥಳದಲ್ಲಿ ಒಂದು ಬೆತ್ತದ ಕುದುರೆ ಕಟ್ಟುವ ಸಂಪ್ರದಾಯವು ನಡೆಯುತ್ತದೆ. ಈ ಕುದುರೆಯನ್ನು ಬಣ್ಣ ಬಣ್ಣದ ಬಟ್ಟೆಗಳು, ಕಾಗದಗಳು ಮತ್ತು ಹೂಗಳಿಂದ ಬೆಟ್ಟಕುರುಬರೇ

ಅಲಂಕರಿಸುತ್ತಾರೆ. ಕುದುರೆ ಕಟ್ಟುವ ದೊಡ್ಡಮಾಡು ಎಂಬ ಸ್ಥಳವು ತಮ್ಮ ಪೂರ್ವದ ನಾಯಕನಾದ ಅಯ್ಯಪ್ಪ ಕುದುರೆ ಮೇಲೆ ನಿಂತ ಜಾಗವೆಂದು ಬೆಟ್ಟಕುರುಬರು ಇಂದಿಗೂ ನಂಬುತ್ತಾರೆ. ಈ ರೀತಿ ಶ್ರಮಪಟ್ಟು, ಶ್ರದ್ಧೆಯಿಂದ ಬೆಟ್ಟಕುರುಬರು ಕಟ್ಟಿದ ಕುದುರೆಯನ್ನು ಕೊಡವ ಮನೆತನದವರು ಕಟ್ಟಿಕೊಂಡು ಕುಣಿಯುತ್ತಾರೆ. ನಂತರದಲ್ಲಿ ಭಂಡಾರದ ದೇವರ ಪರಿಕರಗಳನ್ನು ಹೊತ್ತ ವ್ಯಕ್ತಿ ಮತ್ತು ಅಲಂಕೃತ ಕುದುರೆಯೊಂದಿಗೆ ಕಾಡಿನ ದಾರಿಯಲ್ಲಿ ಸಾಗಿ ವಾದ್ಯ ಮೇಳಗಳೊಂದಿಗೆ ಕುಣಿಯುತ್ತಾ ಮಾಯಾಮುಡಿಯ ಕಮಟೆ ಹಾಡಿಯ ಮಾರಮ್ಮನ ದೇವಸ್ಥಾನಕ್ಕೆ ತಲುಪುತ್ತಾರೆ. ನಂತರ ಈ ದೇವಸ್ಥಾನದ ಸುತ್ತ ಮೂರು ಸುತ್ತು ಪ್ರದಕ್ಷಿಣೆ ಹಾಕಲಾಗುತ್ತದೆ. ಈ ಸಂದರ್ಭದಲ್ಲಿ ದೇವಾಲಯದ ಸುತ್ತ ಬೆಟ್ಟಕುರುಬರನ್ನು ಮೊದಲ್ಗೊಂಡು ಇತರೇ ಸಮುದಾಯಗಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುತ್ತಾರೆ.

ಪ್ರದಕ್ಷಿಣೆ ಮುಗಿದ ನಂತರದಲ್ಲಿ ಈ ಮೆರವಣಿಗೆಯು ಚೆನ್ನಂಗೋಲಿಯಲ್ಲಿರುವ ಬೇಟೆ ಅಯ್ಯಪ್ಪ ಮತ್ತು ಭದ್ರಕಾಳಿಯ ದೇವಸ್ಥಾನಕ್ಕೆ ಕಾಡಿನ ದಾರಿಯಲ್ಲಿ ಸಾಗುತ್ತದೆ. ಮೊದಲು ಭಂಡಾರ ಸಮೇತ ಬೇಟೆ ಅಯ್ಯಪ್ಪನಿಗೆ ಪೂಜೆ ನೆರವೇರುತ್ತದೆ. ಮೆರವಣಿಗೆಯೊಂದಿಗೆ ತಂದ ಹರಕೆಯ ಭಂಡಾರವನ್ನು ಅಯ್ಯಪ್ಪನ ದೈವಸ್ಥಾನದಲ್ಲಿ ಒಪ್ಪಿಸಲಾಗುತ್ತದೆ. ಹತ್ತಿರದಲ್ಲಿರುವ ಭದ್ರಕಾಳಿ ದೈವಸ್ಥಾನದ ಸ್ಥಳಕ್ಕೆ ತೆರಳಿ ಅಲ್ಲಿ ಹರಕೆಯ ಕೋಳಿಗಳನ್ನು ಒಪ್ಪಿಸುತ್ತಾರೆ. ಇದರೊಂದಿಗೆ ಮುಂದಿನ ಎಂಟು ದಿನಗಳಲ್ಲಿ ದೇವರಪುರದಲ್ಲಿ ನಡೆಯಲಿರುವ ಬೇಡುಹಬ್ಬಕ್ಕೆ ಪೂರಕವಾಗಿ ಮಾಯಾಮುಡಿಯ ಕಮಟೆ ಹಾಡಿಯಲ್ಲಿನ ಒಂದು ಕುದುರೆ ಕಟ್ಟುವ ಆಚರಣೆಯು ಮುಗಿಯುತ್ತದೆ.

ಮಾಯಾಮುಡಿಯಲ್ಲಿ ಕುದುರೆ ಕಟ್ಟುವ ಆಚರಣೆಯು ಮುಗಿದ ನಂತರದಲ್ಲಿ ದೇವರಪುರದ ಅಂಬಾಲದಲ್ಲಿ ಹಾಡಿಯ ಮುಖಂಡನಾದ ಮೇಗಾಳ ಮತ್ತು ಹಾಡಿಯ ಬೆಟ್ಟಕುರುಬರು ಸೇರಿ ಮುಂದಿನ ಎಂಟು ದಿನಗಳಲ್ಲಿ ಜರುಗಲಿರುವ ಬೇಡುಹಬ್ಬಕ್ಕೆ ನಡೆಸಬೇಕಾದ ಸಿದ್ಧತೆಗಳ ಕುರಿತು ಚರ್ಚಿಸುವರು. ಹಾಗೆಯೇ ಬೆಟ್ಟಕುರುಬರ ಹಿರಿಯ ಅಜ್ಜಪ್ಪಂದಿರನ್ನು ಕರೆಸಿ ಹಬ್ಬ ನಡೆಸಲು ಅನುಮತಿಯನ್ನು ಕೋರುತ್ತಾರೆ.

ಈ ಮೊದಲೇ ನಿಗದಿಪಡಿಸಿದ ದಿನದಂದು ದೇವರಪುರದಲ್ಲಿ ಅತ್ಯಂತ ವೈಭವದ ಬೇಡು ಹಬ್ಬವು ಆರಂಭವಾಗುತ್ತದೆ. ಮೇ ತಿಂಗಳ ಅಂತ್ಯದಲ್ಲಿ ನಡೆಸಲಾಗುವ ಈ ಹಬ್ಬ ಬುಧವಾರದಂದು ಆರಂಭವಾಗಿ ಗುರುವಾರವೇ ಅಂದರೆ ಮಾರನೇ ದಿನ ಮುಕ್ತಾಯವಾಗಬೇಕು. ಮೊದಲನೆಯ ದಿವಸ ಪಟ್ಟಣೆ ಎಂಬ ಆಚರಣೆ ಮತ್ತು ಎರಡನೆಯ ದಿನ ಬಂಢಾರ ಮತ್ತು ಕುದುರೆಗಳ ಮೆರವಣಿಗೆಯು ಜರುಗುತ್ತದೆ. ಹಬ್ಬದ ಮೊದಲ ದಿನ ಬೇಡು ಹಬ್ಬ ನಡೆಯುವ ಪ್ರಮುಖ ದೈವಸ್ಥಾನಗಳ ಆವರಣವನ್ನು ಗುಡಿಸಿ ಶುಚಿಗೊಳಿಸುತ್ತಾರೆ.

ಪಟ್ಟಣೆಯ ದಿವಸ ಹಬ್ಬವನ್ನು ಆಚರಿಸುವ ಜನರು ಬೆಳಗ್ಗೆಯಿಂದ ಯಾವುದೇ ರೀತಿಯ ಬೇಯಿಸಿದ ಪದಾರ್ಥಗಳನ್ನು ಸೇವಿಸದೆ ಕೇವಲ ಫಲಾಹಾರವನ್ನು ಸೇವಿಸುತ್ತಾರೆ. ಈ ದಿನಕ್ಕೆ ಪೂರ್ವದಲ್ಲಿ ಎಂಟು ದಿನಗಳಿಗೆ ಸರಿಯಾಗಿ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡದೆ ಮಾಂಸಾಹಾರವನ್ನು ತ್ಯಜಿಸಿ ಸಸ್ಯಹಾರಿಗಳಾಗಿ ಹಬ್ಬಕೆ ಸಂಬಂಧಿಸಿದ ದೇವರ ನಿಯಮಗಳನ್ನು ಪಾಲಿಸುತ್ತಾರೆ. ಈ ದಿವಸ ಮಧ್ಯಾಹ್ನದ ಹೊತ್ತಿಗೆ ಹಾಡಿಯ ಜನರು ಒಟ್ಟಿಗೆ ಸೇರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸುತ್ತಾರೆ. ಆ

ಸಂದರ್ಭದಲ್ಲಿ ದೈವಿಕ ವಸ್ತುಗಳಾದ ಕಡತಲೆ, ನೂಲಕೋಲು, ಹರಕೆಯ ವಸ್ತುಗಳಾದ ನಾಯಿ, ಮಗು, ತೊಟ್ಟಿಲು, ಹಸುಕರುಗಳು, ಶೂಲ, ಕಾಲು, ಕೈ, ಮೂಗು, ಕಿವಿ, ಬೆರಳು, ಕಣ್ಣು, ದೇವರ ಮುಖವಾಡ ಇತ್ಯಾದಿಗಳನ್ನು ತಮಗೂ ಹಾಗೂ ತಾವು ಸಾಕಿದ ಪ್ರಾಣಿಗಳಿಗೆ ಅನಾರೋಗ್ಯ ಉಂಟಾದಾಗ ಅದನ್ನು ಗುಣಪಡಿಸಿದ ದೇವರಿಗೆ ಹರಕೆ ಕೊಡುವುದಾಗಿ ಪ್ರಾರ್ಥಿಸಿಕೊಳ್ಳುತ್ತಾರೆ. ಸಂಜೆಯ ವೇಳೆಯಲ್ಲಿ ನಂತರದಲ್ಲಿ ಕುದುರೆಗಳ ಅಲಂಕಾರಕ್ಕೆ ಬೇಕಾದ ಬಣ್ಣ ಬಣ್ಣದ ಕಾಗದಗಳು ಮತ್ತು ಬಟ್ಟೆಗಳನ್ನು ಬೆಟ್ಟಕುರುಬರು ತಮ್ಮ ಹಾಡಿಯ ಮುಖಂಡನಾದ ಮೇಗಾಳನ ಮನೆಯಲ್ಲಿ ತಯಾರಿಸುತ್ತಾರೆ.

ಹಬ್ಬದ ಪ್ರಧಾನವಾದ ದಿವಸ ದೇವರ ಪರಿಕರಗಳನ್ನು ಇಡುವ ಮೂಲಸ್ಥಾನದ ಕೊಠಡಿಯ ಎಡಭಾಗದಲ್ಲಿ ಒಂದು ಚಪ್ಪರವನ್ನು ನಿರ್ಮಿಸಿ ಬೆಟ್ಟಕುರುಬರು ಅಲ್ಲಿ ಹಿಂದಿನ ದಿವಸ ತಯಾರಿಸಿದ ಕಾಗದ ಮತ್ತು ಬಟ್ಟೆಗಳಿಂದ ಕುದುರೆಗಳನ್ನು ವಿಶಿಷ್ಟವಾಗಿ ಅಲಂಕರಿಸುತ್ತಾರೆ. ನಂತರ ಪಣಿಕರ ಎಂಬುವವನು ಮೆರವಣಿಗೆಯಲ್ಲಿ ಹೊರಡುವ ಭದ್ರಕಾಳಿಯ ಮುಖವಾಡವನ್ನು ಅಲಂಕರಿಸುತ್ತಾನೆ. ಈ ಎಲ್ಲಾ ಸಿದ್ಧತೆಗಳು ಸಮಾಪ್ತಿಯಾಗುತ್ತಲೇ ವೇಷಧಾರಿ ಭಕ್ತರೆಲ್ಲಾ ಸೇರಿರುವ ಸ್ಥಳದಲ್ಲಿ ನೆರೆದವರೆಲ್ಲರಿಗೂ ಅನ್ನ ಸಂತರ್ಪಣೆಯು ಜರುಗುತ್ತದೆ. ಮಧ್ಯಾಹ್ನ ಎರಡು ಗಂಟೆಗೆ ಸರಿಯಾಗಿ ಕೊಡವ ಮನೆತನದ ಇಬ್ಬರು ಯುವಕರು ಊರಿನ ಮುಖ್ಯಸ್ಥರ ಅಣತಿಯಂತೆ ಬೆಟ್ಟಕುರುಬರಿಂದ ಅಲಂಕೃತವಾದ ಕುದುರೆಗಳನ್ನು ಕಟ್ಟಿ ಪಣಿಕರನ ದೇವರ ಮುಖವಾಡದೊಂದಿಗೆ ಅಯ್ಯಪ್ಪನು ನೆಲೆಯೂರಿದ ಸ್ಥಳವೆಂದು ನಂಬುವ ಒಂದು ಆಲದ ಮರದ ದೈವಸ್ಥಾನಕ್ಕೆ ತೆರಳುತ್ತಾರೆ. ದೇಗುಲವನ್ನು ಸೇರಿದ ಮೆರವಣಿಗೆಯು ಗುಡಿಯ ಸುತ್ತ ಪ್ರದಕ್ಷಿಣೆ ನಡೆಸುತ್ತದೆ.

ಮೆರವಣಿಗೆಯಲ್ಲಿ ಭದ್ರಕಾಳಿಯ ನೇರ ದೃಷ್ಟಿ ಬಿದ್ದರೆ ಕೇಡಾಗುವುದೆಂದು ದೇವಿಯ ಉತ್ಸವ ಮೂರ್ತಿಯನ್ನು ಆಕಾಶದತ್ತ ಮುಖಮಾಡಿ ತಲೆಯ ಮೇಲೆ ಹೊತ್ತಿರುತ್ತಾರೆ. ಮಧ್ಯಾಹ್ನದ ಹೊತ್ತಿಗೆ ವೇಷಧಾರಿ ಭಕ್ತರು ಜಾತ್ರೆ ನಡೆಯುವ ದೈವಸ್ಥಾನದಲ್ಲಿನ ಸುತ್ತಣವಿರುವ ವಿಶಾಲವಾದ ಮೈದಾನದಲ್ಲಿ ವಾಲಗದೊಂದಿಗೆ ಕುಣಿದು ದೇವರಿಗೆ ಹರಕೆ, ಪೂಜೆಯನ್ನು ಸಲ್ಲಿಸುತ್ತಾರೆ. ಆ ಸಮಯಕ್ಕೆ ಸರಿಯಾಗಿ ಹರಕೆ ಹೊತ್ತ ಜನರು ಕೋಳಿಯನ್ನು ಅಲ್ಲಿನ ಎತ್ತರವಾದ ದಿಬ್ಬಗಳ ಮೇಲೆ ನಿಂತು ಮೈದಾನದಲ್ಲಿನ ಭಕ್ತ ಸಮೂಹದ ಮೇಲೆ ಎಸೆಯುತ್ತಾರೆ. ಇಂತಹ ಸಂದರ್ಭದಲ್ಲಿ ಹರಕೆ ಕೋಳಿ ಸಿಕ್ಕ ಜನರು ಅದನ್ನು ದೇವರ ಪ್ರಸಾದವೆಂದು ಭಾವಿಸುತ್ತಾರೆ.

ಹರಕೆ ಕೋಳಿಯು ಜೀವಂತವಾಗಿ ಸಿಕ್ಕಲ್ಲಿ ಅದೇ ಕೋಳಿಯನ್ನು ಸಾಕಿ ಮುಂದಿನ ವರ್ಷ ನಡೆಯುವ ಬೇಡು ಹಬ್ಬಕ್ಕೆ ಹರಕೆಯಾಗಿ ದೇವರಿಗೆ ಅರ್ಪಿಸುತ್ತಾರೆ. ಆಲದ ಮರದ ದೈವಸ್ಥಾನ ಮತ್ತು ಮೈದಾನದಲ್ಲಿ ಇಷ್ಟೆಲ್ಲಾ ಆಚರಣೆಗಳು ಆದ ನಂತರದಲ್ಲಿ ಸಂಜೆ ನಾಲ್ಕು ಗಂಟೆಯ ಹೊತ್ತಿಗೆ ವಾಲಗ, ಭದ್ರಕಾಳಿಯ ಮೂರ್ತಿ ಮತ್ತು ಬೆತ್ತದ ಕುದುರೆಗಳ ಸಮೇತ ದೇವರಕಾಡಿನಲ್ಲಿರುವ ಅಯ್ಯಪ್ಪ ಮತ್ತು ಭದ್ರಕಾಳಿಯರ ದೈವಸ್ಥಾನಕ್ಕೆ ತೆರಳುತ್ತಾರೆ. ಈ ದೇವಾಲಯಕ್ಕೆ ಮಹಿಳೆಯರು ಪ್ರವೇಶಿಸಬಾರದೆಂಬ ನಿಯಮ ಬೆಟ್ಟಕುರುಬರಲ್ಲಿದೆ. ಮೆರವಣಿಗೆಯಲ್ಲಿ ದೇವಸ್ಥಾನದ ಪೂಜಾರಿ, ಊರಿನ ಹಿರಿಯರು ಹಾಗೂ ವೇಷಧಾರಿಗಳಾದ ಭಕ್ತರು ಪಾಲ್ಗೊಳ್ಳುತ್ತಾರೆ. ಮಾರ್ಗ ಮಧ್ಯದಲ್ಲಿ ಬಿದಿರಿನ ಹಸಿ ಕಡ್ಡಿಗಳಿಂದ ಮೂರು ಚೌಕಾಕಾರದ ಶೂಲಕಟ್ಟೆಯನ್ನು ನೆಟ್ಟಿರುತ್ತಾರೆ.

ಮೆರವಣಿಗೆಯಲ್ಲಿ ಸಾಗುವ ಜನರು ಕಳೆದ ಎಂಟು ದಿನದಲ್ಲಿ ತಿಳಿದೋ ತಿಳಿಯದೆಯೋ ಪ್ರಾಣಿ ಪಕ್ಷಿಗಳನ್ನು ಕೊಂದಿದ್ದರೆ ಹಾಗೂ ಮಾಂಸಾಹಾರವನ್ನು ಸೇವಿಸಿ ದೇವರ ನಿಯಮಗಳನ್ನು ಉಲ್ಲಂಘಿಸಿದ್ದರೆ, ಆ ಶೂಲಕಟ್ಟೆಯನ್ನು ಪ್ರವೇಶಿಸಿ ಕ್ಷಮೆಯಾಚಿಸಿ, ತಪ್ಪು ಕಾಣಿಕೆಯನ್ನು ಸಲ್ಲಿಸಿ ಅಂತಿಮವಾಗಿ ಭದ್ರಕಾಳಿಯ ದೈವಸ್ಥಾನಕ್ಕೆ ತೆರಳುತ್ತಾರೆ.

ಭದ್ರಕಾಳಿ ಮಾತೆಗೆ ಸಂಹಾರ ಪ್ರತೀಕವಾಗಿ ಆಹಾರ ಅರ್ಪಣೆ ಕೋಳಿ ಬಲಿ, ದೇವರಿಗೆ ಬೇಟೆನಾಯಿ ಅರ್ಪಣೆ ನೀಡುತ್ತಾರೆ. ಇದುವೇ ಬೇಡು ಹಬ್ಬದ ಆಚರಣೆಯ ಮೂಲ. ಈ ಸಂದರ್ಭದಲ್ಲಿ ದೇವಸ್ಥಾನದ ಅಂಗಳದಲ್ಲಿ ಭದ್ರಕಾಳಿಯ ಉತ್ಸವ ಮೂರ್ತಿಗೆ ಹಣ್ಣುಕಾಯಿ ಹರಕೆಯನ್ನು ಸಲ್ಲಿಸುತ್ತಾರೆ. ನಂತರ ಹರಕೆ ಕುದುರೆಯ ಸವಾರಿಯನ್ನು ಭದ್ರಕಾಳಿ ದೇವರ ಆಶೀರ್ವಾದದೊಂದಿಗೆ ಅಂತಿಮಗೊಳಿಸುತ್ತಾರೆ. ಭದ್ರಕಾಳಿ ದೇವರ ಮೊಗವನ್ನು ಪಣಿಕರನಿಂದ ಪಡೆದುಕೊಂಡು ದೇಗುಲದೊಳಗೆ ಪ್ರತಿಷ್ಠಾಪಿಸಿ ಸಂಹಾರ ಪ್ರತೀತವಾಗಿ ಆಹಾರ ಅರ್ಪಣೆ ಕೋಳಿ ಬಲಿ, ದೇವರಿಗೆ ಮಣ್ಣಿನ ಬೇಟೆ ನಾಯಿಯನ್ನು ಅರ್ಪಿಸುತ್ತಾರೆ. ದೇವಾಲಯದ ಪಕ್ಕದಲ್ಲಿರುವ ಬೇಟೆ ಅಯ್ಯಪ್ಪ ದೈವದಕಟ್ಟೆ ಸ್ಥಾನಕ್ಕೆ ಬಂದು ಹರಕೆ ಮತ್ತಿತ್ತರ ಕಾಣಿಕೆಗಳ ಭಂಡಾರವನ್ನು ಜೊತೆಗೆ ಪೂಜಾಪರಿಕರಗಳನ್ನು ಒಪ್ಪಿಸಿ ಪೂಜಿಸುತ್ತಾರೆ. ಪೂಜೆಯ ಎಲ್ಲಾ ವಿಧಿ ವಿಧಾನಗಳು ಮುಗಿದ ನಂತರ ಅಂತಿಮವಾಗಿ ಭದ್ರಕಾಳಿ ದೇವರಿಗೆ ಹರಕೆಯ ಕೋಳಿಗಳನ್ನು ಬಲಿ ಕೊಡಲಾಗುವುದು.

ಹಬ್ಬದ ಕೊನೆಯ ಘಟ್ಟವಾಗಿ ಬೇಡು ಹಬ್ಬವನ್ನು ನಡೆಸುವ ಬೆಟ್ಟಕುರುಬ ಸಮುದಾಯದ ಹಿರಿಯರು ಮತ್ತು ಇತರೆ ಸದಸ್ಯರು ಭಂಡಾರ ಮತ್ತು ದೇವರ ಪರಿಕರಗಳನ್ನಿಡುವ ಮೂಲಸ್ಥಾನಕ್ಕೆ ಹಿಂತಿರುಗುತ್ತಾರೆ. ಆ ಸ್ಥಳದಲ್ಲಿ ಭದ್ರಕಾಳಿಯ ಆವೇಶ ಬರುವ ವ್ಯಕ್ತಿಯ ಮೇಲೆ ದೇವರು ಮೈದುಂಬುತ್ತಾನೆ. ಬೆಟ್ಟಕುರುಬರ ಮೇಗಾಳನು ಮತ್ತು ಇತರೆ ಮೂವರು ಸದಸ್ಯರು ಭಂಡಾರವನ್ನಿಡುವ ಕೋಣೆಯನ್ನು ಪ್ರವೇಶಿಸಿ ಅದರ ಬಾಗಿಲನ್ನು ಹದಿನೈದರಿಂದ ಇಪ್ಪತ್ತು ನಿಮಿಷಗಳವರೆಗೆ ಮುಚ್ಚುವರು. ಈ ಸಂದರ್ಭದಲ್ಲಿ ದೇವರು ಮೈದುಂಬಿದ ವ್ಯಕ್ತಿಯ ಆವೇಶವು ತಾರಕಕ್ಕೇರಿ ಕುಣಿಯಲಾರಂಭಿಸುತ್ತಾನೆ. ಕೊಣೆಯೊಳಗಿನ ಈ ಶಬ್ದವನ್ನು ಕೇಳಿಸಿಕೊಂಡ ಹೊರಗೆ ನೆರೆದಿದ್ದ ಜನರು ಭಯಭೀತರಾಗಿ ಆ ಸ್ಥಳದಿಂದ ತೆರಳುತ್ತಾರೆ. ದೇವರೊಂದಿಗೆ ಸಂಭಾಷಣೆ ನಡೆಸುವ ಊರಿನ ಹಿರಿಯರು ಹಬ್ಬದಲ್ಲಿ ಚಿಕ್ಕ ಪುಟ್ಟ ತೊಂದರೆಗಳಾಗಿದ್ದರೆ ಅದಕ್ಕಾಗಿ ಕ್ಷಮೆಯಾಚಿಸಿ, ಆಶೀರ್ವಾದವನ್ನು ಬೇಡಿ ಮುಂದಿನ ವರ್ಷ ಸೂಸೂತ್ರವಾಗಿ ನಡೆಸುತ್ತೇವೆಂದು ಭರವಸೆ ನೀಡುತ್ತಾರೆ. ಮಧ್ಯಾಹ್ನ ಬೆತ್ತದ ಕುದುರೆ ಸವಾರಿ ಶುರುವಾದಲ್ಲಿಂದ ಮೈಮೇಲಿದ್ದ ದೇವರು ಸಂಜೆಯ ಹೊತ್ತಿಗೆ ವ್ಯಕ್ತಿಯನ್ನು ಬಿಟ್ಟು ಹೋಗುವುದು.

ತಲೆತಲಾಂತರದಿಂದ ದೇವಸ್ಥಾನದ ದೇವರ ಕೆಲಸಗಳಲ್ಲೇ ತೊಡಗಿಸಿಕೊಂಡಿರುವ ಬೆಟ್ಟಕುರುಬರ ವಕ್ತೃವೊಬ್ಬರು ಹಲವು ಮಾರ್ಪಾಡುಗಳಿಗೆ ಒಳಗಾದ ಬೇಡು ಹಬ್ಬದ ಬಗ್ಗೆ ತಿಳಿಸಿಕೊಟ್ಟಿದ್ದಾರೆ. "ಈ ಹಬ್ಬವನ್ನು ಆರಂಭದಲ್ಲಿ ಇಪ್ಪತ್ತರಿಂದ ಮೂವತ್ತು ಜನರಷ್ಟೇ ಸೇರಿ ಆಚರಿಸುತ್ತಿದ್ದರು. ಹಾಡಿಯ ಮಕ್ಕಳು ತಾವು 'ಅಯ್ಯಪ್ಪ ಸ್ವಾಮಿ ಮಕ್ಕಳು ದೂರಿ ದೂರಿ'ಎಂದು ಹೇಳಿಕೊಂಡು ಮನೆ ಮನೆಗೆ ಬೇಡುತ್ತಾ ಹೋಗುತ್ತಿದ್ದರು. ಸಂಜೆಯ ತನಕ ಈ ಕೆಲಸ ನಿರ್ವಹಿಸಿ ಕೊನೆಗೆ ಸಂಗ್ರಹಿಸಿದ ಅಕ್ಕಿ ಮತ್ತು ಹಣವನ್ನು ದೇವರಿಗೆ

ಸಮರ್ಪಿಸಿ ತಮಗೆ ಒದಗುವ ಕಷ್ಟಗಳನ್ನು ಪರಿಹರಿಸುವಂತೆ ಮೊರೆಯಿಡುತ್ತಿದ್ದರು. ಇಪ್ಪತ್ತೆದು ಮತ್ತು ಐವತ್ತು ಪೈಸೆ ಚಲಾವಣೆಯಿದ್ದಂತಹ ದಿನಗಳಲ್ಲಿ ಆಚರಿಸುತ್ತಿದ್ದ ಮೂಲಸ್ವರೂಪದ ಬೇಡು ಹಬ್ಬದಿಂದ ಭಂಡಾರಕ್ಕೆ ಎರಡರಿಂದ ಮೂರು ಸಾವಿರ ರೂಪಾಯಿಗಳವರೆಗೆ ಆದಾಯ ಬರುತ್ತಿತ್ತು". (ಸೋಮ, ವಯಸ್ಸು 54) ಪ್ರಸ್ತುತ ದಿನಗಳಲ್ಲಿ ಬೇಡುವ ಆಚರಣೆಯು ಮನರಂಜನೆ ಮತ್ತು ಹಣಸಂಗ್ರಹದ ಆಯಾಮವನ್ನು ಪಡೆದುಕೊಂಡಿದೆ.

❖❖❖

ಹೂಮಲರನು ಮುಡಿಯೊಳು ಮುಡಿದು
ಮೆರೆದಿದೆ ತರುರಥವು
ತೂಕಡಿಸುವ ಗೂಬೆಯ ಮನಕೆ
ಶಮಶಾಂತಿನಿಕೇತನವು

ಒಂದು ದೇಶ, ಒಂದು ಚುನಾವಣೆ: ಒಂದು ಅವಲೋಕನ

ಡಾ. ಡಿ.ಎಲ್. ಪವಾರ
ಸಹಾಯಕ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ರಾಜ್ಯಶಾಸ್ತ್ರ ವಿಭಾಗ
ಶ್ರೀ ಅನ್ನದಾನೇಶ್ವರ ಕಲಾ ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯ ಮತ್ತು
ಸ್ನಾತ್ತಕೋತ್ತರ ಕೇಂದ್ರ, ನರೇಗಲ್ಲ–582119

ಸಾರಲೇಖ

ಭಾರತವು ವಿಶ್ವದಲ್ಲಿಯೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಜನತೆಯ ಪರವಾಗಿ ಜನತೆಯ ಪ್ರತಿನಿಧಿಗಳ ಮೂಲಕ ಆಡಳಿತ ನಡೆಯುತ್ತದೆ. ಪ್ರತಿನಿಧಿಗಳು ರಾಜ್ಯದ ಆಡಳಿತ ನಡೆಸುವಾಗ ಜನತೆಯಿಂದ ಅಧಿಕಾರ ಪಡೆಯಬೇಕಾಗುತ್ತದೆ. ಜನರು ವಯಸ್ಕ ಮತದಾನದ ಮೂಲಕ ಸಾರ್ವತ್ರಿಕ ಚುನಾವಣೆಯಲ್ಲಿ ಪ್ರಜಾಪ್ರತಿನಿಧಿಗಳನ್ನು ಆರಿಸುತ್ತಾರೆ. ಅದಕ್ಕಾಗಿ ಭಾರತದ ಪ್ರಜಾಪ್ರಭುತ್ವದ ಭದ್ರಬುನಾದಿಯೇ ಚುನಾವಣೆಯಾಗಿದೆ. ಅಥವಾ ಚುನಾವಣೆಗಳೇ ಪ್ರಜಾಪ್ರಭುತ್ವದ ಆತ್ಮವಾಗಿವೆ ಎಂದು ಹೇಳಬಹುದು. ಹಲವು ವರ್ಷಗಳಿಂದ 'ಒಂದು ದೇಶ, ಒಂದು ಚುನಾವಣೆ' ನೀತಿ ಚರ್ಚೆಯಲ್ಲಿದೆ. ಭಾರತದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳು ಏಕಕಾಲದಲ್ಲಿ ನಡೆದರೆ ಚುನಾವಣಾ ಖರ್ಚು ವೆಚ್ಚವನ್ನು ತಗ್ಗಿಸಬಹುದು ಎನ್ನುವುದು ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ನೇತ್ರತ್ವದ ಕೇಂದ್ರ ಸಚಿವ ಸಂಪುಟದ ನಿಲುವಾಗಿದೆ.

ಪೀಠಿಕೆ:

ಭಾರತದ ಸಂವಿಧಾನವು ಚುನಾವಣಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ಮತ್ತು ತತ್ವಗಳನ್ನು ನಿಗದಿಪಡಿಸಿದೆ. ಅದರಂತೆಯೇ ಭಾರತ ಸಂವಿಧಾನದ 325ನೇ ವಿಧಿಯಲ್ಲಿ ಪ್ರತಿಯೊಂದು ಚುನಾವಣಾಕ್ಷೇತ್ರಕ್ಕೂ ಏಕ ಚುನಾವಣಾ ಮತದಾರರ ಪಟ್ಟಿಯನ್ನು ಪ್ರಸ್ತಾಪಿಸಿದೆ. ಇಲ್ಲಿ ಕೋಮುವಾರು ಪ್ರತ್ಯೇಕ ಅಥವಾ ವಿಶೇಷ ಪ್ರಾತಿನಿಧ್ಯ ಚುನಾವಣೆಗೆ ಅವಕಾಶ ನೀಡಲಾಗಿಲ್ಲ. ಭಾರತದಲ್ಲಿ ಚುನಾವಣೆಗಳು ವಯಸ್ಕ ಮತದಾನ ಪದ್ಧತಿಯನ್ನು ಆದರಿಸಿದೆ. 18 ವರ್ಷ ವಯಸ್ಸಾದ ಪ್ರಜೆಗಳು ಮತದಾನದ ಹಕ್ಕನ್ನು ಪಡೆದಿದ್ದಾರೆ.

ಭಾರತದಲ್ಲಿ 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾಪವು ಹೊಸತೇನಲ್ಲ. 1980ರಲ್ಲಿ ಮೊದಲ ಬಾರಿಗೆ ಈ ರೀತಿಯ ಪ್ರಸ್ತಾಪವನ್ನು ಮಾಡಲಾಗಿತ್ತು. ನಂತರದಲ್ಲಿ ನ್ಯಾ. ಬಿ.ಪಿ. ಜೀವನರೆಡ್ಡಿ ನೇತ್ರತ್ವದ ಕಾನೂನು ಆಯೋಗ 1999ರಲ್ಲಿ ಸಲ್ಲಿಸಿದ ತನ್ನ 170ನೇ ವರದಿಯಲ್ಲಿ ನಾವು ಮತ್ತೊಮ್ಮೆ ಲೋಕಸಭಾ & ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವ ಹಳೆಯ ಪದ್ಧತಿಗೆ ಮರುಳಬೇಕಾಗಿದೆ ಎಂದು ಶಿಫಾರಸ್ಸು ಮಾಡಲಾಗಿತ್ತು. ಅದರಂತೆಯೇ ಪ್ರಸ್ತುತ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಹಲವು ವರ್ಷಗಳಿಂದ ಚರ್ಚೆಯಲ್ಲಿದ್ದ 'ಒಂದು ದೇಶ, ಒಂದು ಚುನಾವಣೆ' ನೀತಿಗೆ 18.09.2024ರಂದು ಒಪ್ಪಿಗೆ ನೀಡಿದೆ.

ಈ ಮಸೂದೆಗೆ ಸಂಸತ್ ಅಧಿವೇಶನದಲ್ಲಿ ಒಪ್ಪಿಗೆಯನ್ನು ಪಡೆಯಲಾಗುವುದು ಎಂದು ಹೇಳಲಾಗುತ್ತದೆ. ಅಲ್ಲದೆ ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್‌ರ ನೇತೃತ್ವದಲ್ಲಿ ಮೋದಿ ಸರಕಾರವು 02.09.2023ರಂದು 'ಒಂದು ದೇಶ, ಒಂದು ಚುನಾವಣೆ' ಈ ನೀತಿಗೆ ಸಂಬಂಧಿಸಿದಂತೆ ಶಿಫಾರಸು ಮಾಡಲು ಸಮಿತಿ ರಚಿಸಲಾಗಿತ್ತು. ಆ ಸಮಿತಿಯು ಪರಿಶೀಲನೆ ಮಾಡಿ ಮಾರ್ಚ 2024ರಲ್ಲಿ ಕೇಂದ್ರ ಸರಕಾರಕ್ಕೆ ವರದಿ ನೀಡಿತು.

ಕೋವಿಂದ್ ಸಮಿತಿಯು ಸಲ್ಲಿಸಿದ ವರದಿಯ ಶಿಫಾರಸ್ಸುಗಳು

'ಒಂದು ದೇಶ, ಒಂದು ಚುನಾವಣೆ' ಕುರಿತು ವಿಸ್ತೃತ ವರದಿ ನೀಡಲು ಮಾಜಿ ರಾಷ್ಟ್ರಪತಿ ಶ್ರೀ ರಾಮನಾಥ್ ಕೋವಿಂದ್‌ರ ನೇತೃತ್ವದಲ್ಲಿ 02.09.2023ರಂದು ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ಸದಸ್ಯರುಗಳೆಂದರೆ ಅಮಿತ್ ಷಾ, ಶ್ರೀ ಗುಲಾಮ್ ನಬಿ ಆಜಾದ್, ಶ್ರೀ ಎನ್.ಕೆ. ಸಿಂಗ್, ಸುಭಾಷ ಸಿ. ಕಶ್ಯಪ್, ಹರೀಶ್ ಸಾಳ್ವೆ, ಶ್ರೀ ಸಂಜಯ ಕೋಠಾರಿ, ಶ್ರೀ ಅರ್ಜುನ ರಾಮ್ ಮೇಘ್ವಾಲ್, ಡಾ. ನಿತೇನ್ ಚಂದ್ರ, ಇತ್ಯಾದಿ. ಈ ಸಮಿತಿಯು ದಕ್ಷಿಣ ಆಫ್ರಿಕ, ಜರ್ಮನಿ, ಸ್ವಿಡನ್, ಬೆಲ್ಜಿಯಂ, ಜಪಾನ್, ಇಂಡೋನೇಷ್ಯಾ, ಫಿಲಿಪ್ಪೀನ್ಸ್, ದೇಶಗಳಲ್ಲಿಯ ಏಕಕಾಲೀಯ ಚುನಾವಣೆಗಳನ್ನು ಅಧ್ಯಯನ ನಡೆಸಿ 'ಒಂದು ದೇಶ, ಒಂದು ಚುನಾವಣೆ' ಕುರಿತ ಶಿಫಾರಸ್ಸುಗಳನ್ನು ಮಾಡಿದೆ. ಈ ಸಮಿತಿಗೆ 47 ರಾಜಕೀಯ ಪಕ್ಷಗಳು ತಮ್ಮ ಅಭಿಪ್ರಾಯ & ಸಲಹೆಗಳನ್ನು ನೀಡಿವೆ. ಈ ಸಮಿತಿಯು 18,626 ಪುಟಗಳ ವರದಿಯನ್ನು 14 ಮಾರ್ಚ 2024 ರಂದು ಸಲ್ಲಿಸಿತು.

ಈ ಸಮಿತಿಯು ವರದಿ ಮಾಡಿರುವ ಶಿಫಾರಸ್ಸುಗಳೆಂದರೆ,

1) ಸರಕಾರವು ಏಕಕಾಲಿಕ ಚುನಾವಣೆ ನಡೆಸಲು ಕಾನೂನುಬದ್ಧ ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಬೇಕು.
2) ಮೊದಲ ಹಂತದಲ್ಲಿ ಲೋಕಸಭೆ ಮತ್ತು ರಾಜ್ಯಗಳ ವಿಧಾನಸಭೆ ಚುನಾವಣೆಗಳನ್ನು ಒಂದೇ ಸಲ ನಡೆಸುವುದು.
3) ಅಲ್ಲದೆ ಎರಡನೆ ಹಂತದಲ್ಲಿ ಪುರಸಭೆ ಮತ್ತು ಪಂಚಾಯತಿ ಚುನಾವಣೆಗಳನ್ನು ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆ ನಡೆದ 100 ದಿನಗಳ ಒಳಗೆ ಪೂರ್ಣಗೊಳಿಸುವುದು.
4) ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಲೋಕಸಭೆ ಚುನಾವಣೆ ಮುಗಿದ ನಂತರದಲ್ಲಿ ರಾಷ್ಟ್ರಪತಿಗಳು ಮೊದಲ ಅಧಿವೇಶನಕ್ಕೆ ಒಂದು ದಿನಾಂಕವನ್ನು ನಿಗದಿಪಡಿಸುತ್ತಾರೆ.
5) ಲೋಕಸಭೆಯ ಅವಧಿ ಮುಕ್ತಾಯವಾಗುವ ಮುನ್ನ ರಚನೆಯಾದ ರಾಜ್ಯ ಸರ್ಕಾರಗಳ ಅವಧಿ ಏಕಕಾಲಿಕ ಚುನಾವಣೆ ಸಂದರ್ಭದಲ್ಲಿ ಮೊಟಕುಗೊಂಡು ಹೊಸದಾಗಿ ಚುನಾವಣೆಯನ್ನು ಎದುರಿಸಬೇಕಾಗುತ್ತದೆ.
6) ಅವಿಶ್ವಾಸ ನಿರ್ಣಯದಂತಹ ಸಂದರ್ಭಗಳಲ್ಲಿ ಲೋಕಸಭೆಗೆ ಹೊಸದಾಗಿ ಚುನಾವಣೆ ನಡೆಸಲು ಅವಕಾಶವಿದೆ.
7) ಹೊಸ ಚುನಾವಣೆಯಿಂದ ರಚನೆಯಾದ ಸರ್ಕಾರದ ಅವಧಿ ಹಿಂದಿನ ಸರ್ಕಾರದ ಪೂರ್ಣಾವಧಿಯ ವರೆಗೆ ಮಾತ್ರ ಇರುತ್ತದೆ.
8) ಅಲ್ಲದೆ ಹೊಸ ಚುನಾವಣೆಗಳ ಮೂಲಕ ರಚನೆಯಾದ ರಾಜ್ಯ ಸರಕಾರಗಳು

ಲೋಕಸಭೆಯ ಅವಧಿ ಮುಗಿಯುವವರೆಗೆ ಮುಂದುವರೆಯಬೇಕಾಗುತ್ತದೆ.

9) ಕೇಂದ್ರ ಚುನಾವಣಾ ಆಯೋಗವು ರಾಜ್ಯ ಚುನಾವಣಾ ಆಯೋಗಗಳೊಂದಿಗೆ ಸೇರಿ ಏಕರೂಪದ ಮತದಾರರ ಪಟ್ಟಿ ಹಾಗೂ ಗುರುತಿನ ಚೀಟಿಗಳನ್ನು ಸಿದ್ಧಪಡಿಸಬೇಕಾಗುತ್ತದೆ.

10) ಏಕಕಾಲದಲ್ಲಿ ಚುನಾವಣೆ ನಡೆಸಲು ಇವಿಎಂ ಮತ್ತು ವಿವಿ ಪ್ಯಾಟ್‌ಗಳಂತಹ ಸಲಕರಣೆಗಳ ಖರೀದಿ, ಮತಗಟ್ಟೆಗಳಲ್ಲಿ ಸಿಬ್ಬಂದಿ ಹಾಗೂ ಭದ್ರತಾ ಪಡೆಗಳ ನಿಯೋಜನೆ ಸೇರಿದಂತೆ ಇತರೆ ವ್ಯವಸ್ಥೆಗೊಳಿಸಲು ಆಯೋಗವು ಮುಂಚಿತವಾಗಿ ಯೋಜನೆಗಳನ್ನು ರೂಪಿಸಬೇಕಾಗುತ್ತದೆ.

ಅನುಕೂಲಗಳೇನು?

- ಏಕ ಚುನಾವಣೆಯಿಂದ ಹಣ ಉಳಿತಾಯವಾಗುತ್ತದೆ.
- ಚುನಾವಣೆಗೆ ಬಳಕೆಯಾಗುವ ಶ್ರಮವನ್ನು ಕಡಿಮೆ ಮಾಡಬಹುದು.
- ಆಡಳಿತಾತ್ಮಕ ಸವಾಲುಗಳಿಗೆ ಪರಿಹಾರ ಸಿಗುತ್ತದೆ.
- ಭದ್ರತಾ ಪಡೆಗಳ ಮೇಲಿನ ಹೊರೆಯನ್ನು ಸಡಿಲಿಕೆಗೊಳಿಸಬಹುದು.
- ಆಡಳಿತದ ಮೇಲೆ ಹೆಚ್ಚಿನ ಗಮನ ಹರಿಸಲು ಸಹಾಯಕ.
- ಮತದಾನದ ಪ್ರಮಾಣದಲ್ಲಿ ಹೆಚ್ಚಾಗುತ್ತದೆ.

ಸವಾಲುಗಳು

ಒಂದು ದೇಶ ಒಂದು ಚುನಾವಣೆಗೆ ಸಂಬಂಧಿಸಿದಂತೆ ಹಲವಾರು ಸವಾಲುಗಳಿವೆ. ಅವುಗಳೆಂದರೆ,

- ಈ ನೀತಿಯು ಜಾರಿಗೆ ಬರಲು ಕೋವಿಂದ್ ಸಮಿತಿಯು 18 ಸಾಂವಿಧಾನಿಕ ಬದಲಾವಣೆಗಳನ್ನು ಸೂಚಿಸಿದೆ.
- ಬಹುತೇಕ ಬದಲಾವಣೆಗಳಿಗೆ ರಾಜ್ಯ ಸರ್ಕಾರಗಳ ಅನುಮತಿ ಬೇಕಾಗಿಲ್ಲ. ಆದರೆ ಸಾಂವಿಧಾನಿಕ ಬದಲಾವಣೆಗಳಿಗೆ ಸಂಬಂಧಿಸಿದಂತೆ ಹಲವು ಮಸೂದೆಗಳನ್ನು ಮಂಡಿಸಿ, ಸಂಸತ್ತಿನಲ್ಲಿ ಅನುಮೋದನೆ ಪಡೆಯಬೇಕಾಗುತ್ತದೆ.
- ಅಲ್ಲದೆ ದೇಶಾದ್ಯಂತ ಒಂದೇ ಮತದಾರರ ಪಟ್ಟಿ, ಗುರುತಿನ ಪತ್ರಕ್ಕೆ ಕನಿಷ್ಠ ಅರ್ಧದಷ್ಟು ರಾಜ್ಯಗಳ ಒಪ್ಪಿಗೆ ಪಡೆಯಬೇಕಾಗುತ್ತದೆ.

ಕೇಂದ್ರ ಸರಕಾರದ ವಾದವೇನು?

- ಏಕ ಚುನಾವಣೆಯಿಂದ ಮತದಾನದ ಪ್ರಮಾಣವು ಹೆಚ್ಚಾಗುವ ನಿರೀಕ್ಷೆಯಿದೆ.
- ಒಂದೇ ಚುನಾವಣೆಯಿಂದ ಖರ್ಚು–ವೆಚ್ಚ ಕಡಿಮೆಯಾಗಿ, ಸರ್ಕಾರದ ವೆಚ್ಚದ ಹೊರೆಯನ್ನು ಕಡಿಮೆ ಮಾಡುವುದು.
- ಪದೇಪದೇ ಚುನಾವಣೆಗಳನ್ನು ನಡೆಸುವದರಿಂದ ಆಡಳಿತಯಂತ್ರವು ಸ್ಥಗಿತಗೊಳ್ಳುತ್ತದೆ.
- ಸರ್ಕಾರಗಳು ನೀತಿಸಂಹಿತೆಯ ಅಡ್ಡಿಯಿಲ್ಲದೇ ಯೋಜನೆಗಳನ್ನು ಜಾರಿಗೆ ತರಲು ಸಾಧ್ಯವಾಗುತ್ತದೆ.

- ಅಕ್ರಮ ಆರ್ಥಿಕ ವಹಿವಾಟುಗಳ ಮೇಲೆ ತಡೆ ಹೇರಬಹುದಾಗಿದೆ.

ವಿರೋಧವೇಕೆ?

ಪ್ರಾಯೋಗಿಕವಾಗಿ ನೋಡಿದರೆ ಈ ಯೋಜನೆಯು ಕಾರ್ಯಸಾದು ಅಲ್ಲ ಎಂಬುದು ಈಗಿನ ವಿರೋಧ ಪಕ್ಷಗಳ ವಾದವಾಗಿದೆ. ಅಲ್ಲದೆ ಇದು ಜನರ ಗಮನವನ್ನು ಸೆಳೆಯಲು ಬಿಜೆಪಿ ಮಾಡುತ್ತಿರುವ ತಂತ್ರವೆಂದು ಹೇಳಲಾಗುತ್ತಿದೆ. ಒಂದೇ ಪಕ್ಷದ ಆಡಳಿತ ಇರುವಂತೆ ನೋಡಿಕೊಳ್ಳಲು ಬಿಜೆಪಿ ರೂಪಿಸುತ್ತಿರುವ ಸಂಚು ಎಂದು ಹೇಳಲಾಗುತ್ತಿದೆ. ಏಕೆಂದರೆ ಬಿಜೆಪಿಯು ಈಗಾಗಲೇ ಕೆಲವು ರಾಜ್ಯಗಳಲ್ಲಿ ತನ್ನ ಅಧಿಕಾರವನ್ನು ಕಳೆದುಕೊಂಡಿದೆ. ಜೊತೆಗೆ ಒಂದೇ ಚುನಾವಣೆಯಿಂದ ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರುವ ಸಾಧ್ಯತೆ ಇದೆ ಎಂಬುದು ವಿರೋಧಪಕ್ಷದ ವಾದ. ಲೋಕಸಭಾ ಅಬ್ಬರದಲ್ಲಿ ರಾಜ್ಯದ ಸಮಸ್ಯೆಗಳಿಗೆ ಆದ್ಯತೆ ಸಿಗದಿರಬಹುದು. ಸಂಸತ್ತಿನಲ್ಲಿ ಕಾಯ್ದೆ ಅಂಗೀಕಾರವಾಗುವುದು ಕಷ್ಟವೆಂದು ಹೇಳಲಾಗುತ್ತಿದೆ. ಪ್ರಸ್ತುತ ಕೇಂದ್ರ ಸರಕಾರವು ಈ ನೀತಿಯನ್ನು ಜಾರಿಗೆ ತರಲು ಮಹತ್ತರವಾದ ಹೆಜ್ಜೆಯನ್ನು ಇಟ್ಟಿದ್ದು, ಈ ನೀತಿಯು ಸಾಕಾರಗೊಳ್ಳಲು ಸಂವಿಧಾನಕ್ಕೆ 18 ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಅದರಲ್ಲಿ 8 ತಿದ್ದುಪಡಿಗಳಿಗೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಅನುಮತಿ ಬೇಕು. ಅಲ್ಲದೆ ಸಂವಿಧಾನ ತಿದ್ದುಪಡಿಗೆ ಸಂಸತ್ತಿನಲ್ಲಿ 2/3 ರಷ್ಟು ಬಹುಮತ ಬೇಕು. ಕೇಂದ್ರ ಸರ್ಕಾರದ ಈ ನಿರ್ಧಾರಕ್ಕೆ ಎನ್‌ಡಿಎ ಕೂಟದ ಮಿತ್ರ ಪಕ್ಷಗಳು ಸಹ ಕೈಜೋಡಿಸಿವೆ ಎಂದು ಹೇಳಲಾಗುತ್ತಿದೆ. ಆದರೂ ಸಂಸತ್ತಿನಲ್ಲಿ ಇದು ಅಂಗೀಕಾರವಾಗುವುದು ಸುಲಭವಲ್ಲ.

ಸಮಾರೋಪ

ಪ್ರಸ್ತುತ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಹಲವು ವರ್ಷಗಳಿಂದ ಚರ್ಚೆಯಲ್ಲಿರುವ 'ಒಂದು ದೇಶ, ಒಂದು ಚುನಾವಣೆ' ನೀತಿಗೆ 18.09.2024ರಂದು ತನ್ನ ಒಪ್ಪಿಗೆಯನ್ನು ನೀಡಿದೆ. ಈ ನೀತಿಯು ಜಾರಿಗೆ ಬಂದರೆ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲಾಗುತ್ತದೆ. ಇದರಿಂದ ಹಣ ಉಳಿತಾಯ ಮಾಡಬಹುದು. ಖರ್ಚು–ವೆಚ್ಚ ಕಡಿಮೆಯಾಗಿ ಮತದಾನದ ಪ್ರಮಾಣವು ಕೂಡ ಹೆಚ್ಚಾಗುತ್ತದೆ ಎಂದು ಹೇಳಲಾಗಿತ್ತಿದೆ. ಆದರೆ ಈ ನೀತಿಯು ಜಾರಿಗೆ ಬರಲು ಶ್ರೀ ರಾಮನಾಥ್ ಕೋವಿಂದರು ಶಿಫಾರಸ್ಸು ಮಾಡಿದಂತೆ 18 ಸಾಂವಿಧಾನಿಕ ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಅದರಲ್ಲಿನ 8 ತಿದ್ದುಪಡಿಗಳಿಗೆ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಅನುಮತಿ ಬೇಕು. ಸಂವಿಧಾನ ತಿದ್ದುಪಡಿಗೆ ಸಂಸತ್ತಿನಲ್ಲಿ ಎನ್‌ಡಿಎಗೆ $^{2}/_{3}$ರಷ್ಟು ಬಹುಮತ ಬೇಕು. ಆದ್ದರಿಂದ ಸಂಸತ್ತು ಬಹುಮತದಿಂದ ಈ ಕಾಯ್ದೆಯನ್ನು ಅಂಗೀಕರಿಸಿದರೂ ಇದು ಜಾರಿಗೆ ಬರಲು ಸದ್ಯೋಭವಿಷ್ಯದಲ್ಲಿ ಅವಕಾಶವಾಗದು ಎಂದೇ ಹೇಳಬಹುದು.

ಪರಾಮರ್ಶನ

ವಿವಿಧ ಪತ್ರಿಕಾವರದಿಗಳು

❖❖❖

ಮಾನವನ ಸಾಮಾಜಿಕ ಜೀವನ ಮತ್ತು ಸಂತೋಷ ಒಂದು ವಿಶ್ಲೇಷಣೆ

ಡಾ. ಜಗದೀಶ. ಎಂ.

ಸಹಾಯಕ ಪ್ರಾಧ್ಯಾಪಕ, ಸಮಾಜಶಾಸ್ತ್ರ ವಿಭಾಗ, ಸ.ಪ್ರ.ದ.ಕಾಲೇಜು, ಕಲಘಟಗಿ–581204

ಮನುಷ್ಯ ಸಾಮಾಜಿಕ ಜೀವಿ, ಜೊತೆಗೆ ಸಂಘ ಜೀವಿಯೂ ಹೌದು. ಮಾನವನ ಸಾಮಾಜಿಕ ಜೀವನವು ಸುಖ, ದುಃಖ ಹಾಗೂ ಸಂತೋಷದಿಂದ ಕೂಡಿರುತ್ತದೆ ಎಂಬುದು ನಮಗೆಲ್ಲರಿಗೂ ತಿಳಿದಿದೆ. ಆದ್ದರಿಂದ ಸುಖ–ದುಃಖದ ಜೊತೆಗೆ ಸಂತೋಷವನ್ನು, ಮನುಷ್ಯನ ಸಾಮಾಜಿಕ ಜೀವನದ ಅವಿಭಾಜ್ಯ ಅಂಗವೆಂದು ಪರಿಗಣಿಸಲಾಗಿದೆ. ಮನುಷ್ಯ ಉತ್ತಮ ಭವಿಷ್ಯ ಹಾಗೂ ಉತ್ತಮ ಆರೋಗ್ಯವನ್ನು ಹೊಂದಬೇಕಾದರೆ ಜೀವನದಲ್ಲಿ ಸಂತೋಷವನ್ನು ಕಾಣಬೇಕು ಎಂಬುದು ನಂಬಿಕೆಯಾಗಿದೆ. ಇನ್ನೂ ಮುಂದುವರೆದು ಹೇಳುವುದಾದರೆ, ಜೀವನವು ಪರಿಪೂರ್ಣವಾಗಬೇಕಾದರೆ ಕಷ್ಟ–ದುಃಖಗಳೊಂದಿಗೆ ಸುಖ–ಸಂತೋಷವೂ ಇರಬೇಕು ಎಂಬುದು ಭಾರತೀಯ ಸಾಮಾಜಿಕ ಜೀವನದ ಪರಂಪರೆಯಾಗಿದೆ.

ಸಂತೋಷವನ್ನು ಸಾಮಾನ್ಯವಾಗಿ ಸಕಾರಾತ್ಮಕ ಭಾವನಾತ್ಮಕ ಸ್ಥಿತಿ ಎಂದು ವ್ಯಾಖ್ಯಾನಿಸಲಾಗಿದೆ. ಸಂತೋಷವನ್ನು ವ್ಯಕ್ತಿಯ ಜೀವನದಲ್ಲಿನ ತೃಪ್ತ ಭಾವನೆಯ ಮೂಲಕ ವ್ಯಕ್ತವಾಗುತ್ತದೆ. ಜೊತೆಗೆ ವ್ಯಕ್ತಿ ಅಥವಾ ಸಮೂಹವು ತಮ್ಮ ಜೀವನವನ್ನು ಹೇಗೆ ಮೌಲ್ಯೀಕರಿಸುತ್ತಾರೆ ಅಥವಾ ಅನುಭವಿಸುತ್ತಾರೆ ಎಂಬ ಭಾವನಾಸ್ಥಿತಿಯ ಮೂಲಕವೂ ಪ್ರತಿಬಿಂಬಿತವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಮನುಷ್ಯ ಜೀವನದಲ್ಲಿನ ಸಂತೋಷದ ಕುರಿತಂತೆ ಹೆಚ್ಚು–ಹೆಚ್ಚು ಚರ್ಚೆಗಳು ನಡೆಯುತ್ತಿವೆ. ಮುಂದುವರೆದು, ವಿವಿಧ ದೇಶಗಳ ಜನರ ಸಂತೋಷದ ಮಟ್ಟವನ್ನು ಅಳೆದು, ತುಲನೆ ಮಾಡಿ–ಶ್ರೇಣೀಕರಿಸಿ, ಪ್ರಕಟಿಸುವ ಪ್ರಯತ್ನಗಳೂ ನಡೆಯುತ್ತಿವೆ. ಪಶ್ಚಿಮದ ದೇಶಗಳು ಈ ನಿಟ್ಟಿನಲ್ಲಿ ಮುಂಚೂಣಿಯಲ್ಲಿವೆ ಎಂದರೆ ತಪ್ಪಾಗಲಾರದು. ಆದರೆ ಸಂತೋಷದ ಪರಿಕಲ್ಪನೆ ಭಾರತೀಯರಿಗೆ ಹೊಸದೇನೂ ಅಲ್ಲ; ಸಾವಿರಾರು ವರ್ಷಗಳ ಹಿಂದೆಯೇ ಸಂತೋಷದ ಕುರಿತ ವಿವಿಧ ಚಿಂತನೆಗಳು, ತತ್ವಸಿದ್ಧಾಂತಗಳು ಭಾರತದಲ್ಲಿ ಅನುಷ್ಠಾನದಲ್ಲಿದ್ದವು ಎಂಬುದನ್ನು ವಿವಿಧ ದಾಖಲೆಗಳಿಂದ ತಿಳಿಯಬಹುದಾಗಿದೆ. ಆದರೆ ಜಗತ್ತು ಆಧುನಿಕತೆಗೆ ತೆರೆದುಕೊಂಡಂತೆ ಮನುಷ್ಯ ತನ್ನನ್ನು ತಾನು ಯಾಂತ್ರಿಕ ಜೀವನಕ್ಕೆ ಒಡ್ಡಿದ ಪರಿಣಾಮ ಎದುರಾದ ಒತ್ತಡಗಳಿಂದಾಗಿ ಸಂತೋಷದ ಕುರಿತು ನಿರ್ಲಕ್ಷ್ಯ ವಹಿಸಲು ಕಾರಣವಾದವು.

ಪ್ರಸ್ತುತ ಸಂತೋಷದ ಕುರಿತಂತೆ ವ್ಯಾಪಕ ಚರ್ಚೆಗಳು ವಿವಿಧ ನೆಲೆಯಲ್ಲಿ ನಡೆಯುತ್ತಿದೆ. ಲೌಖಿಕ ಜೀವನದಲ್ಲಿನ ಒತ್ತಡದಿಂದ ಮುಕ್ತಿಹೊಂದಿ ಸಂತೋಷವನ್ನು ಅನುಭವಿಸಬೇಕು ಎಂಬ ಹಂಬಲದಿಂದ ನಾನಾ ಪ್ರಯತ್ನಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಸಂತೋಷದ ಕುರಿತಂತೆ ವಿವಿಧ ಗ್ರಂಥಗಳು ಮತ್ತು ಸಾಧಕ ಮಹಾನ್ಯರ ವ್ಯಾಖ್ಯಾನಗಳು, ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯಗಳ ಹಿನ್ನೆಲೆಯಲ್ಲಿ ಚರ್ಚಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಸಾಂಪ್ರದಾಯಿಕವಾಗಿ ಮೊದಲ ಹಂತದಲ್ಲಿ ಜನರು ತನ್ನ ಜೀವನದಲ್ಲಿನ ಸಂತೋಷವನ್ನು ಆಧ್ಯಾತ್ಮಿಕ ನೆಲೆಯಲ್ಲಿ ಅಥವಾ ಅಲೌಖಿಕ ನೆಲೆಯಲ್ಲಿ ಕಂಡುಕೊಳ್ಳುತ್ತಿದ್ದರು. ಈ ಕಾರಣದಿಂದ ಜೀವನದ ಎಲ್ಲಾ ಕಷ್ಟ–ಸುಖಗಳು ದೈವನಿರ್ಧರಿತ ಎಂಬ ಕಾಲ್ಪನಿಕ ನಂಬಿಕೆಯಿಂದಿದ್ದರು. ನಂತರದ ಹಂತದಲ್ಲಿ ಇದನ್ನು ಸಮೂಹ ಮತ್ತು ವೈಯುಕ್ತಿಕ ನೆಲೆಯಲ್ಲಿ ಹಾಗೂ ಕೊನೇಯದಾಗಿ ಮಾನವೀಯ ನೆಲೆಯಲ್ಲಿ ಕಂಡುಕೊಳ್ಳುವ ಪ್ರಯತ್ನಗಳು ನಡೆದವು. ಆದರೆ ವಿವಿಧ ಹಂತಗಳಲ್ಲಿ ಸಂತೋಷವನ್ನು ಕಂಡುಕೊಳ್ಳಲು ಕಂಡುಕೊಂಡ ಮಾರ್ಗಗಳು ಮಾತ್ರ ಬಹಳ ವೈವಿಧ್ಯಮಯ ಅಥವಾ ಭಿನ್ನವಾಗಿದ್ದವು.

ಭಾರತೀಯ ಆಧ್ಯಾತ್ಮಿಕ ಗ್ರಂಥಗಳಲ್ಲಿ ಸಂತೋಷದ ಪರಿಕಲ್ಪನೆ

ಭಾರತೀಯ ಪ್ರಾಚೀನ ಗ್ರಂಥಗಳಾದ ವೇದಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆಗಳಲ್ಲಿ ಜೀವನದಲ್ಲಿನ ಸಂತೋಷದ ಸ್ವರೂಪದ ಕುರಿತಂತೆ ಭೌತಿಕ ಮತ್ತು ಆಧ್ಯಾತ್ಮಿಕ ಪರಿದೃಷ್ಟಿಯಲ್ಲಿ ಅರ್ಥವನ್ನು ನೀಡಿವೆ. ಮುಖ್ಯವಾಗಿ 'ವೇದ' ಗ್ರಂಥವು ಜೀವನದಲ್ಲಿನ ಎಲ್ಲಾ ಪರಿಕಲ್ಪನೆಯಂತೆಯೇ ಸಂತೋಷವು 'ಸತ್ಯ' ಮತ್ತು 'ನಿತ್ಯ' ಎಂದು ವ್ಯಕ್ತಪಡಿಸಿದೆ. 'ತೈತ್ತರೇಯ ಉಪನಿಷತ್ತು' ಸಂತೋಷವನ್ನು ಮನುಷ್ಯ ಜೀವನದ 'ತಿರುಳು' ಎಂದಿದೆ. ಆನಂದವನ್ನು ಉಂಟುಮಾಡುವುದು ಅತೀಂದ್ರೀಯವಾದುದು, ಅದು ಮನುಷ್ಯನ ವ್ಯಕ್ತಿತ್ವದಲ್ಲಿನ ಸತ್ಯ ಮತ್ತು ಪ್ರಜ್ಞೆಯೊಂದಿಗೆ ಸಮ್ಮಿಲನಗೊಂಡಿದೆ ಎನ್ನುತ್ತದೆ.

ವ್ಯಕ್ತಿಯ ಸಂತೋಷದ ಆರಂಭವು ಮನುಷ್ಯಾನಂದದಿಂದ ಆರಂಭವಾಗಿ ಬ್ರಹ್ಮಾನಂದವೆಂಬ ಉನ್ನತ ಹಂತದವರೆಗೆ ಸಾಗುತ್ತದೆ ಎಂಬುದನ್ನು, ಪ್ರಾಚೀನ ಭಾರತೀಯ ಗ್ರಂಥಗಳಿಂದ ತಿಳಿಯಬಹುದಾಗಿದೆ. ಈ ಎರಡು ಹಂತಗಳ ನಡುವೆ ಇತರ ಒಂಬತ್ತು ಹಂತಗಳು ಹಾದು ಹೋಗುತ್ತವೆ. ಪ್ರತೀಹಂತಗಳು ನೂರಕ್ಕೆ ನೂರರಷ್ಟು ಸಂತೋಷವನ್ನುಂಟು ಮಾಡುವ ಹಂತಗಳೇ ಆಗಿವೆ. ಜೊತೆಗೆ ಪ್ರತೀ ಹಂತಗಳು ಸಂತೋಷದ ನಿರ್ಧಾರಕ ಅಂಶಗಳನ್ನು ಪ್ರತಿಬಿಂಬಿಸುತ್ತವೆ, ಉದಾಹರಣೆಗೆ ವಯಸ್ಸು, ಕಲಿಕಾ ಮೌಲ್ಯ ವ್ಯವಸ್ಥೆ, ಮಾನಸಿಕ, ದೈಹಿಕ ಮತ್ತು ಆರ್ಥಿಕ ಸಂಪನ್ಮೂಲತೆ ಇತ್ಯಾದಿಗಳು. ಆದರೆ ಸಂತೋಷದ ಲಕ್ಷಣಗಳನ್ನು ಮತ್ತು ನಿರ್ಧಾರಕಾಂಶಗಳನ್ನು ಜೋಡಿಸಿಕೊಂಡು 2500 ವರ್ಷಗಳ ನಂತರದಲ್ಲಿ ಅಬ್ರಹಾಂ ಮಾಸ್ಲೋ ಮತ್ತು ಮೈಕಲ್ ಅಗ್ರಿಲೇ ಅವರು ಸಿದ್ಧಾಂತವನ್ನು ರೂಪಿಸಿದರು ಎಂಬುದು ಉಲ್ಲೇಖನೀಯ.

ಭಾರತೀಯ ತತ್ವಶಾಸ್ತ್ರದ ಉಪ ಚಿಂತನೆಯಾದ 'ಅದ್ವೈತ ವೇದಾಂತ'ವು 'ಸಂತೋಷವು' ಆತ್ಮಕ್ಕೆ ಸಂಬಂಧಿಸಿದ್ದಾಗಿದ್ದು, ಅದು ಆಂತರಿಕವೇ ಹೊರತು ಬಾಹ್ಯವಲ್ಲ ಎಂದು ಪ್ರತಿಪಾದಿಸುತ್ತದೆ. ಹೀಗೆ ಪುರಾತನ ಗ್ರಂಥಗಳು ಬಹಳ ಎಚ್ಚರಿಕೆಯಿಂದ ಸುಖ ಮತ್ತು ಆನಂದವನ್ನು ಹೆಣೆದಿವೆ. ಆನಂದ ಎಂಬುದು ಒಂದು ವಿಶಿಷ್ಟ ಪರಿಕಲ್ಪನೆಯಾಗಿದ್ದು, ಇದು ಸುಖ–ದುಃಖಗಳನ್ನು ಮೀರಿ ನೆಲೆನಿಂತಿದೆ. ಆದ್ದರಿಂದ ಆನಂದಕ್ಕಿಂತ ಮಿಗಿಲಾದ ಶಬ್ದಗಳು ಇಲ್ಲ ಎಂದು ವ್ಯಾಖ್ಯಾನಿಸಿವೆ.

ಶ್ರೀಕೃಷ್ಣನ ಮಾತುಗಳು

ಶ್ರೀಕೃಷ್ಣನು ಮಹಾಕಾವ್ಯ 'ಭಗವದ್ಗೀತೆ'ಯಲ್ಲಿ ಸಂತೋಷ ಮತ್ತು ಆನಂದ

ಎರಡು ಒಂದೇ ಅಲ್ಲ ಎಂದಿದ್ದಾನೆ. ಆನಂದವು ಆಂತರಿಕ ಮಾನಸಿಕ ಸ್ಥಿತಿಯಾದರೆ, ಸಂತೋಷವು ಭೌತಿಕ ಪರಿಸರವನ್ನು ಕೇಂದ್ರೀಕರಿಸಿರುತ್ತದೆ ಎಂದು ಊಹಾಚಿಸಿದ್ದಾನೆ. 'ಭಗವದ್ಗೀತೆ'ಯು ವ್ಯಕ್ತಿ ತನ್ನ ಸ್ವ–ಶ್ರಮದ ಸಾಧನೆಯಿಂದ 'ಸಂತೋಷ' ಪಡುತ್ತಾನೆ, ಹಾಗಾಗಿ ಅತೃಪ್ತಿಯ ಅನುಪಸ್ಥಿತಿಯನ್ನು ಸಂತೋಷ ಎನ್ನುತ್ತದೆ.

'ಶ್ರೀಕೃಷ್ಣ ಪರಮಾತ್ಮನ' ಪ್ರಕಾರ ಮೂರು ಪ್ರಕಾರದ ಸಂತೋಷವಿದೆ. ಮೊದಲನೆಯದು, ಸಾತ್ವಿಕ ಸಂತೋಷ(ಶುದ್ಧ), ಇದು ಆತ್ಮದ ಉನ್ನತಿಯಿಂದ ಉಂಟಾಗುವ ಸಂತೋಷವಾಗಿದೆ. ಅದಾಗ್ಯು ಶುದ್ಧ ಸಂತೋಷವನ್ನು ಸಾಧಿಸುವುದು ಸುಲಭವಲ್ಲ. ಇದನ್ನು ಸಾಧಿಸಲು ಹೆಚ್ಚು ಶಿಸ್ತಿನ ಅಗತ್ಯವಿದೆ. 'ಶ್ರೀಕೃಷ್ಣ'ನು ಶುದ್ಧ ಸಂತೋಷವು ಪ್ರಾರಂಭದಲ್ಲಿ ವಿಷದಂತೆ ಕಂಡರೂ ನಂತರದಲ್ಲಿ ಮಕರಂದದಂತಿರುತ್ತದೆ ಎಂದು ಊಹಾಚಿಸಿದ್ದಾನೆ. ಒಟ್ಟಾಗಿ ಆತ್ಮಜ್ಞಾನದಲ್ಲಿ ನೆಲೆಗೊಂಡಿರುವ ಶುದ್ಧ ಬುದ್ದಿಯನ್ನು ಶುದ್ಧ ಸಂತೋಷದ ಮೂಲವೆಂದು ವ್ಯಾಖ್ಯಾನಿಸಿದ್ದಾನೆ. ಎರಡನೆಯದಾಗಿ ರಾಜಸಿಕ ಅಥವಾ ಫಲಿತಾಂಶ ಆಧಾರಿತ ಸಂತೋಷ. ಈ ಸಂತೋಷವನ್ನು ವಸ್ತುಗಳೊಂದಿಗಿನ ಇಂದ್ರೀಯಗಳ ಸಂಪರ್ಕದಿಂದ ಪಡೆಯುವ ತೃಪ್ತಿಯ ಭಾವರೂಪವಾಗಿದೆ. ಇಂತಹ ಸಂತೋಷವು ಪ್ರಾರಂಭದಲ್ಲಿ ಸಿಹಿಯಾಗಿರುತ್ತದೆ, ಆದರೆ ನಂತರದಲ್ಲಿ ವಿಷಕಾರಿ ರೂಪದಲ್ಲಿ ಕೊನೆಯಾಗಬಹುದು ಎಂದು ವ್ಯಾಖ್ಯಾನಿಸಲಾಗಿದೆ. ಕೊನೇಯದಾಗಿ ತಾಮಸಿಕ ಅಥವಾ ಸೋಮಾರಿತನದ ಸಂತೋಷ. ಶ್ರೀಕೃಷ್ಣ ಪರಮಾತ್ಮನು ಈ ಸಂತೋಷವನ್ನು ಮೋಸಗೊಳಿಸುವ, ಗೊಂದಲಮಯ, ವ್ಯಸನಕಾರಿ ಎಂದು ವ್ಯಾಖ್ಯಾನಿಸುತ್ತಾನೆ. ಈ ಸಂತೋಷವು ಆದ್ಯಾತ್ಮಿಕ ನಿದ್ರೆ, ಸೋಮಾರಿತನ, ನಿರ್ಲಕ್ಷ್ಯ ಮತ್ತು ಗೊಂದಲದಿಂದ ಬರುತ್ತದೆ ಎಂದು ವ್ಯಾಖ್ಯಾನಿಸುತ್ತಾನೆ.

ಮುಂದುವರೆದು ಶ್ರೀಕೃಷ್ಣನು ಕೆಟ್ಟ ಮಾತು, ಕೀಳರಿಮೆ, ಅವಮಾನ, ಇತರರಿಗೆ ಹಾನಿಯನ್ನುಂಟುಮಾಡಿ ಪಡೆಯುವ 'ವಿಘ್ನ ಸಂತೋಷವು' ಹೇಗೆ ಉಂಟಾಗುತ್ತದೆ ಎಂಬುದನ್ನು ವಿವರಿಸಿದ್ದಾನೆ. ಇದು ಅಲ್ಪಕಾಲಿಕ ಮಂದ ಸಂತೋಷವಾಗಿದ್ದು, ತಪ್ಪು ಮೌಲ್ಯಗಳು ಹಾಗೂ ತಪ್ಪು ಆದರ್ಶಗಳಿಂದ ಕೂಡಿರುವುದಾಗಿದೆ ಎಂದು ವ್ಯಾಖ್ಯಾನಿಸುತ್ತಾನೆ. ಇದು ಸಂಪೂರ್ಣ ಆತ್ಮಶುದ್ಧ ಸಂತೋಷಕ್ಕೆ ಕಾರಣವಾಗುವುದಿಲ್ಲ ಎನ್ನುತ್ತಾನೆ.

ಮಹಾತ್ಮರ ಚಿಂತನೆಯಲ್ಲಿ ಸಂತೋಷದ ಪರಿಕಲ್ಪನೆ

12ನೇ ಶತಮಾನದಲ್ಲಿದ್ದ ಬಸವಣ್ಣನವರು ನಿಷ್ಕಲ್ಮಶ ಕಾಯಕದಿಂದ (ಕಾಯಕವೇ ಕೈಲಾಸ) ಸಂತೋಷವನ್ನು ಅನುಭವಿಸಬಹುದು ಎಂದು ವ್ಯಾಖ್ಯಾನಿಸಿದ್ದಾರೆ. ಸ್ವಾಮಿ ವಿವೇಕಾನಂದ ಅವರು 'ಆತ್ಮದ ಸ್ವಭಾವವೇ ಆನಂದ ಮತ್ತು ಶಾಂತಿ, ಅದನ್ನು ಪಡೆಯಬೇಕಾಗಿಲ್ಲ, ಅದು ನಮ್ಮಲ್ಲಿಯೇ ಇದೆ, ಆದರೆ ಅದರಲ್ಲಿರುವ ಕ್ರೋಧ, ಮತ್ಸರ, ಅಸೂಯೆಗಳೆಂಬ ಕಸವನ್ನು ತೊಳೆಯಬೇಕು ಎಂದಿದ್ದಾರೆ. ವಿವೇಕಾನಂದ ಅವರು ಆನಂದವನ್ನು ಒಂದು 'ಮಾನಸಿಕ ಸ್ಥಿತಿ' ಎಂದರಲ್ಲದೆ, ಆತ್ಮಾನಂದ ಅನ್ನುವುದು ಪರಮೋನ್ನತವಾದುದು ಎನ್ನುತ್ತಾರೆ. ಮಹಾತ್ಮ ಗಾಂಧೀಜಿ ಅವರು 'ಸಾಮರಸ್ಯಕ್ಕಾಗಿ ನೀವು ಏನು ಯೋಚಿಸುತ್ತೀರಿ, ಏನು ಹೇಳುತ್ತೀರಿ, ಏನು ಮಾಡುತ್ತೀರಿ ಎಂಬುದರಿಂದ 'ಸಂತೋಷ' ರೂಪುಗೊಳ್ಳುತ್ತದೆ ಎಂದಿದ್ದಾರೆ. ಶ್ರೀ ನಾರಾಯಣ ಗುರು ಅವರು 'ಇತರರನ್ನು ಪ್ರೀತಿಯಿಂದ ಕಾಣುವುದೇ ಸಂತೋಷ' ಮತ್ತು ಸಂತೋಷವು ನಮ್ಮ

ಕ್ರಿಯೆಯ ಫಲವಾಗಿ ಬರುತ್ತದೆ' ಎಂದು ವ್ಯಾಖ್ಯಾನಿಸಿದ್ದಾರೆ. ಹೀಗೆ ಮಹಾತ್ಮರು ಸಂತೋಷನ್ನು ವ್ಯಾಖ್ಯಾನಿಸಿದ್ದಾರೆ.

ರಾಜಕೀಯಶಾಸ್ತ್ರ ಮತ್ತು ಅರ್ಥಶಾಸ್ತ್ರೀಯ ದೃಷ್ಟಿಯಲ್ಲಿ ಸಂತೋಷ

ರಾಜಕೀಯ ಶಾಸ್ತ್ರಜ್ಞರು ಸಂತೋಷದ ಪರಿಕಲ್ಪನೆಯನ್ನು ರಾಜಕೀಯ ಪರಿದೃಷ್ಟಿಯಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದ್ದಾರೆ. ಖ್ಯಾತ ರಾಜಕೀಯ ಶಾಸ್ತ್ರಜ್ಞರಾದ 'ಜಾನ್ ಲಾಕ್' ಅವರು ಸಂತೋಷವನ್ನು ಸ್ವಾತಂತ್ರ್ಯದ ಅಡಿಪಾಯ ಎಂದು ವ್ಯಾಖ್ಯಾನಿಸಿದ್ದಾರೆ. ಜಾನ್ ಲಾಕ್‌ನಿಂದ ಪ್ರೇರಣೆಗೊಂಡ ಇನ್ನೋರ್ವ ರಾಜಕೀಯ ಚಿಂತಕನಾದ 'ಜೆಫರ್‌ಸನ್' ಅವರಲ್ಲಿಯೂ 'ಸಂತೋಷವು' ಮಹತ್ವವನ್ನು ಪಡೆದಿದೆ.

'ಉಪಯುಕ್ತತಾವಾದಿ ಸಿದ್ಧಾಂತದ' ಪ್ರಕಾರ ಎಲ್ಲಾ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ನಿರ್ಧಾರಗಳನ್ನೊಳಗೊಂಡ ಸಾರ್ವಜನಿಕ ನೀತಿಯು ಜನರ ನೋವನ್ನು ಕಡಿಮೆಗೊಳಿಸಿ, ಸಂತೋಷವನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎನ್ನುತ್ತದೆ. ಅರ್ಥಶಾಸ್ತ್ರೀಯ ದೃಷ್ಟಿಯಲ್ಲಿ ಸರಕು ಮತ್ತು ಸೇವೆಗಳ ಉತ್ಪಾದನೆ, ವಿತರಣೆ ಮತ್ತು ಸೇವನೆಯ ನೀತಿಯು ದೇಶದ ಜನರ ಸಾಮೂಹಿಕ ಯೋಗಕ್ಷೇಮವನ್ನು ಉದ್ದರಿಸುವ ಗುರಿಯೊಂದಿಗೆ ಜೋಡಿಸಿಕೊಂಡಿರುತ್ತದೆ. ಅರ್ಥಶಾಸ್ತ್ರದ ಪಿತಾಮಹರಾದ ಆಡಂ ಸ್ಮಿತ್ ಅವರು ಸಂತೋಷವನ್ನು ನ್ಯಾಯ, ಉಪಕಾರ ಹಾಗೂ ವಿವೇಕದ ನೆಲೆಯಲ್ಲಿ ವ್ಯಾಖ್ಯಾನಿಸಿದ್ದಾರೆ.

ಸಮಾಜಶಾಸ್ತ್ರೀಯ ಪರಿದೃಷ್ಟಿಯಲ್ಲಿ ಸಂತೋಷ

ಸಮಾಜಶಾಸ್ತ್ರವು ಮಾನವನ ಸಾಮಾಜಿಕ ಜೀವನವನ್ನು ವೈಜ್ಞಾನಿಕ ನೆಲೆಯಲ್ಲಿ ಅರ್ಥೈಸುವ ಪ್ರಯತ್ನವನ್ನು ಮಾಡುತ್ತದೆ. ಸಮಾಜಶಾಸ್ತ್ರವು ವ್ಯಕ್ತಿಯ ದೈನಂದಿನ ಜೀವನಾನುಭವವನ್ನು, ವಿವಿಧ ಸಾಮಾಜಿಕ ಸಂಬಂಧಗಳ ನೆಲೆಯಲ್ಲಿ ಸಂತೋಷವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತದೆ. ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಸಂಬಂಧಗಳು ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಸಂತೋಷದ ಪಾತ್ರ ಇವುಗಳನ್ನು ವಸ್ತುನಿಷ್ಟವಾಗಿ ವೀಕ್ಷಿಸಲು ಪ್ರಯತ್ನಿಸುತ್ತದೆ. ಮುಖ್ಯವಾಗಿ ಸಾಮಾಜಿಕ ಸಮಸ್ಯೆಗಳಾದ ಬಡತನ, ಅಸಮಾನತೆ, ಅನ್ಯಾಯ, ನಿರುದ್ಯೋಗ ಇವೆಲ್ಲದರ ನೆಲೆಯಲ್ಲಿ ಜೀವನಾನುಭವವನ್ನು ಸಂತೋಷದ ನೆಲೆಯಲ್ಲಿ ಸಮಾಜಶಾಸ್ತ್ರೀಯ ನೆಲೆಯಲ್ಲಿ ಅಳೆಯುತ್ತದೆ, ಮತ್ತು ಅಥೈಸುತ್ತದೆ.

ಸಮಾಜಶಾಸ್ತ್ರದ ಪಿತಾಮಹನಾದ 'ಆಗಸ್ಟ್ ಕಾಮ್ಟ್' ಆಧುನಿಕ ಸಮಾಜ ಸಾಧಿಸಬೇಕಾದ ಗುರಿ 'ಸಂತೋಷ' ವನ್ನು ಕಂಡುಕೊಳ್ಳುವುದು ಎಂದು ವ್ಯಾಖ್ಯಾನಿಸಿದ್ದಾನೆ. ಎಮೈಲ್ ಡರ್ಕೀಂ (1912) 'ಸಂತೋಷವು ಅನುಭವಗಳ ಹಂಚಿಕೆ ಮತ್ತು ಸಾಮೂಹಿಕ ಆಚರಣೆಗಳಿಂದ ಉಂಟಾಗುತ್ತದೆ' ಎನ್ನುತ್ತಾರೆ. ಕಾರ್ಲ್ ಮಾರ್ಕ್ಸ್ (1818), ಮ್ಯಾಕ್ಸ್ ವೇಬರ್, ಮೈಕಲ್ ಫೂಕೋ (1926), ಅವರುಗಳು 'ಕಠಿಣ ಪರಿಶ್ರಮ, ಶಿಸ್ತು, ನೈತಿಕ ಮೌಲ್ಯಗಳು, ಆದಾಯ, ಆರ್ಥಿಕ ಸರಕುಗಳು, ರಾಜಕೀಯ ಹಕ್ಕುಗಳು, ಆದಾಯ, ಸ್ವಾತಂತ್ರ್ಯ, ಆರೋಗ್ಯ, ಅಧಿಕಾರ ರಚನೆ, ಸಾಮಾಜಿಕ ನಿಯಂತ್ರಣ ಹಾಗೂ ಸಾಮಾಜಿಕ ಸಂಬಂಧಗಳು ಸಾಮಾಜಿಕ ಯೋಗಕ್ಷೇಮ (ಸಂತೋಷದ) ವರ್ಧಕಗಳು' ಎಂದು ಅಭಿಪ್ರಾಯಿಸಿದ್ದಾರೆ.

ಸಮಾಜಶಾಸ್ತ್ರಜ್ಞನಾದ ವೀನ್ಹೋವನ್ (1942) ಅವರು ಸಂತೋಷವನ್ನು "ಇದೊಂದು ಜೀವನಾನುಭವದ ವಿದ್ಯಮಾನವಾಗಿದ್ದು, ವ್ಯಕ್ತಿಯು ತನ್ನ ವೈಯಕ್ತಿಕ ಜೀವನ ಕ್ಷಣಗಳನ್ನು ಒಟ್ಟಾರೆ ಜೀವನ ಮಟ್ಟದ ನೆಲೆಯಲ್ಲಿ ನಿರ್ಣಯಿಸಿ ಅನುಭವಿಸುವ ಪ್ರಕ್ರಿಯೆಯಾಗಿದೆ" ಎನ್ನುತ್ತಾರೆ. ಇದು ವ್ಯಕ್ತಿಯ ಜೀವನದಲ್ಲಿನ ಆಹ್ಲಾದಕರ ಹಾಗೂ ಅಹಿತಕರ ಸನ್ನಿವೇಶಗಳು, ಭಾವನೆಗಳ ಅನುಭವದ ನೆಲೆಯಲ್ಲಿರುತ್ತದೆ ಎಂದು ಅಭಿಪ್ರಾಯಿಸುತ್ತಾರೆ. ಫೆಸ್ಟಿಂಗರ್ (1954) ತನ್ನ 'ಸಾಮಾಜಿಕ ಹೋಲಿಕಾ ಸಿದ್ಧಾಂತದಲ್ಲಿ', ಸಂತೋಷವು ಇತರರೊಂದಿಗಿನ ಹೋಲಿಕೆಯಿಂದ ಪ್ರೇರಿತಗೊಳ್ಳುತ್ತದೆ ಎಂದಿದ್ದಾನೆ. ಮಾಸ್ಲೋ(1943) ತನ್ನ ಸಾಮಾಜಿಕ ಏಣಿಶ್ರೇಣಿ ಸಿದ್ಧಾಂತದಲ್ಲಿ, ಮನುಷ್ಯನ ಮೂಲಭೂತ ಅಗತ್ಯಗಳು ಹಾಗೂ ಏಣಿ–ಶ್ರೇಣಿಯಲ್ಲಿನ ಧನಾತ್ಮಕ ಈಡೇರಿಕೆಗೆ ಸಂಬಂಧಿಸಿದೆ ಎನ್ನುತ್ತಾನೆ. ಹೀಗೆ ಸಮಾಜಶಾಸ್ತ್ರಜ್ಞರು ಸಂತೋಷವನ್ನು ಪರಿಪೂರ್ಣ ಸಾಮಾಜಿಕ ಸಂಬಂಧ ಮತ್ತು ಸಾಮಾಜಿಕ ಅಂತಃಕ್ರಿಯೆಯಿಂದ, ಸಾಮಾಜಿಕ ಸಂಸ್ಥೆಗಳ ಅನ್ಯೋನ್ಯತೆಯ ಕಾರ್ಯನಿರ್ವಹಣೆಯಿಂದ ಸಂತೋಷವನ್ನು ಅನುಭವಿಸಬಹುದು ಎಂಬುದನ್ನು ಅಭಿಪ್ರಾಯಿಸಿದ್ದಾರೆ.

ಉಪಸಂಹಾರ

ಒಟ್ಟಿನಲ್ಲಿ ಸಂತೋಷ ಮನುಷ್ಯ ಜೀವನದ ಅವಿಭಾಜ್ಯ ಭಾಗವಾಗಿದೆ. ಆಧ್ಯಾತ್ಮಿಕ ಜೀವನದಲ್ಲಿ ಸಂತೋಷದಿಂದ ಜೀವಿಸುತ್ತಿದ್ದ ಮನುಷ್ಯ ಪ್ರಸ್ತುತ ಅತಿವೈಚಾರಿಕತೆಯ ಸೆಲೆಗೆ ಸಿಲುಕಿ, ಆಧುನಿಕ ಯಾಂತ್ರಿಕ ಬದುಕಿನಲ್ಲಿ ಹೆಚ್ಚು ಅಸಂತೋಷಕ್ಕೆ ತುತ್ತಾಗುತ್ತಿದ್ದಾನೆ. ಒಂದೆಡೆ ಹೊರಜಗತ್ತು ಭಾರತೀಯ ಆಧ್ಯಾತ್ಮಿಕ ಜ್ಞಾನ ಪರಂಪರೆ ಮತ್ತು ಮೌಲ್ಯದೆಡೆಗೆ ಧಾವಿಸುತ್ತಿರುವ ಈ ಹೊತ್ತಿನಲ್ಲಿ, ಭಾರತೀಯರಾದ ನಾವು ಮತ್ತೊಂದು ದಿಕ್ಕಿನತ್ತ ಮುಖಮಾಡಿದ್ದೇವೆಯೇ ಎನ್ನುವ ಪ್ರಶ್ನೆ ಬರುತ್ತದೆ. ಭಾರತೀಯ ಜ್ಞಾನ ಪರಂಪರೆಯ ಅರಿವು ಬದುಕನ್ನು ಹೇಗೆ ಹೆಚ್ಚು ಆನಂದಮಯವಾಗಿಸಬಲ್ಲುದು ಎನ್ನುವುದರತ್ತ ಹೊಸ ತಲೆಮಾರು ಗಮನಹರಿಸಬೇಕಾಗಿದೆ.

ಪರಾಮರ್ಶನ ಗ್ರಂಥಗಳು

1. Kumar, S.K, (2006), Happiness and Wellbeing in Indian Tradition, Psychological studies, pp.105-112,
2. Lomas Tim, (2021) A Global History of Happiness, International Journal of Wellbeing Vol.11 (8), pp. 68-87.
3. Tiwari, Divya (2021), Approach to Happiness: A Philosophical Discourse, International Journal of Applied Ethics, Vol. 8, pp.11-17.
4. United Nations (N D) Gross National Happiness Index Report
5. Veerayya, C (2015) The Pursuit of Happiness: an Advait Vedanta Perspective, happiness and hope.
6. Vinayachandra Banavati, V & Anuradha Chowdary, A (2014). Understanding Happiness: a Vedantic Perspective, Psychological Studies, V. 59, 141-152

❖❖❖

ಮಳವಳ್ಳಿ ಪ್ರಾಂತ್ಯದ ಮ್ಯಾದರ ಭಾಷಿಕ ವಿಶ್ಲೇಷಣೆ

ಡಾ. ಶಿವಣ್ಣ ಕೆಂಸಿ
ಸಹ ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು, ಸ್ವಾಯತ್ತ, ಬಸವನಗುಡಿ, ಬೆಂಗಳೂರು–04

"ಮ್ಯಾದರಿಗೆ ಪರ್ಯಾಯವಾಗಿ ಮೇದರ್, ಮೇದರಿ, ಗೌರಿಗ, ಬುರುಡ ಮತ್ತು ಬುಡ್ಡರ್ ಎಂಬ ಪದಗಳು ಬಳಕೆಯಲ್ಲಿವೆ. ಇದನ್ನು ಕುರಿತು ಮುಂಬೈ ಕರ್ನಾಟಕದ ಗ್ಯಾಝೆಟಿಯರ್ ಹೀಗೆ ವರದಿ ಮಾಡಿದೆ. ಮೇದಾರರು ಇಲ್ಲವೇ ಬುರುಡರು ದೊಡ್ಡ ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ವಾಸಿಸುತ್ತಾರೆ. ಕಾನಡಾ ಜಿಲ್ಲೆಯಲ್ಲಿ ಘಟ್ಟದ ಮೇಲೆ ಮಾತ್ರ ಇರುತ್ತಾರೆ. ಇವರ ಮಾತೃಭಾಷೆ ಕನ್ನಡ. ಮೇದರ ಐತಿಹಗಳ ಪ್ರಕಾರ ಮಹೇಂದ್ರ ಚಲದ ಮೂಲಿಗರೇ ಮಹೇಂದ್ರರಾಗಿ ಮೇದರಾಗುವರು. ಶಿವ ಗೌರಿ ಸಂತಾನವೇ ಗೌರಿಗರಾಗುವರು. ಆದರೆ ಗೌರಿಗರು ಮೂಲತಃ ಕವರಿಗರು. ಕವರಿಗರೆಂದರೆ ಬಿದಿರಿನ ಕಾಯಕದವರೆಂದು ಅರ್ಥ. ಮಹಾಭಾರತದ ವಿದುರನ ವಂಶಜರು ತಾವು ಎಂದು ಹೇಳುವರು. ಕನ್ನಡದ ಬಿದುರು ಪದ ಈ ಸಂಶಯಕ್ಕೆಡಮಾಡುವುದು. ಬಿದಿರಿನ ಉದ್ಯೋಗಿಗಳನ್ನೇ ಬುರುಡ, ಮಿಯಾದಾರ, ಮ್ಯಾದಾರ, ಮೇದರೆ, ಮೇದ, ಬೀದರು, ಮಿದರು, ಮೇದರ್, ಮೇದರಿ, ಗೌರಿಗ, ಬುಡ್ಡರ್ ಎಂಬೀ ಹೆಸರುಗಳಿಂದಲೂ ಕರೆಯಲಾಗುತ್ತಿದೆ."[1]

"ಮೇದ ಸಮುದಾಯವನ್ನು 1956ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪರಿಷ್ಕೃತ ಆದೇಶ ಪರಿಶಿಷ್ಟ–3, ಭಾಗ–8ರ ಮೈಸೂರು ರಾಜ್ಯದ ಪಟ್ಟಿಯ ಕ್ರಮಸಂಖ್ಯೆ–7, 5ರ ಪ್ರಕಾರ ಕೊಡಗು ಜಿಲ್ಲೆಗೆ ಸೀಮಿತಗೊಂಡಂತೆ ಬುಡಕಟ್ಟು ಪಟ್ಟಿಗೆ ಸೇರಿಸಲಾಗಿದೆ."[2]

ಮೇದರನ್ನು ಮಳವಳ್ಳಿ ಪರಿಸರದ ನುಡಿಯಲ್ಲಿ ಮ್ಯಾದ, ಮ್ಯಾದರು ಎಂದು ಕರೆಯಲ್ಪಡುತ್ತಾರೆ. ಮ್ಯಾದರು ಬಿದಿರಿನ ಸಾಧನಗಳನ್ನು ಅತಿ ಹೆಚ್ಚು ತಯಾರಿಸುವರು. ಬಿದಿರು ಇವರ ಕಸುಬಿನ ಮೂಲವಸ್ತುವಾಗಿ ಬಳಕೆಗೊಳ್ಳುವುದನ್ನು ಕಾಣಬಹುದು. ಬಿದಿರಿನ ಮೂಲಕ ವಿವಿಧ ಗೃಹಬಳಕೆಯ ವಸ್ತುಗಳನ್ನು ಈ ಸಮುದಾಯ ತಯಾರಿಸಿ ಮಾರಾಟಮಾಡುತ್ತಾರೆ. ಪ್ರಾರಂಭದ ದಿನಗಳಲ್ಲಿ ಈ ಸಮುದಾಯದ ಜನರು ಬಿದಿರಿನಿಂದ ತಯಾರಿಸಿದ ವಿವಿಧ ವಸ್ತುಗಳನ್ನು ದವಸ ಧಾನ್ಯಗಳಿಗೆ ಮಾರಾಟ ಮಾಡುತ್ತಿದ್ದರು. ನಂತರದ ದಿನಗಳಲ್ಲಿ ಇವರು ಹಣಕ್ಕೆ ಮಾರಾಟ ಮಾಡಿ ಬಂದ ಹಣದಿಂದ ತಮ್ಮ ಬದುಕನ್ನು ದೂಡುವ ಸ್ಥಿತಿ ಈ ಸಮುದಾಯದವರದಾಗಿದೆ. ಆಧುನಿಕ ಯಂತ್ರಗಳಿಂದಾಗಿ ಸಾಂಪ್ರದಾಯಿಕ ಕಸುಬಾದ ಮ್ಯಾದರ ವೃತ್ತಿಯು ಇಂದು ನಾಶದ ಹಂತದಲ್ಲಿರುವುದು ದುರಂತವಾಗಿದೆ.

ಮಳವಳ್ಳಿ ಪರಿಸರದ ಮ್ಯಾದರ ಸಮುದಾಯದಲ್ಲಿ ಬಳಕೆಗೊಳ್ಳುವ ವೃತ್ತಿ ಮೂಲ ಪದಕೋಶಗಳ ಬಳಕೆ ಮತ್ತು ವಿಶ್ಲೇಷಣೆಯನ್ನು ಈ ಅಧ್ಯಯದ ಬಹಳ ಪ್ರಮುಖವಾದ ಉದ್ದೇಶವಾಗಿದೆ.

ಮ್ಯಾದರು ತಯಾರಿಸುವ ವಸ್ತುಗಳಲ್ಲಿ ಎರಡು ವಿಧಗಳನ್ನು ಕಾಣಬಹುದಾಗಿದೆ. ಒಂದು ಗೃಹೋಪಯೋಗಿ, ಇನ್ನೊಂದು ಕಲೆಗಾರಿ ವಸ್ತುಗಳಾಗಿರುತ್ತವೆ. ಪ್ರಾರಂಭದ ಹಂತದಲ್ಲಿ ಗೃಹೋಪಯೋಗಿ ವಸ್ತುಗಳನ್ನು ಮಾತ್ರ ತಯಾರಿಸುತ್ತಿದ್ದ ಈ ಸಮುದಾಯ

ಗ್ರಾಹಕರನ್ನು ಸೆಳೆಯುವ ದೃಷ್ಟಿಯಿಂದ ಅವರ ಅಭಿರುಚಿಗೆ ತಕ್ಕಂತೆ ಕಲಾತ್ಮಕತೆಯ ವಸ್ತುಗಳನ್ನು ತಯಾರಿಸಲು ಮುಂದಾದರು ಎಂದು ಹೇಳುತ್ತಾರೆ. ಬಿದಿರಿನ ವಸ್ತುಗಳಿಗೆ ಆಧುನಿಕತೆಗೆ ತಕ್ಕಂತೆ ಕಲಾತ್ಮಕತೆ ನೀಡಿ ವಸ್ತುಗಳನ್ನು ಈ ಸಮುದಾಯ ತಯಾರಿಸುತ್ತಾರೆ.

ಈ ಸಮುದಾಯ ಬಿದಿರಿನ ಗಳ, ಬೆತ್ತ ಮತ್ತು ಅದರ ತೊಗಟೆಯಿಂದ ತಯಾಸಿರುವ ವಸ್ತುಗಳನ್ನು ಮಳವಳ್ಳಿ ಪರಿಸರದಲ್ಲಿ ಬಳಕೆಗೊಳ್ಳುವ ಪದಗಳನ್ನು ಈ ಕೆಳಕಂಡಂತೆ ಗಮನಿಸಬಹುದು. ಮಳವಳ್ಳಿ ಪರಿಸರದಲ್ಲಿ ಬಳಕೆಗೊಳ್ಳುವ ಪದಗಳಿಗೆ ಬರಹ ಕನ್ನಡದಲ್ಲಿ ಪರ್ಯಾಯವಾಗಿ ಯಾವ ಅರ್ಥದಲ್ಲಿ ಕರೆಯಲಾಗುತ್ತದೆ ಎಂಬುದನ್ನು ಉದಾಹಾರಣೆಗಳೊಂದಿಗೆ ಕಾಣಬಹುದು.

ಮಳವಳ್ಳಿ ಕನ್ನಡ	**ಬರಹ ಕನ್ನಡ**
ಪುಟ್ಟೆ	ಬುಟ್ಟಿ
ಮೊರ	ಮೊರ
ತೊಟ್ಲು	ತೊಟ್ಟಿಲು
ಬಿಸ್ಣಗೆ	ಬೀಸಣಿಗೆ

ಈ ರೀತಿಯಾದ ಬಳಕೆಯ ವ್ಯತ್ಯಾಸವನ್ನು ಗಮನಿಸಬಹುದಾಗಿದೆ. ಇದಲ್ಲದೆ ಇನ್ನೂ ಅನೇಕ ಪದಗಳನ್ನು ಈ ಪರಿಸರದಲ್ಲಿ ಬಳಸಲಾಗುತ್ತದೆ. ಅದಕ್ಕೆ ಬರಹ ಕನ್ನಡ ಅರ್ಥ ದೊರೆಯುವುದು ಕಷ್ಟ. ಆ ಪದಗಳ ಉದಾಹರಣೆಯನ್ನು ಕಾಣಬಹುದಾಗಿದೆ.

ಮಳವಳ್ಳಿ ಪರಿಸರದಲ್ಲಿ ಬಳಕೆಗೊಳ್ಳುವ ಮ್ಯಾದ ಸಮುದಾಯದ ಕುಲಕಸುಬಿನ ಪದಗಳ ಬಳಕೆಯ ಕ್ರಮ, ಅರ್ಥದ ನೆಲೆಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

ಕುಕ್ಕೆ–ಎಂಬ ವಸ್ತುವನ್ನು ರೇಷ್ಮೆ ಹುಳುವಿನ ಹಿಪ್ಪು ನೇರಳೆ ಸೊಪ್ಪನ್ನು ತುಂಬಲು ಮಳವಳ್ಳಿ ಪರಿಸರದಲ್ಲಿ ಬಳಸುತ್ತಾರೆ. ಕುಕ್ಕೆ ಎಂಬುದನ್ನು ಈ ಪರಿಸರದ ಜನರು ಬಳಸುತ್ತಾರೆ. ಮಳವಳ್ಳಿ ಪರಿಸರದ ಜನರು ಕುಕ್ಕೆ ಎಂದೇ ಬಳಸುವುದನ್ನು ಇಂದಿಗೂ ಕಾಣಬಹುದಾಗಿದೆ. ಈ ವಸ್ತುವು ಆಕಾರದಲ್ಲಿ ದಪ್ಪಗಿದ್ದು ತಳ ಭಾಗವು ಅಗಲವಾಗಿದ್ದು ಕತ್ತಿನ ಭಾವು ಚಿಕ್ಕದಾಗಿರುತ್ತದೆ.

ಚಿಬ್ಲು–ಚಿಬ್ಲು ಎಂಬ ವಸ್ತುವು ತಟ್ಟೆಯ ಆಕಾರವನ್ನು ಹೊಂದಿದ್ದು ಮೇಲ್ಮೈ ಭಾಗವು ಉದ್ದನೆಯ ಆಕಾರವನ್ನು ಹೊಂದಿರುತ್ತದೆ. ಅದನ್ನು ಒಟ್ಟಿ ಎಂಬ ಶಬ್ಧದಿಂದ ಮಳವಳ್ಳಿ ಪರಿಸರದ ಜನರು ಕರೆಯುವರು. ಈ ಚಿಬ್ಲನ್ನು ರೇಷ್ಮೆ ಹುಳುವನ್ನು ತುಂಬಿ ಚಂದ್ರಿಕೆಗೆ ಬಿಡಲು ಇಂದಿಗೂ ಬಳಸಲಾಗುತ್ತದೆ.

ಬುಜಂಗ್ಗೆ ಪೆಟ್ಟಿ–ಬುಜಂಗ್ಗೆ ಪೆಟ್ಟಿಯು ಕೊಳಗದ ಆಕಾರದಲ್ಲಿ ಇರುತ್ತದೆ. ಮೇಲೆ ಮುಚ್ಚಳ ಇರುತ್ತದೆ. ಇದನ್ನು ಮದುವೆ ಮನೆಯಲ್ಲಿ, ದೇವರ ಕಾರ್ಯಗಳಲ್ಲಿ ಬಟ್ಟೆ, ಒಡವೆ ಇತ್ಯಾದಿ ವಸ್ತುಗಳನ್ನು ಇಟ್ಟು ಮೆರವಣಿಗೆಯ ಮೂಲಕ ಅದನ್ನು ಮದುಮಗನಿಗೆ ಮತ್ತು ದೇವಾಲಯಕ್ಕೆ ತಲುಪಿಸುತ್ತಾರೆ. ಈ ಪೆಟ್ಟಿಗೆಯು ಬಣ್ಣದಿಂದ ಅಲಂಕಾರಗೊಂಡಿರುತ್ತದೆ.

ಪೆಟ್ಟಿ–ಪೆಟ್ಟಿಯನ್ನು ಬಟ್ಟೆ ತುಂಬಿ ಇಟ್ಟಿಕೊಳ್ಳಲು ಬಳಸುತ್ತಾರೆ. ಇದು ಉದ್ದನೆಯ ಆಕಾರವನ್ನು ಹೊಂದಿರುತ್ತದೆ. ಅಡ್ಡ ಅಳತೆ ಮಧ್ಯಮವಾಗಿದ್ದು ಮೇಲೆ ಮುಚ್ಚುವ ಮುಚ್ಚಳವನ್ನು ಹೊಂದಿರುತ್ತದೆ.

ಚಂದ್ರಿಕೆ–ಚಂದ್ರ್ಕೆಯನ್ನು ರೇಷ್ಮೆ ಹುಳುಗಳನ್ನು ಬಿಡಲು ಬಳಸುತ್ತಾರೆ. ಇದು ಚೌಕಾರದ ರೂಪವನ್ನು ಹೊಂದಿದ್ದು, ಇದರ ಮೇಲ್ಮೈ ಭಾಗದಲ್ಲಿ ವೃತ್ತಾಕಾರದಲ್ಲಿ

ಜೇಡರ ಬಲೆಯ ರೂಪದ ತಟ್ಟಿಗೆಯನ್ನು ಕಟ್ಟಲಾಗಿರುತ್ತದೆ. ಇವುಗಳ ಮಧ್ಯೆ ರೇಷ್ಮೆ ಹುಳುಗಳನ್ನು ಬಿಡುತ್ತಾರೆ. ಹುಳುಗಳು ಸರಾಗವಾಗಿ ಗಾಳಿ, ಬೆಳಕಿನ ಮೂಲಕ ಗೂಡುಕಟ್ಟಲು ಸಹಾಯಕವಾಗುತ್ತದೆ.

ತಟ್ಟಿ–ಇದು ರೇಷ್ಮೆ ಹುಳುಗಳನ್ನು ಮರಿಯಿಂದ ಹಣ್ಣಾಗುವ ವರೆಗೆ ಬೆಳೆಸಲು ಬಳಸುತ್ತಾರೆ. ಇದು ಬೃಹತ್ತಾದ ತಟ್ಟೆಯ ಆಕಾರವನ್ನು ಹೊಂದಿರುತ್ತದೆ. ಇದನ್ನು ಹಸುವಿನ ತೊಪ್ಪೆಯಿಂದ ತಾರಿಸಿ, ಒಣಗಿಸಿ ಬಳಸಲಾಗುತ್ತದೆ. ಇದು ತಟ್ಟೆ ಆಕಾರದ ಸಾಧನವಾಗಿರುವುದರಿಂದ ಈ ಪ್ರದೇಶದ ಜನರ ಬಾಯಲ್ಲಿ ಇದು ತಟ್ಟಿ ಆಗಿದೆ. ಕಾರಣ ಇದನ್ನು ಬಳಸುವಾಗು ಇಲ್ಲಿಯ ಜನರು ಆಕಾರ ಮತ್ತು ಬಳಕೆಗನುಗುಣವಾಗಿ ಈ ಪದ ಬಳಸುತ್ತಾರೆ. ಈ ತಟ್ಟಿಯನ್ನು ಬಳಸುವಾಗ ತಟ್ಟಿ ತಟ್ಟಿ ಬಳಸುತ್ತಾರೆ. ಇದೊಂದು ಕ್ರಿಯೆಯಾಗಿದ್ದು ತಟ್ಟುವಿಕೆ ಎಂದು ಕರೆಯಲಾಗುತ್ತದೆ.

ಮಂಕ್ರಿ–ಇದನ್ನು ಇಂದಿಗೂ ಎಲ್ಲಾ ಪ್ರದೇಶಗಳಲ್ಲೂ ಬಳಸುವುದನ್ನು ಕಾಣಬಹುದು. ಮಂಕ್ರಿಯನ್ನು ಮನೆಯ ಕಸ, ಕೊಟ್ಟಿಗೆಯ ಸೆಗಣಿ, ಗೊಬ್ಬರವನ್ನು ಹೊಲ–ಗದ್ದೆಗಳಿಗೆ ಎರಚುವಾಗ ಬಳಸಲಾಗುತ್ತದೆ. ಅದಷ್ಟೆ ಅಲ್ಲದೆ, ಮದುವೆ ಮನೆಗಳಲ್ಲಿ ಅನ್ನ, ಮುದ್ದೆ ಇತ್ಯಾದಿ ಪದಾರ್ಥಗಳನ್ನು ಬಡಿಸುವಾಗ ಬಳಸಲಾಗುತ್ತದೆ. ಇದು ಬಿದಿರಿನ ಕಡ್ಡಿಗಳಿಂದ ಏಣೆಯಲ್ಪಟ್ಟ ವಸ್ತುವಾಗಿದೆ. ಸಭೆ ಸಮಾರಂಭಗಳಲ್ಲಿ ಅನ್ನವನ್ನು ಬಸಿಯಲೂ ಇದನ್ನು ಬಳಸಲಾಗುತ್ತದೆ. ವ್ಯವಸಾಯದ ಸಂದರ್ಭದಲ್ಲಿ, ಮಣ್ಣು ತುಂಬಲು ಬಹು ಉಪಯೋಗಿ ವಸ್ತುವಾಗಿ ಬಳಕೆಯಾಗುವುದನ್ನು ಕಾಣಬಹುದು.

ಪಂಜ್ರ–ಪಂಜರ ಪದವು ಮಳವಳ್ಳಿ ಪರಿಸರದಲ್ಲಿ ಪಂಜ್ರವಾಗಿ ಬಳಕೆಗೊಳ್ಳುವುದನ್ನು ಕಾಣಬಹುದು. ಇದು ಬಿದಿರಿನ ಕಡ್ಡಿಗಳಿಂದ ನಿರ್ಮಿತವಾಗಿರುತ್ತದೆ. ಪಂಜರದಲ್ಲಿ ಕೋಳಿಗಳನ್ನು ಕೂಡಿಡಲು ಬಳಸುತ್ತಾರೆ. ಇದು ಉದ್ದನೆಯ ಗೊಪ್ಪೆಯಾಕಾರವನ್ನು ಹೊಂದಿದ್ದು ಇದರ ಸುತ್ತ ಗಾಳಿ ಬೆಳಕಿಗೆ ಚಿಕ್ಕ ಚಿಕ್ಕ ಚೌಕಾಕಾರದ ಮನೆಗಳನ್ನು ಬಿಟ್ಟಿರಲಾಗಿರುತ್ತದೆ. ತಳಭಾಗವು ವೃತ್ತಾಕಾರವಾಗಿದ್ದು, ಮೇಲ್ಭಾಗವು ಮುಚ್ಚಲ್ಪಟ್ಟಿರುತ್ತದೆ. ಮೇಲ್ಭಾಗದಲ್ಲಿ ವೃತ್ತಾಕಾರದ ಮೊಣಚು ಆಕೃತಿಯನ್ನು ಹೊಂದಿರುತ್ತದೆ.

ತೊಂಬೆ–ಇದು ಮನುಷ್ಯರ ಎತ್ತರವನ್ನು ಹೊಂದಿದ್ದು, ಆಕಾರದಲ್ಲಿ ದೊಡ್ಡಾಗಿರುತ್ತದೆ. ಇದನ್ನು ಧಾನ್ಯಗಳನ್ನು ಸಂಗ್ರಹಿಸಿಡಲು ಬಳಸುತ್ತಾರೆ. ಇದರ ಹೊಟ್ಟೆಯ ಭಾಗದಲ್ಲಿ ಅಗಲವಾದ ಆಕಾರವನ್ನು ಹೊಂದಿದ್ದು ಮುಂದೆ ಚಿಕ್ಕ ಆಕಾರವನ್ನು ಹೊಂದಿರುತ್ತದೆ. ಅಂದಿನ ದಿನಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಬಳಸುತ್ತಿದ್ದ ಅತಿ ದೊಡ್ಡ ಸಾಧನವಾಗಿತ್ತು.

ಯಡ್ಗೆ–ಇದು ವೃತ್ತಾಕಾರ ಮತ್ತು ಚೌಕಾಕಾರದ ಎರಡು ರೂಪಗಳನ್ನು ಹೊಂದಿದ್ದು. ಮೇಲಿನ ಭಾಗವು(ಬಾಯಿ) ಸಮತಟ್ಟಾದ ಅಳತೆಯನ್ನು ಹೊಂದಿರತ್ತದೆ. ಇದನ್ನು ದೇವಾಲಯಗಳಿಗೆ ಪೂಜೆ ಮಾಡಲು ಹೊಸ ಯಡ್ಗೆಯನ್ನು ಬಳಸುತ್ತಾರೆ. ಇದರಲ್ಲಿ ಪೂಜಾ ಸಾಮಾಗ್ರಿಗಳನ್ನು ಇಟ್ಟು ದೇವಾಲಯಕ್ಕೆ ತೆಗೆದುಕೊಂಡು ಹೋಗುತ್ತಾರೆ.

ಕೊಟ್ಟ–ಇದು ಬಿದಿರಿನ ಒಂದು ಸಾಧನ. ಇದನ್ನು ಹಸು, ಕರು, ಮೇಕೆ, ಕುರಿಗಳಿಗೆ ಔಷಧಿಯನ್ನು ಕುಡಿಸಲು ಬಳಸುತ್ತಾರೆ. ಇದು ಬಿದಿರಿನ ಕೊಳಬೆಯಾಗಿರುತ್ತದೆ. ಇದರ ಮೂತಿಯು ಚೂಪಾಗಿರುತ್ತದೆ.

ಬೆಂಡ್ಗುಕ್ಕೆ–ಅಗಲವಾದ ಆಕಾರವನ್ನು ಹೊಂದಿದ್ದು ಚಿಕ್ಕದಾದ ಬಾಯಿಂದ

ಕೂಡಿರುತ್ತದೆ. ಇದನ್ನು ದೇವಾಲಯಗಳಿಗೆ ಪೂಜಾ ಸಾಮಗ್ರಿಗಳನ್ನು ಕೊಂಡೊಯ್ಯಲು ಬಳಸುತ್ತಾರೆ. ಮೂಡೆ–ಕಾಳುಗಳನ್ನು ಸಂಗ್ರಹಿಸಿಡಲು ಇದನ್ನು ಬಳಸಲಾಗುತ್ತದೆ. ಇದು ದುಂಡನೆಯ ಆಕಾರವನ್ನು ಹೊಂದಿರುತ್ತದೆ.

ಕೊಂಗ–ಇದು ರಾಗಿ, ಭತ್ತ, ಇತರ ಧಾನ್ಯಗಳನ್ನು ತೂರಲು ಬಳಸುವ ಸಾಧನ. ಇದು ಮಲೆನಾಡಿನಲ್ಲಿ ತಲೆಗೆ ಇಳಿಬಿಟ್ಟ ಗೌನಿನ ಆಗಿರುತ್ತದೆ. ಬಿದಿರಿನ ಅಚ್ಚೆಯಲ್ಲಿ ತಯಾರಿಸುತ್ತಾರೆ.

ಮೆರೆ–ಇದು ಉದ್ದನೆಯ ಬಿದಿರಿನ ದೊಣ್ಣೆಯಾಗಿದ್ದು ಇದರ ತುದಿ ಭಾಗದಲ್ಲಿ ಬಾಗಿದ ರೀತಿ ಕೊಂಬನ್ನು ಬಿಟ್ಟಿರುತ್ತಾರೆ. ಮೂತಿಯ ತುದಿಯಲ್ಲಿ ಉಲ್ಲನ್ನು ಎತ್ತಲು ಈ ಬಿದಿರಿನ ದೊಣ್ಣೆಯನ್ನು ಬಳಸುತ್ತಾರೆ.

ವೃತ್ತಿ ಆಧಾರಿತ ಜಾತಿಗಳಾಗಿ ಸಮಾಜದಲ್ಲಿ ಇರುವುದನ್ನು ಕಾಣಬಹುದು. ಮ್ಯಾದರು, ಬೆಸ್ತರು, ಕುಂಬಾರ ಸಮುದಾಯದ ಜನರು ಬಳಸುವ ಮಾತಿನ ಮೂಲಕ ಇವರು ಇದೇ ಸಮುದಾಯದ ಜನರು ಎಂದು ಗುರುತಿಸುವಷ್ಟು ಸ್ವತಂತ್ರ ಮತ್ತು ಕಸುಬು ಆಧಾರಿತ ಭಾಷೆಯನ್ನು ಬಳಸುವುದನ್ನು ಗುರುತಿಸಲಾಗುವುದು. ವೃತ್ತಿ ಆಧಾರಿ ಭಾಷೆಯ ಮೂಲಕ ಒಂದು ಜನಾಂಗವನ್ನು ಹೇಗೆ ಗುರುತಿಸಲಾಗುತ್ತದೆ ಎನ್ನುವುದನ್ನು ಕೆಲವು ಉದಾಹರಣೆಗಳೊಂದಿಗೆ ನೋಡಬಹುದು.

ಮ್ಯಾದ ಜನಾಂಗದಲ್ಲಿ ಬಳಕೆಯಲ್ಲಿರುವ ಭಾಷೆಯನ್ನು ಗಮನಿಸುವುದಾದರೆ,

- ಕುಕ್ಕೆ ಕುಕ್ದಂಗೆ ಕುಕ್‌ಬುಡ್ತಿನಿ ನಿನ್ನ
- ಕ್ವಟ್ಟಲ್ ಎಟ್ಟು ಅವನ್ಗೆ ಅದೆಷ್ಟ್ ಕುಡ್ದನು ಕುಡಿಲಿ
- ಕ್ವಟ ತಕ ಎಟ್‌ಬುಡ್ತಿನಿ
- ತಟ್ಟಿ ತಾರ್ಸದಂಗೆ ತಾರ್ಸಬುತಿನ್ ನಿನ್ನ
- ಮೂಡೆಗ್ ಬುಟ್ಟಂಗ್ ಬುಡ್ತಿನ್ ನೋಡು
- ತೊಂಬ್ಯಂಗ್ವಳೆ
- ತೊಂಬ್ಯಂಗ್ವನೆ
- ಚಾಪೆ ಸುತ್ತಂಗ್‌ಸುತ್‌ಬುಡ್ತಿನಿ

ಈ ರೀತಿಯಾದ ಪದಗಳನ್ನು ಬಳಸುವುದು ಈ ಮ್ಯಾದರು ಮಾತ್ರ. ಈ ರೀತಿಯ ವಾಕ್ಯಗಳ ಬಳಕೆಯು ಈ ಸಮುದಾಯದ ಜನರಲ್ಲಿ ಬಳಸುವುದರಿಂದ ನಾವು ಆ ಸಮುದಾಯದ ಜನರೆಂದು ಗುರುತಿಸಬಹುದು. ಭಾಷಾ ಬಳಕೆಯ ಹಿನ್ನೆಲೆಯಿಂದಲು ಸಹ ಒಂದು ಸಮುದಾಯದ ಅಸ್ಮಿತೆಯನ್ನು, ಅವರ ಭಾಷೆಯ ಬಳಕೆಯ ಕ್ರಮವನ್ನು ಗುರುತಿಸಲು ಸಾಧ್ಯವಾಗುತ್ತದೆ.

ಕೊನೆ ಟಿಪ್ಪಣಿ

1. ಕೆ.ಎಂ. ಮೈತ್ರಿ, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ–182
2. ಕೆ.ಎಂ. ಮೈತ್ರಿ, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪುಟ–183

❖❖❖

ಆಧುನಿಕ ಕನ್ನಡ ಸಾಹಿತ್ಯ ಮತ್ತು ಸ್ತ್ರೀಪರ ಚಿಂತನೆ

ಡಾ. ಅಶೋಕ ಎಸ್. ಕೋರೆ

ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ. ಮಹಾವಿದ್ಯಾಲಯ, ಔರಾದ (ಬಾ), ಬೀದರ

ಸಾಹಿತ್ಯ ಅಭಿವ್ಯಕ್ತಿಯ ಒಂದು ಪ್ರಮುಖ ಸಾಧನ. ಬಹುಕಾಲದಿಂದಲೂ ವಿಶ್ವದ ಎಲ್ಲೆಡೆ ವ್ಯಕ್ತಿಗಳು ತಮ್ಮ ಭಾವನೆಗಳನ್ನು, ಸಮಕಾಲೀನ ಸಮಾಜದ ಪರಿಸ್ಥಿತಿಗಳನ್ನು, ತಮ್ಮ ಸೋಲು–ಗೆಲುವುಗಳನ್ನು ಬರಹಗಳ ಮೂಲಕ ದಾಖಲಿಸುತ್ತಾ ಬಂದಿದ್ದಾರೆ. "ಸಾಹಿತ್ಯ ಎನ್ನುವುದು ಬರಹಗಳ ಒಂದು ಸಮರೂಪವಾದ ಸಮಷ್ಟಿಯಲ್ಲ. ವಿವಿಧ ಕಾಲಗಳಲ್ಲಿ, ವಿವಿಧ ದೇಶಗಳಲ್ಲಿ, ವಿವಿಧ ಗುಂಪು ವರ್ಗಗಳಲ್ಲಿ ಆಯಾ ಕಾಲ–ದೇಶ ಪರಿಸ್ಥಿತಿಗಳಿಗನುಗುಣವಾಗಿ ಸಾಹಿತ್ಯದ ಸೃಷ್ಟಿಯಾಗುತ್ತದೆ"[1]. ಮಹಿಳಾ ಚಿಂತನೆಯಲ್ಲಿ ಸಾಹಿತ್ಯದ ಪಾತ್ರ ಎಷ್ಟು ಮಹತ್ವವಾದದ್ದು ಎಂಬುದನ್ನು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆಯಿಲ್ಲ. ಏಕೆಂದರೆ ಜಗತ್ತಿನಾದ್ಯಂತ ಸ್ತ್ರೀಪುರುಷ ಅಸಮಾನತೆಯ ವಿರುದ್ಧ ಧ್ವನಿಗಳು ಎದ್ದಿದ್ದು ಸಾಹಿತ್ಯದ ಮೂಲಕವೇ ಆಗಿದೆ.

ಇಂದು ಮಹಿಳೆಯರ ಬರಹಗಳನ್ನು 'ಗೋಳಿನ ಕಂತೆ' ಎಂದು ಮೂದಲಿಸುವವರೂ ಏನು ಕಡಿಮೆ ಸಂಖ್ಯೆಯಲಿಲ್ಲ. "ಮಹಿಳೆಯರ ಬದುಕಿನ ವಾಸ್ತವಗಳಿಗೆ ಸ್ಪಂದಿಸುವಂತಹ ವಿಷಯಗಳನ್ನು, ಮಹಿಳೆಯರ ದೃಷ್ಟಿಕೋನದಿಂದ ಅರ್ಥೈಸುವಂತಹ ಸಂವೇದನಾಶೀಲ ಮನಸ್ಸು ಸಾಹಿತಿಗೆ ಇರಬೇಕಷ್ಟೇ'.[2] ಸ್ವತಃ ನೋವು ನಲಿವುಗಳನ್ನು ಅನುಭವಿಸಿದವರು ವಿಚಾರವನ್ನು ಗ್ರಹಿಸುವ ದೃಷ್ಟಿಯೇ ಬೇರೆ. ಅನುಭವಿಸದೇ ಹೊರಗೆ ನಿಂತು ನೋಡುವವರ ದೃಷ್ಟಿಕೋನವೇ ಬೇರೆ. ಆದ್ದರಿಂದ ಮಹಿಳೆಯರಿಗೆ ಸಂಬಂಧಿಸಿದ ವಿಚಾರಗಳನ್ನು ಮಹಿಳೆಯರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು ಎಂಬ ಒಂದು ಚರ್ಚೆ ಸಾಹಿತ್ಯಕ್ಷೇತ್ರದಲ್ಲಿದೆ.

ಈ ಚರ್ಚೆಯ ಹಿನ್ನೆಲೆಯಲ್ಲಿ ನಮ್ಮ ಮನಸ್ಸಿನಲ್ಲಿ ಮೂಡುವ ಪ್ರಮುಖ ಪ್ರಶ್ನೆಯೆಂದರೆ ಸ್ತ್ರೀಪರ ವಿಚಾರಗಳಿಗೆ ಸಂಬಂಧಿಸಿದ ಸಾಹಿತ್ಯದ ಸ್ವರೂಪ ಹೇಗಿರಬೇಕು ಎನ್ನುವುದು. ಈ ಬಗೆಗೆ ಈಗಾಗಲೇ ಅನೇಕ ಚರ್ಚೆಗಳು ಆಗಿವೆ. 'ಕೆಲವರ ದೃಷ್ಟಿಯಲ್ಲಿ ಸ್ತ್ರೀಪರ ವಿಚಾರಗಳನ್ನು ನಿಶ್ಚಿತವಾದ ಸೈದ್ಧಾಂತಿಕ ಚೌಕಟ್ಟಿನೊಳಗೆ ಇರಿಸಿ ವಿಶ್ಲೇಷಿಸುವುದು ಮುಖ್ಯವಾದರೆ, ಮತ್ತೆ ಕೆಲವರ ಅಭಿಪ್ರಾಯದಲ್ಲಿ ವಾಸ್ತವಗಳನ್ನು ಬಣ್ಣಿಸುವುದು ಸೈದ್ಧಾಂತಿಕರಣಕ್ಕಿಂತ ಮುಖ್ಯ'[3] ಎನ್ನುತ್ತಾರೆ.

ಆದರೆ ಸಾಹಿತ್ಯದಲ್ಲಿ ಸ್ತ್ರೀಪರ ಚಿಂತನೆ, ವಿಚಾರ–ಚರ್ಚೆಗಳು ಬಹು ಪ್ರಬಲವಾಗಿ ಕೇಳಲಾರಂಭಿಸಿದ್ದು ಹತ್ತನೆಯ ಶತಮಾನದಲ್ಲೇ. 'ಅತಿಮಬ್ಬೆ' ತಾನು ಸ್ವತಃ ಲೇಖಕಿಯಾಗದಿದ್ದರೂ 'ಶಾಂತಿಪುರಾಣ'ವನ್ನು ಪ್ರಚಾರ ಮಾಡಲು ತನ್ನ ಐಶ್ವರ್ಯವನ್ನು ಬಳಸಿದ್ದಾಳೆ. ಹಾಗೂ ರನ್ನನ ಸಾಹಿತ್ಯಕ್ಕೆ ಸ್ಫೂರ್ತಿಯನ್ನು ನೀಡಿದ್ದು, ಸಾಹಿತ್ಯದ ಇತಿಹಾಸದಲ್ಲಿ ಸ್ಮರಿಸುವಂತಹ ಒಂದು ಮಹತ್ವದ ಘಟ್ಟವಾಗಿದೆ. ಹನ್ನೆರಡನೆಯ ಶತಮಾನದಲ್ಲಿ ವಚನ ಸಾಹಿತ್ಯ ಸ್ತ್ರೀಪರವಾದ ಹೋರಾಟಗಳಿಗೆ ಒಂದು ಭದ್ರವಾದ ಬುನಾದಿಯನ್ನು ಹಾಕಿತು. ಸಂಸಾರದ ಕಪಿಮುಷ್ಟಿಯಿಂದ ಹೊರಬಂದು

ಮಹಿಳೆ ಸಮಾನ ಅವಕಾಶವನ್ನು ಕಲ್ಪಿಸಿಕೊಂಡಳು.

'ಫುಲೆಯವರಿಂದ ಪ್ರಭಾವಿತಗೊಂಡಿದ್ದ ತಾರಾಬಾಯಿ ಸಿಂಧೆ 1882ರಲ್ಲಿ 'ಸ್ತ್ರೀಪರ ತುಲನ' ಎಂಬ ಭಾರತದ ಮೊಟ್ಟಮೊದಲ ಸ್ತ್ರೀಪರ ಸಂವೇದನೆಯುಳ್ಳ ಹೊತ್ತಿಗೆಯನ್ನು ಪ್ರಕಟಿಸಿದಳು.'[4] ಸ್ತ್ರೀಪರ ಚಿಂತನೆ ಎಂಬ ಮಾತೇ ತೀರಾ ಇತ್ತೀಚಿನದು. ಅದಕ್ಕೂ ಹಿಂದೆ ಈ ಪ್ರಶ್ನೆ ಎದ್ದಿದೆಯಾದರೂ ಪ್ರಧಾನವಾಗಿ ಪರಿಗಣಿತವಾಗಿಲ್ಲ. ಸ್ತ್ರೀಪರ ಚಿಂತನೆಗಳ ಅಭಿವ್ಯಕ್ತಿಯನ್ನು, ಅದರ ಸ್ವರೂಪವನ್ನು ಗುರುತಿಸುವುದೇ ಇಲ್ಲಿಯ ಉದ್ದೇಶವಾಗಿದೆ. ಸ್ತ್ರೀಯ ಬಗೆಗೆ ಸ್ತ್ರೀಯರಲ್ಲಿ ಹಾಗೂ ಪುರುಷರಲ್ಲಿ ಕಾಲಕ್ರಮದಲ್ಲಿ ಎಂತಹ ಚಿಂತನೆ ಹರಿದು ಬಂದಿದೆ ಎನ್ನುವ ಅಂಶ ಹಾಗೂ ಚಿಂತನೆ ಸಾಹಿತ್ಯರೂಪದಲ್ಲಿ ಎಷ್ಟರ ಮಟ್ಟಿಗೆ ಸಫಲತೆಯನ್ನು ಸಾಧಿಸಿದೆ ಎಂಬ ಪ್ರಶ್ನೆಗೆ ಉತ್ತರಗಳನ್ನು ಕಾಣಲು ಇಲ್ಲಿ ಪ್ರಯತ್ನಿಸಲಾಗಿದೆ.

ಬದಲಾವಣೆಯ ಹಂತದಿಂದ ಬೆಳೆಯುತ್ತಾ ಸಾಗಿರುವ ಆಧುನಿಕ ಕನ್ನಡ ಸಾಹಿತ್ಯವನ್ನು ಕೇಂದ್ರವಾಗಿರಿಸಿಕೊಂಡು, ಪುರುಷರಚಿತ ಸಾಹಿತ್ಯದಲ್ಲಿನ ಸ್ತ್ರೀ ಸಂಬಂಧಿತವಾದ ಧೋರಣೆಗಳನ್ನು ವಿವೇಚಿಸುವುದು ಸಮಕಾಲೀನ ಅಗತ್ಯಗಳಲ್ಲಿ ಒಂದಾಗಿದೆ.

'ಸ್ತ್ರೀಪರ ಚಿಂತನೆ' ಮೊದಲನೆಯದಾಗಿ ಸ್ತ್ರೀ–ಪುರುಷರ ನಡುವಿನ ಅಸಮಾನತೆ ಸಾಂಸ್ಕೃತಿಕ ಹಿನ್ನೆಲೆಯದಾಗಿದ್ದು, ಪರಿಸರದ ಕಾರಣದಲ್ಲಿ ಉದ್ಭವಿಸಿದ್ದು ಎಂದು ನಂಬುತ್ತದೆ. ಎರಡನೆಯದಾಗಿ ಪುರುಷರ ದೃಷ್ಟಿಕೋನ 'ಸಾರ್ವತ್ರಿಕ'ವಲ್ಲ. ಪುರುಷ ಪ್ರಧಾನ ವ್ಯವಸ್ಥೆ, ಪ್ರಧಾನ ಸಂಸ್ಕೃತಿಗೆ ಅನುಕೂಲಕರವಾದ ಅರ್ಧ ಸತ್ಯವನ್ನಷ್ಟೇ ಹೇಳುತ್ತದೆ.[5] ಅಂದರೆ ಈ ಪುರುಷಕೇಂದ್ರಿತ ಗ್ರಹಿಕೆಯಲ್ಲಿ ಮಿತಿಯಿದೆ, ಅಪಾಯವಿದೆ ಎಂದೂ ಸ್ತ್ರೀಪರ ಚಿಂತಕರ ಅಭಿಪ್ರಾಯವಾಗಿದೆ ಎನ್ನಬಹುದು.

'ಸ್ತ್ರೀಪರ'ವೆಂಬ ಪದವನ್ನು ಸ್ತ್ರೀ ಕೇಂದ್ರಿತ ಮೌಲ್ಯಗಳು, ಧೋರಣೆಗಳು, ಅಭಿವ್ಯಕ್ತಿ ರೂಪಗಳಲ್ಲಿರುವ ಸ್ತ್ರೀ ಸಹಾನುಭೂತಿ ಪರದೃಷ್ಟಿಯೆಂಬ ಅರ್ಥದಲ್ಲಿ ಇಲ್ಲಿ ಬಳಸಿಕೊಂಡಿದೆ.[6] ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಹೊಸ ಬಗೆಯ ಸಾಹಿತ್ಯ ಪ್ರಕಾರಗಳು (ಕಾವ್ಯ, ಕಥೆ, ಕಾದಂಬರಿ, ಪ್ರಬಂಧ) ಹುಟ್ಟಿದವು. ಹೊಸದಾಗಿ ರೂಢಿಸಿದ ಮಾನವತಾವಾದದ ಪರಿಣಾಮವಾಗಿ ಸಾಹಿತ್ಯದಲ್ಲಿನ ಸ್ತ್ರೀಪರವಾದ ಚಿಂತನೆಗಳೂ ಆದ್ಯತೆ ಪಡೆದ ಈ ಅವಧಿಯನ್ನು ಒಂದು ಪ್ರಮುಖ ಬಿಂದುವಾಗಿ ಗ್ರಹಿಸಿ, ಸ್ತ್ರೀ ಸಂಬಂಧಿತ ಮೌಲ್ಯಗಳು, ಧೋರಣೆಗಳು ಆಧುನಿಕ ಸಾಹಿತ್ಯದಲ್ಲಿ ಹೇಗೆ ಅಭಿವ್ಯಕ್ತ ಪಡೆಯುತ್ತವೆಎಂಬುದನ್ನುಎಲ್ಲಾ ಸಾಹಿತ್ಯ ಪ್ರಕಾರದ ಅಧ್ಯಯನದ ಮೂಲಕ ಗುರುತಿಸಲು ಪ್ರಯತ್ನಿಸಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕಾವ್ಯ, ಕಥೆ ಕಾದಂಬರಿಗಳಿಗೆ ಮಾತ್ರ ಅಧ್ಯಯನವು ಸೀಮಿತವಾಗಿ ವಿಶ್ಲೇಷಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ. ಚರ್ಚೆಯ ಅನುಕೂಲತೆಯ ದೃಷ್ಟಿಯಿಂದ ಕೆಲವೇ ಗಮನಾರ್ಹ ಕೃತಿಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸುತ್ತೇನೆ.

ಪುರುಷರಿಂದ ರಚಿತವಾದ ಸ್ತ್ರೀಪರ ದೃಷ್ಟಿಯ ಸಾಹಿತ್ಯದಲ್ಲಿ ಮುಖ್ಯವಾಗಿ ಕಥಾ ಸಾಹಿತ್ಯವೇ ಕಾಣುವುದು. "ಸ್ತ್ರೀಪರವಾದ ಎಂಬುದು ಬಹುಮಟ್ಟಿಗೆ ಸ್ತ್ರೀಯ ಬಗೆಗಿನ ಜಿಜ್ಞಾಸೆಗಿಂತ ಧರ್ಮಜಿಜ್ಞಾಸೆಯಾಗಿ ನಿರೂಪಿತವಾಗಿದೆ.[7] ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ', 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳು ವಾಸ್ತವ ನೆಲೆಯಲ್ಲಿ ಪರಿಹಾರವನ್ನು ಶೋಧಿಸಿ, ಆ ಬಗ್ಗೆ

ಅವರೇ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಸ್ತ್ರೀಯರ ಪರಿಸ್ಥಿತಿಯ ಸ್ವರೂಪವನ್ನು ಅರ್ಥಮಾಡಿಕೊಳ್ಳುವಲ್ಲಿ 'ವೈಶಾಖ' ಕಾದಂಬರಿ ಪ್ರಮುಖವಾದುದ್ದಾಗಿದೆ.

ಸ್ವಾತಂತ್ರ್ಯಪೂರ್ವದ ಲೇಖಕಿಯರಿಗೆ ಸಾಹಿತ್ಯ ಸೃಷ್ಟಿ ಒಂದು ಹವ್ಯಾಸಕ್ಕಿಂತ ಮುಖ್ಯವಾಗಿ ಬದಲಾವಣೆಯ ಅಸ್ತ್ರವಾಗಿತ್ತು. ಗಾಂಧೀಯವರು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಮಹಿಳೆಯರ ಬೆಳವಣಿಗೆ ಕುರಿತಂತೆ ನಡೆಸಿದ ಚಿಂತನೆಗಳು ಹಾಗೂ ಹಾಕಿಕೊಂಡ ಕಾರ್ಯಕ್ರಮಗಳು, ಸ್ತ್ರೀಪರ ಸುಧಾರಣಾವಾದಿಗಳು ಹುಟ್ಟು ಹಾಕಿದ ಚಳುವಳಿಗಳು ಮತ್ತು ಆಗಿನ ಹಿಂದಿನ ಸಾಹಿತ್ಯಾಭ್ಯಾಸದ ಗಾಢ ಪ್ರಭಾವದಲ್ಲಿ ಅವರ ಸಾಹಿತ್ಯ ಕೃಷಿ ನಡೆಯಿತು. "ಸ್ತ್ರೀಯರ ಶೋಷಣೆಗೆ ಕಾರಣವಾದ ಸಾಮಾಜಿಕ ಹಾಗೂ ಧಾರ್ಮಿಕ ಮೌಲ್ಯಗಳನ್ನು ಪ್ರಶ್ನಿಸುವ ಕೆಲಸವನ್ನು ಆ ಕಾಲದ ಲೇಖಕಿಯರು ಮಾಡಿದರು. ವರದಕ್ಷಿಣೆ, ಸ್ತ್ರೀ ಶಿಕ್ಷಣ, ಬಾಲ್ಯವಿವಾಹ, ವಿಧವಾ ಸಮಸ್ಯೆ, ಜಾತಿ ಮತ್ತು ಕೋಮು ವ್ಯವಸ್ಥೆಗಳಿಂದ ಆಗುತ್ತಿರುವ ಅನ್ಯಾಯಗಳೂ ಅವರ ಸಾಹಿತ್ಯದ ಪ್ರಧಾನ ವಸ್ತುವಾಗಿದ್ದವು."[8]

ಇಪ್ಪತ್ತನೇ ಶತಮಾನದಲ್ಲಿ ಮಹಿಳೆಯರ ಬದುಕನ್ನು ಕೇಂದ್ರ ವಸ್ತುವನ್ನಾಗಿ ಹೊಂದಿದ ಅನೇಕ ಕೃತಿಗಳು ರಚನೆಯಾದವು. ಅವರಲ್ಲಿ 'ನಂಜನಗೂಡು ತಿರುಮಲಾಂಬಾ' ಆಧುನಿಕ ಕನ್ನಡ ಸಾಹಿತ್ಯಕ್ಕೆ ನಿಶ್ಚಿತವಾದ ಸ್ತ್ರೀಪರ ದೃಷ್ಟಿಕೋನವನ್ನು ನೀಡಿದವರಲ್ಲಿ ಅಗ್ರಮಾನ್ಯರು ಎಂದರೆ ತಪ್ಪಾಗಲಾರದು. ಬಾಲ್ಯದಲ್ಲೇ ವಿಧವೆಯಾದ ತಿರುಮಲಾಂಬಾ ವೈಯಕ್ತಿಕ ಬದುಕಿನಲ್ಲಿ ಅಪಾರ ನೋವುಗಳನ್ನು ಅನುಭವಿಸಿದವರು. ಆದರೆ "ಈ ತೊಂದರೆಗಳು ಅವರ ಜೀವನವನ್ನು ಪಕ್ವ ಮಾಡಿದವೇ ಹೊರತು, ಅವರನ್ನು ಅಧೀರರನ್ನಾಗಿಸಲಿಲ್ಲ. ವಿಧವಾ ಸಮಸ್ಯೆ, ವರದಕ್ಷಿಣೆಯ ಸಮಸ್ಯೆ, ಬಾಲ್ಯ ವಿವಾಹ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ"[9] ಇವೇ ಮುಂತಾದ ಸಾಮಾಜಿಕ ವಿಚಾರಗಳನ್ನು ಕುರಿತು ಕಾದಂಬರಿ, ನಾಟಕ, ಪ್ರಬಂಧಗಳನ್ನು ತಿರುಮಲಾಂಬ ರಚಿಸಿದರು. ತಿರುಮಲಾಂಬಾ ಅವರ ನಂತರದಲ್ಲಿ ಅನೇಕ ಲೇಖಕಿಯರು ಕನ್ನಡ ಸಾರಸ್ವತ ಲೋಕದಲ್ಲಿ, ಸ್ತ್ರೀಗೆ ಸಂಬಂಧಿಸಿದ ವಿಚಾರಗಳನ್ನು ಕೇಂದ್ರವಸ್ತುವನ್ನಾಗಿ ಹೊಂದಿದ ಕೃತಿಗಳನ್ನು ರಚಿಸಿದರು. ಅವರುಗಳಲ್ಲಿ ಹೆಚ್.ಸಿ. ಸಾವಿತ್ರಮ್ಮ, ಕೊಡಗಿನ ಗೌರಮ್ಮ, ಶ್ಯಾಮಲಾ ದೇವಿ, ಜಯಲಕ್ಷ್ಮೀದೇವಿ, ಲಲಿತಾಬಾಯಿ ಕಾಮತ, ಆರ್. ಕಲ್ಯಾಣಮ್ಮ, ಬೆಳಗೆರೆ ಜಾನಕಮ್ಮ, ಗಿರಿಬಾಲೆ ಮುಂತಾದವರು. ಈ ಲೇಖಕಿಯರು ಸ್ತ್ರೀಯರು ತಮ್ಮ ಬದುಕಿನಲ್ಲಿ ಎದುರಿಸಬೇಕಾಗಿದ್ದ ಸಮಸ್ಯೆಗಳನ್ನು ತಮ್ಮಕಥಾ ವಸ್ತುಗಳನ್ನಾಗಿ ಹೊಂದಿದ್ದರಿಂದ ಅವರ ಬರಹಗಳು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಪರ ವಿಚಾರಗಳಿಗೆ ಸಂಬಂಧಪಟ್ಟಂತೆ ಹೊಸದೊಂದು ಗಾಳಿಯನ್ನು ಎಬ್ಬಿಸಿದವು. 'ಬಾಲ ವಿಧವೆಯರು, ಪ್ರೌಢ ವಿಧವೆಯರು, ಅನಾಥೆಯರು, ಮುದುಕಗಂಡನನ್ನು ಕೈ ಹಿಡಿದಕನ್ನೆಯರು, ಗರತಿ ಬದುಕು ನಡೆಸಬೇಕೆಂದು ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡ ವೇಶ್ಯೆಯರು, ವರದಕ್ಷಿಣೆಗೆ ಬಲಿಯಾದ ಪ್ರೇಮಿಗಳು ಇತ್ಯಾದಿ'[10] ವಿಭಿನ್ನ ಸ್ಥಿತಿಯ ಸ್ತ್ರೀಯರು ಅನುಭವಿಸುವ ಸಾಮಾಜಿಕ ಶೋಷಣೆಯನ್ನು ಪ್ರತಿಭಟಿಸಲು ಬರೆದರು.

ಇವರು ಬರೆದ ಸಾಹಿತ್ಯದಲ್ಲಿ ಪರಂಪರಾಗತವಾಗಿ ಬಂದಿರುವ ಸ್ತ್ರೀಗೆ ಸಲ್ಲಬೇಕಾದ ಸ್ಥಾನ ಇವುಗಳ ಚರ್ಚೆ ಇದೆ. ಬಾಲ್ಯವಿವಾಹ, ವಿಧವಾ ವಿವಾಹ, ವರದಕ್ಷಿಣೆ, ಹೆಣ್ಣಿನ ಪರಾವಲಂಬನೆ ಹೀಗೆ ಸ್ತ್ರೀ ವಿರೋಧಿಯಾದ ಸಮಾಜ ವ್ಯವಸ್ಥೆಯ

ವಿಶ್ಲೇಷಣೆ ಇದೆ. ಬಹುಮಟ್ಟಿಗೆ ಇವರ ಬರವಣಿಗೆಗಳಲ್ಲಿ ಸಮಾಜದಲ್ಲಿರುವ ಸ್ತ್ರೀ ವಿರೋಧಿ ದುಷ್ಟ ಪದ್ಧತಿಗಳನ್ನು ತೋರಿ ಟೀಕಿಸುವ ಕೆಲಸ ನಡೆದಿದೆ. ಹಲವೊಮ್ಮೆ ಸ್ತ್ರೀಯು ಹಿಡಿಯಬಹುದಾದ ಹೊಸ ಹಾದಿಗಳ ಸೂಚನೆಯನ್ನು ನೀಡಲಾಗಿದೆ. ಜೀವನದಲ್ಲಿ ನೊಂದ ಮಹಿಳೆಯರಿಗೆ ಜೀವನೋಪಾಯ ಕಲ್ಪಿಸಬೇಕಾದ ಅಗತ್ಯವನ್ನು ಕುರಿತಂತೆ ಪರಿಹಾರೋಪಾಯಗಳನ್ನು ಸೂಚಿಸಿದ್ದಾರೆ. 'ಬೆಳಗೆರೆ ಜಾನಕಮ್ಮ'ನವರು ಅಂದಿನ ದಿನಗಳಲ್ಲಿ ಸಮಕಾಲೀನ ಸಾಹಿತಿಗಳ ಮೆಚ್ಚುಗೆಗೆ ಪಾತ್ರರಾಗಿದ್ದ ಕವಿಯತ್ರಿ. 'ಅವರ 'ಕುಲ' ಎಂಬ ಕವನದಲ್ಲಿನ ಸಾಲುಗಳಲ್ಲಿ 'ಕುಲವು ಕುಲವು ಕುಲವು ಎಂದು ಹಾರುತಿರುವೆಯಾ, ಸುಳ್ಳೆ ಸುಳ್ಳೆ ವೇಷಗಳನ್ನು ತೋರುತಿರುವೆಯಾ.' ಸ್ತ್ರೀಯರ ಸಂವೇದನಾ ಶೀಲತೆ ಹೆಚ್ಚಿದಂತೆಲ್ಲ ಅವರು ಸಮಾಜವನ್ನು ಕಾಣುವ ದೃಷ್ಟಿಯೂ ಹೆಚ್ಚಾಗುತ್ತದೆ"[11] ಎನ್ನುತ್ತಾರೆ ಬಿ.ಎಸ್. ವೆಂಕಟಲಕ್ಷ್ಮಿಯವರು.

ಆನಂತರದ ಲೇಖಕಿಯರಲ್ಲಿ 'ತ್ರಿವೇಣಿ' ಮುಖ್ಯರು. ಇವರ ಕಾದಂಬರಿಗಳಲ್ಲಿ ಉದಾರವಾದಿ ಸ್ತ್ರೀವಾದದ ಛಾಯೆಯನ್ನು ನಾವು ಕಾಣಹುದು. ತಮ್ಮ 'ಮೊದಲ ಹೆಜ್ಜೆ,' 'ಕೀಲುಗೊಂಬೆ', 'ದೂರದಬೆಟ್ಟ', 'ಕಂಕಣ' ಕಾದಂಬರಿಗಳಲ್ಲಿ ಸಂಪ್ರದಾಯಬದ್ಧ ಹಾಗೂ ಲಿಂಗ ಪೂರ್ವಗ್ರಹಗಳಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಬೇಕೆಂಬ ಮನಸ್ಸು ಇದ್ದುದ್ದನ್ನು ನಾವು ಗುರುತಿಸಬಹುದು. ಎಂ.ಕೆ.ಇಂದಿರಾ ಸ್ತ್ರೀಯರ ಉನ್ನತಿಯ ಬಗ್ಗೆ, ಸಮಾಜ ಸುಧಾರಣೆಯ ಬಗ್ಗೆ ಹೆಚ್ಚಿನ ಕಾಳಜಿಯನ್ನು ತೋರುತ್ತಾರೆ.

ನಿಜವಾದ ಅರ್ಥದಲ್ಲಿ ಸ್ತ್ರೀಪರ ದೃಷ್ಟಿಕೋನವನ್ನು ಹೊಂದಿರುವುದಷ್ಟೇ ಅಲ್ಲದೇ, ಅದನ್ನು ಸಮರ್ಥವಾಗಿ ಸಾಹಿತ್ಯ ಮಾಧ್ಯಮದಲ್ಲಿಯೂ ಹಿಡಿದಿಡುವ ಸಾಮರ್ಥ್ಯದ ಬರಹಗಾರ್ತಿಯರಲ್ಲಿ ವೀಣಾ ಶಾಂತೇಶ್ವರ, ವೈದೇಹಿ, ಸಾರಾ ಅಬೂಬಕರ್, ಬಿ.ಟಿ. ಲಲಿತಾನಾಯಕ, ಗೀತಾ ನಾಗಭೂಷಣ, ಸವಿತಾ ನಾಗಭೂಷಣ, ಶೈಲಜಾ ಉಡಚಣ ಮುಂತಾದವರನ್ನು ಹೆಸರಿಸಬಹುದು. "ವೀಣಾ ಅವರ ಅಭಿವ್ಯಕ್ತಿ ಕೆಲವೆಡೆ ಬೆಚ್ಚಿ ಬೀಳುವಂತೆ ತೋರಿದರೂ; ಅದು ಅನಿರೀಕ್ಷಿತತೆಯಿಂದಾಗಿಯೇ ಹೊರತು ಅವಾಸ್ತವತೆಯಿಂದ ಅಲ್ಲ ಅನಿಸುತ್ತದೆ. 'ವೈದೇಹಿಯವರ ಸಾಹಿತ್ಯದಲ್ಲಿ ಹೊಸ ದೃಷ್ಟಿಕೋನ ಮಾತ್ರವೇಅಲ್ಲದೇ, ಅಭಿವ್ಯಕ್ತಿಯತಂತ್ರದ ಮೇಲೆ ಸಾಧಿಸಿರುವ ಅಗಾಧ ನಿಯಂತ್ರಣವೂ ಗಮನಾರ್ಹವಾಗಿದೆ.'[12]

ಕನ್ನಡ ಸಾಹಿತ್ಯವಿಂದು ಸ್ತ್ರೀಪರವಾದ, ಸ್ತ್ರೀವಾದಿ ನಿಲುವುಗಳಿಂದ ರಚಿತವಾದ ಬರಹಗಳಿಂದ ಸಮೃದ್ಧವಾಗಿದೆ. ಆದರೆ ಸ್ತ್ರೀ ಸಮಸ್ಯೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸ್ಪಂದಿಸುತ್ತಿರುವವರು ಸ್ತ್ರೀಯರು ಮಾತ್ರ. ಸ್ತ್ರೀಯರ ಬರಹ ಎಂದೊಡನೆ ಅದನ್ನು ಒಂದು ರೀತಿಯ ತಾತ್ಸಾರ ಮನೋಭಾವದಿಂದ ನೋಡುವಂಥ ಪ್ರವೃತ್ತಿ ಬಹುಕಾಲದವರೆಗೆ ಅಸ್ತಿತ್ವದಲ್ಲಿತ್ತು. ಇಂದು ಆ ಪರಿಸ್ಥಿತಿ ಬಹುಮಟ್ಟಿಗೆ ಬದಲಾಗಿದೆ ಎನ್ನಬಹುದು. ಸ್ತ್ರೀ–ಪುರುಷರೆಂಬ ಭೇದವಿಲ್ಲದೆ ಇಬ್ಬರೂ ಈ ಬಗೆಗೆ ಚಿಂತನೆ ನಡೆಸಿದ್ದಾರೆ. ಕೌಟುಂಬಿಕ ಹಂತದಲ್ಲಿ, ಸಾಮಾಜಿಕ ಹಂತದಲ್ಲಿ ಅಥವಾ ಇನ್ಯಾವುದೇ ಕೆಳಸ್ತರದಲ್ಲಿ ಜೀವಿಸುವ ಹೆಣ್ಣಿನ ಯಾತನೆಗಳನ್ನು ಇವು ಹಿಡಿದಿಟ್ಟಿವೆ. ಇಂತಹ ಧೋರಣೆಗಳ ಬಗೆಗೆ ಅಪಾರವಾದ ಆಕ್ರೋಶವೂ ವ್ಯಕ್ತಗೊಂಡಿದೆ.

ಟಿಪ್ಪಣಿಗಳು:

1. ಡಾ. ಆರ್. ಇಂದಿರಾ – ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ–ಸಂ. 122
2. ಡಾ. ಆರ್. ಇಂದಿರಾ – ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ–ಸಂ. 128
3. ಡಾ. ಆರ್. ಇಂದಿರಾ – ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪುಟ–ಸಂ. 130
4. ಚಂದ್ರಶೇಖರ ಪಾಟೀಲ – ಸಂಕ್ರಮಣ, ಪುಟ–ಸಂ. 105
5. ವಿವಿಧ ಲೇಖಕರು – ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ – ಪುಟ–ಸಂ. 158
6. ಡಾ. ರಹಮತ ತರೀಕೆರೆ – ಸಾಹಿತ್ಯ ವಿಮರ್ಶೆ, ಪುಟ–ಸಂ. 106
7. ವಿವಿಧ ಲೇಖಕರು – ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಪುಟ– ಸಂ. 43
8. ಡಾ.ಎಚ್.ಎಸ್. ಶ್ರೀಮತಿ – ಸಮಗ್ರಕನ್ನಡ ಸಾಹಿತ್ಯಚರಿತ್ರೆ – ಪುಟ–ಸಂ. 377
9. ಡಾ. ಆರ್. ಇಂದಿರಾ – ಮಹಿಳೆ ಸಮಾಜ ಮತ್ತು ಸಂಸ್ಕೃತಿ ಪುಟ– ಸಂ. 126
10. ಸಂ.ಜಿ.ಎಸ್. ಶಿವರುದ್ರಪ್ಪ – ಕನ್ನಡ ಸಾಹಿತ್ಯ ಸಂದರ್ಭ ಪುಟ–ಸಂ. 189
11. ಸಂ.ಜಿ.ಎಸ್. ಶಿವರುದ್ರಪ್ಪ – ಕನ್ನಡ ಸಾಹಿತ್ಯ ಸಂದರ್ಭ ಪುಟ–ಸಂ. 116
12. ವಿವಿಧ ಲೇಖಕರು – ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ – ಪುಟ–ಸಂ. 45

ಸಹಾಯಕ ಗ್ರಂಥಗಳು

1. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002
2. ಚಂದ್ರಶೇಖರ ಪಾಟೀಲ(ಸಂ), ಸಂಕ್ರಮಣ (2016 ಮಾರ್ಚ್–ಜೂನ್), ಸಂಕ್ರಮಣ ಪ್ರಕಾಶನ, ಬೆಂಗಳೂರು,
3. ರಹಮತ್ ತರೀಕೆರೆ(ಸಂ), ಸಾಹಿತ್ಯ ವಿಮರ್ಶೆ(1992), ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
4. ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993
5. ಶ್ರೀಮತಿ ಎಚ್.ಎಸ್. (ಸಂ.), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ – 2006
6. ಶಿವರುದ್ರಪ್ಪ ಜಿ.ಎಸ್ (ಸಂ.), ಕನ್ನಡ ಸಾಹಿತ್ಯ ಸಂದರ್ಭ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1990
7. ಗಾಯತ್ರಿ ಎನ್., ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪ್ರಕಾಶನ, 1996
8. ರಾಮಲಿಂಗಪ್ಪ ಟಿ. ಬೇಗೂರು, ಮಹಿಳೆ ಚರಿತ್ರೆ – ಪುರಾಣ, ಅಂಕಿತ ಪುಸ್ತಕ, ಬೆಂಗಳೂರು, 2014

❖❖❖

ಕನ್ನಡ ಸಂಶೋಧನಾ ಘಟ್ಟಗಳು ಮತ್ತು ಮುಂದಿನ ಸಾಧ್ಯತೆಗಳು

ಡಾ. ಬಸವರಾಜ ಸಾಲವಾಡಗಿ

ಕನ್ನಡ ಸಹಾಯಕ ಪ್ರಾಧ್ಯಾಪಕ, ಬಿ.ಎಲ್.ಡಿ.ಇ. ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನಬಾಗೇವಾಡಿ–586203

ಕನ್ನಡ ಭಾಷೆಗೆ 2000 ವರ್ಷಗಳಿಗೂ ಮಿಕ್ಕಿದ ಇತಿಹಾಸವಿದ್ದರೆ, ಕನ್ನಡ ಸಾಹಿತ್ಯ ಸಂಶೋಧನೆಗೆ ಸು.200 ವರ್ಷಗಳ ಇತಿಹಾಸವಿದೆ.

ಆಧುನಿಕ ಕನ್ನಡದ ಸಂಶೋಧನ ಕ್ಷೇತ್ರದ ಆರಂಭದ ಹೆಜ್ಜೆಗುರುತುಗಳು 18ನೇ ಶತಮಾನದ ಉತ್ತರಾರ್ಧದಲ್ಲಿ ದೊರೆಯುತ್ತವೆ. ಮೈಸೂರು ಸಂಸ್ಥಾನವನ್ನು ಬ್ರಿಟಿಷರು ಟಿಪ್ಪುವಿನಿಂದ ವಶಪಡಿಸಿಕೊಂಡ ಮೇಲೆ, ಕರ್ನಲ್ ಮೆಕೆಂಜಿ ಮೈಸೂರಿನ ಒಟ್ಟು ಪ್ರದೇಶವನ್ನು ಪರಿವೀಕ್ಷಸುವ ಕಾರ್ಯವನು, ಕೈಕೊಂಡ. ಅವನು ಭೂಮಾಪನವನ್ನು ಮಾಡುತ್ತಲೇ ಆ ಪ್ರದೇಶದಲ್ಲಿ ಇರುವ ಹಸ್ತಪ್ರತಿ, ಕೈಫಿಯತ್ತು, ಶಾಸನ, ನಾಣ್ಯ ಮುಂತಾದವನ್ನೂ ಸಂಗ್ರಹಿಸುವುದರ ಮೂಲಕ ಸಂಶೋಧನೆಗೆ ಆವಶ್ಯಕವೆನಿಸುವ ಆಕರಸಾಮಗ್ರಿಯನ್ನು ಸಂಗ್ರಹಿಸಿದ. ಇದು ಮಹತ್ವದ ಕಾರ್ಯವಾಯಿತು. ಹಾಗೆಯೆ, ಇತರೆ ಬ್ರಿಟಿಷ್ ಅಧಿಕಾರಿಗಳಾಗಿದ್ದ ಬುಕಾನನ್ನ, ವಾಲ್ಟರ್, ಹೆನ್ರಿ, ಕಿಟೆಲ್, ರೈಸ್, ಮುಂತಾದವರೂ ಈ ಕಾರ್ಯ ಮಾಡಿದರು. ಕೆಲವರು ವ್ಯವಸ್ಥಿತವಾಗಿ ಮಾಡಿಗ್ರಂಥ ಸಂಪಾದನೆ, ನಿಘಂಟುರಚನೆ, ಸಾಹಿತ್ಯಕೃತಿ ಪ್ರಕಟನೆ, ವ್ಯಾಕರಣರಚನೆ ಮುಂತಾದವುಗಳನ್ನೂ ಕೈಕೊಂಡರು.

ಇದು ಕನ್ನಡ ಸಂಶೋಧನೆ ಕ್ಷೇತ್ರದ ಆರಂಭದ ಚಟುವಟಿಕೆಗಳ ಒಂದು ಮಾದರಿ. ಕನ್ನಡ ಸಂಶೋಧನೆಯ ಘಟ್ಟಗಳನ್ನು ಗುರುತಿಸುವಾಗ ಬ್ರಿಟಿಷರ ಆಗಮನದ ಮೊದಲು ಮತ್ತು ನಂತರದ ಅಜ್ಞಾತ ಸಂಶೋಧಕರನ್ನು ನಾವು ಮರೆಯಬಾರದು. ಇವರ ಕಾಲಘಟ್ಟವನ್ನು ನಾನು ಅಜ್ಞಾತ ಸಂಶೋಧಕರ ಕಾಲ ಎಂದು ಕರೆಯುತ್ತೇನೆ.

ಎರಡನೆಯ ಕಾಲಘಟ್ಟ ಬ್ರಿಟಿಶರ ಆಗಮನದ ನಂತರ ದಕ್ಷಿಣಭಾರತದಲ್ಲಿ Oriental Studies ಆರಂಭಗೊಂಡ ಕಾಲ. 1907ರಲ್ಲಿ ಲಂಡನ್‌ನಲ್ಲಿ Oriental Studies ಆರಂಭಗೊಂಡಿತ್ತು. 1911ರಲ್ಲಿ ಸಿಮ್ಲಾದಲ್ಲಿ ಒಂದು ಸಂಶೋಧಕರ ಸಮ್ಮೇಳನ ನಡೆಯಿತು. ಅದರಲ್ಲಿ ಒಂದು ಗೊತ್ತುವಳಿಯನ್ನು ಪಾಸುಮಾಡಿ ಹಿಂದೂಸ್ತಾನದಲ್ಲೂ ಓರಿಎಂಟಲ್ ಅಧ್ಯಯನ ನಡೆಯಬೇಕೆಂದು ಒತ್ತಾಯಿಸಿತ್ತು. ಅದನ್ನು ಪರಿಗಣಿಸಿ ಬ್ರಿಟಿಷ್ ಸರಕಾರ ಒಂದು ಸಮಿತಿಯನ್ನು ನೇಮಿಸಿ ಅದು ನೀಡಿದ ವರದಿಯನ್ನು ಆಧರಿಸಿ 1913ರ ಫೆಬ್ರುವರಿ ತಿಂಗಳ 22ರಂದು ಗೆಜೆಟ್ ನೋಟಿಫಿಕೇಶನ್ ಹೊರಡಿಸಿ 1913 ಎಪ್ರಿಲ್ 1ರಿಂದ ಜಾರಿಗೊಳಿಸಿತು. ಆದರೆ ವೈಶಿಷ್ಟ್ಯವೆಂದರೆ ಮೈಸೂರಿನಲ್ಲಿ 1891ರಲ್ಲಿಯೇ ಅಸ್ತಿತ್ವದಲ್ಲಿದ್ದ ಚಾಮರಾಜ ಒಡೆಯರ ಕಾಲದಲ್ಲಿದ್ದ ಓರಿಎಂಟಲ್ ಲೈಬ್ರರಿ ಹೊಸ ಕಾನೂನು ಜಾರಿಗೆ ಬಂದ ಮೇಲೆ Oriental Research Institute ಎಂದು ಪರಿವರ್ತನೆಗೊಂಡು ನಂತರ ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿತು. ಆಗ

33000 ಹಸ್ತಪ್ರತಿಗಳನ್ನು ಅದು ಹೊಂದಿರುವ ಸಂಸ್ಥೆ, ಹೀಗೆ ಮೈಸೂರಿನಲ್ಲಿ ಕನ್ನಡ ಸಂಶೋಧನೆಗೆ ಓರಿಎಂಟಲ್ ಅಧ್ಯಯನ ಪ್ರೇರಣೆ ನೀಡಿತು.

ಕನ್ನಡ ಸಂಶೋಧನೆಯ ಆರಂಭಘಟ್ಟದ ಹೆಚ್ಚಿನ ಸಂಶೋಧನ ಚಟುವಟಿಕೆಗಳು ಮೈಸೂರು ಭಾಗದ ಕರ್ನಲ್ ಮೆಕೆಂಜಿ, ಬಿ.ಎಲ್.ರೈಸ್, ರೆವೆರೆಂಡ ಕಿಟ್ಟೆಲ್, ವೆಗ್ಡೆ, ಆರ್. ನರಸಿಂಹಾಚಾರ್, ಟಿ.ಎಸ್. ವೆಂಕಣ್ಣಯ್ಯ, ಕೆ.ವೆಂಕಟರಾಮಪ್ಪ, ಎಂ.ವಿ. ಸೀತಾರಾಮಯ್ಯ, ಡಿ.ಎಲ್. ನರಸಿಂಹಾಚಾರ್, ಎ.ಆರ್. ಕೃಷ್ಣಶಾಸ್ತಿ, ತೀ.ನಂ.ಶ್ರೀ. ಮುಂತಾದ ವಿದ್ವಾಂಸರಿಂದ ನಡೆದುದು ಗಮನಾರ್ಹವಾಗಿದೆ. ಇಲ್ಲಿ ಒಂದು ಸ್ವಾರಸ್ಯಕರ ಅಂಶವೆಂದರೆ ಪ್ರಾಚೀನ ಮತ್ತು ಮಧ್ಯಕಾಲೀನ ಕನ್ನಡ ಸಾಹಿತ್ಯವೆಲ್ಲ ಸೃಷ್ಟಿ ಆದದ್ದು ತುಂಗಭದ್ರೆಯ ಉತ್ತರಭಾಗದಲ್ಲಿ ಅಂದರೆ ಉತ್ತರಕರ್ನಾಟಕದಲ್ಲಿ. ಅವುಗಳ ಬಗೆಗೆ ಸಂಶೋಧನೆ ನಡೆದದ್ದು ಮೈಸೂರುಭಾಗದಲ್ಲಿ, ಸದರ್ನ ಮರಾಠಾ ಕರ್ನಾಟಕ, ನಿಜಾಮ ಕರ್ನಾಟಕ ಎಂದು ಹೆಸರಿನಲ್ಲಿಯೇ ಉತ್ತರಕರ್ನಾಟಕವನ್ನು ಮೂಲಕರ್ನಾಟಕದಿಂದ ಬೇರ್ಪಡಿಸಿದ ಕ್ಷಣದಿಂದಲೇ ಉಳಿದ ಕ್ಷೇತ್ರಗಳಂತೆ ಸಂಶೋಧನೆಯ ಕ್ಷೇತ್ರಕ್ಕೂ ಅನ್ಯಾಯದ ಅಂಟು ತಗಲಿಕೊಂಡುಬಿಟ್ಟಿತು. ಮೈಸೂರಿನಂತೆ ಅನುಕೂಲತೆಗಳಿಲ್ಲದಿದ್ದರೂ ಉತ್ತರಕರ್ನಾಟಕದಲ್ಲಿ ಕೆ.ಬಿ.ಪಾಠಕ, ಕೆ.ಜಿ.ಕುಂದಣಗಾರ, ಕಪಟರಾಳ ಕೃಷ್ಣರಾಯ, ಶಂ.ಬಾ.ಜೋಶಿ, ನಾ.ಶ್ರೀ. ರಾಜಪುರೋಹಿತ, ರಂ.ಶ್ರೀ. ಮುಗುಳಿ, ಫ.ಗು.ಹಳಕಟ್ಟಿ, ಶಿ.ಶಿ.ಬಸವನಾಳ, ಉತ್ತಂಗಿಚೆನ್ನಪ್ಪ, ಶಿ.ಚಿ.ನಂದಿಮಠ, ಮುಂತಾದವರು ತಮ್ಮ ಸ್ವಂತ ಪರಿಶ್ರಮ ಮತ್ತು ವಿದ್ವತ್ತಿನಿಂದಾಗಿ ಕನ್ನಡ ಸಂಶೋಧನ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿದರು.

ಹಾಗೆಯೇ ದಕ್ಷಿಣಕನ್ನಡ ಪ್ರದೇಶದಲ್ಲೂ ಸಂಶೋಧನೆಗೆ ಹೆಚ್ಚಿನ ಅನುಕೂಲತೆಗಳು ಇರಲಿಲ್ಲ. ಅಲ್ಲಿ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಎ.ಶಾಂತಿರಾಜ ಶಾಸ್ತ್ರಿ, ಸೇಡಿಯಾಪು ಕೃಷ್ಣ ಭಟ್, ಮರಿಯಪ್ಪ ಭಟ್ ಮುಂತಾದ ವಿದ್ವಾಂಸರು ಗಣನೀಯ ಕಾಣಿಕೆಯನ್ನು ಸಲ್ಲಿಸಿದ್ದಾರೆ.

ಆರಂಭಕಾಲದಲ್ಲಿ ಸಂಶೋಧನೆಯ ಶಿಸ್ತು ಇರಲಿಲ್ಲ. ಕುತೂಹಲಕ್ಕಾಗಿ ಮಾಡಿದ ಸಂಶೋಧನೆಗಳು ಹೆಚ್ಚು ಅಲ್ಲದೆ ಆಗ ಸಂಶೋಧನೆ ಎಂದರೆ ಕನ್ನಡ ಸಂಶೋಧನೆ ಆಗಿತ್ತೇ ಹೊರತು ಕನ್ನಡ ಸಾಹಿತ್ಯ ಸಂಶೋಧನೆ ಎಂದು ನಿರ್ದಿಷ್ಟತೆ ಇರಲಿಲ್ಲ. ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ಶಾಸನಶಾಸ್ತ್ರ – ಹೀಗೆ ಸಾಹಿತ್ಯವನ್ನು ಹೊರತುಪಡಿಸಿದ ಆದರೆ ಮುಂದೆ ಸಾಹಿತ್ಯಕ್ಕೆ ಪೂರಕವಾಗಬಹುದಾದ ಸಾಮಗ್ರಿಯನ್ನು ಸಂಶೋಧಿಸಿದ ಚಟುವಟಿಕೆಗಳು ಹೆಚ್ಚು ಕಂಡುಬರುತ್ತವೆ.

ಆರಂಭ ಕಾಲದಿಂದ ಈ ವರೆಗೆ ನಡೆದ ಸಂಶೋಧನೆ ಚಟುವಟಿಕೆಗಳನ್ನು ಆಧರಿಸಿ ಇಬ್ಬರು ವಿದ್ವಾಂಸರು ನಾಲ್ಕು ನಾಲ್ಕು ಘಟ್ಟಗಳಲ್ಲಿ ಕನ್ನಡ ಸಾಹಿತ್ಯ ಸಂಶೋಧನೆಯ ಚರಿತ್ರೆಯನ್ನು ವಿಂಗಡಿಸಿದ್ದಾರೆ. ಡಾ.ಎನ್.ಎಸ್. ತಾರಾನಾಥ ಅವರು

1) ಸಾಮಗ್ರಿ ಸಂಗ್ರಹ ಕಾಲ (ಕ್ರಿ.ಶ. 19ನೇ ಶತಮಾನದಅವಧಿ)
2) ಆಕರನಿರ್ಮಾಣ ಕಾಲ (ಕ್ರಿ.ಶ. 1900 ರಿಂದ 1926)
3) ಸಾಮಗ್ರಿ ವಿಶ್ಲೇಷಣಾ ಕಾಲ (ಕ್ರಿ.ಶ. 1927ರಿಂದ 1959)
4) ಸಂಸ್ಕೃತಿ ಸಂಶೋಧನ ಕಾಲ (ಕ್ರಿ.ಶ. 1960 ರಿಂದ ಮುಂದೆ)

ಈ ವಿಂಗಡಣೆ ಮೇಲ್ನೋಟಕ್ಕೆ ಸರಿ ಎನಿಸಿದರೂ ಕಾಲಘಟ್ಟಗಳನ್ನು ನಿಖರವಾಗಿ

ಗುರುತಿಸಲು ಇದರಿಂದ ಕಷ್ಟವಾಗುತ್ತದೆ. ಉದಾಹರಣೆಗೆ ಸಾಮಗ್ರಿ ಸಂಗ್ರಹ ಎನ್ನುವುದು ಎಲ್ಲಾ ಕಾಲ ಘಟ್ಟಗಳಲ್ಲೂ ನಡೆಯಬೇಕಾದದ್ದೇ. ನಡೆಯುತ್ತಲೇ ಇರುತ್ತದೆ. ಅದೇರೀತಿ ಸಾಮಗ್ರಿ ನಿರ್ಮಾಣವಾಗಲಿ, ವಿಶ್ಲೇಷಣೆಯಾಗಲೀ ಎಲ್ಲ ಕಾಲಕ್ಕೂ ನಡೆಯುವಂಥವೇ. ಸಾಹಿತ್ಯವೂ ಸಂಸ್ಕೃತಿಯ ಅಂಗವೇ ಆಗಿರುವುದರಿಂದ ಸಂಸ್ಕೃತಿ ಸಂಶೋಧನೆಯನ್ನು ಪ್ರತ್ಯೇಕಿಸುವುದೂ ಕಷ್ಟವೇ. ಇನ್ನೊಬ್ಬ ವಿದ್ವಾಂಸ ಡಾ.ಕೆ.ಅನಂತರಾಮು ಅವರು

1. ಪ್ರಥಮ ಹಂತ (ಕ್ರಿ.ಶ.1840 ರಿಂದ 1900)
2. ಎರಡನೇ ಹಂತ (ಕ್ರಿ.ಶ.1901 ರಿಂದ 1950)
3. ಮೂರನೆಯ ಹಂತ (ಕ್ರಿ.ಶ.1951 ರಿಂದ 1974)
4. ನಾಲ್ಕನೆಯ ಹಂತ (ಕ್ರಿ.ಶ.1975 ರಿಂದ ಮುಂದಕ್ಕೆ) ಎಂದು ವಿಂಗಡಿಸಿದ್ದಾರೆ.

ಇಲ್ಲಿ ಮೊದಲ ಎರಡು ಹಂತಗಳಲ್ಲಿ ಬೆಳೆದುಬಂದ ಸಂಶೋಧನ ಚಟುವಟಿಕೆಗಳಲ್ಲಿ ಹೆಚ್ಚಿನ ವ್ಯತ್ಯಾಸವಿಲ್ಲ. ಅಂಗ್ಲ ಸಂಶೋಧಕರನ್ನು ಪ್ರತ್ಯೇಕಿಸಿ ಹೇಳುವುದಕ್ಕಾಗಿ ಎರಡು ಹಂತಗಳನ್ನು ಮಾಡಲಾಗಿದೆ ಎನಿಸುತ್ತದೆ.

ಇವೆರಡನ್ನೂ ಪರಿಶೀಲಿಸಿ ಕ್ರಿ.ಶ. 1850 ರಿಂದ ಕ್ರಿ.ಶ. 2000 ಅವಧಿಯಲ್ಲಿ ಒಟ್ಟು ನಡೆದುಬಂದ ಕನ್ನಡ ಸಾಹಿತ್ಯ ಸಂಶೋಧನೆಯ ಚಟುವಟಿಕೆಗಳನ್ನು

1. ಆರಂಭ ಕಾಲ(ಕ್ರಿ.ಶ.1850 ರಿಂದ 1950ಗಳ ಒಂದು ಶತಮಾನದ ಕಾಲಾವಧಿ)
2. ಮಧ್ಯಕಾಲ (ಕ್ರಿ.ಶ. 1951 ರಿಂದ 1975ರ ವರೆಗಿನ 25 ವರ್ಷಗಳ ಕಾಲಾವಧಿ)
3. ಆಧುನಿಕ ಕಾಲ (ಕ್ರಿ.ಶ.1976 ರಿಂದ ಕ್ರಿ.ಶ.2000ರ ವರೆಗಿನ 25 ವರ್ಷಗಳ ಕಾಲಾವಧಿ) ಎಂದು ಮೂರು ಕಾಲಾವಧಿಗಳಲ್ಲಿ ವಿಂಗಡಿಸಿಕೊಳ್ಳಬಹುದು. ಯಾವುದೇ ವರ್ಗೀಕರಣ ಅಧ್ಯಯನದ ಅನುಕೂಲತೆಗೆ ಮಾತ್ರ ಇರುತ್ತದೆ.

1976ರಿಂದ ಆಧುನಿಕ ಕಾಲ ಆರಂಭವಾಗುತ್ತದೆ. ದ್ವಿತೀಯ ಕಾಲಘಟ್ಟದ ಅನೇಕ ಸಂಶೋಧಕರು ಈ ಕಾಲದಲ್ಲೂ ಸಂಶೋಧನೆಯನ್ನು ಮುಂದುವರಿಸಿದರು. ಆದರೆ ಆಗ ಅವರಿಗೂ ಮುಂಚಿನ ಹಿರಿಯ ಸಂಶೋಧಕರ ಕಾಣಿಕೆ ಅವರ ಮುಂದಿದ್ದವು. ಹಿಂದೆ ಮಾಡಿದ ಸಂಶೋಧನೆಯ ಮುಂದಿನ ಹಂತವನ್ನು ಬೆಳೆಸುವ ಜವಾಬ್ದಾರಿ ಇವರ ಮೇಲಿತ್ತು. ಹಾಗೆ ಹಿರಿಯ ಸಂಶೋಧಕರ ಸಂಶೋಧನೆಯನ್ನು ಮುಂದುವರಿಸುತ್ತಲೇ ಹೊಸ ಆಯಾಮಗಳನ್ನು ನೀಡಿದವರಲ್ಲಿ ಪ್ರಮುಖರೆಂದರೆ–ಎಲ್.ಬಸವರಾಜು, ಆರ್.ಸಿ.ಹಿರೇಮಠ, ಎನ್.ಬಸವಾರಾಧ್ಯ, ಎಚ್. ತಿಪ್ಪೇರುದ್ರಸ್ವಾಮಿ, ಎಂ.ಚಿದಾನಂದ ಮೂರ್ತಿ, ಸಂ.ಶಿ.ಭೂಸನೂರಮಠ, ಟಿ.ವಿ. ವೆಂಕಟಾಚಲಶಾಸ್ತ್ರಿ, ಮುಂತಾದವರು.

ಎರಡನೆಯ ಕಾಲಘಟ್ಟದ ಕೊಂಡಿಯಾಗಿ ಶಂ.ಬಾ.ಜೋಶಿ ಅವರು ನಿಲ್ಲುವಂತೆ ಎಂ. ಚಿದಾನಂದಮೂರ್ತಿ ಅವರು ಎರಡನೆ ಹಾಗೂ ಮೂರನೇ ಘಟ್ಟಗಳ ಕೊಂಡಿಯಾಗಿ ನಿಲ್ಲುತ್ತಾರೆ. ಮತ್ತು ಆಧುನಿಕ ಕಾಲಘಟ್ಟದಲ್ಲೂ ಅವರು ಸಂಶೋಧಕರಾಗಿ ಮುಂದುವರಿದರು. ಅಂತೆಯೇ ಅವರು ಮೂರೂ ಘಟ್ಟಗಳ ಪ್ರಮುಖ ಸಂಶೋಧಕರಾಗಿ ಹೊಮ್ಮಿದ್ದಾರೆ. ಎಲ್. ಬಸವರಾಜು, ಹಂಪನಾ, ಕಲಬುರ್ಗಿ, ಬಸವಾರಾಧ್ಯ, ಸಣ್ಣಯ್ಯ, ಜಾಗೀರದಾರ, ಮುಗುಳಿ, ತಾರಾನಾಥ, ಶಿವಣ್ಣ ಮುಂತಾದವರು ಈ ಕಾಲದ ಗಮನಾರ್ಹ ಸಂಶೋಧಕರು. ಇನ್ನೂ ಹಲವಾರು ಸಂಶೋಧಕರ ಹೆಸರುಗಳನ್ನು ಹೇಳುತ್ತ ಹೋದರೆ ಅದೊಂದು ಬಹುದೊಡ್ಡ ಪಟ್ಟಿಯಾಗುತ್ತದೆ.

ಆಗಬೇಕಾದುದು

ಕವಿರಾಜಮಾರ್ಗದಲ್ಲಿ ಹೇಳಿದ ಪೂರ್ವಕವಿಗಳ, ಕವಿರಾಜಮಾರ್ಗ ಪೂರ್ವಕಾಲದ ಕನ್ನಡ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳನ್ನು ಪ್ರಾಚೀನ ಸೋದರ ದ್ರಾವಿಡ ಭಾಷೆಗಳ ಎಲ್ಲಾ ಬಗೆಯ ಆಧಾರಗಳನ್ನು ಆಕರಗಳನ್ನು ಹೆಕ್ಕಿ ತೆಗೆದು ಕನ್ನಡ ಸಂಶೋಧನೆಗೆ ಅಳವಡಿಸಬೇಕಾಗಿದೆ. ಇದಕ್ಕೆ ಬಹುಭಾಷಾ ಪರಿಣತಿ, ಅಂತರ್‌ಶಿಸ್ತೀಯ ಅನುಸಂಧಾನದ ಅವಶ್ಯಕತೆ ಇದೆ.

ಸಂಶೋಧನೆಯ ಧೋರಣೆಯ ಬದಲಾವಣೆ

ಜಾಗತಿಕ ಮಟ್ಟದಲ್ಲಿ ಉನ್ನತ ಸಂಶೋಧನೆಗಳ ಜಾಡು ಗುರುತಿಸಿ ಕನ್ನಡ ಸಂಶೋಧನೆಗೆ ಆವಶ್ಯಕತೆಗೆ ಅನುಗುಣವಾಗಿ ಅನ್ವಯಿಸಿಕೊಳ್ಳುವುದು. ಉದಾಹರಣೆಗೆ ಇಂದು ಭಾರತೀಯ ಭಾಷೆ, ಜನಾಂಗ, ಸನಾತನತೆ, ಸಂಸ್ಕೃತಿ ವೈಭವ, ಪರಂಪರೆಯ ಬಗೆಗಿನ ತಾತ್ಸಾರ ಹೆಚ್ಚಿ ಸಮುದಾಯಗಳಲ್ಲಿ ವ್ಯಕ್ತಿಗಳಲ್ಲಿ ವೈಷಮ್ಯ, ದ್ವೇಷ, ಒಡಕುಭಾವ ಅಸೂಯೆಗಳು ಹುಟ್ಟಿಕೊಳ್ಳುತ್ತಿವೆ. ಆದರೆ ವಿದೇಶಗಳಲ್ಲಿ ಇತಿಹಾಸ, ಪರಂಪರೆ, ಧರ್ಮ, ಸಂಸ್ಕೃತಿಗಳ ಬಗೆಗೆ ಎಷ್ಟೊಂದು ಆಸಕ್ತಿ ಇದೆ. ಕ್ಯಾಲಿಫೋರ್ನಿಯಾದಲ್ಲಿ ಯುನಿವರ್ಸಿಟಿ ಆಫ್ ಸದರ್ನ ಕ್ಯಾಲಿಫೋರ್ನಿಯಾ ಎಂಬ ವಿಶ್ವವಿದ್ಯಾಲಯವಿದೆ. ಅಲ್ಲಿ Ancient Religion and Classical Languages ಎಂಬ ಸ್ನಾತಕೋತ್ತರ ವಿಭಾಗವಿದ್ದು ಅದರಲ್ಲಿ ಧರ್ಮ, ಸಂಸ್ಕೃತಿಗಳನ್ನು ಇತಿಹಾಸ, ಪ್ರಾಚ್ಯವಿಜ್ಞಾನ, ಮಾನವಶಾಸ್ತ್ರ, ಐತಿಹ್ಯಶಾಸ್ತ್ರ, ಭಾಷಾವಿಜ್ಞಾನ, ಸಾಹಿತ್ಯಗಳ ಅಂತರಶಿಸ್ತೀಯ ಸಂಶೋಧನ, ಅಧ್ಯಯನಕ್ಕೆ ಒಳಪಡಿಸಿ ಕಲಿಸಲಾಗುತ್ತಿದೆ. ಇಂಥ ಅಂತರ್‌ಶಿಸ್ತೀಯ ಸಂಶೋಧನೆಗೆ ಕನ್ನಡವನ್ನು ತೆರೆಯಬೇಕಾಗಿದೆ.

ತಾಂತ್ರಿಕತೆಯ ಬಳಕೆ

ಆಧುನಿಕಕಾಲದಲ್ಲಿ ಗಣಕಯಂತ್ರವು ಸಂಶೋಧನೆಗೆ ವರದಾನವಾಗಿ ಬಂದಿದೆ. ಇದು ಸಮಯ, ಶ್ರಮ, ಮತ್ತು ಹಣವನ್ನು ಉಳಿತಾಯ ಮಾಡುವುದಷ್ಟೇ ಅಲ್ಲ, ಜಗತ್ತಿನ ಯಾವುದೇ ಮೂಲೆಯ ಎಲ್ಲಾ ಬಗೆಯ ಮಾಹಿತಿಯನ್ನು ನೀಡಬಲ್ಲುದಾಗಿದೆ. ಇದರ ಪ್ರಯೋಜನವನ್ನು ಪಡೆಯುವುದು ಇಂದಿನ ಕಾಲದ ಅಗತ್ಯವಾಗಿದೆ. ಉದಾಹರಣೆಗೆ ಪ್ರಾಚೀನ ಹಸ್ತಪ್ರತಿಗಳನ್ನು ಯಥಾವತ್ತಾಗಿ ಕಾಯ್ದಿಡುವುದಲ್ಲದೆ, ಅವುಗಳ ಲಿಪಿಯನ್ನು ಹೊಸಗನ್ನಡ ಲಿಪಿಗೆ ರೂಪಾಂತರಿಸುವ ಮತ್ತು ವಿಶ್ಲೇಷಣೆಗೆ ಅನುಕೂಲವಾಗುವಂಥ ಸಂಶೋಧನೆ ಆಗಬೇಕಾಗಿದೆ.

ತಪ್ಪು ಸಂಶೋಧನೆಗಳನ್ನು ಸಾಧಾರ ಸರಿಪಡಿಸುವುದು

ಈ ಹಿಂದೆ ಮಾಡಿದ ಅನೇಕ ಸಂಶೋಧನೆಗಳಲ್ಲಿನ ತಪ್ಪುಗಳನ್ನು ಸಾಧಾರಪೂರ್ವಕ ಎತ್ತಿತೋರಿ ಸರಿಪಡಿಸುವ ಮರುಸಂಶೋಧನೆಗಳು ನಡೆಯಬೇಕಿವೆ. ಸಂಶೋಧಕರ ಪೂರ್ವಾಗ್ರಹಗಳಿಂದಾದ ತಪ್ಪುಗಳನ್ನು ಗುರುತಿಸಿ, ನಿಜವಾದ ಆಕರಗಳನ್ನು ಮುಂದಿಟ್ಟು ತಥ್ಯಗಳನ್ನು ಪ್ರಕಟಿಸಬೇಕು.

ಪದವಿಗಾಗಿ ಸಂಶೋಧನೆಯ ಗುಣಮಟ್ಟವನ್ನು ಕಾಯ್ದುಕೊಳ್ಳುವುದು

ಪದವಿಗಾಗಿ ಸಂಶೋಧನೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲು ಕಠಿನ ಕ್ರಮಗಳನ್ನು ಜಾರಿಗೆ ತರಬೇಕು. ಇದೀಗ ವಿಶ್ವವಿದ್ಯಾಲಯಗಳಲ್ಲಿ ಅಷ್ಟೇ ಅಲ್ಲದ ಕಾಲೇಜುಗಳಲ್ಲೂ ಸಂಶೋಧನೆ ನಡೆಸಲು ಅವಕಾಶ ಕಲ್ಪಿಸಲಾಗಿದ್ದು ಸಂಶೋಧಕರ ಸಂಖ್ಯೆ ಬೆಳೆದಿದೆ. ಆದರೆ ಸೂಕ್ತ ಸೌಲಭ್ಯ, ಮಾರ್ಗದರ್ಶನ, ಇಲ್ಲದೆ ಸಂಶೋಧಕರು ತೊಳಲಾಡುತ್ತಿದ್ದಾರೆ. ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸಲು ವಿಶ್ವವಿದ್ಯಾನಿಲಯಗಳು ಕ್ರಮಗಳನ್ನು ಕೈಗೊಳ್ಳಬೇಕು.

ಆಕರಗಳ ಕ್ರೋಡೀಕೃತ ಅಧ್ಯಯನ

ವಿವಿಧ ಪ್ರದೇಶಗಳ, ವಿವಿಧ ಭಾಷೆಗಳಲ್ಲಿನ ಎಲ್ಲಾ ಕಾಲದ ಆಕರಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಹೊಸ ಶೋಧಗಳ ಫಲಿತಗಳನ್ನು ಬಿಚ್ಚಿಡುವ ಕಾರ್ಯವಾಗಬೇಕಿದೆ. ಆಕರಗಳ ಕ್ರೋಡೀಕರಣ, ಪರಿಶೀಲನೆ, ಅಧ್ಯಯನ ಇತ್ಯಾದಿ ಪ್ರಮಾಣಿಕವಾಗಿ ನಡೆಯಬೇಕು. ಬರೀ ಊಹೆಗಳ ಅಥವಾ ಸಂಭಾವ್ಯತೆಗಳ ಕಂತೆಯಿಂದ ಸಂಶೋಧನೆ ದಾರಿ ತಪ್ಪಬಹುದು.

ಪರಾಮರ್ಶನ ಗ್ರಂಥಗಳು

1. ನಿತ್ಯಾನಂದ ಬಿ. ಶೆಟ್ಟಿ, ಸಾಹಿತ್ಯ ಸಂಶೋಧನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
2. ಸಂಗಮೇಶ ಸವದತ್ತಿಮಠ, ಕನ್ನಡಸಾಹಿತ್ಯ ಸಂಶೋಧನೆ: ಮಾರ್ಗ ಮತ್ತು ಇತಿಹಾಸ, ರೂಪರಶ್ಮಿ, ಪ್ರಕಾಶನ, ಧಾರವಾಡ
3. ವೆಂಕೋಬ ರಾವ್ ಎಂ. ಹೊಸಕೋಟಿ, ಕನ್ನಡ ಸಂಶೋಧನೆಯ ಒಳನೋಟಗಳು, ಶ್ರೀ ಪವನಸುತ, ಎಂಟರ್ ಪ್ರೈಸೆಸ್, ಬೆಂಗಳೂರು.
4. ರೇಣುಕಾ ಕೋಡಗುಂಟಿ (ಸಂ), ಕನ್ನಡ ಭಾಷಾವಿಜ್ಞಾನ ಸಂಶೋಧನೆ:ಇಂದು, ಬಂಡಾರ ಪ್ರಕಾಶನ, ಮಸ್ಕಿ

❖❖❖

ನೆಲದೊಳು ಬೀಳುವ ತರುಎಲೆಗಳು
ಕರಿನೆಳಲನು ಮುಚ್ಚುತಿವೆ
ಕಾಂಡದಿ ಬೆನ್ನನು ತುರಿಸಿಹ ಹುಲ್ಲೆಯ
ತಲೆಯಲಿ ಅಲರಿನ ಮಕುಟವಿದೆ

ಬಸವಣ್ಣನವರ ಬಹುಮುಖೀ ವ್ಯಕ್ತಿತ್ವ

ಡಾ. ಆನಂದಕುಮಾರ ಎಂ. ಜಕ್ಕಣ್ಣವರ
ಸಹಾಯಕ ಪ್ರಾಧ್ಯಾಪಕರು, ಶಿವಾನಂದ ಮಹಾವಿದ್ಯಾಲಯ, ಕಾಗವಾಡ

ವಚನಸಾಹಿತ್ಯವು ಕರ್ನಾಟಕದ ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಹಿತ್ಯಕ ನೆಲೆಗಳಲ್ಲಿ ತನ್ನದೇ ಆದ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಇದಕ್ಕೆ ಸ್ಫೂರ್ತಿ ಮತ್ತು ಪ್ರೇರಣೆಯನ್ನೊದಗಿಸಿ ವಚನಸಾಹಿತ್ಯಕ್ಕೆ ವಿಶ್ವಮಾನ್ಯತೆಯನ್ನು ತಂದುಕೊಟ್ಟವರು ಅನೇಕ ಶರಣ–ಶರಣೆಯರು. ಇವರ ಬೆನ್ನ ಹಿಂದಿನ ಶಕ್ತಿಯಾಗಿ ಈ ನಾಡಿನ ಅಭ್ಯುದಯಕ್ಕಾಗಿ ಶ್ರಮವಹಿಸಿ ಇದರ ನೇತೃತ್ವವನ್ನು ವಹಿಸಿದವರು ವಿಶ್ವಗುರು ಬಸವಣ್ಣನವರು.

ಕನ್ನಡದ ನೆಲದಲ್ಲಿ ನಡೆದ ಶರಣರ ಆಂದೋಲನ ಬರೀ ಧಾರ್ಮಿಕ ಮತ್ತು ಆಧ್ಯಾತ್ಮಿಕವಾದುದಾಗಿರಲಿಲ್ಲ. ಆಧ್ಯಾತ್ಮಿಕತೆಗೆ ಪೂರಕವಾದ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಸಾಧಿಸುವುದರತ್ತ ಕೂಡ ಶರಣರ ದೃಷ್ಟಿಕೋನವಿತ್ತು. ಸಮಾಜದ ವಿವಿಧ ಸ್ತರಗಳಿಂದ ಬಂದ ಅನೇಕ ಶರಣರು ಬಸವಣ್ಣನವರಲ್ಲಿ ಇಟ್ಟ ಪೂರ್ಣ ವಿಶ್ವಾಸದ ಪರಿಣಾಮ ವಚನಚಳುವಳಿಯು ಸಮಷ್ಟಿಚಿಂತನೆಯ ಆಂದೋಲನವಾಯಿತು.

ಬಸವಣ್ಣನವರು ಸಾಮಾಜಿಕ. ಧಾರ್ಮಿಕ ಸಮಾನತೆ, ಕಾಯಕ, ದಾಸೋಹಗಳು ಸೇರಿದಂತೆ ಹಲವು ವೈಚಾರಿಕ ಚಿಂತನೆಗಳನ್ನು ಅಳವಡಿಸಿಕೊಂಡು ಬಾಳಿದವರು. ಸಮಾಜದ ಉನ್ನತಿಗಾಗಿ, ಅದರ ಅಭಿವೃದ್ಧಿಗಾಗಿ ಕಾಯಕವೇ ಕೈಲಾಸ ಎಂಬ ಸೂತ್ರವನ್ನು ಜಾರಿಗೆ ತಂದು ಈ ನಾಡಿನ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದರು. ನಿರ್ಮಿತ ಮಾರ್ಗವನ್ನು ತೋರುವವರು ಮಾರ್ಗದರ್ಶಕರಾಗುತ್ತಾರೆ, ಆದರೆ ದಾರಿಯೇ ಇಲ್ಲದ ಸ್ಥಳದಲ್ಲಿ ಮಾರ್ಗ ನಿರ್ಮಿಸಿದವರು ಮಾರ್ಗ ನಿರ್ಮಾಪಕರಾಗುತ್ತಾರೆ. ಜಗತ್ತು ಕಂಡ ಅನೇಕರು ಆ ತತ್ವಗಳಂತೆ ಬದುಕಿ ಈ ಸೂತ್ರಗಳಂತೆ ಬಾಳಿ ಎನ್ನುತ್ತ ಮಾರ್ಗದರ್ಶಕರಾದರೆ, ವಿಶ್ವಗುರು ಬಸವಣ್ಣನವರು ಅನುಭವಮಂಟಪ–ಮಹಾಮನೆಯ ಪರಿಕಲ್ಪನೆ, ಕಾಯಕ–ದಾಸೋಹ, ಸಮಾನತೆ–ಸ್ವಾತಂತ್ರ್ಯತೆ, ಸಾಮರಸ್ಯ, ಅರಿವು–ಆಚಾರ–ಅನುಭಾವ, ಸಮಸಮಾಜದ ಕನಸು ಇಂತಹ ಪರಮ ಪರಿಕಲ್ಪನೆಗಳನ್ನು ಪರಿಚಯಿಸುವುದರೊಂದಿಗೆ ಹೊಸದೊಂದು ಮಹೋನ್ನತ ಮಾರ್ಗವನ್ನು ನಿರ್ಮಿಸಿ ಅವರೊಬ್ಬ ಶ್ರೇಷ್ಠ ಮಾರ್ಗ ನಿರ್ಮಾಪಕರಾಗಿ ಶ್ರೇಷ್ಠ ಸಾಂಸ್ಕೃತಿಕ ನಾಯಕರೆನಿಸಿದ್ದಾರೆ.

ಅನುಭವಮಂಟಪ–ಮಹಾಮನೆಯ ಪರಿಕಲ್ಪನೆ

ಬಸವಣ್ಣನವರು ಸಂಘಟನೆಯ ನೆಲೆಯಾಗಿ ಮಹಾಮನೆಯನ್ನು ಕಟ್ಟಿದರು. ಇದನ್ನೇ ಮೋಳಿಗೆ ಮಾರಯ್ಯನವರು ಬಸವಣ್ಣ 'ಜಂಗಮ ಭಕ್ತಿಯ ಮಾಡಿಹೆನೆಂದು ಮಹಾಮನೆಯ ಕಟ್ಟಿದ' ಎಂದು ಹೇಳುತ್ತಾರೆ. ಅಂದರೆ ಬಸವಣ್ಣನವರು ಮಹಾಮನೆಯನ್ನು ಅಸ್ತಿತ್ವದಲ್ಲಿ ತರುವ ಉದ್ದೇಶವೇ ಜಂಗಮ ಭಕ್ತಿಯನ್ನು ಅಂದರೆ ಸಮಾಜ ಸೇವೆಯನ್ನು ಮಾಡುವ ಮಹಾದಾಸೆಯಿಂದ. ಇದರೊಟ್ಟಿಗೆ ಅನುಭವ

ಮಂಟಪದ ಸ್ಥಾಪನೆ. ಒಂದು ಕಡೆ ಅನುಭವಮಂಟಪ, ಮತ್ತೊಂದು ಕಡೆ ಮಹಾಮನೆ. ಎರಡರಲ್ಲಿಯೂ ಮಹೋನ್ನತವಾದಂತಹ ಘಟನೆಗಳು ಜರುಗುತ್ತವೆ. ಒಂದು ಕಡೆ ಉದಾತ್ತ ಚಿಂತನೆಗಳು ಹರಿದು ಬಂದರೆ ಮತ್ತೊಂದು ಕಡೆ ವರ್ಗ ವರ್ಣಭೇದವಿಲ್ಲದೆ ಮಹಾಪ್ರಸಾದ. ಈ ಎರಡೂ ಕೇಂದ್ರಗಳಲ್ಲಿ ಏಕಕಾಲಕ್ಕೆ ಎಲ್ಲರನ್ನೂ ಒಳಗೊಂಡು ಅನೇಕ ವಿಚಾರಗಳನ್ನು ಅನುಸಂಧಾನಿಸಬಹುದಾಗಿತ್ತು. ಬಸವಣ್ಣನವರು ಅನುಭವ ಮಂಟಪದ ಮೂಲಕ ಧಾರ್ಮಿಕ ಪ್ರಜಾಪ್ರಭುತ್ವದ ಸಂಸತ್ತನ್ನು ಸ್ಥಾಪಿಸಿದ್ದು ಹನ್ನೆರಡನೆಯ ಶತಮಾನದ ಇತಿಹಾಸದಲ್ಲಿ ಅಚ್ಚರಿಯ ಬೆಳವಣಿಗೆ. ಇಲ್ಲಿ ಎಲ್ಲರೂ ಸಮಾನರು, ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಸರ್ವರಿಂದಲೂ ಅಭಿಪ್ರಾಯಗಳನ್ನು, ಚಿಂತನಗಳನ್ನು ನಿರೀಕ್ಷಿಸಿ ನಂತರ ಅವುಗಳನ್ನು ಕೂಲಂಕುಷವಾಗಿ ಪರೀಕ್ಷಿಸಲಾಗುತ್ತಿತ್ತು. ಇಂತಹ ಹೊಸ ಯೋಜನೆ–ಯೋಚನೆಗಳ ಮೂಲಕ ಬಸವಣ್ಣನವರು ಪ್ರಥಮ ಪಥವನ್ನು ನಿರ್ಮಿಸಿ ಇಡೀ ನಾಡಿನ ಸಾಂಸ್ಕೃತಿಕ ಮೆರಗನ್ನು ಹೆಚ್ಚಿಸಿದ್ದಾರೆ.

ಕಾಯಕ–ದಾಸೋಹ

ಕನ್ನಡದ ಸಂಸ್ಕೃತಿಯನ್ನು ರೂಪಿಸಿದ ಮುಖ್ಯವಾದ ತತ್ವಗಳು ಕಾಯಕ ಮತ್ತು ದಾಸೋಹ. ಇವೆರಡು ತತ್ವಗಳನ್ನು ಬಸವಣ್ಣನವರು ವಿಚಾರ ಪ್ರಪಂಚಕ್ಕೆ ಕೊಟ್ಟ ಕಾಣಿಕೆಗಳಾಗಿವೆ. ಸಾಮಾಜಿಕ ಮತ್ತು ವೈಯಕ್ತಿಕ ಜೀವನದ ಸ್ವಯಂಪೂರ್ಣತೆಯನ್ನು ಕಾಯಕ ತತ್ತ್ವ ಒಳಗೊಳ್ಳುತ್ತದೆ. ವ್ಯಕ್ತಿ ಈ ಲೋಕದಲ್ಲಿ ಚೆನ್ನಾಗಿ ಬಾಳಬೇಕು, ಬದುಕಬೇಕು, ಚೆನ್ನಾಗಿ ದುಡಿಯಬೇಕು, ಆದರೆ, ಆ ದುಡಿಮೆಯ ಫಲ ತನಗೆ ಮಾತ್ರವೆಂಬ ಸ್ವಾರ್ಥ ಕಡಿಮೆಯಾಗಬೇಕು. ಪರಿಶುದ್ಧ ಭಾವದೊಂದಿಗೆ ಕಾಯಕ ಪ್ರಜ್ಞೆ ಮೆರೆಯ ಬೇಕೆಂದವರು ಶರಣರು. ಕಾಯಕದಿಂದಾಗಿ ಬಂದ ಸಂಪತ್ತನ್ನು ಸಮಾಜಕ್ಕಾಗಿ ಸವೆಸಬೇಕೆಂದು ಸಾರಿದರು.

ಸಮಾನತೆ–ಸ್ವಾತಂತ್ರ್ಯ

ಹನ್ನೆರಡನೆಯ ಶತಮಾನದ ಸಾಮಾಜಿಕ ವ್ಯವಸ್ಥೆಯಲ್ಲಿ ಭದ್ರವಾಗಿ ಬೇರೂರಿದ್ದ ವರ್ಗ–ವರ್ಣ–ಜಾತಿ–ಮತ–ಲಿಂಗಭೇದಗಳೆಂಬ ಸಮಸ್ಯೆಗಳ ವಿರುದ್ಧ ಬಸವಣ್ಣನವರು ಎತ್ತಿದ ಪ್ರತಿಭಟನೆಯ ಧ್ವನಿ ಆಕಸ್ಮಿಕವಾದುದಾಗಿರಲಿಲ್ಲ, ಅನಿವಾರ್ಯವಾಗಿತ್ತು. ಅವರು ತರಬಯಸಿದ ಸಮಾನತೆ, ಮಾಡಬಯಸಿದ ಪರಿವರ್ತನೆ, ಅಷ್ಟೊಂದು ಸರಳವಾಗಿರದೆ ತುಂಬಾ ಸಂಕೀರ್ಣವಾದದ್ದಾಗಿತ್ತು. ಆದರೆ 12ನೇ ಶತಮಾನದಲ್ಲಿಯೇ ಬಸವಣ್ಣನವರು ಎಲ್ಲರೂ ಸಮಾನರು ಎನ್ನುತ್ತ 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ...ನೆಂದು' ಹೊತ್ತು ಮೆರೆಸುತ್ತಾರೆ. ಏಕೆಂದರೆ ಚೆನ್ನಯ್ಯನ ಭಕ್ತಿ ಮತ್ರು ಕಾಯಕ ದಾಸೋಹ ಇಷ್ಟೆ ಅಪ್ರತಿಮವಾಗಿತ್ತು ಆದ್ದರಿಂದ ಬಸವಣ್ಣನವರು ಮಾಡುವ ಕಾರ್ಯದಿಂದ ವ್ಯಕ್ತಿಗಳನ್ನು ದೊಡ್ಡವರು ಎಂದು ಕರೆದರೆ ವಿನಃ ಜಾತಿಯಿಂದಲ್ಲ.

ಸಾಮರಸ್ಯ

ಸಮಾಜ ಎನ್ನುವುದು ಒಂದು ಸಂಕೀರ್ಣ ವ್ಯವಸ್ಥೆ. ಸಮಾಜ ವ್ಯಕ್ತಿಯಿಂದ ನಿರ್ಮಿತವಾದದ್ದು ಮತ್ತು ವ್ಯಕ್ತಿಯ ವಿಕಾಸಕ್ಕೆ ಸಹಕಾರಿಯಾದದ್ದು. ಹೀಗಾಗಿ ಸಮಾಜ ಮತ್ತು ವ್ಯಕ್ತಿ ಇವೆರಡರ ಸಾಮರಸ್ಯದ ವಿವೇಚನೆಯೇ ವಚನಕಾರರು ನಿರೂಪಿಸುವ

ಸಾಮಾಜಿಕ ಪ್ರಜ್ಞೆಯ ಆಶಯವಾಗಿದೆ. ಸಮಷ್ಟಿ ಉದ್ಧಾರದ ಮಾರ್ಗವನ್ನು ತೋರಬಲ್ಲ ಪೂರ್ಣ ದೃಷ್ಟಿಯ ಆದರ್ಶ ಸಮಾಜದ ಕನಸನ್ನು ಕಂಡ ಶರಣರು ತಮ್ಮ ತಮ್ಮ ತನುವ ಸಂತೈಸಿಕೊಳ್ಳುವುದರ ಮೂಲಕ, ವ್ಯಕ್ತಿ ನಿರ್ಮಾಣದಿಂದ, ಸಮಾಜ ನಿರ್ಮಾಣ ಎಂಬ ಕಲ್ಪನೆಯನ್ನು ನೀಡಿದರು. ಈ ಸಂದರ್ಭದಲ್ಲಿ ನಡೆ ನುಡಿಯನ್ನು ಒಂದಾಗಿಸಿಕೊಂಡು, ಸಾಮರಸ್ಯವನ್ನು ಮೂಡಿಸಿದ ವ್ಯಕ್ತಿಯಾಗಿ ಅರಳಿದವರು ಬಸವಣ್ಣನವರು.

ಬಸವಣ್ಣನವರು ಪ್ರಕೃತಿಯ ಸಹಜ ಜೀವನ ವಿಧಾನದಲ್ಲಿ ಕಂಡುಕೊಂಡಿರುವ ಸತ್ಯವೂ ಅದೇ ಆಗಿದೆ. 'ಕಾಗೆಯೊಂದಗುಳ ಕಂಡಡೆ ಕರೆಯದೇ ತನ್ನ ಬಳಗವ? ಕೋಳಿಯೊಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವೆಲ್ಲವನು'? ಎನ್ನುವಲ್ಲಿಯೂ ಸಹಬಾಳ್ವೆ ಸಾಮರಸ್ಯದ ಆಶಯವನ್ನೇ ಎತ್ತಿಹಿಡಿಯಲಾಗಿದೆ.

ಅರಿವು–ಆಚಾರ–ಅನುಭಾವ

ಅರಿವು ಎಂಬುದು ಅಸಾಮಾನ್ಯವಾದ ಆತ್ಮಾನುಭೂತಿ. ಇದನ್ನು ಸಾಧಿಸಲು ಸಾಕಷ್ಟು ಶ್ರಮ ಹಾಕಬೇಕಾಗುತ್ತದೆ. ಅರಿವು ಅಂತರಂಗದ ಮನೋಭೂಮಿಕೆಗೆ ಸಂಬಂಧಿಸಿದ ಕ್ರಿಯೆ. ಅರಿವು ಪಡೆಯಲು ಬಸವಣ್ಣನವರು ಇಷ್ಟಲಿಂಗದ ಕುರುಹು ಇಟ್ಟುಕೊಂಡರು. ಕುರುಹಿಲ್ಲದೆ ಅರಿವು ಸಾಧ್ಯವಾಗದು. ಅಲ್ಲಮ ಪ್ರಭುದೇವರು 'ಅರಿವು ಅರಿವು ಎನ್ನುತ್ತೀರಿ ಅರಿವು ಸಾಮಾನ್ಯವೇ'? ಎಂದು ಪ್ರಶ್ನಿಸುತ್ತಾರೆ. 'ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂತ ಹೆಜ್ಜೆಯನರಿಯಬಾರದು ಮುಂದಣ ಹೆಜ್ಜೆ ಅರಿದಡಲ್ಲದೆ ಒಂದು ಪಾದ ನೆಲೆಗೊಳ್ಳದು' ಎಂದು ಅರಿವನ್ನು ಕುರಿತು ವಿವರಿಸುತ್ತಾರೆ. ಅರುವುಳ್ಳವನೆಂದಡೆ ಆತನ ಕುರುಹವನ್ನೂ ನೋಡಬೇಕು. ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲು ಕುಟ್ಟಿ ಕಿಡಿಯ ತೆಗೆದುಕೊಂಡಂತೆ, ಅದಕ್ಕಾಗಿ ಬಲ್ಲವರೊಡನೆ ಸಂಗವ ಮಾಡುವುದು ಲೇಸು ಎನ್ನುತ್ತಾರೆ ಬಸವಣ್ಣನವರು.

ಆಚಾರ ಎಂಬುದಕ್ಕೆ ನಡತೆ, ಸಂಪ್ರದಾಯ, ಪದ್ಧತಿ, ರೀತಿ, ಕ್ರಮ ಎಂದು ಅರ್ಥಗಳಿವೆ. ಸತ್ಕಾರ್ಯದಲ್ಲಿ ತೊಡುಗುವುದನ್ನು ಆಚಾರವೆಂದು ಹೇಳುತ್ತಾರೆ. ಅಂತೆಯೇ ಬಸವಣ್ಣನವರು 'ಆಚಾರವೇ ಸ್ವರ್ಗ ಅನಾಚಾರವೇ ನರಕ' ಎಂದು ಹೇಳಿದ್ದಾರೆ. ಈ ಆಚಾರ ಮೃದುವಚನ, ಸದುವಿನಯದಿಂದ ಸದಾಶಿವನ ಒಲುಮೆಗೆ ಪಾತ್ರವಾಗುವಂತಿರಬೇಕು. ಸರ್ವರಲ್ಲಿಯೂ ದಯಾಪರರಾಗಿರಬೇಕು. ಆಚಾರವನ್ನು ಪರರಲ್ಲಿಯೂ ಅಪೇಕ್ಷಿಸಬೇಕು ಮತ್ತು ತನ್ನಲ್ಲಿಯೂ ಅಳವಡಿಸಿಕೊಂಡಿರಬೇಕು. ಅಂತೆಯೇ ಮಾದರ ಚೆನ್ನಯ್ಯ 'ನಡೆನುಡಿ ಸಿದ್ಧಾಂತವಾದಲ್ಲಿ ಕುಲಹೊಲೆ ಸೂತಕವಿಲ್ಲ, ನುಡಿ ಮಾತ್ರ ಲೇಸಾಗಿದ್ದು ನಡೆ ಅಧಮವಾದಲ್ಲಿ ಅದು ಎಂದೂ ಬಿಡುಗಡೆಯಿಲ್ಲದ ಹೊಲೆ, ಆಚಾರವೇ ಕುಲ, ಅನಾಚಾರವೇ ಹೊಲೆ' ಎನ್ನುತ್ತಾರೆ. ಅರಿವಿನ ಸಂಪಾದನೆಗೆ ಆಚಾರವೇ ಸಾಧನವಾಗಿದ್ದು, ಆಚಾರ ಪಾಲನೆಗೆ ಸಮಾಜ– ಸಮಷ್ಟಿಯ ವೇದಿಕೆ ಅಗತ್ಯ. ಸಹಮಾನವರೊಂದಿಗೆ ಸತ್ಯ ಶುದ್ಧ ಭಾವದಿಂದ ವ್ಯವಹರಿಸುವ ನೈತಿಕತೆಯೇ ಆಚಾರ.

ಹನ್ನೆರಡನೆಯ ಶತಮಾನವು ಅನುಭಾವ ಪರಂಪರೆಗೆ ಹೊಸ ಆಲೋಚನಾ ಕ್ರಮವನ್ನು ನೀಡಿದ ಯುಗ, ದೇಹ–ಮನಸ್ಸು–ಭಾವಗಳಿದ್ದ ಶ್ರೇಷ್ಠ–ಕನಿಷ್ಠವೆಂಬ ತಾತ್ವಿಕ ಭೇದ ಪರಿಕಲ್ಪನೆಯನ್ನು ಮೀರಿ ದೇಹ–ಮನಸ್ಸು ಭಾವಗಳನ್ನು ಶುದ್ಧ ಮತ್ತು ಸಂಸ್ಕಾರಗೊಳಿಸಿ 'ತನ್ನ ತಾನರಿದೊಡೆ ತಾನೆ ಮಹಾದೇವ ನೋಡಾ'

ಎಂಬ ತಾತ್ವಿಕತೆಯನ್ನು ಪ್ರಾಯೋಗಿಕವಾಗಿ ಬದುಕಿದ ಕಾಲಘಟ್ಟ. ಬಸವಾದಿ ಶಿವಶರಣರು ಅರಿವನ್ನೇ 'ಗುರು'ವಾಗಿಸಿಕೊಂಡು ಲಿಂಗ, ಜಾತಿ, ಮತ, ಹಿರಿಯ, ಕಿರಿಯರೆಂಬ ಅಹಮಿಕೆಯ ಸೂತಕಗಳನ್ನು ಮೀರಿದವರು. ಜೀವಾತ್ಮವನ್ನು ಪರಮಾತ್ಮವನ್ನಾಗಿಸಿಕೊಂಡು ಬಾಳಿದವರು.

ಅನುಭಾವವೆಂದರೆ ಪರಮಜ್ಞಾನ, ಜೀವನಾನುಭವ, ಅನುಭೂತಿ ಎಂಬ ಅರ್ಥಗಳಿವೆ. ಶರಣರ ದೃಷ್ಟಿಯಲ್ಲಿ ಅನುಭಾವ ಎಂಬುದು ಅಂತರಂಗದ ರತ್ನ; ಆತ್ಮವಿದ್ಯೆ. ದೇಹ, ಮನಸ್ಸು, ಪ್ರಾಣಗಳಾಚೆಯ ಇಂದ್ರಿಯಾತೀತವಾದ ಪ್ರಪಂಚದೊಡನೆ ಅನುಸಂಧಾನಿಸುವ ಅಧ್ಯಾತ್ಮ ಸಾಧನೆಯ ಸಾಧನವೇ ಅನುಭಾವ. ಚೆನ್ನಬಸವಣ್ಣನವರು ತಮ್ಮದೊಂದು ವಚನದಲ್ಲಿ 'ಅನುಭಾವವೆಂಬುದು ನೆಲದ ಮರೆಯ ನಿಧಾನ, ಅಂತರಂಗದ ಶುದ್ಧಿ, ಇದು ಸಮತೆಯ ಶುದ್ಧಿಯಿಲ್ಲ, ಬೀದಿಯ ಪಸರವಲ್ಲ.' ಎನ್ನುತ್ತಾರೆ. ಪರಮಸತ್ಯದ ಅರಿವು, ಅನುಸಂಧಾನ ಮತ್ತು ಐಕ್ಯಾನುಭೂತಿ 'ಅನುಭಾವ'ದ ಮುಖ್ಯ ಲಕ್ಷಣ. ಇದನ್ನು ಬಸವಣ್ಣನವರು ಅನೇಕ ಶರಣರೊಟ್ಟಿಗೆ ಸೇರಿ ಸಾಧಿಸಿ ಇಡೀ ಮನುಕುಲವನ್ನು ಅನುಭಾವಿಗಳನ್ನಾಗಿಸಿದರು.

ಸಮಸಮಾಜದ ಕನಸು

ಬಸವಣ್ಣನವರು ಜಾತಿ, ವರ್ಣ, ವರ್ಗ ಅಸಮಾನತೆಗಳನ್ನು ನೀಗಿಸಿ ಸಮಸಮಾಜದ ನಿರ್ಮಾಣದತ್ತ ಯೋಚಿಸಿದರು. ಅವರು ಬರೀ ಪ್ರಗತಿಪರವಾಗಿ ಯೋಚಿಸಿ ವಚನ ರಚಿಸಲಿಲ್ಲ, ಅಂದಿನ 'ಪುರುಷ ಶ್ರೇಷ್ಠ ಮಹಿಳೆ ಕನಿಷ್ಠ' ಎಂಬ ಮೌಢ್ಯಕ್ಕೆ ಉತ್ತರವಾಗಿ ಇಷ್ಟಲಿಂಗವನ್ನು ಮಹಿಳೆಗೂ ಪೂಜಿಸಿಕೊಳ್ಳಲು ಕೊಟ್ಟರು. ಹಾಗೆಯೇ ಹಡಪದ ಕಾಯಕದ ಅಪ್ಪಣ್ಣನವರನ್ನು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡಿದ್ದು, ಮದ್ದಳೆ ಬಾರಿಸುವ ಅಲ್ಲಮ ಪ್ರಭುದೇವರನ್ನು ಅನುಭವ ಮಂಟಪದ ಶೂನ್ಯ ಸಿಂಹಾಸನ ಪೀಠದ ಅಧ್ಯಕ್ಷರನ್ನಾಗಿಸಿದ್ದು, ಅನುಭವ ಮಂಟಪದಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ ನೀಡಿದ್ದು, ಇವೆಲ್ಲವುಗಳ ಮೂಲಕ ಬಸವಣ್ಣನವರು ಸಮಾಜದಲ್ಲಿಯ ಮೇಲು ಕೀಳು ಎಂಬ ತಾರತಮ್ಯದ ಭಾವನೆಯನ್ನು ಅಳಿಸಹಾಕಲು ಪ್ರಯತ್ನಿಸಿ ಸಮಸಮಾಜದ ಪರಿಪಲ್ಪನೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತಂದರು. ಹೀಗಾಗಿ ಕರ್ನಾಟಕ ಸರಕಾರವು ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕರೆಂದು ಘೋಷಿಸಿದ್ದು ಸ್ತುತ್ಯರ್ಹವಾಗಿದೆ.

ಪರಾಮರ್ಶನ ಕೃತಿಗಳು

1. ವೆಂಕಟರಡ್ಡಿ. ಗು. ದೇಸಾಯಿ, (ಸಂ), ಬಸವಣ್ಣನವರ ವಚನಗಳು, ಗುರುನಾಥರಡ್ಡಿ ವೆಂ ದೇಸಾಯಿ, 1998
2. ತಿಪ್ಪೇರುದ್ರಸ್ವಾಮಿ ಎಚ್., ಬಸವೇಶ್ವರ ವಚನ ದೀಪಿಕೆ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2016
3. ವೀರಣ್ಣ, ಸಿ, ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1986
4. ಶಾಂತಾ ಇಮ್ರಾಪೂರ, ನಿರ್ಭಯದ ನಿಲುವು, ಚಿತ್ತಾರ, ನಿರ್ಮಲ ನಗರ, ಧಾರವಾಡ, 2005
5. ಪ್ರಕಾಶ ಗಿರಿಮಲ್ಲನವರ(ಸಂ), ಮಹಾಂತ ದೇವರು, ವಚನ ಸಂಸ್ಕೃತಿ, ಶ್ರೀ ಮಹಾಂತೇಶ್ವರ ಪ್ರಕಾಶನ, ಬೆಲ್ಲದ ಬಾಗೇವಾಡಿ, 2016

❖❖❖

ನಾದದ ನದಿಯೊಂದು ನಡೆದ್ಹಾಂಗ: ವ್ಯಕ್ತ ಮಾಧ್ಯಮದಲ್ಲಿ ಅವ್ಯಕ್ತ ಸಂಗೀತ

ಡಾ. ಗೀತಾ ವಸಂತ
ಸಹ ಪ್ರಾಧ್ಯಾಪಕರು, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾಲಯ, ತುಮಕೂರು

"ಊದುವರೆ ಕೊಳಲು; ಇಲ್ಲ; ಬಿದಿರು" ಇದು ಬೇಂದ್ರೆಯವರ ನಿಃಶಬ್ದ ಕವಿತೆಯ ಸಾಲು. ಬಿದಿರೊಳಗೆ ಸುಪ್ತವಾಗಿದ್ದ ನಾದ ಉಸಿರಿನ ಪ್ರೇರಣೆಯಿಂದ ಹೊರಹೊಮ್ಮುವುದೇ ಲೋಕದ ಬೆಡಗು. ಬಿದಿರೆಂಬ ಭೌತ ವಸ್ತುವಿನೊಳಗೆ ಊದುವವರ ಭಾವ, ಉಸಿರಿನ ಚೈತನ್ಯ ಸಂಭವಿಸಿದಾಗ ಅದು ಸಂಗೀತವಾಗುವುದು. ಇದುವೇ ಸೃಷ್ಟಿಯ ರಹಸ್ಯ. ನಾದದಲ್ಲಿ ಹುಟ್ಟಿದ ಜಗತ್ತು ನಾದದಲ್ಲೇ ಲಯವಾಗುವುದು. ನಾದದ ಅಖಂಡತೆಯಲ್ಲಿ ಎಲ್ಲವೂ ಕರಗಿರುವುದು. ಅದು ಹಾಡಾಗಿ ತುಟಿಗೆ ಬಂದಾಗ ಮಾತ್ರ ನಾವದನ್ನು ಕೇಳುವೆವು. ಆದರೆ ನಾವು ಕೇಳದೇ ಇರುವಾಗಲೂ ನಾದವೆಂಬುದು ಇದೆ. ಅದು ಆದಿ ಆಧಾರವಾಗಿದೆ. ಇದು ಭೌತವಿಜ್ಞಾನದ ಸಂಗತಿಯೂ ಹೌದು. ಯೌಗಿಕ ಅನುಭೂತಿಯೂ ಹೌದು. ಆದರೆ ನಾದವನ್ನು ಭಾಷೆಯಲ್ಲಿ ಬಣ್ಣಿಸುವುದು ಬಲು ಕಷ್ಟದ ಕೆಲಸ. ನಾದವನ್ನೇ ರೂಪಕವಾಗಿಸಿಕೊಂಡು ಸೃಷ್ಟಿಯ ಅಖಂಡತೆಯನ್ನು ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ಧ್ವನಿಸಿದ್ದಾರೆ.

ಹಾಗೆ ನೋಡಿದರೆ ಬೇಂದ್ರೆ ನಿಜ ಅರ್ಥದಲ್ಲಿ ಶ್ರಾವಣದ ಕವಿ. ವಿಶ್ವದ ಒಳನುಡಿಯನ್ನು ಕನ್ನಡಿಸುವ ಅವರ ಕಾವ್ಯಪ್ರಜ್ಞೆಯೇ ಶ್ರುತಿ ಪರಂಪರೆಗೆ ಸೇರಿದ್ದು. ಅವರ ಕವಿತೆಗಳನ್ನು ಅವರು ಹಾಡು ಎಂದೇ ಬಣ್ಣಿಸಿದ್ದಾರೆ. "ಮುನ್ನ ಬಗೆಯಲಿ ಹಾಡ ನೀನೀನೆ ಹೆತ್ತಿ, ನನ್ನ ನಾಲಗೆ ನಿನ್ನ ಬರಿ ಸೂಲಗಿತ್ತಿ" (ಓ ಹಾಡೆ) ಎನ್ನುತ್ತಾರೆ ಅವರು. ಪ್ರಜ್ಞೆಯೊಳಗೆ ಈಗಾಗಲೇ ಇರುವ ಹಾಡುಗಳನ್ನು ವ್ಯಕ್ತಮಾಧ್ಯಮಕ್ಕೆ ಒಗ್ಗಿಸುವುದಷ್ಟೇ ತನ್ನ ಕೆಲಸ ಎಂಬ ಅವರ ಈ ಭಾವ ವಿಶೇಷವಾದುದು. ಇಡೀ ಪರಂಪರೆಯ ಸೊಲ್ಲುಗಳು ಕವಿಯೊಬ್ಬನಿಂದ ಬರೆಸಿಕೊಳ್ಳುತ್ತವೆ ಎಂಬ ಸೋಜಿಗದ ನುಡಿಯಿದು. ಮಾತುಗಳು ಮಥಿಸುತ್ತ ನಾದದ ನವನೀತ ಉದಿಸಬೇಕೆಂಬುದು ಈ ಕವಿಯ ಕನಸು. ಭಾಷೆಯ ವಿಭಜಿತ ನೋಟಗಳು ಕರಗಿ ನಾದದ ಅವಿಭಜಿತ ಸಂವೇದನೆಯು ಮರಮರಳಿ ನಮ್ಮನ್ನು ಅರಳಿಸಬೇಕೆಂಬ ವಿಕಾಸಭಾವದಲ್ಲಿ ಅವರು ಕಾವ್ಯಕಟ್ಟುತ್ತಾರೆ.

ಭಾಷೆಗೂ ಮೊದಲು ಇರುವುದು ನಾದ. ಅದು ಅರ್ಥ ಮೂಡುವುದಕ್ಕೂ ಮುಂಚಿನ ಸ್ಥಿತಿ. ಅನಿರ್ವಚನೀಯ ಎನ್ನುತ್ತೇವಲ್ಲ, ಅಂಥ ಸ್ಥಿತಿ. ಅದಕ್ಕೆಂದೇ 'ನಾದದ ಹಾದಿ ಕಾಣಬೇಕು' ಎಂದು ಬೇಂದ್ರೆಯವರು ಪ್ರತಿಪಾದಿಸುತ್ತಾರೆ. ಮನುಷ್ಯನ ನಾಡಿಮಿಡಿತದಲ್ಲಿ, ಎದೆ ಬಡಿತದಲ್ಲಿ, ಉಸಿರಾಟದ ಗತಿಯಲ್ಲಿ ನಾದವಿದೆ. ಹಾಗೆಯೇ ಬ್ರಹ್ಮಾಂಡದ ಗತಿಯಲ್ಲೂ ನಾದವೇ ಇದೆ. ಬ್ರಹ್ಮಾಂಡವನ್ನು ವ್ಯಾಪಿಸಿರುವ ನಾದದ ಸೂಕ್ಷ್ಮರೂಪವನ್ನು 'ಅನಾಹತ'ನಾದವೆಂದು ಕರೆದಿದ್ದಾರೆ. ಕವಿಯ ಮಿತಿಯು ಬಯಲಾದಾಗ ಕೇಳುವ ನಾದವಿದು. ಅಂದರೆ ಇಂದ್ರಿಯಗಳ ಮಿತಿ ದಾಟಿ

ಸೂಕ್ಷ್ಮಗೊಳ್ಳುವ ಸಾಧಕರಿಗೆ ಈ ಅನುಭೂತಿ ಸಾಧ್ಯವೆಂದು ಯೌಗಿಕ ಪರಂಪರೆಗಳ ನಿಲುವು. ಇಂಥ ನಾದಾನುಭೂತಿಯನ್ನು ಅಕ್ಷರಗಳಲ್ಲಿ ಪ್ರಕಟಗೊಳಿಸುವ, ಛಂದಸ್ಸಿನಲ್ಲಿ ಅದರ ನಡೆಯನ್ನು ಕಾಣುವ ಹೊಸನೋಟಗಳು ಬೇಂದ್ರೆ ಕಾವ್ಯದಲ್ಲಿವೆ.

ಸ್ವಾದದ ನಾದದ ಮೋದದ ಒಳಬಸಿರನೆ ಬಗೆದು
ಹುಂಕಾರದ ಒಳನೂಲನು ಮೆಲ್ಲನೆ ಹೊರದೆಗೆದು
ಶಬ್ದಕೆ ಹಾಸಿಕೆಯಾಗಿಹ ತನಿಮೌನದಿ ಮುಗಿದು
ಉಸಿರುಸಿರಲಿ ಸರಿದರಿದೂ ಊದೂದುತ ನಲಿದು
ದನಿಯೇ ನದಿಯೊಲು ಚಲಿಸಿತು ಕೊಂಕೊಂಕೆನೆ ಒಲೆದು
ಅಲೆಯಾಯಿತು ಬಲೆಯಾಯಿತು ಜಗದಗಲಕೆ ಸೆಲೆದು (ಏಲಾಗೀತೆ)

ಮೌನದ ಒಳಬಸಿರಭಿತ್ತಿಯಿಂದಲೇ ಹೊಮ್ಮುವ ಶಬ್ದವು ಮೌನವನ್ನೂ ಸಹಜವಾಗಿಯೇ ಒಳಗೊಂಡಿರುತ್ತದೆ. ಇದನ್ನೇ ಅಲ್ಲಮ "ಶಬ್ದದೊಳಗಿನ ನಿಃಶಬ್ದದಂತೆ "ಎನ್ನುವುದು. ಉಸಿರ ಜೊತೆಗೇ ಹೊಮ್ಮುವ ಹುಂಕಾರದ ನೂಲನ್ನು ನೇಯುತ್ತ ಪದಗಳು ಆಕಾರಗೊಳ್ಳುತ್ತವೆ. ದೇಹ ಹಾಗೂ ಉಸಿರಿನ ಸಹಭಾಗಿತ್ವದಲ್ಲಿ ನಾದವು ಪ್ರಕಟವಾಗುವುದು. ಅಂಥ ದನಿಯೇ ನದಿಯಾಗಿ ಚಲಿಸುವುದು.ಹಾಗೆ ಚಲಿಸುವ ಗತಿಯೇ ಲಯ. ಈ ಲಯವು ಇಡಿಯ ಬ್ರಹ್ಮಾಂಡವನ್ನೇ ವ್ಯಾಪಿಸಿದೆ. ನಾದವು ಬಿಂದುವೂ ಹೌದು, ಆಕಾಶವೂ ಹೌದು. ಜಗತ್ತನ್ನೆಲ್ಲ ತನ್ನ ಜೋಲಿಯಲ್ಲಿ ತೂಗಿ ಮಲಗಿಸುವ ನಾದವು ವಿಶ್ವದ ಅವ್ಯಕ್ತ ಸಂಗೀತ, ಇದನ್ನು ಬೇಂದ್ರೆ 'ಗ್ರಹಗೋಲ ಸಿಂಫನಿ' ಎನ್ನುತ್ತಾರೆ. ಸಿಂಫನಿ ಎಂದರೆ ಅನೇಕ ವಾದ್ಯಗಳನ್ನು ಒಟ್ಟಿಗೆ ನುಡಿಸುವ ವಾದ್ಯಗೋಷ್ಠಿ.ಅನೇಕವು ಏಕಶೃತಿಯಲ್ಲಿ ಮಿಡಿದಾಗ ಅದು ಸಾಮರಸ್ಯದ ಸಂಗೀತವಾಗುವುದು.ಅಂತೆಯೇ ಬ್ರಹ್ಮಾಂಡವು ಸದಾ ಲಯಬದ್ಧವಾದ ಚಲನಶೀಲ ಸ್ಥಿತಿಯಲ್ಲಿದೆ. ಇಲ್ಲಿನ ಸಕಲ ಚರಾಚರಗಳೂ ಬ್ರಹ್ಮಾಂಡದ ಪೂರ್ಣತೆಗೆ ಪೂರಕವಾಗಿವೆ. ವಿಭಜಿತ ಅನುಭವ ಇಲ್ಲದ ನಾದದ ಅಖಂಡತೆಯು ಬ್ರಹ್ಮಾಂಡದ ಸಾಮರಸ್ಯಕ್ಕೆ ಮಹಾರೂಪಕವಾಗಿ ತೋರುತ್ತದೆ. ಜಗತ್ತು ಸಿಡಿದು ಚೂರಾಗದೇ ಸಂಬಂಧದ ಗುರುತ್ವಶಕ್ತಿಯಿಂದ ಉಳಿದುಕೊಳ್ಳುತ್ತದೆ. ಈ ಸೃಷ್ಟಿಯ ರಹಸ್ಯವನ್ನು ನಾದದ ಪರಿಭಾಷೆಯಲ್ಲಿ ಬೇಂದ್ರೆ ಕಟ್ಟುತ್ತಹೋಗುತ್ತಾರೆ.

ಗ್ರಹಗೋಲ ಸಂಗೀತ ತಾನ ತಾನದ ನನೆಯು
ಭಾವದ ಪರಿಸ್ಪಂದ ಆತ್ಮ ಆತ್ಮವೇ ತಾನು
ವಾಚ್ಯವರ್ಣಗಳಲ್ಲಿ ನವಿರು ನವಿಲಿನ ಕೇಕೆ
ಶ್ರೀ ಅನಿರ್ವಾಚ್ಯಕ್ಕೆ ಬೇರೆ ಭಾಷ್ಯವು ಬೇಕೆ? (ನಾದಮಯೂರ)

ಜಗತತ್ತಿನ ವಿಕಾಸ ಹಾಗೂ ಅದರ ಸ್ವರೂಪವು ವಾಚ್ಯವಾದ ಅಕ್ಷರಗಳ ಅರಿವಿಗೆ ಮೀರಿದ್ದು. ಆದರೆ ಈ ವಿಕಾಸದಲ್ಲಿ ಒಂದು ಲಯಬದ್ಧ ಸಂಯೋಜನೆಯಿದೆ. ಅದು ನಮ್ಮೊಳಗೂ ಇದೆ. ಅದನ್ನು ಒಳಗೊಳ್ಳುವುದು ಸಾಧ್ಯವೇ ಹೊರತೂ ವಿಮರ್ಶಿಸುವುದು ಕಷ್ಟ. ನಾದವನ್ನು ಅನುಭವಿಸಲು ತನ್ಮಯೀಭಾವ ಬೇಕು. ಆಗಲೇ ಅದರ ಒಳದನಿಗಳು ಕೇಳಲು ಸಾಧ್ಯ.

ನಾದಬೇಕು ನಾದಬೇಕು
ನಾದಾನ ನಾದಬೇಕು
ನಾದಕ್ಕೆ ಪ್ರತಿನಾದ ಬೇಕು
ನಾದಾನನ ಆದಮ್ಯಾಲೆ ಬ್ಯಾರೆಯಾಕ ವಾದ ಬೇಕು?

ಇಲ್ಲೆಲ್ಲ ವಿಶ್ವಪ್ರಜ್ಞೆಯ ಅವಿಭಜಿತ ಸ್ಥಿತಿಯನ್ನು ನಾದರೂಪಕದಲ್ಲಿ ಬೇಂದ್ರೆ ಕಟ್ಟಿಕೊಡುತ್ತಾರೆ. ಹಿಟ್ಟು ನಾದುವುದು ಧ್ಯಾನಸ್ಥ ಮನಸ್ಥಿತಿಯನ್ನು ಬೇಡುವ ಕ್ರಿಯೆ. ಹದತಪ್ಪದಂತೆ ನಡೆಸಬೇಕಾದ ಸೂಕ್ಷ್ಮ ಪ್ರಕ್ರಿಯೆ. ಅಂದರೆ ಪ್ರತಿ ಕ್ರಿಯೆಯ ಹಿಂದೆಯೂ ಲಯಬದ್ಧ ವಿನ್ಯಾಸವೊಂದು ನಮಗರಿವಿಲ್ಲದೆಯೇ ಇರುತ್ತದೆ. ಅದು ನಮ್ಮಲ್ಲಿ ಕರಗಿದಾಗ ಕರಗತವಾಗುತ್ತದೆ. ಕ್ರಿಯೆ ಬೇರೆ ಅದರ ಫಲಿತ ಬೇರೆಯಾಗಿ ತೋರುವುದಿಲ್ಲ. ಬ್ರಹ್ಮಾಂಡದ ಸೃಷ್ಟಿಯ ಹಿಂದೆಯೂ ಇಂಥ ಕ್ರಿಯಾಶೀಲತೆಯಿದೆ. ಇದು ಸಾಮರಸ್ಯದಿಂದ ಹದಗೊಂಡ ಕ್ರಿಯಾಶೀಲತೆ. ಅದಕ್ಕೆ ಕವಿ ಯೋಗದ ಮೊರೆಹೋಗುತ್ತಾರೆ. ಜೀವಾತ್ಮ ಹಾಗೂ ಪರಮಾತ್ಮಗಳು ಒಂದೇ ಆಗಿ ಮಿಡಿಯುವ ಸ್ಥಿತಿಯನ್ನು ದೇಹದ ಮೂಲಕವೇ ಸಿದ್ಧಿಸಿಕೊಂಡ ಈ ಸಾಧನಾಧಾರೆಗಳ ಅನುಭವಲೋಕ ನಾದದ ಮೂಲಕ ಈ ಕಾವ್ಯದಲ್ಲಿ ತೆರೆಯುತ್ತ ಹೋಗುತ್ತದೆ.

ಹೊರಗಿನ ದೇವರು ಯಾಕಬೇಕು
ಒಳಗಿನ ದೇವನ ಸಾಕ ಬೇಕು
ತನ್ನೊಳು ತನ್ನ ನೋಡಬೇಕು
ಹರಿಹರ ಗುರುವನು ಮಾಡಬೇಕು
ಆ ಉಸಿರಿಂದಲೆ ಹಾಡಬೇಕು
ಹೊಸ ತೋಡಿಗೆ ತೋಡಬೇಕು ಬ್ರಹ್ಮನಾಡಿಯೊಳು ಆಡಬೇಕು (ನಾದಬೇಕು)

ನಾದವು ಒಳಗು ಹಾಗೂ ಹೊರಗು ಎಂಬ ಮಿಥ್ಯೆಗಳನ್ನು ಅಳಿಸಿಹಾಕುವ ಸತ್ಯ. ದೇಹವೆಂಬುದು ವಿಶ್ವಪ್ರಜ್ಞೆಯ ಅಖಂಡತೆಯನ್ನು ಕಾಣಲು ನಮಗಿರುವ ಮಿತಿ. ಇಂದ್ರಿಯಗಳ ಮೂಲಕ ಗ್ರಹಿಸಬೇಕಾದುದೇ ಪ್ರಜ್ಞೆಗಿರುವ ಬಂಧನ. ಎಲ್ಲವನ್ನೂ ದ್ವಂದ್ವಗಳ ಮೂಲಕವೇ ಗ್ರಹಿಸುವ ಮಿಥ್ಯಾಜ್ಞಾನವನ್ನು ಸೃಷ್ಟಿಸುವ ಇಂದ್ರಿಯಗಳ ಮಿತಿಯನ್ನು ಮೀರಿದಾಗ ಅರಿವು ಆಕಾಶವಾಗುತ್ತದೆ. ಇದನ್ನೆಲ್ಲ ಸಾಧಿಸಲು ದೇಹವನ್ನೇ ಭಿತ್ತಿಯಾಗಿಸಿಕೊಳ್ಳುವುದು ನಮಗೆ ಅನಿವಾರ್ಯ. ದೇಹದಲ್ಲಿ ವಿಶ್ವಾತ್ಮಕವಾದ ಚೈತನ್ಯವು ಸೂಕ್ಷ್ಮರೂಪದಲ್ಲಿದೆ. ಅದನ್ನು ಸಾಧನೆಯ ಮೂಲಕ ಪಡೆದಾಗ ವಿಶ್ವವೇ ತಾನೆಂಬ ಆತ್ಮಜ್ಞಾನವುಂಟಾಗುತ್ತದೆ. ದೇಹಸ್ಥವಾದ ಸೂಕ್ಷ್ಮ ನಾಡಿ ಹಾಗೂ ಚಕ್ರಗಳನ್ನು ಉದ್ದೀಪಿಸಿ ದೇವಾನುಭವ ಪಡೆವ ಯೌಗಿಕ ಸಂಜ್ಞೆಯನ್ನು ಈ ಕವಿತೆ ಒಳಗೊಂಡಿದೆ. 'ದೇವವೀಣೆ' ಎಂಬ ಕವಿತೆಯಲ್ಲೂ ಸಂಗೀತದ ಪರಿಭಾಷೆಯಲ್ಲಿ ಇದೇ ಪರಿಕಲ್ಪನೆ ಅಭಿವ್ಯಕ್ತವಾಗಿದೆ.

ದೇಹವೊಂದು ದೇವವೀಣೆ
ನರನರವೂ ತಂತಿ ತಾನೆ
ಹಗಲಿರುಳೂ ನುಡಿಯುತ್ತಿಹ ಉಸಿರಾಟವೆ ಗೀತ
ಅದ ಬಾರಿಸೆ ನೀ ಪ್ರವೀಣೆ
ತಾಯಿ ನಿನ್ನ ಕೈಗೆ ನಾನೆ
ಒಪ್ಪಿಸಿಕೊಂಡಿಹೆನು ಬರಲಿ ಜೀವದ ಸಂಗೀತ (ದೇವವೀಣೆ)

ಪಿಂಡದಲ್ಲಿರುವುದೆಲ್ಲವೂ ಬ್ರಹ್ಮಾಂಡದಲ್ಲಿಯೂ ಇರುತ್ತದೆ. ಹಾಗೆ ನೋಡಿದರೆ ದೇಹವೂ ಒಂದು ಬ್ರಹ್ಮಾಂಡ. ಅದರೊಳಗಿನ ಪ್ರತಿ ಜೀವಕೋಶಗಳೂ ಜೀವಲಯದಲ್ಲಿ ಮಿಡಿಯುತ್ತವೆ. ಅಂಗಾಂಗಗಳ ನಡುವಿನ ಸಾಮರಸ್ಯವಿದ್ದಾಗ ಮಾತ್ರ ದೇಹ ಮತ್ತು ಪ್ರಾಣಗಳು ಅಭೇದವಾಗಿ ಮಿಡಿಯುವುದು ಸಾಧ್ಯ.ನಾನು ಎಂಬ ಪ್ರಜ್ಞೆಯು

ಉದಯಿಸಲು ದೇಹಭಾವವು ಬೇಕೇಬೇಕು. ಆ ಪ್ರಜ್ಞೆಯು ವಿಶ್ವಪ್ರಜ್ಞೆಯೊಂದಿಗೆ ಒಂದಾಗುವುದು ಯೌಗಿಕ ಕ್ರಿಯೆಯ ಮೂಲಕ ಸಾಧ್ಯ. ಮೂಲಾಧಾರದ ಶಕ್ತಿ ಪ್ರವಾಹವು (ಕುಂಡಲಿನೀ) ಷಟ್ಚಕ್ರಗಳ ಮೂಲಕ ಹರಿಯುತ್ತಾ ಕೊನೆಯಲ್ಲಿ ಸುಷುಮ್ನಾ ನಾಡಿಯು ತೆರೆದಾಗ ಸಹಸ್ರಾರದಲ್ಲಿರುವ ಶಿವನೊಂದಿಗೆ ಐಕ್ಯವಾಗುತ್ತದೆ. ಅದಕ್ಕೆ ಶೂನ್ಯಚಕ್ರವೆಂಬ ಸಂಜ್ಞೆಯೂ ಇದೆ. ನಾದದ ಹಾದಿಯನ್ನು ಅರಿಯಬೇಕು ಎಂಬುದು ಈ ಯೌಗಿಕ ಐಕ್ಯದ ಹಾದಿಯೂ ಹೌದು. ಇದಕ್ಕಾಗಿ ದೇಹವೇ ದೇವವೀಣೆಯಾಗಿ ಶೃತಿಗೊಳ್ಳಬೇಕು. ಉಸಿರ ಲಯವನ್ನೇ ಧ್ಯಾನಿಸುವ ಮೂಲಕ ಈ ದಾರಿಯನ್ನು ತೆರೆಯುವ ಧ್ಯಾನದ ಹಂಸಮಾರ್ಗವೂ ನಾದದ ಜಾಡಿನಲ್ಲೇ ಮೂಡಿದೆ. ಇದು ಹೆಜ್ಜೆಮೂಡದ ಹಾದಿ. ಆದ್ದರಿಂದಲೇ ಇದು ಅನಿರ್ವಚನೀಯವೂ ಹೌದು.

ತಿಳಿಯದ್ಯಾವುದೋ ಕಂಪು ಎಳೀತದ ತುಂಬಿ ಹುಚ್ಚು ಆಗಿ
ಎಚ್ಚರಿಲ್ಲದ ಎತ್ತ ತಿರಗತಾವ ದಿಕ್ಕು ತೋರದಾಗಿ
ಬಂತು ಸುಗ್ಗಿ ಬಂದದ ಸುಗ್ಗಿ ಬರತದ ಸುಗ್ಗಿ ಎಂದು
ಕುಹೂ ಅನ್ನತದ ಕಹೂ ಅನ್ನತದ ಕುಹುಕ್ಕುಹೂ ಅಂದು (ಜೋಗಿ)

ತಾರ ಪಂಚಮದಲ್ಲಿ ಕೂಗುವ ಈ ಕೋಗಿಲೆಯು ಒಳಗಿನ ಸೊಲ್ಲು ಎಚ್ಚರಾದ ಸಂಕೇತ. ಬೇಂದ್ರೆ ಹೇಳುವ 'ಗುಹಾಧ್ವನಿ'ಯಿದು. ಇದನ್ನು ಪರಾವಾಣಿಯೆಂತಲೂ ಅನ್ನಬಹುದು. ಇದು ಎಚ್ಚರಾದಾಗ 'ತಲೆಯ ಯಾವುದೋ ನಾಡಿಯೊಳಗೆ 'ಸುಗ್ಗಿ ಸೊಲ್ಲು' ಶುರುವಾಗುತ್ತದೆ. ಈ ಎಲ್ಲ ಯೌಗಿಕ ವಿವರಗಳು ಬೇಂದ್ರೆಯವರ 'ಜೋಗಿ' ಕವಿತೆಯಲ್ಲಿ ಚಿತ್ರವತ್ತಾಗಿ ಬರುತ್ತವೆ. ಮನದ ಜಪದ ನಡುವೆ 'ಓಂ ಕುಹೂ' ಎಂದು ಕರೆಯುವ ಈ ಕೋಗಿಲೆ ಧ್ಯಾನದ ಪರಾಕಾಷ್ಠೆಯಲ್ಲಿ ಮೂಡಿದ ಸ್ವರ. 'ಕನಸಿನೊಳಗ ನಾ ಸ್ವರಾ ಕೇಳಿ ಮಾಮರಾ ಆಗತೇನೊ' ಎನ್ನುವ ಸಾಲು ಈ ನಾದಕ್ಕೆ ವಶವಾಗಿ ಪರಿವರ್ತನೆಗೊಂಡ ಪ್ರಜ್ಞೆಯ ಫಲ. ಪ್ರಜ್ಞೆಯ ಜಾಗೃತ, ಸ್ವಪ್ನ, ಸುಷುಪ್ತಿ ಹಾಗೂ ತುರೀಯಾವಸ್ಥೆಗಳಲ್ಲೂ ಈ ನಾದದ ಜಾಡು ಇದೆ. ಸಾಧಕರ ಸಿದ್ಧಿಯ ವಿವಿಧ ಹಂತಗಳಲ್ಲಿ ಅದರ ಸಾಕ್ಷಾತ್ಕಾರವಾಗುತ್ತದೆ. ಆಧ್ಯಾತ್ಮಿಕ ಅನುಭವದ ಸಮೃದ್ಧ ಸರಣಿಯನ್ನೇ ಕಟ್ಟಿಕೊಡುವ ಈ ಕವಿತೆ ಎಚ್ಚೆತ್ತ ಒಳದನಿಯ ಲಯಕ್ಕೆ ತೂಗುತ್ತ ಜೀವವು ಪಾಡಾಗುವ, ಹಾಡಾಗುವ, ಹಣ್ಣಾಗುವ ವಿಕಾಸವನ್ನು ತೆರೆದಿಡುತ್ತದೆ. ಈ ಸ್ವರವೇ ಎಲ್ಲವನ್ನೂ ಆವರಿಸಿಕೊಳ್ಳುತ್ತಾ ಪರಿವರ್ತಿಸುತ್ತಾ ಹೋಗುವ ಅನುಭವ ಸಾಧಕನೊಬ್ಬನ ಸಿದ್ಧಿಯ ಸ್ಥಿತಿಯ ಹದವನ್ನು ಸೂಚಿಸುತ್ತದೆ. ಕವಿತೆಯು ಈ ಭಾವವನ್ನು ಉತ್ಕಟ ಚಿತ್ರಗಳ ಮೂಲಕ ಕಟ್ಟಿಕೊಟ್ಟಿದೆ.

ಅತೀಂದ್ರಿಯ ಅನುಭವಕ್ಕೆ ಗ್ರಾಮದ ಘಾಟು ತರಬಲ್ಲ ರಸಿಕರು ಬೇಂದ್ರೆ ಎಂದು ಯು.ಆರ್. ಅನಂತಮೂರ್ತಿಯವರು ತಮ್ಮ 'ಯುಗದಕವಿ ಬೇಂದ್ರೆ' ಎಂಬ ಲೇಖನದಲ್ಲಿ ಗುರುತಿಸುತ್ತಾರೆ. ಹಳ್ಳಿಪಳ್ಳಿಗಳ ಓಣಿಯ ನುಡಿಯನ್ನು ಆತ್ಮವಾಣಿಯ ಅಭಿವ್ಯಕ್ತಿಗೆ ಬಳಸಿಕೊಂಡ 'ಶರೀಫನ ವಾಣಿ' ನಮಗಿಂದು ಬೇಕಾಗಿದೆಯೆಂದು ಬೇಂದ್ರೆಯವರು ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ'ದಲ್ಲಿ ದಾಖಲಿಸಿದ್ದಾರೆ. ಈ ಭಾಷೆ 'ಅವಧೂತ ಮುದ್ರೆ'ಯ ಭಾಷೆ. ಅವಧೂತರು ತಮ್ಮ ದೇಸಿ ನಡೆನುಡಿಯ ಸತ್ವವನ್ನು ಅಧ್ಯಾತ್ಮದ ವಿಶ್ವಾತ್ಮಕ ಅನುಭವದ ಭಿತ್ತಿಯಾಗಿಸಿಕೊಂಡವರು. ಅವರ ವಿಕ್ಷಿಪ್ತತೆ, ಬೆಡಗಿನ ನುಡಿಗಳಲ್ಲಿ ಈ ದೇಸಿತನವಿದೆ. ತತ್ವಪದಕಾರರ ರಚನೆಗಳಲ್ಲಿ

ಈ ಸತ್ವ ಒಡಲುಗೊಂಡಿದೆ. ಜನಪದರು ಅಕ್ಷರಜ್ಞಾನಕ್ಕಿಂತ ನಾದಾನುಭೂತಿಗೆ ಮನಸೋತವರು. ಜ್ಞಾನದ ವಿಭಜನೆಗಳಿಂದ ದೂರವುಳಿಯಲು ನಾದ ಅವರಿಗೆ ನೆರವಾಗಿದೆ. ಬೇಂದ್ರೆಯವರ ಬಾಲ್ಯಕಾಲದ ಸ್ಮೃತಿಗಳಲ್ಲಿ ಸೇರಿಹೋದ ಗೊಂದಲಿಗರ ಹಾಡು, ಭಜನೆ ಮೇಳದ ಧ್ವನಿ, ಪುರವಂತರ ವಚನಗಳ ಗತ್ತು, ಅವರಲ್ಲಿ ನಾದದ ಸೆಳೆತವನ್ನು ತುಂಬಿವೆ.

ಭಜನೀಯ ಮ್ಯಾಳದ ಧನಿ
ಅಲ್ಲಾ ದೂರಾ ಅಲ್ಲಾ ಸನಿ
ತುಳಕ್ಯಾಡತಾವ ದಿಕ್ಕು ದಿಕ್ಕು
ತಪ್ಪಿ ಉಳಿದ ಕೋಗಿಲಾ (ಸಣ್ಣ ಸೋಮವಾರ)

ಭಜನಿಯ ಮ್ಯಾಳದ ದನಿಯು ತುಂಬಿದ ಉನ್ಮನಿ ದಿಕ್ಕುದಿಕ್ಕುಗಳಲ್ಲೂ ತುಳುಕಾಡಿದೆ. ಎದೆಕೋಗಿಲೆಯ ಆ ಒಳದನಿಯನ್ನು ಎಚ್ಚರಿಸಿದೆ. ಆಗ ಜೀವ ಒಳಮುಖಿಗೊಳ್ಳುತ್ತ ಪ್ರಜ್ಞೆಯ ಆಳವನ್ನು ಥಟ್ಟನೆ ದರ್ಶನ ಮಾಡಿಸಿದೆ. ಮಾನಸ ಸರೋವರದಲ್ಲಿ ಈಸಾಡುವ ಜೀವದ ರೂಪಕವೇ ಅತೀಂದ್ರಿಯಾನುಭವದ ಸರಣಿಯನ್ನು ಉದ್ದೀಪಿಸುತ್ತದೆ. ನಾದದ ಮೂಲಕ ಮನವು ಉನ್ಮನದ ನೆಲೆಗೇರುವ ದರ್ಶನವಿಲ್ಲಿದೆ.

ದರ್ಶನ ಹಾಗೂ ಸೃಜನಶೀಲತೆ ಎರಡನ್ನೂ ಒಟ್ಟೊಟ್ಟಿಗೆ ಬೆಸೆಯುವ ಬೇಂದ್ರೆಯವರು ನಾದದ ಹಾದಿಯಲ್ಲಿ ನದಿಯಂತೆ ನಡೆದ ಜಂಗಮ. ಕಾವ್ಯವನ್ನು 'ಲೀಲೆ'ಯಾಗಿ ಕಾಣುವ ಬೇಂದ್ರೆ ಅದನ್ನು ಆತ್ಮಯೋಗ ಹಾಗೂ ಲೀಲಾಯೋಗವೆಂದು ಕರೆಯುತ್ತಾರೆ. ತರ್ಕವನ್ನು ಮೀರಿ ಹರಿಯುತ್ತಾ ಸದಾ ಆಗುತ್ತಲೇ ಇರುವುದು ಲೀಲೆ. ಅದನ್ನು ಕಾಣಲು ದರ್ಶನದ ಒಳಗಣ್ಣು ತೆರೆಯಬೇಕು. ಹಾಗೆ ಕಂಡಿದ್ದನ್ನು ಭಾಷೆಯಲ್ಲಿ ಹಿಡಿದಿಡುವುದು ಎಂದಿಗೂ ಸವಾಲು. ಮಾತಿಗೆ ಮಂತ್ರಮಯತೆ ಒದಗಿದಾಗಲೇ ಮಾತನ್ನು 'ಕಾಣಲು' ಸಾಧ್ಯ. ಅವರ ಒಂದು ಕವಿತೆಯು ವಾಣಿಯನ್ನು 'ಪರಾಶರ ರೂಪಾ' ಎಂದು ಬಣ್ಣಿಸುತ್ತದೆ. ಶರರೂಪದಲ್ಲಿ ಧಾವಿಸುವ ಪರಾವಾಣಿಯ ಪಯಣವನ್ನಿದು ಪ್ರತಿಮಿಸುತ್ತದೆ. ಇದನ್ನು ವೈಖರೀ ವಾಣಿಯಲ್ಲಿ ಅಂದರೆ, ಮಾತಿನ ಆಕೃತಿಯಲ್ಲೇ ರಚಿಸಬೇಕಾದುದು ಅನಿವಾರ್ಯ. ಪರಾ, ಪಶ್ಯಂತಿ, ವಾಕ್, ವೈಖರೀ ಇವು ನಾಲ್ಕು ಮಾತಿನ ನಾಲ್ಕು ನೆಲೆಗಳು. ಒಳಶ್ರುತಿಯಾದ, ವಿಶ್ವದ ಒಳನುಡಿಯೇ ಆದ ಪರಾವಾಣಿಯು ಮಾತಿನ ಹೊರರೂಪ ತಾಳುವುದು ಕಾವ್ಯ ಸಿದ್ಧಿ. ಆದು ಮಾತನ್ನು ಶಬ್ದಾರ್ಥಗಳ ರೂಢಿಗತ ನೆಲೆಯಿಂದ ಇನ್ನೊಂದು ನೆಲೆಗೆ ಪರಿವರ್ತಿಸುವ ಗುಟ್ಟನ್ನು ಬೇಂದ್ರೆ ನಾದದಲ್ಲೇ ಕಾಣುತ್ತಾರೆ.

ಇದು ಮಂತ್ರ: ಅರ್ಥಕೊಗ್ಗದ ಶಬ್ದಗಳ ಪಣಿಸುವ ತಂತ್ರ:

ತಾನೆ ತಾನೆ ಅಸಮರ್ಥ ಛಂದಃ ದೃಗ್ಬಂಧ ದಿ
ಗ್ಬಂಧಃ ಪ್ರಾಣದ ಕೆಚ್ಚು ಕೆತ್ತಿ ರಚಿಸಿದೆಃ ಉಸಿರ
ಹೆದೆಗೆ ಹೂಡಿದ ಗರಿಯ ಗುರಿಯ ನಿರಿಯಿಟ್ಟು ಬರು
ತಿದೆ ತೂರಿ ಲೀಲರಯಲನಾಯಾಸ... (ಗಾರುಡಿಗ)

ಉಸಿರ ಹೆದೆಗೆ ಗುರಿಯಿಟ್ಟು ಚಿಮ್ಮಿಸಿದ ಈ ನಾದ ತನಗೆ ತಾನೇ ಛಂದಸ್ಸಿನ ನಡಿಗೆಯನ್ನು ಪಡೆದು ಸಹಜ ಬಂಧದಲ್ಲಿ ಪ್ರಕಟಗೊಳ್ಳುತ್ತದೆ. ಭಾಷೆಗಿರುವ ಶಬ್ದಾರ್ಥಗಳ ಹಂಗನ್ನು ಕಳಚಿಕೊಂಡು ಅನುಭವದ ನಿಜದರ್ಶನವು ಸಾಧ್ಯವಾಗಿಸುವ ಕಂಪನಗಳನ್ನು

ಕಾವ್ಯದಲ್ಲಿ ಕಟ್ಟಲು ಬೇಂದ್ರೆ ಭಾಷೆಯ ನಾದಮಯತೆಯ ಮೊರೆಹೋಗುತ್ತಾರೆ. ಮಾತು ಬರಿಯ ಸಾಂಕೇತಿಕ ಅರ್ಥವ್ಯವಸ್ಥೆಯಾಗದೇ ನಿಜದ ಸೂಕ್ಷ್ಮ ಸ್ವರೂಪವನ್ನು ಕೇಳಿಸುವ ಶ್ರುತಿಯಾಗುತ್ತದೆ. ಕಾಣಿಸುವ ದರ್ಶನವೂ ಆಗುತ್ತದೆ. ಕಾವ್ಯವು ಬರಿಯ ರಚನೆಯ ಲಾಲಿತ್ಯವಾಗಿರದೇ 'ಪ್ರಾಣದ ಕೆಚ್ಚು ಕೆತ್ತಿ ರಚಿಸುವ' ತೀವ್ರ ತೊಡಗುವಿಕೆಯಾಗಿ ಇಲ್ಲಿ ಕಾಣುತ್ತದೆ. ದೇಹ ಮನಸ್ಸು ಪ್ರಜ್ಞೆ ಎಲ್ಲವೂ ಒಂದೇ ಕಾವಿನಲ್ಲಿ ಕರಗಿದಾಗ ಮಂತ್ರಮಯತೆ ಮಾತಿಗೆ ಒದಗುತ್ತದೆ. ಕಾವ್ಯವು ಭಾವಗೀತೆಯ ಲಲಿತ ಸ್ವರೂಪ ಪಡೆಗಾಗ ಅದು 'ಓಂಕಾರದ ಶಂಖನಾದಕಿಂತ ಕಿಂಚಿತ್ ಊನ' ವಾಗಿಯೂ ಅವರಿಗೆ ಕಂಡಿದೆ.

ಭಾವವೂ ಬೇಂದ್ರೆಯವರಿಗೆ ನಾದವಾಗಿಯೇ ಕಂಡಿದೆ. ಅವರ 'ಭಾವ–ಭಾಷೆ' ಎಂಬ ಕವಿತೆ 'ಮೂಕನಲು ಕಿವುಡನಲು ಮೌನಿಯಲು ನಾದವಿದೆ' ಎನ್ನುತ್ತದೆ. ಕೇಳುವ, ನುಡಿಯುವ, ಅರ್ಥೈಸಿಕೊಳ್ಳವ ಈ ಎಲ್ಲ ಕ್ರಿಯೆಗಳು ಮೌನವಾದರೂ ನಾದ ಇರುತ್ತದೆ. ಏಕೆಂದರೆ ಅದು ಅನಾದಿ.

ಕಣ್ಣಿಗು ಅದು ಕಾಣಿಸದು
ಕಿವಿಗೂ ಅದು ಕೇಳಿಸದು
ಆದರೂ ಸಂವೇದ್ಯ...
ಅಲ್ಲದು ತಾನಲೆ ಅಲೆಯಲಿ
ಇಲ್ಲದ ಹಿರಿ ಬಯಲಿನಲಿ
ಕೊಳಲಿಲ್ಲದ ವೇಣುವನ
ಬೆರಳರಿಯದ ವೀಣಾಸ್ವನ.. (ಅಣುಸಂಗೀತ)

ಅಣುಅಣುವಿನಲ್ಲೂ ನಾದವಿದೆ. ಆದರೆ ಅದು ಬಾಹ್ಯ ಕಣ್ಣು, ಕಿವಿಗಳಿಗೆ ಎಟುಕದ್ದು. ಅತ್ಯಂತ ಸೂಕ್ಷ್ಮ ಇರುವಿಕೆಯನ್ನು 'ಅಣುಸಂಗೀತ' ಕವಿತೆ ರೂಪಕಾತ್ಮಕವಾಗಿ ಕಟ್ಟಿಕೊಟ್ಟಿದೆ. ಕೊಳಲಿನ ಹಂಗಿಲ್ಲದೆಯೂ, ಬೆರಳಿನ ನೆರವಿಲ್ಲದೆಯೂ ಆ ಸಂಗೀತ ಇರುತ್ತದೆ. ಇರುವು ಮೈದೋರುವ ಮೂಲಕ ನಮ್ಮ ಅರಿವಿಗೆ ಬರಲಷ್ಟೇ ನಮಗೆ ಮಾಧ್ಯಮಗಳು ಬೇಕು.ದೇಹ ಅಂಥ ವ್ಯಕ್ತ ಮಾಧ್ಯಮ. ಪ್ರಜ್ಞೆಯ ಅವ್ಯಕ್ತ ಹರಿವು ಈ ದೇಹಮಾಧ್ಯಮದಲ್ಲೇ ಚಲಿಸುವುದು ಸೋಜಿಗ.ಇದನ್ನು ಬೇಂದ್ರೆ ಮತ್ತೆಮತ್ತೆ ಸಂಗೀತದ ಪರಿಭಾಷೆಯಲ್ಲೇ ಕಾಣಿಸುತ್ತಹೋಗುತ್ತಾರೆ. ಮೃದಂಗ, ಕೊಳಲು, ರುದ್ರವೀಣೆಗಳೆಲ್ಲ ಸಂದರ್ಭಾನುಸಾರಿಯಾಗಿ ರೂಪಕಗಳಾಗುತ್ತವೆ.

ಅಂತರಂಗದಾ ಮೃದಂಗ ಅಂತು ತೋಂ ತನಾನಾ
ಚಿತ್ತ ತಾಳ ಬಾರಿಸುತ್ತಲಿತ್ತು ಝಂಝುಣಾಣಾ
ನೆನವು ತಂತಿ ಮೀಟುತಿತ್ತು ತಂತನನ ತಾನಾ.. (ಕಣ್ಣ ಕಾಣಿಕೆ)

ಹಲವು ಜನುಮಗಳಿಂದ ಹರಿದುಬರುವ ಈ ಪ್ರಜ್ಞೆಯ ನದಿಯು ನಾನು ನೀನು ಎಂಬ ವಿಭಜನೆಗಳನ್ನೇ ಇಲ್ಲವಾಗಿಸಿ ಏಕನಾದದಲ್ಲಿ ಜೀವಗಳನ್ನು ಕಟ್ಟುತ್ತದೆ. ಆ ಆದಿ ಆಧಾರದಿಂದ ಕಳಚಿಕೊಂಡ ಮನುಷ್ಯ ಪ್ರಜ್ಞೆ ಮತ್ತೆ ಆ ಮಹತ್ತಿನೊಂದಿಗೆ ಒಂದಾಗಲು ತಹತಹಿಸುವ ತಳಮಳದ ಎಳೆಗಳು ಕಣ್ಣಕಾಣಿಕೆ ಕವಿತೆಯಲ್ಲಿವೆ. ನಾನು ನೀನೆಂಬುದು ಅಳಿದು ಹೋಗುವಂತೆ ಕೂಡಬೇಕೆಂಬ ಮಿಲನದ ಉತ್ಕಟತೆ ಹಾಗೂ ವಿರಹದ ತೀವ್ರತೆಯನ್ನು ಅವರು ಶೃಂಗಾರ ಭಕ್ತಿ ಕಾವ್ಯಗಳಲ್ಲಿ ರಸನೇತ್ರದಿಂದ ವರ್ಣಿಸಿದರೆ,

ಇಲ್ಲಿ ಅದನ್ನು ಚಿತ್ತದ ಅನೂಹ್ಯ ನಾದವಾಗಿ ಕೆತ್ತುತ್ತಾರೆ. "ನಿನ್ನ ಕೊಳಲಹುದು ಈ ನನ್ನ ಕೊರಳು" ಎಂಬ ಅವರ ನುಡಿ ನಾದದ ಹಾದಿಯಲ್ಲಿ ಪಯಣಿಸಿ ಈ ಅಭೇದವನ್ನು ಕಾಣುವ ಕಣ್ಣು ಕೊಡುತ್ತದೆ. ಅವರ ಕಾವ್ಯದ ನಾದಲೀಲೆಗೆ ನಮ್ಮನ್ನು ಒಳಗುಮಾಡುತ್ತದೆ.

ಪರಾಮರ್ಶನ ಗ್ರಂಥಗಳು

1. ಕೀರ್ತಿನಾಥ ಕುರ್ತಕೋಟಿ, ದ.ರಾ. ಬೇಂದ್ರೆ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, 1990
2. ಗೌರೀಶ ಕಾಯ್ಕಿಣಿ, ಕಂಪಿನ ಕರೆ, ಸಮಾಜ ಪುಸ್ತಕಾಲಯ ಧಾರವಾಡ, 1980
3. ಢೇರೆ, ರಾ.ಚಿಂ., ದತ್ತ ಸಂಪ್ರದಾಯದ ಇತಿಹಾಸ, ಅಲ್ಲಮಪ್ರಭು ಜನಕಲ್ಯಾಣ ಸಂಸ್ಥೆ, ಚಿಂಚಣಿ 2009.
4. ನಾರಾಯಣಾಚಾರ್ಯ, ಕೆ.ಎಸ್. ಬೇಂದ್ರೆ ಕಾವ್ಯದಲ್ಲಿ ಅಧ್ಯಾತ್ಮದ ನೆಲೆ ಹಾಗೂ ಆರ್ಷ ದೃಷ್ಟಿ, ಶ್ರೀಮಾತಾ ಪ್ರಕಾಶನ ಧಾರವಾಡ, 1990
5. ರಾಜೇಂದ್ರ ಚೆನ್ನಿ. ಕರುಳಬಳ್ಳಿಯ ಸೊಲ್ಲು, ಅಭಿನವ, ಬೆಂಗಳೂರು. 2001
6. ವಾಮನ ಬೇಂದ್ರೆ(ಸಂ), ಔದುಂಬರಗಾಥೆ ಸಂಪುಟಗಳು, ವರಕವಿ ದ.ರಾ.ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ, 2003

❖❖❖

ದಣಿವನು ಇಂಗಿಸೆ ಮಲಗಿಹ
ಪಥಿಕನ ಗೊರಕೆಯ ದನಿ ಕೇಳಿ
ಜೋಲಾಡುತಿಹ ಬಾವಲಿ ಕಣ್ಣಲಿ
ಕತ್ತಲ ಬಯಕೆಯು ಅರಳಿ

ರಾಷ್ಟ್ರನಿರ್ಮಾಣದಲ್ಲಿ ಭಾಷೆಯ ಪಾತ್ರ

ಡಾ. ಎಚ್.ಎಮ್. ಚನ್ನಪ್ಪಗೋಳ
ಸಹಪ್ರಾಧ್ಯಾಪಕರು, ಕನ್ನಡ ವಿಭಾಗ
ಕೆ.ಎಲ್.ಇ. ಸಂಸ್ಥೆಯ ಲಿಂಗರಾಜ ಮಹಾವಿದ್ಯಾಲಯ, ಬೆಳಗಾವಿ–590001

ರಾಷ್ಟ್ರ ಎಂಬುದು ಕೇವಲ ಒಂದು ಭೂಪ್ರದೇಶವಲ್ಲ, ಕೇವಲ ಜನಸಂಖ್ಯೆ ಮತ್ತು ಅದನ್ನು ಆಳುವ ಆಡಳಿತ ವರ್ಗ ಅಥವಾ ಕೇವಲ ಒಂದು ಗಡಿ ಪ್ರದೇಶವನ್ನು ಹೊಂದಿರುವ ಭೂಮಿಯಲ್ಲ.

ರಾಷ್ಟ್ರವೆಂದರೆ ಏನು? ಎಂಬ ಮೂಲ ಪ್ರಶ್ನೆಯ ಬಗ್ಗೆಯೇ ಇನ್ನೂ ಅನೇಕರಲ್ಲಿ ಗೊಂದಲವಿದೆ. ಆ ಕುರಿತು ಸರಿಯಾದ ಚಿಂತನೆ ನಡೆಯಬೇಕಿದೆ. ರಾಜ್ಯವೂ ರಾಜ್ಯಪದ್ಧತಿಯೂ ಅವಶ್ಯಕತೆಗೆ ತಕ್ಕಂತೆ ರೂಪುಗೊಳ್ಳುತ್ತದೆ, ಮತ್ತೆ ಬೇಡವೆಂದಾಗ ಬದಲಾಗುತ್ತದೆ. ಆದರೆ ರಾಷ್ಟ್ರವೆನ್ನುವುದಕ್ಕೆ ಒಂದು ಪಾರಂಪರಿಕ ಸ್ವತ್ವವಿರುತ್ತದೆ. ರಾಷ್ಟ್ರಕ್ಕೂ ಅದರ ಜನ ಸಮೂಹಕ್ಕೂ ನಡುವೆ ಇರುವುದು ಭೌಗೋಳಿಕ–ರಾಜಕೀಯ ಪರಿಸ್ಥಿತಿಗಳನ್ನು ಮೀರಿದ ಮಾತಾ–ಪುತ್ರ ಸದೃಶವಾದ ಸಂಬಂಧ. ಅಂತೆಯೇ ನಮಗೆ ಭಾರತವೆಂದರೆ ಕೇವಲ ಒಂದು ಭೂಮಿಯಲ್ಲ. ಇಲ್ಲಿರುವುದು ಭಾವನಾತ್ಮಕ ಸಂಬಂಧ. ಆದ್ದರಿಂದಲೇ ಭಾರತವೆಂಬುದು ಒಂದು ಸಾಂಸ್ಕೃತಿಕವಾದ ರಾಷ್ಟ್ರಕಲ್ಪನೆ ಎನ್ನುತ್ತೇವೆ.

ರಾಷ್ಟ್ರ ಎಂಬುದು ಒಂದು ಜೀವಂತ ಅಸ್ತಿತ್ವ, ಶತಶತಮಾನಗಳ, ಸಾವಿರಾರು ವರ್ಷಗಳ ವಿಕಸನದ ಹಾದಿಯಲ್ಲಿ ರಾಷ್ಟ್ರ ಎಂಬುದು ವಿಕಾಸಗೊಳ್ಳುತ್ತದೆ. ಯಾವುದೇ ಒಂದು ನಿರ್ದಿಷ್ಟ ಭೂ–ಭಾಗದಲ್ಲಿ ವಾಸಿಸುವ ಜನ ಸಮುದಾಯವು ಆ ಭೂ–ಭಾಗದೊಂದಿಗೆ ತಾದಾತ್ಮವನ್ನು ಅನುಭವಿಸತೊಡಗಿ ಜೀವನದ ವಿಶಿಷ್ಟ ರೀತಿ–ನೀತಿಗಳನ್ನು ಅನುಸರಿಸುತ್ತಾ ಸಮಾನವಾದ ಪರಂಪರೆ ಮತ್ತು ಮಹತ್ವಾಕಾಂಕ್ಷೆಗಳನ್ನು ಬೆಳೆಸಿಕೊಳ್ಳುತ್ತಾರೆ. ಸುಖ–ದುಃಖಗಳ ಸಮಾನ ಸ್ಮರಣೆ ಮತ್ತು ಶತ್ರು–ಮಿತ್ರರನ್ನು ಸಮಾನವಾಗಿ ಕಾಣುವ ಮನೋಧರ್ಮ ಬೆಳೆಯುತ್ತದೆ. ಹೀಗಾಗಿ ಅವರು ಪರಸ್ಪರ ಹಿತ ಬಂಧುಗಳ ಜಾಲದಿಂದ ಬೆಸೆಯಲ್ಪಡುತ್ತಾರೆ. ಸಂಘಟಿತರಾಗಿ ತಮ್ಮದೇ ಆದ ಶ್ರೇಷ್ಠ ಜೀವನ ಮೌಲ್ಯಗಳನ್ನು ನಿರೂಪಿಸಿಕೊಳ್ಳುವ ಪ್ರಯತ್ನ ನಡೆಸುತ್ತಾರೆ. ಆ ಪರಂಪರೆಯನ್ನು ಮುಂದುವರಿಸುತ್ತಿರುವವರು ಮತ್ತು ಆ ಪರಂಪರೆಯನ್ನು ಅತ್ಯಂತ ತೇಜಸ್ವಿಯಾಗಿ ಪರಿವರ್ತಿಸುವುದಕ್ಕಾಗಿ ತಪ, ತ್ಯಾಗ, ಬಲಿದಾನ ಮಾಡಿದ ಮಹಾಪುರುಷರ ನಡುವೆ ಒಂದು ಭಾವ–ಬಂಧನ ಏರ್ಪಡಿಸುತ್ತದೆ. ಈ ಭಾವನಾತ್ಮಕವಾದ ಸ್ವರೂಪವು 'ರಾಷ್ಟ್ರ–ಎಂಬ ಕಲ್ಪನೆಗೆ ಅನಿವಾರ್ಯ.

ಇನ್ನು ಭಾಷೆಯ ವಿಚಾರಕ್ಕೆ ಬರುವುದಾದರೆ ಭಾಷೆ ಎಂಬುದು ಒಂದು ಸಂವಹನ ಮಾಧ್ಯಮವಾಗಿದೆ. ಜಗತ್ತಿನಲ್ಲಿ ಅನೇಕ ಭಾಷೆಗಳಿವೆ; ಆಯಾ ಭಾಗಕ್ಕೆ ತಕ್ಕಂತೆ ಅವರವರು ತಮ್ಮದೇ ಆದ ಭಾಷೆಯನ್ನು ಮಾಡಿಕೊಳ್ಳುತ್ತಾರೆ. ಭಾಷೆ ಇಂದು ಮನುಷ್ಯನ ಪ್ರಾಣದಷ್ಟೇ ಪ್ರಮುಖವಾಗಿದೆ. ಭಾಷೆಯ ಮಹತ್ವವನ್ನು ಕುರಿತು ದಂಡಿ ಎಂಬ ಮಹಾಶಯ 'ಭಾಷೆ ಎಂಬ ಬೆಳಕು ಬೆಳಗದೆ ಇದ್ದರೆ ಜಗತ್ತೆಲ್ಲ ಕತ್ತಲೆಯಿಂದ

ಕೂಡಿರುತ್ತಿತ್ತು' ಎಂದಿದ್ದಾನೆ. ಇದರಿಂದ ನಮಗೆ ಮನುಷ್ಯನ ಪ್ರಗತಿಗೆ, ರಾಷ್ಟ್ರದ ಅಭಿವೃದ್ಧಿಗೆ ಭಾಷೆಯು ಬಹಳ ಮುಖ್ಯ ಎಂದು ವೇದ್ಯವಾಗುತ್ತದೆ. ಇಂದು ಭಾಷೆ ಕೇವಲ ಸಂವಹನ ಮಾಧ್ಯಮವಾಗಿ ಉಳಿದಿಲ್ಲ; ಅದು ಕಾವ್ಯಗಳ ಮೂಲಕವೂ, ಕತೆ, ಕಾದಂಬರಿ, ನಾಟಕ, ಪ್ರಬಂಧಗಳ ಮೂಲಕವೂ ಮನುಷ್ಯನ ಭಾವನೆಗಳಿಗೆ ಶಬ್ದ ರೂಪ ಕೊಡುವ ಮಾಧ್ಯಮವಾಗಿ ಮಹತಿಯನ್ನು ಪಡೆದಿರುತ್ತದೆ. ಹಾಗಾಗಿ ಭಾಷೆ ರಾಷ್ಟ್ರದ ನಿರ್ಮಾಣದಲ್ಲಿ ಹೇಗೆ ಪಾತ್ರ ವಹಿಸುತ್ತದೆ ಎಂಬುದನ್ನು ತಿಳಿಯಬೇಕು.

ಮನುಷ್ಯ ಪ್ರಗತಿ ಹೊಂದಲು ಕೇವಲ ಕಾವ್ಯಗಳು ಇದ್ದರೆ ಸಾಕಾಗುವುದಿಲ್ಲ. ರಾಷ್ಟ್ರ ಅಭಿವೃದ್ಧಿ ಹೊಂದಲು ವಿಚಾರ ಶಕ್ತಿಯನ್ನು ಬಳಸಬೇಕಾಗುತ್ತದೆ, ವೈಜ್ಞಾನಿಕವಾಗಿ ಚಿಂತಿಸಬೇಕಾಗುತ್ತದೆ, ಶಾಸ್ತ್ರೀಯವಾಗಿ ಆಲೋಚಬೇಕಾಗುತ್ತದೆ. ಅವುಗಳನ್ನೆಲ್ಲ ಅಭಿವ್ಯಕ್ತಿ ಮಾಡಲು ಕೂಡ ಭಾಷೆ ಬಹು ಮುಖ್ಯವಾದ ಸಾಧನವಾಗಿದೆ. ಇವೆಲ್ಲಕ್ಕೆ ಶಿಕ್ಷಣವೇ ಮೂಲ. ಭಾರತದಂತಹ ಬಹುಭಾಷೆಗಳನ್ನು ಹೊಂದಿದ ದೇಶದಲ್ಲಿ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಭಾಷೆಯ ಪಾತ್ರ ಹೇಗೆ ಬಹು ಮುಖ್ಯವಾಗುತ್ತದೆ ಎಂಬುದನ್ನು ಅರಿಯಬೇಕು. ಏಕೆಂದರೆ ವಿದೇಶಗಳಾದ ಇಂಗ್ಲೆಂಡ್, ಅಮೇರಿಕಾ, ಚೀನಾ, ಜಪಾನ ಇಂತಹ ದೇಶಗಳಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ಭಾಷೆ ಒಂದು ರೀತಿಯಿಂದ ಪ್ರಮುಖ ಸ್ಥಾನವಹಿಸಿದರೂ ಅವೆಲ್ಲ ಏಕ ಭಾಷಾ ರಾಷ್ಟ್ರವಾಗಿರುವುದರಿಂದ ಭಾಷೆಯೊಂದು ಸವಾಲಿನ ವಿಷಯವೇ ಆಗುವುದಿಲ್ಲ. ಇನ್ನು ರಷ್ಯಾದಂತಹ ಬಹುಭಾಷೆ ಹೊಂದಿದ ರಾಷ್ಟ್ರದಲ್ಲೂ ಕೂಡ ಅದು ಸವಾಲಾಗಿಲ್ಲ ಏಕೆಂದರೆ ಅಲ್ಲಿಯ ಉಳಿದೆಲ್ಲ ಭಾಷೆಗಳು ನಮ್ಮಲ್ಲಿಯಂತೆ ಬಹಳಷ್ಟು ಪ್ರಬಲ ಭಾಷೆಗಳಲ್ಲ. ರಷಿಯನ್ ಭಾಷೆ ಅಲ್ಲಿಯ ಪ್ರಮುಖ ಭಾಷೆಯಾಗಿದೆ.

ಭಾರತದಂತಹ ಪ್ರಮುಖ ಬಹುಭಾಷೆಗಳನ್ನು ಹೊಂದಿದ ದೇಶ. ವಿವಿಧ ಆಚಾರ–ವಿಚಾರಗಳನ್ನು ಹೊಂದಿದ, ವಿವಿಧ ಸಂಸ್ಕೃತಿ, ಅನೇಕ ಭಾಷೆ, ನಡೆ–ನುಡಿ, ಆಹಾರ–ವಿಹಾರ, ಉಡಿಗೆ–ತೊಡಿಗೆ, ಹೀಗೆ ವೈವಿಧ್ಯಮಯವಾಗಿರುವ ದೇಶ ಭಾರತವಾಗಿದೆ. ಅಲ್ಲದೆ ಬಹುಪಕ್ಷೀಯ ಆಡಳಿತ ಪದ್ಧತಿಯನ್ನು ಹೊಂದಿದ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಇಷ್ಟೆಲ್ಲ ಸವಾಲುಗಳ ಮಧ್ಯದಲ್ಲಿಯೂ ಭಾರತದಲ್ಲಿ ಈ ಹಿಂದೆ ಭಾಷೆಯ ಮೂಲಕ ಐಕ್ಯತೆಯೂ, ರಾಷ್ಟ್ರೀಯ ಪ್ರಜ್ಞೆಯೂ ಹೇಗೆ ಮೂಡಿತ್ತು ಎಂಬುದನ್ನು ಒಮ್ಮೆ ಅವಲೋಕಿಸಬಹುದಾಗಿದೆ.

ಈ ಹಿಂದೆಯೂ ಅಂದರೆ ಪ್ರಾಚೀನ ಭಾರತದಲ್ಲಿಯೂ ಎಲ್ಲ ಪ್ರಾಂತಗಳಲ್ಲಿಯೂ ಅವರವರ ಪ್ರಾಂತ ಭಾಷೆ ಅವರವರ ಸಂವಹನ ಭಾಷೆಯಾಗಿತ್ತು. ಅಷ್ಟೇ ಅಲ್ಲ, ಅವರ ವ್ಯವಹಾರಿಕ ಭಾಷೆಯಾಗಿ; ಭಾವನೆಗಳನ್ನು ವ್ಯಕ್ತಪಡಿಸುವ ಕಾವ್ಯಭಾಷೆಯಾಗಿ ಅತಿ ಪ್ರಮುಖ ಸ್ಥಾನದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ಅಂದರೆ ಜನಸಾಮಾನ್ಯರ ವ್ಯವಹಾರ, ಸಂವಹನ, ಮನರಂಜನೆ ಹೀಗೆ ಅಲ್ಲದೆ ಕಾವ್ಯ ಭಾಷೆಯೂ ಆಗಿ ಅವರ ಮಾತೃಭಾಷೆ ಅಥವಾ ಆಡು ಭಾಷೆಯೇ ಕಾರ್ಯ ನಿರ್ವಹಿಸುತ್ತಿತ್ತು. ಆದರೆ ರಾಷ್ಟ್ರೀಯತೆಯ ಪ್ರಶ್ನೆ ಬಂದಾಗ ಇವುಗಳನ್ನೆಲ್ಲ ಮೀರಿ ಭಾರತವನ್ನು ಎಲ್ಲ ಪ್ರಾಂತಗಳನ್ನು ಬೆಸೆಯುವುದಕ್ಕೆ ಸಂಸ್ಕೃತವು ಬೌದ್ಧಿಕ ಭಾಷೆಯಾಗಿ, ಶಾಸ್ತ್ರಭಾಷೆಯಾಗಿ, ವಿಜ್ಞಾನದ ಭಾಷೆಯಾಗಿ, ಅಭಿವೃದ್ಧಿಯ ಭಾಷೆಯಾಗಿ ಪ್ರಮುಖ ಪಾತ್ರವನ್ನು ವಹಿಸಿದ್ದಿತು. ಶಿಕ್ಷಣದ ಪ್ರಮುಖ ಭಾಷೆಯೇ ಸಂಸ್ಕೃತವಾಗಿದ್ದಿತು.

ತೀರ ಪ್ರಾಚೀನ ಕಾಲದ ಇತಿಹಾಸವನ್ನು ಒಮ್ಮೆ ಅವಲೋಕಿಸಿದರೆ ಮನುಷ್ಯನ ಆರೋಗ್ಯದ ಕಾಳಜಿಯನ್ನು ವಹಿಸುವ ಆಯುರ್ವೇದ, ಯೋಗದಂತಹ ಅನೇಕ ವಿದ್ಯೆಗಳು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದ್ದವು. ಅದರಂತೆಯೇ ಸೂಪಶಾಸ್ತ್ರ, ಗಜಶಾಸ್ತ್ರ, ವ್ಯಾಕರಣ, ಛಂದಸ್ಸು, ಮೀಮಾಂಸೆ, ಅಲಂಕಾರಶಾಸ್ತ್ರ, ನೃತ್ಯಶಾಸ್ತ್ರ ರಸಾಯನಶಾಸ್ತ್ರ, ಭೌತಶಾಸ್ತ್ರ ಹೀಗೆ ಅನೇಕ ಪ್ರಮುಖ ಶಾಸ್ತ್ರ ಕೃತಿಗಳು ಸಂಸ್ಕೃತದಲ್ಲಿಯೇ ಬರೆಯಲ್ಪಟ್ಟಿದ್ದವು. ಮನುಷ್ಯನ ಮನಸ್ಸನ್ನು ಅರಿಯುವ ಮನಶಾಸ್ತ್ರದಿಂದ ಹಿಡಿದು ಆಚಾರ ವಿಚಾರ ಆಗು–ಹೋಗುಗಳನ್ನು ನೀತಿ–ನಿಯಮಗಳನ್ನು ತಿಳಿಸುವ ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ, ಕಾನೂನು ಶಾಸ್ತ್ರ, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರ, ಔಷಧ ವಿಜ್ಞಾನ, ಜ್ಯೋತಿಷ್ಯ ಶಾಸ್ತ್ರ, ಖಗೋಳ ವಿಜ್ಞಾನ, ಸಂಗೀತ, ನೃತ್ಯ ಶಾಸ್ತ್ರ, (ಭರತನ ನಾಟ್ಯಶಾಸ್ತ್ರ) ಶಿಲ್ಪಕಲೆ, ಭವಿಷ್ಯ ವಿಜ್ಞಾನ, ಕಾಮಶಾಸ್ತ್ರ, ತತ್ವಶಾಸ್ತ್ರ, ಚೋರಶಾಸ್ತ್ರ, ಕರಪಟಶಾಸ್ತ್ರ, ಅಲ್ಲದೆ ರಚನಾಶಾಸ್ತ್ರ ಹಾಗೆ ಇವತ್ತಿನ ಸಿವಿಲ್ ಇಂಜಿನಿಯರಿಂಗ್ ನಂತಹ ಅನೇಕ ಶಾಸ್ತ್ರ ಕೃತಿಗಳು ಸಂಸ್ಕೃತದಲ್ಲಿಯೇ ಅನೇಕ ಗ್ರಂಥಗಳಲ್ಲಿ ಬರೆಯಲ್ಪಟ್ಟಿದ್ದವು. ಇಂತಹ ಅನೇಕ ಕೃತಿಗಳು ಮಾನವನ ಪ್ರಗತಿಗೆ ಪೂರಕವಾಗಿ ರಾಷ್ಟ್ರ ನಿರ್ಮಾಣಕ್ಕೂ ಕಾರಣವಾಗಿದ್ದವು.

ಅಂತೆಯೇ ನಲಂದ, ತಕ್ಷಶಿಲಾದಂತಹ ವಿಶ್ವವಿದ್ಯಾಲಯಗಳಲ್ಲಿ ಇದ್ದ ಅನೇಕ ಸಾಹಿತ್ಯಕ, ವೈಜ್ಞಾನಿಕ, ವೈಚಾರಿಕ ಹಾಗೆ ಶಾಸ್ತ್ರಬದ್ಧ ವಿಷಯಗಳನ್ನು ಒಳಗೊಂಡ ಅನೇಕ ಕೃತಿಗಳು ಸಂಸ್ಕೃತದಲ್ಲಿ ಉಪಲಬ್ಧವಿದ್ದವು. ಅವುಗಳೆಲ್ಲದರ ಗ್ರಂಥ ಭಂಡಾರಗಳನ್ನು ವಿಶ್ವವಿದ್ಯಾಲಯದ ದೊಡ್ಡ ದೊಡ್ಡ ಗ್ರಂಥಾಲಯಗಳಲ್ಲಿ ಇಟ್ಟಿದ್ದರು. ಅಂತಹ ಅನೇಕ ಗ್ರಂಥಗಳನ್ನು ದೇಶ–ವಿದೇಶಿಗರು ಪಂಡಿತರು ಅಧ್ಯಯನ ಮಾಡಿ ಆ ಮೂಲಕ ರಾಷ್ಟ್ರದ ಪ್ರಗತಿಗೆ ತಮ್ಮದೇ ಆದ ಕಾಣಿಕೆಯನ್ನು ಸಲ್ಲಿಸುತ್ತಿದ್ದರು.

ಪಾಳಿ–ಪ್ರಾಕೃತ ಭಾಷೆಗಳು ಕೂಡ ಪ್ರಾಚೀನ ಕಾಲದಲ್ಲಿ ಭಾರತದಾದ್ಯಂತ ಪ್ರಚಲಿತವಾಗಿದ್ದುಧ್ಯಾತ್ಮ ಮತ್ತು ಕಾವ್ಯಕ್ಷೇತ್ರದಲ್ಲಿ ಬಳಕೆಯಾಗಿ ರಾಷ್ಟ್ರನಿರ್ಮಾನದಲ್ಲಿ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದವು.

ಇಂದು ಸಂಸ್ಕೃತ ಎಂದರೆ ಅದು ಕೇವಲ ಬ್ರಾಹ್ಮಣರ ಭಾಷೆಯಾಗಿ ಕಾಣುತ್ತದೆ. ಪ್ರಾಕೃತ ಜೈನರ ಭಾಷೆ ಎಂದುಕೊಳ್ಳುತ್ತೇವೆ. ಪಾಳಿ ಬೌದ್ಧರದು ಮಾತ್ರ ಎನ್ನುತ್ತೇವೆ. ಆದರೆ, ಇವೆಲ್ಲ ಎಲ್ಲ ಭಾರತೀಯರ ಭಾಷೆಗಳು. ಪ್ರಾಚೀನ ಕಾಲದಲ್ಲಿ ಹುಟ್ಟಿನಿಂದ ಬ್ರಾಹ್ಮಣರಾದವರು ಮಾತ್ರ ಸಂಸ್ಕೃತವನ್ನು ಕಲಿಯುತ್ತಿದ್ದರೆ? ಎಂಬ ಪ್ರಶ್ನೆ ಇಲ್ಲಿ ಮೂಡುತ್ತದೆ, ಆದರೆ ನಾವು ಇತಿಹಾಸವನ್ನು ಗಮನಿಸಿದಾಗ ಮಹರ್ಷಿ ವಾಲ್ಮೀಕಿ, ಮಹರ್ಷಿ ವ್ಯಾಸ, ಕಾಳಿದಾಸ, ಇಂತಹ ನಾವಿಂದು ಕರೆಯುವ ಕೆಳವರ್ಗದಲ್ಲಿ ಹುಟ್ಟಿದ ಮುನಿಗಳು ಕೂಡ ಹೇಗೆ ಸಂಸ್ಕೃತವನ್ನು ಕಲಿತು ಗ್ರಂಥ ರಚನೆ ಮಾಡಿದರು ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ ಹನ್ನೆರಡನೆಯ ಶತಮಾನದ ಅನೇಕ ವಚನಕಾರರಿಗೆ ಸಂಸ್ಕೃತ ಭಾಷೆಯ ಆಳವಾದ ಅಧ್ಯಯನ ಇತ್ತು ಎಂಬುದು ಅನೇಕ ವಚನಕಾರರ ವಚನಗಳನ್ನ ಅವಲೋಕಿಸಿದಾಗ ನಮಗೆ ವೇದ್ಯವಾಗುತ್ತದೆ. ಕನಕದಾಸರೂ ಸಂಸ್ಕೃತ ಪಾರಂಗತರಾಗಿದ್ದರು. ಅಲ್ಲದೇ ಹತ್ತನೇ ಶತಮಾನದ ಪಂಪ, ಪೊನ್ನ, ರನ್ನ ಆ ಮೊದಲಿನ ಕವಿರಾಜಮಾರ್ಗಕಾರ ಇವರೆಲ್ಲರೂ ಸಂಸ್ಕೃತ ಅಧ್ಯಯನ ಮಾಡಿದ್ದಲ್ಲದೇ ಆ ಭಾಷೆಯಲ್ಲಿಯೂ ಪಾಂಡಿತ್ಯವನ್ನು ಗಳಿಸಿದ್ದರು, ಎಂಬುದು ತಿಳಿಯುತ್ತದೆ. ಅಲ್ಲದೇ

ನಾಗವರ್ಮ, ಜಯಕೀರ್ತಿಯಂತಹ ಕನ್ನಡದ ಶಾಸ್ತ್ರ ಕೃತಿಕಾರರೂ ಸಂಸ್ಕೃತದಲ್ಲಿಯೇ ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ಕೇಶಿರಾಜ ಕೂಡ ತನ್ನ ವ್ಯಾಕರಣವನ್ನು ಸಂಸ್ಕೃತ ವ್ಯಾಕರಣ ಗ್ರಂಥವನ್ನು ಆಧಾರವಾಗಿರಿಸಿಕೊಂಡೇ ಬರೆದಿದ್ದಾನೆ. ಅಂದರೆ ಯಾರಿಗೆ ನಿಜವಾಗಿಯೂ ಸಂಸ್ಕೃತವನ್ನು ಕಲಿಯಬೇಕೆಂಬ ಅಪೇಕ್ಷೆ ಇತ್ತೋ ಅವರಿಗೆ ಕಲಿಯಲು ಅದು ಲಭ್ಯವಾಗಿತ್ತು ಎಂದು ತಿಳಿಯಬಹುದು.

ಹಾಗಾಗಿಯೇ ಭಾರತವು ಸಂಸ್ಕೃತಿಕವಾಗಿ ಮತ್ತು ಭಾವನಾತ್ಮಕವಾಗಿ ಒಂದು ರಾಷ್ಟ್ರವಾಗಿದ್ದಿತು ಎಂಬುದನ್ನು ನಾವು ತಿಳಿಯಬೇಕು. ಇನ್ನು ಸ್ಥಳೀಯ ಆಡಳಿತ, ವ್ಯವಹಾರ, ಸಂವಹನ, ಸಾಹಿತ್ಯ, ಶಿಕ್ಷಣ ಇತ್ಯಾದಿಗಳಿಗಾಗಿ ಆಯಾ ಪ್ರಾಂತ ಭಾಷೆಯೇ ಅಲ್ಲಿ ಪ್ರಮುಖ ಸ್ಥಾನದಲ್ಲಿ ಹೊಂದಬೇಕು. ಆ ಮೂಲಕವೇ ಎಲ್ಲ ಚಟುವಟಿಕೆಗಳೂ ನಡೆಯಬೇಕು. ಕರ್ನಾಟಕದಲ್ಲಿ ಕನ್ನಡ, ತಮಿಳುನಾಡಿನಲ್ಲಿ ತಮಿಳು, ಮಹಾರಾಷ್ಟ್ರದಲ್ಲಿ ಮರಾಠಿ, ಬಂಗಾರದಲ್ಲಿ ಬಂಗಾಲಿ, ಹಾಗೆ ಗುಜರಾತ್‌ದಲ್ಲಿ ಗುಜರಾತಿ ಹೀಗೆ ಅವರವರ ಪ್ರಾಂತ ಭಾಷೆಯೇ ಅಲ್ಲಿ ಪ್ರಮುಖ ಸ್ಥಾನವನ್ನು ಪಡೆಯಬೇಕು ಆ ಮೂಲಕವೇ ಎಲ್ಲ ವ್ಯವಹಾರ ಆಡಳಿತ ನಡೆಯಬೇಕು.

ಈ ಆಧುನಿಕ ಕಾಲಘಟ್ಟದಲ್ಲಿ ಸ್ಥಳೀಯ ಭಾಷೆಗಳನ್ನು ಗಟ್ಟಿಗೊಳಿಸುತ್ತಲೇ ನಾವು ಭಾರತವನ್ನು ಗಟ್ಟಿಗೊಳಿಸಬೇಕಿದೆ. ಸಂಸ್ಕೃತ, ಪ್ರಾಕೃತದಂತಹ ವಿವಿಧ ಭಾರತಸಾಮಾನ್ಯ ಭಾಷೆಗಳಲ್ಲಿ ರಚಿತವಾದ ಪ್ರಾಚೀನ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳಬೇಕು; ನಮ್ಮ ಪ್ರಾದೇಶಿಕ ಭಾಷೆಗಳಿಗೆ ಅನುವಾದಿಸಿಕೊಳ್ಳಬೇಕು. ಆ ಮೂಲಕ ಭಾಷೆಗಳ ನಡುವಿನ ಬಾಂಧವ್ಯ ಬೆಳೆದರೆ ದೇಶದ ಒಗ್ಗಟ್ಟೂ ಬೆಳೆಯುತ್ತದೆ.

❖❖❖

ಹೂಮಲರಿನ ತರುರಥ ಮೆರೆಯುತಿದೆ
ಹೂವೆಲರಿನ ಕಂಪನು ಹರಡುತಿದೆ
ಪಲ್ಲವಗಳ ಪಿಸುಮಾತಿನ ದನಿಯನು
ಬೆಳುಮುಗಿಲಗು ತಲುಪಿಸಿದೆ

ರಂಗ ಚರಿತ್ರೆಯನ್ನು ದಾಖಲಿಸುವ ಸಿದ್ದಲಿಂಗ ಪಟ್ಟಣಶೆಟ್ಟಿ ಅವರ 'ರಂಗಾಯಣ'

ಡಾ. ರಘುನಂದನ್ ಬಿ.ಆರ್.
ಸಹ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು

'ರಂಗಾಯಣ' ಸಿದ್ದಲಿಂಗ ಪಟ್ಟಣಶೆಟ್ಟಿ ಅವರು 1995ರಲ್ಲಿ ಪ್ರಕಟಿಸಿದ ಕೃತಿ. 95ಕ್ಕಿಂತ ಹಿಂದೆ 15–20 ವರ್ಷಗಳ ಕಾಲ ರಂಗಭೂಮಿಯನ್ನು ಕುರಿತು ಬರೆದ ಲೇಖನಗಳ ಸಂಗ್ರಹವಿದು. ಕನ್ನಡಕ್ಕೆ ಹಲವು ಉತ್ತಮ ನಾಟಕಗಳನ್ನು ಕೊಟ್ಟ ಸಿದ್ದಲಿಂಗ ಪಟ್ಟಣಶೆಟ್ಟಿಯವರು ರಂಗಭೂಮಿ ಕ್ಷೇತ್ರವನ್ನು ವಿವೇಚಿಸುವ, ವಿಮರ್ಶಿಸುವ ಕೆಲಸವನ್ನು ಶಕ್ತವಾಗಿ ಈ ಕೃತಿಯಲ್ಲಿ ಮಾಡಿದ್ದಾರೆ. ಸಾಹಿತ್ಯವನ್ನು, ಸಮಾಜವನ್ನು ವಿಮರ್ಶಿಸುವ ಮಾನದಂಡಗಳು, ರಂಗಭೂಮಿಯನ್ನು ಕುರಿತು ವಿಮರ್ಶಿಸುವಾಗ ಬದಲಾಗುತ್ತವೆ. ನಾಟಕವೆಂಬುದು ಮನರಂಜನ ಪಠ್ಯ ಮಾತ್ರ ಎಂಬ ನಿಲುವು ಸಮಾಜದಲ್ಲಿ ಇರುವಂತಹ ಕಾಲಘಟ್ಟದಲ್ಲಿ ನಾಟಕ ಅತ್ಯಂತ ಗಂಭೀರ ಅಧ್ಯಯನಕ್ಕೆ ಒಳಗಾಗಬೇಕಾದ ಮಾಧ್ಯಮ ಎಂಬುದಾಗಿ ಪರಿಗಣಿಸಿದ ಹಿರಿಯ ರಂಗ ವಿದ್ವಾಂಸರುಗಳಲ್ಲಿ ಸಿದ್ದಲಿಂಗಪಟ್ಟಣಶೆಟ್ಟಿಯವರು ಮುಖ್ಯರು. ರಂಗಕಲೆಯನ್ನು ಅತ್ಯಂತ ತಾತ್ವಿಕವಾಗಿ ಅವಲೋಕಿಸಿ 70–80ರ ದಶಕದ ನಾಟಕಗಳನ್ನು ಮತ್ತು ರಂಗಭೂಮಿ ರೂಪುಗೊಳ್ಳುತ್ತಿರುವ ವಿದ್ಯಮಾನವನ್ನು ಸೂಕ್ಷ್ಮ ಒಳನೋಟಗಳಿಂದ ಲೇಖಕರಾದ ಸಿದ್ದಲಿಂಗಪಟ್ಟಣಶೆಟ್ಟಿ ಅವರು ರಂಗಾಯಣ ಕೃತಿಯ ಲೇಖನಗಳಲ್ಲಿ ದಾಖಲಿಸಿದ್ದಾರೆ. ಈ ಕೃತಿಯು ಕನ್ನಡ ನಾಟಕ ಪರಂಪರೆಯ ಚಾರಿತ್ರಿಕ ದಾಖಲೆ ಎಂಬಂತೆಯೂ ತೋರುತ್ತದೆ. ಸಿದ್ದಲಿಂಗ ಪಟ್ಟಣಶೆಟ್ಟಿ ಅವರಿಗೆ ಸಾಹಿತ್ಯ ಕೃತಿಯನ್ನು ಮತ್ತು ರಂಗಕೃತಿಯನ್ನು ಸಾಂಸ್ಕೃತಿಕ, ಸಾಮಾಜಿಕ ಅಭಿವ್ಯಕ್ತಿಯಾಗಿ ನೋಡುವ ಮತ್ತು ರಂಗಭೂಮಿಯ ಕಲಾಭಿವ್ಯಕ್ತಿಯಾಗಿಯೂ ಕೂಡ ನೋಡಲು ಬೇಕಾದ ರಂಗಸಂವೇದನೆ ಇದ್ದ ಕಾರಣ ರಂಗಾಯಣದಂತಹ ಕೃತಿ ಪ್ರಕಟವಾಗಲು ಸಾಧ್ಯವಾಗುತ್ತದೆ.

ರಂಗಾಯಣ ಕೃತಿಯು ರಾಷ್ಟ್ರೀಯ ರಂಗಭೂಮಿ, ನಾಡಿನ ರಂಗಭೂಮಿ, ಪ್ರಾದೇಶಿಕ ರಂಗಭೂಮಿಯಿಂದ ಹಿಡಿದು ರಂಗಭೂಮಿಯ ಬಿಡಿ ಬಿಡಿ ಘಟಕಗಳಾದ ನಾಟಕ ಪ್ರಕಾರಗಳು, ನಿರ್ದೇಶಕ, ನಾಟಕಕಾರ, ಪ್ರೇಕ್ಷಕ ಸೇರಿದಂತೆ ಹಲವು ತಾಂತ್ರಿಕ ಅಂಶಗಳನ್ನು ಕುರಿತು ಚರ್ಚಿಸಲು ಮುಂದಾಗುತ್ತದೆ. ಈ ಸಮಗ್ರನೆಲೆ ರಂಗದ ಆಶಯದಲ್ಲಿ ಅಭಿವ್ಯಕ್ತಗೊಂಡಿರುವುದು ಅತ್ಯಂತ ಪ್ರಮುಖವಾದ ಸಂಗತಿಯಾಗಿದೆ. ಎಲ್ಲ ಕಾಲದಲ್ಲೂ ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕಾರಣ ಇತ್ಯಾದಿ ದೃಷ್ಟಿಯಿಂದ ಸ್ಥಳೀಯತೆ ಮತ್ತು ರಾಷ್ಟ್ರೀಯತೆ ಆಯಾ ಕಾಲಕ್ಕೆ ಅನುಗುಣವಾಗಿ ನಿರ್ವಚನಗೊಂಡಿದೆ. ಈ ಹಿನ್ನೆಲೆಯಲ್ಲಿ ರಂಗಾಯಣ ಕೃತಿಯಲ್ಲಿ ರಾಷ್ಟ್ರೀಯ ರಂಗಭೂಮಿ, ಕನ್ನಡ ರಂಗಭೂಮಿಯ ಚರ್ಚೆ ಒಟ್ಟು ದೇಶದ ಮತ್ತು ನಾಡಿನ ಕಲ್ಪನೆಯನ್ನು ಸಾಂಸ್ಕೃತಿಕ ಅಭಿವ್ಯಕ್ತಿಯ ಮೂಲಕ ಮುಂದಿಡುತ್ತದೆ. ಭೂಮಿ ಎಂದರೆ ಒಂದು ಭೂಮಿಯಲ್ಲ,

ಭಾಷೆ ಮತ್ತು ಭೌಗೋಳಿಕತೆಗಳೆಂದರೆ ಒಂದು ಮಾತ್ರವಲ್ಲ. ಹಾಗೆಯೇ ಸಂಸ್ಕೃತಿ ಎಂದರೆ ಒಂದಲ್ಲ ಎಂಬುದು ಅನೇಕತೆ ಇರುವ ಭಾರತದ ಪ್ರಮುಖ ಲಕ್ಷಣ. ಈ ಭಾವನೆ, ವಿಚಾರ ಮತ್ತು ರಂಗಾಭಿವ್ಯಕ್ತಿಯಲ್ಲೂ ಬೇರೆಯಲ್ಲ. ಕಲೆ ಮತ್ತು ಸಂಸ್ಕೃತಿ ಕೂಡ ನೆಲದ ಗುಣದೊಂದಿಗೆ ಪ್ರದೇಶ, ನಾಡಿನ ಮೂಲಕ ದೇಶದ ಕಡೆಗೆ ಚಲಿಸುತ್ತಿರುತ್ತದೆ. ಈ ಚಲನೆಯನ್ನು 'ರಂಗಾಯಣ' ಕೃತಿಯು ವಿವರಿಸಲು ಯತ್ನಿಸಿದೆ. ಪ್ರಾದೇಶಿಕ ರಂಗಭೂಮಿಯನ್ನು ಮತ್ತು ರಾಷ್ಟ್ರೀಯ ರಂಗಭೂಮಿಯನ್ನು ಬೇರೆ ಬೇರೆಯಾಗಿ ನೋಡಲು ಸಾಧ್ಯವಿಲ್ಲ, ಹಾಗೆನೋಡಲೂ ಬಾರದು ಎಂಬ ತಾತ್ವಿಕತೆಯನ್ನು 'ರಾಷ್ಟ್ರೀಯ ರಂಗಭೂಮಿಗೆ ಕನ್ನಡ ಕೊಡುಗೆ' ಎಂಬ ಲೇಖನ ಶಕ್ತವಾಗಿ ಚರ್ಚಿಸುತ್ತದೆ. ಪಾರಸೀ ರಂಗಭೂಮಿ, ಸಿನಿಮಾ, ಕಂಪನಿ ನಾಟಕ, ಸೇರಿದಂತೆ ಪ್ರೇಕ್ಷಕ ಪರಂಪರೆಯನ್ನು ಬೆಳೆಸಿದ ನಾಟಕಗಳನ್ನು ಪ್ರಸ್ತಾಪಿಸುತ್ತಲೇ, ಹವ್ಯಾಸಿ ರಂಗಭೂಮಿಯ ಅನನ್ಯತೆಯನ್ನು ಕೂಡ ಸಿದ್ದಲಿಂಗಪಟ್ಟಣಶೆಟ್ಟಿ ಅವರು ಈ ಲೇಖನದಲ್ಲಿ ಪ್ರಸ್ತಾಪಿಸುತ್ತಾರೆ. ರಾಷ್ಟ್ರೀಯ ರಂಗ ಶಾಲೆಯ ಆರಂಭ ಮತ್ತು ಅಲ್ಲಿ ಕಲಿತ ಕನ್ನಡಿಗರ ಪ್ರಸ್ತಾಪ ಜೊತೆಗೆ ಬಿ.ವಿ.ಕಾರಂತರ ಅನನ್ಯ ಕೊಡುಗೆಯನ್ನು ಸಿದ್ದಲಿಂಗಪಟ್ಟಣ ಶೆಟ್ಟಿಯವರು ಸೂಕ್ತವಾಗಿ ದಾಖಲಿಸಿದ್ದಾರೆ. ರಂಗ ಶಿಕ್ಷಣದ ಆದ್ಯತೆಗಳನ್ನು ಪ್ರಸ್ತಾಪಿಸುತ್ತಲೇ ಹವ್ಯಾಸ, ಆಸಕ್ತಿ, ಆಯ್ಕೆಯಿಂದಲೇ ಕನ್ನಡ ರಂಗಭೂಮಿಯ ಮೂಲಕ ರಾಷ್ಟ್ರೀಯ ರಂಗಭೂಮಿಯ ಗಮನ ಸೆಳೆದ ಕನ್ನಡಿಗರನ್ನು ಕುರಿತು ಕೂಡ ಲೇಖನ ಚರ್ಚಿಸುವುದು ಶ್ಲಾಘನೀಯ. ಕನ್ನಡದ ಪ್ರಮುಖ ನಾಟಕಕಾರರಾದ ಶ್ರೀರಂಗ, ಕಾರ್ನಾಡ್, ಲಂಕೇಶ್, ಕಂಬಾರ ಮುಂತಾದವರ ಚರ್ಚೆ ದೇಶ ಮತ್ತು ಪ್ರದೇಶದ ಮೂಲಕ ನಿರ್ವಚನಗೊಂಡಿರುವ ಬಗೆಯನ್ನು ಲೇಖಕರು ದಾಖಲಿಸಿದ್ದಾರೆ. ಕನ್ನಡದ ವಿ.ರಾಮಮೂರ್ತಿ ಅವರು ಭಾರತೀಯ ಮಟ್ಟದಲ್ಲಿ ಮಾತ್ರವಲ್ಲದೆ, ಅಂತರಾಷ್ಟ್ರೀಯ ಮಟ್ಟದಲ್ಲೂ ಕೂಡ ಬೆಳಕು ತಜ್ಞರಾಗಿ ಕೆಲಸ ಮಾಡಿ ಜಾಗತಿಕ ಮನ್ನಣೆಯನ್ನು ತಂದುಕೊಟ್ಟು ಕನ್ನಡದ ಅಸ್ಮಿತೆಯ ಮೇಲೆ ಬೆಳಕು ಚೆಲ್ಲುತ್ತದೆ. ರಾಜಕೀಯ, ವಿಚಾರ, ಸಿದ್ಧಾಂತ ಸೇರಿದಂತೆ ತತ್ವಮುಖಿಯಾಗಿ ನೋಡಬಹುದಾದ ಪರಿಕಲ್ಪನೆಯನ್ನು, ಕನ್ನಡಿಗರು ಕೊಟ್ಟ ಆಯಾಮಗಳನ್ನು ಕೂಡ ಲೇಖಕರು ಪ್ರಸ್ತಾಪಿಸುತ್ತಾರೆ. ಕರ್ನಾಟಕ ನಾಟಕ ಅಕಾಡೆಮಿ ಮತ್ತು ಅದರ ಕಾರ್ಯ ಚಟುವಟಿಕೆಗಳ ಜೊತೆಗೆ ನಮ್ಮ ನಾಡಿನಲ್ಲಿರುವ ನೀನಾಸಂ ಹಾಗೂ ಹಲವು ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ಪ್ರವೃತ್ತರಾಗಿರುವ ರಂಗ ಶಾಲೆಗಳನ್ನು ಕುರಿತು ಲೇಖಕರು ಉಲ್ಲೇಖಿಸುತ್ತಾರೆ.

ಇಂದಿಗೂ ಕೂಡ ಸಿನಿಮಾ ಮಾಧ್ಯಮಕ್ಕೆ ದೊರಕುವ ಪ್ರಚಾರ, ನಾಟಕಗಳಿಗೆ ದೊರಕುವುದಿಲ್ಲ ಎಂಬ ಸುಡುವಾಸ್ತವವನ್ನು ಸಿದ್ದಲಿಂಗ ಪಟ್ಟಣಶೆಟ್ಟಿಯವರು ರಂಗಾಯಣ ಕೃತಿಯಲ್ಲಿ ಬರೆದಿದ್ದಾರೆ. ನಾಟಕ ಮತ್ತು ರಂಗ ಚಟುವಟಿಕೆಗಳ ದಾಖಲೀಕರಣ ಮತ್ತು ಪ್ರಚಾರ, ಹಿಂದಿ ಭಾಷೆಯ ನಾಟಕಗಳಿಗೆ ದೊರಕಿದಂತೆ, ಕನ್ನಡ ನಾಟಕಗಳಿಗೆ ದೊರಕುತ್ತಿಲ್ಲ ಎಂಬ ಸೂಕ್ಷ್ಮಮತ್ತು ಅಗತ್ಯ ಗ್ರಹಿಕೆಯನ್ನು ಸಿದ್ದಲಿಂಗ ಪಟ್ಟಣಶೆಟ್ಟಿಯವರು ರಂಗಭೂಮಿಯನ್ನು ಕುರಿತಾದ ದಾಖಲಾರ್ಹ ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ. ಈ ಪ್ರಶ್ನೆ ಈ ಹೊತ್ತಿಗೂ ಕೂಡ ತನ್ನ ಸ್ವರೂಪವನ್ನು ದೊಡ್ಡ ಮಟ್ಟದಲ್ಲೇನೂ ಬದಲಾವಣೆ ಮಾಡಿಕೊಂಡಿಲ್ಲ ಎಂಬುದನ್ನು ಗಮನಿಸಬೇಕು. ಹವ್ಯಾಸಿ ರಂಗತಂಡಗಳು ಮತ್ತು ವೃತ್ತಿಕಂಪನಿ ನಾಟಕಗಳ ಅಭಿವ್ಯಕ್ತಿ ಮತ್ತು ಸ್ವರೂಪವನ್ನು

ವಿವರಿಸಿಕೊಳ್ಳಲು ಬೇಕಾದ ಬಹು ಸಾಮಗ್ರಿಗಳನ್ನು, ನಾಟಕದ ವಿವಿಧ ಪ್ರಕಾರಗಳಲ್ಲಿ ಗ್ರಹಿಸಬೇಕಾದ ಅಂಶಗಳು ರಂಗಾಯಣ ಕೃತಿಯಲ್ಲಿ ದೊರಕುತ್ತದೆ.

ಉತ್ತರ ಕರ್ನಾಟಕದ ರಂಗಭೂಮಿಯ ಆರಂಭಿಕ, ಪ್ರಯೋಗಾತ್ಮಕ ಮತ್ತು ಪ್ರಾದೇಶಿಕ ಚರಿತ್ರೆ ಎಂಬಂತೆ 'ಉತ್ತರ ಕರ್ನಾಟಕದ ರಂಗಭೂಮಿ: ಅಂದು–ಇಂದು' ಎಂಬ ಲೇಖನ ಬರೆಯಲ್ಪಟ್ಟಿದೆ. ಶಿಷ್ಟ ಜಾನಪದ ರಂಗಭೂಮಿಗಳ ಅನನ್ಯತೆಗಳ ಈ ಲೇಖನ ಉತ್ತರ ಕರ್ನಾಟಕವನ್ನು ಕೇಂದ್ರವನ್ನಾಗಿಟ್ಟುಕೊಂಡು ಗಮನಿಸಿದೆ. ದೊಡ್ಡಾಟ, ಸಣ್ಣಾಟ, ಸೂತ್ರದ ಗೊಂಬೆಯಾಟ, ತೊಗಲುಗೊಂಬೆಯಾಟ ಮುಂತಾದ ಪ್ರದರ್ಶನ ಕಲೆಗಳನ್ನು ಒಳಗೊಂಡಂತೆ ಹವ್ಯಾಸಿ ರಂಗ ತಂಡಗಳು ಮತ್ತು ಕಂಪನಿ ನಾಟಕಗಳು ನೀಡಿದ ಕೊಡುಗೆಯನ್ನು ಈ ಲೇಖನದಲ್ಲಿ ಇದೆ. ಉತ್ತರ ಕರ್ನಾಟಕದಲ್ಲಿ ನಾಟಕ ಮಾಡುತ್ತಿದ್ದ ಮಂಡಳಿಗಳು, ಕಂಪನಿಗಳು, ಹವ್ಯಾಸಿ ರಂಗತಂಡಗಳು, ಸಂಸ್ಥೆಗಳು, ಮುಂತಾದ ಸಂಘಟನೆಗಳನ್ನು ಒಳಗೊಂಡಂತೆ ಗಮನಾರ್ಹ ಸಂಗತಿಗಳಿರುವ ಲೇಖನ ಇದಾಗಿದೆ. ಉತ್ತರ ಕರ್ನಾಟಕದ ರಂಗಭೂಮಿಗೆ ದುಡಿದ ಕೆಂದಗಲ್ಲ ಹನುಮಂತರಾಯರು, ಹುಯಿಲುಗೊಳ ನಾರಾಯಣರಾಯರು, ಪಂ.ಚೆ.ಎ. ಕವಲಿ, ಎಚ್.ಎನ್ ಹೂಗಾರ, ಬಿ.ಆರ್ ಅರಿಷಿಣಗೋಡಿ, ಪಿ.ಬಿ. ದುತ್ತರಗಿ ಮುಂತಾದ ರಂಗಮಹನೀಯರನ್ನು ಕುರಿತು ದಾಖಲಿಸಿದ್ದಾರೆ. ಉತ್ತರ ಕರ್ನಾಟಕದ ಜನಮಾನಸವನ್ನು ಸೂರೆಗೊಂಡ ನಾಟಕ ಪ್ರಯೋಗಗಳನ್ನು ಕುರಿತು ರಂಗಾಯಣ ಬೆಳಕು ಚೆಲ್ಲಿದೆ. ಮುಂದುವರೆದಂತೆ ಧಾರವಾಡ ರಂಗಭೂಮಿಯನ್ನು ಕುರಿತ ವಿವರಗಳನ್ನು ಕೂಡ ರಂಗಾಯಣ ಕೃತಿಯಲ್ಲಿ ನೋಡಬಹುದು ಅಭ್ಯಾಸಕ್ಕೆ, ಗ್ರಹಿಕೆಗೆ ನಾವು ರಂಗಭೂಮಿಯ ಪ್ರಕಾರವನ್ನು ಎಷ್ಟು ವಿಭಾಗಿಸಿಕೊಂಡು ನೋಡಿದರೂ, ಅದೊಂದು ವಿಶ್ವರೂಪಿ ಕಲಾಭಿವ್ಯಕ್ತಿ ಎಂಬುದನ್ನು ಕೃತಿಯ ಚರ್ಚೆ ಅರ್ಥ ಮಾಡಿಸುತ್ತದೆ.

ವ್ಯಾವಹಾರಿಕ ರಂಗಭೂಮಿಗೆ ಸೀಮಿತವಾಗಿದ್ದ ನಾಟಕಗಳು ಹವ್ಯಾಸಿ ರಂಗಭೂಮಿಗೆ ರಂಗ ಪ್ರಯೋಗಗಳ ಕಡೆಗೆ ಚಲಿಸಿದ ವಿದ್ಯಮಾನವನ್ನು 'ನಮ್ಮ ಹವ್ಯಾಸಿ ರಂಗಭೂಮಿ' ಲೇಖನ ಹಲವು ಆಯಾಮಗಳಲ್ಲಿ ಮುಂದಿಡುತ್ತದೆ. ನಾಟಕ ಪ್ರಯೋಗ, ರಿಹರ್ಸಲ್ ಪ್ರಾಸೆಸ್, ತಂಡ, ನಟರು, ಪ್ರಚಾರ, ತಾಂತ್ರಿಕತೆ ಮುಂತಾದ ಬಿಡಿ ಬಿಡಿ ಪ್ರಯೋಗದ ಅಂಶಗಳನ್ನು ಕೂಡ ಪ್ರಸ್ತಾಪಿಸುವುದನ್ನು ಕಂಡಾಗ ಸಿದ್ದಲಿಂಗಪಟ್ಟಣಶೆಟ್ಟಿಯವರು ಕೇವಲ ಲೇಖಕರಾಗಿ ಮಾತ್ರ ಕಾಣದೆ, ಒಬ್ಬ ರಂಗಕರ್ಮಿಯಾಗಿ ಮತ್ತು ನಿರ್ದೇಶಕರಾಗಿ ಕಾಣುತ್ತಾರೆ. ಪ್ರೇಕ್ಷಕನ ದೃಷ್ಟಿಯಲ್ಲಿ ರಂಗಭೂಮಿಯನ್ನು ಗ್ರಹಿಸುವ ವಿಶೇಷ ಬರಹ 'ರಂಗಾಯಣ' ಕೃತಿಯಲ್ಲಿದೆ. ವಸ್ತು ವಿಚಾರ ಮತ್ತು ತಾಂತ್ರಿಕತೆ, ಆಸನ ವ್ಯವಸ್ಥೆ, ಪಾತ್ರಧಾರಿಗಳು, ಬೆಳಕು, ಸಂಗೀತ ಮುಂತಾದ ವಿಚಾರಗಳನ್ನು ಪ್ರೇಕ್ಷಕನ ದೃಷ್ಟಿಯಲ್ಲಿ ಕಟ್ಟಿಕೊಡುವ ಶಕ್ತ ಲೇಖನ ಕೃತಿಯ ಕೊಡುಗೆ. ನಾಟಕದ ಬಗೆಗಿನ ತಿಳುವಳಿಕೆ ಪ್ರೇಕ್ಷಕರಲ್ಲಿ ಇಲ್ಲ ಎಂಬುದು ಭಾವಿಸುವ ನಿಲುವನ್ನು ನಿರಾಕರಿಸುತ್ತಲೇ, ಯಾವ ಬಗೆಗಿನ ಪ್ರೇಕ್ಷಕರು ನಾಟಕವನ್ನು ನೋಡಿ ಗ್ರಹಿಸುತ್ತಾರೆ ಎಂಬ ಒಳನೋಟಗಳನ್ನು ಪ್ರೇಕ್ಷಕ ಕೇಂದ್ರಿತ ನೆಲೆಯಲ್ಲಿ ಗ್ರಹಿಸಬೇಕು ಎನ್ನುವುದನ್ನು ಲೇಖಕರು ಸೂಚಿಸುತ್ತಾರೆ. ಇದೆಲ್ಲದರ ಜೊತೆಗೆ ಹವ್ಯಾಸಿ ನಾಟಕ ತಂಡಗಳ ಆರ್ಥಿಕ ವ್ಯವಸ್ಥೆ, ಬೆಂಗಳೂರು, ಮೈಸೂರು ಸೇರಿದಂತೆ ನಗರಗಳನ್ನೇ ಕೇಂದ್ರವನ್ನಾಗಿ ಇಟ್ಟುಕೊಂಡು ರಂಗಪ್ರಯೋಗಗಳ ನಿಲುವು, ನಾಟಕಕಾರ ಮತ್ತು ನಿರ್ದೇಶನ ನಡುವಿನ ಸಂಘರ್ಷ

ಮುಂತಾದ ಪ್ರಶ್ನೋತ್ತರ ಮಾದರಿಯ ವಾಗ್ವಾದಗಳನ್ನು ಅತ್ಯಂತ ವಿಮರ್ಶಾತ್ಮಕವಾಗಿ ಸಿದ್ದಲಿಂಗ ಪಟ್ಟಣಶೆಟ್ಟಿಯವರು ಮಂಡಿಸಿದ್ದಾರೆ. ಹೊರಗಿನಿಂದ ಬಂದ ತಂಡಗಳಿಗೆ ಮಣೆ ಹಾಕುವುದರ ಜೊತೆಗೆ ಸ್ಥಳೀಯ ತಂಡಗಳ ನಾಟಕವನ್ನು ಪ್ರೋತ್ಸಾಹಿಸಬೇಕೆಂಬ ನಿಲುವು ಸ್ಪಷ್ಟವಾಗಿದೆ. ನಿರ್ದೇಶಕನ ಪ್ರಯೋಗಮುಖೀ ಚಿಂತನೆಗಳ ಸಫಲತೆ ಮತ್ತು ವಿಫಲತೆಗಳನ್ನು ಕೂಡ ಲೇಖಕರು ದಾಖಲಿಸಿದ್ದಾರೆ.

ಪರಾಮರ್ಶನ ಕೃತಿಗಳು

1. ಪ್ರಭಾಕರ ಸಾತಖೇಡ, ಭಾರತೀಯ ನಾಟಕ ಪರಂಪರೆ, ರಂಗಪ್ರೀತಿ ಪ್ರಕಾಶನ, 2011
2. ಮರುಳಸಿದ್ಧಪ್ಪ ಕೆ, ಕನ್ನಡ ನಾಟಕ ಸಮೀಕ್ಷೆ, ಪ್ರತಿಮಾ ನಾಟಕ ಪ್ರಕಾಶನ, ಬೆಂಗಳೂರು, 1986
3. ಮಲ್ಲಿಕಾರ್ಜುನ ಕಡಕೋಳ, ನಾಟಕ ಕರ್ನಾಟಕ, ಅಭಿವ್ಯಕ್ತಿ, ಹರಪನಹಳ್ಳಿ, 2024

❖❖❖

ನೆಲಮುಗಿಲುಗಳ ಮಿಲನೋತ್ಸವದಲಿ
ತರುರಥ ಚಲಿಸುತಿದೆ
ದ್ವಿಜಸಂಕುಲಗಳ ಕಲನನಿನಾದದಿ
ತರುರಥ ಹೊಳೆಯುತಿದೆ

ನಿರಂಜನರ 'ಚಿರಸ್ಮರಣೆ' ಕಾದಂಬರಿಯಲ್ಲಿ ಭೂ ಸಂಘರ್ಷ

ಡಾ. ಸಂದೀಪ್ ಡಿ.ಡಿ.
ಪಿಡಿಎಫ್ ಸಂಶೋಧಕರು, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ–583276

ಸಾಮಾಜಿಕ ಹೋರಾಟಗಳನ್ನೇ ತಮ್ಮ ಬರವಣಿಗೆಯಲ್ಲಿ ಮುಖ್ಯ ವಿಷಯಗಳನ್ನಾಗಿಸಿಕೊಂಡು ಬರೆದರು. ನಿರಂಜನರ 'ಚಿರಸ್ಮರಣೆ'ಗೆ ಕಯ್ಯೂರಿನ ರೈತರ ಬದುಕೇ ಮುಖ್ಯ ವಸ್ತುವಾಯಿತು. ಜಾಗತೀಕರಣದ ಪರಿಣಾಮದಿಂದ ಜನಸಾಮಾನ್ಯರ ಭೂ ಹಕ್ಕಿನ ಪ್ರಶ್ನೆಗಳು ಹಿಂದೆ ಸರಿಯುತ್ತಿರುವ ಈ ಕಾಲದಲ್ಲಿ, ಭೂ ಸಮಸ್ಯೆಗಳ ಕುರಿತು ದೊಡ್ಡ ಹೋರಾಟವನ್ನೇ ಮಾಡಿರುವ ಕಯ್ಯೂರಿನ ರೈತರ ಇತಿಹಾಸವನ್ನು ಮೆಲುಕು ಹಾಕುವ 'ಚಿರಸ್ಮರಣೆ' ಕಾದಂಬರಿಯು ವಿಶಿಷ್ಟವೆನಿಸುತ್ತದೆ ಹಾಗೂ ಅದರ ಚರ್ಚೆಯು ಸಮಂಜಸವೆನಿಸುತ್ತದೆ.

ಕೇರಳ, ಕರ್ನಾಟಕದ ಗಡಿ ಭಾಗದಲ್ಲಿರುವ ಕಯ್ಯೂರು ಒಂದು ಪುಟ್ಟ ಹಳ್ಳಿ. ಊಳಿಗಮಾನ್ಯ ವ್ಯವಸ್ಥೆಯ ತಳಹದಿಯ ಮೇಲೆ ನಿಂತಿರುವ ಈ ಹಳ್ಳಿಯಲ್ಲಿ ಶೋಷಣೆಯನ್ನು ಪ್ರತಿಭಟಿಸುವ ರೈತರ ಬಂಡಾಯವನ್ನು ಕಾದಂಬರಿಯು ವಸ್ತುವಾಗಿಸಿಕೊಂಡಿದೆ. ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ವರ್ಗ ಹೋರಾಟ ಅನಿವಾರ್ಯ ಎನ್ನುವ ಸಂದೇಶವನ್ನು ಪ್ರತಿಪಾದಿಸಿದ್ದು ಕಾದಂಬರಿಯಲ್ಲಿ ಕಾಣಿಸುವ ವೈಚಾರಿಕತೆಯಾಗಿದೆ. ಸಾಮಾಜಿಕ ಸಂಘರ್ಷಕ್ಕೆ ಒತ್ತನ್ನು ಕಾದಂಬರಿಕಾರರು ಕೊಟ್ಟಿರುವುದನ್ನು ಇಲ್ಲಿ ಗಮನಿಸಬಹುದು. ಇದರ ಜೊತೆಗೆ ಆ ಕಾಲದ ಜೀವನ ವೃತ್ತಾಂತ, ಭೌಗೋಳಿಕ ಪರಿಸರ, ಭೂಮಿ ಪ್ರಶ್ನೆಯು ಕಾದಂಬರಿಯಲ್ಲಿ ಕಾಣಿಸುತ್ತದೆ. ಇದು ಸಮಾಜದ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳನ್ನು ಮುಖಾಮುಖಿಯಾಗಿಸುವ ವೈಚಾರಿಕ ಪ್ರಜ್ಞೆಯಾಗಿಯೇ ಕಾದಂಬರಿಯುಲ್ಲಿ ಮೂಡಿಬಂದಿದೆ.

ಕಾದಂಬರಿಯಲ್ಲಿ ರೈತರು ಜೀತದಾಳುಗಳು, ಭೂಮಾಲೀಕರ ಅಧೀನವಾಗಿ ದುಡಿಯುತ್ತಿರುವ ಇವರಿಗೆ ಯಾವುದೇ ಹಕ್ಕಿಲ್ಲ. ಇರುವ ಭೂಮಿಯನ್ನು ಕಳೆದುಕೊಂಡಿರುವುದರಿಂದ ಬದುಕನ್ನು ನಿರ್ವಹಿಸಲು ಕಷ್ಟಕರವಾಗಿದೆ, ಇವರ ಜೀವನ ತೀರ ಕೆಳಮಟ್ಟದಲ್ಲಿದೆ. ಮಹಿಳೆಯರಿಗೆ ಒಂದು ಅಂಗವಸ್ತ್ರ ಉಡುವುದು ಮೈಮೇಲೆ ಏನಾದರೂ ಹರಕು ಅಂಗಿ ಅಥವಾ ವಸ್ತ್ರವನ್ನು ತೊಡುತ್ತಿದ್ದರು, "ಚಿರುಕುಂಡ ಗುಡಿಸಲು ಸಮೀಪಿಸಿದಾಗ ಅಲ್ಲಿ ಬೆಳಕು ಇರಲಿಲ್ಲ. ಆತನ ಎದೆ ಚುಳ್ಳೆಂದಿತು. ಹಿಂದಿನ ರಾತ್ರಿಯೇ ಮುಗಿದು ಹೋಗಿತ್ತು ಸೀಮೆಎಣ್ಣೆ. ಉಣ್ಣುತ್ತಿದ್ದಾಗಲೇ ದೀಪ ಕಣ್ಣುಮುಚ್ಚಿತು"[1]. "ಪ್ರತಿ ಸಲವೂ ಬರುತ್ತಿದ್ದುದು ಆರುಕಾಸಿನ ಸೀಮೆಎಣ್ಣೆ. ಸಿಗರೇಟಿನ ಒಂದು ಡಬ್ಬದಲ್ಲಿ. ಅದು ಹತ್ತು ದಿನಗಳವರೆಗೂ ಸಾಕಾಗುತ್ತಿತ್ತು".[2] ಅಂದರೆ ಹೊಟ್ಟೆ–ಬಟ್ಟೆಗೆ ಕಷ್ಟಪಡುತ್ತಿರುವ ಸ್ಥಿತಿ ರೈತರದು. ಚಿಕ್ಕ ಭೂಮಿ ಇದ್ದರೂ ಜೀವನಕ್ಕೆ ಮಾಲೀಕರ ಮೇಲೆ ಅವಲಂಬನೆಯಾಗಿದ್ದ ಕಾರಣಕ್ಕೆ ಇರುವ ಭೂಮಿಯನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ.

ಚಿರುಕುಂಡನ ತಂದೆ ಮದುವೆಗಾಗಿ ಮಾಡಿದ ಸಾಲವು ಇನ್ನೂ ತೀರದ ಕಾರಣಕ್ಕಾಗಿ ಆ ಸಾಲಕ್ಕಾಗಿ ಆತನ ಜಮೀನನ್ನು ಜಮೀನುದಾರ ಬರೆಸಿಕೊಳ್ಳುತ್ತಾನೆ. ರೈತರು ಜಮೀನನ್ನು ಕಳೆದುಕೊಂಡು ನಿರ್ಗತಿಕರಾಗಿ ಬದುಕಬೇಕಾದ ಸ್ಥಿತಿ ಇಲ್ಲಿದೆ. ಇವರ ದಬ್ಬಾಳಿಕೆ, ಕ್ರೌರ್ಯಗಳ ಯಾವ ಸ್ವರೂಪದಲ್ಲಿದ್ದವು ಎನ್ನುವುದಕ್ಕೆ ಈ ಘಟನೆಯನ್ನು ಗಮನಿಸಬಹುದು.

ಜಮೀನ್ದಾರರ ಆದೇಶದಂತೆ ಆಳುಗಳು ಈ ರೈತನನ್ನು ಹಿಡೆದೆಬ್ಬಿಸಿದರು. ಹಣೆಯ ಗಾಯದಿಂದ ಸುರಿದ ರಕ್ತವೂ ಕಣ್ಣೀರೂ ಮಣ್ಣಿನೊಡನೆ ಬೆರತು ಅದನ್ನು ಗಾರೆಯಾಗಿ ಮಾಡಿ ಮುಖಕ್ಕೆ ಅಂಟಿಸಿದ್ದುವು. ಜಮೀನ್ದಾರರು ಸಿಗರೇಟನ್ನು ಕೆಳಕ್ಕೆಸೆದು ತುಳಿದು, ಆತನ ಬಳಿಗೆ ಹೋಗಿ ಕತ್ತು ಹಿಡಿದು ಕುಲುಕಿದರು. 'ನಾಳೆ ಸಾಯಂಕಾಲದೊಳಗೆ ಇನ್ನೂರು ರೂಪಾಯಿ ತಂದು ಒಪ್ಪಿಸದೇ ಹೋದ್ರೆ ನಿನ್ನನ್ನು ಪೋಲೀಸರಿಗೆ ಕೊಡುತ್ತೇನೆ".[3] ಹೀಗೆ ಶ್ರೀಮಂತರ ಕ್ರೌರ್ಯ ಭೂಮಾಲೀಕ ವರ್ಗದ ಸ್ವಭಾವನ್ನು ಸೂಚಿಸುತ್ತಿದೆ.

ಕನ್ನಡದಲ್ಲಿ 'ಚಿರಸ್ಮರಣೆ' ಕಾದಂಬರಿಗಿಂತಲೂ ಹಿಂದೆ ಕಾರಂತರ 'ಚೋಮನ ದುಡಿ' ಕಾದಂಬರಿಯಲ್ಲಿ ಭೂ ಪ್ರಶ್ನೆಗಳು ನಿರೂಪಿತವಾಗಿದ್ದವು. ಇಲ್ಲಿ ಅಸ್ಪೃಶ್ಯನಾದ ಚೋಮನು ಭೂಮಿಗಾಗಿ ಕಟ್ಟಿಕೊಂಡ ಕನಸು ದೊಡ್ಡದು. ಬದುಕಿನ ಸಂಕಟವನ್ನು ಕಡಿಮೆ ಮಾಡುವ ಸಾಧನವಾಗಿ ಗೇಣಿ ಭೂಮಿ ಬೇಕು ಎಂದು ಚೋಮ ಭಾವಿಸುತ್ತಾನೆ. ಅದನ್ನು ಪಡೆದುಕೊಳ್ಳುವ ಸರ್ಕಸ್‌ನಲ್ಲಿ ಸೋತು ಬರೀ ದುಡಿಯುವ ವರ್ಗದ ಚೋಮನಾಗಿ ಉಳಿಯುವ ದುರಂತ ಕಥೆಯಿದೆ. ಅಂದರೆ ಚೋಮನಿಗೆ ಭೂಮಿಗಾಗಿ ಸಂಘರ್ಷವು ವೈಯಕ್ತಿವಾಗಿ ಕಾಣಿಸುತ್ತದೆ. ಸಂಕಪ್ಪಯ್ಯನ ಮೇಲೆನ ತನ್ನ ಸಿಟ್ಟನ್ನು ಕೆಲಸದ ಮೇಲೆ ತೋರಿಸುತ್ತಾನೆ. ದುಡಿ ಬಾರಿಸುವುದರ ಮೂಲಕ ಸಂಘರ್ಷವನ್ನು ಶಾಂತಗೊಳಿಸಿಕೊಳ್ಳುವುದನ್ನು ಕಾಣುತ್ತೇವೆ. ಅಂದರೆ ಭೂಮಿಗಾಗಿ ಮಾಲೀಕನ ವಿರುದ್ಧ ಸಂಘರ್ಷವು ಏರ್ಪಡದೆ ಇರುವುದು ಕೂಡ ಕಾದಂಬರಿಯ ಮಿತಿಯಾಗಿ ಕಾಣಿಸುತ್ತದೆ. ಆದರೆ ಚಿರಸ್ಮರಣೆ ಪಾತ್ರಗಳಲ್ಲಿ ಈ ಬಗೆಯ ಸ್ವಭಾವ ಕಾಣಿಸುವುದಿಲ್ಲ. ಎಲ್ಲ ಪಾತ್ರಗಳಲ್ಲಿ ದುಡಿಯುವ ವರ್ಗದ ಪ್ರಜ್ಞೆಯು ಚಲನಶೀಲವಾಗಿ ಕಾಣಿಸುತ್ತದೆ. ಇದಕ್ಕೆ ಮುಖ್ಯ ಕಾರಣ ಮಾಸ್ತರು ಹೇಳಿಕೊಟ್ಟ ಶಿಕ್ಷಣ.

ಹಳ್ಳಿಯಲ್ಲಿ ಒಂದು ಖಾಸಗಿ ಶಾಲೆ ಇದೆ. ಇಲ್ಲಿಯ ಮಾಸ್ತರರು ತನ್ನ ಶಿಷ್ಯರಲ್ಲಿ ಬಂಡಾಯದ ಬೀಜವನ್ನು ಬಿತ್ತುತ್ತಾರೆ. ಇಡೀ ಊರಿನ ರೈತರಿಗೆ ಓದುಬರಹವನ್ನು ಮಾಸ್ತರು ಶುರುಮಾಡುತ್ತಾರೆ. ರೈತರೆಲ್ಲ ಸಾಯಂಕಾಲ ಹೊತ್ತು ಶಾಲೆ ಜಗಲೀಲಿ ಸೇರಿ ಕಲಿಯುತ್ತಾರೆ. ಇದನ್ನು ಜಮೀನುದಾರರು ವಿರೋಧಿಸುತ್ತಾರೆ. ಆದರೆ ಮಾಸ್ತರು ರಾಜಕೀಯ ಶಿಕ್ಷಣವನ್ನು ಮುಂದುವರೆಸುತ್ತಾರೆ. ತನ್ನ ಶಿಷ್ಯರಾದ ಅಪ್ಪು, ಚಿರಕುಂಡ, ಅಬೂಬಕರ, ಕುಂಞಂಬು, ಮುಂತಾದವರಿಗೆ ದುಡಿಯುವ ವರ್ಗದ ರಾಜಕೀಯ ಪ್ರಜ್ಞೆಯನ್ನು ಕಲಿಸುತ್ತಾರೆ. ಮಾಸ್ತರು ಭೂಮಿ ಕುರಿತು ಮಕ್ಕಳಿಗೆ ಹೇಳಿಕೊಡುವುದು ಹೀಗೆ;

"...'ನಮ್ಮನಾಳುವವರು ಯಾರು?' 'ಪರಕೀಯರು' 'ಅವರ ಊರು ಎಲ್ಲಿದೆ?' 'ಅದು ಸಾವಿರ ಮೈಲುಗಳ ಆಚೆ' 'ಆಳುವವರಿಗೆ ಏನೆನ್ನುತ್ತಾರೆ?' 'ರಾಜರು' 'ಆಳಲ್ಪಡುವವರಿಗೆ ಏನೆನ್ನುತ್ತಾರೆ?' 'ಪ್ರಜೆಗಳು' ಈ ಪುಟದಲ್ಲಿ ಕೆಳಗೊಂದು

ಸಾಲಿತ್ತು: 'ಪರಕೀಯ ರಾಜರ ಪ್ರಜೆಗಳು ಗುಲಾಮರು"[4] ಹೀಗೆ ಶಿಷ್ಯರಿಗೆ ನಮ್ಮನ್ನು ಆಳುವ ಬ್ರಿಟೀಷ್ ಹಾಗೂ ಸ್ಥಳೀಯ ಪ್ರಭುತ್ವವನ್ನು ಪರಿಚಯ ಮಾಡುವುದರ ಮೂಲಕ ಸ್ವಾತಂತ್ರ್ಯ, ಭೂಮಿಯ ಅಸಮಾನತೆ, ತಾರತಮ್ಯ, ಸಾಮಾಜಿಕ ನ್ಯಾಯದ ಅಂಶಗಳನ್ನು ಪರಿಚಯಿಸುತ್ತಾರೆ. ಜೊತೆಗೆ ರಾಜಕೀಯ ಶಿಕ್ಷಣವು ವರ್ಗ ಪ್ರಜ್ಞೆಯ ಭಾಗವಾಗಿರುವುದು ಚಿರುಕುಂಡ ಅಪ್ಪುವಿಗೆ ಹೇಳುವ ಮಾತಿನಲ್ಲಿ ಸ್ಪಷ್ಟವಾಗುತ್ತದೆ. "ನಿನಗೆ ತಿಳೀದು ಅಪ್ಪು, ಮಾಸ್ತರು ಹೇಳ್ಲಿಲ್ವಾ? ಹಾಗೇ ಅಲ್ವ ನಡೆಯೋದು? ರೈತ ಹೊಲ ಕಳಕೊಂಡು ಬಡವನಾಗ್ತಾನೆ, ಭಿಕಾರಿಯಾಕ್ತಾನೆ, ಆಮೇಲೆ ದೇಹದ ಶ್ರಮದ ಹೊರತಾಗಿ ಅವನಲ್ಲಿ ಏನೂ ಉಳಿಯೋದಿಲ್ಲ. ಪಟ್ಟಣಕ್ಕೆ ಹೋಗಿ ಕೂಲಿಯಾಗಿ, ಆ ಶ್ರಮವನ್ನೇ ಆತ ಮಾರ್ತಾನೆ"[5] ಈ ಮೂಲಕ ವರ್ಗ ನಿರಂತರತೆಯನ್ನು, ವರ್ಗ ಸಂಘರ್ಷವನ್ನು ಪ್ರತಿಪಾದಿಸುವುದನ್ನು ನೋಡಬಹುದು.

"ಈ ಹಳ್ಳಿಯ ಇಬ್ಬರು ಜಮೀನ್ದಾರ್ರು ಆಳೋ ಪಾಳಯಗಾರರಾಗಿಹೋದ್ರು! ಅವರು ರಾಜರು–ನಾವು ಪ್ರಜ್ಞೆಗಳು!"[6] ಎಂದು ಅಪ್ಪು ಚಿರುಕುಂಡನೊಡನೆ ಹೇಳುವ ಮಾತಿನಲ್ಲಿ ಜಮೀನ್ದಾರಿಕೆಯ ರಾಜಕೀಯವನ್ನು ಗುರುತಿಸಬಹುದಾಗಿದೆ. ಮಾಲೀಕನು ಇಡೀ ಹಳ್ಳಿಯ ಜನರನ್ನು ಅಧೀನವಾಗಿ ಹಿಟ್ಟುಕೊಳ್ಳುವ ಕುತಂತ್ರ ಜನರಿಗೆ ಅರಿವಾಗಿ ಇದನ್ನು ಪ್ರಶ್ನಿಸಲು ಪ್ರಾರಂಭಿಸುತ್ತಾರೆ. ಮೊದಲ ಬಾರಿಗೆ ಮಾಸ್ತರರ ಸೂಚನೆಯ ಮೇರೆಗೆ ಕೃಷ್ಣನಾಯರ್ ಗದ್ದೆಕೊಯ್ಲು ಮಾಡಲು ಎಲ್ಲರೂ ಹೋಗುತ್ತಾರೆ. ನಂಬಿಯಾರರಿಗೆ ಹೇಳದೇ ಕೊಯ್ಲು ಮಾಡುವಂತಿರಲಿಲ್ಲ. ಆಗ ತನ್ನ ವಿರುದ್ಧ ರೈತರ ಒಗ್ಗಟ್ಟು ನೋಡಿ ನಂಬಿಯಾರ್ ಕೆರಳುತ್ತಾನೆ. ಗೂಂಡಾ ಆಳುಗಳ ಮೂಲಕ ರೈತರ ಮೇಲೆ ದಾಳಿ ನಡೆಸುತ್ತಾನೆ. ಇದಕ್ಕೆ ಪ್ರತಿಕ್ರಿಯೆಯಾಗಿ ರೈತರು ಕೂಡ ಧೈರ್ಯದಿಂದ ಅವರನ್ನು ಹಿಮ್ಮೆಟಿಸುತ್ತಾರೆ. ಇದು ಸಾಮಾಜಿಕ ಸಂಘರ್ಷಕ್ಕೆ ನಾಂದಿಯಾಗುತ್ತದೆ. ಈ ಘಟನೆ ನಂತರ ಇದೇ ಸರಿಯಾದ ಸಮಯ ಎಂದು ಮಾಸ್ತರು ರೈತ ಸಂಘವನ್ನು ಸ್ಥಾಪಿಸುತ್ತಾರೆ. ಜಮೀನ್ದಾರರು ರೈತ ಸಂಘದ ವಿರುದ್ಧ ಸರ್ಕಾರಕ್ಕೆ ಅರ್ಜಿ ಸಲ್ಲಿಸುತ್ತಾರೆ. ಜಮೀನ್ದಾರು ಮಾಸ್ತರರನ್ನು ರಾಜೀನಾಮೆ ಕೊಡಲು ಹೇಳುತ್ತಾರೆ. ಮಾಸ್ತರರು ರಾಜಿನಾಮೆ ಕೊಟ್ಟು ಹೊರಡುವಾಗ ಶಾಲೆಯ ಅಂಗಳದಲ್ಲಿ ತಾವೇ ಬೆಳಸಿದ ಎರಡು ಮಾವಿನ ಗಿಡಗಳನ್ನು ನೋಡುತ್ತಾ "ಗಿಡಗಳು ಬೆಳೀತಾ ಇವೆ. ಆದರೂ ಫಲ ಕೊಡೋ ಸ್ಥಿತಿಗೆ ಇನ್ನೂ ಬಂದಿಲ್ಲ"[7] ಎನ್ನುತ್ತಾರೆ. ಈ ಎರಡು ಮಾವಿನ ಗಿಡಗಳು ಅಪ್ಪು ಮತ್ತು ಚಿರುಕುಂಡರೇ ಆಗಿರುತ್ತಾರೆ. ಹೋಗುವಾಗ ತಮ್ಮ ಕೈಗಡಿಯಾರವನ್ನು ಅಪ್ಪು ಮತ್ತು ಚಿರುಕಂಡನಿಗೆ ಕೊಡುವುದರ ಮೂಲಕ ಅವರನ್ನು ಸಂಘರ್ಷದ ಮುಂದಾಳುಗಳೆಂಬುದನ್ನು ವಿದ್ಯುಕ್ತಗೊಳಿಸುವುದು ಅವರ ಸಾರ್ಥಕತೆಯನ್ನು ತೋರುತ್ತದೆ.

ಕ್ರಾಂತಿಕಾರಿಗಳ ಬಂಧನ ಮತ್ತು ಪೊಲೀಸ್ ದೌರ್ಜನ್ಯದಿಂದ ಅದುವರೆಗೆ ಬೂದಿಮುಚ್ಚಿದ ಕೆಂಡದಂತಿದ್ದ ವರ್ಗ ಸಂಘರ್ಷವು ಬೆಂಕಿಯ ಜ್ವಾಲೆಯಾಗಿ ಭುಗಿಲೆದ್ದಿತು. ಮುಂದೆ ರೈತಾಪಿಗಳು ಒಂದು ಕಡೆಯಾದರೆ; ಭೂಮಾಲೀಕರು, ಬಂಡವಾಳಶಾಹಿ ಪ್ರಭುತ್ವ ವರ್ಗ ಶತೃವಾಗಿ ಸಂಘರ್ಷಕ್ಕೆ ಇಳಿಯುವುದನ್ನು ಕಾಣುತ್ತೇವೆ. ಮುಂದೆ ಇವರ ನಡುವೆ ಪರಸ್ಪರ ಸಂಘರ್ಷ ದಿನನಿತ್ಯದ ಚಟುವಟಿಕೆಯಾಗಿ ಮಾರ್ಪಡುತ್ತದೆ. ಹೋರಾಟಗಾರರ ಮೇಲೆ ಪ್ರಭುತ್ವದ ದೌರ್ಜನ್ಯ ಹಿಂಸೆಯ ರೂಪ ತಾಳುವುದು. ಇದನ್ನು ಕಾದಂಬರಿಕಾರರು ಚಿತ್ರಿಸಿರುವ ಬಗೆ ಹೀಗಿದೆ, "ಸಶಸ್ತ್ರ ದಳದವರು, ನಂಬಿಯಾರರ

ಸೇವಕರು ತೋರಿಸಿಕೊಟ್ಟ ಕೆಲವು ಗುಡಿಸಲುಗಳನ್ನು ಸುಟ್ಟು ಹೋಳಿ ಮಾಡಿದರು. ಒಂದೆಡೆ, ಕಾಯಿಲೆಬಿದ್ದು ಓಡಿ ಹೋಗಲಾರದೆ ಉಳಿದಿದ್ದ ಹೆಂಗಸೊಬ್ಬಳ ಮೇಲೆ ನಾಲ್ಕಾರು ಜನ ಸೈನಿಕರಿಂದ ಅತ್ಯಾಚಾರ ನಡೆಯಿತು"[8] ಇಲ್ಲಿ ಪ್ರಭುತ್ವವು ತನ್ನ ಹಿಂಸೆಗೆ ಬಡವರನ್ನು, ಮಹಿಳೆಯನ್ನು ಮೊದಲು ಬಲಿತೆಗೆದು ಕೊಳ್ಳುವುದು ಎನ್ನುವುದಕ್ಕೆ ಈ ಘಟನೆ ಸಾಕ್ಷಿಯಾಗಿ ಕಾಣಿಸುತ್ತದೆ. ಕೆಳವರ್ಗದ ಜನರಿಗೆ ಬಾರುಕೋಲುನಿಂದ ಹೊಡೆಯುವುದು, ಮನೆಗಳನ್ನು ಸುಡುವುದು, ಅತ್ಯಾಚಾರ ಮಾಡುವುದು, ಹಿಂಸೆಯ ಮೂಲಕ ಹೋರಾಟವನ್ನು ಹತ್ತಿಕ್ಕುವ ಕೆಲಸ ಮಾಡುತ್ತದೆ. ತನ್ನ ಶೋಷಣೆ ವಿರುದ್ಧ ಜನರು ಸಂಘಟಿತ ಹೋರಾಟಕ್ಕೆ ಯಾವಾಗ ಮುಂದಾದರು ಆಗ ಭೂಮಾಲೀಕರು ಪೋಲೀಸ್ ವ್ಯವಸ್ಥೆಯ ಮೂಲಕ ಹೋರಾಟವನ್ನು ಹತ್ತಿಕ್ಕುವ ಕಾರ್ಯದಲ್ಲಿ ಮುಂದಾಗುತ್ತಾರೆ. ಬ್ರಿಟೀಷ್ ಆಡಳಿತವನ್ನು ತಮ್ಮ ಹಿತಾಸಕ್ತಿಗಾಗಿ ಹೋರಾಟಗಾರ ವಿರುದ್ಧ ಚೂ ಬಿಡುತ್ತಾರೆ. ಹೋರಾಟವನ್ನು ಬಲಪ್ರಯೋಗದ ಮೂಲಕ ಹತ್ತಿಕ್ಕುವ ಮೂಲಕ ಆಳುವ ವರ್ಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತದೆ, ಅದು ಯಶಸ್ವಿ ಕೂಡ ಆಗುವುದನ್ನು ನೋಡಬಹುದು.

ಕಾದಂಬರಿಯುಲ್ಲಿ 'ಭೂಮಿ ಯಾರದು?' 'ರೈತನದು!' 'ಊಳುವವನೆ ಹೊಲದೊಡೆಯ!' 'ಹಳೆಯ ಸಾಲ ಮನ್ನಾ ಮಾಡಿ!' 'ಜಮೀನ್ದಾರಿ ಪದ್ದತಿ–ಅಳಿಸಿ ಹೋಗಲಿ!' 'ಸಾಮ್ರಾಜ್ಯಶಾಹಿ ನಾಶವಾಗಲಿ' ಎಂಬ ಘೋಷಣೆಗಳು ಹೋರಾಟದ ಉದ್ದಕ್ಕೂ ಕಾಣಿಸುತ್ತವೆ. ಅಂದರೆ ಕಾದಂಬರಿಯು ರೈತರ ಭೂಮಿಯ ಹಕ್ಕನ್ನು ಕಿತ್ತುಕೊಂಡಿರುವ ಜಮೀನ್ದಾರಿ, ಸಾಮ್ರಾಜ್ಯಶಾಹಿಯು ನಾಶವಾಗದೆ ರೈತರಿಗೆ ಭೂಮಿ ಸಿಗುವುದಿಲ್ಲ, ಸ್ವಾತಂತ್ರ್ಯ ಸಿಗುವುದಿಲ್ಲ ಎನ್ನುವ ನಿಲುವಿಗೆ ಬರುತ್ತದೆ.

ಕಯ್ಯೂರಿನ ಹೋರಾಟದಲ್ಲಿ ನಾಲ್ಕುಜನ ವೀರರಿಗೆ ಮರಣದಂಡನೆ ನಿಗದಿಯಾಗಿದೆ. ಅವರನ್ನು ಪೊಲೀಸರು ವಾಹನಲ್ಲಿ ಕರೆದುಕೊಂಡು ಹೋಗಲು ಬಂದಾಗ, ಆಗ ಜನ ಸೇರುತ್ತಾರೆ. ಪೊಲೀಸರು ಅವರನ್ನು ಬೆದರಿಸುತ್ತಾರೆ.

ಆಗ ಎಲ್ಲಿಂದಲೋ ಒಂದು ಧ್ವನಿ ಏಳುತ್ತದೆ 'ಇಂಕ್ವಿಲಾಬ್ ಜಿಂದಾಬಾದ್' ಎಂದು, ನೂರಾರು ಜನ ಈ ಘೋಷಣೆಯನ್ನು ಕೂಗಿ, "ದಬ್ಬಾಳಿಕೆಗೆ–ಧಿಕ್ಕಾರ, ಸಾಮ್ರಾಜ್ಯಶಾಹಿ–ನಾಶವಾಗಲಿ, ಕ್ರಾಂತಿಗೆ–ಜಯವಾಗಲಿ, ನೆರೆದವರನ್ನು ಚೆದುರಿಸಲೆಂದು ಪೊಲೀಸರು ದಂಡವೆತ್ತುತ್ತಿದ್ದಂತೆ ವಾಹನ ಹೊರಟಿತು. ಕೊನೆಯದಾಗಿ ಹಲವು ಕಂಠಗಳಿಂದ ವಂದನೆ: 'ಕಯ್ಯೂರಿನ ಬಾಂಧವರಿಗೆ ರಕ್ತ ನಮಸ್ಕಾರ' ಅದಕ್ಕೆ ಧಾವಿಸುತ್ತಿದ್ದ ವಾಹನದೊಳಗಿಂದ ಹಲವು ಧ್ವನಿಗಳ ಮರುವಂದನೆ 'ಸಂಗಾತಿಗಳೇ ರಕ್ತ ನಮಸ್ಕಾರ"[9] ಎನ್ನುವ ಧ್ವನಿ ಮೊಳಗುತ್ತದೆ.

ಅಪ್ಪುಗೆ. ಬಂಡವಾಳಶಾಹಿಗಳನ್ನು ಬಂಧಿಸಿದ ಹಾಗೆ ಒಂದು ಕನಸು ಬೀಳುತ್ತದೆ, ಅದನ್ನು ಕೇಳಿದ ಅಬೂಬಕರ ಹೇಳುತ್ತಾನೆ "ನಾವು ನಾಲ್ವರು ಇರದೇ ಹೋಗಬಹುದು; ಆದರೆ ಒಂದುದಿನ ಆ ರೀತಿ ಆಗೋದೂ, ನಂಬಿಯಾರರಿಗೆ ಆ ಸ್ಥಿತಿ ಒದಗೋದು ಖಂಡಿತ"[10] ಎನ್ನುತ್ತಾನೆ. ಕೊನೆಯಲ್ಲಿ "ಅಪ್ಪು ಕೇಳುತ್ತಿದೆಯ? ಯಾರೂ ಮಲಗಿಲ್ಲ, ನಾವು ಹೊರಡುವ ಹೊತ್ತಿಗೆ ಮುಂಚೆ ಎಲ್ಲರೂ ಎಚ್ಚರವಿದ್ದು ವಿದಾಯ ಹೇಳುತ್ತಿದ್ದಾರೆ' ಕುಂಯಿಂಬುವಿಗೆ ಭಾವೋದ್ವೇಗದಿಂದ ಸಂಕಟವಾಗುತ್ತದೆ. ಆತ ಕತ್ತಲನ್ನು ಬೆದರಿಸಿ ಗುಡುಗುತ್ತಿದ್ದಾನೆ. ದಲಿತ ಕೋಟೆಯ ಎಲುಬು ಗೂಡಿನ ಮೇಲೆ ಕಟ್ಟಿದ ಸಾಮ್ರಾಜ್ಯ

ಖಂಡಿತ ಪುಡಿಪುಡಿಯಾಗುತ್ತದೆ. ಲೋಕದಲ್ಲೆಲ್ಲಾ ದುಡಿಯುವ ಜನ ವಿಜಯಪತಾಕೆ ಹಾರಿಸಿಯೇ ಹಾರಿಸುತ್ತಾರೆ"[11] ನೇಣುಗಂಬಕ್ಕೇರಿದ ದಿನದ ಆ ರಾತ್ರಿ ಕೈಯೂರಿನಲ್ಲಿ ಬಲು ಧೀರ್ಘವಾಗಿತ್ತು. ಹಾಗಿದ್ದರೂ ಇರುಳು ಕಳೆದು ಮೆಲ್ಲಮೆಲ್ಲನೆ ಬೆಳಗಾಯಿತು ಎನ್ನುವ ಕಾದಂಬರಿಯಲ್ಲಿ ಆಶಾವಾದವಿದೆ.

ಒಟ್ಟಾರೆ ಕಾದಂಬರಿಯು ರೈತರ ಬೆನ್ನು ಬಾಗಿಸಿದ ಜೀತಪದ್ಧತಿ, ಜಮೀನ್ದಾರಿ ಪದ್ಧತಿಗಳ ವಾಸ್ತವ ಸ್ಥಿತಿಯನ್ನು ಮನಮುಟ್ಟುವಂತೆ ನಿರೂಪಿಸಿದೆ. ಊಳಿಗಮಾನ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಯು ಇಡೀ ದುಡಿಯುವ ಜನರ ವಿರೋಧಿಯಾಗಿರುವುದರಿಂದ ಈ ವ್ಯವಸ್ಥೆಯಿಂದ ಬಿಡುಗಡೆಯನ್ನು ಬಯಸುವುದು, ಎಲ್ಲರಿಗೂ ಸಾಮಾಜಿಕ ನ್ಯಾಯ, ಸಮಾನತೆಗೆ ಇರಬೇಕೆಂದು ಕಾದಂಬರಿಯು ಒತ್ತಾಯಿಸುತ್ತದೆ. ಕಯ್ಯೂರಿನ ಭೂಹೋರಾಟದ ಅಂತಃಸತ್ವವನ್ನು ಕಾದಂಬರಿ ಕಲಾತ್ಮಕವಾಗಿ ಹಿಡಿದಿಡುವ ಪ್ರಯತ್ನ ಮಾಡಿದೆ.

ಕೊನೆ ಟಿಪ್ಪಣಿ

1. ನಿರಂಜನ, ಚಿರಸ್ಮರಣೆ (12ನೇ ಮುದ್ರಣ), ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 2013, ಪು.ಸಂ.62.
2. ಚಿರಸ್ಮರಣೆ ಪು.ಸಂ.63.
3. ಅದೇ, ಪು.ಸಂ.68–69.
4. ಅದೇ, ಪು.ಸಂ.137.
5. ಅದೇ, ಪು.ಸಂ.86
6. ಅದೇ, ಪು.ಸಂ.86
7. ಅದೇ, ಪು.ಸಂ.175
8. ಅದೇ, ಪು.ಸಂ.213
9. ಅದೇ, ಪು.ಸಂ.257
10. ಅದೇ, ಪು.ಸಂ.262
11. ಅದೇ, ಪು.ಸಂ.276

❖❖❖

ಯುರೋಪಿನ ಫ್ಯಾಂಟಸಿ ಕತೆಗಳಲ್ಲಿನ ಸಂರಚನೆಗಳು: Hansel and Gartel ಕತೆಯ ಓದು

ಸರಸ್ವತಿ ಕೆ.ಬಿ.
ಸಹ–ಪ್ರಾಧ್ಯಾಪಕರು, ಆಂಗ್ಲ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಳಿಯಾರು

ಸಂಸ್ಕೃತಿ ಅಧ್ಯಯನಗಳ ಹಾದಿಯಲ್ಲಿ ಸಿಗುವ ಅನಿರೀಕ್ಷಿತ ಹೊಳಹುಗಳು ಸಂಭ್ರಮ ತರುತ್ತವೆ. ಆ ಬೆಳಕಲ್ಲಿ ಕಾಣುವ ಸತ್ಯಗಳು ಚಂದವಾಗಿರುತ್ತವೆ. ಆದರೆ ಕೆಲವೊಂದು ಕಥೆಗಳ ಸಂರಚನೆಯ ಆಳದಲ್ಲಿ ಅಡಗಿರುವ ಭೀಕರತೆಯು ಆ ಕಾಲಘಟ್ಟದ ಇತಿಹಾಸ ಮತ್ತು ಸಮಾಜದ ನಿಷ್ಠುರಸತ್ಯಗಳನ್ನು ಪ್ರತಿಫಲಿಸುತ್ತಿರುತ್ತವೆ.

ಸಾಹಿತ್ಯ ಕಥನಗಳು ಸಮಾಜದಲ್ಲಿ ಪ್ರಚಲಿತವಾಗಿರುವ ಕೆಲವು ಆಚರಣೆಗಳನ್ನು ಸಂಕೇತ ರೂಪದಲ್ಲಿ ತಮ್ಮೊಳಗೆ ಅಡಗಿಸಿಟ್ಟಿರುತ್ತವೆ. ಇದನ್ನು ಸ್ಟಿವಾರ್ಟ ಹಾಲ್ ಕೋಡಿಂಗ್ ಎಂದು ಕರೆಯುತ್ತಾನೆ. ಆಯಾ ಕಾಲದ ಐತಿಹಾಸಿಕ ಸತ್ಯಗಳು ಬೀಜರೂಪದಲ್ಲಿ ನಂತರದ ಪೀಳಿಗೆಗೆ ದಾಟಿಸಲ್ಪಟ್ಟಿರುತ್ತವೆ. ಎಷ್ಟೋ ಶತಮಾನಗಳ ನಂತರ ಓದುಗನಿಗೆ ಆ ಸತ್ಯಗಳು ಮಣ್ಣಿನಲ್ಲಿ ಮುಚ್ಚಿಹೋದ ವಜ್ರದಂತೆ, ಕಾಣಿಸಲಾರವು. ಓದುಗ ಈ ಸಂಕೇತಗಳನ್ನು ಡೀ–ಕೋಡ್ ಮಾಡಬೇಕಾಗುತ್ತದೆ. ಆದರೆ ಕೆಲವೊಂದು ಐಡಿಯಾಲಜಿಗಳು ತಮ್ಮ ಅಧಿಕಾರ ಸ್ಥಾಪಿಸಲು ಡೀ–ಕೋಡಿಂಗ್ ಪ್ರಕ್ರಿಯೆಯನ್ನು ನಿಷ್ಕ್ರೀಯಗೊಳಿಸುತ್ತವೆ. ಎಚ್ಚರದ ಓದುಗ ಈ ಹೊತ್ತಿನ ಅಗತ್ಯ.

ಅದು ಕ್ರಿ.ಶ. 1300ರ ಯುರೋಪ್. ಕೃಷಿ ಕ್ರಾಂತಿಯ ಸೊಬಗನ್ನು, ಅದರ ಸಮೃದ್ಧಿಯನ್ನು ಅನುಭವಿಸುತ್ತಾ ಖುಷಿಯಾಗಿದ್ದ ಕಾಲ. ಭೂಮಿಯ ಹುಲುಸಾದ ಫಸಲಿನ ಧೈರ್ಯದಲ್ಲಿ ತಾಯಿತಂದೆಯರು ಬಹಳಷ್ಟು ಮಕ್ಕಳು ಮರಿ ಮಾಡಿಕೊಂಡು ತಿಂದುಂಡು ಸುಖವಾಗಿದ್ದ ಕಾಲವದು.

ಸುಮಾರು 1315ರ ಹೊತ್ತಿಗೆ ಮಧ್ಯ ಮತ್ತು ಉತ್ತರ ಯೂರೋಪನ್ನು ಭೀಕರ ಬರಗಾಲ ಕಾಡಿತ್ತು. ಜೊತೆಗೆ, ಶೀತಗಾಳಿ, ಅನಿರೀಕ್ಷಿತ ಹವಾಮಾನ ವೈಪರೀತ್ಯಗಳು, ಅಸಹಜವಾದ ವಿಪರೀತ ಮಳೆಯ ಕಾರಣದಿಂದ ಸಾರ್ವತ್ರಿಕ ಬೆಳೆನಾಶ ಹಾಗು ಬೆಲೆ ಏರಿಕೆಯಿಂದ ಯುರೋಪ್ ತತ್ತರಿಸಿತು. ತಮ್ಮ ಸರ್ವ ಸುಖವನ್ನೂ ತೇಲಿಬಿಟ್ಟು, ಅಸಹಾಯಕತೆಯಲ್ಲಿ ಕಂಪಿಸಿದ ಜನತೆ ಕಂಡರಿಯದ ಸಾಂಸ್ಕೃತಿಕ ಪಲ್ಲಟಗಳಿಗೆ ಸಾಕ್ಷಿಯಾದರು.

ಬಡತನದ ಬೇಗೆಯಲ್ಲಿ ಅಸಂಖ್ಯ ಮಕ್ಕಳ ಲಾಲನೆ ಪಾಲನೆಯ ಹೊರೆಯನ್ನು ಹೊರಲಾರದೆ ಪೋಷಕರು ದಿಕ್ಕೆಟ್ಟರು. ಕನಿಷ್ಠ ಆಹಾರಧಾನ್ಯಗಳನ್ನೂ ಸಹ ಕೊಳ್ಳಲಾರದೆ ಮಿಲಿಯನ್ ಸಂಖ್ಯೆಯಲ್ಲಿ ಯೂರೋಪಿಯನ್ನರು ಹುಳಗಳಂತೆ ಸತ್ತರು. ಬಹಳಷ್ಟು ತಾಯಿ–ತಂದೆಯರು ತಮ್ಮ ಕಣ್ಣೆದುರೇ ಅನ್ನವಿಲ್ಲದೆ ಹಸಿವಿನಿಂದ ಸಾಯುವ ಮಕ್ಕಳನ್ನು ನೋಡಲಾರದೆ ಕಾಡಿನಲ್ಲಿ ಬಿಟ್ಟು ಬಂದರು. ಕಾಡಿನಲ್ಲಿ ಅದೃಷ್ಟವಶಾತ್ ಬದುಕಬಹುದು ಎಂಬ ಹಂಬಲದಲ್ಲಿ. ಅವರೆದುರು ಮತ್ತೊಂದು ಆಯ್ಕೆಯಿತ್ತು. ಕುಟುಂಬದವರ

ಪ್ರಾಣಗಳ ಉಳಿವಿಗಾಗಿ ಅಸಹಾಯಕ ಮಗುವಿನ ನರಬಲಿ. ನರಭಕ್ಷಣೆ ರೂಢಿಯಲ್ಲಿದ್ದ ಕಾಲವದು. ಮಗುವನ್ನು ಕೊಂದು ಜೀವ ಉಳಿಸಿಕೊಳ್ಳುವ ಮಾರ್ಗವದು. ಬರಗಾಲದ ಅನಿವಾರ್ಯತೆಯನ್ನು ಎದುರಿಸಲಾರದೆ ಹುಟ್ಟಿಕೊಂಡ ಆಚರಣೆಯಿದು.

ಜನಪದರ ಬಾಯಲ್ಲಿ ಇಂತಹ ಸಂದರ್ಭಗಳು ಕತೆಗಳಾಗಿ ಹರಿದಾಡಿದವು. ಬಾಲ್ಯದಲ್ಲಿ ಕೇಳಿ, ಓದಿ ಆನಂದಿಸಿದ ಅನೇಕ ಯುರೋಪಿನ ಮೂಲದ ಫ್ಯಾಂಟಸಿ ಕತೆಗಳು ಅವುಗಳ ಮಾಂತ್ರಿಕ ವಾಸ್ತವತೆಯಿಂದಲೇ ಎಲ್ಲರನ್ನೂ ಸೆಳೆಯುವುದಂತೂ ಖಚಿತ. ಕಾಲಾಂತರದಲ್ಲಿ ರೂಪಾಂತರಗೊಂಡು ಇತಿಹಾಸದ ಅನಿವಾರ್ಯತೆಗೆ ಅನುಗುಣವಾಗಿ ಮರುರಚಿಸಲ್ಪಟ್ಟವು. ರಮ್ಯವಾಗಿ ಕಾಣುವ ಈ ಕತೆಗಳ ಒಡಲಲ್ಲಿ ಭೀಕರವಾದ ಸತ್ಯಗಳು ಅಡಗಿರುತ್ತವೆ.

ನಾಲ್ಕು ಶತಮಾನಗಳ ನಂತರ... 18ನೇ ಶತಮಾನದಲ್ಲಿ ಇಡೀ ಯೂರೋಪ್ Romanticism ನ ಪ್ರಭಾವಕ್ಕೆ ಒಳಗಾಗಿತ್ತು. ರಾಷ್ಟ್ರೀಯ ಭಾವ, ಜನಪದರ ಬದುಕು–ಬಾಳ್ವೆಯ ಮಹತ್ವವನ್ನು ನೆನಪಿಸುವ ಲಾವಣಿ, ಕತೆಗಳನ್ನು ಸಂಗ್ರಹಿಸಿ ಮರು–ಓದಿಗೆ ಒಳಪಡಿಸಿ, ರಾಷ್ಟ್ರಪ್ರೇಮವನ್ನು ಎಚ್ಚರಿಸುವ ಪ್ರಯತ್ನಗಳು ಬಹಳಷ್ಟು ನಡೆದವು. ಜರ್ಮನಿಯ ಮಧ್ಯಯುಗದಲ್ಲಿ ಪ್ರಚಲಿತವಿದ್ದ ಸಾವಿರಾರು ಯಕ್ಷಿಣಿ ಕತೆಗಳನ್ನು ಸಂಗ್ರಹಿಸುವ ಸಾಹಸಕ್ಕೆ ಕೈಹಾಕಿದವರು ಜೆಕಬ್ ಮತ್ತು ವಿಲ್ಹೆಲ್ಮ್ ಸಹೋದರರು. ಗ್ರಿಮ್ ಸಹೋದರರೆಂದೇ ಅವರು ಪ್ರಖ್ಯಾತರು.

18ನೇ ಶತಮಾನದ ಅಂತ್ಯಭಾಗದಲ್ಲಿ ಫ್ರಾನ್ಸ್ ಮತ್ತು ಯೂರೋಪ್ ನಡುವೆ ನಡೆದ ಭೀಕರ ಸಂಘರ್ಷದಲ್ಲಿ ಫ್ರಾನ್ಸ್‌ನ ನೆಪೋಲಿಯನ್ ಜರ್ಮನಿಯನ್ನು ಗೆದ್ದು 16 ಪ್ರಮುಖ ರಾಜ್ಯಗಳನ್ನಾಗಿ ಮರುವಿಂಗಡಿಸುತ್ತಾನೆ. 1815ರ ವಾಟರ್ಲೂ ಕದನದಲ್ಲಿ ನೆಪೋಲಿಯನ್ ಸೋಲಿನೊಂದಿಗೆ ಜರ್ಮನಿ ಸ್ವತಂತ್ರವಾಗುತ್ತದೆ. ಏಕೀಕರಣದ ಮತ್ತು ರಾಷ್ಟ್ರೀಯ ಪ್ರಜ್ಞೆಯ ಮಹತ್ವವನ್ನು ಅರಿತ ವಿದ್ಯಾವಂತರು, ಅಕಾಡೆಮಿಗಳ ಪ್ರಾಧ್ಯಾಪಕರು, ಕಲಿತವರು, ಶಿಕ್ಷಿತರು ಜರ್ಮನಿಯು ರಾಜಕೀಯವಾಗಿ ಬಲಿಷ್ಠವಾಗ ಬೇಕೆಂದರೆ ಅದರ ಇತಿಹಾಸ ಮತ್ತು ಪರಂಪರೆಯ ಮರು–ಓದು ಅವಶ್ಯವೆಂದು ಭಾವಿಸಿ ಕಾರ್ಯಪ್ರವೃತ್ತರಾಗುತ್ತಾರೆ.

ಗ್ರಿಮ್ ಸಹೋದರರು ಮಧ್ಯಯುಗದ ಸಾವಿರಾರು ಜನಪದ ಕತೆಗಳನ್ನು 1812–1857ರ ಅವಧಿಯಲ್ಲಿ ಪರಿಷ್ಕರಿಸಿ, ಅಗತ್ಯ ಬದಲಾವಣೆಗಳೊಂದಿಗೆ "Children's and Household Tales" ಸಂಕಲನದಲ್ಲಿ ಮುದ್ರಿಸುತ್ತಾರೆ. ಜರ್ಮನಿಯ ಕಾನೂನು, ಸಂಸ್ಕೃತಿ ಮತ್ತು ಸ್ಥಳೀಯ ನಂಬಿಕೆಗಳ ಹೆಣಿಗೆಯನ್ನು ಸ್ಥಾಪಿಸಲು ಯತ್ನಿಸುತ್ತಾರೆ. ನೆಪೋಲಿಯನ್ ಆಕ್ರಮಣದಿಂದ ಭಗ್ನಗೊಂಡಿದ್ದ ಜರ್ಮನಿಯ ಸಂಸ್ಕೃತಿಯನ್ನು ಉಳಿಸಲು ಗತಪರಂಪರೆಯ ಜ್ಞಾನವನ್ನು ಪ್ರತಿಫಲಿಸುವ ಜನಪದದ ನೆರವನ್ನು ಪಡೆಯುತ್ತಾರೆ. ಶಿಕ್ಷಣ ತಜ್ಞರಾದ ಇವರು ಈ ಸಂಕಲನವನ್ನು ಸಂಗ್ರಹಿಸಿದ್ದು ಮಕ್ಕಳಿಗಾಗಿ ಅಲ್ಲ; ಸಂಶೋಧಕರಿಗಾಗಿ. ಈ ಸಂಕಲನವು ಅಸಂಖ್ಯ ಮರುಮುದ್ರಣ ಕಾಣುತ್ತದೆ. ನಾವು ಕೇಳಿರುವ ಸಿಂಡ್ರೆಲಾ, ಸ್ಲೀಪಿಂಗ್ ಬ್ಯೂಟಿ, ದಿ ಪ್ರಾಗ್ ಫ್ರಿನ್ಸ್, ಸ್ನೋ ವೈಟ್ ಕತೆಗಳು ಇದರಲ್ಲಿ ಇವೆ. ವಾಲ್ಟ್ ಡಿಸ್ನಿ ಇವುಗಳನ್ನು ಸಿನಿಮಾ ಕೂಡ ಮಾಡಿದ್ದಾರೆ.

ಇಲ್ಲಿ ಆರಿಸಿಕೊಂಡಿರುವ ಕತೆ Hansel and Gartel, ಜರ್ಮನಿಯ ಜನಪದ ಕತೆ. ತನ್ನ ಮೂಲ ಆವೃತ್ತಿಯಲ್ಲಿ ಈ ಕತೆಯು ನರ–ಭಕ್ಷಣೆ, ಶಿಶುಹತ್ಯೆ ಮತ್ತು

ವಾಮಾಚಾರದ ವಸ್ತುವನ್ನು ಒಳಗೊಂಡಿದೆ. ಕತೆಯ ಸಾರಾಂಶ ಹೀಗಿದೆ:

Gartel & Hansel ಅಕ್ಕ–ತಮ್ಮ. ಕಾಡಂಚಿನ ಮನೆಯ ಮರಕಡಿಯುವವನ ಮಕ್ಕಳು. ಸೊಬಗಿನ ನದಿ ದಂಡೆಯಲ್ಲಿ ಪುಟ್ಟ ಮನೆಯಲ್ಲಿ ಅಪ್ಪನೊಂದಿಗೆ ಜೀವನ ಸಾಗಿಸುತ್ತಿದ್ದ ತಾಯಿ ಕಾಣದ ಮಕ್ಕಳು. ಒಂದು ದಿನ ಅಪ್ಪ ಕಾಡಿನಲ್ಲಿ ಸೊಪ್ಪು–ಸದೆ ಆರಿಸುತ್ತಾ, ಮದ್ದು–ಕಷಾಯ ಅರೆಯುವುದರಲ್ಲಿ ನಿಷ್ಣಾತಳಾದ ಹೆಣ್ಣೊಬ್ಬಳನ್ನು ಕರೆದುಕೊಂಡು ಬರುತ್ತಾನೆ. ಮಕ್ಕಳಿಗೆ ತೋರಿಸಿ, ನಿಮ್ಮ ಮಲತಾಯಿ ಎನ್ನುತ್ತಾನೆ. ಮಕ್ಕಳು ಅವಳನ್ನು ನೋಡಿ ಗಾಬರಿ ಬೀಳುತ್ತಾರೆ. ಹೊಸ ಹೆಂಡತಿ ಮಕ್ಕಳಿಬ್ಬರನ್ನು ಕಾಡಿನಲ್ಲಿ ಬಿಟ್ಟು ಬರುವಂತೆ ತಂದೆಗೆ ಒತ್ತಾಯಿಸುತ್ತಿರುವ ಸಂಚನ್ನು ಕದ್ದು ಕೇಳಿಸಿಕೊಳ್ಳುವ ತಮ್ಮ, ಅಕ್ಕನಿಗೆ ತಿಳಿಸುತ್ತಾನೆ. ಅಕ್ಕ ಬುದ್ಧಿವಂತೆ. ದಾರಿ ಗುರುತಿಗಾಗಿ ನೀಲಿಕಲ್ಲುಗಳನ್ನು ಆರಿಸಿ ಇಟ್ಟುಕೊಳ್ಳುತ್ತಾಳೆ. ದಟ್ಟ ಕಾಡಿನಲ್ಲಿ ತಮ್ಮನ್ನು ತೊರೆದು ಬರುವ ಅಪ್ಪ–ಅಮ್ಮನನ್ನು ಮರಳಿ ಹುಡುಕಿಕೊಂಡು ಬರುತ್ತಾರೆ. ಆತಂಕಗೊಂಡ ಮಲತಾಯಿ ಮತ್ತೆ ತನ್ನ ಗಂಡನನ್ನು ಮದ್ದಿನ ಮತ್ತಿನಲ್ಲಿ ಒಪ್ಪಿಸಿ ಮತ್ತೂ ದೂರದ ಕಾಡಿಗೆ ಮಕ್ಕಳನ್ನು ಬಿಟ್ಟು ಬರುತ್ತಾರೆ. ಅಕ್ಕನಿಗೆ ಹೆಚ್ಚು ಕಲ್ಲುಗಳನ್ನು ಆರಿಸಿ ಇಟ್ಟುಕೊಳ್ಳಲಾಗುವುದಿಲ್ಲ. ತಮ್ಮ ದಾರಿಯುದ್ದಕ್ಕೂ ತನ್ನ ಬಳಿಯಿರುವ ರೊಟ್ಟಿ ಚೂರುಗಳನ್ನು ಹಾಕಿರುತ್ತಾನೆ. ಪಕ್ಷಿಗಳು ರೊಟ್ಟಿ ತಿಂದು ಈ ದಾರಿಯನ್ನು ಅಳಿಸಿ ಹಾಕುತ್ತವೆ.

ಚಳಿ ಮತ್ತು ಹಸಿವಿನಿಂದ ಬಳಲಿದ ಮಕ್ಕಳು ಕಾಡಿನಲ್ಲಿ ದಾರಿ ಕಾಣದೆ ಅಲೆಯುವಾಗ ಸಿಹಿರೊಟ್ಟಿಯ, ಸಕ್ಕರೆ ಅಚ್ಚಿನ, ಜೇನುಸುರಿಸುವ ಮನೆಯನ್ನು ಎದುರಾಗುತ್ತಾರೆ. ಸುಂದರ ಹೆಣ್ಣಿನ ರೂಪದಲ್ಲಿರುವ ಮಾಟಗಾತಿ ಮುದುಕಿಯ ಸಂಚಿಗೆ ಬಲಿಯಾಗುತ್ತಾರೆ. ಎಲ್ಲೂ ಕಂಡರಿಯದ ಸಿಹಿ ಉಂಡು, ಮೆತ್ತನೆ ಹಾಸಿಗೆಯಲ್ಲಿ ಮಲಗಿ ಸುಖಿಸುತ್ತಾರೆ. ಮರುದಿನ ಎಲ್ಲಾ ಮಾಯ?!

ತನ್ನ ನಿಜರೂಪ ತೋರಿಸುವ ಮಾಟಗಾತಿ ಹುಡುಗನನ್ನು ಬಂಧಿಸಿ, ಹುಡುಗಿಯನ್ನು ತನ್ನ ಚಾಕರಿ ಮಾಡಲು ಇರಿಸಿಕೊಳ್ಳುತ್ತಾಳೆ. ದುಷ್ಟ ಮಾಟಗಾತಿಯನ್ನು ತನ್ನ ಬುದ್ಧಿವಂತಿಕೆಯಿಂದ ಬೆಂಕಿಗೆ ನೂಕಿ ತಮ್ಮನನ್ನೂ, ಆಕೆಯ ಅಪಾರ ನಗ–ನಾಣ್ಯವನ್ನೂ ಹೊತ್ತು ತರುವ ಮಕ್ಕಳನ್ನು ಅಪ್ಪ (ಹೆಂಡತಿ ಓಡಿಹೋಗಿರುತ್ತಾಳೆ/ಸತ್ತಿರುತ್ತಾಳೆ) ಸಂಭ್ರಮದಿಂದ ಸ್ವಾಗತಿಸುವಲ್ಲಿಗೆ ಕತೆ ಸುಖಾಂತವಾಗುತ್ತದೆ.

ಗ್ರಿಮ್ ಸಹೋದರರು ಈ ಕತೆ ಬರೆದದ್ದು ಮಕ್ಕಳಿಗಲ್ಲ. ನರಭಕ್ಷಣೆ, ಶಿಶುಹತ್ಯೆ ಮತ್ತು ಮಾಟಗಾತಿಯರ ವಿಚಾರಣೆ (Witch Trial) ಅಂಶಗಳನ್ನು ಒಳಗೊಂಡ ಈ ರಕ್ತ–ಸಿಕ್ತ ಕತೆಯನ್ನು ವಿದ್ವಾಂಸರ ಅವಗಾಹನೆಗಾಗಿ ಬರೆದದ್ದು. ಯಾವುದೇ ಹಿಂಜರಿಕೆಯಿಲ್ಲದೆ ಕ್ರೂರ ಸತ್ಯಗಳನ್ನು ಹೊಂದಿರುವ ಈ ಕತೆಯನ್ನು ಅಲ್ಪ ಬದಲಾವಣೆಗಳೊಂದಿಗೆ, ಹೆಚ್ಚು ಕ್ರಿಶ್ಚಿಯನ್ ಧೋರಣೆಗಳನ್ನೂ, ಪಿತೃಪ್ರಧಾನ ಅಂಶಗಳನ್ನು, ಕುಲಪ್ರಜ್ಞೆಯನ್ನು ಒಳಗೊಳ್ಳುವಂತೆ ಮರು–ರಚಿಸಿ ಪ್ರಕಟಿಸಲಾಯಿತು. ಜರ್ಮನಿಯ ಕಾನೂನು, ಸಂಸ್ಕೃತಿ ಮತ್ತು ಆ ಕಾಲದ ಜನರ ನಂಬಿಕೆಗಳನ್ನು ಈ ಕತೆಗಳು ಬೆಸೆದವು. 20ನೇ ಶತಮಾನದ ಮಧ್ಯಭಾಗದಲ್ಲಿ ನಾಜಿ ಜರ್ಮನಿ ಈ ಕತೆಗಳನ್ನು ತನ್ನ ಸಿದ್ಧಾಂತಗಳ ಪ್ರಚಾರಕ್ಕಾಗಿ ಬಳಸಿಕೊಂಡಿತು.

1581 ಮತ್ತು 1593ರ ನಡುವೆ ಜರ್ಮನಿಯ ಟ್ರಿರ್ ಪ್ರಾಂತ್ಯದಲ್ಲಿ ನಡೆದ ಮಾಟಗಾತಿಯರ ವಿಚಾರಣೆ ಇತಿಹಾಸದ ಒಂದು ಕ್ರೂರ ದಾಖಲೆ. 368 ಜನರ

ಬಲಿಪಡೆದ ನ್ಯಾಯಸಮ್ಮತ ಮಾರಣಹೋಮ. ಕ್ರಿಶ್ಚಿಯನ್ ಧರ್ಮವು ಯುರೋಪಿಯನ್ ಪ್ರಾಂತ್ಯದಲ್ಲಿ ಬೀರಿದ ಪ್ರಭಾವವನ್ನು ಚರ್ಚ್ ನಿಯಂತ್ರಿಸಿತು. ಮನಸ್ಸು ಮತ್ತು ಬುದ್ಧಿಯ ನಿಯಂತ್ರಣಕ್ಕೆ ಸಿಗದ/ ಮೀರಿದ ಗ್ರಹಿಕೆಗಳನ್ನು, ತರ್ಕಕ್ಕೆ ಸಿಗದ ಸಂವೇದನೆಗಳನ್ನು ಅಸಹಜ ಹಾಗು ಕೇಡಿನ ಪರಾಕಾಷ್ಟೆ ಎಂದು ಬಿಂಬಿಸಿ ತನ್ನ ಅಧಿಕಾರ ಮತ್ತು ರಾಜಕೀಯ ಪ್ರಭಾವವನ್ನು ಗಟ್ಟಿಮಾಡಿಕೊಂಡಿತು. ಮಾನವನ ಗ್ರಹಿಕೆಗೆ ಇರುವ ಅಪಾರ ಸಾಧ್ಯತೆಯನ್ನು ತಮ್ಮದನ್ನಾಗಿಸಿಕೊಳ್ಳುವವರ ಪ್ರಯತ್ನಗಳನ್ನು, ಅವರ ಅರಿವನ್ನು ಅಪಮಾನಗೊಳಿಸಲಾಯಿತು. ಇಂತಹ ಆಚರಣೆಗಳಲ್ಲಿ ತೊಡಗಿಸಿಕೊಂಡವರನ್ನು ಮಾಟ–ಮದ್ದು ಮಾಡುವವರೆಂದು ಬಿಂಬಿಸಿ ಕ್ರೂರವಾಗಿ ಶಿಕ್ಷಿಸಲಾಯಿತು.

1817ರಲ್ಲಿ ಜರ್ಮನಿ ಮತ್ತೊಮ್ಮೆ ಭೀಕರ ಬರಗಾಲಕ್ಕೆ ತುತ್ತಾಯಿತು. ಚರ್ಚ್‌ನ ಅನುಯಾಯಿಗಳಾಗಿದ್ದ ಬಹುಸಂಖ್ಯೆಯ ಸಾಮಾನ್ಯರಿಗೆ ಬರಗಾಲದ ಸರ್ವನಾಶಕ್ಕೆ ಹೊಣೆಯಾಗಿಸಲು ಯಾರಾದರೊಬ್ಬರು ಬೇಕಿತ್ತು. ರಾಜಕಾರಣಿಗಳನ್ನು, ಅವರ ನೀತಿ–ನಿಯತ್ತುಗಳನ್ನು ಪ್ರಶ್ನಿಸುವುದು ಅಷ್ಟು ಸುಲಭವಲ್ಲ. ತಮ್ಮ ರಾಜಕೀಯ ಅಧಿಕಾರವನ್ನು, ಸ್ಥಾನ–ಮಾನಗಳನ್ನು ಉಳಿಸಿಕೊಳ್ಳಲು ಹಾತೊರೆಯುತ್ತಿದ್ದ ರಾಜಕಾರಣಿಗಳನ್ನು ಎದುರಿಸಲಾರದ ಸಾಮಾನ್ಯ ಜನರ ಕಿಚ್ಚಿಗೆ ಸುಲಭದ ದಾಳಗಳಾದವರು ವಯಸ್ಸಾದ, ಒಂಟಿ, ಮುಪ್ಪಿನ ಮುದುಕಿಯರು. ಮೂಢತೆಯನ್ನು ಬಲುವಾಗಿ ನಂಬುತ್ತಿದ್ದ ಕಾರ್ಮಿಕರ/ ರೈತರ/ ಬಡವರ ಕೋಪವು ಈ ಪಾಪದ ಬಡಪಾಯಿಗಳನ್ನು ಆರೋಪಿಸ್ಥಾನದಲ್ಲಿ ನಿಲ್ಲಿಸಿತು. ಸ್ಥಳೀಯ ಕಾನೂನು ವ್ಯಕ್ತಿಯ ಬಲಹೀನತೆಯನ್ನು, ಸನ್ನಿವೇಶದ ಅಸಹಾಯಕತೆಯನ್ನು ಕಾರಣವಾಗಿಟ್ಟುಕೊಂಡು ಮುಪ್ಪಿನ ಮುದುಕರಿಂದ ಹಿಡಿದು, 12 ವರುಷದ ಒಳಗಿನ ಮಕ್ಕಳನ್ನೂ ಸಹ ಮಾಟ–ಮದ್ದು ಮಾಡುತ್ತಾರೆಂದು ಆರೋಪಿಸಿ ಹತ್ಯಗೈಯಲಾಯಿತು. ಇವರ ಪರವಾಗಿ ನಿಂತವರನ್ನು, ಇಡೀ ಹಳ್ಳಿಗಳನ್ನೇ ಕ್ರೂರವಾಗಿ ಮುಗಿಸಲಾಯಿತು. ಅಧಿಕಾರ ಪಡೆಯಲು ಒಬ್ಬರನ್ನೊಬ್ಬರು ದೂರುತ್ತಾ ಕಾಲಕಳೆಯಲಾಯಿತು.

ಈ ಮಾಟಗಾರರ ದೃಷ್ಟಿ ಸರಿ ಇರುವುದಿಲ್ಲ, ಇವರು ಮದ್ದು ಬಲ್ಲವರು, ಸ್ವತಂತ್ರವಾಗಿ ತಮ್ಮ ಇಚ್ಛೆಯಂತೆ ಬದುಕುತ್ತಾರೆ. ವಿಶೇಷ ಜ್ಞಾನ ಹೊಂದಿರುತ್ತಾರೆ. ಕಾಡಿನ ಸಸ್ಯಪ್ರಬೇಧಗಳನ್ನು ಬಳಸಿ ವೈದ್ಯ ಮಾಡುತ್ತಾರೆ. ಸಾಮಾನ್ಯರಂತೆ ಅಲ್ಲ. ಸಾಂಸ್ಥೀಕರಣಕ್ಕೆ ಒಳಪಡುವುದಿಲ್ಲ. ಪುರುಷಪ್ರಧಾನತೆಯನ್ನು ಮಾನ್ಯಮಾಡಲಾರರು. ಇಂತಹವರನ್ನು ಸಾಮಾಜಿಕ ಶಿಸ್ತಿಗೆ ಒಳಪಡಿಸುವುದು ಕಠಿಣ. ಹೆಣ್ಣಿನಲ್ಲಿ ಮಾತೃ ಸ್ವರೂಪವನ್ನು ಮಾತ್ರವೇ ಉತ್ತೇಜಿಸುವ, ಕೇವಲ ಪುರುಷ/ ವ್ಯವಸ್ಥೆಗೆ ಅದೀನವಾಗಿರುವ ಲಕ್ಷಣ ತೋರಿಸುವ ಹೆಣ್ತನವನ್ನು ಉಳಿಸಿಕೊಳ್ಳುವ ಸಂರಚನೆಗಳನ್ನು ಸೃಷ್ಟಿಸಲು ಈ Witch Trial ಗಳು ಇಂಬು ನೀಡಿದವು. ಈ ಶಾಪಕ್ಕೆ ಬಲಿಯಾದ ವ್ಯಕ್ತಿ/ ಕುಟುಂಬಗಳ ಆಸ್ತಿಯನ್ನು ಮಟ್ಟುಗೋಲು ಹಾಕಿಕೊಳ್ಳಲಾಯಿತು.

Hansel and Gartel ಕತೆಯಲ್ಲಿ ಮಕ್ಕಳು ಕೊನೆಯಲ್ಲಿ ಮಾಟಗಾತಿಯ ಆಸ್ತಿ ಅಷ್ಟನ್ನೂ ಅಪ್ಪನಿಗೆ ನೀಡುವುದರೊಂದಿಗೆ ಪಿತೃಪ್ರಧಾನತೆಯನ್ನು ಮರುಸ್ಥಾಪಿಸಲಾಯಿತು. ಮಕ್ಕಳು ತಮ್ಮ ಬುದ್ಧಿವಂತಿಕೆಯನ್ನು 'ಅನ್ಯ'ರನ್ನು ನಾಶಮಾಡಲು ಬಳಸಿಕೊಳ್ಳಬೇಕು. ತಂದೆ ಅಸಹಾಯಕ. ತಾಯಿ ಕುಟುಂಬದಲ್ಲಿ ಪ್ರಧಾನವಾದರೆ ನಾಶ ಶತಃಸಿದ್ಧ ಎಂದು ನಂಬುವಂತಾಯಿತು.

ಈ ಫ್ಯಾಂಟಸಿ ಕತೆಗಳು ಅನೇಕ ತರಹದ ಸಂರಚನೆಗಳನ್ನು ಅಡಗಿಸಿಕೊಂಡಿರುತ್ತವೆ. ಭೀಕರ ಬರಗಾಲದ ಸಂದರ್ಭಗಳಲ್ಲಿ ಹುಟ್ಟಿದ ಕತೆಗಳಲ್ಲಿ ಬಗೆಬಗೆಯ ಭಕ್ಷ್ಯ ಭೋಜನಗಳ/ ಸುಖ–ಸಮೃದ್ಧಿಗಳ ಫ್ಯಾಂಟಸಿಗಳು ಮತ್ತೆ ಮತ್ತೆ ಕಂಡು ಬಂದವು. ಸಿಂಡ್ರೆಲಾ ಕತೆಯಲ್ಲಿ ಪುಟ್ಟ ಪಾದಗಳಿಗೆ ಹೋಲುವ ಚಿಕ್ಕ ಚಪ್ಪಲಿ, ಹೆಣ್ಣಿನ ಸೌಂದರ್ಯವನ್ನು ನಿರ್ಧರಿಸುವ ಮಾಪನವಾಯಿತು. ಚೀನದ ಮಹಿಳೆಯರು ತಮ್ಮ ಕಾಲುಗಳನ್ನು ಚಿಕ್ಕಂದಿನಿಂದಲೇ ಬಂಧಿಸಿ ಪುಟ್ಟ ಪಾದಗಳ ಒಡತಿಯರಾಗುವುದೇ ಜೀವಮಾನದ ಸಾಧನೆ ಎಂದು ಹೆಮ್ಮೆ ಪಡುವಂತಹ ಅನಿಷ್ಟ ಆಚರಣೆಗಳು ಚಾಲ್ತಿಗೆ ಬಂದಿದ್ದವು.

ಕತೆಗಳು ಮೂಲದಲ್ಲಿ ಮನರಂಜನೆಗಾಗಿ ಹುಟ್ಟಿಕೊಂಡರೂ ಸಂಶೋಧಕರ ದೃಷ್ಟಿಯಲ್ಲಿ ಅವು ಕೇವಲ ಮನರಂಜನೆಗಾಗಿ ಅಷ್ಟೇ ಇರುವುದಿಲ್ಲ. ಅವು ಸಮಾಜದ ಸ್ಥಿತಿ–ಗತಿಗಳ ಒಗಟುಗಳು. ಪ್ರತಿಯೊಂದು ಸಮುದಾಯವು ತನ್ನ ಉಳಿವಿಗಾಗಿ ನಡೆಸುವ ಹೋರಾಟಗಳ ದಾಖಲೆಗಳು. ಸಂಶೋಧಕರು ಸಾಹಿತ್ಯ ಕಥನಗಳು ಕಟ್ಟಿಕೊಡುವ ಅರ್ಥಗಳನ್ನು ಪೂರ್ವಗ್ರಹಿಕೆಯಿಲ್ಲದೆ ಪರಾಮರ್ಶಿಸಿ ಅನ್ವಯಿಸಿಕೊಳ್ಳುವ ಉನ್ನತ ಜವಾಬ್ದಾರಿಯನ್ನು ನಿಭಾಯಿಸಬೇಕಾಗುತ್ತದೆ. ಅಂತೆಯೇ ಎಚ್ಚರದ ಓದುಗ ಪರಂಪರೆಗಳ ನೈಜತೆಯನ್ನು, ಅರ್ಥಪೂರ್ಣತೆಯನ್ನು, ಪ್ರಸ್ತುತ ಸನ್ನಿವೇಶಕ್ಕೆ/ ಕಾಲಮಾನಕ್ಕೆ ಅನ್ವಯಿಸಿಕೊಳ್ಳುವ ಜಾಣ್ಮೆಯನ್ನು ಹೊಂದಿರಬೇಕಾಗುತ್ತದೆ.

❖❖❖

ಬೆಳ್ಳಿ ಮೂಡುತ
ಹಳ್ಳಿ ಹಾಡಿದು
ಕೋಳಿ ಕಂಠದಿ ತೆರೆದಿದೆ
ಹಕ್ಕಿ ಕೊಕ್ಕನು
ಬಿಡಿಸಿ ಕರೆಯುತ
ಕಾನ ಮೌನವ ಮುರಿದಿದೆ

ಜಾನಪದ ಸಂಸ್ಕೃತಿ ಮತ್ತು ಜಾಗತೀಕರಣ

ಡಾ. ಸೌಮ್ಯ ಕೆ.ಸಿ.
ಸಹ ಪ್ರಾದ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತೀರ್ಥಹಳ್ಳಿ

ಸಾಂಸ್ಕೃತಿಕ ಅನನ್ಯತೆಯನ್ನು ಉಳಿಸಿಕೊಂಡು ಬರುವಂಥದ್ದು ಜಾನಪದ. ಬಹುಮುಖಿ ನೆಲೆಯನ್ನು ಹೊಂದಿರುವ ಜಾನಪದ ಸಂಸ್ಕೃತಿಯು 21ನೇ ಶತಮಾನದಲ್ಲಿ ಜಾಗತೀಕರಣಕ್ಕೆ ಮುಖಾಮುಖಿಯಾಗುತ್ತಿದೆ. 20ನೇ ಶತಮಾನದ ವಸಾಹತೀಕರಣಕ್ಕಿಂತ ಜಾಗತೀಕರಣದ ಪ್ರಭಾವವು ಹೆಚ್ಚಾಗಿದ್ದು ಆಕ್ರಮಣಕಾರಿಯಾಗಿದೆ.

ಶ್ರೀ.ವಿ. ಚಂದ್ರಶೇಖರ ನಂಗಲಿಯವರು "ಜಾನಪದವನ್ನು Of the People, By the People, For the People ಎಂದು ವಿವರಿಸಿದ್ದಾರೆ. ಇದು ಸರಿ! ಜಾಗತೀಕರಣವನ್ನು ಸ್ಪೆಲ್ಲಿಂಗ್ ಬದಲಾಯಿಸಿ OFF the People, BUY the People, FOR the People ಎಂದು ವಿವರಿಸಿಕೊಳ್ಳಬೇಕು"[1] ಎಂದಿರುವರು. ಬಹುಸಂಸ್ಕೃತಿಯ ನಾಡು ಇಂದು ಏಕ ಸಂಸ್ಕೃತಿಯತ್ತ ಸಾಗುತ್ತಿದೆ. ಜೀವಕೇಂದ್ರಿತವಾದ ಜಾನಪದವು ಬಂಡವಾಳ ಕೇಂದ್ರಿತವಾದ ಜಾಗತೀಕರಣವನ್ನು ಎದುರಿಸಬೇಕಾದ ಸಂಕ್ರಮಣ ಸ್ಥಿತಿಯಲ್ಲಿದ್ದೇವೆ. ಜಾಗತೀಕರಣದ ಮೋಡಿಗೊಳಗಾದ ಮನುಷ್ಯ ಇಂದು ಮರುಚಿಂತನೆಯನ್ನು ಮಾಡಲಾಗದಷ್ಟು ಭ್ರಮೆಗೊಳಗಾಗಿರುವನು. ಜಾಗತೀಕರಣ ಜನರಲ್ಲಿನ ಯೋಚನಾ ಶಕ್ತಿಯನ್ನು ದುರ್ಬಲಗೊಳಿಸಿ ಕೊಳ್ಳುಬಾಕ ಸಂಸ್ಕೃತಿಯನ್ನು ಹೆಚ್ಚಿಸಿ ಜನರನ್ನು ಸಮುದಾಯದಿಂದ ದೂರ ಮಾಡುತ್ತಿದೆ.

ಗ್ರಾಮೀಣ ಜನರು ಒಬ್ಬರಿಗೊಬ್ಬರು ಜೊತೆಯಾಗಿ ಹಾಡುತ್ತಾ, ಹರಟುತ್ತಾ ಕೆಲಸ ಕಾರ್ಯಗಳಲ್ಲಿ ತೊಡಗುತ್ತಿದ್ದ ಕಾಲದಿಂದ ನಾವಿಂದು ದೂರ ಸರಿದಿದ್ದೇವೆ. ಜನಪದ ಸಾಹಿತ್ಯವು ಹಿಂದೆ ತಲೆಯೆತ್ತಿದ್ದೇ ಸಮುದಾಯದ ಮೂಲಕ. ಬೇಸರ ನೀಗಲು ಕಟ್ಟಿದ ಹಾಡು, ಕಥೆಗಳು, ಜೀವನಾನುಭವ ಧಾರೆಯಾಗಿದ್ದ ಒಗಟುಗಳು ಇಂದು ಕಣ್ಮರೆಯಾಗಿ ಹೋಗಿವೆ. ರಜೆ ಬಂತೆಂದರೆ ಮಕ್ಕಳನ್ನೆಲ್ಲ ಕಲೆ ಹಾಕಿಕೊಂಡು ಅಜ್ಜಿ ಹೇಳುವ ಕಥೆಗಳು ಬರಿಯ ಕಥೆಗಳಲ್ಲ. ಜೀವನದ ಅನುಭವಗಳೊಂದಿಗೆ ಹದಗೊಂಡ ಅಜ್ಜಿಯು ಕಣ್ಣಾ ಮುಚ್ಚೆ, ಕಾಡೇಗೂಡೇ, ಉದ್ದಿನ ಮೂಟೆ ಉರುಳಿ ಹೋಯ್ತು, ನಮ್ಮ ಹಕ್ಕಿ ಬಿಟ್ಟೆ ಬಿಟ್ಟೆ, ನಿಮ್ಮ ಹಕ್ಕಿ ಬಚ್ಚಿಟ್ಟುಕೊಳ್ಳಿ ಎಂಬ ಹಾಡಿನೊಂದಿಗೆ ಬದುಕಿನ ನಿಯಮವನ್ನೇ ಸಾರಿ ಬಿಡುತ್ತಿದ್ದಳು. ಕಥೆಯೊಳಗೆ ನೈತಿಕತೆಯನ್ನು, ಮನುಷ್ಯತ್ವವನ್ನು ತುಂಬುತ್ತಾ ಜೀವನ್ಮುಖಿ ಕಥೆಗಳನ್ನು ಹೇಳುತ್ತಾ ಮಕ್ಕಳ ಮನಸ್ಸಿಗೆ ಮಾರ್ಗದರ್ಶಕಿಯಾಗಿದ್ದಳು. ಆದರೆ ನಮ್ಮ ಆಧುನಿಕ ಭರಾಟೆಯ ಬದುಕು ದಾವಂತಕ್ಕೆ ಒಳಗಾಗಿ ಕಥೆ ಹೇಳುವ, ಕೇಳುವ ಸಂಸ್ಕೃತಿಯಿಂದ ಹೊರಗುಳಿದು ಬಿಟ್ಟಿರುವೆವು. ಆಟಗಳಲ್ಲಿಯೇ ಚೆನ್ನೆಮಣೆ, ಕುಂಟಪಿಲ್ಲೆ, ಚಿನ್ನಿದಾಂಡು, ಲಗೋರಿ, ಕವಡೆ, ಮರಕೋತಿ ಆಟಗಳ ಸ್ಥಾನವನ್ನು ಇಂದು ವಿಡಿಯೋ ಗೇಮ್‌ಗಳು, ಆನ್‌ಲೈನ್ ಆಟಗಳು ಆಕ್ರಮಿಸುತ್ತಾ ಬದುಕಬೇಕಾದ ಜೀವಕುಡಿಗಳನ್ನು ದಾಸ್ಯಕ್ಕೆ ಒಳಪಡಿಸುತ್ತಾ, ಸಾವಿಗೆ ಹುರಿದುಂಬಿಸುತ್ತಾ ಅತಿಕ್ರಮಿಸುತ್ತಿವೆ. ಸಾಮೂಹಿಕವಾದ ಜಾನಪದ ಬದುಕನ್ನು ನಾವು ವಿಘಟನೆಯತ್ತ

ಕೊಂಡೊಯ್ಯುತಿದ್ದೇವೆ. ಕೌಟುಂಬಿಕ ವ್ಯವಸ್ಥೆಯೊಳಗೆ ಅವಿಭಕ್ತ ಕುಟುಂಬಗಳನ್ನು ಒಡೆದುಕೊಳ್ಳುತ್ತಾ ಏಕಾಂಗಿಯಾದ ಬದುಕನ್ನೇ ಅಪ್ಪಿಕೊಳ್ಳುವುದರ ಹಿಂದಿರುವ ಕೈ ಜಾಗತೀಕರಣ. ಮಾನವೀಯತೆ, ಅಂತಃಕರಣ, ಸೌಹಾರ್ದ, ಸಹಬಾಳ್ವೆಗಳ ಬದಲಾಗಿ ಆತಂಕ, ತಲ್ಲಣಗಳು ಬದುಕಿನ ತುಂಬಾ ತುಂಬಿವೆ.

ಜಾಗತೀಕರಣವು ನಮ್ಮ ಆಹಾರ ಪದ್ಧತಿಯ ಮೇಲೂ ಆಕ್ರಮಣ ಮಾಡಿ ದೇಸೀ ಆಹಾರ ಪದ್ಧತಿಯಿಂದ ಹೊರಗುಳಿಯುವ ಸಂದರ್ಭ ಎದುರಾಗಿದೆ. ಪಟ್ಟಣಗಳಲ್ಲಷ್ಟೇ ಅಲ್ಲದೆ ಹಳ್ಳಿಗಳಲ್ಲಿಯೂ ಫಾಸ್ಟ್‌ಫುಡ್ ಮಳಿಗೆಗಳುತಲೆಯೆತ್ತುತ್ತವೆ. ಎಷ್ಟು ದಿನವದರೂ ಕೊಳೆಯದ, ಹಾಳಾಗದ ಆಹಾರಗಳು ಮಾರುಕಟ್ಟೆಗೆ ಬಂದಿಳಿದಿವೆ. ಜನಪದರು ಆಯಾ ಋತುಮಾನಗಳಿಗನುಗುಣವಾಗಿ ಬಳಸುತ್ತಿದ್ದ ತರಕಾರಿ–ಹಣ್ಣುಗಳು ಇಂದು ನಮಗೆ ಆಯಾ ಕಾಲವೇ ಬೇಕಾಗದೆ, ಬೇಕೆಂದಾಗೆಲ್ಲ ಬಳಸಬಹುದಾದ ಪದ್ಧತಿ ಅನುಸರಿಸುತ್ತಿದ್ದೇವೆ. ಆಧುನಿಕ ಜೀವನಶೈಲಿಯ ಆಕ್ರಮಣದಿಂದಾಗಿ ಅನೇಕ ಖಾಯಿಲೆಗಳಿಗೆ ಈಡಾಗುತ್ತಿದ್ದೇವೆ. ಖಾಯಿಲೆಗಳು ಒಂದೆಡೆಯಾದರೆ ಈ ಖಾಯಿಲೆಗಳನ್ನು ವಾಸಿಮಾಡುವ ಆಸ್ಪತ್ರೆಗಳು ಇನ್ನೊಂದೆಡೆ ನಮ್ಮನ್ನು ಸುಲಿಗೆ ಮಾಡುತ್ತಿವೆ. ಸಾರ್ವತ್ರೀಕರಣ ಮಾಡಲಾಗದಿದ್ದರೂ ಬಹುಜನರ ಬದುಕನ್ನು ಖಾಯಿಲೆ ಒಂದೆಡೆ ಸಾಯಿಸಿದರೆ ಖಾಯಿಲೆಯಾದವನ ಸಂಸಾರವನ್ನೇ ಹಣದ ಅತಿಮೋಹವು ಮುಳುಗಿಸುತ್ತಿದೆ. ನಾವಿಂದು ಹೈಟೆಕ್ ಆಸ್ಪತ್ರೆಗಳಿಗೆ ಕಾಲಿಟ್ಟರೆ ಸಹಜವಾದ ಹೆರಿಗೆಗಳೂ ನಡೆಯದೆ ಸಾವಿರಾರು ರೂಪಾಯಿಗಳನ್ನು ತೆರಬೇಕಾದ ದುಸ್ಥಿತಿಗೆ ಒಳಗಾಗಿರುವೆವು. "ಜಾನಪದ ವೈದ್ಯ ಬಹುಮಟ್ಟಿಗೆ ತನ್ನ ಖಾಯಿಲೆಗಳಿಗೆ ಪರಿಹಾರವನ್ನು ಸಸ್ಯ, ಪ್ರಾಣಿ, ಖನಿಜ ಮುಂತಾದ ನೈಸರ್ಗಿಕ ವಸ್ತುಗಳಲ್ಲಿ ಕಂಡುಕೊಳ್ಳಲು ಪ್ರಯತ್ನಿಸುತಿದ್ದನು."[2]

ನಾವು ಇಂದು ಇಂಗ್ಲಿಷ್ ಮೆಡಿಸಿನ್‌ನನ್ನು ಅನುಸರಿಸುತ್ತಾ ಜನಪದ ವೈದ್ಯವನ್ನು ಮರೆತರೆ ಮತ್ತೊಂದೆಡೆ ಇದಕ್ಕೆ ಅಗತ್ಯವಾದ ಗಿಡಮೂಲಿಕೆಗಳೇ ಇಲ್ಲವಾಗಿವೆ. "ಸಹಜೀವಿ ಸಂಕುಲಗಳ ಮಸಣವಾಗಿರುವ ಮಹಾನಗರಗಳ ಹಾದಿ ಬೀದಿಗಳಲ್ಲಿ ಕಿರುನೆಲ್ಲಿ, ಒಂದೆಲಗ, ಸುಗಂಧಿ, ಮಂಗರವಳ್ಳಿ ಮುಂತಾದ ಗಿಡಮೂಲಿಕೆಗಳನ್ನು ಕಾಣಲು ಸಾಧ್ಯವೇನು? ಇದರ ಪರಿಣಾಮವಾಗಿ ಹಿತ್ತಲುಗಳನ್ನು ಕಳೆದಕೊಂಡಿರುವ ಮಹಾನಗರಗಳು ಬಗೆಬಗೆಯ ಬಜಾರುಗಳನ್ನು ಭವ್ಯವಾಗಿ ನಿರ್ಮಾಣ ಮಾಡಿಕೊಂಡಿವೆ."[3] ಜನಪದರು ಭೂಮಿಯನ್ನು ತಾಯಾಗಿ, ಒಡಲಾಗಿ ಗ್ರಹಿಸುತ್ತ ಆಕೆಗೆ ನೋವಾಗದಂತೆ ಬದುಕು ಕಟ್ಟಿಕೊಡಿದ್ದರು. ಆದರೆ ನಾವಿಂದು ಮಣ್ಣಿಗೂ ಬೆಲೆಕಟ್ಟುತ್ತ ಭೂಮಿಯ ಒಡಲನ್ನೇ ದೋಚುವ ಸ್ಥಿತಿಗೆ ಬಂದು ನಿಂತಿದ್ದೇವೆ.

ಜನಪದ ಹೆಣ್ಣುಮಗಳೊಬ್ಬಳು
"ಬೆಳಗಾಗ ನಾನೆದ್ದುಯರ್‍ಯಾರ
ನೆನೆಯಾಲಿ ಎಳ್ಳು ಜೀರಿಗೆ ಬೆಳೆಯೋಳ
ಎದ್ದೊಂದು ಗಳಿಗೆ ನೆನೆದೇನ"

ಎಂದರೆ, ಮತ್ತೊಂದೆಡೆ ಪ್ರತೀ ಕೃಷಿ ಚಟುವಟಿಕೆಯ ಆರಂಭದಲ್ಲಿಯೂ ಭೂಮಿಯನ್ನು ಪೂಜಿಸುವ ಆರಾಧಿಸುವ ಪರಿಪಾಠ ಕಂಡುಬರುತ್ತದೆ. ಮಲೆನಾಡಿನಲ್ಲಿ ಭೂಮಿಹುಣ್ಣಿಮೆಯೆಂಬ ವೈಶಿಷ್ಟ್ಯಪೂರ್ಣವಾದ ಆಚರಣೆಯಿದ್ದು ಭೂಮಿಗೆ ಪೂಜೆ ಮಾಡಿ ಆಹಾರವನ್ನು ತಳಿಯುವ ಪದ್ಧತಿಯು ಗರ್ಭಿಣಿಯಾದ ಹೆಣ್ಣುಮಗಳಿಗೆ

ಬಯಕೆ ಹಾಕುವ ಸಂಪ್ರದಾಯದಂತೆಯೇ ಆಚರಣೆಯು ರೂಢಿಗೆ ಬಂದಿತ್ತು. ಆದರೆ ಜಾಗತೀಕರಣದ ಮೋಡಿಗೊಳಗಾದ ರೈತರ ಬದುಕು ಮತ್ತು ಅವರ ಬೇಸಾಯವು 'ನಾಸಾಯ, ನೀಸಾಯ, ಮನೆಮಂದಿಯೆಲ್ಲ ಸಾಯ' ಎಂಬಂತಹ ಸ್ಥಿತಿಗೆ ತಂದು ನಿಲ್ಲಿಸಿಬಿಟ್ಟಿದೆ. ಹಿಂದೆ ಅಲ್ಪ ಸ್ವಲ್ಪ ಭೂಮಿಯ ಒಡೆತನಕ್ಕಾಗಿ ಕಾಯುತ್ತಿದ್ದ ಜೀವಗಳು ಒಂದೆಡೆಯಾದರೆ ಇಂದು ಇದ್ದಂತಹ ಚೂರು-ಪಾರು ಜಮೀನನ್ನೂ ಮಾರಿ ಪಟ್ಟಣದೆಡೆಗೆ ಸಾಗುತ್ತಿರುವೆವು. ಹಿಂದೆ ಕೆಟ್ಟು ಪಟ್ಟಣಕ್ಕೋಗು ಎಂಬ ಮಾತು ಪ್ರಚಲಿತದಲ್ಲಿದ್ದು ಹಳ್ಳಿಯ ಬದುಕು ಸ್ವರ್ಗದಂತೆ ಮನಸುಗಳನ್ನು ಬೆಸೆಯುವ ಕೈಂಕರ್ಯವನ್ನು ಮಾಡುತ್ತಿತ್ತು. ಆದರೆ ಇಂದು ಪಟ್ಟಣದಲ್ಲಿರುವುದು ವ್ಯಕ್ತಿಯ ಹೆಗ್ಗಳಿಕೆಯಾಗಿದೆ.

ಜನಪದರು ಸಂಪನ್ಮೂಲಗಳ ಮರುಬಳಕೆಯನ್ನು ಮಾಡಿಕೊಳ್ಳುತ್ತಿದ್ದು ಪರಿಸರ ಸ್ನೇಹಿಯಾಗಿದ್ದು ಫಲವತ್ತಾದ ರಾಸಾಯನಿಕಗಳನ್ನು ಸೋಂಕಿಸದೆ ಶುದ್ಧ ಆಹಾರವನ್ನು ನೀಡುತ್ತಿದ್ದರು. ಆದರೆ ನಾವಿಂದು ನಿಸರ್ಗದ ಸಂಪತ್ತನ್ನು ನಿರ್ಮೂಲನೆ ಮಾಡುತ್ತಾ ಪರಿಸರಕ್ಕೆ ಮಾರಕವಾದ ರೀತಿಯಲ್ಲಿಯೇ ಸಾಗುತ್ತಿದ್ದೇವೆ. ಜಾಗತೀಕರಣದ ಪ್ರಭಾವಕ್ಕೊಳಗಾಗಿರುವ ನಮಗಿಂದು ಅದರ ಅರಿವು ಆಗುತ್ತಿಲ್ಲ. ಜಾನಪದ ಸಂಸ್ಕೃತಿಯ ಭಾಗವಾಗಿರುವ ಪ್ರತಿಯೊಂದು ವಸ್ತು ವಿಷಯವನ್ನೂ ಜಾಗತೀಕರಣವು ಸರಕೀರಣಗೊಳಿಸಿ ಬಿಡುತ್ತದೆ. ನಮ್ಮ ಜೀವನಶೈಲಿಯೂ ಇದರಿಂದ ಹೊರತಾಗಿಲ್ಲ. ಕೊಳ್ಳುಬಾಕ ಸಂಸ್ಕೃತಿಯೊಳಗಿರುವ ನಾವಿಂದು ಮುಕ್ತ ಮರುಕಟ್ಟೆಗೆ ಒಗ್ಗಿಕೊಂಡಿದ್ದೇವೆ. ಜನಪದರು ವಸ್ತುಗಳನ್ನು ಅಗತ್ಯವಿದ್ದರೆ ಮಾತ್ರ ಕೊಂಡುಕೊಳ್ಳುವ ಪದ್ಧತಿಯಿದ್ದದ್ದು ಇಂದು ಮನೆ ಬಾಗಿಲಿಗೆ ವಸ್ತುಗಳು ಬಂದು ಬೀಳುವ ಮಟ್ಟಕ್ಕೆ ವಾಣಿಜ್ಯ ಕ್ಷೇತ್ರ ಅಭಿವೃದ್ಧಿ ಹೊಂದಿದ್ದು ಬೇಕೋ ಬೇಡವಾಗಿಯೋ ವಸ್ತುಗಳನ್ನು ಕೊಂಡುಕೊಳ್ಳುವ ದುರ್ಬಲ ಮನಸ್ಸನ್ನು ಜಾಗತೀಕರಣವು ಸೃಷ್ಟಿಮಾಡಿದೆ. ಕಣ್ಣಿಗೆ ಕಂಡ ವಸ್ತುಗಳೆಲ್ಲವೂ ಮನೆಯ ಕಪಾಟನ್ನು ಅಲಂಕರಿಸಬಿಟ್ಟಿರುತ್ತವೆ. ಅದರ ಬಳಕೆಯ ಬಗ್ಗೆ ಯೋಚಿಸಲಾರದಷ್ಟು ದುರ್ಬಲ ಮನಸ್ಸು ನಮ್ಮದಾಗಿದೆ. ಇದಕ್ಕೆ ಜೊತೆಯಾಗಿ ಜಾಗತೀಕರಣದ ವ್ಯಾಖ್ಯಾನವೇ ಬಳಸು, ಬಿಸಾಡು ಎಂಬುದಾಗಿದೆ. ಜನಪದರು ವಸ್ತುಗಳನ್ನು ಮರುಬಳಕೆ ಮಡುತ್ತಿದ್ದ ಕಾಲದಿಂದ ದೂರ ಸರಿದಿದ್ದೇವೆ. ನಾವು ಬಳಸುವ ಬಹಳಷ್ಟು ವಸ್ತುಗಳು ಇದೇ ಸಂಸ್ಕೃತಿಯ ಕೊಡುಗೆಗಳಾಗಿವೆ. ಒಮ್ಮೆ ಬಳಸಿದರೆ ಅದರ ಉಪಯೋಗ ಮುಗಿದಂತೆಯೇ! ಆ ವಸ್ತುವಿನ ಸ್ಥಾನವಿನ್ನೇನಿದ್ದರೂ ಕಸದ ಬುಟ್ಟಿಯಾಗಿದೆ. ಕಸದಬುಟ್ಟಿಯಿಂದ ಮತ್ತೆ ಆ ಬಿಸಾಕಿದ ವಸ್ತುಗಳು ಸೇರುವುದು ಪರಿಸರವನ್ನೇ. ತ್ಯಾಜ್ಯ ವಸ್ತುಗಳ ವಿಲೇವಾರಿಯೂ ಸಮರ್ಥವಾದ ರೀತಿಯಲ್ಲಿ ನಡೆಯುತ್ತಿಲ್ಲ.

ಇನ್ನು ಜನಪದ ಕಲೆಗಳನ್ನು ಅವಲೋಕಿಸಿದರೆ ಯಕ್ಷಗಾನ, ಬಯಲಾಟ, ಕಂಸಾಳೆ, ಭೂತಾರಾಧನೆ, ಕೋಲ ಮತ್ತಿತರ ಪ್ರದರ್ಶನ ಕಲೆಗಳು ಜನಪದರ ಬದುಕಿನ ಅವಿಭಾಜ್ಯ ಅಂಗವಾಗಿದ್ದವು. ಮಲೆನಾಡು ಮತ್ತು ದಕ್ಷಿಣ ಕರ್ನಾಟಕಗಳಲ್ಲಿ ಆಡಿಸುತ್ತಿದ್ದ ಹರಕೆಯ ಯಕ್ಷಗಾನ ಆಟಗಳು ರಾತ್ರಿಯಿಡೀ ನಡೆಯುವ ಮೂಲಕ ಒಗ್ಗೂಡಿಸುವ ಕಾರ್ಯವನ್ನು ಮಡುತ್ತಿದ್ದವು. ಈ ಸಂದರ್ಭದಲ್ಲಿ ಊರಿನ ಗ್ರಾಮಸ್ಥರು, ಬಂಧು ವರ್ಗದವರು ಒಟ್ಟಾಗಿ ಸೇವೆಯ ನೆಪದಲ್ಲಿ ಆಟಗಳನ್ನು ವೀಕ್ಷಿಸುತ್ತಿದ್ದರು. ಜನಪದ ಮಹಾಕಾವ್ಯಗಳನ್ನು ಉತ್ತರ ಕರ್ನಾಟಕದ ಭಾಗದಲ್ಲಿ ರಾತ್ರಿಯಿಡೀ ಕುಳಿತು

ಹಾಡುತ್ತಿದ್ದರು. ಮಲೆನಾಡು ಭಾಗದಲ್ಲಿ ದೀಪಾವಳಿ ಆರಂಭವಾಯಿತೆಂದರೆ ಅಂಟಿಗೆ ಪಿಂಟಿಗೆ ಹಾಡುಗಳನ್ನು ರಾತ್ರಿಯಿಡೀ ಜನರು ಸೇರಿ ಮನೆ ಮನೆ ತಿರುಗಿ ಹಾಡಿ ಬರುವ ಸಂಪ್ರದಾಯವಿದ್ದು ಈ ಕಲೆಗಳೆಲ್ಲ ಇಂದು ಕಾಲಮಿತಿಯೊಳಗೆ ಪ್ರದರ್ಶನವಾಗುತ್ತಿದ್ದು ತನ್ನ ಸತ್ವವನ್ನೇ ಕಳೆದುಕೊಂಡು ಬರಿದಾಗುತ್ತಿವೆ. ಧನಾತ್ಮಕವಾಗಿ ನೋಡಿದರೆ, ಕಲೆಗಳು ಇಂದು ತಮ್ಮ ಮಡಿವಂತಿಕೆಯನ್ನು ಬದಿಗೊತ್ತಿ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಪ್ರದರ್ಶನವಾಗುತ್ತಿದ್ದರೂ ಜಾನಪದ ಕಲೆಗಳಿಗಿರುವ ಬಹುಮುಖಿ ಆಯಾಮವು ಕೇವಲ ಪ್ರದರ್ಶನದ ಮೂಲಕ ಜನರನ್ನು ಆಕ್ಷಣಕ್ಕೆ ಆಕರ್ಷಿಸಿ ಮರೆಯಾಗುವ ಕ್ರಿಯೆಯಲ್ಲ. ನೋಡಿ ಮರೆಯುವ ಕಲೆಗಳಾಗದೆ ಪೀಳಿಗೆಯಿಂದ ಪೀಳಿಗೆಗೆ ಕಲೆಯೂ ರವಾನೆಯಾಗುತ್ತಿದ್ದುವು.

ನಾವು ವಿವಿಧ ಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದೇವೆ. ಆಯಾ ಪ್ರದೇಶಗಳಿಗನುಗನುಗುಣವಾಗಿ ಹವಾಮಾನ, ಸಮಪನ್ಮೂಲಗಳೆಲ್ಲ ವೈವಿಧ್ಯತೆಯನ್ನು ಪಡೆದುಕೊಂಡಿವೆ. ಇದಕ್ಕನುಗುಣವಾಗಿಯೇ ಜನರ ಜೀವನ ರೂಪುಗೊಂಡಿದ್ದು ಆಯಾ ಪರಿಸರಕ್ಕನುಗುಣವಾಗಿಯೇ ಸಾಂಸ್ಕೃತಿಕವಾದ ಬದುಕನ್ನು ಕಟ್ಟಿಕೊಂಡು ಜೀವಿಸುತ್ತಿರುವ ಸಮಾಜವು ಆಧುನಿಕತೆಯ ಹೆಸರಿನಲ್ಲಿ ಬಹುಸಂಸ್ಕೃತಿಯನ್ನು ಕಳೆದುಕೊಂಡು ಏಕಸಂಸ್ಕೃತಿಯ ಕಡೆಗೆ ಸಾಗುತ್ತಿರುವುದು ವಿಷಾದದ ಸಂಗತಿ. ವಸ್ತುಗಳ ಮಾರುವಿಕೆ, ಹಣಗಳಿಸುವಿಕೆ, ಪಾಶ್ಚಾತ್ಯರೊಂದಿಗೆ ಸರಿಸಮವಾಗಿ ನಿಲ್ಲಬೇಕೆಂಬ ಹಪಹಪಿಸುವಿಕೆಯಿಂದ ಈ ನೆಲದ ನಿಜ ಬದುಕನ್ನು ಮರೆತು ಅನ್ಯಮಾರ್ಗದ ಮೂಲಕ ಬದುಕು ಕಟ್ಟಿಕೊಂಡು ನಮ್ಮ ವಿನಾಶವನ್ನು ನಮ್ಮಿಂದಲೇ ಮಾಡಿಸುವ ಜಾಗತೀಕರಣದ ಕ್ರಿಯೆಯಿಂದ ಎಚ್ಚೆತ್ತರೆ ಮನುಕುಲದ ಉಳಿವು ಸಾಧ್ಯವಾದೀತು. ಜಾಗತೀಕರಣದ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳುವುದಕ್ಕಿಂತ ಜಾಗತೀಕರಣದೊಳಗೆ ಬಹುಮುಖಿ ಸಮುದಾಯಗಳ ಅಸ್ಮಿತೆಯನ್ನು ಉಳಿಸಿಕೊಳ್ಳುವ ಪ್ರಯತ್ನಗಳು ನಡೆಯಬೇಕಿದೆ.

ಅಡಿಟಿಪ್ಪಣಿ

1. ರಾಮಚಂದ್ರೇಗೌಡ ಹಿ.ಶಿ., ಜಾನಪದ ಗ್ರಹಿಕೆ ಪರಿಕಲ್ಪನೆ(ಸಂ), ಪುಟ. 245.
2. ಅಂಬಳಿಕೆ ಹಿರಿಯಣ್ಣ, ಕರ್ನಾಟಕ ಸಂಶೋಧನಾ ಜಾನಪದ (ಪ್ರ.ಸಂ), ಪುಟ. 169.
3. ಹಿ.ಶಿ.ರಾಮಚಂದ್ರೇಗೌಡ, ಹಿ.ಶಿ, ಜಾನಪದ ಗ್ರಹಿಕೆ ಪರಿಕಲ್ಪನೆ– (ಸಂ). ಪುಟ246.

ಪರಾಮರ್ಶನ ಗ್ರಂಥಗಳು:

1. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 1968.
2. ಮೋಹನ ಕುಂಟಾರ್ ಎ., ಸಮುದಾಯಗಳ ಕನ್ನಡ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
3. ಲಿಂಗಯ್ಯ ಡಿ., ಸಂಧ್ಯಾರೆಡ್ಡಿ ಕೆ.ಆರ್, ಜಾನಪದ ಸ್ವರೂಪ ಮತ್ತು ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2000.
3. ಶಂಕರನಾರಾಯಣ ತಿ.ನಂ., ಜಾನಪದ ಸಮೀಕ್ಷೆ–ವಿಶ್ಲೇಷಣೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2012

❖❖❖

ಹಲಮಾರಿ ಹೆಣ್ಣು ಬೇವಿನಹಟ್ಟಿ ಕಾಳಮ್ಮ

ಡಾ. ಎಂ.ವೈ. ಶಿವರಾಮು
ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಾವಿದ್ಯಾಲಯ(ಸ್ವಾಯತ್ತ), ಮಂಡ್ಯ–571401

ಮಲೆ ಮಹದೇಶ್ವರನ ಕಥೆ ಬಹಳ ಸಂಕೀರ್ಣ ಕಥಾಹಂದರವನ್ನು ಹೊಂದಿದೆ. ಜನಪದರ ಕರ್ತೃತ್ವ ಶಕ್ತಿಗೆ ಕೈಗನ್ನಡಿಯಾಗಿದೆ. ಜನಪದ ಮಹಾಕಾವ್ಯಗಳಲ್ಲಿ ಮಲೆಯ ಮಹದೇಶ್ವರ ಕಾವ್ಯ ಅಗ್ರಸ್ಥಾನಿಯಾಗಿದೆ. ಮಹದೇಶ್ವರನನ್ನು ಆತನ ಭಕ್ತ ಗಣ ಮಾದಪ್ಪ ಎಂದೇ ಕರೆಯುತ್ತಾರೆ. ಈತನ ಘನಮಹಿಮೆಯನ್ನು ಜನಪದ ಮಹಾಕಾವ್ಯವು ಶ್ರುತಪಡಿಸುತ್ತದೆ.

ವಿವಿಧ ಭಾರತೀಯ ಪುರಾಣ ಕಥೆಗಳಲ್ಲಿ ಹೆಣ್ಣಿನ ಬವಣೆ, ಕಷ್ಟ, ಕೋಟಲೆಗಳನ್ನು ಕುರಿತ ಚಿತ್ರಣ ಕಂಡುಬರುತ್ತದೆ. ಅಂತೆಯೇ ನಮ್ಮ ಜನಪದ ಮಹಾಕಾವ್ಯಗಳೂ ಕೂಡ ಹಣ್ಣಿನ ಬದುಕಿನ ಸಂಕೀರ್ಣತೆಯನ್ನು ಚಿತ್ರಿಸಿವೆ. ಮಹದೇಶ್ವರ ಕಾವ್ಯದಲ್ಲಿ ಕೂಡ ಅನೇಕ ಸ್ತ್ರೀ ಪಾತ್ರಗಳಿದ್ದು ಅವು ವಿಭಿನ್ನ ರೀತಿಯಲ್ಲಿ ಮೂಡಿಬಂದಿವೆ. ಮಹದೇಶ್ವರ ಕಾವ್ಯದಲ್ಲಿನ ಕಲ್ಯಾಣಮ್ಮ, ಸಂಕಮ್ಮನ ಪಾತ್ರಗಳಿಗಿಂತ ವಿಭಿನ್ನವಾದುದು ಬೇವಿನಹಟ್ಟಿ ಕಾಳಮ್ಮನ ಪಾತ್ರ. ಕಲ್ಯಾಣಮ್ಮ, ಸಂಕಮ್ಮನ ಪಾತ್ರಗಳು ಹೆಣ್ಣಿನ ಸೌಮ್ಯತೆ, ತಾಳ್ಮೆ, ಉದಾರ ಮನೋಭಾವವನ್ನು ಹೊಂದಿದ್ದರೆ, ಬೇವಿನಹಟ್ಟಿ ಕಾಳಮ್ಮನ ಪಾತ್ರ ಹೆಣ್ಣಿನ ಕಠಿಣ, ಕ್ರೂರ, ಜಟಿಲ, ಅಹಂಕಾರದ ಸ್ವಭಾವಗಳನ್ನು ಹೊಂದಿದೆ.

ಬೇವಿನಹಟ್ಟಿ ಕಾಳಮ್ಮನ ಕಥಾ ಭಾಗ ಬಹಳ ವಿಶಿಷ್ಟವೂ, ವಿಭಿನ್ನವೂ ಆದ ಕಥಾ ಭಾಗವಾಗಿದೆ. ಐಶ್ವರ್ಯ ಮನುಷ್ಯನನ್ನು ನಿರ್ದಯಿಯನನ್ನಾಗಿಸುತ್ತದೆ ಎಂಬುದನ್ನು ಇಲ್ಲಿ ಕಾಣಬಹುದು. 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದ' ಎಂಬ ಗಾದೆಯಂತೆ ಬೇವಿನಹಟ್ಟಿ ಕಾಳಮ್ಮನು ಬಡತನದಿಂದ ಸಿರಿತನ ಹೊಂದಿದ ಮೇಲೆ ಬಹಳ ದುರಹಂಕಾರದಿಂದ ವರ್ತಿಸುತ್ತಾಳೆ. ಅವಳು ಸಿರಿತನದ ಅಹಂಕಾರದೊಡನೆ ದುರ್ವತನೆ ಹಾಗೂ ಜಿಪುಣತನ ಹೊಂದಿದ್ದಳು.

ಪಿ.ಕೆ.ರಾಜಶೇಖರ ಅವರು ಸಂಪಾದಿಸಿರುವ 'ಮಲೆಯ ಮಹದೇಶ್ವರ' ಜನಪದ ಮಹಾಕಾವ್ಯದ ಎರಡನೇ ಸಂಪುಟದಲ್ಲಿ ಬೇವುನ್ಹಟ್ಟಿ ಕಾಳಮ್ಮನ ಪ್ರಸಂಗವಿದೆ. ಇಲ್ಲಿ ಅವಳ ಸಿರಿತನ ಹಾಗೂ ಬಡತನವೆರಡರ ಅತಿರೇಕದ ಬಣ್ಣನೆ ಇದೆ. ಆರಂಭದಲ್ಲಿ ಅವಳ ವೈಭವದ ಚಿತ್ರಣವಿದೆ. ಬೇವು ಮನೆ ನಿರ್ಮಾಣದಲ್ಲಿ ಬಹಳ ಪ್ರಮುಖವಾದ ಮರವಾಗಿದೆ. ಹಿಂದೆ ಬೇವಿನ ಮರ ಬಳಸುವವರು ಸಿರಿವಂತ ಜನರಾಗಿದ್ದರು. ವೈಭವದ ಮನೆ ಜೊತೆಗೆ ಆ ಮನೆಯ ಪಹರೆಗೆ ಹಾವುಗಳನ್ನು ಇಟ್ಟಿದ್ದಳು ಎಂಬಲ್ಲಿ ಜನಪದರ ಅತಿಮಾನುಷ ಕಲ್ಪನೆಯ ಅಗಾಧ ಶಕ್ತಿಗೆ ಕನ್ನಡಿ ಹಿಡಿಯುತ್ತದೆ. ಅಂತೆಯೇ ಇಲ್ಲಿ ಬೇವುನ್ಹಟ್ಟಿ ಕಾಳಮ್ಮನ ಸಿರಿ ಸಂಪತ್ತಿನ ವೈಭವದ ಅತಿರೇಕವಿದೆ. ಅವಳ ಮನೆಯ ದನ, ಕರು, ಆಡು, ಕುರಿಗಳನ್ನು ಕಟ್ಟಲು ಚಿನ್ನ, ಬೆಳ್ಳಿ ಗೂಟಗಳು ಎಂಬಲ್ಲಿ ಆ ಅತಿರೇಕವನ್ನು ಗುರುತಿಸಬಹುದು. ಕಾಳಮ್ಮನಿಗೆ ಏಳುಜನ ಗಂಡು ಮಕ್ಕಳು. ಆ ಏಳುಜನ ಗಂಡು ಮಕ್ಕಳಿಗೆ ಆಲಂಬಾಡಿ ಜುಂಜೇಗೌಡನ ಹೆಣ್ಣುಮಕ್ಕಳೊಡನೆ

ಮದುವೆಯಾಗಿದೆ. ಸಿರಿತನದಲ್ಲಿ ಓಲಾಡುತ್ತಿದ್ದ ಕಾಳಮ್ಮ ಭಾಗ್ಯವನ್ನು ಕರುಣಿಸಿದ ಮಾದಪ್ಪನನ್ನೇ ಮರೆತು ಬಿಡುತ್ತಾಳೆ. ಅದಕ್ಕಾಗಿಯೇ ನಮ್ಮ ಜನಪದರು 'ಹಿಂದ್ಲುದ ನೆನ್ಕೊ ಹಿಮ್ಮಡಿ ಕಾಲ ತೊಳ್ಕೊ' ಎಂಬ ಗಾದೆ ಸೃಷ್ಟಿಸಿದ್ದಾರೆ. ಇದು ಮಾದಪ್ಪನಿಗೆ ಅರುವಾಗಿ ಅವಳ ಪರೀಕ್ಷೆಗಾಗಿ ತನ್ನ ಶಿಶು ಮಗ ಕಾರಯ್ಯನನ್ನು ಕರೆದು ಆಕೆಯ ದುಡವನ್ನು ತಿಳಿದುಕೊಂಡು ಬರಲು ಹೇಳುತ್ತಾನೆ. ಬೇವುನ್ಹಟ್ಟಿಗೆ ಹೋದಂತ ಕಾರಯ್ಯ ಅಲ್ಲಿನ ಬಿಗಿ ಪಹರೆಯನ್ನು ಬೇಧಿಸಲಾಗದೆ ಭಯದಿಂದ ಹಿಂದಿರುಗುತ್ತಾನೆ. ಕಡೆಗೆ ಮಾದಪ್ಪನೇ ಆಕೆಯನ್ನು ಪರೀಕ್ಷಿಸಲು ನಿರ್ಧರಿಸುತ್ತಾನೆ. ಇದಕ್ಕಾಗಿ ಕನ್ನಯ್ಯನಿಗೆ ಬರಗವನ್ನು ಹಿಡಿದು ತರಲು ಹೇಳುತ್ತಾನೆ. ಕನ್ನಯ್ಯ ಹುಲಿ ಹಿಡಿದು ತರಲು ಹೆದರುತ್ತಾನೆ. ಆಗ ಮಾದಪ್ಪನೇ ಮಂತ್ರಿಸಿದ ವಿಭೂತಿ ನೀಡಿ ಧೈರ್ಯ ತುಂಬಿ ಕಳುಹಿಸುತ್ತಾನೆ. ಅಸಾಧ್ಯವಾದುದನ್ನು ಸಾಧ್ಯ ಮಾಡುವುದೇ ಮಾದಪ್ಪನ ಮಹಿಮೆ. ಜನಪದರು ತಮ್ಮ ಕಥಾನಾಯಕನನ್ನು ಉತ್ತುಂಗದ ಶಿಖರದಲ್ಲಿ ಕೂರಿಸಿ ಆರಾಧಿಸುತ್ತಾರೆ. ಸಿಂಗರಿಸಿದ ಬರಗದ ಮೇಲೆ ಸವಾರಿ ಹೊರಡುತ್ತಾರೆ. ಸವಾರಿ ಹೊರಡುವುದಕ್ಕೂ ಮೊದಲು ಕನ್ನಯ್ಯನಿಗೆ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಡುತ್ತಾನೆ. ಜೊತೆಗೆ ತನ್ನ ಇರುವಿಕೆಯ ಅರಿವಿನ ತಿಳಿವನ್ನು ನೀಡಿ ಗುಡಿ ಗೋಪುರಗಳ ಬಸವನ ಜೋಪಾನ ಮಾಡುವ ಎಲ್ಲ ಬಗೆಯ ಎಚ್ಚರಿಕೆ, ತಿಳುವಳಿಕೆ ನೀಡುತ್ತಾರೆ. ಸಕಲ ರೀತಿಯ ಬುದ್ಧಿವಾದ ಹೇಳುತ್ತಾರೆ. ಒಬ್ಬ ಯಜಮಾನ ತನ್ನ ಸೇವಕನಿಗೆ ನೀಡುವ ಎಲ್ಲಾ ರೀತಿಯ ಎಚ್ಚರಿಕೆ, ಬುದ್ಧಿವಾದ, ತಿಳುವಳಿಕೆಯಂತೆ ಕಂಡು ಬರುತ್ತದೆ.

ಹುಲಿ ಮೇಲೆ ಸವಾರಿ ಹೊರಟ ಮಾದಪ್ಪನ ಬರಗ ತರುದಿಂಬುನ ಬ್ವಾರೆಯನ್ನ ಹತ್ತಲಾರದ ಹನ್ನೆರೆಡೆಜ್ಜೆ ಕೆಂಬರ್ಗ ಹತ್ಲಾರ್ದೆ ದಸ್ನಾ ಬೊಸ್ನೆ ನಗರತಿತ್ತಂತೆ. ಇದರಿಂದ ಕೋಪಗೊಂಡ ಮಾದಪ್ಪ ಮೈ ಬೆಳಿಸ್ಕೊಂಡು ಕಳ್ಳಾಟ ಕಲ್ತಿದ್ದಾಯಿ ಅಂತೇಳಿ ಬೆತ್ತ ತಕಂಡು ಮೂರೆತ್ತ ಎಳೆದನು. ನಮ್ಮ ರೈತರು ದನಗಳು ಇದೇ ರೀತಿ ಹೊರೆ ಹೊರಲಾರದೆ ಒದ್ದಾಡುವಾಗ ಅವುಗಳ ಜೊತೆಯಲ್ಲಿ ಸಂಭಾಷಣೆ ಮಾಡುತ್ತಾ ಅವುಗಳನ್ನು ದಂಡಿಸುವಂತೆಯೇ ಇದೆ. ಕಡೆಗೂ ಬೇವುನ್ಹಟ್ಟಿ ಕಾಳಮ್ಮನ ಮನೆ ಹತ್ತಿರ ಬಂದು ಕಾರಯ್ಯ ಬಿಲ್ಲಯ್ಯರನ್ನು ಹುಲಿ ಮೇಯಿಸಲು ಬಿಟ್ಟು ಬೇವಿನಹಟ್ಟಿ ಕಡೆಗೆ ದೃಷ್ಟಿ ಬೀರುತ್ತಾರೆ.

ಬೇವುನಹಟ್ಟಿ ಕಾಳಮ್ಮನ ದರ್ಬಾರು ಬಹಳ ಜೋರಾಗಿಯೇ ಇತ್ತು. ಈಕೆ ಜೀತಗಾರರಿಗೆ ಎಳ್ಳಿನ ರಾಶ್ಯವನ್ನು ನೋಡಿಕೊಳ್ಳಲು ಹೇಳಿ ಬೇವುನ್ಹಟ್ಟಿಗೆ ಬರುತ್ತಾಳೆ. ಅತ್ತೆ ಬಂದ ಸಬ್ತ ಕೇಳಿದ ಸೊಸೆಯಂದಿರು ದಡಬಡನೆದ್ದು ಅತ್ತೆಗೆ ಕೈಕಾಲು ತೊಳೆಯಲು ನೀರು ಕೊಡುತ್ತಾರೆ. ಭಿಕ್ಷುಕರು ಮನೆಗೆ ಬರುತ್ತಾರೆ ಅಂತೇಳಿ ಬಾಗಿಲಲ್ಲೇ ಕಚ್ಚುವ ನಾಯಿಯನ್ನು ಪಹರೆ ನಿಲ್ಲಿಸಿರುತ್ತಾಳೆ. ಇದಲ್ಲದೆ ಬೀಜದೋರಿಯನ್ನು ಬಾಗಿಲಲ್ಲೇ ಕಟ್ಟಿ ಹಾಕಿರುತ್ತಾಳೆ. ಇಷ್ಟಕ್ಕೂ ಸುಮ್ಮನಾಗದೆ ಬಿಚ್ಚುಗತ್ತಿ ಗೊಲ್ಲಣ್ಣೇರ ಕೈಲಿ ಬಂದೂಕು ಕೊಟ್ಟಿ ಮನೆ ಬಾಗಿಲಲ್ಲೇ ಕಾವಲಿಗಿರಿಸಿರುತ್ತಾಳೆ. ದನಕರು ಕುಡಿಯಲು ಮಡಗಿದ್ದ ನೀರ ದೋಣಿಯಲ್ಲಿ ಗುಮುಚಕ್ಕಿ ನೀರು ಕುಡಿಯುತ್ತಿರುತ್ತದೆ. ಇದರಿಂದ ಕೆನಲಿ ಕೆಂಡವಾದ ಬೇವುನ್ಹಟ್ಟಿ ಕಾಳಮ್ಮ ತನ್ನ ಸೊಸೆ ದೇವಾಜಮ್ಮನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಈಕೆ ಎಷ್ಟೊಂದು ಜಿಪುಣಿಯಾಗಿದ್ದಳು ಇವಳ ದುರಹಂಕಾರದ ಪರಮಾವಧಿಯ ದರ್ಶನ ಅನೇಕ ಸಂದರ್ಭದಲ್ಲಿ ನಮಗೆ ಮನವರಿಕೆಯಾಗುತ್ತದೆ.

ಹಿರಿಸೊಸೆಯಾದ ದೇವಾಜಮ್ಮನ ಗುಣಕ್ಕೂ ಬೇವುನ್ಹಟ್ಟಿ ಕಾಳಮ್ಮನ ಗುಣಕ್ಕೂ ಅಜಗಜಾಂತರವಿದೆ. ಹಕ್ಕಿ ಪಕ್ಷೀಗಳ ಶಾಪ ಒಳ್ಳೆಯದಲ್ಲ ಎಂದು ತನ್ನ ಅತ್ತೆಗೆ ಕಾಗೆ, ಗೂಬೆ, ಗುಮ್ಮಚ್ಕಿ ಬಂದು ನೀರು ಕುಡ್ಕಂಡ್ರೆ ನಮ್ಮ ಮನೆ ಹಾಳಾಗದಿಲ್ಲ ಬುಡಿ ಎನ್ನತ್ತಾಳೆ. ಆದರೆ ಕಾಳಮ್ಮ ಮಾತ್ರ ಈ ಮಾತುಗಳನ್ನು ಲಕ್ಷಿಸದೆ ಯಾವ ಪಕ್ಷಿಗಳೂ ನೀರು ಕುಡಿದಂಗೆ ಮಾಡುತ್ತಾಳೆ. ಕಾಳಮ್ಮನ ಚಿತ್ರಣವಂತೂ ರೌದ್ರತೆಯ ಅನಾವರಣದಂತಿದೆ. ಸೊಸೆಯರಂತೂ ಕಾಳಮ್ಮನನ್ನು ಕಂಡರೆ ನಡುಗಿ ಕಂಗಾಲಾಗುತ್ತಿದ್ದರು. ದೇವಾಜಮ್ಮ ಮಾತ್ರವೇ ಸ್ವಲ್ಪ ಅತ್ತೆ ಜೊತೆ ಮಾತಾಡುತಿದ್ದವಳು. ಉಣ್ಣುವುದರಲ್ಲೂ ಜಿಪುಣತನ ತೋರುವ ಆಕೆ ಅಂಬಲಿ ತಯಾರಿಗೆ ಆದೇಶಿಸುತ್ತಾಳೆ. ಅಂಬ್ಲಿಯನ್ನೂ ಗಟ್ಟಿಯಾಗಿ ಕಾಯ್ಸಿದ್ದೀಯಲ್ಲ ಎಂದು ಗದರಿಸುತ್ತಾಳೆ. ಅಂಬ್ಲಿಯೊಳಗೆ ಬಿದ್ದ ನೊಣವನ್ನೂ ಬಿಡದೇ ಬೈದು ಅದನ್ನು ಚೇಪಿ ಎಸೆಯುತ್ತಾಳೆ. ಸೊಸೆಯರಿಂದ ಕೈಕಾಲನ್ನೂ ಒತ್ತಿಸಿಕೊಂಡು ಸಕಲ ರೀತಿಯ ಸೇವೆಯನ್ನೂ ಪಡೆದುಕೊಳ್ಳುತ್ತಾಳೆ. ಇರುವೆಗಳ ಆಹಾರಕ್ಕೂ ಕಾಳಮ್ಮ ಕಲ್ಲಾಕುತ್ತಾಳೆ. ಸೊಸೆಗೆ ನಿಮ್ಮ ಕಡೆಯವರಾರನ್ನೂ ಉಪಚರಿಸಬಾರದೆಂದು ಎಚ್ಚರಿಸಿ ಕರ್ತವ್ಯಗಳ ದೊಡ್ಡ ಪಟ್ಟಿಯನ್ನೇ ನೀಡುತ್ತಾಳೆ. ಯಾರೇ ಬಂದು ಭಿಕ್ಷ ಕೇಳಿದರೆ ಅವರಿಗೆ ಏನ್ಮಾಡ್ತೀಯಾ ಎಂದು ದೇವಾಜಮ್ಮನನ್ನು ಕೇಳುತ್ತಾಳೆ. ಆಗ ಆಕೆ ದೇವರು ಯಾವ್ಯಾವ ರೂಪದಲ್ಲಿ ಬಂದರೋ ಆದ್ದರಿಂದ ಅವರಿಗೆ ಭಕ್ತಿಪೂರ್ವಕವಾಗಿ ಅವರಿಗೆ ಕೋರಣ್ಯ ನೀಡುವುದಾಗಿ ಹೇಳುತ್ತಾಳೆ. ಇದರಿಂದ ಕಾಳಮ್ಮನಿಗೆ ರುದ್ರ ಕೋಪ ಬರುತ್ತದೆ. "ಎಲಾ ಕೆಟ್ಟಗ್ಡಿ ಮಗಳೆ ದೇವ್ರು ದಿಂಡ್ರು ಅಂತ್ಹೇಳಿ ಜೀವ್ನ ಹಾಕೊ ಕಳ್ಮಕ್ಳುಗಳ್ಗೆ ಪಾದು ಪೂಜೆ ಮಾಡಿ ಕ್ವಾರಣ್ಯ ಕೊಟ್ಟು ನನ್ ಬದುಕ್ನ ಹಾಳ್ಮಾಡ್ತೀಯಾ" ಎಂದು ಜಾಡ್ಸಿ ಕಾಲಲ್ಲಿ ಒದೆಯುತ್ತಾಳೆ. ಕಾಳಮ್ಮನ ಈ ಮಾತುಗಳು ಸಹಜ ವಾಸ್ತವಕ್ಕೆ ಕನ್ನಡಿ ಹಿಡಿಯುವಂತಿವೆ. ಕಾಳಮ್ಮನ ಸೊಸೆಯಂದಿರು ಅವಳ ಆರ್ಭಟಕ್ಕೆ ಬೆದರಿ ಬೆಂಡಾಗುತಿದ್ದರು.

ಕಾಳಮ್ಮನ ದಪ್ಪ ದೇಹದ ವರ್ಣನೆ ಅದರಿಂದಾಗುವ ಪರಿಪಾಟಲುಗಳು ಒಂದಲ್ಲ ಎರಡಲ್ಲ. ಎದ್ದರೆ ಕೂರಲಾರಳು ಕುಂತರೆ ಮೇಲೇಳಲಾರಳು. ಮೇಲೇಳಲು ಇತರರ ಸಹಾಯ ಬೇಕಾಗಿತ್ತು. ಬಂಡಿ ಪ್ರಯಾಣದ ಸಂದರ್ಭದಲ್ಲಿ ಬಂಡಿಯೇ ಒಂದು ಮೊಳ ಹೂತ್ಗೊಗ್ಬುಡ್ತು ಹದಿನಾಲ್ಕು ಜೊತೆ ಕ್ವಾಣಗಳು ಎಳೀಲಾರ್ದೆ ಹಲ್ ಹಲ್ ಕಿರಿತಿದ್ದೊ ಎಂಬಲ್ಲಿ ಅವಳ ದೇಹ ಸ್ಥಿತಿಯ ದರ್ಶನವಾಗುತ್ತದೆ. ಈ ಕ್ವಾಣಗಳನ್ನು ಕಷ್ಟದಿಂದ ಮಾದಪ್ಪನೇ ಪಾರು ಮಾಡುತ್ತಾನೆ. ಕಾಳಮ್ಮನ ಅತಿರೇಕದ ವರ್ತನೆಗಳಿಗೆ ಸಾಕ್ಷಿ ಆಕೆ ತನ್ನ ಜೀತಗಾರರು ನಾನಿಲ್ಲದ ಸಮಯದಲ್ಲಿ ಎಳ್ಳನ್ನು ತಿಂದಿರಬಹುದು ಎಂಬ ಅನುಮಾನದಲ್ಲಿ ಅವರೆಲ್ಲರನ್ನೂ ತರಾಟೆಗೆ ತೆಗೆದುಕೊಳ್ಳುತ್ತಾಳೆ. ಅವರನ್ನು ಪರೀಕ್ಷಿಸಿ ಕಂಡು ಹಿಡಿಯುವ ಉಪಾಯ ಅದ್ಭುತವಾದುದು. ದೃಢ ತಡೀಲಾರದ ಒಬ್ಬ ಒಂದು ಎಳ್ಳು ಕುರುಕ್ಬುಟ್ಟಿದ ಅವನಿಗೆ ಕಠಿಣವಾದ ಶಿಕ್ಷೆಯನ್ನೇ ನೀಡುತ್ತಾಳೆ. ಹಿಂದೆ ಜೀತಗಾರರ ಸ್ಥಿತಿ ಅಯೋಮಯವಾಗಿತ್ತು. ಅವರನ್ನು ವಿವಿಧ ರೀತಿಯಲ್ಲಿ ಪರಿಪರಿಯಾಗಿ ಶಿಕ್ಷಿಸುತಿದ್ದರು. ಅವರಿಗೆ ಹೊಟ್ಟೆ ತುಂಬ ಊಟನೂ ಕೊಡುತ್ತಿರಲಿಲ್ಲ.

ಮಾದಪ್ಪ ಕಾಳಮ್ಮನ ಸೊಸೆಯಂದಿರ ದೃಢತೆಯನ್ನು ಪರೀಕ್ಷಿಸಿ ನಂತರ ಕಾಳಮ್ಮನ ಪರೀಕ್ಷೆಗಾಗಿ ಕಣದ ಹತ್ತಿರ ಬರುತ್ತಾನೆ. ಮಾದಪ್ಪ ಈಕೆಯನ್ನು ಯಾವ ರೀತಿಯಲ್ಲಿ ಪರೀಕ್ಷಿಸಬೇಕು ಎಂದು ಚಿಂತಿಸಿ ನಾನು ಈಗಿರುವ ರೀತಿಯಲ್ಲೇ ಆಕೆಯನ್ನು ಭಿಕ್ಷೆ

ಕೇಳಿದರೆ ನೀನು ಇನ್ನು ಗಟ್ಟಿಯಾಗಿ ಇರುವೆ ಗೈಯ್ಯ ತನ್ನು ಎನ್ನುತ್ತಾಳೆ. ಆದ್ದರಿಂದ ಮುದುಕನ ವೇಷದಲ್ಲಿ ಅಸಹಾಯಕನ ಸ್ಥಿತಿಯ ಜಂಗಮ ವೇಷಧಾರಿಯಾಗಿ ಭಿಕ್ಷೆ ಬೇಡಲು ನಿರ್ಧರಿಸುತ್ತಾನೆ. ಮಾದಪ್ಪನ ಮುದುಕ ವೇಷದ ವರ್ಣನೆ ಕೇಳುಗರಲ್ಲಿ ಕನಿಕರ ಮೂಡುವಂತೆ ಅದ್ಭುತವಾಗಿದೆ. ಮಾದಪ್ಪ ಮೊದಲೇ ಈಕೆ ತನಗೆ ಭಿಕ್ಷೆ ನೀಡುವುದಿಲ್ಲ ಎಂದುಕೊಂಡು ಅದಕ್ಕಾಗಿ ತಾನು ಏನು ಮಾಡಬಹುದು ಎಂಬುದನ್ನು ನಿರ್ಧರಿಸಿಕೊಂಡು ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಾನೆ. ಕೊನೆಗೆ ಎಳ್ಳಿನ ಕಣಕ್ಕೆ ಬರುತ್ತಾರೆ. ಎಳ್ಳಿನ ಭಿಕ್ಷಾ ಬೇಡುತ್ತಾರೆ.

ಮಾದಪ್ಪ ಎಷ್ಟೇ ಬೇಡಿಕೊಂಡರೂ ಕಾಳಮ್ಮ ಮಾತ್ರ ಭಿಕ್ಷಾ ಅಂದ್ರೆ ಲಕ್ಷ್ಯವಿಲ್ಲದೆ, ದಾನ ಎಂದರೆ ಗ್ಯಾನವಿಲ್ಲದ ತನ್ನ ಪಾಡಿಗೆ ತಾನು ನಿದ್ರಿಸುತಿರುತ್ತಾಳೆ. ಆಗ ಮಾದಪ್ಪ ವಾಸುದೇವನಿಗೆ ಸನ್ನೆ ಮಾಡಿ ಗಬ್ಬು ವಾಸ್ನೆನೆಲ್ಲಾ ಕಾಳಮ್ಮನ ಮೂಗಿಗೆ ಬಡಿದೇಟ್ಗೆ ದಿಗ್ಗನೆ ಎದ್ದೇಳುತ್ತಾಳೆ. ಮಾದಪ್ಪನ ಮಹಿಮೆ ಅಪಾರ ಎಂಬಂತೆ ಇಡೀ ಕಾವ್ಯದಲ್ಲಿ ಆತನ ಪವಡಾಗಳು ನೂರಾರು. ಭಿಕ್ಷೆ ಬೇಡಿದ ಮಾದಪ್ಪನನ್ನು ವಾಚಾಮಗೋಚರವಾಗಿ ಬೈಯ್ಯುತ್ತಾಳೆ. ಮಾದಪ್ಪ ಬಿಡ, ಕಾಳಮ್ಮ ಕೊಡಲೊಲ್ಲಳು. ಈತನ ಉಪಟಳದಿಂದ ತಪ್ಪಿಸಿಕೊಳ್ಳಲು ನಾಯಿ ಸರ್ಪಗಳನ್ನು ಕರೆಯುತ್ತಾಳೆ. ಆದರೆ ಅವುಗಳು ಮಾದಪ್ಪನಿಗೆ ಏನೂ ಮಾಡುವುದಿಲ್ಲ. ಇದರಿಂದ ದಿಗಿಲುಗೊಂಡ ಕಾಳಮ್ಮ ಮಾದಪ್ಪನ ಮಾಯಾವಿ ನಡವಳಿಕೆಯಿಂದ ಕ್ರೋಧಗೊಳ್ಳುತ್ತಾಳೆ. ಒತ್ನಂತೆ ಬಂದು ಈ ರೀತಿ ಕಾಡ್ತಿದ್ದೀಯಲ್ಲ ಮುಂದಕ್ಕೋಗು ಎಂದು ಗದರಿಸುತ್ತಾಳೆ.

ಈ ಸಮಯದಲ್ಲಿ ಮಾದಪ್ಪ ನೀನು ಹತ್ತು ಮಾನ ಎಳ್ಳು ನೀಡಿದರೆ ನಿನಗೆ ಮತ್ತಷ್ಟು ಭಾಗ್ಯ ಕರುಣಿಸುವುದಾಗಿ ಹೇಳುತ್ತಾನೆ. ಹತ್ತು ಮಾನ ಎಳ್ಳು ಕೇಳಿದವನು ನಂತರ ಅದರಿಂದ ಕೆಳ ಕೆಳಿಕೆ ಇಳಿದು ಕೊನೆಗೆ ನಿನ್ನಳ್ಳಿನ ರಾಶಿಗೆ ತೇವದ ಕೈ ತಟ್ಟುಟ್ಟು ಬರೀ ಕೈಯನ್ನಾದ್ರು ನೀಡು ಎಂದು ಕೇಳುತ್ತಾನೆ. ಏನಾರ ಆಗ್ಲಿ ಎಂತಹುದೇ ಕಡು ಕಷ್ಟಗಳೇ ಬರಲಿ ನನ್ನ ಕುಟುಂಬವೇ ಸರ್ವನಾಶವಾದರೂ ಸರಿಯೇ ನಾನಂತು ನಿನಗೆ ಎಳ್ಳಿನ ಭಿಕ್ಷೆ ನೀಡುವುದಿಲ್ಲ ಎಂದು ಹಠ ಹಿಡಿಯುತ್ತಾಳೆ. ಕೊನೆಗೆ ಕಾಳಮ್ಮ ಮಾದಪ್ಪನ ಮಾತುಗಳಿಂದ ರೋಸಿ ಆತನನ್ನು ಹೊಡೆಯಲು ಮುಂದಾಗುತ್ತಾಳೆ. ಅವಳ ಹೊಡೆತದಿಂದ ತಪ್ಪಿಸಿಕೊಳ್ಳಲು ಮಾದಪ್ಪ ಪ್ರಯತ್ನಿಸಿ ಎಳ್ಳಿನ ರಾಶಿ ಮೇಲೆ ಬಿದ್ದು ವಸ್ತು ಹೋದೋರಂಗೆ ಬಿದ್ಧತರೆ. ಇದರಿಂದ ಕಂಗಾಲಾದ ಕಾಳಮ್ಮನು ಆ ದೇಹವನ್ನು ತಕಂಡ್ಹೋಗಿ ದೂರದಲ್ಲಿ ಎಳ್ಳಿನ ಕಸಗಲಾಕಿ ಮುಚ್ಚುತ್ತಾಳೆ. ಏನಾದರು ಈ ಕೊಲೆ ಗೊತ್ತಾಗಿ ನಾವೆಲ್ಲ ಸಂಕಷ್ಟಕ್ಕೀಡಾಗಬೇಕಾಗುತ್ತದೆ ಎಂದು ಬಹಳ ಚಿಂತಿಸುತ್ತಾಳೆ.

ಈ ಕಡೆ ಅದೇ ಸಮಯದಲ್ಲಿ ದ್ಯಾವಾಜಮ್ಮನಿಗೆ ಆಕಳಿಕೆ ಹೆಚ್ಚಾಗಿ ಕಣ್ಣೀರು ಅಧಿಕವಾಗಿ ಸುರಿಯುತ್ತದೆ. ಜಂಗುಮಯ್ಯ ತಮ್ಮ ಅತ್ತೆ ಹತ್ತಿರ ಭಿಕ್ಷೆಗಾಗಿ ಹೋಗಿದ್ದಾನೆ ಏನಾಯ್ತೊ ಕಾಣೆ ಎಂದು ಕಳವಳದಿಂದ ಕೊಳದ ಹತ್ತಿರಕ್ಕೆ ತನ್ನ ತಂಗಿಯರೊಡನೆ ಬರುತ್ತಾಳೆ. ದೂರದಲ್ಲಿ ಇವರನ್ನ ನೋಡಿದ ಕಾಳಮ್ಮ ಕೈ ಬೀಸಿ ಅವರನ್ನು ಕರೆದು ಅವರಿಗೆ ಅಲ್ಲಿನ ಸಂಗತಿಯನ್ನು ತಿಳಿಸುತ್ತಾಳೆ. ಎಳ್ಳಿನ ಕಸಗಲಲ್ಲಿ ಇದ್ದ ಮಾದಪ್ಪನನ್ನು ಕಾಣಲು ಕಸಗಲನ್ನು ಎಳೆದೆಳೆದು ಸೊಸೆಯಂದಿರೆಲ್ಲ ಸುಸ್ತಾಗುತ್ತಾರೆ. ಕಾಳಮ್ಮ ಎಷ್ಟು ಜಿಪುಣಿ ಎಂದರೆ ಹರಕೆ ತೀರಿಸಲು ನಿಮ್ಮ ಅಪ್ಪನ ಮನೆಗೆ ಹೋದಾಗ ತೀರಿಸುವಿರಂತೆ ಎಂದೇಳುತ್ತಾಳೆ. ದ್ಯಾವಾಜಮ್ಮ ತನ್ನ ಮನೆದೇವರಿಗೆ ಹರಕೆ ಹೊತ್ತಾಗ ಮಾದಪ್ಪ ಎಳ್ಳಿನ

ರಾಶಿಯಲ್ಲಿ ಗೋಚರಿಸುತ್ತಾನೆ. ಸತ್ತಂತಿರುವ ಮಾದಪ್ಪನನ್ನು ನೋಡಿ ದ್ಯಾವಾಜಮ್ಮ ಹಾಗೂ ಅವಳ ಸಹೋದರಿಯರು ಬಹಳವಾಗಿ ಶೋಕಿಸುತ್ತಾರೆ. ಇದಕ್ಕೂ ಕಾಳಮ್ಮ ಆಕ್ಷೇಪಿಸುತ್ತಾಳೆ. ಈತನ ಶವವನ್ನು ಯಾರಿಗೂ ಗೊತ್ತಾಗದಂತೆ ಸಂಸ್ಕಾರ ಮಾಡಲು ಸೊಸೆಯಂದಿರಿಗೆ ಹೇಳುತ್ತಾಳೆ. ದೇವಾಜಮ್ಮ ಬಹಳ ದುಃಖದಲ್ಲೇ ಮಾದಪ್ಪನ ಸಂಸ್ಕಾರಕ್ಕೆ ಸಿದ್ಧಳಾಗುತ್ತಾಳೆ. ದೇವಾಜಮ್ಮ ತನ್ನ ಆರು ಜನ ಕಿರಿಸಹೋದರಿಯರನ್ನು ಕಳುಹಿಸಿ ನಾನು ಮಾದಪ್ಪ ಉರಿದೋಗೋತನಕ ಇದ್ದು ಬತ್ತೀನಿ ನಡೀರಿ ಎಂದು ಕಳುಹಿಸುತ್ತಾಳೆ. ನನ್ನ ತವರಿಗೆ ಮನೆದೇವರು ಇಲ್ಲದ್ಹಂಗಾಯ್ತದಲ್ಲ ಅಂತೇಳಿ ಬಹಳವಾಗಿ ದುಃಖಿಸುತ್ತಾ ತಾನೂ ಬೆಂಕಿಯಲ್ಲಿ ಬೀಳಲು ಹೋಗುತ್ತಾಳೆ. ಆಗ ಮಾದಪ್ಪ ಆಕೆಯನ್ನು ಕಾಪಾಡಿ ನಿಮ್ಮ ಅತ್ತೆಯ ಅಹಂಕಾರವನ್ನು ನಾಶ ಮಾಡುವುದಾಗಿ ತಿಳಿಸುತ್ತಾನೆ. ದೇವಾಜಮ್ಮ ತನ್ನತ್ತೆಯನ್ನು ಕ್ಷಮಿಸಲು ಕೋರುತ್ತಾಳೆ. ಇಲ್ಲಿ ತನ್ನತ್ತೆ ಎಷ್ಟೇ ಕಷ್ಟ ನೀಡಿದರೂ ಆಕೆಯ ಮೇಲೂ ಕನಿಕರ ತೋರುವ ಈಕೆಯ ನಡವಳಿಕೆ ಅನನ್ಯವಾದುದು. ಕೊನೆಗೆ ಬೇವುನಕಾಳಿ ದುನಿಯಾವನ್ನು ದೂಳಿಪಟ ಮಾಡುತ್ತಾರೆ.

"ಗಂಡಿಗೆ ಚಟ ಇರ್ಬಾರ್ದು ಹೆಣ್ಣಿಗೆ ಹಠ ಇರ್ಬಾರ್ದು" ಎಂಬ ಗಾದೆ ಇದೆ. ಹೆಣ್ಣಿನ ಹಠ ಆಕೆಯ ಸಂಸಾರವನ್ನೇ ನಾಶ ಮಾಡುತ್ತದೆ. ಹೆಣ್ಣು ಎಂದರೆ ಕಾಳಮ್ಮನ ರೀತಿಯ ದುಷ್ಟರೂ ಇರುತ್ತಾರೆ ಹಾಗೆಯೇ ದ್ಯಾವಾಜಮ್ಮನ ರೀತಿ ದಯೆ, ಕಾರುಣ್ಯ, ಅಂತಃಕರಣ ಹೊಂದಿದ ತ್ಯಾಗಮಯಿಗಳೂ ಇರುತ್ತಾರೆ. ದ್ಯಾವಾಜಮ್ಮ ಹೆಂಗರುಳಿನ ಅಂತಃಕರಣ ಉಳ್ಳವಳು. ಆದರೆ ಕಾಳಮ್ಮ ಇದಕ್ಕೆ ತದ್ವಿರುದ್ಧದ ಗುಣ ಉಳ್ಳವಳು. ಅಂತೆಯೇ ದುರ್ಗುಣವಂಥರನ್ನು ಭಗವಂತ ಸಂಹರಿಸುತ್ತಾನೆ ಎಂಬ ನಂಬಿಕೆ ಜನಪದರಲ್ಲಿದೆ. ಒಟ್ಟಿನಲ್ಲಿ ಈ ಕಥೆ ಬಡತನವಿರಲಿ ಸಿರಿತನ ಬರಲಿ ಸಮಾಧಾನದಿಂದ ಸಮಚಿತ್ತದಿಂದ ವರ್ತಿಸಬೇಕು. ದುರಹಂಕಾರಕ್ಕೆ ತಕ್ಕ ಸಾಸ್ತಿ ಯಾವಾಗಲಾದರೂ, ಯಾವ ರೂಪದಲ್ಲಾದರೂ ಆಗಿಯೇ ತೀರುತ್ತದೆ. ಆದ್ದರಿಂದ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಂಡು ಒಳ್ಳೆಯ ಕೆಲಸಗಳನ್ನು ನಿರ್ವಹಿಸಬೇಕು ಎಂಬುದನ್ನು ತಿಳಿಸುತ್ತದೆ.

ಪರಾಮರ್ಶನ ಗ್ರಂಥಗಳು

1) ಪರಮಶಿವಯ್ಯ ಜೀ.ಶಂ, ಜಾನಪದ ಚೇತನ್ ಬುಕ್ ಹೌಸ್, ಮೈಸೂರು–1989
2) ಪರಮಶಿವಯ್ಯ ಜೀ.ಶಂ, ದಕ್ಷಿಣ ಕರ್ನಾಟಕ ಜಾನಪದ ಕಾವ್ಯ ಪ್ರಕಾರಗಳು, ಪ್ರಸಾರಾಂಗ, ಮೈಸೂರು ವಿವಿ, ಮೈಸೂರು, 1989
3) ರಾಜಶೇಖರ ಪಿ.ಕೆ., ಮಲೆಯ ಮಾದೇಶ್ವರ: ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2006
4) ರಾಜಶೇಖರ ಪಿ.ಕೆ., ಮಲೆಯ ಮಾದೇಶ್ವರ ಕಥಾಧಾರೆ: ಹೊನ್ನಾರು ಜನಪದ ಗಾಯಕರು, ಮೈಸೂರು–2015

❖❖❖

ಶಿಶುನಾಳ ಶರೀಫರಲ್ಲಿನ ಸಾಮೂಹಿಕ ಪ್ರಜ್ಞೆ
(ಸುಗ್ಗಿ ಮಾಡೋಣ ಬಾರವ್ವ ಕೀರ್ತನೆಯ ಹಿನ್ನೆಲೆಯಲ್ಲಿ)

ಡಾ. ಶಬೀನಾ
ಕನ್ನಡ ಸಹಾಯಕ ಪ್ರಾಧ್ಯಾಪಕರು, ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ
ರಾಜಾನುಕುಂಟೆ, ಬೆಂಗಳೂರು–560015

'ಸೃಷ್ಟಿ ಮರೆಸಿಟ್ಟಿರುವ ಗುಟ್ಟುಗಳನು
ಸಪ್ತಸ್ವರ ಮೀರಿದಾ ಮಟ್ಟುಗಳನು
ನಿಮ್ಮ ನುಡಿಯಲ್ಲಿಟ್ಟು, ಮಾತಿಗರ್ಥವ ಕೊಟ್ಟು
ಹಾಡುಮಾಡಿದಿರಿ, ನಿನ್ನ ವ್ಯಥೆಗಳನ್ನು'

ಎಂದು ಹೇಳುತ್ತಾ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವೈಷ್ಣವ ಭಕ್ತಿ ಹರಿದಾಡುವ ಕಾಲದಲ್ಲಿ ಅಭಿದಾನ ನೀಡಲಾದ ಬಿಡಿರಚನೆಗಳ ಸಮೂಹವೇ ಕೀರ್ತನೆಗಳು. ಆದಿದೈವವನ್ನು ಕುರಿತು ದಾಸರು ಕಟ್ಟಿದ ಸ್ತುತಿರೂಪದ ಹಾಡುಗಬ್ಬವೇ ಕೀರ್ತನೆಗಳು.

ಭಗವಂತನ ಲೀಲೆಗಳನ್ನು ವರ್ಣಿಸುತ್ತಾ, ವೈಭವೀಕರಿಸುತ್ತಾ, ಸಾಮಾಜಿಕ ರಾಜಕೀಯ ವಿಡಂಬನೆ, ತತ್ವಪದ, ತತ್ವಜ್ಞಾನ, ವೈಯಕ್ತಿಕ ನೋವು ನಲಿವು, ಹಾತಾಶೆ, ವೈರಾಗ್ಯ ಮೊದಲಾದವುಗಳನ್ನು ಚಿತ್ರಿಸುತ್ತಾ ಮನೋಜ್ಞವಾಗಿ ಹಾಡಿ ಸಾಮಾಜಿಕ ಅರಿವನ್ನು ಮೂಡಿಸುವಲ್ಲಿ ಕೀರ್ತನಕಾರರ ಪಾತ್ರ ಮಹತ್ವದ್ದು. ಭಗವಂತನ ವಿವಿಧ ಅವತಾರ ಲೀಲೆಗಳ ಉಲ್ಲೇಖ, ದೇವರನ್ನು ಸ್ತುತಿಸುವ ಹಾಡು(ದೇವತಾಸ್ತುತಿ), ಸ್ವಾಭಾವಿಕ ಒಲವು–ನಿಲುವು, ಮಾನಸಿಕ ತೊಳಲಾಟ, ಸಮಾಜ ವಿಡಂಬನೆ ಮತ್ತು ವಿಮರ್ಶೆ ಮೊದಲಾದವು ಕೀರ್ತನೆಗಳ ವಸ್ತುವಾಗಿರುವುದನ್ನು ನೋಡಬಹುದು. ಕೀರ್ತನೆಗಳ ಮುಂದುವರಿದ ರೂಪವಾಗಿ ತತ್ತ್ವಪದಗಳನ್ನು ಕಾಣಬಹುದು.

ಕನಾಟಕದ 'ಕಬೀರ' ಎಂದು ಕರೆಸಿಕೊಂಡ ಹಿರಿಯ ಅನುಭಾವಿ ಜೀವ 'ಶಿಶುನಾಳ ಶರೀಫ ಸಾಹೇಬರು'. ಕನ್ನಡದ ಮೊದಲ ಮೊಹಮದೀಯ ಕೀರ್ತನಕಾರರು. ಇವರು ತಮ್ಮ ತತ್ವಗಳ ಜೊತೆ ಜೊತೆಯಲ್ಲಿಯೇ ರಾಮಾಯಣ, ಮಹಾಭಾರತ ಶಿವಶರಣರ ಪದಗಳನ್ನು ಕೇಳುತ್ತಾ, ಹೇಳುತ್ತಾ ಬೆಳೆದವರು. ಸನಾತನೀಯ ಗುರುವಾದ ಗೋವಿಂದ ಭಟ್ಟರನ್ನು ತನ್ನ ಗುರುವಾಗಿ ಪಡೆದ ಇವರು, ಜಾತಿಮತದ ಗಡಿಗಳನ್ನು ದಾಟಿ ನಿಂತ ಮೇರು ವ್ಯಕ್ತಿ. ಶರೀಫರ ಗೀತೆಗಳು ಹೊರನೋಟಕ್ಕೆ ನಮ್ಮ ದಿನನಿತ್ಯದ ಬದುಕಿನ ಆಗು–ಹೋಗುಗಳನ್ನು ಹೇಳುವಂತೆ ತೋರುತ್ತದಾದರೂ, ಅವುಗಳಿಗೆ ಬೇರೊಂದು ಪಾರಮಾರ್ಥಿಕ ಒಳಾರ್ಥವಿರುವುದನ್ನು ಕಾಣಬಹುದು. ಸೃಷ್ಟಿ–ಜೀವ–ಪರಮಾತ್ಮರ ಸಂಬಂಧದ ಚಿಂತನೆಯು ಅವುಗಳಲ್ಲಿ ತುಂಬಿದ್ದು, ಜೀವನ ಧರ್ಮ, ಸೃಷ್ಟಿಯ ಮರ್ಮವನ್ನು ಕೆದಕಿರುವುದನ್ನು ಕಾಣಬಹುದು. ಪ್ರಸ್ತುತ "ಸುಗ್ಗಿ ಮಾಡೋಣು ಬಾರವ್ವಾ" ಕೀರ್ತನೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಆಶಯದ ವಿಶ್ಲೇಷಣೆ

1. "ಸುಗ್ಗಿ ಮಾಡೋಣು ಬಾರವ್ವಾ ಗೆಳತಿ" ಗೆಳೆಯ–ಗೆಳತಿ, ಸುಗ್ಗಿ–ಬೆಳೆ, ಅಂತರಂಗ–ಬಹಿರಂಗ, ಪ್ರಕೃತಿ–ಪುರುಷರ ಸಂಬಂಧಗಳಿಂದಲೇ ಪದ್ಯ ಪ್ರಾರಂಭವಾಗುವುದೇ ಒಂದು ವಿಶೇಷ. ಬೆಳೆ ಎಲ್ಲರಿಗೂ ಬೇಕಾದುದು. ಆದರೆ ಫಲವನ್ನು ಅನುಭವಿಸುವುದು ಮಾತ್ರ ಸಮೂಹ. ಹಾಗಾಗಿ ಶರೀಫರು "ಅಗ್ಗದ ಫಲ ಕೊಯ್ಯಲಿಕ್ಕೆ ಹೊಲದೊಳು ಒಗ್ಗೀಲಿ ಕರೆದರೆ ಹಿಗ್ಗೀಲಿ ಹೋಗಿ" ಎಂದು ಸಮೂಹ ಪ್ರಜ್ಞೆಗೆ ಯಾವ ಜಾತಿ–ಧರ್ಮ–ಶ್ರೇಣಿ ಇಲ್ಲವೆಂದು ಸಾಬೀತುಪಡಿಸುತ್ತಾರೆ. ಪ್ರಕೃತಿ–ಪುರುಷನಿಂದ ಪ್ರಾರಂಭವಾದ ತತ್ವಪದ, ಪ್ರತಿಯೊಬ್ಬನಿಗೂ ಬೇಕಾಗುವ ಪ್ರಾಕೃತಿಕ ನೆಲೆಗೆ ಮುಟ್ಟುತ್ತದೆ. ಅಂದರೆ ಕೀರ್ತನೆ ಎಂಬುದು ಆಚರಣೆಗಳು, ನಂಬಿಕೆಗಳು, ಸ್ತುತಿಗಳು, ಜೀವನ ಪದ್ಧತಿಗಳು, ಸಂತೋಷಗಳು, ಸಂದರ್ಭಗಳು ಮೊದಲಾದ 18ನೇ ಶತಮಾನದಲ್ಲಿನ ಸಾಮಾಜಿಕ ಪ್ರಜ್ಞೆಗೂ ಮೀರಿದ ಪ್ರಾಕೃತಿಕ ಕಾಳಜಿಯನ್ನು ಗಮನಿಸಬಹುದು.
2. "ಹೊಲದವ ಕರೆದರೆ ಹೋಗಲಿಬೇಕು. ನೆಲೆಯನು ತಿಳಿಯಬೇಕು" "ಕುಲದವರೊಂದು ಸಲಗಿಯು ಸಾಕು ಬಲು ಜೋಕಿರಬೇಕು" ಎಂದು ಶರೀಫರು ಇಲ್ಲಿ 'ಕುಲ' ಎನ್ನುವುದು ಜಾತಿ/ಧರ್ಮವಲ್ಲ. ಕುಲ ಎನ್ನುವುದು ಭೂಮಿ–ಮಣ್ಣನ್ನು ಪೂಜಿಸುವ ಶ್ರಮಿಕರು. ಅಂದರೆ ಕಾಯಕ ಧರ್ಮದವರು. "ಹೊಲದೊಳು ಬೆಳದಿಹ ಹುಳ್ಳಿ, ಮಿಕ್ಕಿ, ಕಸ, ತಳದ ಕೋಲಿಯ ದಾಟಿ ಕೊಯ್ಯೋಣ ಗೆಳತಿ" ಎಂಬಲ್ಲಿ ಬೆಳೆಯ ಜೊತೆ ಹೊಲದಲ್ಲಿ ಬೆಳೆದ ಇತರ ಸಣ್ಣ–ಪುಟ್ಟ ಸಸಿಗಳು ಮೇವೂ ಆಗಬಹುದು, ಗೊಬ್ಬರವೂ ಆಗಬಹುದು. ಇವು ಪಶುಸಂಕುಲಕ್ಕೆ ಅನುಕೂಲವಾಗಿ ಜೊತೆಯಲ್ಲಿಯೇ ಮನುಸಂಕುಲ ಪಡೆಯುವ ಸಂತೋಷದ ಒಳಹೊಳನ್ನು ಪರಿಚಯಿಸುತ್ತಿದೆ.
3. "ಏಳೆಂಟು ಅಕ್ಕಡಿಯ ಎಣಿಸಿ–ನಮ್ಮ ಬಾಳನು ಅದರೊಳು ದಣಿಸಿ, ಕಾಲಕೂಟ ವಿಷ ಎಣಿಸಿ, ನಂಡಿನ ಸೋಲಗಳೆಲ್ಲವ ಗಣಿಸಿ" ಅಂದರೆ ಯಾವುದೇ ದ್ವೇಷ ಹಿಂದೆ ನಡೆದಿದ್ದರು, ಸೋಲುಗಳಾಗಿದ್ದರೂ, ಇಂದು ನಾವೆಲ್ಲ ಒಗ್ಗೂಡಿ, ಅರಿಷಡ್ವರ್ಗಗಳನ್ನು ಮರೆತು ಸುಗ್ಗಿಯ ಸಂತೋಷದಲ್ಲಿ ಭಾಗಿಯಾಗೋಣ ಎಂಬ ಸಂದೇಶದೊಂದಿಗೆ ಒಗ್ಗಟ್ಟಿನ ಭಾವವನ್ನು ಮೂಡಿಸುತ್ತಿದ್ದಾರೆ.
4. "ಶಿಶುನಾಳಾಧೀಶನೆ ಗುರುವು, ಅವ ಕರೆದಲ್ಲಿ ಹೋಗೋದು ತರವು" ದೈವ ಈ ಭೂಮಿಯ ನಾಯಕ. ದೈವ ಮಾಲೀಕ. ದೈವ ನಮ್ಮನ್ನು ನಡೆಸುವ ಗುರು. ಅವನು ಕರೆದಾಗ ಒಟ್ಟಾರೆ ಹೋಗಬೇಕು. ಒಬ್ಬರೇ ಹೋಗುವುದು.

ಮುಖ್ಯವಲ್ಲ. ಒಟ್ಟಾಗಿ ಹೋಗುವ ಸಮೂಹ ಪ್ರಜ್ಞೆ ಇರಬೇಕು. "ಕಸವ ಕಳೆದು ಕೈ ಕುಡುಗೋಲ ಹಿಡಿಯುತ ಹಸನಾಗಿ ಹಲವೆಡೆ ಹರಿವ ಮನವ ಸುಟ್ಟು" ಬದುಕಿನ ಕೊಳಕನ್ನು ತೊಳೆದು, ದುಡಿಮೆಯ ಕೈ, ಶ್ರಮದ ಕೈ, ಬೆವರಿನ ಕೈಯನ್ನು ಮಾಡಿಕೊಳ್ಳುತ್ತಾ, ಬದುಕನ್ನು ಹಸನುಗೊಳಿಸುವುದು ಜೀವನವನ್ನು ಶುದ್ಧೀಕರಿಸುತ್ತದೆ. ಅಂದರೆ ನನ್ನ ಒಳಗೆ ಇರುವ ಅರಿಷಡ್ವರ್ಗ, ರಾಗ–ದ್ವೇಷಗಳು ಸಾಮೂಹಿಕ ಸುಗ್ಗಿಯಲ್ಲಿ ಬೆರೆತಾಗ ಮಾತ್ರ ನಮ್ಮನ್ನು ನಾವು ಶುದ್ಧೀಕರಿಸಿಕೊಳ್ಳಲು ಸಾಧ್ಯ. ವೈಯಕ್ತಿಕ ಬೇಕು–ಬೇಡುಗಳನ್ನು ಬದಿಗೊತ್ತಿ, ಸಾಮೂಹಿಕ ಸುಖ ಸಂತೋಷಗಳನ್ನು ಕಂಡುಕೊಳ್ಳಬೇಕು

ಎಂಬ ಆಧ್ಯಾತ್ಮಿಕ ಜ್ಞಾನದಿಂದ ಮಾತ್ರ ಜೀವನದಲ್ಲಿ ಹಸನನ್ನು ಕಾಣಬಹುದೆಂದು ಹೇಳುತ್ತಾರೆ. ಹೀಗೆ ತತ್ವಗಳಿಂದಲೇ ಪದಗಳು ಪ್ರಾರಂಭವಾದರೂ ಶರೀಫರು ತಾವು ಕಂಡುಂಡ ಆಧ್ಯಾತ್ಮಿಕ ಸುಖವನ್ನು ಸುಗ್ಗಿಯ ಸಂಭ್ರಮದಲ್ಲಿ ಸಾಮೂಹಿಕ ಸುಖದಲ್ಲಿ ಕಾಣಿಸುತ್ತಿದ್ದಾರೆ.

ಸುಗ್ಗಿ ಮಾಡೊಣ ಬಾರವ್ವ ಕೀರ್ತನೆ ಮಾತ್ರವಲ್ಲದೆ, ಸ್ನೇಹ ಮಾಡಬೇಕಿಂತವಳ!, ಹುಟ್ಟಿದ ಹೊಲಿಮನಿ, ಒಳ್ಳೇ ನಾರಿ ಕಂಡೆ, ಅತ್ತ ಇತ್ತ ಹರಿದಾಡುವ ಮನಸಿಗೆ, ಅಗ್ಗದ ಅರವಿ ತಂದು, ಮೋಹದ ಹೆಂಡತಿ ತೀರಿದ ಬಳಿಕ, ಬಿದ್ದಿಯಬ್ಬೇ ಮುದುಕಿ, ಸೋರುತಿಹುದು ಮನೆಯ ಮಾಳಿಗಿ, ದುಡ್ಡು ಕೆಟ್ಟದ್ದು ನೋಡಣ್ಣ, ಮನಸೇ ಮನಸಿನ ಮನಸ ನಿಲ್ಲಿಸುವುದು, ಕೋಡಗನ್ನ ಕೋಳಿ ನುಂಗಿತ್ತಾ ಮೊದಲಾದ ಶಿಶುನಾಳ ಶರೀಫರ ಕೀರ್ತನೆಗಳು ಸಮಾಜಕ್ಕೆ ಒಂದು ನೀತಿ ಸಾರವಾಗಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವ ಆಕರವಾಗಿರುವುದನ್ನು ಗಮನಿಸಬಹುದು.

ಪರಾಮರ್ಶನ ಗ್ರಂಥ

1. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು, 2014
2. ಕನ್ನಡ ನಿಘಂಟು–ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು. 1995
3. ನಿಷ್ಠಿ ರುದ್ರಪ್ಪ, ಶಿಶುನಾಳ ಶರೀಫರ ಪಾರಮಾರ್ಥಿಕ ಚಿಂತನೆ, ಶ್ರೀ ಪ್ರಭುದೇವರ ಕಲ್ಯಾಣ ಸಂಸ್ಥೆ, ಬಳ್ಳಾರಿ, 2019
4. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್. (ಸಂ), ಶಿಶುನಾಳ ಶರೀಫ್ ಸಾಹೇಬರ ಗೀತೆಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು, 2021
5. https://kannadanudi.com/geethavihaara/tatvapadagalu/Suggi%20Maadonu%20Baaravva

❖❖❖

ಮನೆಯ ಒಳಗಿನ
ಕರುವು ನೆಗೆಯುತ
ಅಮ್ಮ ಎಂದವಸರಿಸಲು
ಕರೆಯ ಕೇಳದ
ಅಂಬೆ ಹವಣಿಸಿ
ಬಿಡಿಸಲೆಣಿಸಿದೆ ಸೊರೆಯನು

ವಚನಕಾರರಲ್ಲಿ ಜಾತಿಯ ಪರಿಕಲ್ಪನೆಯ ಸ್ವರೂಪ

ಡಾ. ಶಾಂತಮ್ಮ ಟಿ.ಆರ್.
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಯಲಹಂಕ. ಬೆಂಗಳೂರು

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಮಹತ್ವದ ಪಾತ್ರವಹಿಸುವುದೇ ಜಾತಿ. ಹುಟ್ಟಿನ ಹಿನ್ನಲೆಯಲ್ಲಿ ರೂಪಿತವಾದ ಈ ವ್ಯವಸ್ಥೆಯು, ಸಮಾಜದಲ್ಲಿ ಅನೇಕ ತಾರತಮ್ಯಗಳಿಗೆ, ಮೇಲು ಕೀಳಿಗೆ, ಕಾರಣವಾದ ಸಂಗತಿಯಾಗಿ ಬದಲಾದದ್ದು ಆಕಸ್ಮಿಕವಲ್ಲ. ಅನೇಕ ಸಮಾಜ ಸುಧಾರಕರು, ಬೇರೆ ಬೇರೆ ಕಾಲಘಟ್ಟದಲ್ಲಿ ಜಾತಿ ಅಧಾರಿತ ತಾರತಮ್ಯ ನಿರ್ಮೂಲನೆಗೆ ಶ್ರಮಿಸಿದ್ದಾರೆ. ಇದ್ದ ವ್ಯವಸ್ಥೆಯನ್ನು ನಿರಾಕರಿಸಿ ಹೊಸ ವ್ಯವಸ್ಥೆಯನ್ನು ಕಟ್ಟುವ ವಚನಕಾರರ ಆಶಯ ಗಮನಾರ್ಹವಾಗಿದೆ. ಪ್ರಸುತ ಈ ಲೇಖನವು ವಚನಗಳಲ್ಲಿ ರೂಪಿತವಾದ ಜಾತಿಯ ಪರಿಕಲ್ಪನೆಯ ನೆಲೆಗಳನ್ನು ಚರ್ಚಿಸುವುದಾಗಿದೆ.

ಜಾತಿಯ ನೆಲೆಯಲ್ಲಿ ಉನ್ನತ ವರ್ಗದವರೆಂದು ಕರೆದುಕೊಳ್ಳುವ ಹುಸಿತನವನ್ನು ನಿರಾಕರಿಸಿರುವ ಅನೇಕ ವಚನಗಳಿವೆ. ವೃತ್ತಿಯ ಕಾರಣಕ್ಕಾಗಿಯೇ ಜಾತಿಯ ಕಟ್ಟುಪಾಡುಗಳನ್ನು ಹೇರಿದವರ ಚಿಂತನೆಯ ವಿರುದ್ದದ ಧ್ವನಿಯಿದೆ. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಜಾತಿ ನಿರಾಕರಣೆ ಮತ್ತು ಜಾತಿ ಮೂಲದ ಅಸ್ತಿತ್ವವನ್ನು ಕುರಿತಾದ ಚರ್ಚೆ ಬಹು ಮುಖ್ಯವಾದದ್ದು. ಈ ಕೆಳಗಿನ ವಚನವನ್ನು ಗಮನಿಸಬಹುದು.

ಕಾಸಿ ಕಮ್ಮರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದರುಂಟೆ ಜಗದೊಳಗೆ?
ಇದುಕಾರಣ ಕೂಡಲ ಸಂಗಮದೇವ
ಲಿಂಗಸ್ಥಲವನರಿದವನೆ ಕುಲಜನು.[1]

ವೃತ್ತಿಯ ಕಾರಣಕ್ಕೆ ರೂಪುಗೊಂಡ ಜಾತಿಯು ಕಾಲಕ್ರಮೇಣ ಮೇಲು–ಕೀಳಿನ, ಸ್ಪೃಶ್ಯ–ಅಸ್ಪೃಶ್ಯತೆಯ ಸಾಧನಗಳಾಗಿ ಬಳಕೆಯಾದ ನೆಲೆಯನ್ನು ಇಲ್ಲಿ ನಿರಾಕರಿಸಿದ್ದಾರೆ. ಜೈವಿಕವಾಗಿ ಎಲ್ಲ ಜನರ ಹುಟ್ಟಿನ ಮೂಲ ಒಂದೇ ಎಂದು ಬಸವಣ್ಣನವರು ನೆನಪಿಸುತ್ತಾರೆ. ಬಸವಣ್ಣನವರು ಸಮಾಜದ ಜಾತಿವ್ಯವಸ್ಥೆಯ ಕೇಂದ್ರವಾಗಿರುವ ದೇವಾಲಯ, ಧಾರ್ಮಿಕ ಆಚರಣೆಗಳನ್ನು ನಿರಾಕರಿಸುವ ವಚನವೊಂದು ಹೀಗಿದೆ.

ದೇವದೇವ ಭಿನ್ನಪ ಅವಧಾರು
ವಿಪ್ರ ಮೊದಲು ಅಂತ್ಯಜ ಕಡೆಯಾಗಿ
ಶಿವಭಕ್ತರಾದವರನ್ನೆಲ್ಲನೊಂದೆ ಎಂಬೆ
ಹಾರುವ ಮೊದಲು–ಶ್ವಪಚ ಕಡೆಯಾಗಿ
ಭವಿಯಾದವರನ್ನೆಲ್ಲರನೊಂದೆ ಎಂಬೆ
ಹೀಗಿದೆ ನಂಬೂದೆನ್ನ ಮನ[2]

ಶರಣರಾದ ಬಳಿಕ ಯಾವ ತಾರತಮ್ಯವು ಉಳಿಯದೇ ಇರುವುದನ್ನು ಪ್ರತಿಪಾದಿಸಿದ್ದಾರೆ. ಮನುಷ್ಯರಲ್ಲಿ ಜಾತಿಯ ಹೆಸರಿನ ವಿಭಜನೆ ಪೊಳ್ಳು ಎಂಬ ನಿಲುವು ಬಸವಣ್ಣನವರದ್ದು. ಶರಣತ್ವವೇ ಶ್ರೇಷ್ಠತೆಯ ಮಾನದಂಡ. ಶರಣರಾದವರು

ಇತರರಗಿಂತ ಮೇಲು. ಜಾತಿ ತಾರತಮ್ಯವನ್ನು ಬಲಪಡಿಸುವ ದೇವಾಲಯ, ಧಾರ್ಮಿಕ ಆಚರಣೆಗಳನ್ನು ನಿರಾಕರಿಸುವ ವಚನವೊಂದು ಹೀಗಿದೆ.

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ
ಕುಲವೊಂದೆ ಶೌಚಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ[3]

ಹೊಲಗೇರಿ– ಶಿವಾಲಯಗಳು ಮನುಷ್ಯನ ಕೃತಕವಾದ ಸಂಗತಿಗಳು. ಇವುಗಳ ಮೂಲಕವೇ ಪವಿತ್ರ– ಅಪವಿತ್ರ, ಮೇಲು–ಕೀಳು ಎಂಬ ತಾರತಮ್ಯದ ಜಾತಿ ಪ್ರತಿಪಾಧಕ ಸಂಗತಿಗಳು ಸೃಷ್ಟಿಯಾಗುತ್ತಿರುವ ವಿಷಾದವನ್ನು ಹೇಳುತ್ತಿದ್ದಾರೆ. ಪ್ರಕೃತಿಯಲ್ಲಿ ಯಾವ ಶ್ರೇಷ್ಠತೆಯಾಗಲಿ, ಪವಿತ್ರತೆಯಾಗಲಿ ಇಲ್ಲ, ಇವುಗಳ ಮೂಲಕ ಮನುಷ್ಯರನ್ನು ಪ್ರತ್ಯೇಕಿಸುವುದು ಸರಿಯಲ್ಲ ಎಂಬ ನಿಲುವು ಇಲ್ಲಿದೆ.

ಅಸ್ತಿತ್ವದಲ್ಲಿದ್ದ ಜಾತಿಯ ಕಲ್ಪನೆಯನ್ನು ನಿರಾಕರಣೆ ಮಾಡಿ ಮಾನವೀಯ ಮೌಲ್ಯಗಳು, ಗುಣ ನಡತೆಗಳು, ನಡಾವಳಿಕೆಗಳ ಹಿನ್ನೆಲೆಯಲ್ಲಿ ಜಾತಿಯನ್ನು ಹೊಸ ರೀತಿ ವ್ಯಾಖ್ಯಾನಿಸಿದ ವಚನಕಾರರ ನೋಟಕ್ರಮ ಮುಖ್ಯವಾದದ್ದು. ವಚನಗಳ ಕಾಲಘಟ್ಟದಲ್ಲಿ ಹೀಗೆ ಜಾತಿಯ ಮರು ವ್ಯಾಖ್ಯಾನಗಳನ್ನು ಸೃಷ್ಟಿಸುವುದರ ಮೂಲಕವೇ ಜಾತಿಯ ಅಸ್ತಿತ್ವದ ಕಟ್ಟುಪಾಡುಗಳನ್ನು ನಿರಾಕರಣೆ ಮಾಡಿ ಜಾತಿಯ ಹೊಸ ವ್ಯಾಖ್ಯಾನವನ್ನು ಪ್ರತಿಪಾದಿಸಿದ ಬಸವಣ್ಣನವರ ವಚನವೊಂದು ಹೀಗಿದೆ.

ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ
ಕುಲವೇನು ಆವಂದಿಗರ ಕುಲವೇನು
ಸಕಲ ಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು

ಆಹಾರ ಪದ್ಧತಿಯನ್ನು ಕುರಿತಂತೆ ಹೇಳುವ ಮತ್ತು ಗುಣದ ಮೂಲಕ ಜಾತಿಯ ಹೊಸ ವ್ಯಾಖ್ಯಾನವನ್ನು ಮಾಡಲಾಗಿದೆ. ಮತ್ತೆ ಪುನಃ ಶರಣತ್ವವೇ ಶ್ರೇಷ್ಠತೆಯ ಅಳತೆಗೋಲು ಎನಿಸಿಕೊಳ್ಳುತ್ತದೆ.

ವಚನಕಾರರು ತಮ್ಮ ಕಾಲಕ್ಕೆ ಇದ್ದ ಜಾತಿಯ ಕಠೋರತೆಯನ್ನು ಮರು ವ್ಯಾಖ್ಯಾನಗೊಳಿಸುತ್ತಲೇ ಜಾತಿ ತಮ್ಮದೇ ಆದ ರೀತಿಯಲ್ಲಿ ಶ್ರೇಷ್ಠತೆಯನ್ನು ವ್ಯಾಖ್ಯಾನಿಸಲು ಯತ್ನಿಸಿದರು. ಶರಣತತ್ತ್ವವನ್ನು ಪ್ರತಿಪಾದನೆ ಮಾಡುವುದರ ಮೂಲಕವೇ ಜಾತಿಯ ಮೂಲಕ್ಕೆ ಪೆಟ್ಟುಕೊಟ್ಟವರು. ವಚನಕಾರರು ಪ್ರತಿಪಾದಿಸಿದ ಹೊಸ ವರ್ಗದ ಪರಿಕಲ್ಪನೆಯು ನೈತಿಕ ನೆಲೆಗಟ್ಟಿನದು. ಅದು ಹುಟ್ಟನ್ನು ಆಧರಿಸಿದ್ದು ಅಲ್ಲ.

ಉಲ್ಲೇಖಗಳು

1. ಕಲ್ಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನಗಳು, ಪುಟ–245
2. ಕಲ್ಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನಗಳು, ಪುಟ–163
3. ಕಲ್ಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನಗಳು, ಪುಟ–197
4. ಕಲ್ಬುರ್ಗಿ ಎಂ.ಎಂ. (ಸಂ), ಬಸವಣ್ಣನವರ ವಚನಗಳು, ಪುಟ 156

❖❖❖

'ವಿಮುಕ್ತಿ'ಯ ಸೀತೆ

ಡಾ. ಶಶಿಕಲಾ ಆರ್.
ಕನ್ನಡ ಸಹ ಪ್ರಾಧ್ಯಾಪಕರು, ಸ.ಪ್ರ.ದ. ಕಾಲೇಜು, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ

ಆಧುನಿಕ ಸ್ತ್ರೀವಾದಿ ಚಿಂತನೆಗಳ ಗ್ರಹಿಕೆಯಿಂದ ರಚಿತವಾಗಿರುವ ಎಚ್.ವಿ. ಸಾವಿತ್ರಮ್ಮನವರ 'ವಿಮುಕ್ತಿ' ಕಾದಂಬರಿಯು ಸೀತೆಯ ಕುರಿತ ಹೊಸ ನೋಟವನ್ನು ನೀಡುತ್ತದೆ. ರಾಮಾಯಣದ ಸೀತೆಯ ಒಳಗನ್ನು ಪರಂಪರೆಯ ನೆರಳಿನಿಂದ ವಿಮುಕ್ತಿಗೊಳಿಸುತ್ತದೆ. ಪಿತೃಸಂಸ್ಕೃತಿಯನ್ನು ಆಧುನಿಕ ಸ್ತ್ರೀ ವಿಚಾರಗಳಿಂದ ತರ್ಕಕ್ಕೆ ಒಡ್ಡುವ 'ವಿಮುಕ್ತಿ'ಯ ಸೀತೆಯು ಆಧುನಿಕ ಸ್ತ್ರೀಪ್ರಜ್ಞೆಯ ಪ್ರತೀಕವಾಗಿ ನಿಲ್ಲುತ್ತಾಳೆ. ಆರ್ಯ ಕುಲಾಂಗನೆಯಾದ ಸೀತೆಯು ಬಾಯ್ತೆರೆದು ಮಾತಾಡುವುದು 'ವಿಮುಕ್ತಿ'ಯ ವೈಶಿಷ್ಟ್ಯ. ಸೀತೆಯ ಆಂತರ್ಯ ಅನುಭವಿಸುವ ತಲ್ಲಣಗಳು; ಲೋಕವು ಅರಿಯದ ಸೀತೆಯ ಬೇಗುದಿ; ಪರಂಪರೆಯ ಸಂಗತಿಗಳಿಂದ ಸೀತೆಯ ವಿಮುಕ್ತಿ ಸಾಧ್ಯವಾಗುವುದು ಈ ಕಾದಂಬರಿಯ ವಿಶೇಷತೆ.

ಪುರುಷ ಸಾಂಸ್ಕೃತಿಕ ರಾಜಕಾರಣವು ಸೀತೆಯನ್ನು ಎಲ್ಲ ಹೆಣ್ಣುಗಳ ಪ್ರತಿಮೆಯನ್ನಾಗಿಸಿ ಸಾಂಸ್ಕೃತಿಕಾಂಶಗಳಲ್ಲಿ ಬಂಧಿಸಿರುವುದು ಹೆಣ್ಣು ಕುಲವನ್ನು ನಿಗ್ರಹಿಸುವ ಸಂಗತಿಯೆಂಬುದಾಗಿ ಕಾದಂಬರಿ ಸೂಚಿಸುತ್ತದೆ. 'ಸೀತೆ' ಎಂಬ 'ಮಿತ್'ನ ಭಾಷೆಯು ಮೌನವೇ ಆಗಿ ಪ್ರಜ್ಞೆಯಲ್ಲಿ ವಿಶ್ಲೇಷಿಸುವ, ಪ್ರಶ್ನಿಸುವ ನೆಲೆಗಳನ್ನು ಕಳೆದುಕೊಂಡಿರುವುದನ್ನು ಕಾಣುತ್ತೇವೆ. 'ಸೀತೆ'ಯ ಈ 'ಮಿತ್' ಆಧುನಿಕ ಕಾಲದಲ್ಲಿ ಸ್ತ್ರೀವಾದಿ ಪರಿಪ್ರೇಕ್ಷದಲ್ಲಿ ಚರ್ಚೆಗೊಳಗಾಗಿದೆ. "ಪುರುಷಕೇಂದ್ರಿತ ಪ್ರಜ್ಞೆ ಸ್ತ್ರೀಯರ ಸ್ವಭಾವ, ಶಕ್ತಿ ಮತ್ತು ಪಾತ್ರಗಳನ್ನು ನಿರ್ಣಯಿಸಿ ಆ ನಿರ್ಣಯಕ್ಕೆ ಹೊಂದುವ ಅಥವಾ ನಿರ್ಧಾರಕ ಅಚ್ಚಿನಲ್ಲಿ ಎರಕಹೊಯ್ದ ಮಾದರಿಗಳನ್ನು ಚಾಲ್ತಿಗೆ ಬಿಟ್ಟಿತು. ಅದೆಂಥ ಮಾದರಿಗಳೆಂದರೆ ಗಂಡನ ಮಾನಸಿಕ, ಭೌತಿಕ, ಜೈವಿಕ ಅಗತ್ಯಗಳಿಗೆ ಹೊಂದುವಂಥವು. ಸೀತೆ, ಸಾವಿತ್ರಿ, ದಮಯಂತಿಯಂಥ ಮಾದರಿಗಳು. ವಿಧೇಯವಾದ, ಗಂಡಸಿನ ಬಲುಮೆ, ಹಿರಿಮೆಯನ್ನು ಒಪ್ಪುವಂಥ ಪಾತ್ರಗಳನ್ನು ಮಾದರಿಗಳೆನ್ನಲಾಯಿತು." ಎಂದು ಗುರುತಿಸಲಾಗಿದೆ.

ಆಧುನಿಕ ಕಾಲದಲ್ಲಿ ಸ್ತ್ರೀವಾದಿ ಪ್ರಜ್ಞೆಯು 'ಸೀತೆಯಾಗುವುದು ಬೇಡ' ಎನ್ನುತ್ತಾ ಈ 'ಮಿತ್' ಅನ್ನು ಮುರಿಯುವ ಪ್ರಯತ್ನ ಸಡೆಸಿದೆ. ಸಾವಿರಾರು ವರ್ಷಗಳಿಂದ ಅನುಕರಣೆಯೋಗ್ಯವಾದ 'ಸೀತೆ' ಇಂದು ಹೆಣ್ಣುಮಕ್ಕಳಿಗೆ ಬೇಡವಾಗಿದ್ದಾಳೆ. ಹಾಗಾದರೆ ಎಂಥ ಸೀತೆಯು ಇಂದು ಬೇಕಾಗಿರುವಳು ಎನ್ನುವುದಕ್ಕೆ ಸ್ತ್ರೀವಾದಿ ಪ್ರಜ್ಞೆಯಿಂದ ಕೂಡಿದ ಚಿಂತನೆಗಳು ದ್ರವ್ಯ ಒದಗಿಸುತ್ತಿವೆ. ಸ್ವಶೋಧನೆಗೆ ತೊಡಗುವ ಸೀತೆಯಲ್ಲಿ ನೋವಿನ ನೆಲೆಗಳು ತೆರೆದುಕೊಳ್ಳುತ್ತವೆ. ವಿಶ್ವಾಸವು ಘಾತುಕತನದಿಂದ ಕೂಡಿದೆ ಎಂಬುದು ಮನದಟ್ಟಾಗುತ್ತದೆ. ಪುರುಷನ ಏಕಮುಖ ಗ್ರಹಿಕೆಯಿಂದ, ಅಧಿಕಾರದಿಂದ ಜಡಗೊಂಡ ಸೀತೆಗೆ ಅಗ್ನಿಪ್ರವೇಶವು ರಾಮನಿಂದ ಬಿಡುಗಡೆಯನ್ನು ಪಡೆದಂತೆ, ವಿಮುಕ್ತಿ ಹೊಂದಿದಂತೆ ಭಾಸವಾಗುತ್ತದೆ. ಸೀತೆ ಸ್ತ್ರೀವಾದಿ ಪ್ರಜ್ಞೆಯಿಂದ ಸಾಮಾಜಿಕ

ರಚನೆಯನ್ನು ಮುರಿಯುತ್ತಾಳೆ. ಪರ್ಯಾಯವಾಗಿ ಇಪ್ಪತ್ತನೆಯ ಶತಮಾನದ ಸ್ತ್ರೀಪ್ರಜ್ಞೆಯ ಸಾಂಸ್ಕೃತಿಕ ರಚನೆಯನ್ನು ನಿರ್ಧರಿಸುತ್ತಾಳೆ.

ಪರಂಪರೆಯ ಸೀತೆಗೆ ಬಾಯ್ತೆಗೆಯದಂಥ ಬದ್ಧತೆಯ ಸಾಂಸ್ಕೃತಿಕ ಸಂದರ್ಭವನ್ನು ಸೃಷ್ಟಿಸಿ ಭಾರತೀಯ ನಾರಿಯರ ಬದ್ಧತೆ ಏನಾಗಿರಬೇಕೆಂಬುದನ್ನು ಪರಂಪರೆ ಹೇಳಿದೆ. ಅಗ್ನಿಪ್ರವೇಶದ ಅವಮಾನದ ಮಾನಸಿಕ ಸ್ಥಿತಿ, ಉತ್ತರ ಹುಡುಕಿಕೊಳ್ಳುವ ಪ್ರಕ್ರಿಯೆ, ತನಗಾಗಿ ತಾನು ಎಂಬ ನಿರ್ಧಾರಗಳು ಸೀತೆಯಲ್ಲಿನ ಪ್ರತಿಭಟನೆಗಳೇ ಸರಿ. ಸೀತೆಯ ಗಟ್ಟಿಗೊಳ್ಳುವ ಪ್ರಕ್ರಿಯೆಯಲ್ಲಿ ಪುರುಷಪ್ರಾಧಾನ್ಯವು ಇಂಚುಇಂಚಾಗಿ ತಿರಸ್ಕರಿಸಲ್ಪಡುತ್ತದೆ. "ಯಾವ ಹೆಣ್ಣಿನ ಸುಖದುಃಖಗಳಿಗೂ ಗಂಡಸಿನ ಅವಲಂಬನೆಯಿರಬಾರದು! ಗಂಡನ ಹಸಿತಕ್ಕೆ ಹಂಬಲಿಸುವ ಬದುಕು ಬೇಡ." "ಈ ಪ್ರಪಂಚದಲ್ಲಿ ಬದುಕುತ್ತೇನೆ, ರಾಮನ ಹಂಗಿಲ್ಲದೆಯೇ ಬದುಕುತ್ತೇನೆ" ಎಂಬುದು ಸೀತೆಯ ವಿಮುಕ್ತಿಯಾಗಿ ಧ್ವನಿತವಾಗುತ್ತದೆ.

ರಾಮ–ಸೀತೆಯರ ಮಾನಸಿಕ ಒದ್ದಾಟಗಳು 'ವಿಮುಕ್ತಿ' ಕಾದಂಬರಿಯಲ್ಲಿ ಒಂದು ಸ್ಥಿಮಿತ ಸ್ಥಿತಿಯನ್ನು ಸೀತೆಯು ತಲುಪಲು ಮುನ್ನುಡಿ ಬರೆಯುತ್ತದೆ. ಪರಂಪರೆಯು ನಿರ್ಮಿಸಿದ ಪಿತೃ ಚೌಕಟ್ಟಿನಿಂದ ಹೊರಬಾರದೆ ರಾಮನೂ ಪರಿತಪಿಸುತ್ತಾನೆ. ಪಿತೃ ಸಂಸ್ಕೃತಿಯು ಎಷ್ಟು ಭದ್ರವಾಗಿ ಪುರುಷನ ಮನೋಪಟಲದಲ್ಲಿಯೂ ನೆಲೆಯೂರಿದೆ ಎಂಬುದನ್ನು ರಾಮನ ಮಾನಸಿಕ ತೊಳಲಾಟವು ಸ್ಪಷ್ಟಪಡಿಸುತ್ತದೆ. ಸ್ತ್ರೀವಾದವು ಪುರುಷ ಪರಿಷ್ಕರಣೆಯನ್ನು ಬಯಸುವುದರಿಂದ ರಾಮನಲ್ಲಿನ ಈ ತೊಳಲಾಟವೂ ಮುಖ್ಯವೇ. ಪಿತೃ ಸಂಸ್ಕೃತಿಯ ಭ್ರಾತೃತ್ವದ ಪಾಲನೆಯಂಥ ಸಂಸ್ಕೃತಿಗೆ ಆಧೀನವಾಗಿದ್ದ ಲಕ್ಷ್ಮಣನು ರಾಮನನ್ನು ತೊರೆದು ಹೊರ ಬರುವುದು ಪಿತೃ ಸಂಸ್ಕೃತಿಯಲ್ಲಿನ ದೋಷವನ್ನು ಹೇಳುತ್ತಾ ಹೆಣ್ಣಿನ ನೋವುಗಳಿಗೆ ಸ್ಪಂದಿಸುವ ಪುರುಷ ವ್ಯಕ್ತಿತ್ವವನ್ನು ಶೋಧಿಸುತ್ತದೆ. ಭ್ರಾತೃತ್ವದ ಪರಿಪಾಲನೆಯಲ್ಲಿ ಅರ್ಥವಾಗದಿದ್ದ ಊರ್ಮಿಳೆ ಇದೀಗ ಲಕ್ಷ್ಮಣನಿಗೆ ಅರ್ಥವಾಗುತ್ತಾಳೆ.

ಸಂಶಯ ಪಿಶಾಚಿಯನ್ನು ಗೆಲ್ಲಲಾಗದ ರಾಮನಿಂದ ಸೀತೆ ಎಲ್ಲರ ಪ್ರತಿಕ್ರಿಯೆಯನ್ನು ತೂಗಿ ನೋಡುವ, ವಿವೇಚನೆಯ ಒರೆಗಲ್ಲಿಗೆ ಹಚ್ಚುವ ಶಕ್ತಿಯನ್ನು ಗಳಿಸುತ್ತಾಳೆ. ಅಗ್ನಿಪ್ರವೇಶದಿಂದ ಬದುಕಿ ಬರುವುದು ಸಾಮಾನ್ಯರಿಗೆ ಅಸಾಧ್ಯವಾದ ಮಾತು. "ಅಧೀನವಾಗಿಸುವಿಕೆಯ ಉದ್ದೇಶದಿಂದ ಹೆಂಗಸಿನ ಲೈಂಗಿಕ ಜೀವನದ ಮೇಲಿನ ನಿಯಂತ್ರಣಕ್ಕೆ ಅಗತ್ಯವಾಗಿ ಪಾವಿತ್ರ್ಯತೆಯ ಮಾದರಿಯನ್ನು ಹೆಂಗಸಿಗೆ ಕೊಡಲಾಗಿದೆ. ಪಾವಿತ್ರ್ಯದ ಕಠಿಣ ಪರೀಕ್ಷೆಯಲ್ಲಿ ಸೀತೆಯ ಸಂಕೇತದಲ್ಲಿ ರೂಢಿಸಲಾಗಿದೆ. ಹೆಂಗಸಿಗೆ ಈ ಸಂಕೇತ ಸದಾ ಎಚ್ಚರದ ಗಂಟೆಯಾಗಿಬೇಕೆಂದು ಸಂಸ್ಕೃತಿಯ ಅಪೇಕ್ಷೆ. 'ತಪ್ಪು' ಮಾಡದ ಸೀತೆಯೂ ಆ ದುರಂತಕ್ಕೆ ಒಳಗಾದಳೆಂದು ತೋರುವುದರ ಹಿಂದೆ ಇರುವ ಬೆದರಿಕೆಯನ್ನು ಆಳವಾಗಿ ಹೆಂಗಸಿನ ಪ್ರಜ್ಞೆಯಲ್ಲಿ ಊರುವ ಉದ್ದೇಶ ಈ ಸಂಕೇತದ್ದು" ಎಂಬ ವಿಜಯಾ ದಬ್ಬೆರವರ ಮಾತು ಇಲ್ಲಿ ಗಮನಾರ್ಹವಾಗಿದೆ.

ರಾಮನ ಮನಸ್ಸು ಅಗ್ನಿಪ್ರವೇಶದಿಂದ ನೊಂದಿದ್ದ ಸೀತೆಯ ಅನ್ಯಮನಸ್ಕತೆಯನ್ನು ರಾವಣನ ಮೇಲಿನ ವ್ಯಾಮೋಹವಾಗಿ ಗ್ರಹಿಸುತ್ತದೆ. ಆದರ್ಶ ರಾಮನು ಕೂಡ ಪಿತೃ ಸಂಸ್ಕೃತಿಯ ವ್ಯೂಹದಲ್ಲಿ ಸಿಕ್ಕಿ ಒದ್ದಾಡುತ್ತಾನೆ. ಆದರೆ ಏನು ಮಾಡುವುದು. ರಾಮನು ಅಧಿಕಾರದ ಕರ್ತವ್ಯದ ಕಾಠಿಣ್ಯತೆಗೆ ಒಳಗಾದವನೇ ಅಲ್ಲವೇ? ರಾಮನ ಚುಚ್ಚು ಮಾತುಗಳು ಸೀತೆಗೆ ಇಂತಹದ್ದು ಮನುಷ್ಯ ಸಂಸ್ಕೃತಿಯಿಂದ ಮಾತ್ರ ಸಾಧ್ಯ ಎಂಬ

ನೆಲೆಗೆ ಕೊಂಡೊಯ್ಯುತ್ತದೆ. ತನ್ನ ಮಕ್ಕಳೂ ಪುರುಷರೇ ಅಲ್ಲವೇ? ಮುಂದೊಂದು ದಿನ ಅವರೂ ರಾಮನಂತೆಯೇ ಅಂದುಕೊಂಡರೇ? ಎಂದು ಯೋಚಿಸುವ ಸೀತೆಯ ಪ್ರಜ್ಞೆ ಮಕ್ಕಳೊಡನೆ ಅಯೋಧ್ಯೆಗೆ ತೆರಳಲು ನಿರಾಕರಿಸುತ್ತದೆ. ಪಿತೃಸಂಸ್ಕೃತಿಯ ಆಶಯಗಳನ್ನು ಮೀರಿ ನಿಲ್ಲುತ್ತದೆ.

ರಾಮನ ವರ್ತನೆ, ಸೀತೆಯನ್ನು ಕಾಡಿಗೆ ಕಳಿಸಿದ್ದು ಸೀತೆಗೆ ಅಂತರಾಳದ ವಿವೇಚನೆಯಲ್ಲಿ ನೋವಿನ ಸಂಗತಿಯಲ್ಲ. ಬದಲಾಗಿ ಹೆಣ್ಣಾದುದರಿಂದ ತೀರ ಕಳೆದುಕೊಂಡಿದ್ದ ವ್ಯಕ್ತಿತ್ವವನ್ನು ಗಳಿಸಿಕೊಳ್ಳುವ ಪ್ರಕ್ರಿಯೆ. ರಾಮ ದಯೆ ತೋರಿ ನನ್ನ ಬಿಡುಗಡೆಗೆ ಅಪ್ಪಣೆ ನೀಡಿದ್ದಾನೆ ಎಂಬ ಭಾವ. ಇಲ್ಲಿ ಸೀತೆಯಲ್ಲಿ ಆಧುನಿಕ ಸ್ತ್ರೀಪ್ರಜ್ಞೆ ಹೆಡೆಯೆತ್ತಿದೆ. ಇಂಥ ಸಾಂಸ್ಕೃತಿಕ ಪ್ರಜ್ಞಾಪ್ರಾತಳಿಯನ್ನು ಮನಸ್ಸಿನ ಆಲೋಚನಾ ಲಹರಿಯಲ್ಲಿ ಅರಿವಾಗಿ ತಳೆಯುವ ಹೆಣ್ಣಿನ ಸೃಷ್ಟಿಯಾಗಬೇಕೆಂಬುದು ಸಾಂಸ್ಕೃತಿಕ ಸ್ತ್ರೀವಾದದ ಗಟ್ಟಿ ನಿಲುವು ಕೂಡ. ಬದುಕನ್ನು ಮೂಲದಿಂದ ಸರಿ ಮಾಡಬೇಕು ಎನ್ನುವಾಗ ಮನಸ್ಸನ್ನು ಪ್ರಭಾವಿಸಿರುವ ಸಾಂಸ್ಕೃತಿಕ ಅಂಶಗಳ ಕಡೆಗೆ ಚಲಿಸಬೇಕಾಗುತ್ತದೆ. ಈ ಕ್ರಿಯೆ 'ವಿಮುಕ್ತಿ'ಯಲ್ಲಿ ನೆರವೇರಿದೆ. "ಆಕೆಗೆ ಬೇಕಾಗಿದ್ದುದು ಶಾಂತಿ, ಪೂರ್ಣಶಾಂತಿ, ಚಿರಶಾಂತಿ, ಅದು ದೊರೆಯುವುದು ತಪೋವನದಲ್ಲಿ ಮಾತ್ರ" ಅನ್ನುವ ಧ್ವನಿಯಿಂದ ಸೀತೆ ತಾನೇ ತಾನಾಗಿ ಬೆಳೆಯುತ್ತಾಳೆ. ರಾಮ, ರಾಮನ ಗಂಡು ಮಕ್ಕಳ ಹಂಗು ಇಲ್ಲದೆ ಪಿತೃ ಸಂಸ್ಕೃತಿಯು ಹೆಣ್ಣಿಗೆ ಮಾತ್ರ ಸೀಮಿತ ಮಾಡಿ ಹೇರಿರುವ ಕಟ್ಟಳೆಗಳನ್ನು ಮೀರಿ ಸ್ಥಿತಪ್ರಜ್ಞಳಾಗುವ ಸೀತೆಯು ಇಂದಿನ 'ಸ್ತ್ರೀ ಸಂಸ್ಕೃತಿ'ಗೆ ಬೇಕಾದವಳು. ಇಂಥ ಸೀತೆಯ ಜನನ 'ವಿಮುಕ್ತಿ' ಕಾದಂಬರಿಯಲ್ಲಿ ಸಿದ್ಧಿಸಿದೆ. ಮುಖ್ಯವಾಗಿ ಮಾನಸಿಕ ನೆಲೆಯಲ್ಲಿ ಮಾರ್ಪಾಡುಗಳು ಆಗಬೇಕೆಂಬ ಸ್ತ್ರೀವಾದಿ ಸಾಂಸ್ಕೃತಿಕ ವಿಮರ್ಶೆಯ ಉದ್ದೇಶ 'ವಿಮುಕ್ತಿ'ಯ 'ಸೀತೆ'ಯ ವ್ಯಕ್ತಿತ್ವದಲ್ಲಿ ಮೂಡಿ ಅರಳಿದೆ.

ಪರಾಮರ್ಶನಾ ಗ್ರಂಥಗಳು

1. ಸಾವಿತ್ರಮ್ಮ ಹೆಚ್ ವಿ., 2014, ಸೀತೆ–ರಾಮ–ರಾವಣ ಮತ್ತು ವಿಮುಕ್ತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಸುಮಿತ್ರಾಬಾಯಿ ಬಿ.ಎನ್., 1995, ವಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ರಾಮಚಂದ್ರಪ್ಪ ಬರಗೂರು(ಸಂ), 1993, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.
4. ನಿರಂಜನ ತೇಜಸ್ವಿನಿ, ನಿರಂಜನ ಸೀಮಂತಿನಿ (ಸಂ), 2014, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಅಭಿನವ ಪ್ರಕಾಶನ, ಬೆಂಗಳೂರು.
5. ಶ್ರೀಮತಿ ಎಚ್.ಎಸ್., 2020, ಎಲ್ಲರಿಗಾಗಿ ಸ್ತ್ರೀವಾದ, ಆಕೃತಿ ಪುಸ್ತಕ, ಬೆಂಗಳೂರು.
6. ಶ್ರೀಮತಿ ಎಚ್.ಎಸ್., 2019, ಸ್ತ್ರೀವಾದ: ಚಿಂತನೆ ಮತ್ತು ಹೋರಾಟ, ಅಭಿರುಚಿ ಪ್ರಕಾಶನ, ಮೈಸೂರು.
7. ಅನುಪಮಾ ಎಚ್.ಎಸ್., 2016, ಮಹಿಳೆ: ದಲಿತತ್ವ ಮತ್ತು ರಾಜಕೀಯ ಪ್ರಜ್ಞೆ, ಲಡಾಯಿ ಪ್ರಕಾಶನ, ಗದಗ.
8. ಬಳಿಗಾರ್ ಮನು, 2020, ಸ್ತ್ರೀವಾದಿ ಚಿಂತನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
9. ಶ್ರೀಮತಿ ಎಚ್.ಎಸ್, 1999, ಸ್ತ್ರೀವಾದಿ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

❖❖❖

ಕನ್ನಡ ಜೈನ ಸಾಹಿತ್ಯದ ಹಿಂದಿರುವ ಕರ್ಮಸಿದ್ಧಾಂತ

ಮಹಾವೀರ ಜೈನ್
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

ಜೈನ ಧರ್ಮವು ಜಿನನಿಂದ ಬೋಧಿತವಾದ ಧರ್ಮ. ಜಿನನನ್ನು ದೇವರೆಂದು ಪೂಜಿಸುವವರು ಜೈನರು. ಆತ್ಮನಿಗೆ ಅಂಟಿರುವ ಎಲ್ಲಾ ಜ್ಞಾನಾವರಣೀಯಾದಿ ಎಂಟು ವಿಧದ ಕರ್ಮಗಳನ್ನು ಗೆದ್ದವನು ಜಿನನಾಗುತ್ತಾನೆ. ಜೈನಧರ್ಮ ಮುಖ್ಯವಾಗಿ ಮೂರು ಸಿದ್ಧಾಂತಗಳನ್ನು ಪ್ರಸ್ತಾಪಿಸುತ್ತದೆ. ಅಹಿಂಸಾ ಸಿದ್ಧಾಂತ, ಅನೇಕಾಂತ ಸಿದ್ಧಾಂತ, ಕರ್ಮಸಿದ್ಧಾಂತ. ಜೈನಧರ್ಮ ದೇಹಕ್ಕಿಂತಲೂ ಹೆಚ್ಚಿನ ಶಕ್ತಿಯಿರುವ, ಶಾಶ್ವತವಾದ, ಪರಮಾತ್ಮನಾಗಬಲ್ಲ ಆತ್ಮನಿಗೆ ಹೆಚ್ಚು ಒತ್ತನ್ನು ಕೊಡುವುದರಿಂದ ಜೈನಧರ್ಮವನ್ನು ಆತ್ಮಧರ್ಮವೆಂತಲೂ ಕರೆದಿದ್ದಾರೆ.

ಜೈನಧರ್ಮದ ಮೂಲ ಉದ್ದೇಶ, ಯಾವುದೇ ಜೀವಿ ಅಥವಾ ರಾಜ, ಮಂತ್ರಿ, ಸೇವಕ ಅಥವಾ ಸಾಮಾನ್ಯನೇ ಆಗಿರಲಿ ಆತನು ತನ್ನ ಆತ್ಮನನ್ನು ಕ್ಷಣಿಕವಾಗಿರುವ ಈ ಹುಟ್ಟು ಸಾವುಗಳೆಂಬ ಭವಸಂಸಾರದ ಜಂಜಾಟದಿಂದ ಬಿಡುಗಡೆಗೊಳಿಸಿ ಪರಮಾತ್ಮನನ್ನಾಗಿಸುವುದೇ ಆಗಿದೆ. ಅಂದರೆ ಶಾಶ್ವತವಾದ ಮೋಕ್ಷ(ಜಿನ) ಪದವಿಯನ್ನು ಸಂಪಾದಿಸುವುದು. ಈ ಜನನ ಮರಣಗಳ ಭವಸಾಗರದಿಂದ ಆತ್ಮನನ್ನು ಬಿಡುಗಡೆಗೊಳಿಸಬೇಕಾದರೆ ಅನಿವಾರ್ಯವಾಗಿ ಆತ್ಮನಿಗೆ ಅಂಟಿರುವ ಕರ್ಮಗಳನ್ನು ನಾಶಪಡಿಸಲೇಬೇಕು. ಕರ್ಮಗಳು ನಾಶವಾದ ಆತ್ಮ ಶುದ್ಧಾತ್ಮನಾಗಿ ಮೂಲಸ್ವರೂಪವನ್ನು ಪಡೆದು ಶಾಶ್ವತವಾದ ಮೋಕ್ಷ ಪದವಿಗೇರಿ ಜಿನನಾಗುತ್ತಾನೆ.

ಸಾಮಾನ್ಯವಾಗಿ ಕರ್ಮವೆಂದರೆ ನಾವು ಮಾಡುವ ಕೆಲಸವೆಂದು ಅರ್ಥವಿದೆ. ಆದರೆ ಧರ್ಮದ ಸಿದ್ಧಾಂತದಲ್ಲಿ ಕರ್ಮವೆಂದರೆ, ಕ್ಷಣಕ್ಷಣವೂ, ಪ್ರತಿ ಹೆಜ್ಜೆಹೆಜ್ಜೆಗೂ ನಾವು ಮಾಡುವ ಪ್ರತಿಯೊಂದು ಕ್ರಿಯೆಯಲ್ಲೂ ಆತ್ಮನಿಗೆ ಅಂಟುವ ಪಾಪ ಪುಣ್ಯಗಳ ಒಟ್ಟು ಸಂಗ್ರಹವನ್ನು ಕರ್ಮವೆನ್ನುತ್ತಾರೆ. ಕರ್ಮಬಂಧವಾಗುವಾಗ ಅಥವಾ ಕರ್ಮೋದಯವಾಗಿ ಅದು ಫಲವನ್ನು ನೀಡುವಾಗ ಅಲ್ಲಿ ಯಾವುದೇ ರೀತಿಯ ಭೇದಭಾವವಿಲ್ಲ ರಾಜ, ಸೇವಕ, ಶ್ರೀಮಂತ, ಬಡವ, ಮನುಷ್ಯ, ಪ್ರಾಣಿ, ಯಾವುದೇ ಜೀವಿ ಎಲ್ಲರೂ ಪ್ರತಿ ಹೆಜ್ಜೆಹೆಜ್ಜೆಗೂ ಏನನ್ನು ಮಾಡುತ್ತವೆಯೋ ಆ ಕೆಲಸದ ಪರಿಣಾಮದಿಂದ ಆತ್ಮನಿಗೆ ಕರ್ಮಬಂಧವಾಗುತ್ತದೆ. ಅದರ ಫಲವನ್ನು ಮುಂದಕ್ಕೆ ಅದೇ ಜೀವಿ ಅನುಭವಿಸಬೇಕಾಗುತ್ತದೆ. ಈಗ ನಾವು ಏನನ್ನೂ ಅನುಭವಿಸುತ್ತಿದ್ದೇವೆಯೋ ಅವೆಲ್ಲವೂ ಆತ್ಮನಿಗೆ ಅಂಟಿರುವ ನಾವು ಹಿಂದೆ ಮಾಡಿರುವ ಕರ್ಮಗಳ ಪರಿಣಾಮವೇ ಆಗಿರುತ್ತದೆ. ಕರ್ಮವನ್ನು ನಾವೇ ಮಾಡುತ್ತೇವೆ. ಅದನ್ನು ಮುಂದಕ್ಕೆ ನಾವೇ ಅನುಭವಿಸುತ್ತೇವೆ.

ಉತ್ತಮ ಕ್ರೀಯೆಗಳಿಂದ ಪುಣ್ಯಕರ್ಮ ಹಾಗೂ ಕೆಟ್ಟ ಕ್ರಿಯೆಗಳಿಂದ ಪಾಪ ಕರ್ಮವೂ ಆತ್ಮನಿಗೆ ನಿರಂತರವಾಗಿ ಬಂಧವಾಗುತ್ತಿರುತ್ತದೆ. ಪುಣ್ಯ ಕರ್ಮಗಳಿಂದ ಜೀವಿಯೂ ಸುಖವನ್ನೂ, ಪಾಪ ಕರ್ಮದಿಂದ ಜೀವಿಯೂ ದುಃಖವನ್ನು ನಿರಂತರವಾಗಿ ಅನುಭವಿಸುತ್ತಿರುತ್ತಾನೆ. ನಮ್ಮ ಬದುಕಿನ ಎಲ್ಲಾ ಸುಖ ದುಃಖಗಳಿಗೆ

ನಾವೇ ಕಾರಣ, ಅಂದರೆ ನಾವು ಮಾಡಿರುವ ಕರ್ಮಗಳು. ಒಮ್ಮೆ ಜೀವನು ಅಸಮಸಾಹಸವನ್ನು ಮಾಡಿ ತಪಸ್ಸು, ಭೇದವಿಜ್ಞಾನ, ತತ್ವಭಾವನಾ, ಪರಮ ಸಮಾಧಿರೂಪವಾದ ಸಾಧನವಿಶೇಷಗಳಿಂದ ನೂತನ ಕರ್ಮಗಳನ್ನು ತಡೆಯುತ್ತಲೂ ಹಳೆಯ ಕರ್ಮಗಳನ್ನು ನಾಶ ಮಾಡುತ್ತಲೂ ಬಂದರೆ ಆತ್ಮನಿಗೆ ಅಂಟಿದ ಎಂಟು ಕರ್ಮಗಳು ಪೂರ್ಣವಾಗಿ ನಾಶವಾಗಿ ಪಾಪ ಹಾಗೂ ಪುಣ್ಯಗಳಿಂದ ಮುಕ್ತನಾಗಿ ಅಷ್ಟಕರ್ಮಗಳನ್ನು ಗೆದ್ದು ಶುದ್ಧಾತ್ಮನಾಗಿ ಜಿನನಾಗುತ್ತಾನೆ.

ಮೋಡವು ಸೂರ್ಯನನ್ನು ಆವರಿಸಿಕೊಂಡು ಅವನ ಪ್ರಕಾಶಗುಣವನ್ನು ಮರೆಮಾಡುವಂತೆ ಕರ್ಮಗಳು ಜೀವಾತ್ಮನಲ್ಲಿ ಸೇರಿಕೊಂಡು ಅವನ ಅನಂತ ಜ್ಞಾನ, ಸುಖ, ಶಕ್ತಿ ಮೊದಲಾದ ಗುಣವನ್ನು ಮರೆಮಾಡುತ್ತದೆ. ಆ ಮೋಡವು ಕರಗಿಹೋದಾಗ ಸೂರ್ಯನ ಪ್ರಕಾಶವು ಪ್ರಕಟವಾಗುವಂತೆ, ಆತ್ಮನಿಗೆ ಆವರಿಸಿರುವ ಕರ್ಮಗಳು ನಾಶವಾದಾಗ ಆತ್ಮ ಶುದ್ಧಾತ್ಮನಾಗಿ ಜಿನನಾಗುತ್ತಾನೆ.

"ಒಂದು ಬಟ್ಟೆಯನ್ನು ಏಳೆಂಟು ಮಡಿಕೆ ಮಾಡಿ ಅದರಿಂದ ದೀಪವನ್ನು ಮುಚ್ಚಿದರೆ ಅದರ ಪೂರ್ಣವಾದ ಬೆಳಕು ಪ್ರಕಟಗೊಳ್ಳುವುದಿಲ್ಲ. ಆಗ ಆ ಬಟ್ಟೆಯ ಒಂದೊಂದೆ ಮಡಿಕೆಯನ್ನು ತಗೆದಾಗಲೆಲ್ಲ ಅದರ ಬೆಳಕು ಪ್ರಕಟಗೊಳ್ಳುತ್ತಾ ಹೋಗುತ್ತದೆ. ಕೊನೆಗೆ ಪೂರ್ಣವಾಗಿ ಬಟ್ಟೆಯನ್ನು ತಗೆದಾಗ ದೀಪದ ಸಂಪೂರ್ಣ ಬೆಳಕು ಪ್ರಕಟಗೊಳ್ಳುತ್ತದೆ. ಅದರಂತೆ ಜೀವಾತ್ಮನಿಗೆ ಅಂಟಿರುವ ಎಂಟು ಕರ್ಮಗಳು ದೂರವಾದಾಗ ಜೀವಾತ್ಮ ಪರಮಾತ್ಮನಾಗುತ್ತಾನೆ" (ಜೈನ ತತ್ವಸಾರಸಂಗ್ರಹ, ಪುಟ.74)

ಜೀವನಲ್ಲಿರುವ ಆತ್ಮನು ಮುಕ್ತಾತ್ಮ ಅಂದರೆ ಪರಮಾತ್ಮ(ಜಿನ)ನಾಗಬೇಕಾದರೆ ಆತ್ಮನಿಗೆ ಬಂಧವಾಗಿರುವ ಪಾಪ ಪುಣ್ಯ ಕರ್ಮಗಳು ಒಟ್ಟು ಸೇರಿದ ಅಷ್ಟಕರ್ಮಗಳುಸಂಪೂರ್ಣವಾಗಿ ನಾಶ ಹೊಂದಬೇಕು. ಪುಣ್ಯ ಕರ್ಮದಿಂದ ಸುಖವುಂಟಾಗುವುದಾದರೆ ಆತ್ಮನು ಆ ಕರ್ಮದಿಂದ ಯಾಕೆ ಬಿಡುಗಡೆ ಹೊಂದಬೇಕು? ಎಂಬ ಪ್ರಶ್ನೆ ನಮ್ಮಲ್ಲಿ ಮೂಡಬಹುದು. ಆದರೆ ಪುಣ್ಯಕರ್ಮದಿಂದ ಉಂಟಾಗುವ ಸುಖವು ಅನಿತ್ಯವಾದುದು, ನಶ್ವರವಾದುದು, ಕ್ಷಣಿಕವಾದುದು. ಪುಣ್ಯಕರ್ಮವು ನಾಶವಾದ ಬಳಿಕ ಪಾಪಕರ್ಮ ಉದಯಕ್ಕೆ ಬಂದಾಗ ಜೀವನು ದುಃಖವನ್ನು ಅನುಭವಿಸಬೇಕಾಗುತ್ತದೆ. ಪಾಪ ಕರ್ಮವು ಅನಿತ್ಯವಾದುದು, ಅಶಾಶ್ವತವಾದುದು, ಕ್ಷಣಿಕವಾದುದು. ಜೀವನನ್ನು ಚಿನ್ನದ ಸಂಕೋಲೆಯಿಂದ ಬಂಧಿಸಿದರೂ, ಕಬ್ಬಿಣದ ಸಂಕೋಲೆಯಿಂದ ಬಂಧಿಸಿದರೂ ಬಂಧನಗಳೆರಡೂ ಒಂದೇ ಆಗಿರುತ್ತದೆ.

ಅದರಂತೆ ಪುಣ್ಯಕರ್ಮವಾದರೂ ಜೀವನನ್ನು ಜನನ ಮರಣಗಳೆಂಬ ಭವಬಂಧನದಲ್ಲಿರಿಸುತ್ತದೆ. ಪಾಪಕರ್ಮವಾದರೂ ಜೀವನನ್ನು ಜನನ ಮರಣಗಳೆಂಬ ಭವಬಂಧನದಲ್ಲಿರಿಸುತ್ತದೆ. ಕನ್ನಡಿಗೆ ಗಂಧವನ್ನೂ ಬಳಿದರೂ ಅದು ಮಂಕಾಗುವುದು. ಕೆಸರನ್ನೂ ಬಳಿದರೂ ಮಂಕಾಗುವುದು. ಅದೇ ರೀತಿ ಜೀವಾತ್ಮನು ಪುಣ್ಯ ಪಾಪಗಳೆಂಬ ಅಷ್ಟಕರ್ಮಗಳ ಆವರಣದಿಂದ ಆತ್ಮನ ಶುದ್ಧಸ್ವರೂಪ ಮಂಕಾಗುತ್ತದೆ. ಅದ್ದರಿಂದ ಪಾಪಪುಣ್ಯಗಳೆರಡೂ ಆತ್ಮಜ್ಞಾನಿಗೆ ಅನಗತ್ಯವಾದುದು. ತನ್ನ ಜೀವನನ್ನು ಹನ್ನೆರಡು ಬಹ್ಯಾಂತರಂಗ ತಪಸ್ಸಿನಲ್ಲಿ ತೊಡಗಿಸಿಕೊಂಡು ಅಷ್ಟಕರ್ಮಗಳನ್ನು ನಾಶಮಾಡಿ ಆತ್ಮನನ್ನು ಜಿನನನ್ನಾಗಿಸುವುದು ಅಥವಾ ಪರಮಾತ್ಮನನ್ನಾಗಿಸುವುದು ಬದುಕಿನ ಯಥಾರ್ಥವಾದ ಗುರಿಯಾಗಿದೆ.

ತೆಂಗಿನ ಮರದಲ್ಲಿರುವ ತೆಂಗಿನಕಾಯಿ ಬೆಳೆದು ಮಾಗಿ ಬಿಸಿಲಿಗೆ ಒಣಗಿ ಒಣಗಿ ಅದರೊಳಗಿನ ಕೊಬ್ಬರಿ ಚಿಪ್ಪಿನಿಂದ ಹೇಗೆ ಬಿಡಿಸಿಕೊಳ್ಳುತ್ತದೆಯೋ ಅದೇ ರೀತಿ ತಪವೆಂಬ ಬಿಸಿಲಿನಲ್ಲಿ ನಮ್ಮ ಜೀವನನ್ನು ಒಣಗಿಸಿ ದೇಹದಿಂದ ಹಾಗೂ ಕರ್ಮಗಳಿಂದ ಆತ್ಮನು ಬಿಡಿಸಿಕೊಳ್ಳುವ ಹಾಗೆ ಮಾಡಬೇಕು. ಶಿಲೆಯಿಂದ ಚಿನ್ನ ಬೇರ್ಪಡುವಂತೆ, ಹೊಟ್ಟಿನಿಂದ ಅಕ್ಕಿ ಬೇರೆಯಾಗುವಂತೆ ದೇಹ, ಪಾಪ, ಪುಣ್ಯಗಳೆಂಬ ಎಲ್ಲಾ ಬಾಹ್ಯ ಬಂಧನಗಳಿಂದ ಆತ್ಮ ಬಿಡುಗಡೆಗೊಂಡು ಮೋಕ್ಷಕ್ಕೆ ಸಾಗಬೇಕು. "ಒಣಗಿರುವ ಸೋರೆಕಾಯಿಗೆ ಮಣ್ಣನ್ನು ಮೆತ್ತಿ ಅದನ್ನು ಒಣಗಿಸಿ ನೀರಿನಲ್ಲಿ ಬಿಟ್ಟರೆ ಅದು ಮುಳುಗಿ ತಳದಲ್ಲಿ ಹೋಗಿ ನಿಲ್ಲುತ್ತದೆ. ಆ ಮಣ್ಣಿನ ಲೇಪವು ನಿಧಾನವಾಗಿ ನೀರಿನಲ್ಲಿ ಕರಗಿ ಹೋದಾಗ ಮೂಲದಲ್ಲಿ ಹಗುರವಾಗಿದ್ದ ಸೋರೆಕಾಯಿಯು ತನ್ನ ಹಿಂದಿನ ಮೂಲಗುಣವನ್ನು ಪಡೆದು ನಿಧಾನವಾಗಿ ಮೇಲಕ್ಕೆ ಬರುತ್ತದೆ"(ಜೈನ ತತ್ವಸಾರ ಸಂಗ್ರಹ, ಪುಟ. 75)

ಅದೇ ರೀತಿ ಮೂಲದಲ್ಲಿ ಹಗುರವಾಗಿರುವ ಶುದ್ಧಾತ್ಮ ಕರ್ಮಗಳಿಂದ ಆವರಿಸಲ್ಪಟ್ಟು ಭಾರನಾಗಿ ಅಧೋಗತಿಯಲ್ಲಿ ಸಂಸಾರ ಬಂಧನದಲ್ಲಿ ಸಿಲುಕಿದ್ದಾನೆ. ಇದರಿಂದ ಮುಕ್ತನಾದಾಗ ಮೂಲ ಗುಣ ಸ್ವರೂಪವನ್ನು ಹೊಂದಿ ಮೇಲ್ಮುಖನಾಗಿ ಚಲಿಸಿ ಜಿನನಾಗುತ್ತಾನೆ.

ಅಷ್ಟವಿಧಕರ್ಮವಿಕಲಾಃ ತೀತೀಭೂತಾನಿರಂಜನಾನಿತ್ಯಾಃ ।
ಅಷ್ಟಗುಣಾಃ ಕೃತಕೃತ್ಯಾಲೋಕಾಗ್ರನಿವಾಸಿನಃ ಸಿದ್ಧಾಃ ॥

ಗೋಮಟಸಾರ ಜೈನಗ್ರಂಥದಲ್ಲಿ ಆತ್ಮನು ಘಾತಿ ಅಘಾತಿ ಕರ್ಮಗಳೆಂಬ ಅಷ್ಟಕರ್ಮಗಳಿಂದ ಎಲ್ಲಿ ಮುಕ್ತರಾಗುತ್ತಾರೋ ಅಲ್ಲೇ ಇರದೆ ಊರ್ಧ್ವಗಮನ ಸ್ವಭಾವದಿಂದ ಲೋಕದ ತುತ್ತ ತುದಿಗೆ ಹೋಗಿ ಅಲ್ಲಿ ಸುಖದಿಂದ ತಣಿದವರೂ, ನಿರಂಜನರೂ ಆದ ಸಮ್ಯಕ್ತ್ವ, ಜ್ಞಾನ, ದರ್ಶನ, ಶಕ್ತಿ, ಸೂಕ್ಷ್ಮತ್ವ, ಅವಗಹನತ್ವ, ಅಗುರುಲಗುತ್ವ, ಅವ್ಯಾಬಾಧತ್ವಗಳೆಂಬ ಎಂಟು ಗುಣಗಳುಳ್ಳವರೂ ಕೃತಕೃತ್ಯರೂ ಲೋಕಾಗ್ರನಿವಾಸಿಗಳೂ ಆಗಿರುತ್ತಾರೆಂದು ಹೇಳಿದ್ದಾರೆ.

ಆತ್ಮನು ಸರ್ವಸ್ವತಂತ್ರನು. ಅವನೇ ಕರ್ತೃವೂ ಭೋಕ್ತೃವೂ ಆಗಿದ್ದಾನೆ. ಮೂಲದಲ್ಲಿ ಶುದ್ಧನಾಗಿರುವ ಆತ್ಮನು ಅನಾದಿ ಕಾಲದಿಂದಲೂ ಕರ್ಮದೊಡನೆ ಸೇರಿ ದೇವ, ನಾರಕಿ, ಮನುಷ್ಯ, ತಿರ್ಯಂಚ ಎಂಬ ಚತುರ್ಗತಿಗಳಲ್ಲಿ ಹುಟ್ಟಿ ಸತ್ತು ಸುಖ ದುಃಖಗಳನ್ನು ಅನುಭವಿಸುತ್ತಾ ಕರ್ಮವು ತಿರುಗಿಸಿದಂತೆ ತಿರುಗುತ್ತಾ ಸಂಸಾರದಲ್ಲಿ ಹೊರಳಾಡುತ್ತಿದ್ದಾನೆ.

ಅನಾದಿಕಾಲದಿಂದಲೂ ಕಲ್ಲಿನೊಂದಿಗೆ ಚಿನ್ನವು ಸೇರಿದಂತೆ, ಶುದ್ಧನಾದ ಆತ್ಮನು ಜಡಕರ್ಮದೇಹದೊಂದಿಗೆ ಆತ್ಮವು ಸೇರಿಕೊಂಡಿದೆ. ಯಂತ್ರದಿಂದ ಕಲ್ಲನ್ನು ಚಿನ್ನವನ್ನು ಬೇರೆ ಮಾಡಬಹುದು. ಅದೇ ರೀತಿ ತಪಸ್ಸಿನಿಂದ ಕರ್ಮವನ್ನು ಆತ್ಮನನ್ನು ಬೇರೆ ಮಾಡಬಹುದು. ಕಲ್ಲಿನಿಂದ ಬೇರ್ಪಟ್ಟ ಚಿನ್ನ ಮತ್ತೆ ಕಲ್ಲನ್ನು ಸೇರುವುದಿಲ್ಲ. ಹಾಗೆಯೇ ಕರ್ಮದಿಂದ ಸಂಪೂರ್ಣ ಬೇರ್ಪಟ್ಟ ಶುದ್ಧಾತ್ಮ ಮತ್ತೆ ಕರ್ಮದೊಂದಿಗೆ ಸೇರುವುದಿಲ್ಲ. ಕರ್ಮದಿಂದ ಬಿಡುಗಡೆಗೊಂಡ ಶುದ್ಧನಾದ ಆತ್ಮನಿಗೆ ದೇಹವಿಲ್ಲ. ದೇಹವು ಕರ್ಮದ ಪ್ರತೀಕ. ಆದ್ದರಿಂದ ಮುಕ್ತಾತ್ಮನು ಶಾಶ್ವತ ಸುಖವನ್ನು ಅನುಭವಿಸುತ್ತಾ ಲೋಕಾಗ್ರದಲ್ಲಿ ಸಿದ್ಧನಾಗುತ್ತಾರೆ.

ಕರ್ಮವು ಘಾತಿಕರ್ಮ ಹಾಗೂ ಅಘಾತಿಕರ್ಮವೆಂದು ಎರಡು ಪ್ರಕಾರದ್ದಾಗಿದೆ. ಘಾತಿ ಕರ್ಮವು ಅನಂತಜ್ಞಾನಾದಿ ಗುಣಗಳನ್ನು ಘಾತ ಮಾಡುವುದು ಹಾಗೂ ಘಾತಿ ಕರ್ಮಗಳನ್ನು ನಾವು ಸ್ವಪ್ರಯತ್ನದಿಂದ ನಾಶಗೊಳಿಸಬಹುದು. ಆ ಗುಣಗಳನ್ನು ಘಾತ ಮಾಡದಿರುವ ಲಘು ಕರ್ಮಕ್ಕೆ ಅಘಾತಿ ಕರ್ಮಗಳೆನ್ನುವರು ಹಾಗೂ ಅಘಾತಿ ಕರ್ಮಗಳನ್ನು ಪ್ರಯತ್ನದಿಂದ ನಾಶಗೊಳಿಸಲು ಸಾಧ್ಯವಿಲ್ಲ, ಬದಲಾಗಿ ಅನುಭವಿಸಿಯೇ ನಾಶಗೊಳಿಸಬೇಕು.

ಕರ್ಮದ ಭೇದ ಹಾಗೂ ಉತ್ತರ ಭೇದಗಳು ದ್ರವ್ಯಾನುಯೋಗ ಗ್ರಂಥದಲ್ಲಿ ಹೇಳಿರುವಂತೆ ಕರ್ಮಗಳಲ್ಲಿ ಪ್ರಮುಖವಾಗಿ ಎಂಟು ವಿಧಗಳು.ಜ್ಞಾನಾವರಣೀಯ ಕರ್ಮ, ದರ್ಶನಾವರಣೀಯ ಕರ್ಮ, ಮೋಹನೀಯಕರ್ಮ, ಅಂತರಾಯಕರ್ಮ ಈ ನಾಲ್ಕು ಕರ್ಮಗಳನ್ನು ಘಾತಿ ಕರ್ಮಗಳೆನ್ನುವರು. ಆಯು ಕರ್ಮ, ನಾಮ ಕರ್ಮ, ಗೋತ್ರ ಕರ್ಮ, ವೇದನೀಯ ಕರ್ಮ ಈ ನಾಲ್ಕು ಕರ್ಮಗಳು ಅಘಾತಿ ಕರ್ಮಗಳಾಗಿವೆ.

ಈ ಎಂಟು ಕರ್ಮಗಳ ಕಾರ್ಯವನ್ನು ವಿವರಿಸಲು ಶಾಸ್ತ್ರದಲ್ಲಿ ಎಂಟು ನಿದರ್ಶನಗಳನ್ನು ಕೊಟ್ಟಿದ್ದಾರೆ. ಜ್ಞಾನಾವರಣೀಯ ಕರ್ಮವು ಬಟ್ಟೆಯ ಪಟ್ಟಿಯಂತೆ. ಹೇಗೆ ಕಣ್ಣಿಗೆ ಕಟ್ಟಿರುವ ಬಟ್ಟೆಯ ಪಟ್ಟಿಯು ದೃಷ್ಟಿಗೆ ಅಡ್ಡಿ ಮಾಡುತ್ತದೆಯೋ, ಅದೇ ರೀತಿ ಜ್ಞಾನಾವರಣೀಯ ಕರ್ಮವು ಆತ್ಮನ ನಿಜವಾದ ಜ್ಞಾನವನ್ನು ಪ್ರಕಟಗೊಳ್ಳಲು ಬಿಡುವುದಿಲ್ಲ. ದರ್ಶನಾವರಣೀಯ ಕರ್ಮವು ದ್ವಾರಪಾಲಕನಂತೆ. ಹೇಗೆ ದ್ವಾರಪಾಲಕನ ಅನುಮತಿಯಿಲ್ಲದೆ ಯಾವುದೇ ಮನೆ, ಕಛೇರಿಯನ್ನು ಪ್ರವೇಶ ಮಾಡಲಾಗುವುದಿಲ್ಲವೋ, ಹಾಗೆಯೇ ದರ್ಶನಾವರಣೀಯ ಕರ್ಮವು ಆತ್ಮನು ಅನಂತ ದರ್ಶನ(ನೋಟ) ಮಾಡುವುದನ್ನು ತಡೆಯುತ್ತದೆ.

ವೇದನೀಯಕರ್ಮವು ಹರಿತವಾದ ಕತ್ತಿಯ ಮೇಲಿನ ಜೇನುತುಪ್ಪದ ಸವಿಯಂತಿರುತ್ತದೆ, ಅದು ಒಂದೇ ಕಾಲದಲ್ಲಿ ಸುಖ ಕೊಡುವಂತಿರುತ್ತದೆ, ಆದರೆ ಅದರ ಪರಿಣಾಮವು ದುಃಖಕರವಾಗಿರುತ್ತದೆ. ಮೋಹನೀಯ ಕರ್ಮವು ಮದ್ಯದಂತೆ. ಯಾವ ರೀತಿ ಮದ್ಯದ ನಶೆಯಲ್ಲಿ ವ್ಯಕ್ತಿಗೆ ತನ್ನ ಒಳಿತು ಮತ್ತು ಕೆಡುಕಿನ ವಿಚಾರವು ಗೊತ್ತಿರುವುದಿಲ್ಲವೋ ಹಾಗೂ ಯಾವುದನ್ನೂ ವಿಚಾರಿಸದೆ ಆಚರಣೆಯನ್ನೂ ಮಾಡುತ್ತಾ ಇರುತ್ತಾನೋ, ಅದೇ ರೀತಿ ಮೋಹನೀಯ ಕರ್ಮವೂ ಆತ್ಮನನ್ನು ವಿವೇಕ ಹೀನನ್ನಾಗಿ ಮಾಡಿ ಅವನ ಆಚಾರ, ವಿಚಾರವನ್ನು ವಿಕಾರವಾಗುವಂತೆ ಮಾಡುತ್ತದೆ.

ಆಯುಕರ್ಮವು ಗೂಟದಂತಿರುತ್ತದೆ.ಯಾವ ರೀತಿ ಗೂಟದಲ್ಲಿ ಕಟ್ಟಿದ ಪಶುವು ಅದರ ಸುತ್ತಲೂ ತಿರುಗುತ್ತಿರುತ್ತದೆಯೋ, ಅದೇ ರೀತಿ ಆಯುಕರ್ಮದ ಬಂಧನದಲ್ಲಿ ಆತ್ಮನು ಬೇರೆ ಬೇರೆ ಭವಗಳಲ್ಲಿ ಸಿಲುಕುತ್ತಾನೆ. ನಾಮಕರ್ಮವು ಚಿತ್ರಕಾರನಿದ್ದಂತೆ. ಹೇಗೆ ಚಿತ್ರಕಾರನು ಚಿಕ್ಕ–ದೊಡ್ಡ, ಒಳ್ಳೆಯ–ಕೆಟ್ಟ ಹೀಗೆ ವಿಭಿನ್ನ ರೀತಿಯ ಅನೇಕ ಪ್ರಕಾರದ ಚಿತ್ರಗಳ ರಚನೆಯನ್ನು ಮಾಡುತ್ತಾನೋ, ಅದೇ ಪ್ರಕಾರದಲ್ಲಿ ನಾಮಕರ್ಮವು ಜೀವನಿಗೆ ಚಿತ್ರ–ವಿಚಿತ್ರವಾದ ವಿಭಿನ್ನವಾದ ಶರೀರವನ್ನು ನಿರ್ಮಾಣ ಮಾಡುತ್ತದೆ.

ಗೋತ್ರ ಕರ್ಮವು ಕುಂಬಾರನಂತೆ ಕೆಲಸ ಮಾಡುತ್ತದೆ. ಯಾವ ಪ್ರಕಾರ ಕುಂಬಾರನು ಚಿಕ್ಕ ದೊಡ್ಡ ಪಾತ್ರೆಗಳನ್ನು ತಯಾರು ಮಾಡುತ್ತಾನೋ, ಅದೇ ರೀತಿ ಗೋತ್ರಕರ್ಮವು ಆತ್ಮನನ್ನು ಉಚ್ಚ ಅಥವಾ ನೀಚಗೋತ್ರದಲ್ಲಿ ಹುಟ್ಟುವಂತೆ

ಮಾಡುತ್ತದೆ. ಅಂತರಾಯಕರ್ಮವು ಭಂಡಾರಿಯ ಹಾಗೆ ಕಾರ್ಯ ಮಾಡುತ್ತದೆ. ಹೇಗೆ ಭಂಡಾರಿಯ ಅನುಮತಿಯಿಲ್ಲದೆ ರಾಜನ ಭಂಡಾರದಿಂದ ಹಣವನ್ನು, ಸಂಪತ್ತನ್ನೋ ತಗೆಯಲಾಗುವುದಿಲ್ಲವೋ, ಅದೇ ರೀತಿಯಲ್ಲಿ ಅಂತರಾಯಕರ್ಮವು ಆತ್ಮನ ಅನಂತ ಶಕ್ತಿಗೆ ಅಡ್ಡಿಯಾಗುತ್ತದೆ.

ಕನ್ನಡ ಜೈನ ಆಗಮಿಕ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಜೈನ ಧರ್ಮದ ಕರ್ಮಸಿದ್ಧಾಂತದ ತಳಹದಿಯ ಮೇಲೆಯೆ ರಚಿತವಾದುದು ಕಂಡುಬರುತ್ತದೆ. ಪಂಪನ ಆದಿಪುರಾಣ, ಜನ್ನನ ಯಶೋಧರನ ಚರಿತೆ, ಶಿವಕೋಟ್ಯಾಚಾರ್ಯರ ವಡ್ಡಾರಾಧನೆ, ಚಾವುಂಡರಾಯನ ಚಾವುಂಡರಾಯ ಪುರಾಣ, ನಯಸೇನನ ಧರ್ಮಾಮೃತ ಇನ್ನಿತರ ಕಾವ್ಯ, ಗದ್ಯ ಗ್ರಂಥಗಳನ್ನು ಅಧ್ಯಯನ ನಡೆಸಿದಾಗ ಅಲ್ಲಿ ಬರುವ ಪಾತ್ರಗಳ ಬದುಕು, ಸನ್ನಿವೇಶಗಳು ಕರ್ಮಸಿದ್ಧಾಂತವನ್ನು ಸ್ಪಷ್ಟಪಡಿಸುತ್ತದೆ. ಈ ಕಾರಣದಿಂದ ಕನ್ನಡ ಜೈನ ಆಗಮಿಕ ಕಾವ್ಯ, ಪುರಾಣ, ಗದ್ಯಗಳ ಅಧ್ಯಯನದ ಸಂದರ್ಭದಲ್ಲಿ ಜೈನಧರ್ಮದ ಕರ್ಮಸಿದ್ಧಾಂತದ ಜ್ಞಾನವಿದ್ದರೆ ಮಾತ್ರ ಅಧ್ಯಯನ ಪರಿಪಕ್ವವಾಗಲು ಸಾಧ್ಯ.

ಪರಾಮರ್ಶನ ಗ್ರಂಥಗಳು

1. ಆಚಾರ್ಯ ಶ್ರೀ ನರೇಂದ್ರಸೇನ, 1985, ಸಿದ್ಧಾಂತಸಾರ ಸಂಗ್ರಹ, ಸ್ವಸ್ತಿಕ್ ಪ್ರಿಂಟರ್ಸ್ ಬಸವನಗುಡಿ ಬೆಂಗಳೂರು.
2. ಐಲಕ 105 ಮುನಿಸಾಗರರು(ಸಂಪಾದಕರು), 2000, ಶ್ರೀ ಸಮಂತ ಭದ್ರಾಚಾರ್ಯ ವಿರಚಿತ ಅನ್ವಯಾರ್ಥ ತಾತ್ಪರ್ಯ ವೃತ್ತಿ ಕಥೆಗಳ ಸಹಿತ ಸಮ್ಯಕ್ ತಿಳಿ ಮುಕ್ತಿದಾರಿ ಹಿಡಿ, ಪ್ರಕಾಶಕರು ಯೋಗೇಶ ಮಕವಾನಾ ಮುಂಬಯಿ.
3. ಜೋಡಟ್ಟಿ ಟಿ.ಆರ್.(ಅನುವಾದ), 2014, ಕರ್ಮ ವ್ಯವಸ್ಥೆ, ಮನೋಹರ ಮುದ್ರಣಾಲಯ, ಧಾರವಾಡ–1.
4. ಧರಣೇಂದ್ರಪ್ಪ ಹಣಮಂತಪ್ಪ ಗುಗ್ಗರಿ(ಸಂಪಾದಕರು), 1984, ಜೈನ ಸಿದ್ಧಾಂತ ಸಾರ ಸಂಗ್ರಹ(ಕೈಪಿಡಿ), ಸನ್ಮತಿ ಪ್ರಕಾಶನ, ಮುಂಬಯಿ.
5. ಪದ್ಮನಾಭ ಶರ್ಮ ಡಿ.(ಅನುವಾದಕರು), 1976, ಶ್ರೀಮತ್ ಕುಂಕುಂದಾಚಾರ್ಯವಿರಚಿತ ರಯಣಸಾರ, ಪ್ರಕಾಶಕರು ರತ್ನಮ್ಮ ಹೆಗ್ಗಡೆ, ಧರ್ಮಸ್ಥಳ.
6. ಪಾಟೀಲ ಎಂ.ಬಿ.(ಅನುವಾದಕರು), 1989, ಶ್ರೀಮತ್ ಕುಂಕುಂದಾಚಾರ್ಯವಿರಚಿತ ನಿಯಮಸಾರ, ಪ್ರಕಾಶಕರು, ಶ್ರೀ ದಿಗಂಬರ ಜೈನ ಸ್ವಾಧ್ಯಾಯ ಮಂಡಲ ಟ್ರಸ್ಟ್ ಬೆಂಗಳೂರು.
7. ಪಾಟೀಲ ಎಂ.ಬಿ.(ಅನುವಾದಕರು), 1983, ಶ್ರೀಮತ್ ಕುಂದಕುಂದಾಚಾರ್ಯ ವಿರಚಿತ ಸಮಯಸಾರ, ಪ್ರಕಾಶಕರು, ದಿಗಂಬರ ಜೈನ ಟ್ರಸ್ಟ್–ಅಧ್ಯಾತ್ಮ ಪ್ರಕಾಶನ ಸಂಸ್ಥೆ, ಬೆಂಗಳೂರು.
8. ಪುಟ್ಟಸ್ವಾಮಿ ಡಿ.(ಸಂಪಾದನೆ), 1965, ಜೈನತತ್ವಸಾರಸಂಗ್ರಹ, ವಿವೇಕಾಭ್ಯುದಯ ಕಾರ್ಯಾಲಯ ವೀರಭವನ, ಮಂಗಳೂರು.

❖❖❖

ಶಾಂತಿನಾಥ ದೇಸಾಯಿ ಕಥೆಗಳಲ್ಲಿನ ಸ್ತ್ರೀ ಪಾತ್ರಗಳ ಸಂಘರ್ಷದ ನೆಲೆಗಳು

ಶ್ರೀಮತಿ ಲಕ್ಷ್ಮೀ ಎ.ಎಂ.
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

ಡಾ. ಅಜ್ಜಪ್ಪ ಜಿ.ಇ.
ಸಹ ಪ್ರಾಧ್ಯಾಪಕರು
ಸ.ಪ್ರ.ದ. ಕಾಲೇಜು, ದಾವಣಗೆರೆ

ಶಾಂತಿನಾಥ ದೇಸಾಯಿಯವರು ನವ್ಯ ಕಾಲಘಟ್ಟದ ಪ್ರಮುಖ ಲೇಖಕರಲ್ಲಿ ಒಬ್ಬರು. ಇವರು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲಘಟ್ಟದ ಎರಡು ಸಂದರ್ಭಗಳಲ್ಲಿಯೂ ಸಾಹಿತ್ಯ ಕೃಷಿ ನಡೆಸಿದವರು. ಸ್ವಾತಂತ್ರ್ಯ ನಂತರದ ಸಾಮಾಜಿಕ, ರಾಜಕೀಯ ಬದಲಾವಣೆಯ ಸಂದರ್ಭದಲ್ಲಿ ಬದುಕಿನ ಕ್ರಮದಲ್ಲಿ ಹುಟ್ಟಿಕೊಂಡಂತಹ ಒಂದು ರೀತಿಯ ಅಸ್ತವ್ಯಸ್ತತೆಯು, ಅವ್ಯವಸ್ಥೆಯು ನವ್ಯ ಸಾಹಿತ್ಯದ ಬೆಳವಣಿಗೆಗೆ ಕ್ಷಿಪ್ರಗತಿಯನ್ನು ಒದಗಿಸಿತು ಎನ್ನಬಹುದು. ಆಗತಾನೇ ಹೊಸದಾಗಿ ರೂಪುಗೊಳ್ಳುತ್ತಿದ್ದ ಸಂವೇದನೆಗಳು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳ್ಳಲು ತವಕಿಸುತ್ತಿದ್ದವು. ಸಹಜವಾಗಿಯೇ ನವ್ಯಸಾಹಿತ್ಯದಲ್ಲಿ ಸಾಮಾಜಿಕ ಕಾಳಜಿಗಿಂತ ಮುಖ್ಯವಾಗಿ ವ್ಯಕ್ತಿಯ ವೈಯಕ್ತಿಕತೆ, ಅಂತರ್ಮುಖಿತೆ, ವಾಸ್ತವತೆ, ಸಾಂಕೇತಿಕತೆ, ಮೊದಲಾದವುಗಳು ಸ್ಥಾನ ಪಡೆದವು. ದೇಸಾಯಿಯವರೇ ಹೇಳಿರುವಂತೆ "ನವ್ಯ ಸಾಹಿತ್ಯದ ಸಾಧನೆ ಕಾದಂಬರಿಗಿಂತ ಸಣ್ಣಕಥೆಯಲ್ಲಿಯೇ ಹೆಚ್ಚು. ಕಾರಣ ನವ್ಯ ಕಾದಂಬರಿ ಮಹತ್ವಾಕಾಂಕ್ಷೆಯನ್ನು ಹೊತ್ತುಕೊಂಡೇ ಆರಂಭವಾದರೂ, ನವ್ಯ ಮನೋಧರ್ಮದಲ್ಲಿನ ತಕ್ಕುದಾದ ಭೂಮಿಕೆ ದೊರೆತದ್ದು ಸಣ್ಣಕತೆಯಲ್ಲಿಯೇ."

ನವ್ಯ ಸಾಹಿತ್ಯದ ಮೇಲೆ ಪಾಶ್ಚಿಮಾತ್ಯ ಸಾಹಿತ್ಯದ ಪ್ರಭಾವ ಹೆಚ್ಚಿದ್ದು ಅದನ್ನು ಸ್ವತಃ ದೇಸಾಯಿಯವರು ಒಪ್ಪಿಕೊಂಡಿದ್ದಾರೆ. ದೇಸಾಯಿಯವರ ಸಾಹಿತ್ಯದ ಮೇಲೆ ಮುಖ್ಯವಾಗಿ ಮಾರ್ಕ್ಸ್ ವಿಚಾರಧಾರೆಗಳು, ನವ ಮಾನವತಾವಾದ, ಅಸ್ತಿತ್ವವಾದ, ಆಧುನಿಕತೆ ಇವೆಲ್ಲವುಗಳ ಪ್ರಭಾವ ಬೀರಿರುವುದನ್ನು ಗುರುತಿಸಬಹುದು. ಇವರ ಕಥೆಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳನ್ನು ಧಿಕ್ಕರಿಸುವ ಆಧುನಿಕ ದೃಷ್ಟಿಕೋನವನ್ನು ಗುರುತಿಸಬಹುದು. ಇವರ ಕಥೆಗಳಲ್ಲಿನ ವಸ್ತು ಪ್ರಮುಖವಾಗಿ ಕಾಮ, ಲೈಂಗಿಕತೆಯೇ ಕೇಂದ್ರ ಆಗಿದ್ದು ಬಹುತೇಕ ಅವರ ಎಲ್ಲಾ ಕಥೆಗಳಲ್ಲಿಯೂ ಗುರುತಿಸಬಹುದಾಗಿದೆ. ದೇಸಾಯಿವರ ಕಥೆಗಳಲ್ಲಿ ವಿಭಿನ್ನ ಸ್ತ್ರೀ ಪಾತ್ರಗಳು ಬಂದಿದ್ದು ಆಧುನಿಕ ಮನೋಭಾವಗಳ ಪಡಿಯಚ್ಚು ಪಾತ್ರಗಳಾಗಿ ಕಂಡುಬರುತ್ತವೆ. ಅಧ್ಯಯನದ ಅನುಕೂಲಕ್ಕಾಗಿ ಇಲ್ಲಿ ಶಾಂತಿನಾಥ ದೇಸಾಯಿಯವರ ಕ್ಷಿತಿಜ, ಬಿಡುಗಡೆ, ವಿಯೋಗ–ಕಥೆಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ.

'ಕ್ಷಿತಿಜ' ಶಾಂತಿನಾಥ ದೇಸಾಯಿಯವರ ಯಶಸ್ವಿ ಕಥೆಗಳಲ್ಲಿ ಒಂದು. ಪಶ್ಚಿಮ ಮತ್ತು ಪೂರ್ವದ ದೇಶಗಳ ವಿಭಿನ್ನ ಸಂಸ್ಕೃತಿಗಳ ಮುಖಾಮುಖಿಯೊಂದಿಗೆ 'ಮಂದಾಕಿನಿ'ಯ ವ್ಯಕ್ತಿತ್ವದಲ್ಲಿ ಉಂಟಾಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ದೇಸಾಯಿಯವರು ಚಿತ್ರಿಸಿರುತ್ತಾರೆ. ಮಧ್ಯಮ ಕುಟುಂಬದಿಂದ ಬಂದ ಮಂದಾಕಿನಿಗೆ ತನ್ನ ಸಮಸ್ಯೆಗಳ

ಅರಿವು ಇದೆ. ತನ್ನ ಮೇಲಿನ ಕೌಟುಂಬಿಕ ಜವಾಬ್ದಾರಿಗಳ ಹೊರೆಯಿಂದ ತನ್ನ ವೈಯಕ್ತಿಕ ಸುಖದ ಬದುಕನ್ನು ತ್ಯಾಗ ಮಾಡುವ ನಿರ್ಧಾರ ತೆಗೆದುಕೊಂಡವಳು. ಆಕೆಯ ಹಡಗಿನ ಲಂಡನ್ ಪ್ರಯಾಣದಲ್ಲಿ ಆಕೆಯ ಪರಿಚಯಕ್ಕೆ ಬರುವ ಹಲವು ವ್ಯಕ್ತಿಗಳು ಡಾ. ಮುಖರ್ಜಿ, ಹ್ಯಾರಿ ಮೆಕಾರ್ಥಿ, ಪಾಲ್‌ಲೆಗ್ವಿ" ಮಂದಾಕಿನಿಗೆ ತನ್ನ ವ್ಯಕ್ತಿತ್ವದ ನಗ್ನಸತ್ಯವನ್ನು ಅರಿವು ಮಾಡಿಕೊಡುತ್ತಾರೆ.

"ಮಂದಾಕಿನಿಯ ವಯಸ್ಸು 28–29 ಆಗಿದ್ದರೂ ಸಹ 25 ಎಂದೇ ಹೇಳುವ ಮಂದಾಕಿನಿಗೆ ತಾನು ನಿಜಕ್ಕೂ ಮುದುಕಿಯಾಗಿದ್ದಾಳೆಂದೇ ಆಕೆಯ ಭಾವನೆ. ತನ್ನ ಇಡೀ ಜೀವನ ಕಲಿಯುವುದರಲ್ಲಿ, ನಂತರ ನೌಕರಿಯಲ್ಲಿ, ತಾಯಿಯನ್ನೂ, ತಮ್ಮಂದಿರನ್ನು ನೋಡಿಕೊಳ್ಳುವುದರಲ್ಲಿ, ಎಲ್ಲ ವೆಚ್ಚವಾಗಿ ಹೋಯಿತಷ್ಟೇ! ಬಿ.ಎ ಆದ ಕೂಡಲೇ ಪ್ರಾ. ಕರಂದಿಕರರ 'ಮಾಗಣಿ' ಬಂದಿತ್ತು. ಅನಂತರ ಅವಳ ಸಹೋದ್ಯೋಗಿ ದೇಶಪಾಂಡೆ ಮೇಲಿಂದ ಮೇಲೆ ಮನೆಗೆ ಬಂದು ಪ್ರೀತಿ ವ್ಯಕ್ತಮಾಡಿ ಅವಳಿಂದ ಇಲ್ಲವೆನ್ನಿಸಿಕೊಂಡಿದ್ದ. ಅವಳ ಉದ್ಯೋಗಪ್ರಿಯತೆ, ಶಾಲಾಮಕ್ಕಳ ಮೇಲಿನ ಮಮತೆ, ಶಾಲೆಯ ಬಗ್ಗೆ ಭಕ್ತಿ ಎಲ್ಲ ನೋಡಿ ಮಿಶನರಿಗಳು ಇವಳಿಗೆ ಸ್ಕಾಲರ್ಶಿಪ್ಪಿನ ವ್ಯವಸ್ಥೆ ಮಾಡಿ ಬಿಜಲ್‌ಹರ್ಟ್ಸ್‌ಗೆ ಕಳುಹಿಸುವ ಯೋಜನೆ ಮಾಡಿದರು – ಮೂರು ವರ್ಷದ ಬಾಂಡು ಬರೆಯಿಸಿಕೊಂಡು. ಇನ್ನೇನು ಸರ್ವಿಸಿಗೆ ಲಗ್ನವಾದಂತೆ, ತಪ್ಪೇನಾಯಿತು? ಎಲ್ಲರಿಗೂ ಹೀಗೆ ಸ್ಕಾಲರ್‌ಶಿಪ್ಪಿನ ಮೇಲೆ ಇಂಗ್ಲೆಂಡಿಗೆ ಹೋಗಲು ಸಿಗುವುದೇ? ಅವಳಿಗೀಗ ಒಂದೇ ಯೋಚನೆ ಇಂಗ್ಲೆಂಡಿಗೆ ಹೋಗಬೇಕು, ಅಲ್ಲಿ ಟೀ.ಡಿ (Diploma in Teaching) ಯಲ್ಲಿ ಫಸ್ಟ್ ಕ್ಲಾಸ್ ದೊರಕಿಸಿ ಹೆಸರು ಗಳಿಸಿ ಮರಳಬೇಕು. ಸದ್ಯದ ಸ್ಕೂಲಿನಲ್ಲಿ 3–4 ವರ್ಷ ಕೆಲಸ ಮಾಡಿ ನಂತರ ಯಾವುದಾದರೊಂದು ಹೈಸ್ಕೂಲಿನ ಪ್ರಿನ್ಸಿಪಾಲಳಾಗಬೇಕು. ಒಳ್ಳೆಯ ಆದರ್ಶ ಪ್ರಿನ್ಸಿಪಾಲಳಾದರೆ ಅದಕ್ಕಿಂತ ಹೆಚ್ಚೇನು ಬೇಕು ಜೀವನದಲ್ಲಿ? ಎಷ್ಟೋ ಮಿಶಿನರಿ ಹೆಂಗಸರು ಲಗ್ನವಾದೆ ಇರುವುದಿಲ್ಲವೇ? ಅವರ ಸ್ಕೂಲಿನ ಮಿಸ್ ಟೇಲರ್ ಇಲ್ಲವೇ?" ಈ ಮಾತುಗಳು ಒಮ್ಮೆಲೇ ಮಂದಾಕಿನಿಯ ಬದುಕಿನ ಮೌಲ್ಯಗಳನ್ನು, ಗುರಿಗಳನ್ನು ನಿರ್ದೇಶಿಸುವುದರ ಜೊತೆಗೆ ಆಕೆಯ ಬಗ್ಗೆ ಸಹಾನೂಭೂತಿಯನ್ನು ನಮ್ಮಲ್ಲಿ ಮೂಡಿಸುತ್ತಾ, ಏಕಕಾಲಕ್ಕೆ ಮದುವೆ, ಲೈಂಗಿಕತೆ ಇವುಗಳ ಬಗ್ಗೆ ಆಕೆಯ ಮನಸ್ಥಿತಿಯನ್ನು ಅನಾವರಣ ಮಾಡುತ್ತದೆ.

ಕಥೆಯ ಆರಂಭದಲ್ಲಿನ "ಬಿ ಡೆಕ್ಕಿನ ಮೇಲೆ ನಿಂತು ಮಂದಾಕಿನಿ ಸಮುದ್ರದ ತೆರೆಗಳನ್ನು, ಇದ್ದಲ್ಲಿಯೇ ಇದ್ದಂತೆ ಕಾಣುವ ಕ್ಷಿತಿಜವನ್ನು ಎಷ್ಟೋ ಹೊತ್ತು ನೋಡುತ್ತ ನಿಂತಿರುವ ಮಂದಾಕಿನಿಗೆ 'ಕ್ಷಿತಿಜ'ವು ಇದ್ದಲ್ಲಿಯೇ ಇರುವ ಅಥವಾ ಇನ್ನೇನು ಸಿಕ್ಕೀತೂ ಎನ್ನುವಷ್ಟರಲ್ಲಿಯೇ ಮತ್ತೆ ದೂರ ಸರಿಯುವುದರ ಸಂಕೇತವಾಗಿ ಬಂದರೆ, ದಡಕ್ಕೆ ಬಂದು ಅಪ್ಪಳಿಸುತ್ತಿರುವ ಸಮುದ್ರದ ತೆರೆಗಳು ಚಲನೆಯ ಸಂಕೇತವಾಗಿ"– ಬಂದಿದೆ. ಕುಟುಂಬದ ಜವಾಬ್ದಾರಿಯನ್ನು ಹೆಗಲೇರಿಸಿಕೊಂಡ ಮಂದಾಕಿನಿಯು ತನ್ನ ವೈಯಕ್ತಿಕ ಸುಖವನ್ನು ತ್ಯಜಿಸಿರುವುದು ಆಕೆಯ 'ಸ್ಥಿತಿ'ಯ ಸಂಕೇತವಾದರೆ, ಸ್ಕಾಲರ್‌ಶಿಪ್ ಪಡೆದು ಉನ್ನತಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಹಡಗು ಪ್ರಯಾಣ ಬೆಳೆಸುವುದು 'ಚಲನೆಯ' ಸೂಚಕವಾಗಿ ಗುರುತಿಸಬಹುದು. ಆದಾಗ್ಯೂ ಲಂಡನ್ ಪ್ರಯಾಣದಲ್ಲಿ ತನಗೆ ಮುಖಾಮುಖಿಯಾಗುವ ಪಾಶ್ಚಾತ್ಯ ಸಂಸ್ಕೃತಿಗೆ ಹೊಂದಿಕೊಳ್ಳಲಾರದೆ ಆಘಾತಕ್ಕೊಳಗಾಗುವುದನ್ನು ಗುರುತಿಸಬಹುದು. ತನ್ನಿಚ್ಛೆಯಂತೆ ಬದುಕುವ

ಆಸೆಯಿದ್ದರೂ ಬದುಕಲಾರದೆ ಸಂಸಾರದ ತಾಪತ್ರಯಗಳೆ ಮುಂದಾಗಿ ಅವುಗಳಿಗಾಗಿ ತನ್ನ ಆದರ್ಶಗಳನ್ನು, ಸುಖಗಳನ್ನು ತ್ಯಾಗ ಮಾಡುವ 'ಭಾರತೀಯ ಸಮಾಜದ ಆದರ್ಶ ಮಹಿಳೆ'ಯನ್ನು ಮಂದಾಕಿನಿ ಪಾತ್ರ ಪ್ರತಿಧ್ವನಿಸುತ್ತದೆ. ಮಂದಾಕಿನಿ ತನ್ನ ಭೂತವನ್ನು ಸಂಪೂರ್ಣವಾಗಿ ತ್ಯಜಿಸಲಿಕ್ಕಾಗದೇ, ಪ್ರಸ್ತುತ ವರ್ತಮಾನದ ಬದುಕನ್ನು ಸುಖಿಸಲಾಗದೇ ಒಂದು ರೀತಿಯ ಮಾನಸಿಕ ತೊಳಲಾಟಕ್ಕೆ ಒಳಗಾಗುತ್ತಾಳೆ.

ಎರಡು ದಿನಗಳ ಪ್ರಯಾಣದಲ್ಲಿ ಮಂದಾಕಿನಿಯನ್ನು ಸೂಕ್ಷ್ಮವಾಗಿ ಗಮನಿಸಿರುವ ಮೆಕಾರ್ಥಿಯು ಮಂದಾಕಿನಿಯನ್ನು ಕುರಿತು ಹೇಳುವ "ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವನ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣಿಸುತ್ತದೆ. ಸಂಕೋಚ, ನಾಚಿಕೆ, ಅಧೈರ್ಯ, ಮೈಚಳಿ ಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೇ ಇಲ್ಲವೇನೋ ಇವರಿಗೆ" ಮೂಲಕ ಆಕೆಯನ್ನು ಹೊಸ ಬದುಕಿನ ಕ್ರಮಕ್ಕೆ ಒಡ್ಡಲು ಪ್ರಯತ್ನಿಸಿದರೂ, ಅದು ಯಶಸ್ವಿಯಾಗುವುದಿಲ್ಲ. "ನೋಡಿ ನಾನು ಇಂಡಿಯನ್ ಹೆಣ್ಣು, ಹಿಂದೂ ಹೆಂಗಸು. ನಾವು ಈಗ ತಾನೇ ಅಡಿಗೆ ಮನೆಯಿಂದ ಸ್ವಲ್ಪ ಹೊರಗೆ ಬಂದಿದ್ದೇವೆ. ಇದೆಲ್ಲ ನಮಗೆ ಒಂದು ಹೊಸ ವಿಶ್ವ" – ಎಂಬ ಮಾತುಗಳಲ್ಲಿ ಗ್ರಹಿಸಬಹುದು.

ಮಂದಾಕಿನಿಯ ಬದುಕು ನಿಜವಾಗಿ ಅರಳಲು ಪ್ರಾರಂಭವಾಗುವುದು ಪ್ಯಾರಿಸ್‌ನ 'ಪಾಲ್‌ಲೆಗ್ವಿ'ಯ ಪರಿಚಯವಾದ ನಂತರವೇ. ಭಾರತದ ಬಗ್ಗೆ ಲೆಗ್ವಿಗಿರುವ ಅಭಿಮಾನ, ಅವನ ಪ್ರೀತಿಯ ಮಾತುಗಳು, 'ಗಾಲಾ ರಾತ್ರಿ'ಯ ದಿನ ಲೆಗ್ವಿ ಮಾಡಿದ ಕಾಳಜಿ, ಇವೆಲ್ಲವೂ ನಿಧಾನವಾಗಿ ಮಂದಾಕಿನಿಯನ್ನು ಲೆಗ್ವಿಯ ಪ್ರೀತಿಯತ್ತ ವಾಲಿಸುತ್ತವೆ. ಆದಾಗ್ಯೂ ಆ ಹೊಸ ಅನುಭವಕ್ಕೆ ತನ್ನನ್ನು ಮುಕ್ತವಾಗಿ ತೆರೆದುಕೊಳ್ಳುವುದು ಮಂದಾಕಿನಿಗೆ ಸಾಧ್ಯವಾಗುವುದೇ ಇಲ್ಲ.

ಮಧ್ಯಮ ವರ್ಗದ ಹೆಣ್ಣು ಮಗಳಾದ ಮಂದಾಕಿನಿ ಮೆಕಾರ್ಥಿ ಹೇಳುವ ಜೀವನವನ್ನು ಉಪಭೋಗಿಸುವುದಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಾಳೆ. ಆದಾಗ್ಯೂ ಆತನ ಮಾತುಗಳು ಆಕೆಯ ಮನಸ್ಸಿನ ಮೇಲೆ ಗಾಢ ಪ್ರಭಾವ ಬೀರುವುದನ್ನು ನಿರಾಕರಿಸಲಾಗದು. ಸಾವಕಾಶವಾಗಿ ಆಕೆಯ, ವ್ಯಕ್ತಿತ್ವ ಪರಿವರ್ತನೆಗೊಳ್ಳಲು ಲೆಗ್ವಿಯ ಪರಿಚಯದ ನಂತರ ಆರಂಭವಾಗುತ್ತದೆ. ಸದಾ ಅವನ ಸಾಮಿಪ್ಯದಲ್ಲೇ ಇರಲು ಆಕೆಯ ಮನಸ್ಸು ಬಯಸುತ್ತದೆ. ಲೆಗ್ವಿಯ ಸಾಮಿಪ್ಯದಲ್ಲಿ ಎಲ್ಲ ಕಟ್ಟಳೆಗಳನ್ನು ಸಹ ಮೀರಲು ಬಯಸುತ್ತಾಳೆ. ಲೆಗ್ವಿ ಇಲ್ಲದ ಇಂಗ್ಲೆಂಡ್ ಆಕೆಗೆ ಭೂತದಂತೆ ಕಾಣಿಸುತ್ತದೆ. ಹಾಗಾಗಿ ಈ ಪರಿಸ್ಥಿತಿಯಲ್ಲಿ ತನ್ನ ಬದುಕಿನ ಆಯ್ಕೆಗಳನ್ನು ತಾನೇ ಮಾಡಿಕೊಳ್ಳಬೇಕಾಗಿದೆ. ಈ ಹಿಂದೆ ತಾನು ಜೋತು ಬಿದ್ದ ಮೌಲ್ಯಗಳನ್ನು ಬದಲಾಯಿಸಿಕೊಳ್ಳುವ ಅನಿವಾರ್ಯ ಮಂದಾಕಿನಿಗೊದಗಿದೆ. "ಆಕೆಯಲ್ಲಿ ಅರಿವಿನ ಸ್ಫೋಟವಾಗಿದೆ. ಅವಳು ಸ್ವತಂತ್ರಳಾಗಿದ್ದಾಳೆ."

ಶಾಂತಿನಾಥ ದೇಸಾಯಿಯವರ ಬಹುತೇಕ ಕಥೆಗಳಲ್ಲಿ ಬರುವ ಸ್ತ್ರೀ ಪಾತ್ರಗಳು ಗಟ್ಟಿತನ ಹೊಂದಿವೆ. ಅವುಗಳಲ್ಲಿ 'ಬಿಡುಗಡೆ' ಕಥೆಯಲ್ಲಿನ 'ಮೀನಾ'ಳ ಪಾತ್ರವೂ ಒಂದು. ಪುರುಷ ಪ್ರಧಾನ ಭಾರತೀಯ ಸಮಾಜದ ಸಂದರ್ಭದಲ್ಲಿ ಪೂರ್ವನಿರ್ಧಾರಿತ ಮೌಲ್ಯಗಳ ಚೌಕಟ್ಟನ್ನು ಮೀರಿ ತನ್ನ ವ್ಯಕ್ತಿತ್ವದ ಅವಶ್ಯಕತೆಗಳನ್ನು ಗುರುತಿಸಿಕೊಳ್ಳುವುದರ ಮೂಲಕ ಇದುವರೆಗೂ ಕಳೆದುಕೊಂಡಿದ್ದ ತನ್ನತನವನ್ನು ಮರಳಿ ತನ್ನದಾಗಿಸಿಕೊಳ್ಳಲು

ಪ್ರಯತ್ನಿಸುತ್ತಾಳೆ. ಕಥೆಯ ಆರಂಭದಲ್ಲಿಯೇ "ನಮ್ಮೀರ್ವರ ಜೀವನ ಒಂದು ಒಣ ಉಸುಕಿನ ಅರಣ್ಯದಲ್ಲಿ ಬತ್ತಿ ಹೋದಂತಿತ್ತು. ಜೀವನದ ಬಿಗುವು, ಬಿರುಸು ತಾನಾಗಿಯೇ ಮಾಯವಾಗಿ ಒಂದು ರೀತಿಯ ಸಡಿಲತೆ ಬಂದುಬಿಟ್ಟಿತ್ತು. ಅವರಿಗೋ ಆಫೀಸಿದೆ, ಫಿರ್ತಿಯಿದೆ, ಗೆಳೆಯರಿದ್ದಾರೆ. ನನಗೆ ಮಾತ್ರ ಒಳಗೊಳಗೇ ನಾನು ಮುರುಟಿ ಹೋದಂತೆ, ಬೂದಿಯಾದಂತೆ, ಖಾಲಿಯಾದಂತೆ ಅನಿಸುತ್ತಿತ್ತು. ಮೀನಾಳ ಅನಿಸಿಕೆಯಲ್ಲಿ ಯಾವ ತರದ ಉತ್ಕಟತೆಯಿದ್ದಿಲ್ಲ, ಬಂಡಾಯವಿದ್ದಿಲ್ಲ, ದು:ಖವೂ ಇದ್ದಿಲ್ಲ."

'ಬಿಡುಗಡೆ'ಯಲ್ಲಿ–ಮೀನಾ, ಆಕೆಯ ಪತಿ, ಮೀನಾ ಪತಿಯ ಪ್ರೇಯಸಿ ಫರೀದಾ –ಇವರ ತ್ರಿಕೋನ ಕಥೆಯಾಗಿದೆ. ಕುಮುದಾ–ರಮೇಶರೆಂಬ ಇಬ್ಬರು ದೊಡ್ಡ ಮಕ್ಕಳನ್ನು ಹೊಂದಿರುವ ಮೀನಾ ಪತಿಯು ಮಹಿಳಾ ವಿದ್ಯಾಲಯದಲ್ಲಿ ಲೆಕ್ಚರರ್ ಆಗಿರುವ 'ಫರೀದಾ' ಎಂಬ ವಿಧವೆಯ ವ್ಯಾಮೋಹಕ್ಕೆ ಒಳಗಾಗಿ ವಿವಾಹಬಾಹ್ಯ ಸಂಬಂಧವನ್ನು ಹೊಂದುತ್ತಾನೆ. ಈ ವಿಚಾರ ಮೀನಾಳಿಗೂ ತಿಳಿದಿದ್ದರೂ ಇವರಿಬ್ಬರ ವಿವಾಹಬಾಹಿರ ಸಂಬಂಧದಲ್ಲಿ ಯಾವ ಆಸಕ್ತಿಯನ್ನು, ಬೇಸರವನ್ನು ತೋರಿಸುವುದಿಲ್ಲ. "ಒಂದು ರೀತಿಯಲ್ಲಿ ಇಷ್ಟು ವರ್ಷಗಳ ಕಾಲ ಸಂಸಾರದಲ್ಲಿ ಮುಳುಗಿ, ರಾಡಿಯಲ್ಲಿ ಸಿಕ್ಕ ಹುಳದಂತೆ, ತೊಡಗಿಸಿಕೊಂಡುಬಿಟ್ಟಿದ್ದೆ. ಹೊರಗಿನ ಜಗತ್ತೇ ನೋಡಿರಲಿಲ್ಲ, ನನ್ನನ್ನು ನಾನೇ ಕಂಡುಕೊಂಡಿರಲಿಲ್ಲ, ಬೇರು ಬಿಟ್ಟು ಮಣ್ಣಿನ ಸತ್ವ ಉಂಡಿರಲಿಲ್ಲ, ನೆಲದ ಆಳ ಕಂಡಿರಲಿಲ್ಲ"– ಎಂಬ ಆಕೆಯಲ್ಲಿ ಅಂತ:ಪ್ರಜ್ಞೆ ಸ್ಫೋಟಗೊಂಡು ಆಡುವ ಮಾತುಗಳಾಗಿವೆ. ಈ ಬಂಧನದಿಂದ ಬಿಡುಗಡೆ ಹೊಂದಲು ಹಂಬಲಿಸುತ್ತಿದ್ದಾಳೆ.

'ವಿಯೋಗ' ಶಾಂತಿನಾಥ ದೇಸಾಯಿಯವರ ಕೊನೆಯ ಕಥೆ. ಕಥೆಯಲ್ಲಿನ ಸಂಧ್ಯಾ ಮತ್ತು ಜಯಶ್ರೀ ಇಬ್ಬರೂ ಗೆಳತಿಯರು. ವಿವಾಹದ ನಂತರ ಜಯಶ್ರೀ ಮುಂಬೈನಲ್ಲಿ ನೆಲೆನಿಂತರೆ, ಸಂಧ್ಯಾ ಕಲ್ಕತ್ತೆಯಲ್ಲಿ. ಬಹಳ ವರ್ಷಗಳ ನಂತರ ಇಬ್ಬರ ಭೇಟಿ ಮುಂಬೈನಲ್ಲಿ ಆಗುತ್ತದೆ. ಜಯಶ್ರೀಯ ಸುಂದರ ಕುಟುಂಬಕ್ಕೆ ಮನಸೋತ ಸಂಧ್ಯಾ ಹಲವು ದಿನಗಳ ನಂತರ ತನ್ನ ಸ್ನೇಹಿತೆಗೆ ಬರೆದ ಪತ್ರದಲ್ಲಿ ಈ ಬಗ್ಗೆಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದು ಸಹಜವಾದರೂ, ಆ ಪತ್ರಕ್ಕೆ ಬಂದ ಪ್ರತ್ಯುತ್ತರ ಆಕೆಯಲ್ಲಿ ಆಶ್ಚರ್ಯವನ್ನು, ಗಾಬರಿಯನ್ನು ಉಂಟು ಮಾಡುವಂತಹದ್ದು. ಕಾರಣ ಜಯಶ್ರೀಯ ಗಂಡ ಸಲಿಂಗಕಾಮಿಯಾಗಿದ್ದು, ಹೆಂಡತಿಯಲ್ಲಿ ಯಾವುದೇ ಆಸಕ್ತಿಯನ್ನು ಹೊಂದಿರುವುದಿಲ್ಲ. ಕಥೆಯ ಕೊನೆಯಲ್ಲಿ ಜಯಶ್ರೀ ತನ್ನ ಕಲ್ಕತ್ತೆಯ ಸ್ನೇಹಿತೆ ಸಂಧ್ಯಾಳ ಸಹಾಯದಿಂದ ಹೊಸ ಬದುಕನ್ನು ಆರಂಭಿಸುವ ದೃಢ ನಿರ್ಧಾರದೊಂದಿಗೆ ಕತೆ ಮುಕ್ತಾಯವಾಗುತ್ತದೆ. ಜಯಶ್ರೀ ಪಾತ್ರವು ವೈವಾಹಿಕ ಜೀವನ ಸುಖವಾಗಿಲ್ಲದಿದ್ದರೂ ಅದನ್ನು ತ್ಯಜಿಸಿ ತನ್ನ ಮುಂದಿನ ಬದುಕಿನ ಆಯ್ಕೆಯನ್ನು ಸ್ವತಂತ್ರವಾಗಿ ತಾನೇ ತೆಗೆದುಕೊಳ್ಳುವ ಗಟ್ಟಿತನದ ಪಾತ್ರವಾಗಿ ಮೂಡಿಬಂದಿದೆ.

ಸಮಾರೋಪ

ಶಾಂತಿನಾಥ ದೇಸಾಯಿವರ ಕಥೆಗಳಲ್ಲಿನ ಸ್ತ್ರೀ ಪಾತ್ರಗಳು ಆಧುನಿಕ ದೃಷ್ಟಿಕೋನ ಉಳ್ಳವು ಆಗಿವೆ. ಇವು ವಿದ್ಯಾವಂತ, ಸುಶಿಕ್ಷಿತ, ಪ್ರಜ್ಞಾವಂತ, ಸ್ವಂತ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವಿರುವ ಪಾತ್ರಗಳಾಗಿ ಕಂಡುಬಂದಿವೆ. 'ಬಿಡುಗಡೆ'ಯ

ಮೀನಾ, 'ಕ್ಷಿತಿಜ'ದ ಮಂದಾಕಿನಿ, 'ವಿಯೋಗ'ಯ ಜಯಶ್ರೀ, ಮಂಜುಗಡ್ಡೆಯ 'ಕಲ್ಪಲತೆ', ಮೊದಲಾದವನ್ನು ಉದಾಹರಿಸಬಹುದು. ಪ್ರತಿ ಪಾತ್ರಗಳು ಆಧುನಿಕತೆ ಮತ್ತು ಸಂಪ್ರದಾಯ ನೆಲೆಯಲ್ಲಿ ಸಂಘರ್ಷಕ್ಕೆ ಒಡ್ಡಿಕೊಳ್ಳುತ್ತವೆ. ಇಲ್ಲಿನ ಸ್ತ್ರೀ ಪಾತ್ರಗಳು ಹಿಂದಿನ ಪರಂಪರಾಗತ ಮೌಲ್ಯಗಳನ್ನು ಧಿಕ್ಕರಿಸಿ, ತನ್ನ ಬದುಕಿನ ಆಯ್ಕೆಯನ್ನು ತಾನೇ ನಿರ್ಧಾರ ಮಾಡಿಕೊಳ್ಳುವ ದಿಟ್ಟ ಹೆಣ್ಣು ಚಿತ್ರಿತವಾಗಿರುವುದನ್ನು ಗುರುತಿಸಬಹುದು. ಸಮಾಜದ ಒಪ್ಪಿತವಾದ ನೈತಿಕ ಮೌಲ್ಯಗಳಿಂದ ಈ ಪಾತ್ರಗಳನ್ನು ಅಳೆದು ತೂಗಿದರೆ ಒಂದರ್ಥದಲ್ಲಿ ಅವು ಅನೈತಿಕ, ವಿವಾಹಪೂರ್ವ, ವಿವಾಹಬಾಹಿರ ಸಂಬಂಧಗಳೇ ಹೆಚ್ಚು. ಆದರೆ ಇಲ್ಲಿನ ಸ್ತ್ರೀ ಪಾತ್ರಗಳಿಗೆ ತಮ್ಮ ಕ್ರಿಯೆಯ ಅರಿವು ಸಂಪೂರ್ಣವಾಗಿ ಇದೆ. ಈ ಪಾತ್ರಗಳು ಆಧುನಿಕತೆಯ ಕಡೆ ಮುಖ ಮಾಡಿರುವುದರಿಂದ ಸಮಾಜದ ಸಾಂಪ್ರದಾಯಿಕ ಮೌಲ್ಯಗಳು ಇಲ್ಲಿ ನಗಣ್ಯವಾಗುತ್ತವೆ.

ಕೊನೆ ಟಿಪ್ಪಣಿಗಳು

1. ಜಿ.ಎಸ್ ಆಮೂರ್, ಕನ್ನಡ ಕಥನ ಸಾಹಿತ್ಯ – ಸಣ್ಣಕಥೆ, ಪು.ಸಂ.–218
2. ಡಾ. ಶಾಂತಿನಾಥ ದೇಸಾಯಿ – ಸಮಗ್ರ ಕಥೆಗಳು, ಪು.ಸಂ–85
3. ಜಿ.ಎಸ್ ಆಮೂರ್, ಕನ್ನಡ ಕಥನ ಸಾಹಿತ್ಯ – ಸಣ್ಣಕಥೆ, ಪು.ಸಂ.–224
4. ಡಾ. ಶಾಂತಿನಾಥ ದೇಸಾಯಿ – ಸಮಗ್ರ ಕಥೆಗಳು, ಪು.ಸಂ. – 84
5. ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು ವಿಶ್ವವಿದ್ಯಾಲಯ, – ಡಾ. ಟಿ.ಪಿ ಅಶೋಕ, ಶಾಂತಿನಾಥ ದೇಸಾಯಿ ಅವರ ಕಥೆಗಳು: ಕೆಲವು ವಿಮರ್ಶಾತ್ಮಕ ಟಿಪ್ಪಣಿಗಳು, ಸಂ–3, ಪು.ಸಂ 414
6. ಡಾ. ಶಾಂತಿನಾಥ ದೇಸಾಯಿ – ಸಮಗ್ರ ಕಥೆಗಳು, ಪು.ಸಂ.–275
7. ಡಾ. ಶಾಂತಿನಾಥ ದೇಸಾಯಿ – ಸಮಗ್ರ ಕಥೆಗಳು, ಪು.ಸಂ.–279

ಪರಾಮರ್ಶನ ಸಾಹಿತ್ಯ

1. ಆಮೂರ ಜಿ.ಎಸ್–ಕನ್ನಡ ಕಥನ ಸಾಹಿತ್ಯ : ಸಣ್ಣಕಥೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 2022
2. ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ(ನವ್ಯ ಸಾಹಿತ್ಯ) ಸಂ–3, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು, 2014
3. ಗಿರಡ್ಡಿ ಗೋವಿಂದರಾಜು–ಸಮಗ್ರವಿಮರ್ಶೆ, ಸಂಪುಟ–2, ಸಪ್ನಬುಕ್‌ಹೌಸ್, ಬೆಂಗಳೂರು, 2023
4. ನರಹಳ್ಳಿ ಬಾಲಸುಬ್ರಹ್ಮಣ್ಯ–ನವ್ಯತೆ, ಅಭಿನವಪ್ರಕಾಶನ, ಬೆಂಗಳೂರು, 2019
5. ಶಾಂತಿನಾಥ ದೇಸಾಯಿ – ಸಮಗ್ರ ಕಥೆಗಳು, ಸಪ್ನ ಬುಕ್ ಹೌಸ್, ಬೆಂಗಳೂರು, 2013

❖❖❖

ಮಂಟೇಸ್ವಾಮಿ ಕಾವ್ಯದಲ್ಲಿ ಮಂಟೇದಯ್ಯನವರು ಕೆಂಪಾಚಾರಿಯನ್ನು ಶಿಶುಮಗನಾಗಿ ಪಡೆಯುವ ಪ್ರಸಂಗ

ಡಾ. ಶಾರದಮ್ಮ
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು
ಭಾರತೀನಗರ (ಮಣಿಗೆರೆ)–571422

ಪೀಠಿಕೆ

ಮಂಟೇಸ್ವಾಮಿ ಕಾವ್ಯದಲ್ಲಿ ಬರುವ ಮಂಟೇದಯ್ಯ ಜಗತ್ತನ್ನೇ ಸೃಷ್ಟಿಸಬಲ್ಲ ಒಬ್ಬ ಪವಾಡ ಪುರುಷ. ಆದರೆ ಸದಾ ನಡೆದಾಡುತ್ತಾ ಭಂಗಿ ಸೇವಿಸುತ್ತಾ ತಿರುಗುವ ಈ ಬೈರಾಗಿ ಕಟ್ಟುವ ಲಿಂಗದ ಬದಲಾಗಿ ಆತ್ಮಲಿಂಗದ ಶ್ರೇಷ್ಟತೆಯನ್ನು ಸಾರುವ ಒಬ್ಬ ಜ್ಯೋತಿಪುರುಷ. ಸ್ವಾಭಿಮಾನಕ್ಕೆ ಕುಂದು ಬಂದಾಗ ಉಗ್ರವಾಗಿ ಪ್ರತಿಭಟಿಸಿ ನಿಲ್ಲಬಲ್ಲಂತಹವರು. ಜಾತೀಯತೆಯನ್ನು ಮೀರಿದ ಮಹಾವ್ಯಕ್ತಿ. ಎಂತಹ ಕಟುಕರನ್ನು ಕರಗಿಸುವ ಆತ್ಮಬಲವನ್ನು ಪಡೆದವರು ಮಂಟೇದಲಿಂಗಯ್ಯನವರು.

ಮಂಟೇಸ್ವಾಮಿಯನ್ನು 'ಧರೆಗೆ ದೊಡ್ಡವರು' ಎಂದು ಕರೆದಿರುವುದರಲ್ಲೇ ಒಂದು ತರ್ಕ ಅಡಗಿದೆ. ಸಾಮಾನ್ಯವಾಗಿ ಇಂಥ ಮಹಾತ್ಮರು ತ್ರಿಮೂರ್ತಿಗಳ ವರದಿಂದಲೋ ಅಥವಾ ಅವರ ಶಾಪದಿಂದಲೋ ಇಲ್ಲವೇ ಅವರ ಬೆವರಿನಿಂದಲೋ ಹುಟ್ಟುವುದು ಸಾಂಪ್ರದಾಯಿಕ ಪುರಾಣಗಳ ವಾಡಿಕೆ. ಆದರೆ ಮಂಟೇಸ್ವಾಮಿ ಹುಟ್ಟಿನ ಪುರಾಣ ಇದೆಲ್ಲವನ್ನು ಮೀರಿದ್ದು. ಅವನೇ ಜಗತ್ತಿನ ಸೃಷ್ಟಿಕರ್ತ, ತ್ರಿಮೂರ್ತಿಗಳು, ಭೂಮಿತಾಯಿ, ಸೂರ್ಯಚಂದ್ರರನ್ನು ಸ್ವತಃ ಪಡೆದು ಇದೇ ವಿಶ್ವದ ಸೃಷ್ಟಿಗೆ ಕಾರಣನಾಗುತ್ತಾನೆ.

ಜಾನಪದ ಬುಡಕಟ್ಟು ಕಾವ್ಯವಾದ ಮಂಟೇಸ್ವಾಮಿ ಕಾವ್ಯದಲ್ಲಿ ಕೆಂಪಾಚಾರಿಯ ಗತ್ತು ಗಮ್ಮತ್ತುಗಳನ್ನು ತಿದ್ದಿ ಮಾನವೀಯ ಸಾಕಾರ ಮೂರ್ತಿಯನ್ನಾಗಿ ಮಾಡುವಲ್ಲಿ ಮಂಟೇಸ್ವಾಮಿಯ ಮಹತ್ವವೇನೆಂಬುದನ್ನು ಇಲ್ಲಿ ವಿವರಿಸಲಾಗಿದೆ.

ಕೆಂಪಾಚಾರಿಯ ಹುಟ್ಟು ಮತ್ತು ಬೆಳವಣಿಗೆ

ಕೆಂಪಾಚಾರಿಯು ಮುದ್ದೋಜಿ ಅಥವಾ ಮುದ್ದಮ್ಮ ಬಸವಾಚಾರಿಯ ಏಳನೆಯ ಮಗ. ಕೆಂಪಾಚಾರಿ ಹುಟ್ಟುವ ಮೊದಲು 6 ಜನ ಗಂಡು ಮಕ್ಕಳಿದ್ದರು. ಆಚಾರಿ ಕುಲದಲ್ಲಿ ಹುಟ್ಟಿದ ಈ ದಂಪತಿಗಳಿಗೆ ತುಂಬಾ ಬಡತನ. ಕುಡಿಯಲು ನೀರಿಲ್ಲ ಉಡಲು ಬಟ್ಟೆ ಇಲ್ಲ, ಶಿವಭಕ್ತರ ಮನೆಯಲ್ಲಿ ಕೊಟ್ಟಂತಹ ಊಟ ಇಸಕಂಡು 6 ಜನ ಮಕ್ಕಳುಗಳಿಗೆ ಕೊಟ್ಟು, ನೀಲಘಟ್ಟದ ಊರೊಳಗೆ ಅರಳಿಕಟ್ಟೆ ಜಗಲಿ ಹೊನ್ನಳ್ಳಿ ಮರದ ಬುಡದಲ್ಲಿ ವಾಸ ಮಾಡುತ್ತಿರಬೇಕಾದರೆ ಜಗದ್ಗುರು ಧರೆಗೆ ದೊಡ್ಡಯ್ಯನವರು ನೀಲಘಟ್ಟದ ಬೀದಿಯೊಳಗೆ ದಾನ ಧರ್ಮ ಅಂತ ಸಾರಿದಾಗ ಅವರ ಪಾದವನ್ನು ನೋಡಿ ಎರಡು ಪಾದಗಳನ್ನು ಹಿಡಿದುಕೊಂಡು ನಮ್ಮ ಭಂಗ ಬಡಸ್ತನ ನೀಗಪ್ಪ, ಹನ್ನೆರಡು ವರ್ಷದಿಂದ ಎಲ್ಲಾ ದೇವರುಗಳಿಗೂ ಕೈಯೆತ್ತಿ ಮುಗಿದ್ರುನುವೆ ನಮ್ಮ ಬಡಸ್ತನ ನೀಗಲಿಲ್ಲ ಎಂದಾಗ ಧರೆಗೆ ದೊಡ್ಡವರ ಮನಸ್ಸು ಕರಗಿ ಇವರಿಗೆ ಭಾಗ್ಯ ಕೊಡಬೇಕು ಅಂತೇಳಿ ನನ್ನ ಕಡೆಯ

ಬಾಗಿಲಲ್ಲಿ ಇದ್ದ ಬಾಚಿಬಸವಯ್ಯನ ಇವರ ಹೊಟ್ಟೆಗಾಕಿ ಇವರ ಹೊಟ್ಟೆಯಲ್ಲಿ ಹುಟ್ಟಿದಂತ ಮಗನಿಂದ ಇವರ ದರಿದ್ರ ಹಿಂಗಲಿ ಎಂದು ವರ ನೀಡಿ ನೀವು ಈ ಗ್ರಾಮವನ್ನು ಬಿಟ್ಟು ಮಾರ್ವಳ್ಳಿ ಮನಸ್ತಾನಕ್ಕೆ ಹೋಗಿ ಸೇರ್ಕಳ್ಳಿ ನನ್ನ ವರದಲ್ಲಿ ನಿನ್ನ ಮಗ ಹುಟ್ಟಿದ ಏಳು ದಿವಸಕ್ಕೆ ಅರಬಿ ಹಣ ಮಾಡ್ತಿನಿ, ನಿಮಗೆ ಮಣ್ಣಿನ ಇಟ್ಟಿಗೆ ಮಾಯ ಮಾಡಿ ಚಿನ್ನದ ಇಟ್ಟಿಗೆ ಮಾಡ್ತೀನಿ, ಭಿಕ್ಷುಕರು ಲಕ್ಷಿಕರಾಗುತ್ತೀರಿ ಎಂತೇಳಿ ವರವನ್ನು ನೀಡಿದ ಪರಿಣಾಮವಾಗಿ ಕೆಂಪಾಚಾರಿ ಹುಟ್ಟಿದ ಬಳಿಕ ಅರಬಿ ಹಣವಾಯ್ತದೆ ಮಣ್ಣಿನ ಇಟ್ಟಿಗೆ ಚಿನ್ನದ ಇಟ್ಟಿಗೆ ಆಯ್ತದೆ ಎಂದು ಹೇಳಿ ಹೊರಟು ಹೋಗುತ್ತಾರೆ. ಕೆಂಪಾಚಾರಿ ಹುಟ್ಟಿ ಬೆಳೆದು ಏಳು ವರ್ಷದ ಮಗನಾಗಿ ಕುಲುಮೆ ಕೆಲಸ ಮಾಡಿಸುತ್ತಿದ್ದಾನೆ.

ನಂತರ ರಾಜ ಬೊಪ್ಪನಗೌಡ್ನಪುರದಲ್ಲಿ ನಾನು ವಾಸ ಮಾಡಬೇಕಾದರೆ ಸ್ವಾಮಾರ ಶುಕ್ರವಾರ ಪೂಜೆ ಮಾಡುವುದಕ್ಕೆ, ಮಠ ತೊಳೆವುದಕೆ, ಕಂಡಾಯ ಬೆಳಗುವುದಕೆ ಒಬ್ಬ ಶಿಶುಮಗ ಬೇಕು ಅಂತೇಳಿ ದೊಡ್ಡಮ್ಮತಾಯಿಯನ್ನು ಕರೆದು ಕೇಳುತ್ತಾರೆ. ನನಗೆ ಬೇಕಾದ ಮಗ ಯಾರ ಗರ್ಭದಲ್ಲಿ ಬೆಳೆದಿದ್ದಾನೊ, ಯಾರ ಹೊಟ್ಟೆಯಲ್ಲಿ ಹುಟ್ಟಿದ್ದಾನೊ ಕಾಣೆನಲ್ಲ ಅಂತ ಚಿಂತೆ ಪಟ್ಟು ಕೊರಗುತ್ತಿರಬೇಕಾದರೆ ಉರಿಗದ್ದಿಗೆಯ ಮೇಲೆ ಕುಂತಾಗ ಕೆಂಪಾಚಾರಿ ನೆನಪಿಗೆ ಬಂದು ಮುದ್ದೋಜಿ ಮತ್ತು ಬಸವಾಚಾರಿಯು ಬಡಸ್ತಾನ ಮರೆತಿದ್ದಾರೆ ಅಥವಾ ನೆನಪಿಟ್ಟುಕೊಂಡಿದ್ದಾರ ಎಂದು ಪರೀಕ್ಷಿಸಲು ಗಂಡನಲ್ಲಿ ಭಕ್ತಿ ಇದ್ದದೋ, ಹೆಂಡತಿಯಲ್ಲಿ ಭಕ್ತಿ ಇದ್ದದೋ ಇವರ ದುಡ ನೋಡಬೇಕು, ಸತ್ಯಪರೀಕ್ಷೆ ಮಾಡಬೇಕು ಇವರ ಹೊಟ್ಟೆಯಲ್ಲಿ ಹುಟ್ಟಿದ ಮಗನ ಬೊಪ್ಪಣಪುರದ ಮಠ ಮನೆಗೆ ಶಿಶು ಮಗನಾಗಿ ಮಡ್ಕೊಬೇಕು ಅಂತೇಳಿ ಕೆಂಪಾಚಾರಿಯನ್ನು ದಾನ ಕೇಳಲು ಮಾರ್ವಳ್ಳಿಗೆ ಬರುತ್ತಾರೆ.

ಕೆಂಪಾಚಾರಿಯನ್ನು ಭಿಕ್ಷೆಯಾಗಿ ಬೇಡುವ ಪ್ರಸಂಗ

ಕೆಂಪಾಚಾರಿ ಏಳುವರ್ಷದ ಮಗನಾಗಿದ್ದಾನೆ. ಏಳುವರ್ಷದ ಎಳೆನಾಗರ ಮರಿ ಕೆಂಪಾಚಾರಿಯು ವಯಸ್ಸಿಗೆ ಮೀರಿದ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದು ಏಳುನೂರ ಹೆಗ್ಗುಲುಮೆಯ ನೋಡ್ಕಂಡು, ಏಳುನೂರು ಜನ ಜೀತ್ಗಾರ್ನ ಕಟ್ಕಂಡು ಕಬ್ಬುಣದ ಕಾರ್ಖಾನೆ ಒಳಗೆ ಆಳುಕಾಳುಗಳಿಗೆಲ್ಲ ಕೆಲಸ ತೋರ್ಸಿ ಮಾಡಿಸುತ್ತಿದ್ದಾನೆ.

ಈ ಕಡೆ ಧರೆಗೆದೊಡ್ಡೋರು ಭಿಕ್ಷೆಯನ್ನು ಕೇಳಲು ಮಾರ್ವಳ್ಳಿಗೆ ಬಂದು ಮುದ್ದಮ್ಮನ ಬಾಗಿಲಲ್ಲಿ ಮುದ್ದಮ್ಮ ಕಾಲು ತೊಳೆಯುವ ಪಚ್ಚೆಕಲ್ಲಿನ ಮೇಲೆ ನಿಂತು ದಾನ ಭಿಕ್ಷೆಯನ್ನು ಕೇಳುತ್ತಾರೆ. ಮುದ್ದಮ್ಮ ತನ್ನ ಪ್ರೀತಿಯ ಮಗ ಕೆಂಪಾಚಾರಿಗೆ ಹಾಲು ಕರೆದು ಕುಡಿಸುವ ಸಲುವಾಗಿ ಹಸುವಿನಿಂದ ಹಾಲು ಕರೆಯುತ್ತಿದ್ದಾಳೆ. ಮಂಟೇದಯ್ಯ ಬಂದು ಭಿಕ್ಷೆ ಕೇಳಿದರು ಗ್ಯಾನವಿಲ್ಲದೆ ತನ್ನ ಪಾಡಿಗೆ ತಾನು ಹಾಲು ಕರೆಯುತ್ತಿದ್ದಾಳೆ. ಆಗ ಮಂಟೇದಯ್ಯ ನಾನು ಬಂದರೂ ಗ್ಯಾನವಿಲ್ಲದೆ ಹಾಲು ಕರೆಯುತ್ತಿದ್ದಾಳಲ್ಲ ನನ್ನ ಪಾದಮುಟ್ಟಿ ಶರಣು ಮಾಡ್ಲಿಲ್ಲ. ನನಗೆ ಭಾಗ್ಯಕೊಟ್ಟ ಗುರು ಬಂದ್ರು ಅಂತೇಳಿ ನನ್ನ ಮುಖ ಕೂಡ ನೋಡ್ಲಿಲ್ಲ ನನ್ನ ಬಾರಿ ಕಂಡಾಯಕ್ಕೆ ಕೈಮುಗಿದು, ಬಾರ್ಸುವಂತ ತಂಬೂರಿಗೆ ಗಂಧದ ಕಡ್ಡಿ ಹಚ್ಚಲಿಲ್ಲ ಅಂತೇಳಿ ಹಿಂದಲಪಾದ ಹಿಂದಕ್ಕೆ ಮುಂದಲಪಾದ ಮುಂದಕ್ಕೆ ಎತ್ತಿ ಇಟ್ಟಾಗ ಜಂಗು ಜಲೀರಂದು ತಂಬೂರಿಲಾದಕೆ ಗಗ್ಗರ್ದ ಶಬ್ದಕ್ಕೆ ಕಂಡಾಯದ ಕೆಳಗೆ ಮೈಮೆ ಮೆತ್ಗಾರಕ್ಕೆ ಮುದ್ದಮ್ಮ ಕರಿವಂತ ಹಸ ಜಲ್ಲನೆ ಬೆದರಿತು. ಹಾಲು ಚೆಲ್ಲಿತು ಕೈಬಳೆ ಒಡೆದವು ಮೊಳಕೈ ಕಿತ್ತು

ಹೋಯ್ತು. ಮಂಡಿನೋವಾಯ್ತು ಆಗ ಅವಳಿಗೆ ಕೋಪಬಂದು ಮಂಟೇದಯ್ಯನನ್ನು ಹುಚ್ಚ ಕಾಡ ಪರದೇಶಿ ತಿರುಕ ಭಿಕ್ಷೆ ಮಾಡೊ ಮುಂಡೆಮಕ್ಕಳಿಗೆ ಹೊತ್ತುಗೊತ್ತು ಏನು ಇಲ್ಲ ನನ್ನ ಮನೆ ಬಿಟ್ಟು ಕಡದೋಗೊ ಪರದೇಶಿ ಎಂದು ಬಾಯಿಗೆ ಬಂದಂಗೆ ಬಯ್ಯುತ್ತಾಳೆ. ಆಗ ಮಂಟೇದಯ್ಯನವರು ನಾನು ದಾನಕ್ಕೆ ಬಂದೀವ್ನಿ ತುಂಬುದ ಸ್ವಾಮಾರ ಕ್ವಾರಣ್ಯಕ್ಕೆ ಬಂದೀವ್ನಿ ನನ್ನ ಬಾಯೆತ್ತಿ ಬೈಯ್ದೋರ್ನ ನಾನು ಬಾಯೆತ್ತಿ ಬಯ್ಯಲ್ಲ, ನನ್ನ ಕೈಯೆತ್ತಿ ಒಡೆದೋರ್ಗೆ ನಾನು ಕೈಯೆತ್ತಿ ಮಿಗಿತೀನಿ ಎಂದು ಹೇಳುತ್ತಾರೆ.

ಕೊನೆಗೆ ಬಸವಾಚಾರಿ ಮುದ್ದಮ್ಮನ ಬಡತನ ಸಿರಿತನದ ಬಗ್ಗೆ ನೆನಪಿಸುತ್ತಾರೆ. ಆಗ ಮುದ್ದಮ್ಮನ ಅರಿವಿಗೆ ಬಂದು ಇವರು ಯಾರಿರಬಹುದು ಎಂದು ಯೋಚಿಸುತ್ತಾಳೆ. ಮುಂದುವರಿದು ಮಂಟೇದಯ್ಯ ಭಿಕ್ಷೆ ಬೇಡಲು ಚಿನ್ನ, ಬೆಳ್ಳಿ, ವಜ್ರ ವೈಡೂರ್ಯಗಳನ್ನು ಭಿಕ್ಷಯಾಗಿ ಕೊಡಲು ಮುಂದಾಗುತ್ತಾಳೆ. ಮುದ್ದಮ್ಮ. ಆದರೆ ನಾನು ಕೊಟ್ಟ ವೈಭೋಗ ನಾನು ನೀಡಿದ ಚಿನ್ನ ಸಂಪತ್ತು ನನಗೆ ಬೇಡ ನಿನ್ನ ಮನೆಯಲ್ಲಿ ಮಾತನಾಡುವ ಗಿಣಿಯನ್ನು ನನಗೆ ದಾನವಾಗಿ ನೀಡಬೇಕು ಎಂದು ಮಂಟೇದಯ್ಯ ಕೇಳಲು ಮುದ್ದಮ್ಮನಿಗೆ ಅರ್ಥವಾಗಲಿಲ್ಲ. ಯಾರು ಮಾತನಾಡುವ ಗಿಳಿ ಎಂದು ಕೇಳಲು ನಿನ್ನ ಕಡೆಯ ಮಗನಾದ ಎಳೆಯ ಕೆಂಪಾಚಾರಿ ಎನ್ನಲು ಮುದ್ದಮ್ಮನಿಗೆ ತಡೆಯಲಾರದ ದುಃಖ ಕೋಪ ಎರಡು ಉಂಟಾಗುತ್ತವೆ ನನ್ನ ಕಿರಿ ಮಗ ಕೆಂಪಣ್ಣನಿಂದಲೇ ಈ ಭಾಗ್ಯ ದೊರೆತಿದೆ ಅಂತಹ ಮಗನನ್ನು ನಾನು ದಾನ ಕೊಡಲಾರೆ,

ಭಿಕ್ಷಕೆ ಬಂದವರು ಬಿಸಿಅನ್ನ ಕೇಳ್ದಂಗೆ ಆಯ್ತು
ತಿರಿಯಾಕೆ ಬಂದವರು
ಹಿರಿಸೊಸೆ ಬೇಡ್ಕಂಡಂಗೆ ಆಯ್ತು.

ಎಂದು ಹೇಳುತ್ತಾಳೆ. ಏನೇ ಆದ್ರು ಸರಿಯೇ ನನ್ನ ಮಗನ್ನ ಕೊಡೋದಿಲ್ಲ ಅಂತೇಳಿ ಆಣೆ ಮಾಡುತ್ತಾಳೆ. ಆಗ ಮಂಟೇದಯ್ಯನವರು ಯಮನಿಗಾದ್ರೆ ಕೊಟ್ಟೀಯ ಎಂದು ಕೇಳಿದಾಗ ಅವನಿಗೆ ಕೊಟ್ಟೇವೆ ಹೊರತು ಮಿಕ್ಕದವರಿಗೆ ಕೊಡಲ್ಲಾ ಎನ್ನತ್ತಾಳೆ. ನಾನೇ ಯಮನಾಗಿ ಬಂದು ಮಗನ ಕರೆದುಕೊಂಡು ಹೋಯ್ತಿನಿ. ಕಪ್ಪುಧೂಳ್ತದ ಮೈಮೆ ಏನು ಅಂತ ನಾಳೆ ದಿವಸ ನೀನೆ ನೋಡು ಮಗಳೆ ಆಗ ನಿನಗೆ ತಿಳೀತದೆ ದೊಡ್ಡವರ ಮರ್ಮ ಎಂದು ಹೇಳಿದಾಗ ನನ್ನ ಗಂಡನ ಕೇಳಬೇಕು ಎನ್ನುತ್ತಾಳೆ. ಅವಳು ಕುಲುಮೆ ಹತ್ತಿರ ಬಂದು ತನ್ನ ಗಂಡನಿಗೆ ಎಲ್ಲ ವಿಷಯವನ್ನು ತಿಳಿಸಿದಾಗ ಅವನು ಕೂಡ ಮಗನ್ನು ಕೊಡಲು ಒಪ್ಪುವುದಿಲ್ಲ. ನಂತರ ಮಂಟೇದಯ್ಯ ಹೊರಟುಬಿಡುತ್ತಾರೆ. ಕೆಂಪಾಚಾರಿಯ ದುಡ (ಭಕ್ತಿ) ಹೇಗಿದೆ ಎಂದು ಪರೀಕ್ಷೆ ಮಾಡಲು ಕೆಂಪಾಚಾರಿಯ ಕುಲುಮೆಗೆ ಬರುತ್ತಾರೆ ಧರೆಗೆದೊಡ್ಡವರಾದ ಮಂಟೇಸ್ವಾಮಿ.

ಕೆಂಪಾಚಾರಿಯ ದರ್ಪ

ಎಳೆಯ ಕೆಂಪಾಚಾರಿಗೆ ವಯಸ್ಸು ಮೀರಿದ ದರ್ಪ ದೊಡ್ಡದು. ಯಾಕೆಂದರೆ ನಾನು ಹುಟ್ಟಿದ ಮೇಲೆ ನಮ್ಮ ಮನೆಗೆ ಭಾಗ್ಯ ಬಂದಿದೆ ಎನ್ನುವ ಅಹಂಕಾರ ಅವನಲ್ಲಿದೆ. ಏಳು ವರ್ಷದ ಮಗ ಕೆಂಪಣ್ಣ ದೇವಲೋಕದಲ್ಲಿ ದೇವೇಂದ್ರನಂಗೆ ವೈಭೋಗದಲ್ಲಿದ್ದಾನೆ ಹತ್ತು ಬೆರಳಿಗೂ ಕತ್ತಾಕ್ದ ಅಪರಂಜಿ ಉಂಗುರ ಇಕ್ಕಂಡು ವಜ್ರದ ವಲ್ಲೀಯ ಹೆಗಲಮ್ಯಾಲೆ ಹಾಕ್ಕೊಂಡು ಚಿನ್ನದ ಬೆರಳೀ ಪಾದರಕ್ಷೆಯ ಪಾದದಲ್ಲಿ

ಮೆಟ್ಟಗಂಡು ಬಂಗಾರ್ದ ಪಟ್ಟೇಮಂಚದ ಮ್ಯಾಲೆಕೂತ್ಕಂಡು ಜೀತ್ಗಾರ್ನ

ಒತ್ತರ್ಲ ತಿದಿಯ

ಕಾಸಿರ್ಲ ಕಬ್ಬುಣವ

ಬಡೀರ್ಲ ಬಡೀರ್ಲ

ಅಂತೇಳಿ ಕೆಲಸ ಮಾಡಿಸುತ್ತಿರಬೇಕಾದರೆ ಮಂಟೇದಯ್ಯ ಕೆಂಪಣ್ಣನ ಕುಲುಮೆ ಕಛೇರಿಗೆ ಬಂದು ಬಾಗಿಲಲ್ಲಿ ನಿಂತುಕೊಂಡರು. ಕೆಂಪಾಚಾರಿ ಅವರ ಮುಖವನ್ನು ನೋಡಲಿಲ್ಲಿ ಮಂಟೇದಯ್ಯನೆ ಕೆಂಪಾಚಾರಿಯ ಮುಖವನ್ನು ನೋಡಿ ಕಲ್ಯಾಣಪಟ್ಟಣದ ಬಾಗಿಲಲ್ಲಿದ್ದಂತ ಪರಮಭಕ್ತ ಬಸುಲಿಂಗಯ್ಯ ಆ ಜನ್ಮನೆ ಅಳಿಸಿಬಿಟ್ಟು ಈ ಮುದ್ದಮ್ಮನ ಗರ್ಭಕ್ಕೆ ನಿನ್ನಾಕ್ದದಕ್ಕೆ ಕಂದಾ ಬಂಗಾರದ ಪಟ್ಟೇಮಂಚದ ಮೇಲೆ ನೀನು ಕೂತಿದ್ದಿ ಅಂತೇಳಿ ಸಂತೋಷಪಡುತ್ತಾರೆ.

ಕೆಂಪಾಚಾರಿ ಮಂಟೇದಯ್ಯನವರ ಮುಖನೋಡಿ ಆಳುಗಳಿಗೆ ಏನ್ರುಲಾ ಜೀತ್ಕಾಳುಗಳೇ ಯಾವನೋ ತಿರ್ಕವರ್ಕ ಬೂದುಬದ್ಕ ನನ್ನ ಕುಲುಮೆಗೆ ಬಂದುಬಿಟ್ಟಿದ್ದಾನೆ ಅನ್ನುತ್ತಾನೆ. ಕೆಂಪಾಚಾರಿಯ ದರ್ಪ ವಯಸ್ಸನ್ನು ಮೀರಿದ್ದು ಕೊನೆತನಕ ಉಳಿಯುವುದಿಲ್ಲ. ಕೆಂಪಾಚಾರಿಯಲ್ಲಿದ್ದ ಅಹಂಕಾರವನ್ನು ಸಂಪೂರ್ಣ ತೊಡೆದುಹಾಕುವುದಕ್ಕೋಸ್ಕರವೇ ಆಮಾತನ್ನು ಅವನ ಬಾಯಿಂದಲೇ ಆಡಿಸಿದಂತಿದೆ.

ಮಂಟೇದಯ್ಯನವರು ಕೆಂಪಾಚಾರಿಯ ಕುಲುಮೆ ಮುಂದೆ ನಿಂತ್ಕೊಂಡು ನಾನೊಬ್ಬ ಗುರು ಕಾಣೋ ನೀನು ನನಗೆ ಶಿಷ್ಯ ಕಾಣೋ ಎನ್ನುತ್ತಾರೆ. ಆಗ ಕೆಂಪಾಚಾರಿ ಈ ಪ್ರಪಂಚಕ್ಕೆ ನಾವೇ ಗುರುಗಳು ಎನ್ನುತ್ತಾನೆ.

ಅಯ್ಯಾ ಕೆಂಪಣ್ಣ ನೀನು ಯಾವ ರೀತಿ ಗುರು, ನಾನು ಯಾವ ರೀತಿ ನಿನಗೆ ಶಿಷ್ಯ ಹೇಳೋ ಎಂದಾಗ ನೀನು ಹೊತ್ತಿರುವ ಕಂಡಾಯ ಯಾರು ಮಾಡಿದರು, ನೀನು ಬಾರ್ಸುವ ತಂಬೂರಿ, ನೀನು ಕಟ್ಟಿರುವ ಲಿಂಗ ಇಲ್ಲಿ ಯಾರೋ ಮಾಡಿದೋರು ನಾವೇಕಣೋ. ಆದ್ದರಿಂದ ಮೊದಲನೆ ಗುರು ನಾನು ಎರಡನೇ ಗುರು ನೀನು ಕಣೋ ಎನ್ನುತ್ತಾನೆ. ಆಗ ಆಯ್ತು ನೀನೆ ನನಗೆ ಗುರುವಾದೆಯಾ ನಾನೇ ನಿನಗೆ ಶಿಷ್ಯನಾದೆನೆ ನೀನು ನನ್ನ ನೋಡ್ಬುಟ್ಟು ಒಬ್ಬ ನರಮನುಷ್ಯನೆಂದು ತಿಳಿಕೊಂಡ್ಯಾ ಕೆಂಪಣ್ಣಾ ನಾನೊಬ್ಬ ದೇವ್ರು ಕಣೋ ನೀನೊಬ್ಬ ನರಮನುಷ್ಯ ಎನ್ನುತ್ತಾರೆ ಮಂಟೇದಯ್ಯನವರು. ಆಗ ಕೆಂಪಣ್ಣ ಹೇಳುತ್ತಾನೆ, ನೀನಲ್ಲ ದೇವರು ನಾವಿಲ್ಲದೆ ದೇವ್ರು ಎಲ್ಲಿ ಬತ್ತೋ, ದೇವರ ಪಡೆದವರು ನಾವು, ದೇವರ ತ್ರಿಷ್ಣೆಮಾಡಿ ಈ ನರಲೋಕಕ್ಕೆ ತಂದವರು ನಾವು, ಮೊದಲನೆ ದೇವ್ರು ನಾವೇ ಎರಡ್ನೇ ದೇವ್ರು ನೀನು, ತಾಲಿ ಮಾಡವ್ರು ನಾವು ತಾಲಿ ಕಟ್ಟೋವ್ರು ನೀವು, ಮುಟ್ಟಿದ ಗಂಡ ನಾನು ಕಟ್ಟಿದ ಗಂಡ ನೀನು ಕಣೋ ಎನ್ನುತ್ತಾನೆ ಕೆಂಪಾಚಾರಿ.

ಹೀಗೆ ಹಲವಾರು ರೀತಿಯಲ್ಲಿ ಮಂಟೇದಯ್ಯನಿಗೂ ವಾಗ್ವಾದಗಳು ನಡೆದು ಕೊನೆಗೆ ಮಂಟೇದಯ್ಯನವರು ಕೆಂಪಾಚಾರಿಗೆ ಶಾಪವನ್ನು ನೀಡುತ್ತಾರೆ.

ಆಗ ಕೆಂಪಾಚಾರಿ ಏನೋ ಜಂಗಮ ನನ್ನ ಕುಲುಮೆ ಕಛೇರಿಗೆ ಯಾತಕ್ಕೆ ಬಂದೋ ಊರೂರಿಗೆ ವಂಟೋಗಿದ್ದರೆ ರಾಗಿ ಜ್ವಾಳ ಸಿಕ್ತಿತ್ತು. ಮಾರಿಚಾವಡಿಗೆ ಹೋಗಿ ಮಲಗಿದ್ದು, ಬೆಳಗಾದ ಮ್ಯಾಲೆ ಎದ್ದು ಹೋಗಬಹುದಿತ್ತು. ಕಬ್ಬುಣದ ಅಂಗಡೀಲಿ ನೊಣಕ್ಕೇನೋ ಹಗ್ಗ ಹೊರಟೋಗು ಎನ್ನುತ್ತಾನೆ. ಅದಕ್ಕೆ ಮಂಟೇದಯ್ಯ ನೋಡಪ್ಪಾ ನಾನು ಪೂರ್ವದಲ್ಲಿ ಭಿಕ್ಷೆಬೇಡುವಂತ ಫಲ ಪಡ್ಕಂಡು ಬಂದಿದ್ದೀನಿ. ನಿನ್ನ ಕುಲುಮೆಗೆ

ಯಾತಕ್ಕೆ ಬಂದೆ ಅಂದ್ರೆ ಭಂಗಿ ಸೇದೋ ಹುಚ್ಚು ನನಗೆ ಭಂಗಿ ಸೇದಕ್ಕೆ ಬೆಂಕಿಕೆಂಡ ಬೇಕಾಯ್ತು ನಿನ್ನ ಕುಲುಮೆ ನೋಡಿ ಬಂದೆನಪ್ಪ. ಅಪ್ಪಾ ಕೆಂಡ ಕೊಟ್ಟರೆ ನಿನಗೆ ಬಾಳ ಧರ್ಮಬತ್ತದೆ, ಪುಣ್ಯಬತ್ತದೆ. ಭಂಗಿ ಸೇದ್ಕಂಡು ವಂಟೋಯ್ತಿನಿ ನನ ಕಂದಾ ಎನ್ನುತ್ತಾರೆ.

ಭಂಗಿ ಸೇದಕೆ ಬೆಂಕಿಕೆಂಡ ಕೇಳ್ದೀಯ ಒಂದು ಆಳು ಮಡಗಿದ್ದೀನಿ ನಿನಗೆ, ಬೆಂಕಿಕೆಂಡ ಕೊಡೊಗಂಟ ನನಗೆ ಒಂದು ಕಾರ್ಯ ಕಮ್ಮಿ ಆಯ್ತದೆ ಕಾಣೋ ಪರದೇಶಿ. ಕೊಡಬಹುದು, ನಾನು ಯಾತರಲ್ಲಿ ನಿನಗೆ ಕೊಡಲಿ ಅಂದಾಗ ಬಾಚಿ ಚೆಕ್ಕೇಲಿ ಬೆರಣಿ ಮುಚ್ಚಿಕೊಂಡು ತಂದು ಕೊಡು ಅನ್ನುತ್ತಾರೆ. ಅದಕೆ ಕೆಂಪಾಚಾರಿ ಬಾಚಿಚಕ್ಕೆ ನಿಮ್ಮಜ್ಜಯ್ಯ ಕೆತ್ತಿದ್ದಾನೋ ಅನ್ನುತ್ತಾನೆ. ಕಂದಾ ಕೆಂಪಾಚಾರಿ ನನಗೆ ಅಜ್ಜಯ್ಯ ಇಲ್ಲ, ಅಜ್ಜಮ್ಮ ಇಲ್ಲ, ತಂದೆ ತಾಯಿ, ಅಣ್ಣ ತಮ್ಮ ಮೊದಲಿಲ್ಲ, ನನಗೆ ಮಡದಿ ಸುಖ ಇಲ್ಲ, ಮಕ್ಕಳ ಕಾಟ ಇಲ್ಲ ಕಾಡಲ್ಲಿ ಹುಟ್ಟಿದವನು ಕಾಡಲ್ಲೇ ಬೆಳೆದವನು ನಾ ಹೆಂಡೂರಿಲ್ಲದವನು, ನಾ ಪುಂಡ್ಯಾರ ನನ ಕಂದಾ ಈ ಪುಂಡ್ಯಾರನ ವಂದ್ಗೆ ನೀ ಹುಡುಗಾಟ ಆಡಬೇಡ ಎಂದು ಎಚ್ಚರಿಸುತ್ತಾರೆ ಮಂಟೇದಲಿಂಗಯ್ಯರವರು.

ಆಗ ಕೆಂಪಾಚಾರಿಯು ಬೆಂಕಿಕೆಂಡ ಕೊಟ್ಟುಡು ಅಂತಾ ಕೇಳ್ತಾಇದ್ದಿ ಪರದೇಶಿ, ನಾನು ಇಕ್ಕಳದಲ್ಲಿ ಕೆಂಡ ತಂದುಕೊಡ್ತೀನಿ ನಿನ್ನ ಎರಡು ಹಸ್ತದಿಂದ ಇಸ್ಕೊಬೇಕು ಎಂದು ಕೆಂಡವನ್ನು ತಂದು ಮಂಟೇದಯ್ಯನವರ ಕೈಗೆ ಹಾಕುತ್ತಾನೆ. ಆದರೆ ಬೆಂಕಿಕೆಂಡ ಅಂದರೆ ಅಗ್ನಿದೇವತೆ ಅವರ ಕೈ ಸುಡಲಿಲ್ಲ. ಯಾಕೆಂದರೆ ಮಂಟೇದಯ್ಯನವರು ಅರಿಷಡ್ವರ್ಗಗಳನ್ನು ಮೀರಿ ದೈವತ್ವಕ್ಕೇರಿದ್ದಾರೆ. ಯಾವುದೇ ಅವಗುಣಗಳು ಅವರಲ್ಲಿದ್ದರೆ ಸುಡುತ್ತಿತ್ತೋ ಏನೊ, ಆದರೆ ಆ ಅಗ್ನಿದೇವತೆ ಕಣ್ಣೀರು ಸುರಿಸುತ್ತಾ ಕೆಂಪಾಚಾರಿಯ ಕಣ್ಣಿಗೆ ಬೆಂಕಿಕೆಂಡ ಧಗಧಗನೆ ಉರಿವಂತೆ ಕಂಡು ಮಂಟೇದಯ್ಯನವರ ಕೈಗೆ ಬರುವಾಗ ಕೆಂದಾವರೆ ಪುಷ್ಪವಾಗಿ ಬರುತ್ತಾಳೆ. ಬೆಂಕಿಕೆಂಡ ತಿರ್ಕವರ್ಕನ ಕೈಗೆ ಕೊಟ್ಟೆ ಅಂತೇಳಿ ಕೆಂಪಾಚಾರಿ ಕಿಲಕಿಲನೆ ನಗುತ್ತಾನೆ. ಈ ನಗು ಮುಂದೆ ಕೆಂಪಾಚಾರಿಯ ಜೀವನದಲ್ಲಿ ಇನ್ನೆಂದೂ ಬರದು ಎನ್ನುವಂತೆ ಕೆಂಪಾಚಾರಿ ಕೊಟ್ಟ ಕೆಂಡವನ್ನು ಜೋಳಿಗೆಗೆ ಹಾಕ್ಕೊಂಡು ಮಂಟೇದಯ್ಯನವರು ಹೊರಟುಬಿಡುತ್ತಾರೆ.

ಕೆಂಪಾಚಾರಿಯನ್ನು ವರದಿಂದ ಕೊಟ್ಟ ಮಂಟೇದಯ್ಯನವರು ಅವನ ದರ್ಪಸದೌರ್ಜನ್ಯವನ್ನು ಅಡಗಿಸಲೆಂದೇ ಈ ಸಂದರ್ಭವನ್ನು ನಿರ್ಮಿಸಿದಂತಿದೆ. ಯಾವ ದ್ವೇಷ ಶಾಪಗಳು ಮಂಟೇದಯ್ಯನವರನ್ನು ಸೋಂಕಲು ಸಾಧ್ಯವಿಲ್ಲ. ಕಾರಣ ಅವರೇ ಬೆಂಕಿಯಂತಿರುವುದರಿಂದ ಅವಗುಣಗಳೆಲ್ಲ ಅವರನ್ನು ಸೋಂಕಿ ಸುಟ್ಟು ಕರಕಲಾಗುತ್ತವೆ. ತಾನು ಕೊಟ್ಟ ಶಿಶು ದರ್ಪದಿಂದ ಕೂಡಿದ್ದ ಕೆಂಪಾಚಾರಿಯನ್ನು ತಿದ್ದಿ ಮಾನವೀಯ ಸಾಕಾರ ಮೂರ್ತಿಯನ್ನಾಗಿ ಮಾಡುವಲ್ಲಿ ಮಂಟೇಸ್ವಾಮಿಯು ಮಹತ್ವ ಸಾರುತ್ತ, ತಾನು ಕೊಟ್ಟ ಮಗ ತನಗೇ ಶಿಶುಮಗನಾಗಬೇಕೆಂಬುದು ಈ ಕಾವ್ಯದಲ್ಲಿ ಗುರುತರವಾದ ಅಂಶವಾಗಿದೆ.

ಆಕರ ಗ್ರಂಥ

ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ ಜನಪದ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಯ ಹಂಪಿ, ವಿದ್ಯಾರಣ್ಯ.

❖❖❖

ಭಾರತೀಯ ಸಿನಿಮಾದಲ್ಲಿ ಕ್ರೌರ್ಯ ಮನೋ–ಸಾಮಾಜಿಕ ವಿಶ್ಲೇಷಣೆ

ಡಾ. ನಿರೀಕ್ಷಣ್ ಸಿಂಗ್ ಗೌಗಿ ಎಸ್.ಕೆ.
ಸಹಾಯಕ ಪ್ರಾಧ್ಯಾಪಕ, ಸಮಾಜಕಾರ್ಯ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೆಟ್ಟಂಪಾಡಿ, ಪುತ್ತೂರು, ದ.ಕ. ಜಿಲ್ಲೆ–574259

ಲೇಖನ ಸಾರಾಂಶ

ಭಾರತೀಯ ಸಿನಿಮಾ ಬಹಳ ಹಿಂದಿನಿಂದಲೂ ಹಿಂಸೆಯ ಚಿತ್ರಣ ಸೇರಿದಂತೆ ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಈ ಲೇಖನವು ಭಾರತೀಯ ಸಿನಿಮಾಗಳಲ್ಲಿನ ಹಿಂಸೆಯ ಮನೋ–ಸಾಮಾಜಿಕ ವಿಶ್ಲೇಷಣೆಯನ್ನು ನಡೆಸುತ್ತದೆ ಮತ್ತು ಸಿನಿಮಾದ ಚಿತ್ರಣ, ಪ್ರಭಾವವನ್ನು ಪರಿಶೀಲಿಸುತ್ತದೆ. ಸಿನಿಮೀಯ ಹಿಂಸೆಯು ಪ್ರೇಕ್ಷಕರಲ್ಲಿ ವರ್ತನೆಗಳು, ನಡವಳಿಕೆಗಳು ಮತ್ತು ಗ್ರಹಿಕೆಗಳನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ಈ ಲೇಖನವು ಅನ್ವೇಷಿಸಲು ಪ್ರಯತ್ನಿಸುತ್ತದೆ. ಇದು ಹಿಂಸಾತ್ಮಕ ವಿಷಯದ ಚಿತ್ರಣ ಮತ್ತು ತಾಂತ್ರಿಕ ಪ್ರಗತಿಗಳ ಪ್ರಭಾವವನ್ನು ವಿಶ್ಲೇಷಿಸುತ್ತದೆಯಲ್ಲದೆ, ಸಿನಿಮೀಯ ಹಿಂಸೆಯನ್ನು ನಿಯಂತ್ರಿಸುವಲ್ಲಿ ಸೆನ್ಸರ್ ಮಂಡಳಿ, ನಿಯಮಗಳು ಮತ್ತು ಪ್ರೇಕ್ಷಕರ ಪಾತ್ರವನ್ನು ಲೇಖನವು ಪರಿಶೀಲಿಸುತ್ತದೆ.

ಪೀಠಿಕೆ

ಭಾರತೀಯ ಸಿನಿಮಾ ದೇಶದ ಶ್ರೀಮಂತ ಸಂಸ್ಕೃತಿಯ ಪ್ರಮುಖ ರಾಯಬಾರಿ. ಆದರೆ, ಕಳೆದ ಕೆಲವು ವರ್ಷಗಳಿಂದ ಭಾರತೀಯ ಸಿನಿಮಾದಲ್ಲಿ ಕ್ರೌರ್ಯವನ್ನು ವ್ಯಕ್ತಪಡಿಸುತ್ತಿರುವ ರೀತಿ ಸಿನಿಮಾ ರಂಗವು ವಿಭಿನ್ನ ಮಾರ್ಗದಲ್ಲಿ ಮುಂದುವರಿಯುತ್ತಿರುವುದನ್ನು ಸೂಚಿಸುತ್ತದೆ.

ಸಿನಿಮಾ ರಂಗವನ್ನು ಉದ್ಯಮವಾಗಿ–ಇಂಡಸ್ಟ್ರಿಯಾಗಿ ಪರಿಗಣಿಸಲಾಗುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಯಾವ ಸಂಸ್ಥೆಯು ನಿರಂತರವಾಗಿ ಹೊಸತನಗಳಿಗೆ ತೆರೆದುಕೊಳ್ಳುತ್ತದೋ, ಆ ಸಂಸ್ಥೆ ಹೆಚ್ಚಿನ ಸಮಯದವರೆಗೆ ಗ್ರಾಹಕರನ್ನು ಆಕರ್ಷಿಸಿ ಯಶಸ್ವಿ ಸಂಸ್ಥೆಯಾಗಿ ಹೆಚ್ಚು ಸಮಯ ಉಳಿಯುತ್ತದೆ. ಹಾಗೆಯೇ, ಸಿನಿಮಾ ರಂಗದಲ್ಲಿಯೂ ಸಹ ಕಥೆಯನ್ನು ವಿನೂತನವಾಗಿ ಹೇಳುವ ರೀತಿ ಹೊಸ ಪ್ರಯತ್ನಗಳಿಗೆ ಅನುವು ಮಾಡಿಕೊಟ್ಟಿದೆ. ಕ್ರೌರ್ಯವನ್ನು ವಿಭಿನ್ನವಾಗಿ(ಹೆಚ್ಚು ವಿದ್ರಾವಕವಾಗಿ) ತೋರಿಸುವ ಪ್ರವೃತ್ತಿ ಹೆಚ್ಚುತ್ತಿರುವುದು ಇದಕ್ಕೆ ಒಂದು ಉದಾಹರಣೆ.

ಸಿನಿಮಾ/ ವಿದ್ಯುನ್ಮಾನ ಮಾಧ್ಯಮವು ನಮ್ಮ ಗ್ರಹಿಕೆಯನ್ನು ರೂಪಿಸುವ ಬಹುದೊಡ್ಡ ಶಕ್ತಿ ಕೇಂದ್ರವಾಗಿದೆ. ಹೆಚ್ಚಿನ ಮನೋವಿಜ್ಞಾನ ಸಂಶೋಧನೆಗಳು ಹಿಂಸಾತ್ಮಕ ದೃಶ್ಯ ಮಾಧ್ಯಮಗಳು ಮನುಷ್ಯನ ವರ್ತನೆ, ಅಸ್ವಸ್ಥತೆ ಮತ್ತು ಆತನ ಮಾನಸಿಕ ಸ್ಥಿರತೆ ಮುಂತಾದವುಗಳ ಮೇಲೆ ಬೀರುವ ಪ್ರಭಾವವನ್ನು ಕೇಂದ್ರವಾಗಿಸಿಕೊಂಡಿವೆ ಮತ್ತು ದೃಶ್ಯ ಮಾಧ್ಯಮಗಳ ಮತ್ತು ಮನುಷ್ಯನ ವರ್ತನೆಗಳ ನಡುವೆ ಇರುವ ಸಂಭಾವ್ಯ

ಸಂಬಂಧವನ್ನು ಸಹ ದೃಢಪಡಿಸಿವೆ (Nnenna, 2022).

ಮೂಕಿ ಚಲನಚಿತ್ರಗಳ ಸಮಯದಲ್ಲಿ ಮತ್ತು ಪೌರಾಣಿಕ ಕಥೆ ಹಂದರ ಇರುವ ಸಿನಿಮಾಗಳಿಗೆ ಮಾತ್ರ ಸೀಮಿತವಾಗಿದ್ದ ಕಾಲದಲ್ಲಿ ಕ್ರೌರ್ಯವನ್ನು ಹೆಚ್ಚು ಘೋರವಾಗಿ ಬಿಂಬಿಸದೆ, ಸೌಮ್ಯ ರೂಪದಲ್ಲಿ ಪ್ರದರ್ಶಿಸಲಾಗುತ್ತಿತ್ತು. ಹೆಚ್ಚಾಗಿ ಕಥೆಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗುತ್ತಿತ್ತು. ಉದಾಹರಣೆಗೆ 1913ರಲ್ಲಿ ದಾದಾ ಸಾಹೇಬ್ ಫಾಲ್ಕೆ ಅವರಿಂದ ನಿರ್ದೇಶಿಸಲ್ಪಟ್ಟ ರಾಜ ಹರಿಶ್ಚಂದ್ರ, 1919ರಲ್ಲಿ ರುಸ್ತೊಂಜಿ ಧೋತಿವಾಲ ಅವರಿಂದ ನಿರ್ದೇಶಿಸಲ್ಪಟ್ಟ ಬಿಲ್ವ ಮಂಗಲ್, 1934ರಲ್ಲಿ ವೈ.ವಿ. ರಾವ್ ಅವರಿಂದ ನಿರ್ದೇಶಿಸಲ್ಪಟ್ಟ ಸತಿ ಸುಲೋಚನಾ ಮತ್ತು ನಾರಾಯಣನ್ ಅವರಿಂದ ನಿರ್ದೇಶಿಸಲ್ಪಟ್ಟ ಶ್ರೀನಿವಾಸ ಕಲ್ಯಾಣ(ತಮಿಳು) ಮುಂತಾದವುಗಳು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಬಿಡುಗಡೆಗೊಂಡ ಸಿನಿಮಾಗಳು ಹೆಚ್ಚಾಗಿ ಅಂದಿನ ಸಾಮಾಜಿಕ, ರಾಜಕೀಯ ಮನಸ್ಥಿತಿಯ ಮೇಲೆ ರೂಪಗೊಳ್ಳುತ್ತಿದ್ದವು. ಭಾರತೀಯ ಸಿನಿಮಾ ರಂಗದಲ್ಲಿ ಸ್ವಾತಂತ್ರ್ಯ ನಂತರದ ಸಮಯವನ್ನು ಸ್ವರ್ಣಯುಗ ಎಂದು ಪರಿಗಣಿಸಲಾಗುತ್ತದೆ. ಅಂದಿನ ನಿರ್ದೇಶಕರುಗಳು ಉದಾಹರಣೆಗೆ ಸತ್ಯಜಿತ್ ರೇ, ಬಿಮಲ್ ರಾಯ್, ಗುರುದತ್(ಕನ್ನಡದಲ್ಲಿ ಪುಟ್ಟಣ್ಣ ಕಣಗಾಲ್) ಮುಂತಾದವರು ಪ್ರಮುಖವಾಗಿ ಬಲವಾದ ಕಥೆಗೆ ಆದ್ಯತೆಯನ್ನು ನೀಡಿ ಸಿನಿಮಾವನ್ನು ನಿರ್ದೇಶಿಸುತ್ತಿದ್ದರು.

ಆದರೆ, 1970ರ ದಶಕಗಳಲ್ಲಿ ಬಿಡುಗಡೆಗೊಂಡ ಸಿನಿಮಾಗಳು ಕ್ರೌರ್ಯವನ್ನು ಭಿನ್ನವಾಗಿ ತೋರಿಸುವ ಹೊಸ ಪ್ರಕಾರಕ್ಕೆ(Genre) ಅನುವು ಮಾಡಿಕೊಟ್ಟವು. 1970ರ ದಶಕದಲ್ಲಿ ಜಾಗತಿಕ ಸಿನಿಮಾಗಳ ಪ್ರಭಾವದಿಂದಾಗಿ ಮತ್ತು ಬದಲಾದ ಪ್ರೇಕ್ಷಕರ ಅಭಿರುಚಿಗಳಿಂದಾಗಿ ಭಾರತೀಯ ಸಿನಿಮಾಗಳಲ್ಲಿ ಮುಕ್ತವಾಗಿ ಕ್ರೌರ್ಯವನ್ನು ಚಿತ್ರಿಸಲಾಯಿತು.

ಸಿನಿಮಾಗಳಲ್ಲಿ ಬಿಂಬಿಸುವ ಕ್ರೌರ್ಯವನ್ನು ಸಾಂಸ್ಕೃತಿಕ ಆಯಾಮದಲ್ಲಿ ನೋಡುವುದಾದರೆ, ಭಾರತದ ವಿಭಿನ್ನ ಪ್ರದೇಶಗಳ ಭಿನ್ನಸಂಸ್ಕೃತಿಗಳು ಸಹ ಸಿನಿಮಾಗಳ ಮೇಲೆ ಪ್ರಭಾವ ಬೀರಿವೆ. ವಿವಿಧ ಭಾಷೆಗಳ ಸಿನಿಮಾಗಳಲ್ಲಿ ಕ್ರೌರ್ಯವನ್ನು ಚಿತ್ರಿಸುವ ಬಗೆಯಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ ಹಿಂದಿ ಸಿನಿಮಾಗಳಲ್ಲಿ ಮತ್ತು ತಮಿಳು ಸಿನಿಮಾಗಳಲ್ಲಿ ಕ್ರೌರ್ಯತೆಯ ತೀವ್ರತೆಯ ಮಟ್ಟ (ಬೇರೆ ಭಾಷೆಗಳ ಸಿನಿಮಾಗಳಿಗೆ ಹೋಲಿಸಿದರೆ) ಹೆಚ್ಚು.

ಹಾಗೆಯೇ, ಸಿನಿಮಾಗಳಲ್ಲಿ ಹೊಸ ತಂತ್ರಜ್ಞಾನದ ಅಳವಡಿಕೆಯ ಪ್ರಭಾವದಿಂದಾಗಿ ಸಿನಿಮಾಗಳಲ್ಲಿ ಕ್ರೌರ್ಯವನ್ನು ಗ್ರಾಫಿಕ್ಸ್ ಬಳಸಿ ಹೆಚ್ಚು ನೈಜವಾಗಿ ತೋರಿಸುವ ಪ್ರವೃತ್ತಿ ಹೆಚ್ಚಾಯಿತು. ಉದಾಹರಣೆಗೆ ಸಿನಿಮಾಗಳಲ್ಲಿ ಬಳಸುವ ಆಯುಧಗಳು, ಸಾಹಸಮಯ ದೃಶ್ಯಗಳು, ಚಿಮ್ಮುವ ರಕ್ತ, ಕೊಲೆ ಮತ್ತು ಬಲತ್ಕಾರದಂತಹ ಹಿಂಸಾತ್ಮಕ ದೃಶ್ಯಗಳು. ಇದರ ಪರಿಣಾಮವಾಗಿ ಕ್ರೌರ್ಯವನ್ನು ಕಲ್ಪನಾತ್ಮಕವಾಗಿ(Fiction) ತೋರಿಸುವ ಮತ್ತು ನೈಜವಾಗಿ ಚಿತ್ರಿಸುವ ನಡುವಿನ ವ್ಯತ್ಯಾಸವು ಕ್ಷೀಣವಾಗಿ ಜನರು ಕ್ರೌರ್ಯವನ್ನು ನೋಡುವ ಮತ್ತು ಗ್ರಹಿಸುವಿಕೆಯ ಮೇಲೆ ಪರಿಣಾಮ ಬೀರಿರುವುದನ್ನು ಗಮನಿಸಬಹುದು.

ಪರದೆಯ ಮೇಲೆ ಮೂಡಿ ಬರುವ ಕ್ರೌರ್ಯ ಜನರ ಮನಸ್ಸಿನ ಮೇಲೆ ಬೀರಬಹುದಾದ ಋಣಾತ್ಮಕ ಪ್ರಭಾವಗಳ ಮೇಲೆ ಮನಶಾಸ್ತ್ರಜ್ಞರು, ಸಮಾಜ

ಕಾರ್ಯಕರ್ತರು ಮತ್ತು ಸಂಶೋಧಕರು ಹಲವು ಸಂಶೋಧನೆ/ ಅಧ್ಯಯನವನ್ನು ಕೈಗೊಂಡಿರುತ್ತಾರೆ. ಸಿನಿಮಾಗಳಲ್ಲಿನ ಕ್ರೌರ್ಯ ಅಥವಾ ಹಿಂಸೆಯ ಬಗೆಗಿನ ಕಾಳಜಿಯು ಸಿನಿಮಾ ಮಾಧ್ಯಮದ ಉಗಮದ ಕಾಲದಿಂದಲೂ ಅಸ್ತಿತ್ವದಲ್ಲಿರುವ ಚರ್ಚೆಯ ವಿಷಯವಾಗಿದೆ. ಸಿನಿಮಾ ಮಾಧ್ಯಮಗಳಲ್ಲಿ ಹಿಂಸಾತ್ಮಕ ದೃಶ್ಯ ನಿರೂಪಣಾ ಶೈಲಿಯೂ 60–70 ವರ್ಷಗಳ ಇತಿಹಾಸವನ್ನು ಹೊಂದಿದೆ. ಸಿನಿಮಾಗಳಲ್ಲಿರುವ ಹಿಂಸೆಯು ಯುವ ಪೀಳಿಗೆಯ ದಾರಿ ತಪ್ಪುವ ಹಾಗೆ ಮಾಡಿದ್ದಲ್ಲದೆ, ಯುವ ಜನರ ನೈತಿಕ ಮೌಲ್ಯಗಳ ಬುನಾದಿಯನ್ನು ನಾಶಪಡಿಸಿತ್ತು ಎಂದು ಕುಮಾರ್ ಅವರು(2019) ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಲೈಂಗಿಕ ದೃಶ್ಯ ಮತ್ತು ಕ್ರೌರ್ಯ

ಆರಂಭಕಾಲದ ಭಾರತೀಯ ಸಿನಿಮಾಗಳಲ್ಲಿ ಪ್ರದರ್ಶಿಸಲಾಗುತ್ತಿದ್ದ ಲೈಂಗಿಕ ದೃಶ್ಯಗಳು ಸಂಪ್ರದಾಯಬದ್ಧ ಸಂಸ್ಕೃತಿಯ ನೈತಿಕತೆಯ ಚೌಕಟ್ಟನ್ನು ಮೀರುತ್ತಿರಲಿಲ್ಲ. ನೈತಿಕತೆಯ ಚೌಕಟ್ಟಿನ ಒಳಗೆ ಇರುತ್ತಿದ್ದ ಶೃಂಗಾರದ ದೃಶ್ಯಗಳು ಅಷ್ಟಾಗಿ ಮನಸ್ಸಿನ ಮೇಲೆ ಪ್ರಭಾವ ಬೀರದೆ ಕುಟುಂಬದ ಎಲ್ಲ ಸದಸ್ಯರು ಒಟ್ಟಿಗೆ ಕೂತು ವೀಕ್ಷಿಸಬಹುದಾದ ರೀತಿಯಲ್ಲಿ ಇರುತ್ತಿದ್ದವು. ಜಾಗತೀಕರಣದ ಪ್ರಭಾವಕ್ಕೆ ಸಿಲುಕಿದ ಸಿನಿಮಾ ರಂಗವು ಲೈಂಗಿಕ ದೃಶ್ಯಗಳನ್ನು ನೈತಿಕತೆಯ ಚೌಕಟ್ಟಿನ ಆಚೆಗೆ ತಂದು ನಿಲ್ಲಿಸಿವೆ. ಸಿನಿಮಾಗಳಿಗೆ ನೀಡುವ ಸೆನ್ಸಾರ್ ಪ್ರಮಾಣಪತ್ರವನ್ನು(U/A/UA) ಗಮನಿಸಿ ಸಿನಿಮಾಗಳನ್ನು ನೋಡುವ ಪ್ರೇಕ್ಷಕ ವರ್ಗದ ಗಾತ್ರವು ಕ್ಷೀಣಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ.

1990ರ ದಶಕದ ಹಿಂದಿನ ಸಿನಿಮಾಗಳಲ್ಲಿ ಲೈಂಗಿಕತೆ ಮತ್ತು ಕ್ರೌರ್ಯ ಎರಡು ಭಿನ್ನ ದೃಶ್ಯಾವಳಿಗಳಂತೆ ಚಿತ್ರಿಸಲಾಗುತ್ತಿತ್ತು. ಆದರೆ, ಇಂದಿನ ಸಿನಿಮಾಗಳಲ್ಲಿ ಲೈಂಗಿಕ ದೃಶ್ಯಾವಳಿಗಳನ್ನು ಹಿಂಸೆಯೊಂದಿಗೆ ಮಿಶ್ರ ಮಾಡಿ (ಉದಾಹರಣೆಗೆ, ಬಲತ್ಕಾರದಂತಹ ದೃಶ್ಯಗಳು) ನೈಜವಾಗಿ ತೋರಿಸುವ ಶೈಲಿಯೂ ಸಾಮಾನ್ಯವಾಗಿದೆ. ಇಂಥ ದೃಶ್ಯಗಳು ಮೌಲ್ಯ ಆಧಾರಿತ ಕುಟುಂಬ ವ್ಯವಸ್ಥೆ, ಸಂಪ್ರದಾಯಬದ್ಧ ಸಾಮಾಜಿಕ ಮೌಲ್ಯಗಳನ್ನು ಮತ್ತು ಅಸ್ತಿತ್ವದಲ್ಲಿರುವ ಕಾನೂನಿನ ಉಪಬಂಧಗಳನ್ನು(Indecent Representation of Women (Prohibition) Act, 1986) ಅಣುಕಿಸುವ ಹಾಗೆ ಪರದೆಯ ಮೇಲೆ ಮೂಡಿ ಬರುತ್ತಿವೆ.

ಲೈಂಗಿಕ ದೃಶ್ಯಾವಳಿಗಳನ್ನು ಮುಕ್ತವಾಗಿ ಪ್ರದರ್ಶಿಸುವ ಪ್ರವೃತ್ತಿಗೆ ಸಾರ್ವಜನಿಕವಾಗಿ ಸಿಗುವ ಮನ್ನಣೆಯು ಸಂಶೋಧಿಸಬೇಕಾದ ಅಂಶವಾಗಿ ಮಾರ್ಪಟ್ಟಿರುವುದು ಇದಕ್ಕೆ ಸಾಕ್ಷಿ. ಸಿನಿಮಾಗಳು ಮನುಷ್ಯನ ಲೈಂಗಿಕ ವರ್ತನೆಯನ್ನು ಪ್ರಭಾವಿಸಿರುವ ರೀತಿಯನ್ನು ಆಧಾರವಾಗಿಸಿಕೊಂಡ ಹಲವು ಸಂಶೋಧನೆಗಳಿಂದ ತಿಳಿದು ಬಂದ ಫಲಿತಾಂಶವೇನೆಂದರೆ, ವ್ಯಕ್ತಿಗಳ ಲೈಂಗಿಕ ಮನೋಭಿಲಾಷೆ ಮತ್ತು ಸಾಮಾನ್ಯವರ್ತನೆಯನ್ನು ಲೈಂಗಿಕ ಆಕ್ರಮಣಶೀಲ ವರ್ತನೆಯನ್ನಾಗಿ ಪರಿವರ್ತಿಸುವ ಶಕ್ತಿ ಸಿನಿಮಾಗಳಿಗಿದೆ ಎಂದು ಗುಪ್ತಾ(2019) ಅವರು ತಮ್ಮ ಸಂಶೋಧನಾ ಲೇಖನದಲ್ಲಿ ತಿಳಿಸಿದ್ದಾರೆ.

ದೈಹಿಕ ಯಾತನೆ/ ಹಿಂಸೆ

ಭಾರತೀಯ ಸಿನಿಮಾ ರಂಗವು ಯಾತನೆ/ ಹಿಂಸೆಯನ್ನು ಹೊಸ ಕಥೆ

ನಿರೂಪಣೆಯಾಗಿ ಆಯ್ಕೆ ಮಾಡಿಕೊಂಡಿರುವುದು ಇತ್ತೀಚಿನ ಸಿನಿಮಾಗಳಲ್ಲಿ ಮೂಡಿ ಬಂದಿರುವ ದೃಶ್ಯಾವಳಿಗಳನ್ನು ವೀಕ್ಷಿಸಿದಾಗ ಮನವರಿಕೆಯಾಗುತ್ತದೆ. ಸೆನ್ಸಾರ್ ಮಂಡಳಿಯವರು ಅತಿಯಾದ ಕ್ರೌರ್ಯವಿರುವ ದೃಶ್ಯಾವಳಿಗಳನ್ನು ಕತ್ತರಿಸುವ ಅಥವಾ ಮಾರ್ಪಾಡು ಮಾಡುವ ಸಲಹೆ ನೀಡಿದರೂ ಸಹ ಹೆಚ್ಚಿನ ಸಿನಿಮಾ ತಯಾರಕರು 'A' ಪ್ರಮಾಣ ಪತ್ರವನ್ನು ಪಡೆದು, ಮರು ಸಂಕಲನಕ್ಕೆ ಒಳಪಡಿಸದೆ ಸಿನಿಮಾವನ್ನು ಬಿಡುಗಡೆ ಮಾಡಿರುವ ಉದಾಹರಣೆಗಳು ಸಾಕಷ್ಟಿವೆ.

ಸಿನಿಮಾ ರಂಗ ಕೈಗಾರಿಕಾ ಸ್ವರೂಪವನ್ನು ಪಡೆಯುತ್ತಾ ಪ್ರಗತಿ ಹೊಂದಿದ ಹಾಗೆ ಕೊಲೆ, ಚಿತ್ರಹಿಂಸೆ, ಅತ್ಯಾಚಾರ, ಭಯೋತ್ಪಾದನೆ, ಸೇಡು ಮುಂತಾದವುಗಳನ್ನು ಸಿನಿಮಾ ಕಥೆಗಳ ಭಾಗವನ್ನಾಗಿ ಮಾಡಲಾಗಿದೆ. ಮಾನವನ ಜೀವನಕ್ಕೆ ನೋವು ಮತ್ತು ಸಂಕಟವನ್ನು ಉಂಟುಮಾಡುವ ಚಟುವಟಿಕೆ ಮುಂತಾದವುಗಳು ಸಿನಿಮಾಗಳ ಮುಖಾಂತರ ಅದ್ಭುತ ಪ್ರಸ್ತುತಿಗಳನ್ನಾಗಿ ಪರಿವರ್ತಿಸಿ ಪ್ರೇಕ್ಷಕರಿಗೆ ಸಂತೋಷವನ್ನು ನೀಡುವ ಕಲಾತ್ಮಕ ರೂಪಗಳಾಗಿ ಪರಿವರ್ತಿನೆಯಾಗಿದೆ ಎಂದು ಅನೇಕ ಸಿನಿಮಾ ವಿಮರ್ಶಕರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಹಾಗೆಯೇ, ಹಿಂಸೆಯೂ ಒಂದು ಕಲೆಯಂತೆ ವೈಭವೀಕರಣ ನಿರೂಪಣೆಯಾಗಿ ಪರಿವರ್ತನೆ ಆಗಿರುವುದನ್ನು ಮಥಾಯಿ(2015) ಅವರು ಗಮನಿಸಿದ್ದಾರೆ.

ಅಶ್ಲೀಲ ಭಾಷೆ/ ಪದಗಳ ಬಳಕೆ

1990ರ ದಶಕದ ಹಿಂದಿನ ಸಿನಿಮಾಗಳ ಸಂಭಾಷಣೆಯನ್ನು ಗಮನಿಸಿದಾಗ, ಭಾಷಾ ಪ್ರೌಢತೆ, ಪದಗಳ ಗಾಂಭೀರ್ಯ, ಉಚ್ಚಾರಣೆ, ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಮತ್ತು ಏಕಾರ್ಥ ಸಂಭಾಷಣೆ, ಸಾಂಕೇತಿಕತೆ, ವ್ಯಂಗ್ಯ, ತರ್ಕ ಮುಂತಾದವುಗಳು ಇದ್ದುದು ಗೊತ್ತಾಗುತ್ತದೆ. ಈಚಿನ ವರ್ಷಗಳಲ್ಲಿ ದ್ವಂದ್ವಾರ್ಥವುಳ್ಳ ಪದಗಳ ಬಳಕೆ ಅಥವಾ ಅಶ್ಲೀಲ ಪದಗಳ ಬಳಕೆಯುಳ್ಳ ಸಿನಿಮಾಗಳ ಸಂಖ್ಯೆ ಹೆಚ್ಚಿರುವುದು ಮತ್ತು ಅಂತಹ ಸಂಭಾಷಣೆಯನ್ನು ಮೆಚ್ಚುವ ಆಹ್ವಾದಿಸುವ ಪ್ರೇಕ್ಷಕರ ಸಂಖ್ಯೆ ಹೆಚ್ಚಿರುವುದು ವಿಪರ್ಯಾಸ. ಹಾಸ್ಯಕ್ಕಾಗಿ ಅಶ್ಲೀಲ ಪದಗಳ ಬಳಕೆ ಹಿಂದಿನ ಮೆಚ್ಚಿನ ಸಿನಿಮಾಗಳ ಶೈಲಿಯನ್ನು ಮರೆಮಾಚಿರುವುದು ಇಂದಿನ ನವಯುಗ ಸಿನಿಮಾಗಳಲ್ಲಿ ಹೆಚ್ಚು ಕಾಣುತ್ತಿದೆ.

ತಂತ್ರಜ್ಞಾನದ ಬಳಕೆ

ನಾಟಕ ರಂಗದಲ್ಲಿ ಬಳಸಲಾಗುತ್ತಿದ್ದ ತಂತ್ರಜ್ಞಾನಕ್ಕೂ ಈಗಿನ ಸಿನಿಮಾಗಳಲ್ಲಿ ಕಂಡುಬರುವ ಆಧುನಿಕ ತಂತ್ರಜ್ಞಾನದ ಅಳವಡಿಕೆಗೂ ಅಜಗಜಾಂತರವಿದೆ. ಇಂದಿನ ಕಂಪ್ಯೂಟರ್ ಆಧಾರಿತ ಚಿತ್ರಣ (Comuputer-generated Imagery-CGI), ಗ್ರಾಫಿಕ್ಸ್ (VFX) ತಂತ್ರಜ್ಞಾನ ಮುಂತಾದವುಗಳ ಅಳವಡಿಕೆಯಿಂದ ಸಿನಿಮಾಗಳಲ್ಲಿನ ದೃಶ್ಯಗಳ ಶ್ರೀಮಂತಿಕೆ ಮತ್ತು ಗುಣಮಟ್ಟದಲ್ಲಿನ ಸುಧಾರಣೆಗಳು ಹೆಚ್ಚಿನ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿವೆ. ಆದರೆ, ಹಿಂಸಾತ್ಮಕ ದೃಶ್ಯಾವಳಿಗಳನ್ನು ವೈಭವಿಕರಿಸಲು ಇದೇ ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತಿರುವುದು ಸಿನಿಮಾ ತಯಾರಕಾರ ನೈತಿಕ ಚೌಕಟ್ಟನ್ನು ಪ್ರಶ್ನಿಸುವ ಹಾಗೆ ಮಾಡಿದೆ. ಈ ಹಿಂಸಾತ್ಮಕ ದೃಶ್ಯಗಳು ವೀಕ್ಷಿಸಲು ರೋಮಾಂಚನಕಾರಿಯಾಗಿದ್ದರೂ ಸಹ ಇದರ ಪರಿಣಾಮ ವಿನಾಶಕಾರಿ ಹಾಗೂ

ಹಾನಿಕಾರಕವೂ ಆಗಿದೆ. ಇದು ಮಕ್ಕಳು ಮತ್ತು ಯುವ ಪೀಳಿಗೆಯವರು ಸಿನಿಮಾಗಳಿಂದ ಪ್ರೇರಿತವಾಗಿ ಹಿಂಸಾತ್ಮಕ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದರ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವ ಅಂಶವನ್ನು ಹಲವಾರು ಸಂಶೋಧಕರು ತಮ್ಮ ಸಂಶೋಧನಾ ಲೇಖನಗಳಲ್ಲಿ ಸ್ಪಷ್ಟಪಡಿಸಿದ್ದಾರೆ(Thompson, 2021).

ಸಿನಿಮಾಗಳಲ್ಲಿ ಕ್ರೌರ್ಯದ ವೈಭವೀಕರಣಕ್ಕೆ OTT (Over-The-Top) ವೇದಿಕೆಗಳ ಕೊಡುಗೆ

ಓವರ್–ದಿ–ಟಾಪ್(OTT Platform) ವೇದಿಕೆಗಳು, ಉದಾಹರಣೆಗೆ NETFLIX, Amazon Prime, Disney Hotstar, ZEE5 ಮುಂತಾದವುಗಳು ಮನರಂಜನ ಉದ್ಯಮವನ್ನು ಮುಂದಿನ ಹಂತಕ್ಕೆ ತಂದು ನಿಲ್ಲಿಸಿವೆ. ಪ್ರೇಕ್ಷಕ ಇಂದು ಮನರಂಜನೆಗಾಗಿ ಚಿತ್ರಮಂದಿರಗಳಿಗೆ ಹೋಗುವ ಅವಶ್ಯಕತೆ ಇಲ್ಲವಾಗಿದೆ. ಪ್ರೇಕ್ಷಕರಿಗೆ ಅಪರಾಧ ಆಧಾರಿತ ಸರಣಿಗಳಲ್ಲಿ ಹಿಂಸಾತ್ಮಕ ದೃಶ್ಯಗಳ ಸೇರ್ಪಡೆಯು ಗಮನಾರ್ಹವಾದ ಸಾಮಾಜಿಕ ಮಾನಸಿಕ ಪರಿಣಾಮಗಳನ್ನು ಹೊಂದಿದೆ ಜನರು ತಮ್ಮ ಸ್ಮಾರ್ಟ್‌ಫೋನುಗಳಲ್ಲಿ ಲಭ್ಯವಿರುವ ಔಖಿಖಿ ವೇದಿಕೆಗಳ ಮುಖಾಂತರ ತನಗಿಷ್ಟವಾದ ಸಿನಿಮಾ ಪ್ರಕಾರಗಳನ್ನು ಯಾವ ಸಮಯದಲ್ಲಾದರೂ ವೀಕ್ಷಿಸಬಹುದು. ಚಿಕ್ಕಮಕ್ಕಳ ಕೈಯಲ್ಲೂ ಇಂದು ಮೊಬೈಲುಗಳು ಇರುವುದರಿಂದ ಮನೆಯ ಹಿರಿಯರಿಗೆ ಗೊತ್ತಾಗದಂತೆ ವೀಕ್ಷಿಸುವ ಅವಕಾಶ ಮಕ್ಕಳಿಗೂ ಲಭಿಸಿದೆ.

OTT ವೇದಿಕೆಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಪ್ರಕಟಣೆಯ ಪ್ರಕಾರ OTT ವೇದಿಕೆಗಳು Telecome Regulatory Authority of India Act, 1997 ನ್ಯಾಯಾಧಿಕರಣ ವ್ಯಾಪ್ತಿಯ ಹೊರಗಿದೆ. 2021ರಲ್ಲಿ ಕೇಂದ್ರ ಸರ್ಕಾರವು OTT ವೇದಿಕೆಗಳ ನಿಯಂತ್ರಣಕ್ಕಾಗಿ Information Technology (Intermediary Guidlines and Digital Media Ethics Rules ನ್ನು ಜಾರಿಗೆ ತಂದಿದ್ದರೂ ಸಹ OTT ವೇದಿಕೆಗಳ ಮೇಲೆ ಪರಿಣಾಮಕಾರಿ ನಿಯಂತ್ರಣವಿಲ್ಲದಿರುವುದು ವಿಪರ್ಯಾಸವೇ ಸರಿ. ಇತ್ತೀಚಿನ ಬೆಳವಣಿಗೆಯಲ್ಲಿ, ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಅಶ್ಲೀಲವಾದಂತಹ ವಿಷಯಗಳನ್ನು ಪ್ರಸಾರ ಮಾಡುತ್ತಿದ್ದವು ಎಂಬ ಕಾರಣಕ್ಕೆ 18 OTT ವೇದಿಕೆಗಳನ್ನು ರದ್ದುಗೊಳಿಸಿರುವುದು OTT ವೇದಿಕೆಗಳ ನಿಯಂತ್ರಣಕ್ಕೆ ಕೈಗೊಂಡ ಒಂದು ದಿಟ್ಟ ಹೆಜ್ಜೆಯಾಗಿದೆ.

ಉಪಸಂಹಾರ

ಭಾರತೀಯ ಚಿತ್ರರಂಗದಲ್ಲಿ, ಹಿಂಸೆಯು ಬಹುಮುಖಿ ಮನೋ–ಸಾಮಾಜಿಕ ಸಂಕೀರ್ಣತೆಯನ್ನು ಉಂಟುಮಾಡಿದೆ. ಹಿಂಸಾಚಾರವನ್ನು ವೈಭವೀಕರಿಸಲು ವೇದಿಕೆಯಾಗಿ ಸಿನಿಮಾ ಬಳಕೆಯಾಗುತ್ತಲಿದೆ. ಸಿನಿಮಾ ನಿರ್ಮಾಣದಲ್ಲಿ ಸೂಕ್ಷ್ಮ ನಿಯಂತ್ರಣ ಮತ್ತು ನೈತಿಕ ಪರಿಗಣನೆಗಳ ಅಗತ್ಯವನ್ನು ನಿರ್ದೇಶಕರು, ನಿರ್ಮಾಪಕರು ಮತ್ತು ಪ್ರಭುತ್ವವು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಿದೆ. ಪತ್ರಿಕೆಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಸಿನಿಮಾ ವಿಮರ್ಶೆ ಬರೆಯುವವರು ಹಿಂಸೆಯನ್ನು ವೈಭವೀಕರಿಸುವ ಸಿನಿಮಾಗಳ ವಿರುದ್ಧ ಜಾಗೃತಿಯನ್ನು ಮೂಡಿಸಬೇಕಾಗಿದೆ. ಅಲ್ಲದೆ,

ಇದರಲ್ಲಿ ಪ್ರಜ್ಞಾವಂತ ಪ್ರೇಕ್ಷಕರ ಜವಾಬ್ದಾರಿ ಕೂಡ ಬಹಳಷ್ಟಿದೆ.

ಗ್ರಂಥಸೂಚಿ

Kumar, Ajay(2019): An Analysis of Violence in Hindi Cinema, International Journal of Applied Social Science, 6(4), 875-880.

Thompson P.D. (2021): The Effect of Cinema on the Youth, IDOSR Journal of Computer and Applied Sciences, 6 (1), 44-53.

Nnenna, Ugwu Jovita (2022): Impact of Violence on Human Behaviour, INOSR Arts and Management, 8(1), 21-26.

Gupta, Umang (2019): Portrayal of Sexual Aggression in Hindi Cinema, Journal of Emerging Technologies and Innovative Research, 6 (4), 180-183.

Mathai, Shanthi (2015): Violence as Resolution in Cinema Narrative: A Study of Malayalam Cinema since the Inception of Film Awards by the Government of Kerala, Mass Communicator International Journal of Communication Studies, 9 (4), 24.

Rout, Debasish; Mishra, Somabhusana Janakhiballav; Kantha, Ranjan Kumar and Majhi, Binita (2021): Impact of Web Series in OTT Platform on the Youth in Bhubaneshwar City, International Journal of Research Trends and Innovative, 6 (11), 8-13.

❖❖❖

ಬೆಟ್ಟ ಶಿಖರದ
ಹುಲ್ಲ ಹನಿಯಲಿ
ಸೂರ್ಯ ರಶ್ಮಿಯು ಹೊಳೆದಿದೆ
ಗರಿಕೆ ಮೆಲುಕಿಹ
ಹುಲ್ಲೆ ಬಾಯಲಿ
ಜೊಲ್ಲು ನೊರೆಯದು ಸುರಿದಿದೆ

ಶಾಸನ ಮತ್ತು ಸ್ಥಳೀಯ ಇತಿಹಾಸದಲ್ಲಿ ಕುಕ್ಕೆ ಸುಬ್ರಹ್ಮಣ್ಯ

ಡಾ. ಪ್ರಸಾದ ಎನ್.
ಮುಖ್ಯಸ್ಥರು, ಇತಿಹಾಸ ವಿಭಾಗ
ಕುಕ್ಕೆ ಶ್ರೀ ಸುಬ್ರಹ್ಮಣೇಶ್ವರ ಮಹಾವಿದ್ಯಾಲಯ, ಸುಬ್ರಹ್ಮಣ್ಯ, ಕಡಬ ತಾಲೂಕು 574238

ಪುರಾಣ ಸಾಂಪುದಾಯಿಕ ಸಾಹಿತ್ಯ ಆಕರಗಳ ಪುಕಾರ ಪರಶುರಾಮನು ಈ ಪವಿತ್ರ ಕ್ಷೇತ್ರದಲ್ಲಿ ಶಿವಲಿಂಗವನ್ನು ಸ್ಥಾಪಿಸಿದನು. ಆದರೆ ಆ ಶಿವಲಿಂಗಕ್ಕೆ ಗುಂಡವು ಇರಲಿಲ್ಲ. ಈ ದಟ್ಟ ಅರಣ್ಯದ ನಡುವೆ ಇದ್ದ ಈ ಪವಿತ್ರ ಕ್ಷೇತ್ರಕ್ಕೆ ಅರ್ಚಕರು ನಿತ್ಯ ಪೂಜೆಮಾಡಿ ಲಿಂಗದ ಮೇಲೆ ಸ್ಥಳೀಯ ನಿವಾಸಿಗಳಾದ ಮಲೆಕುಡಿಯರು ಮಾಡಿಕೊಟ್ಟ ಬೆತ್ತದ ಕುಕ್ಕೆಯನ್ನು ಮುಚ್ಚಿಟ್ಟು ತನ್ನೂರಿಗೆ ಹೋಗುತ್ತಿದ್ದರು. ಆದುದರಿಂದ ಆ ಲಿಂಗಕ್ಕೆ ಕುಕ್ಕೆ ಲಿಂಗ ಎಂದು ಕರೆಯಲಾಯಿತು. ತದನಂತರ ಜನವಸತಿಯಿಂದ ಪಟ್ಟಣವಾಗಿ ಬೆಳೆಯಿತು. ಆದುದರಿಂದ ಕುಕ್ಕೆಲಿಂಗ ಹೆಸರಿನಿಂದಲೇ ಈ ಪ್ರದೇಶಕ್ಕೆ ಕುಕ್ಕೆ ಪ್ರದೇಶವೆಂದು ಹೆಸರು ಬಂತೆಂದು ಸ್ಥಳೀಯ ವಿದ್ವಾಂಸರ ಅಭಿಪ್ರಾಯ. ಆದರೂ ಕುಕ್ಕೆ ಸುಬ್ರಹ್ಮಣ್ಯದ ಹೆಸರಿನ ಬಗ್ಗೆ ಭಿನ್ನಾಭಿಪ್ರಾಯಗಳಿವೆ.

ಐತಿಹಾಸಿಕ ಹಿನ್ನಲೆ

ಕ್ರಿ.ಪೂ.3ನೇ ಶತಮಾನದಲ್ಲಿ ಜೈನದರ್ಮದ ಮೌರ್ಯ ರಾಜ ಚಂದ್ರಗುಪ್ತ ಮತ್ತು ಜೈನಮುನಿ ಭದ್ರ ಬಾಹುವಿನ ಮಾರ್ಗದರ್ಶನದಲ್ಲಿ ಉತ್ತರ ಭಾರತದಿಂದ ದಕ್ಷಿಣ ಭಾರತದ ಅಂದರೆ ಮೈಸೂರು ಪ್ರಾಂತ್ಯದ ಶ್ರವಣಬೆಳಗೊಳಕ್ಕೆ ಬಂದು, ಶ್ರವಣಬೆಳಗೊಳವನ್ನು ಜೈನದರ್ಮ ಕೇಂದ್ರ ಸ್ಥಳ ಮಾಡಿ ಜೈನ ಧರ್ಮ ಪ್ರಚಾರ ಮಾಡಿದ ಬಗ್ಗೆ ಇತಿಹಾಸದಲ್ಲಿ ಉಲ್ಲೇಖವಿದೆ. (ಭದ್ರಬಾಹು ಚರಿತ) ಕಾಲಾನಂತರ ಜೈನಧರ್ಮವು ಕರಾವಳಿ ಪ್ರದೇಶದ ಅಂಚಿನವರೆಗೆ ಪಚಾರವಾಗಿ ಇಲ್ಲಿಯ ಜನರು ಜೈನಧರ್ಮಾವಲಂಬಿಯಾಗಿದರು. ಆ ಕಾಲದಲ್ಲಿ ಇದ್ದ ವ್ಯಾಸಕ ಮುನಿ ಎಂಬ ಜೈನ ಮುನಿಯು ವಿಂದ್ಯ, ಚೋಳ, ತುಳು ದೇಶಗಳಿಗೆ ಸಂಚರಿಸಿ ಜೈನಧರ್ಮವನ್ನು ಬೋಧಿಸಲು ಆರಂಭಿಸಿದನು. ಜೈನ ಮುನಿಗಳು ತಾವು ಹೋದ ರಾಜ್ಯಗಳ ಭಾಷೆಗಳನ್ನು ಕಲಿತು ಆಯಾ ದೇಶದ ಭಾಷೆಗಳಲ್ಲಿಯ ತಮ್ಮ ಮತವನ್ನು ಬೋದಿಸುತ್ತಿದ್ದರು. ಆದುದರಿಂದ ಕ್ರಿ.ಶ.1ನೇ ಶತಮಾನದಿಂದ ನಂತರದ ಕೆಲವು ಶತಮಾನಗಳವರೆಗೆ ದಕ್ಷಿಣಭಾರತದ ರಾಜ್ಯಗಳಲ್ಲಿ, ಅದರಲ್ಲಿಯೂ ಕರಾವಳಿ ಪ್ರದೇಶಗಳಲ್ಲಿ ಆಳಿದ ಅರಸುಗಳು ಜೈನರಾಗಿದ್ದರು ಎಂದು ಹೇಳಬಹುದು.

ಕ್ರಿ.ಶ.1ನೇ ಶತಮಾನದಲ್ಲಿ ಕಾಂಚಿಯ ಪಲ್ಲವರು ಸಾರ್ವಭೌಮರಾಗಿ ತುಳುನಾಡನ್ನು ತ್ರಿಗರ್ತ ದೇಶವೆಂದು ಆಳುತ್ತಿದ್ದರು. ಭೂತಾಳ ಪಾಂಡ್ಯನು ಕಾಂಚಿಯ ಪಲ್ಲವರ ಅಧೀನವಾಗಿ ಆಳಲು ಪ್ರಾರಂಭಿಸಿದನು. ಈತನು ಸುಬ್ರಹ್ಮಣ್ಯ ಪ್ರದೇಶಕ್ಕೆ ಜೈನ ಬಲ್ಲಾಳ ಅರಸನೊಬ್ಬನನ್ನು ಒಳ ಅರಸನನ್ನಾಗಿ ಪಟ್ಟ ಕಟ್ಟಿ, ಅಧಿಕಾರ ನೀಡಿದನು. ಈ ವಂಶಸ್ಥರ ಆಳ್ವಿಕೆ (ಕದಂಬರಿಂದ) 3–4 ಸುಮಾರು (ವಿಜಯನಗರ) 14–15

ಶತಮಾನದವರೆಗೆ ಈ ಪ್ರದೇಶದಲ್ಲಿ ಬಂದಿರಬೇಕೆಂದು ವಿದ್ವಾಂಸರ ಅಭಿಪ್ರಾಯ. ಇವರ ಅರಮನೆ ಇಂಜಾಡಿಯಲ್ಲದುದರಿಂದ ಇಂಜಾಡಿ ಬಲ್ಲಾಳನೆಂದು ಪ್ರಖ್ಯಾತಿಗೆ ಬಂದಿರಬೇಕು. ಈ ವಂಶದವರು ಸುಬ್ರಹ್ಮಣ್ಯ, ಐನೆಕಿದು. ಕಂದ್ರಪಾಡಿ, ಬಿಳಿನೆಲೆ, ಬಿಸಲೆಘಾಟಿಯ ಬೂದಿ ಚಾವಡಿಗಳಲ್ಲಿ ಕಂಡುಬರುತ್ತಾರೆ. 4ನೇ ಶತಮಾನದಲ್ಲಿ ತುಳುನಾಡು ಆಳೂಪರ ವಶವಾದಾಗ ಇಂಜಾಡಿ ಬಲ್ಲಾಳ ಅದೀನ ಅರಸನಾಗಿಯೇ ಮುಂದುವರೆದಿರಬೇಕು. ನಂತರ ಅವರ ಬೀಡು/ ಅರಮನೆಯನ್ನು ಕುಲ್ಕುಂದ ಎಂಬಲ್ಲಿ ಕಟ್ಟಲಾಯಿತೆಂದು ಕಂಡು ಬರುತ್ತದೆ. ಆಗಿನ ಆಡಳಿತ ಕಾಲದಲ್ಲಿ ಕುಕ್ಕೆ ದೊಡ್ಡ ಪಟ್ಟಣವಾಗಿ ಬೆಳೆದು ಸುಬ್ರಾಯ ದೇವರಿಗೆ ಆಲಯ ನಿರ್ಮಾಣವಾಗಿದ್ದಿರಬೇಕು. ಆ ನಂತರ ಈ ಕ್ಷೇತ್ರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರವಾಗಲು ಪ್ರಾರಂಭವಾಗಿದ್ದಿರಬೇಕೆಂದು ತಿಳಿಯಬಹುದು.

8ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ರಚಿಸಿರುವ ಸುಬ್ರಹ್ಮಣ್ಯ ಭುಜಂಗ ಪ್ರಯಾತ ಸ್ತೋತ್ರದಲ್ಲಿ ತ್ರಿಲೋಕ ಪ್ರಶಸ್ತಂ ಸು ಕುಕ್ಕೆ ಮರಸ್ಯಂ ಮತ್ತು ಭವವ್ಯಾದಿ ಭಂಗಂ ಭಜೆ ಕುಕ್ಕೆ ಅಂಗಂ... ಎಂದಿದೆ. ಹಾಗೆಯೇ ಅವರು ರಚಿಸಿರುವ ಆನಂದಗಿರಿಯ 'ಶಂಕರ ವಿಜಯದಲ್ಲಿ' ಅವರು ಇಲ್ಲಿ ತಂಗಿದ್ದರೆಂದು ಉಲ್ಲೇಖವಿದೆ. ಇದರಿಂದ 8ನೇ ಶತಮಾನದಲ್ಲಿ ಈ ಕ್ಷೇತ್ರದ ಮಹಿಮೆಯ ಬಗ್ಗೆ ತಿಳಿಯಬಹುದು. ಹಾಗೆಯೇ ಕಡಬದ ಸಮೀಪ ಇರುವ ಮರ್ದಾಳದ ಮಹಾಲಿಂಗೇಶ್ವರ ದೇವಾಲಯದ ಬಳಿ ಇರುವ ಕ್ರಿ.ಶ. 9ನೇ ಶತಮಾನದ ಬಂಟ್ರ ಶಾಶನದಲ್ಲಿ ಕುಕ್ಕೆಯ ವಿಶ್ವರನ್ನು ಮತ್ತು ಕಣಕರನ್ನು ಹೆಸರಿಸಿದೆ. ಕಾರಣ ಆ ಪ್ರಾಂತ್ಯದಲ್ಲಿ ಆಳುತ್ತಿದ್ದ ನಾಲ್ವರು ಅರಸರ ನಡುವೆ ಯುದ್ಧವನ್ನು ತಪ್ಪಿಸಲು ಏರ್ಪಟ್ಟ ಒಪ್ಪಂದಕ್ಕೆ ಸಾಕ್ಷಿಯಾಗಿ ಹಲವು ಊರುಗಳ ಮುಖ್ಯಸ್ಥರಲ್ಲಿ ಕುಕ್ಕೆಯ ವಿಶ್ವರು ಮತ್ತು ಕಣಕರನ್ನು ಶಾಸನದಲ್ಲಿ ಉಲ್ಲೇಖಿಸಿದೆ.

ಆಳುಪರು ತುಳುನಾಡನ್ನು ಸುಮಾರು ಕ್ರಿ.ಶ.567 ರಿಂದ 1325ರ ತನಕ ಉದ್ಯಾವರ ಮತ್ತು ಮಂಗಳೂರನ್ನು ರಾಜಧಾನಿಯನ್ನಾಗಿ ಮಾಡಿ ಆಳುತ್ತಿದ್ದರು. ಆದರೆ ಇವರು ಚಾಲುಕ್ಯರ, ರಾಷ್ಟ್ರಕೂಟರ, ಹೊಯ್ಸಳರ ಸಾಮಂತ ಅರಸರಾಗಿ ತುಳುನಾಡು ಮಂಡಲೇಶ್ವರರಾಗಿ ಇದ್ದರೆಂದು ಕೆಲವು ಶಾಸನಗಳಲ್ಲಿ ತಿಳಿದುಬರುತ್ತದೆ. ಮೊತ್ತಮೊದಲು ಆಳುಪರು ಬಾದಾಮಿ ಚಾಲುಕ್ಯರ ವಂಶಪಾರಂಪರ್ಯ ಕೆಲಸಗಾರರೆಂದು ಶಾಸನಗಳಿಂದ ಗೊತ್ತಾಗುತ್ತದೆ. ಆಳುಪರು ಪರಮತ ಸಹಿಷ್ಣುಗಳು, ಇವರ ರಾಜಕೀಯ ಇತಿಹಾಸ ಪ್ರಾರಂಭ ಕಾಲಕ್ಕೆ ಜೈನ ತುಂಡರಸರು ಇವರ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಆದುದರಿಂದ ತುಳುನಾಡಲ್ಲಿ ಜೈನಮತ ಬೆಳೆಯಲು ಆಳುಪರು ಕಾರಣರು. 11ನೇ ಶತಮಾನದ ನಂತರ ಆಳುವರು ಇಸ್ಲಾಂ (ಅರಬಿಕ್) ಧರ್ಮಕ್ಕೆ ಆಶ್ರಯ ನೀಡಿದರು. ಈ ಸಂದರ್ಭದಲ್ಲಿ ಹಿಂದೂ ಧರ್ಮ ಸುಧಾರಣೆ ಕಾರ್ಯ ಪ್ರಾರಂಭವಾಯಿತು. 12ನೇ ಶತಮಾನದಲ್ಲಿ ಮಧ್ವಾಚಾರ್ಯರು ದ್ವೈತ ಮತ ಸಿದ್ಧಾಂತ ಪ್ರಚಾರ, ಬೋಧನೆ ಮಾಡುತ್ತಾ ಕುಂಬೈ ಅರಸನ ಕೋರಿಕೆಯಂತೆ ಸುಬ್ರಹ್ಮಣ್ಯಕ್ಕೆ ಬಂದಾಗ ಈ ಪ್ರಾಂತ್ಯದ ಬಲ್ಲಾಳ ಅರಸನು ಮಧ್ವಾಚಾರ್ಯರನ್ನು ಸನ್ಮಾನಿಸಿದ ಬಗ್ಗೆ ಉಲ್ಲೇಖವಿದೆ. ಇದಕ್ಕೆ ಕಾರಣ ಕುಂಬೈಯ ರಾಜ ಜಯಸಿಂಹನ ಆಸ್ಥಾನದ ಗುರು ಶೈವ ತ್ರಿವಿಕ್ರಮನಿಗೂ ದ್ವೈತ ಸಿದ್ಧಾಂತವೇ ನ್ಯಾಯುಕ್ತವಾದುದೆಂದು ಜಯಸಿಂಹ ತೀರ್ಮಾನಕ್ಕೆ ಬಂದು ಮಧ್ವಾಚಾರ್ಯರನ್ನು ಸನ್ಮಾನಿಸಿದನು. ಆಗ ಜಯಸಿಂಹನು ಕುಕ್ಕೆ ಸುಬ್ರಹ್ಮಣ್ಯ

ಕ್ಷೇತ್ರ ಮಹಿಮೆಯನ್ನು ವಿವರಿಸಲಾಗಿ ಮದ್ವಾಚಾರ್ಯರು ಸುಬ್ರಹ್ಮಣ್ಯಕ್ಕೆ ಬಂದರು. ರಾಜ ಜಯಸಿಂಹನ ಹೇಳಿಕೆಯಂತೆ ಈ ಪ್ರಾಂತ್ಯದ ಬಲ್ಲಾಳನ ಕೊರಿಕೆಯಂತೆ ಮದ್ವಾಚಾರ್ಯರು ಸುಬ್ರಹ್ಮಣ್ಯಕ್ಕೆ ಬಂದರು. ರಾಜ ಜಯಸಿಂಹನ ಹೇಳಿಕೆಯಂತೆ ಮದ್ವಾಚಾರ್ಯರನ್ನು ಗೌರವಿಸಿ ಸನ್ಮಾನಿಸಿದರು.

ಮುಂದಕ್ಕೆ ಹೊಯ್ಸಳ ಅರಸರ ಆಳ್ವಿಕೆ ಕಾಲದಲ್ಲಿ 12–13 ಶತಮಾನ ಕನ್ನಡ ರಾಜ್ಯದಲ್ಲಿ ಜೈನಮತವು ಹೀನಸ್ಥಿತಿಗೆ ಬಂತು, ಆದರೆ ಆಳುವರಾಜರ ಪ್ರೋತ್ಸಾಹದಿಂದ ತುಳು ರಾಜ್ಯದಲ್ಲಿ ಜೈನ ಮತವು ಪ್ರಾಬಲ್ಯಕ್ಕೆ ಬಂತು. ನಂತರ ಕ್ರಿ.ಶ.13ನೇ ಶತಮಾನದಿಂದ 16ನೇ ಶತಮಾನದವರೆಗೆ ಆಳಿದ ವಿಜಯನಗರ ಅರಸುಗಳ ಕಾಲದಲ್ಲಿ ತುಳುರಾಜ್ಯದಲ್ಲಿ ಜೈನರು ಬಹಳ ಉನ್ನತ ಸ್ಥಾನದಲ್ಲಿದ್ದರು. ಜೈನರ ಬಸದಿಗಳ ಶೈಲಿಯ ರೀತಿಯಲ್ಲಿಯೆ ಶೈವ ಮತ್ತು ವೈಷ್ಣವ ದೇವಸ್ಥಾನಗಳನ್ನು ಕಟ್ಟಿದರು. ಸ್ಥಳೀಯವಾಗಿ ಜೈನ ಅರಸರ ಆಳ್ವಿಕೆ ಮುಂದುವರಿಯಿತು. ನಾಡವರು, ಒಡೆಯರು ಮತ್ತು ಬಂಟರು ದೊಡ್ಡ ದೊಡ್ಡ ಸೇನಾಧಿಪತಿಗಳಾಗಿ ಸೈನಿಕರಾಗಿ ಜೈನ ಆಡಳಿತದಲ್ಲಿ ಇದ್ದರು. ಕ್ರಿ.ಶ.1339ರಲ್ಲಿ ಅಳುಪ ರಾಣಿ ನಾಗಮ್ಮ ಆಳ್ವರಸಿಯಿಂದ ಸಂಪೂರ್ಣ ಅಧಿಕಾರ ವಿಜಯನಗರಕ್ಕೆ ಹಸ್ತಾಂತರವಾಯಿತು. ಸ್ಥಳಿಯ ಜೈನ ಅರಸರು ವಿಜಯನಗರದ ಅಧೀನ ತುಂಡರಸರಾಗಿ ತುಳುನಾಡಲ್ಲಿ ಮುಂದುವರಿದರು. ವಿಜಯ ನಗರ ಅರಸು ತಮ್ಮ ಸಂಸ್ಥಾನವನ್ನು ಮಂಡಲಗಳನ್ನಾಗಿ ವಿಂಗಡಿಸಿ, ಪ್ರತಿ ಮಂಡಲವನ್ನು ನೋಡಿಕೊಳ್ಳಲು ಮಹಾಮಂಡಲೇಶ್ವರ ಅಥವಾ ರಾಜ್ಯಪಾಲರನ್ನು ನೇಮಿಸಿದ್ದರು, ಸಾಮಂತ ಜೈನ ಅರಸರ ಮೇಲ್ವಿಚಾರಣೆ ಮಾಡುತ್ತಿದ್ದರು. 10 ರಿಂದ 40 ಗ್ರಾಮಗಳಿಗೆ ಒಂದು ಹೋಬಳಿ ಎಂತಿದ್ದೂ, 4 ರಿಂದ 10 ಹೋಬಳಿಗಳಿಗೆ ಒಂದು ಗಡಿ ಎಂದೂ, 10 ರಿಂದ 20 ಗಡಿಗಳಿಗೆ ಒಂದು ಸೀಮೆಯ ನಾಡು ಎಂದು ವಿಭಾಗಗಳಿದ್ದವು. ಗ್ರಾಮೀಣ ಉಸ್ತುವಾರಿಯು ಗೌಡನ ಕೈಯಲ್ಲಿತ್ತು. ಶ್ಯಾನುಬೋಗನು ಗೌಡನ ಅಧೀನದಲ್ಲಿ ಲೆಕ್ಕಾಧಿಕಾರಿಯೂ (ಕರಣೀಕ) ಕಾರನಿರ್ವಹಿಸುತ್ತಿದ್ದರು. ತುಳು ರಾಜ್ಯಕ್ಕೆ ಮಂಗಳೂರು ಮತ್ತು ಉದ್ಯಾವರ ಮಂಡಲಕ್ಕೆ ಮಂಡಲೇಶ್ವರರನ್ನು/ ರಾಜ್ಯಪಾಲರನ್ನಾಗಿ ವಿಜಯನಗರದ ಅರಸರು ನೇಮಿಸಿದರು. ಅವರ ಆಳ್ವಿಕೆಯಡಿಯಲ್ಲಿ ಸ್ಥಳೀಯ ಬಲ್ಲಾಳರು, ಒಡೆಯರು, ಹೆಗ್ಗಡೆಯವರು ತುಂಡು ಅರಸರಾಗಿ ಕೋಟೆಗಳನ್ನು ಕಟ್ಟಿಕೊಂಡು ವಿಜಯನಗರದ ಅರಸರಿಗೆ ಅದೀನರಾಗಿ, ಮಂಗಳೂರು ರಾಜ್ಯಪಾಲರಿಗೆ ವಿಧೇಯರಾಗಿ ಸಹಕರಿಸುತ್ತಿದ್ದರು.

ಒಂದನೇ ಹರಿಹರ ಒಡೆಯನ ಕಾಲದಲ್ಲಿ, ರಾಜ್ಯಪಾಲ ಮಾದರಸ ಮಂಗಳೂರಿನ ಮಂಡಲೇಶ್ವರನಾಗಿದ್ದಾಗ 1379ರಲ್ಲಿ ಕುಕ್ಕೆ ಗ್ರಾಮ ದೇವಸ್ಥಾನಕ್ಕೆ ಬ್ರಾಹ್ಮಣ ಸಂತರ್ಪಣೆಗೆ ಮತ್ತು ದೇವರ ಸೇವೆಗೆ ಗದ್ಯಾಣ 170, ____ 30 ಗದ್ಯಾಣ, ಉಭಯ 200 ಗದ್ಯಾಣ ದಾನ ಎಂದು ಸುಬ್ರಹ್ಮಣ್ಯ ದೇವಳದ ಪೂರ್ವದಿಕ್ಕಿನ (ಎದುರು) ಶಿಲಾ ಶಾಸನದಲ್ಲಿ ಉಲ್ಲೇಖವಿದೆ. (ಶಕವರ್ಷ 1301ನೇ ಸಿದ್ಧಾರ್ಥ)

ವಿಜಯನಗರದ ಬುಕ್ಕರಾಯ ಮಹಾರಾಯ ಆಳುತ್ತಿದ್ದಾಗ ಕ್ರಿ.ಶ.1388ರಲ್ಲಿ ಗೋವ ಪುರಾಧೀಶ ಮಾದವ ಮಹೀಪತಿ ಕೊಟ್ಟ ಧರ್ಮ ಶಾಸನದಲ್ಲಿ ತುಳು ಮಂಡಲದ ಕುಕ್ಕೆ ಗ್ರಾಮ ದೇವಪೂಜೆ ಮತ್ತು ಬ್ರಾಹ್ಮಣಾರಾಧನೆಗೆ ಭೂದಾನದ ಬಗ್ಗೆ ಸುಬ್ರಹ್ಮಣ್ಯ ದೇವಳದ 16–12–1388(ಉತ್ತರ ದಿಕ್ಕಿನ ಗೋಡೆ ಬಳಿ) ಶಕವರ್ಷ ನಮೂದಿಸಿರುತ್ತದೆ.

(ಶಕವರ್ಷ 1310ನೇ ಪ್ರಭವ) ಕ್ರಿ.ಶ.1406ರಲ್ಲಿ ಬರೆಯಲಾದ ತಾಮ್ರ ಶಾಸನದಲ್ಲಿ 'ವಿಜಯ ನಗರದ ಅರಸನಾದ 2ನೇ ಹರಿಹರನ ಕುಮಾರ 2ನೇ ಬುಕ್ಕರಾಯರ (1405–1406) ನಿರೂಪದಿಂದ ಅವರ ಅಧೀನರಾದ ಮಂಗಳೂರು ರಾಜ್ಯವನ್ನು ಆಳುತ್ತಿದ್ದ ಬಾಚಪ್ಪ ಒಡೆಯನು ಕಡಬ ಸ್ಥಳದ ಕುಕ್ಕೆಯ ದೇವರಿಗೆ ನೀಡಿದ ದಾನದ ವಿವರ ದೇವರ ಸ್ಥಳ, ಅರಮನೆಗೆ ನಾಲ್ವರು. ಪಾದ ಮೂಲಗಳು ತರುವ ವಸ್ತುಗಳ ವಿವರ, ಕುಲದ ಹಣ 16, ___ ಮೂರು ಸಾವಿರ ಪರಿಹಾರ ತಮ್ಮ ಜೀವಿತಕ್ಕೆ ರಿಂದ ವರುಷಕ್ಕೆ 1 ___ ಗದ್ಯಾಣ 54 ಇತ್ಯಾದಿ ಹಾಗೂ ಮಂಗಳೂರು ಮೂರು ಸಾವಿರ ಪರಿಹಾರ ತಮ್ಮ ಜೀವಿತಕ್ಕೆ ___ ಮಾಡಿಕೊಂಡು, ತಮ್ಮ ಕಂದಾಚಾರಕ್ಕೆ ಬರಸಿಕೊಂಡು ನೀಡಿದ ದಾನ–ಬಾಚಿಂಣನ ಬರಹ' ಎಂದಿದೆ. (ಶಕವರ್ಷ 1329ನೇ ವ್ಯಯ ಸಂವತ್ಸರ)

ವಿಜಯನಗರದ ಅರಸ ದೇವರಾಯ ಮಹಾರಾಯನು ಈ ಸೀಮೆಯಲ್ಲಿ ದೇವಸ್ಥಾನಗಳಿಗೆ 1430ರಲ್ಲಿ ಭೂದಾನ ಮಾಡಿದ ಬಗ್ಗೆ ಎರಡು ಶಿಲಾ ಶಾಸನಗಳಿಂದ ಕಂಡು ಬಂದಿದೆ. ಬಿಳಿನೆಲೆ ಗೋಪಾಲಕೃಷ್ಣ ದೇವಸ್ಥಾನ ಎದುರು ಕಂಡುಬಂದ ಶಿಲಾ ಶಾಸನದಲ್ಲಿ, (ಜೀರ್ಣೋದ್ಧಾರ ಸಂದರ್ಭದಲ್ಲಿ ಸ್ಥಾನಪಲ್ಲಟವಾಗಿರುತ್ತದೆ) ಶ್ರೀ ಗಣಾಧಿಪತಯೇ ನಂಃ ನಿರ್ವಿಘ್ನಮಸ್ತು॥ ನಮಸ್ತುತ ಶಿರಶುಂಬಿ ಚಂದ್ರ ಚಾಮರಚಾರನು ಎಂದು ಪ್ರಾರಂಭವಾಗಿ ಶಾಲಿವಾಹನ ಶಕವರ್ಷ ____ ಸಾಧಾರಣ ಸಂವತ್ಸರ ಕಾರ್ತಿಕ ಶುದ್ಧ ದ್ವಾದಶಿಯ ____ ವಡ ವಾರದಲ್ಲು ____ ಶ್ರೀಮದ್ರಾಜಾದಿ ರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ದೇವರಾಯ ಮಹಾರಾಜರ ____ ದೇವರಂ ಕಾಯಕ ವೊಡೆಉರವರ ಪಾದಮೂಲದಲಿ ರಾಜ್ಯವ ಪ್ರತಿ ಪಾಲಿಸುವ ದೇವರಾಜ ಒಡೆಯರನಿ ____ ಯರಸರು ಶ್ರೀ ರಾಮನಾಥಪುರದ ಆಯನ ಪ್ರತಿಪಾಲಿಪ ____ ಕೋಟಂಥ ಶಿಲಾಶಾಸನದ ಕ್ರಮವೆಂತೆಂದರೆ ಕಡಬದ ____ ನಾಡೊಳಗಣ ____ ಪಡಿಗೆ ಮೂರು ದೇವರಸರ ____ ಪರಿವಾರ ____ ಕೋಚ್ಚು ____ ಗಳವಿ ____ ರದರು ಶ್ರೀ ____ ಯರಸರ ಬೋಜನ ಮಾಡಲು ಪಡಮುಡಿಯನಾಡ ಮೂ ____ ಮದಿರ ಮುಂತಾಗಿ ಧಾರೆಯನೆರೆದು ಕೋಟಿ ____ ಮದಿರ ಮುಂತಾಗಿ ಧಾರೆಯನೆದುರು ಕೋಟಿ ____ ವೃತ್ತಿಯಿಚಿರೆದು ವರಿಷ ____ ಚಿತ್ತೈಸಿ ರಾಯರು ದಕ್ಷಿಣ ____ ರಿಗೆ ವಾರಣಾಸಿ ____ (____ಅಕ್ಷರಗಳು ಹಾಳಾಗಿದೆ.)

ಈ ರೀತಿ ಮಹಾರಾಜರು ಭೂದಾನ ಮಾಡಿದ ಬಗ್ಗೆ ಶಿಲಾಶಾಸನಗಳ ಮಾಹಿತಿ ನೀಡುತ್ತವೆ. ಇದೇ ರೀತಿ ಕುದ್ಮಾರು ಮಹಾಲಿಂಗೇಶ್ವರ ದೇವಸ್ಥಾನದ ಬಳಿ ಇರುವ ಶಿಲಾಶಾಸನದಲ್ಲಿ 31.05.1440ರಂದು ದೇವರಾಯ ಮಹಾರಾಯ ಚಂಡರಸ ಒಡೆಯ ಭೂದಾನ ಮಾಡಿದ ಬಗ್ಗೆ ಉಲ್ಲೇಖವಿದೆ.

1) ವಿಜಯನಗರ ಸಾಳುವ ರಾಜ್ಯಭಾರದ (1491–1505) ಕಡೆಯ ಭಾಗದಲ್ಲಿ (ರಾಜಪ್ರತಿನಿಧಿ ನರಸನಾಯಕರ ಆಡಳಿತದಲ್ಲಿ) ಕೆಳದಿ ಗ್ರಾಮಾಧಿಪತಿಯೂ, ವೀರಶೈವ ಮತಾವಲಂಬಿಯೂ ಆದ ಬಸಪ್ಪನೆಂಬವನು ಒಂದು ಸಣ್ಣ ರಾಜ್ಯವನ್ನು ಸ್ಥಾಪಿಸಿದನು. ಇವನಿಗೆ ಚೌಡಪ್ಪ, ಭದ್ರಪ್ಪ ಎಂಬ ಇಬ್ಬರು ಮಕ್ಕಳು. ಇವರನ್ನು ವಿಜಯನಗರ ರಾಜ ಎರಡನೆ ನರಸಿಂಗರಾಯನು 1491ರಲ್ಲಿ ತನ್ನ ಸಹಾಯಕರನ್ನಾಗಿ ಮಾಡಿಕೊಂಡು

ಕೆಳದಿ, ಇಕ್ಕೇರಿ ಎಂಬ ಮಾಗಣೆಗಳನ್ನು ಕೊಟ್ಟು 1429ರಲ್ಲಿ ಚೌಡಪ್ಪನಿಗೆ ಕೆಳದಿಪುರದಲ್ಲಿ ಪಟ್ಟ ಕಟ್ಟಿದನು. ಅವನ ನಂತರ ಅವನ ಮಗ ಸದಾಶಿವನಾಯಕ 1563 ಇಕ್ಕೇರಿ ಅರಮನೆಯಲ್ಲಿ ಪಟ್ಟಾಭಿಷೇಕವಾಯಿತು. ಇವನು ವಿಜಯಗರದ ಕೃಷ್ಣದೇವರಾಯನಿಗೆ ಆನೇಕ ರೀತಿಯ ಸಹಾಯ ಮಾಡುತ್ತಿದ್ದನು. ಇವನು ತುಳುನಾಡಿನ ಕಾಸರಗೋಡವರೆಗೆ ಇರುವ ಎಲ್ಲಾ ತುಳು ಜೈನ ಅರಸರನ್ನು ತಲೆ ಎತ್ತದಂತೆ ಮಾಡಿ ವಿಜಯನಗರಕ್ಕೆ ಸಲ್ಲುವ ಕಪ್ಪವು ಸರಿಯಾಗಿ ಸಿಗುವ ಹಾಗೆ ಮಾಡಿದನು. ಇವನು ಕುಕ್ಕೆ ಸುಬ್ರಹ್ಮಣ್ಯಕ್ಕೆ ಬಂದು ಇಲ್ಲಿಯ ದೇಗುಲದ ವ್ಯವಸ್ಥೆಯನ್ನು ಸರಿಯಾಗಿ ಮಾಡುವಂತೆ, ಪಾಣೂರು, ಇಕ್ಕೇರಿ, ಕೆಳದಿ, ಎಲೆಗಳಿರೆ, ಮೇದೂರು ಮುಂತಾದ ಕಡೆಯಿಂದ ತನ್ನ ಆಪ್ತರನ್ನು ಸುಬ್ರಹ್ಮಣ್ಯಕ್ಕೆ ಬರಮಾಡಿ ನೆಲೆ ಕಲ್ಪಿಸಿ ಶ್ರೀ ಸುಬ್ರಹ್ಮಣ್ಯ ಪೂಜೆ, ಸೇವೆಗಳನ್ನು ಓಕ ಸರಿಯಾಗಿ ನಡೆಯುವಂತೆ ಮಾಡಿದನು.

ಇಕ್ಕೇರಿ ನಾಯಕರ ಆಡಳಿತ(1514 ರಿಂದ 1765) ಅವಧಿಯಲ್ಲಿ ಶಿವ, ದುರ್ಗಾ, ತ್ರಿಶೂಲಿನಿ ದೇವಸ್ಥಾನಗಳನ್ನು ಕಟ್ಟಿಸಿದ್ದಲ್ಲದೆ ದಾನ ದತ್ತಿ ಉಂಬಳಿಗಳನ್ನು ಕೊಡ ಮಾಡಿದ ಬಗ್ಗೆ ಶಿಲಾ ಮತ್ತು ತಾಮ್ರ ಶಾಸನಗಳಲ್ಲಿ ಉಲ್ಲೇಖವಿದೆ. ಹಾಗೆಯೇ ಬಳ್ಳದ ದುರ್ಗಾ ದೇವಸ್ಥಾನದಲ್ಲಿ ದೊರಕಿರುವ ಶಿಲಾ ಶಾಸನದಲ್ಲಿ ಭೂದಾನ ಮಾಡಿದ ಬಗ್ಗೆ ವಿವರಗಳಿವೆ. ಕೆಳದಿ ಸದಾಶಿವ ನಾಯಕ ಬಳ ಗ್ರಾಮವನ್ನು ಮತ್ತು ಹೇರಳ ಬಂಗಾರವನ್ನು ಸುಬ್ರಹ್ಮಣ್ಯ ದೇವರ ಪೂಜೆ, ದೀಪಾರಾಧನೆಗಳಿಗಾಗಿ ಉಂಬಳಿಯಾಗಿ 1562ರಲ್ಲಿ ಕೊಟ್ಟ ಬಗ್ಗೆ 1 ಅರ್ಗುಡಿ–ಬಳ್ಳದ ಅರ್ಗುಡಿಯಲ್ಲಿ ದೊರಕಿದ ಶಿಲಾ ಶಾಸನದಲ್ಲಿ ಉಲ್ಲೇಖವಿದೆ.

ಕೆಳದಿ ಹಿರಿಯ ವೆಂಕಟಪ್ಪ ನಾಯಕ(1582–1629)ನು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಚಂಪಾಷಷ್ಠಿಯ ದಿನ ದಿನ ರಥೋತ್ಸವ ತಪ್ಪದೆ ನಡೆಯುವ ಹಾಗೆ ಬಹಳ ದೊಡ್ಡ ಬ್ರಹ್ಮರಥವನ್ನು ನಿರ್ಮಿಸಿ ಕೊಟ್ಟಿದ್ದನು. ಕೆಳದಿ ವೀರಭದ್ರನಾಯಕನು(1629–1641)ನು ಸುಬ್ರಹ್ಮಣ್ಯ ದೇವರ ಪರಮ ಭಕ್ತ. ಅರಮನೆಯಲ್ಲಿ ದಾಯಾದಿ ಕಲಹದ ನಂತರ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬಂದಿದ್ದಾಗ ತನ್ನ ಭಕ್ತ ವಿಗ್ರಹ ಮತ್ತು ಹೆಸರನ್ನು ಕಲ್ಲು ಚಪ್ಪಡಿಯಲ್ಲಿ ಕೆತ್ತಿಸಿ ಭಕ್ತರು ನಡೆಯುವ ದಾರಿಯಲ್ಲಿ(ದರ್ಪಣ ತೀಥ ಹೊಳೆ) ಹಾಕಿಸಿ ಜೀವನ ಪಾವನ ಮಾಡಿಸಿದನು. ಇಂತಹ ಕೆಲವು ಆಳಿದ ದೊರೆ/ ನಾಯಕರ/ ಭಕ್ತರ ಉಲ್ಲೇಖ ಇರುವ ನಮಸ್ಕಾರ ಯ ಹರಕೆ ಮುದ್ರೆ, ಶಾಸನಗಳು ಹಾಸುಗಲ್ಲಾಗಿ ದರ್ವಣ ತೀರ್ಥಕ್ಕೆ ಹೋಗುವ ದಾರಿಯಲ್ಲಿ ಹಾಕಲ್ಪಟ್ಟಿದೆ.

ವಿಜಯನಗರವನ್ನು ಸುಲ್ತಾನರು ಆಕ್ರಮಿಸಿದ ನಂತರ ಅರವೀಡು ವಂಶದ ಕೊನೆಯ ಅರಸ ಶ್ರೀರಂಗರಾಯ(1647–1681) ಪಲಾಯನಗೈದು ನಂತರ ಕೆಳದಿಗೆ ಹೋಗಿ ಶಿವಪ್ಪ ನಾಯಕರ ಆಶ್ರಯ ಪಡೆದನು. ಅವನು ರಂಗರಾಯನಿಗೆ ಬೇಲೂರಿನಲ್ಲಿ ಇದ್ದು ರಾಜ್ಯವಾಳುವಂತೆ ವ್ಯವಸ್ಥೆ ಮಾಡಿದನು. ಮೈಸೂರು ಸಂಸ್ಥಾನಕ್ಕೆ ಸೇರಿದ ಬೇಲೂರಿನಲ್ಲಿ ಇವನು ಆಳುತ್ತಿದ್ದಾಗ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ದಾನ ಉಂಬಳಿ ಬಿಟ್ಟ ಬಗ್ಗೆ ತಾಮ್ರ ಶಾಸನದಲ್ಲಿ ದಾಖಲಾಗಿದೆ. ಅದರಲ್ಲಿ ವೀರಶ್ರೀ ರಂಗರಾಯದೇವ ಮಹಾರಾಯನು (1659) ಹಲಸೂರು ಗ್ರಾಮವನ್ನ ಸುಬ್ರಹ್ಮಣ್ಯ ಸಂಪುಟ ನರಸಿಂಹ ದೇವರ ದೀಪಾರಾಧನೆ ಮತ್ತು ಅನ್ನ ಸಂತರ್ಪಣೆಗೆ ವೆಂಕಟೇಶ್ವರ ಪ್ರೀತಿಯಾಗಿ ಶ್ರೀ ಮದ್ವಿದ್ಯಾಧಿರಾಜ ತೀರ್ಥ ಶ್ರೀಪಾದಂಗಳ ಕರಕಮಲ ಸಂಜಾತರಾದರ(ಬಲುಡು)

ವರದರಾಜ ತೀರ್ಥರಿಗೆ ನೀಡಿದ ದಾನ ಎಂದು ಉಲ್ಲೇಖಿಸಲಾಗಿದೆ. ಶ್ರೀ ರಂಗರಾಯ ವೇಲಾಪುರ (ಬೇಲೂರು) ಸ್ಥಳದಲ್ಲಿ ಆಳುತ್ತಿದ್ದಾಗ, ಕೊಡಮಾಡಿದ ದಾನ ಶಾಸನ 7–3 (1665)ದಂತೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿಯ ದಿವಸ 6000 ಬ್ರಾಹ್ಮಣ ಸಂತರ್ಪಣೆಯು ಸಂಪುಟ ಮಠದಲ್ಲಿ(ವರದರಾಜ ತೀರ್ಥ ಸ್ವಾಮಿಗಳ ಕಾಲ) 6000 ಬ್ರಾಹ್ಮಣ ಸಂತರ್ಪಣೆಯು ನಡೆಯುವ ಹಾಗೆಯೇ ದೇವಸ್ಥಾನ ಮತ್ತು ಮಠದ ಉಪಯೋಗಕ್ಕೆ ಒಂದು ವರ್ಷಕ್ಕೆ ಬೇಕಾಗುವ 5 ಮಣ ಗಂದವನ್ನು ವರ್ಷಂಪ್ರತಿ ಒದಗಿಸುವುದಾಗಿಯೂ, ಬೇಲೂರು ಸೀಮೆಗೆ ಸೇರಿದ ಹೆಗ್ಯಾವೆ ಗ್ರಾಮವನ್ನು ಉಂಬಳಿ ಬಿಟ್ಟಿರುವ ಬಗ್ಗೆ ತಾಮ್ರ ಶಾಸನದಿಂದ ತಿಳಿದು ಬರುತ್ತದೆ. ಇದರ ಇನ್ನೊಂದು ಪ್ರತಿ ಸುಬ್ರಹ್ಮಣ್ಯ ದೇವಾಲಯದಲ್ಲಿ ಇದೆ. ಇನ್ನೊಂದು ತಾಮ್ರ ಶಾಸನದಲ್ಲಿ 7–3 1665 ಶ್ರೀ ರಂಗರಾಯ ವೇಲಾಪುರಿ ಸ್ಥಳದಲ್ಲಿ ಆಳುತ್ತಿದ್ದಾಗ ಕುಕ್ಕೆ ಸುಬ್ರಹ್ಮಣ್ಯ ದೇವರಿಗೆ ನೀಡಿದ ಬೇಲೂರಿಗೆ ಸಲ್ಲುವ ಮಳಲಿ ಹೋಬಳಿಯ ಹಾಳೆಬೀಡು, ಬೇಲೂರು, ಕಿಬ್ಬೊಟ್ಟು ನಾಡ, ಬಯಿಕೇರಿ ವಳಗಣ ದೊಡ್ಡನಾಗರ ಎಂಬ ಎರಡು ಗ್ರಾಮಗಳನ್ನು ಮತ್ತು ದೊಡ್ಡ ವಠಾರ ಎಂಬ ಗದ್ದೆಯನ್ನು ಕುಕ್ಕೆ ಸುಬ್ರಹ್ಮಣ್ಯ ದೇವರಿಗೆ ಶ್ರೀ ಸುಬ್ರಹ್ಮಣ್ಯ ಸ್ಥಳದಲ್ಲಿ ಶ್ರೀ ವೆಂಕಟೇಶ್ವರ ಪ್ರೀತಿಯಾಗಿ ನೀಡಿದ ದಾನ ಎಂದು ಉಲ್ಲೇಖಿಸಲಾಗಿದೆ. ಇದರ ಪೂರ್ಣಪಾಠ ಶ್ರೀಕ್ಷೇತ್ರ ವರ್ಣನೆಯಲ್ಲಿ ಇದೆ. ಮೈಸೂರು ಸಂಸ್ಥಾನಕ್ಕೆ ಸೇರಿದ ದೇವರಾಜ ಒಡೆಯರು ಶ್ರೀರಂಗಪಟ್ಟಣದಿಂದ ಆಳುತ್ತಿದ್ದಾಗ ನಾನಾಜಿಯ ಪೌತ್ರ ಶಿವಾಜಿಯ ಪುತ್ರ ಧನೋಜಯ್ಯ (29.12.1665) ಎಂಬ ಚಿನ್ನದ ವ್ಯಾಪಾರಿ ಹುಂಜನಕೆರೆ, ಚಂಗರವಳಿ ಮತ್ತು ಹೊಸ ಹಳ್ಳಿ ಗ್ರಾಮಗಳನ್ನು ಶ್ರೀ ದೇವರ ರಥೋತ್ಸವ, ಅನ್ನ ಸಂತರ್ಪಣೆ ಮುಂತಾದ ಸೇವೆಗಳ ನಿಮಿತ್ತ ದಾನ ಮಾಡಿದ್ದನ್ನು ದೇವಸ್ಥಾನದಲ್ಲಿರುವ ತಾಮ್ರ ಶಾಸನದಲ್ಲಿ ತಿಳಿಸುತ್ತದೆ. ಅದರಂತೆ ಕೊಲ್ಲಮೊಗರ ಶಂಕರ ದೇವಿ ಬಲ್ಲಾಳ್ತಿ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ಭಂಡಾರಕ್ಕೆ ಕೊಟ್ಟ ಬಿನ್ನವತ್ತಳೆ (ತಾಮ್ರ ಶಾಸನ) ದೇವಾಲಯದಲ್ಲಿ ತಮ್ಮ ಹೆಸರಿನಲ್ಲಿ ನಡೆವ ನಂದಾದೀಪ ಮಂಗಳಾರತಿ ಸಲ್ಲಿಸುವ ದಿನ ಇಕ್ಕೇರಿ ಗದ್ಯಾಣ, ನರಸೀಪುರ ಗದ್ಯಾಣ, ಹೊನ್ನಿನ ಬಡ್ಡಿಯಿಂದ ಸೇವೆ ಎಂದು ನಮೂದಿಸಲಾಗಿದೆ. ಇನ್ನೊಂದು ತಾಮ್ರ ಶಾಸನ (4.12.1682) ಬೇಲೂರು ವೆಂಕಟಪ್ಪ ನಾಯಕರ ಪಪೌತ್ರ ಕೃಷ್ಣಪ್ಪ ನಾಯಕರ ಪುತ್ರ ವೆಂಕಟಾದ್ರಿ ನಾಯಕರು ತೇಕೂರ ತಿಪ್ಪಯ್ಯಗೆ ಕೊಟ್ಟ ದಾನದಲ್ಲಿ ಹೆತ್ತಳಿಗೆ ನಾಡ ಹುಲಸೆಮಂದ ಪ್ರತಿ ನಾಮದೇಯ ವೆಂಕಟಾಪುರ ಸಿದ್ಧಯ ದೇಶದ ನಾಣ್ಯ ಕಂದಾಯ, ಕಾಣಿಕೆಗಳನ್ನು ಮೃಷ್ಟಾನ್ನ ಸಮಾರಾಧನೆ ದೇವಾರಾಧನೆ, ಉತ್ಸವ, ಚುರುಪು ಇತ್ಯಾದಿಗಳಿಗೆ ಬಳಸಲು ಸೂಚನೆಯನ್ನ ಸಾಕ್ಷಿಗಳೊಂದಿಗೆ ಶಾಸನದಲ್ಲಿ ಉಲ್ಲೇಖಿಸಲಾಗಿದೆ. (ದೇವಸ್ಥಾನ) ಇನ್ನೊಂದು ತಾಮ್ರ ಶಾಸನ 09.10.1698. ಶ್ರೀರಂಗದೇವ ಮಹಾರಾಯ ಆಳುತ್ತಿದ್ದಾಗ ಎಲಹಂಕ ನಾಡ ಪ್ರಭು ಇಮ್ಮಡಿ ಕೆಂಪೆಗೌಡರ ಪುತ್ರ ಮುಂಮಡಿ ದೊಡ್ಡವೀರಪ್ಪ ತನಗೆ ಸಂತಾನಾಭಿವೃದ್ಧಿಯಾಗಬೇಕೆಂದು ವಿವಿಧ ಸೇವೆಗಳಿಗೆ ನೀಡಿದ ದಾನ ಮಾಗಡಿ ಸೀಮೆಗೆ ಸಲ್ಲುವ ಗ್ರಾಮಗಳ ದಾನದ ಬಗ್ಗೆ ಉಲ್ಲೇಖವಿದೆ (ದೇವಸ್ಥಾನ)ದಲ್ಲಿ ಇದೆ.

ಕೆಳದಿಯ ಸೋಮಶೇಖರ ನಾಯಕನು (1564–1672 ಕ್ರಿಸ್ತಶಕ) ಶಿವಪ್ಪ ನಾಯಕನ 5ನೇ ಹೆಂಡತಿ ಬಸವಲಿಂಗಮ್ಮಾಜಿಯ ಮಗನು. ಇವನು ಕೋಟಪುರದ ಸಿದ್ದಪ್ಪ ಶೆಟ್ಟಿಯ ಮಗಳು ಚೆನ್ನಮ್ಮಾಜಿಯನ್ನು ಮದುವೆಯಾದನು. ತುಳುನಾಡಲ್ಲಿ ತುಳು

ಅರಸರು ಕಪ್ಪ ಕೊಡದೆ ಇರಲು ಅವರನ್ನು ಸೆರೆಹಿಡಿದು, ಸರಿಯಾಗಿ ಕಪ್ಪ ಕೊಡುವಂತೆ ಕರಾರು ಮಾಡಿದನು. ಇವನು ವಿಷಯ ಲಂಪಟನಾದಾಗ ರಾಣಿ ಚೆನ್ನಮ್ಮಾಜಿಯು ಅಧಿಕಾರ ನಡೆಸುತ್ತಿದ್ದಳು. ಬಿಜಾಪುರದ ಸುಲ್ತಾನ ಇಕ್ಕೇರಿ ಸಂಸ್ಥಾನವನ್ನು ಹಿಡಿಯಲು ಬಂದಾಗ ರಾಣಿಚೆನ್ನಮ್ಮಾಜಿಯ ಪಟ್ಟವಾದ ಮೇಲೆ ಮರಿಯಪ್ಪ ಶೆಟ್ಟಿಯ ಮಗ ಬಸಪ್ಪನನ್ನು ದತ್ತಕ್ಕೆ ತೆಗೆದುಕೊಂಡು ಅವನ ಹೆಸರಲ್ಲಿ ರಾಜ್ಯಭಾರ ಮಾಡುತ್ತಿದ್ದಳು. ಚನ್ನಮ್ಮಾಜಿಯು, ದಳವಾಯಿ ಭದ್ರಪ್ಪನೊಡನೆ ಸೈನ್ಯವನ್ನು ಕಳುಹಿಸಿ ತುಳುರಾಜ್ಯವನ್ನು ಸ್ವಾಧೀನಪಡಿಸಿ ಕುಪ್ಪಿತ ಶಿವಪ್ಪ ನಾಯಕಿನ ಮಕ್ಕಳನ್ನು ಕೊಲ್ಲಿಸಿದಳು. ಕ್ರಿ.ಶ.1678ರಲ್ಲಿ ಇಬ್ಬರು ಕನ್ನೆಯರನ್ನು ಬಸಪ್ಪ ನಾಯಕನಿಗೆ ವಿವಾಹ ಮಾಡಿಸಿದಳು. ಕ್ರಿ.ಶ.1680ರಲ್ಲಿ ಬಸಪ್ಪನನ್ನು ಕರಕೊಂಡು ಗೋಕರ್ಣ, ಸುಬ್ರಹ್ಮಣ್ಯ ಯಾತ್ರೆಗಳನ್ನು ಮಾಡಿದಳು.

ಕ್ರಿ.ಶ.1714–1739ರಲ್ಲಿ ಆಳಿದ ಇಮ್ಮಡಿ ಸೋಮಶೇಖರ ನಾಯಕನು 1727ರಲ್ಲಿ ಶೃಂಗೇರಿಯಿಂದ ಹೊರಟು ಕಳಸ ಮೂಲಕ ಘಟ್ಟ ಇಳಿದು ಸುಬ್ರಹ್ಮಣ್ಯಕ್ಕೆ ಬಂದು ಮತ್ತೆ ಉಳಿದ ಕ್ಷೇತ್ರಗಳನ್ನು ಕೊಲ್ಲೂರು, ಗೋಕರ್ಣ ಸಂಪರ್ಕಿಸಿದನು. 1738ರಲ್ಲಿ ಇನ್ನೊಮ್ಮೆ ಘಟ್ಟವನ್ನು ಇಳಿದು ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿಯಾಗಿ ಮಂಗಳೂರಿಗೆ ತೆರಳಿದ ವಿಚಾರವು ತಿಳಿದು ಬರುತ್ತದೆ. (ಕೆಳದಿ ನೃಪ ವಿಜಯ) ಕುಂಬಳೆಯ ಅರಸನೂ, ಕೊಲತ್ತರಸನೂ ತುಳುನಾಡಿನ ದಕ್ಷಿಣಭಾಗವನ್ನು ಸುಲಿಗೆ ಮಾಡುತ್ತಿರಲು ಕುಂಬಳಿ ಅರಸನನ್ನು ಸೆರೆಹಿಡಿದು ಕೋಟಿಯಲ್ಲಿಟ್ಟನು. ಇವನ ಕಾಲನಂತರ ಇಮ್ಮಡಿ ಬಸಪ್ಪ ನಾಯಕ (ವೀರಭದ್ರನಾಯಕನ ಮಗ) 1740–1755 ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ ಕೋಟಿ, ಮಠ, ಪಟ್ಟಣಗಳನ್ನು ಕಟ್ಟಿಸಿದನು. ಇವನು ಪ್ರತಿ ವರ್ಷವೂ ಚಂಪಾಷಷ್ಠಿಯ ದಿನ ಶ್ರೀ ಸುಬ್ರಹ್ಮಣ್ಯ ದೇವರಿಗೆ ಉತ್ಸವ, ರಥೋತ್ಸವ ಸರಿಯಾಗಿ ನಡೆಯುವ ಹಾಗೆ ಉಂಬಳ ಬಿಟ್ಟನು. ಮುಂದಕ್ಕೆ ದತ್ತುಪುತ್ರ ಚೆನ್ನಬಸಪ್ಪ ನಾಯಕ, ಸೋಮಶೇಖರ ನಾಯಕ (ವೀರಮ್ಮಾಜಿಯ ದತ್ತಮಗ) ವೀರಮ್ಮಾಜಿ ಅವನ ಹೆಸರಲ್ಲಿ ರಾಜ್ಯಭಾರ ಮಾಡುತ್ತಿದ್ದಳು. ಹೈದರಾಲಿಯು ಕ್ರಿ.ಶ.1762 ಕೆಳದಿಯನ್ನು ಆಕ್ರಮಿಸಿ ವಶಪಡಿಸಿಕೊಂಡನು. ಆನಂತರದ ದಿನಗಳಲ್ಲಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ರಾಜಾಶ್ರಯದ ಕೊರತೆಯಾಯಿತು. ಕ್ರಿ.ಶ.1784ರಲ್ಲಿ ಟಿಪ್ಪು ಸುಲ್ತಾನನು ಬ್ರಿಟಿಷರಿಂದ ಸೋಲಲ್ಪಟ್ಟ, ಮಂಗಳೂರು ಒಪ್ಪಂದದಂತೆ ತುಳುನಾಡನ್ನು ಬ್ರಿಟಿಷರಿಗೆ ಬಿಟ್ಟು ಕೊಡಲಾಯಿತು. ಆನಂತರ ಕರಾವಳಿ ತುಳುನಾಡು ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಿದರು. ಅದುದರಿಂದ ಈ ಪ್ರದೇಶ ಇಂಗ್ಲೀಷ್ ವಶವಾದ ನಂತರ ದೇವಸ್ಥಾನಕ್ಕೆ ಕೊಟ್ಟ, ಊಂಬಳಿ ಉತ್ತಾರಗಳನ್ನು ಇಂಗ್ಲೀಷರು ರದ್ದುಪಡಿಸಿ ದೇವಳಕ್ಕೆ ವಾರ್ಷಿಕ ಸುಮಾರು 4,400 ರೂಪಾಯಿ ತಸದೀಕು, ಸುಬ್ರಹ್ಮಣ್ಯ ಮಠಕ್ಕೆ 560 ರೂಪಾಯಿ ತಸದೀಕು ದ.ಕ. ಜಿಲ್ಲೆಯಿಂದ ಹಾಗೂ ಮೈಸೂರು ಸಂಸ್ಥಾನದಿಂದ 600 ಚಿಲ್ಲರೆ ತಸದೀಕು ಸಿಗುವಂತಾಯಿತು. ಆಮೇಲೆ ಮೈಸೂರು ಸಂಸ್ಥಾನದ ಒಡೆಯರು ಈ ಕ್ಷೇತ್ರದೊಡನೆ ನಿಕಟ ಸಂಬಂಧ ದಾನ ದತ್ತಿ ಉಂಬಳಿಯನ್ನು ಕೊಡುತ್ತಾ ಬಂದರು. ಮೈಸೂರು(1830 ಮೂರನೇ ಕೃಷ್ಣರಾಜ ಒಡೆಯರ ಕಾಲ) ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಾಗ ಸುಬ್ರಹ್ಮಣ್ಯದ ವೈಭವ ಮಂಜು ಮುಸುಕಿದಂತಾಯಿತು. ನಂತರ ಕೂಜುಗೋಡು ಮನೆತನದವರಿಂದ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತ ನಡೆಸುತ್ತಿತ್ತು. ಸ್ವಾತಂತ್ರ್ಯದನಂತರ ಕರ್ನಾಟಕ ಸರಕಾರದ ಮುಜರಾಯಿ ಇಲಾಖೆಯ ವತಿಯಿಂದ

ಸುಬ್ರಹ್ಮಣ್ಯ ದೇವಳದ ಆಡಳಿತ ನಡೆಸಲ್ಪಡುತ್ತಿದೆ.

ಆಧಾರ ಗ್ರಂಥಗಳು

1. ತುಳು ಕರ್ನಾಟಕ ಅರಸು ಮನೆತನಗಳು – ಸಂಪಾದಕರು ಹೆರಂಜೆ ಕೃಷ್ಣ ಭಟ್ ಮತ್ತು ಯಸ್.ಡಿ. ಶೆಟ್ಟಿ.
2. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ – ಮಂಜೇಶ್ವರ ಗಣಪತಿ ರಾವ್ ಐಗಳ.
3. ಸುಬ್ರಹ್ಮಣ್ಯ ಕ್ಷೇತ್ರ ಪರಿಚಯ ಪುಸ್ತಕ ಶ್ರೀ ದೇವಳದ ಪ್ರಕಟಿತ.
4. ಕುಕ್ಕೇ ಸುಬ್ರಹ್ಮಣ್ಯ ಮತ್ತು ಕೆಳದಿ ಅರಸರು – ಕೆ.ಎಸ್.ಎನ್. ಉಡುಪ ಮತ್ತು ಗುಂಡಾ ಜೋಯಿಸ್
5. ಕೆಳದಿ ನೃಪ ವಿಜಯ – ಪುಟ – 240, 204, 275, 276, 286.
6. ಅಷ್ಟಬಂಧ ಬ್ರಹ್ಮಕಲಶ ಸ್ಮರಣ ಸಂಚಿಕೆ– ತ್ರಿ ಗೋಪಾಲಕೃಷ್ಣ ದೇವಸ್ಥಾನ.
7. ಯಚ್.ಯಸ್. ಗೋಪಾಲರವರ ಸಂಗ್ರಹದಿಂದ.

❖❖❖

ಜೋಡು ಎತ್ತಿನ
ಕತ್ತು ಕುಣಿಕೆಯ
ಬಿಡಿಸಿ ಹೊಲದೆಡೆ ಅಟ್ಟುತಾ
ನೊಗವ ಹೆಗಲಲಿ
ಹೊತ್ತು ನಡೆದಿಹ
ರೈತ ದಿನಚರಿ ಬಿಚ್ಚುತಾ

ಅಂಬಿಗರ ಚೌಡಯ್ಯನ ವಚನಗಳಲ್ಲಿ ಲೋಕನೀತಿ

ಡಾ. ಮಂಜುನಾಥ ಎಂ.ಎಂ.
ಕನ್ನಡ ಸಹಪ್ರಾಧ್ಯಾಪಕ, ಸ.ಪ್ರ.ದ.ಮ. ಕಾಲೇಜು, ಶಿವಮೊಗ್ಗ

ಆಧ್ಯಾತ್ಮಿಕ ಸಾಧನೆಗೆ ಅಡ್ಡಿಯಾಗುವ ಅಸಮಾನತೆಯನ್ನು ದೂರಮಾಡಿ ಸಮಾನತೆಯ ನಾಡನ್ನು ನಿರ್ಮಾಣ ಮಾಡಬೇಕೆಂದು ಪಣತೊಟ್ಟವರು 12ನೆಯ ಶತಮಾನದ ವಚನಕಾರರು ಎಂದರೆ ಅತಿಶಯೋಕ್ತಿಯಾಗಲಾರದು. ಜೇಡರ ದಾಸಿಮಯ್ಯ ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ, ಆಯ್ದಕ್ಕಿ ಮಾರಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಅಕ್ಕಮಹಾದೇವಿ, ಅಮುಗೆ ರಾಯಮ್ಮ, ಆಯ್ಕಕ್ಕಿ ಲಕ್ಕಮ್ಮ, ಸೂಳೆ ಸಂಕವ್ವ ಮುಂತಾದ ವಚನಕಾರರು ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ವಚನಗಳನ್ನು ಹೇಳಿದರು. ಜನಸಾಮಾನ್ಯರೇ ಜನಸಾಮಾನ್ಯರಿಗಾಗಿ ರಚಿಸಿದ ಸಾಹಿತ್ಯವಾಗಿ ವಚನಗಳನ್ನು ಗುರುತಿಸಬಹುದು.

ವಚನಕಾರರ ಪೈಕಿ ಅಂಬಿಗರ ಚೌಡಯ್ಯನಿಗೆ ವಿಶಿಷ್ಟ ಸ್ಥಾನವಿದೆ. ಈತ ಜನಿಸಿದ್ದು ಈಗಿನ ಹಾವೇರಿ ಜಿಲ್ಲೆಯ ಚೌಡಯ್ಯದಾನಪುರದಲ್ಲಿ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಚೌಡಯ್ಯದಾನಪುರವನ್ನು 'ಶಿವಪುರ' ಎಂದು ಕರೆಯಲಾಗುತ್ತಿತ್ತು. ಚೌಡಯ್ಯ ತುಂಗಾಭದ್ರ ನದಿಯಲ್ಲಿ ಅಂಬಿಗನಾಗಿ(ದೋಣಿ ನಡೆಸುವವ) ಕಾಯಕವನ್ನು ನಿರ್ವಹಿಸುತ್ತಿದ್ದ. ಬಸವಣ್ಣ ಮತ್ತು ಅಲ್ಲಮರಿಂದ ಪ್ರಭಾವಿತನಾದ ಈತ ಕಲ್ಯಾಣದ 'ಅನುಭವ ಮಂಟಪ'ದಲ್ಲಿ ಕೂಡ ಭಾಗವಹಿಸಿ ತನ್ನ ನಿಷ್ಠುರವಾದ ವಿಚಾರಗಳನ್ನು ಹೇಳಿ ದಿಟ್ಟತನವನ್ನು ಪ್ರದರ್ಶಿಸಿ ಕೃತಾರ್ಥನಾಗುತ್ತಿದ್ದ.

ಅಂಬಿಗರ ಚೌಡಯ್ಯ ಸಾವಿರಾರು ವಚನಕಾರರ ನಡುವೆ ಭಿನ್ನನಾಗಿ ಕಾಣುವುದೇ ಬಲು ಬಂಡಾಯದ ಮನೋಧರ್ಮದಿಂದ. ಆದ್ದರಿಂದ ವಿದ್ವಾಂಸರು ಈತನನ್ನು ವಚನಕಾರರಲ್ಲಿಯೇ 'ಬಲು ಬಂಡಾಯದ ವಚನಕಾರ' ಎಂದು ಕರೆದಿದ್ದಾರೆ. ಈತನ ಬಂಡಾಯದ ಹಿಂದೆ ಸ್ವಾರ್ಥ, ವೈಯಕ್ತಿಕಹಿತ, ಹಟಮಾರಿತನವಿರಲಿಲ್ಲ. ಸಮಾಜವನ್ನು ಸಮಗ್ರವಾಗಿ ಬದಲಾಯಿಸಿ ಸರ್ವರ ಹಿತ ಬಯಸುವ ಆದರ್ಶಸಮಾಜ ನಿರ್ಮಾಣದ ಹಂಬಲವಿತ್ತು. ಸರ್ವರ ಬೆಳವಣಿಗೆಯಾಗಬೇಕೆಂಬ ತುಡಿತವಿತ್ತು. ಶೋಷಣೆ ಮತ್ತು ಸಮಾಜದ ನಿರ್ಮಾಣದ ತವಕವಿತ್ತು. ಇನ್ನೊಬ್ಬರು ಹೇಳಿದ್ದಕ್ಕೆಲ್ಲಾ ತಲೆಯಾಡಿಸುವ ಜಾಯಮಾನ ಇವನದಲ್ಲ. ತನ್ನನ್ನು ತಾನು ತಿದ್ದಿಕೊಳ್ಳುತ್ತಲೇ ಸಮಾಜವನ್ನುತಿದ್ದುವ ಪ್ರಯತ್ನ ಇವನ ಚಿಂತನೆಯ ಮೂಲಉರಿಯಾಗಿತ್ತು. ಕೆಲವು ವಚನಕಾರರು ಅಳಿವಿನ ಸ್ಥಾವರಲಿಂಗವನ್ನು ವಿರೋಧಿಸಿಯೂ ಸ್ಥಾವರಲಿಂಗವನ್ನೇ ತಮ್ಮ ವಚನಗಳ ಅಂಕಿತವನ್ನಾಗಿ ಇಟ್ಟುಕೊಂಡಿರುವುದನ್ನು ದಿಟ್ಟತನದಿಂದ ಪ್ರಶ್ನಿಸಿದವನು. ತಾನು ಮಾತ್ರ ತನ್ನ ವಚನಗಳಿಗೆ 'ಅಂಬಿಗರ ಚೌಡಯ್ಯ' ಎಂಬ ಅಂಕಿತವನ್ನಿಟ್ಟುಕೊಂಡು ಮುಂದಿನವಚನಕಾರರಿಗೆಲ್ಲಾ ಮಾದರಿಯಾಗಿ ನಿಲ್ಲುವ ವ್ಯಕ್ತಿತ್ವ ಹೊಂದಿದವನು.

ಈತನ ವಚನಗಳು ಲೋಕನೀತಿಯನ್ನು ಸಾರುತ್ತವೆ. ಸತಿ–ಪತಿಗಳ ಸಂಸಾರ ವೆಂಬುದು ರಥದಂತೆ. ಇದು ಪರಸರ ಅರಿವಿನ ಆಸರೆಯಲ್ಲಿ ಮುನ್ನಡೆಯಬೇಕು ಎನ್ನುವ

ವಿಚಾರವನ್ನು ಬಹು ಸೊಗಸಾಗಿ ಮತ್ತು ಅಷ್ಟೇ ಕಟುವಾಗಿ ವಿವರಿಸುವ ಪರಿ ಹೀಗಿದೆ.

...ಗಂಡಹೆಂಡಿರ ಮನಸು ಒಂದಾಗಿದ್ದರೆ
ದೇವರ ಮುಂದೆ ನಂದಾದೀವಿಗೆಯ ಮೂಡಿಸಿದ ಹಾಗೆ
ಗಂಡಹೆಂಡಿರ ಮನಸು ಬೇರಾದರೆ
ಗಂಜಳದೊಳಗೆ ಹಂದಿ ಹೊರಳಾಡಿ
ಒಂದರ ಮೇಲೊಂದು ಬಿದ್ದು ಮೂಸಿದ ಹಾಗೆ...

ಎಂಬುದು ಆದ್ಯ ವಚನಕಾರ ಜೇಡರದಾಸಿಮಯ್ಯನ ವಚನವೊಂದನ್ನು ನೆನಪಿಸುತ್ತದೆ. 'ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ'.

ಬದುಕನ್ನು ಸಮಾಜಮುಖಿಯಾಗಿ ಸಮಷ್ಟಿಪ್ರಜ್ಞೆಯಿಂದ ಕಟ್ಟಬೇಕೆಂಬುದು ಚೌಡಯ್ಯನ ಅಭಿಮತ. ಆದರೆ ಅದು ಹಾಗಾಗುತ್ತಿಲ್ಲ ಎಂಬುದು ಅವನ ವಿಷಾದ.

ಬಡತನಕೆ ಉಂಬುವ ಚಿಂತೆ
ಉಣಲಾದರೆ ಉಡುವ ಚಿಂತೆ
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ
ಇಂತಿ ಹಲವು ಚಿಂತೆಯಲ್ಲಿ ಇದ್ದವರ ಕಂಡೆನು
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನೆಂದಾತ
ನಮ್ಮಅಂಬಿಗರ ಚೌಡಯ್ಯ ಶಿವಶರಣನು.

ಭಕ್ತಿ ಎಂಬುದು ನಿಜವಾದ ಅರಿವಿಲ್ಲದೆಯೇ ಡಂಭಾಚಾರದ ಭಕ್ತಿ ಮಾಡುವವರನ್ನು ಸಹಿಸದ ಚೌಡಯ್ಯ ಜಡವಾದುದನ್ನು ದೇವರೆಂದು ಭಾವಿಸಿ ಮೌಢ್ಯದಲ್ಲಿ ಕಳೆದುಹೋದವರನ್ನುಅಣಕಿಸುತ್ತ ದಟ್ಟ ದಾರಿದ್ರದಿಂದ, ಹಸಿವಿನಿಂದ, ಅಸಹಾಯಕತೆಯಿಂದ ನರಳುವವರಿಗೆ ಸಹಾಯ ಹಸ್ತ ಚಾಚುವುದೇ ನಿಜವಾದ ಭಕ್ತಿ ಎಂಬುದನ್ನುಈ ವಚನದಲ್ಲಿ ಮನಸ್ಪರ್ಶಿಸುವಂತೆ ಹೇಳಿದ್ದಾನೆ.

ಕಲ್ಲನಾಗರ ಕಂಡರೆ ಹಾಲು ಹುಯ್ಕೆಂಬರು
ಬದುಕಿದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯ
ಉಂಬ ದೇವರು ಬಂದಡೆ ಇಲ್ಲವೆಂದಟ್ಟುವರು
ಉಣದ ಕಲ್ಲುಪ್ರತಿಮೆಯ ಮುಂದಿಟ್ಟು ಉಣ್ಣೆಂಬರು...

ಈ ವಚನ ಬಸವಣ್ಣನವರ ಇದೇ ಮಾದರಿಯ ವಚನವನ್ನು ನೆನಪಿಸುವಂತಿದೆ.

ಸಾಮಾಜಿಕ ಅನಿಷ್ಟವಾದ ಜಾತಿಯತೆಯನ್ನು ಬಹಳ ಕಟುವಾಗಿ ಟೀಕಿಸುತ್ತಾ, ಹೊಲೆತನವೆನ್ನುವುದು ಜಾತಿಯಿಂದಾಗಲಿ, ಹುಟ್ಟಿನಿಂದಾಗಲಿ ನಿರ್ಧರಿಸುವಂತಹದ್ದಲ್ಲ. ಬದಲಾಗಿ ಅದು ನೀತಿಯಿಂದ ಗುಣನಡತೆ, ವರ್ತನೆ, ಆಲೋಚನೆ, ಸ್ವಭಾವ–ಚಿಂತನೆಗಳಿಂದ ಎನ್ನುವುದನ್ನು ಬಹಳಷ್ಟು ನೇರವಾಗಿ ಅಭಿವ್ಯಕ್ತಿಸುವ ಚೌಡಯ್ಯ ಬಹುಮಾರ್ಮಿಕವಾಗಿ ಯಾವುದು ಹೊಲೆತನ ಎನ್ನುವುದನ್ನು ಎಳೆಎಳೆಯಾಗಿ ವಿವರಿಸುವ ಪರಿ ಇದು.

ಹೊಲೆಯ ಹೊಲೆಯ ಎಂದಡೆ ಹೊಲೆಯರೆಂತಪ್ಪರಯ್ಯಾ
ಹೊಲೆಯ ಹೊರಕೇರಿಯಲ್ಲಿರುವವನೇ?
ಊರೊಳಗೆ ಇಲ್ಲವೆ ಅಯ್ಯಾ ಹೊಲೆಯರು

ತಾಯಿಗೆ ಬೈದವನೆ ಹೊಲೆಯ, ತಂದೆಗೆ ಉತ್ತರ ಕೊಟ್ಟವನೇ ಹೊಲೆಯ
ಕೊಡುವ ದಾನಕ್ಕೆಅಡ್ಡ ಬಂದವನೇ ಹೊಲೆಯ
ಹತ್ತು ಆಡಿದರೂ ಒಂದು ನಿಜವಲ್ಲದವನೆ ಹೊಲೆಯ
ಚಿತ್ತದಲಿ ಪರಸತಿಯ ಬಯಸಿದರೆ ಹೊಲೆಯ..

ಹಾಗೆಯೇ ಮುಂದುವರಿದು ಗುರು–ಶಿಷ್ಯರ ಲಕ್ಷಣಗಳೇನು? ಗುರುವಿನ ಹೊಣೆಗಾರಿಕೆ ಏನು? ಶಿಷ್ಯ ಹೇಗಿರಬೇಕೆಂಬುದನ್ನು ಸ್ಪಷ್ಟ ನಿದರ್ಶನದೊಂದಿಗೆ ಚಿತ್ರಿಸಿದ್ದಾನೆ. ಗುರುಶಿಷ್ಯರೆಂಬುವರು ಹೇಗಿರಬಾರದುಅದರಿಂದ ಸಮಾಜದಲ್ಲಿ ಯಾವರೀತಿಯ ಅಡ್ಡಪರಿಣಾಮ ಬೀರಬಹುದು ಎಂಬುದನ್ನು ಬಹುಸೂಕ್ಷ್ಮವಾಗಿ ಅವಲೋಕಿಸುತ್ತಾ ಗುರುವಾದವನು ಪರಿಪೂರ್ಣವಾದ ಜ್ಞಾನವನ್ನು ಹೊಂದಿರಬೇಕುಮತ್ತು ಅದನ್ನುಅರ್ಜಿಸಿಕೊಳ್ಳುವ ಸಾಮರ್ಥ್ಯ ಶಿಷ್ಯನಾದವನಿಗೆ ಇರಬೇಕು. ಅರಿಯದ ಗುರು–ಶಿಷ್ಯರನ್ನುಈ ರೀತಿ ಟೀಕಿಸಿದ್ದಾರೆ.

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹಿಸಿ ಮಾಡಿದಡೇನಪ್ಪುದೆಲವೋ
ಅಂಧಕನ ಕೈಯನಂಧಕ ಹಿಡಿದಡೆ
ಮುಂದನಾರು ಕಾಂಬರು ಹೇಳಲೆ ಮರುಳೆ...

ಪ್ರತಿಯೊಬ್ಬರೂ ಶ್ರಮಾಧಾರಿತವಾದ ಕಾಯಕದಲ್ಲಿ ತೊಡಗಿಸಿಕೊಳ್ಳಬೇಕು. ಕಾಯಕ ಮಾಡದವನು ತಿನ್ನುವ ಯೋಗ್ಯತೆಯನ್ನು ಕಳೆದುಕೊಳ್ಳುತ್ತಾನೆ. ಸಮಾಜಕ್ಕೆ ಪೂರಕವಾದ ಶ್ರಮಾಧಾರಿತವಾದ ಯಾವುದೇ ವೃತ್ತಿಯನ್ನು ಕಡೆಗಣಿಸತಕ್ಕದ್ದಲ್ಲ. ಕಾಯಕಕ್ಕೆ ಮಹತ್ತ್ವ ಕೊಟ್ಟಾಗ ಮಾತ್ರ ಅದಕ್ಕೊಂದು ಅರ್ಥ, ಬೆಲೆ ಬಂದೀತು. ಸಮಾಜ ಪ್ರಗತಿ ಹೊಂದೀತು. ಅದಕ್ಕೆಂದೇ ಅಂಬಿಗರಚೌಡಯ್ಯ ತನ್ನ ಅಂಬಿಗರ ಕಾಯಕ(ವೃತ್ತಿ)ವನ್ನು ಟೀಕಿಸಿದವರಿಗೆಲ್ಲಾ ನೇರವಾಗಿಯೇ ಉತ್ತರ ನೀಡಿದ್ದಾನೆ.

ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರಿ
ನಂಬಿದರೆ ಒಂದೇ ಹುಟ್ಟಲಿ ಕಡೆಯ ಹಾಯಿಸು?

ಎಂದು ಹೇಳಿ, ಕೇವಲ ತಾನು ನೀರಿನ ಜೊತೆ ವ್ಯವಹರಿಸುವವನಲ್ಲ. ಭವಸಾಗರದಲ್ಲಿ ಹುಟ್ಟು ಹಾಕುವ ಕೌಶಲ್ಯವುಳ್ಳವನು ಎಂದು ಹೇಳುತ್ತ ತನ್ನ ಅನುಭಾವದೃಷ್ಟಿಯನ್ನು ಪ್ರಕಟಿಸಿದ್ದಾನೆ. ಹಾಗೆಯೇ ಯಾವುದೇ ಆಚರಣೆಯನ್ನು ವ್ಯರ್ಥವಾಗಿ ಆಚರಿಸದೇ ತರ್ಕಬದ್ಧವಾಗಿ ಚಿಂತಿಸಿ ಮಾಡುವುದು ಲೇಸು. ಆಚಾರದ ಹಿಂದೆ ವಿಚಾರವಿರಬೇಕು. ಶ್ರದ್ಧೆಯಿಲ್ಲದೆ ಕೇವಲ ಬಿಲ್ವಪತ್ರೆಯ ಸಮರ್ಪಣೆಯಿಂದ ತರುಗಳು ಬರಿದಾಗುತ್ತವೆ. ಅಭಿಷೇಕದಿಂದ ಸಪ್ತಸಾಗರಗಳು ನಾಶವಾಗುವವು. ಇವೆಲ್ಲಕ್ಕಿಂತ ಮಹಾಮನೆಯಲ್ಲಿ ಶಿವಶರಣರು ಶಿವಲಿಂಗಾರ್ಚನೆ ಮಾಡುವ ಸಮಯದಲ್ಲಿಅವರ ಪಾದರಕ್ಷೆಯನ್ನು ಕಾಯುವುದೇ ನಿಜವಾದ ಕಾಯಕ ಎಂಬುದು ಚೌಡಯ್ಯನ ಅಭಿಪ್ರಾಯ. ಕಾಯಕವನ್ನು ಮನಮುಟ್ಟಿ ಮಾಡುವುದರಿಂದ ತನು–ಮನ ಎರಡೂ ಸಂತೃಪ್ತಿ ಪಡೆಯುವವು. ಅದೇ ಉಮೇಶನ ನಿಜವಾದ ಪೂಜೆ. ದೇಹದಂಡನೆಯಾಗದೇ ಕಾಯಕ ಪೂರ್ಣಗೊಳ್ಳುವುದಿಲ್ಲ. ಕಾಯಕದ ಮಹತ್ತ್ವವನ್ನು ಅರಿಯದವರು ಕಾಯಕವನ್ನು ವಿವರಿಸಲು ಸಮರ್ಥರಾಗಲು ಸಾಧ್ಯವಿಲ್ಲ.

ಅಂಬಿಗರ ಚೌಡಯ್ಯ ಬರೀ ಪ್ರಶ್ನೆ ಮಾಡುವ ಋಣಾತ್ಮಕ ಮನೋಭಾವದ

ಬಂಡಾಯದ ವಚನಕಾರ ಮಾತ್ರವಲ್ಲ ಧನಾತ್ಮಕ ಗುಣದ ಸಮಾಜಮುಖಿಯಾದ ಅನುಪಮ ದಾರ್ಶನಿಕ. ಬಂಡಾಯದ ವಚನಕಾರ ಎಂಬುದಾಗಿ ಡಾ.ಬಸವರಾಜ ಸಿದ್ಧಾಶ್ರಮ ಅಭಿಪ್ರಾಯಪಟ್ಟಿದ್ದಾರೆ.

ಅಂಬಿಗರ ಚೌಡಯ್ಯನ ದೂರದೃಷ್ಟಿ ಅನುಪಮವಾದುದು. ಹಾಗೆಯೇ ವಿಶ್ವಮಾನವಪ್ರಜ್ಞೆಯು ಅಪೂರ್ವವಾದುದು. ಯಾವುದೇ ತತ್ತ್ವ, ನೀತಿ, ದರ್ಶನ, ಭಗವದ್ಸಾಕ್ಷಾತ್ಕಾರ ಮಾರ್ಗವು ವಿಶ್ವದ ಸಕಲ ಮಾನವರಿಗೂ ಅನ್ವಯಿಸುವಂತಾಗಬೇಕೆಂಬುದೇ ಅವನೆಲ್ಲ ಚಿಂತನೆಗಳ ಮೂಲ. ಆ ಮಾರ್ಗ ಒಂದು ವರ್ಗ ಅಥವಾ ಧರ್ಮಅಥವಾ ಜಾತಿ ಸೃಷ್ಟಿಗೆ ಕಾರಣವಾಗಬಾರದೆಂದು ಅವನು ಸಾಕಷ್ಟು ಕಾಳಜಿವಹಿಸಿದ್ದಾನೆ. ಚೌಡಯ್ಯ ಜ್ಞಾನಪೂರ್ವದಲ್ಲಿ ಒಂದು ವ್ಯವಸ್ಥೆಯ ಕಟ್ಟುಪಾಡಿಗೆ (ನಿಬರ್ಂಧಕ್ಕೆ) ಒಳಪಟ್ಟಿದ್ದ. ಜ್ಞಾನೋತ್ತರದಲ್ಲಿ ಎಲ್ಲಾ ನಿಬರ್ಂಧಗಳನ್ನು ತ್ಯಜಿಸಿದ ವಚನಕಾರನಾದ ಈತ ಎಲ್ಲರಲ್ಲಿಯೂ ಸತ್ಯ ಸದಾಚಾರಗಳಿಂದ ಒಡಗೂಡಿದ ನಡೆ, ನಟೆಯನ್ನು ಬಿಟ್ಟು ದಿಟವನ್ನು ಹಿಡಿವ ಛಲವನ್ನು ನಿರೀಕ್ಷಿಸುತ್ತಾನೆ. ಅದು ಕಾಣದಿದ್ದಾಗ ಬಂಡಾಯವೇಳುತ್ತಾನೆ. ಬೈದು, ತಿಳಿಹೇಳಿ, ತಿದ್ದಲನುವಾಗುತ್ತಾನೆ. ಆಧ್ಯಾತ್ಮಿಕ ಮಾನವತಾವಾದವನ್ನು ಪ್ರತಿಪಾದಿಸುತ್ತಾನೆ. ಅಂಬಿಗರ ಚೌಡಯ್ಯನ ಬೋಧನೆಗಳು ಆತನ ಜೀವನದಂತೆ ಸರಳ.

ಪರಾಮರ್ಶನ ಸಾಹಿತ್ಯ

1) ಅನಿತಾ ಹೆಗ್ಗೋಡು, ಅಂಬಿಗರ ಚೌಡಯ್ಯನ ವಚನಗಳಲ್ಲಿ ಕಾಯಕ, ಪ್ರಸಾರಾಂಗ, ಮಂಗಳೂರು ವಿವಿ, 2021
2) ಬಸವರಾಜ ಸಿದ್ಧಾಶ್ರಮ, ವಿಜಯವಾಣಿ ಪತ್ರಿಕೆಯ ಲೇಖನ.
3) ಶರಭೇಂದ್ರಸ್ವಾಮಿ ಬಿ.ಎಂ. ಅನುಭಾವಿ ಅಂಬಿಗ – 'ಅಂಬಿಗರಚೌಡಯ್ಯ' ಪ್ರಸಾರಾಂಗ, ಮಂಗಳೂರು ವಿವಿ, 2021
4) ಸೋಮಣ್ಣ, ಯತೀಶ್ ಕುಡುಪು, ಅಂಬಿಗರ ಚೌಡಯ್ಯ ವಚನಗಳ ಪರಿಶೀಲನೆ (ಸಂ), ಪ್ರಸಾರಾಂಗ, ಮಂಗಳೂರುವಿವಿ, 2023

❖❖❖

ಯಶವಂತ ಚಿತ್ತಾಲರ 'ಮೂರುದಾರಿಗಳು' ಕಾದಂಬರಿಯಲ್ಲಿ ನಿರ್ಮಲೆಯ ಅಪ್ರಬುದ್ಧ ಬಂಡಾಯ

ಡಾ. ವರುಣ್ ಎಂ.
ಸಹಾಯಕ ಪ್ರಾಧ್ಯಾಪಕರು, ಶಂಕರಗೌಡ ಶಿಕ್ಷಣ ಮಹಾವಿದ್ಯಾಲಯ, ಮಂಡ್ಯ

ನವ್ಯ ಕಾಲಘಟ್ಟದಲ್ಲಿ ತಮ್ಮ ಸೃಜನಶೀಲ ಪ್ರತಿಭೆ ಹಾಗೂ ಬಹುಮುಖಿ ಚಿಂತನೆಯ ವಿಶಿಷ್ಟ ವ್ಯಕ್ತಿತ್ವದಿಂದಾಗಿ ಗಮನ ಸೆಳೆದವರಲ್ಲಿ ಯಶವಂತ ಚಿತ್ತಾಲರು ಕೂಡ ಒಬ್ಬರು. ಕಥಾತಂತ್ರ, ನಿರೂಪಣೆಗಳನ್ನು ತಮ್ಮದೇ ನೆಲೆಯಲ್ಲಿ ವಿಸ್ತರಿಸುತ್ತಾ ಹೋಗುವ ಇವರು, ನವ್ಯ ಕಾದಂಬರಿಕಾರರಲ್ಲಿಯೇ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಚಿತ್ತಾಲರು 'ಮೂರುದಾರಿಗಳು', 'ಶಿಕಾರಿ', 'ಛೇದ', 'ಪುರುಷೋತ್ತಮ', 'ಕೇಂದ್ರವೃತ್ತಾಂತ' ಮತ್ತು 'ದಿಗಂಬರ' ಎಂಬ ಆರು ಕಾದಂಬರಿಗಳನ್ನು ಬರೆದಿದ್ದಾರೆ. ಈ ಕಾದಂಬರಿಗಳೆಲ್ಲವೂ ತಮ್ಮದೇ ಆದ ವಸ್ತು ವೈವಿಧ್ಯ, ನಿರೂಪಣೆ, ತಂತ್ರ, ವಿಷಯ, ಭಾಷೆ, ಶೈಲಿ, ಕಲಾತ್ಮಕತೆಯ ದೃಷ್ಟಿಯಿಂದ ಅನನ್ಯವಾಗಿವೆ.

ಸ್ತ್ರೀಬದುಕಿನ ಸಂಕೀರ್ಣತೆಯನ್ನು ಬಿಂಬಿಸುವ ಇವರ 'ಮೂರುದಾರಿಗಳು' ಕಾದಂಬರಿಯು ಮಹಿಳಾ ಸಂವೇದನೆಯ ನೆಲೆಯಿಂದ ವಿಶಿಷ್ಟ ಸ್ಥಾನದಲ್ಲಿ ನಿಲ್ಲುತ್ತದೆ. ವಿಶೇಷವಾಗಿ ಕಾದಂಬರಿಯ ಕೇಂದ್ರದಲ್ಲಿ ಭೀತಿ–ಪ್ರೀತಿಗಳ ಕಾರಣದಿಂದ ಸ್ಫೋಟಗೊಂಡ ಹೆಣ್ಣೊಬ್ಬಳ ಬಂಡಾಯದ ಚಿತ್ರಣವಿದೆ. ಉತ್ತರಕನ್ನಡದ ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ರಚನೆಯಾಗಿರುವ ಈ ಕಾದಂಬರಿಯಲ್ಲಿ, ಹೆಣ್ಣಿನ ಮನಸ್ಸನ್ನು ನಿರ್ಬಂಧಿಸುವ ಸಾಮಾಜಿಕ ವ್ಯವಸ್ಥೆಯ ಬಗೆಗಿನ ವಿಶ್ಲೇಷಣೆ ಇದೆ. ಇದಕ್ಕೆ ಪೂರಕವಾಗಿ ಬರುವ ಇಲ್ಲಿಯ ಪಾತ್ರಗಳ ತಳಮಳ, ಹೊಯ್ದಾಟಗಳು ಮನಕಲಕುವಂತಿವೆ. ಕಾದಂಬರಿಯಲ್ಲಿ ಬರುವ ಸ್ತ್ರೀಪಾತ್ರಗಳನ್ನು ವಿಶೇಷವಾಗಿ ನಿರ್ಮಲೆಯ ಪಾತ್ರವನ್ನು ಸಾಮಾಜಿಕ ಸಂದರ್ಭದಲ್ಲಿ ವಿವೇಚನೆಗೊಳಪಡಿಸುತ್ತಾ ಆ ಮೂಲಕ ವರ್ತಮಾನದ ಕಾಲಘಟ್ಟವನ್ನು ಪುನರ್‌ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಕಾದಂಬರಿಯ ಕೇಂದ್ರ ವ್ಯಕ್ತಿಯಾದ ಹೆಣ್ಣೊಬ್ಬಳು ಚಾಡಿಕೋರ ಸಮಾಜಕ್ಕೆ ಬೇಸತ್ತು, ಮಾನಸಿಕ ತೊಳಲಾಟಕ್ಕೆ ಒಳಗಾಗಿ ಅಪ್ರಬುದ್ಧ ರೀತಿಯಲ್ಲಿ ಬಂಡಾಯವನ್ನು ತೋರಲು ಹೋಗಿ ದುರಂತ ಅಂತ್ಯ ಕಾಣುವ ಬಗೆಯನ್ನು ಮಹಿಳಾ ಸಂವೇದನೆಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಲಾಗಿದೆ. ಶಾಲೆ ಕಲಿಯುವುದು ಮುಗಿಯುವ ಮುನ್ನವೇ ತಂದೆ ಮದುವೆ ಮಾಡಲು ಹೊರಟಿರುವುದು, ಜನರು ಹೆಣ್ಣಿನ ಬಗ್ಗೆ ಆಡಿಕೊಳ್ಳುವ ಕೆಟ್ಟಮಾತುಗಳು, ಮುಖ ನೋಡದೆಯೇ ಮದುವೆಯಾಗಲಿರುವ ಗಂಡೊಬ್ಬನ ಅತೀ ಔದಾರ್ಯ ಈ ಎಲ್ಲದರಿಂದ ರೋಸಿಹೋಗುವ ಹೆಣ್ಣೊಬ್ಬಳು ತನ್ನ ಅಪ್ಪನ ವಿರುದ್ಧ, ಚಾಡಿಕೋರ ರೋಗಗ್ರಸ್ಥ ಸಮಾಜದ ವಿರುದ್ಧ, ಗಂಡಿನ ಔದಾರ್ಯದ ವಿರುದ್ಧ ತೀರ್ವ ಪ್ರತಿಭಟನೆ ವ್ಯಕ್ತಪಡಿಸುವ ರೀತಿಯನ್ನು, ಆ ಸಂದರ್ಭದಲ್ಲಿ ಅವಳು ಆಯ್ದುಕೊಂಡ ಪ್ರತಿಕಾರ ಮಾರ್ಗವನ್ನು ಪ್ರಸ್ತುತ ಲೇಖನವು ವಿಶ್ಲೇಷಿಸುತ್ತದೆ. ಮುಗ್ಧ ಹುಡುಗಿಯನ್ನು ಶೋಷಣೆಗೊಳಪಡಿಸುವ ಸಮಾಜದ ಕ್ರೌರ್ಯ, ಅತೀ ಮಾನವೀಯತೆಯಿಂದಾಗುವ

ಅನಾಹುತ, ಸಂಪ್ರದಾಯನಿಷ್ಠ ಮನೆತನದಲ್ಲಿ ನಡೆಯುವ ಸಮಾಜಬಾಹಿರ ಕೃತ್ಯ ತರುವ ದುರಂತ ಇವೆಲ್ಲವು ಹೆಣ್ಣಿನ ಬಾಳಿನಲ್ಲಿ ಸಂವೇದನಾ ಹೀನವಾಗಿ ವರ್ತಿಸುವ ಬಗೆಯನ್ನು ಈ ಲೇಖನವು ಗುರುತಿಸುತ್ತದೆ.

1964ರಲ್ಲಿ ಪ್ರಕಟಗೊಂಡ 'ಮೂರುದಾರಿಗಳು' ಚಿತ್ತಾಲರ ಮೊದಲನೆಯ ಕಾದಂಬರಿ. ಇದು ಸಿನಿಮಾ ಆಗಿಯೂ ಸಾಕಷ್ಟು ಪ್ರಶಂಸೆಗೆ ಪಾತ್ರವಾಗಿದೆ. ಈ ಕಾದಂಬರಿಯನ್ನು ಬರೆಯಲು ಪ್ರಾರಂಭಿಸಿದಾಗಿನ ಉದ್ದೇಶ ಯೋಜನೆಗಳನ್ನು ಚಿತ್ತಾಲರು ಹೀಗೆ ಗುರುತಿಸುತ್ತಾರೆ. "ಉದ್ಭವಿಸಿದ ಒಂದು ಪ್ರಶ್ನೆಯನ್ನು ಬಿಡಿಸಲು ಮೂರು ವಿಭಿನ್ನ ಪ್ರಕೃತಿಯ ವ್ಯಕ್ತಿಗಳು ಕಂಡುಕೊಂಡ ದಾರಿಗಳು; ಇವು ಇವರು ಬದುಕನ್ನು ಇದಿರಿಸುವ ರೀತಿಗಳೂ ಹೌದು: ಭೀತಿ, ಪ್ರೀತಿ, ಬಂಡಾಯ"(ಯಶವಂತ ಚಿತ್ತಾಲ : ಮೂರುದಾರಿಗಳು: ಮುನ್ನುಡಿ). ಇದನ್ನು ಸಮರ್ಥಿಸುವ ಹಾಗೆ ಕಾದಂಬರಿಯು ನಾಲ್ಕು ಉಪಶೀರ್ಷಿಕೆಗಳಲ್ಲಿ ವಿಂಗಡಿಸಲ್ಪಟ್ಟಿದೆ. ಈ ನಾಲ್ಕು ಭಾಗಗಳಲ್ಲಿ ಒಂದೊಂದು ಪಾತ್ರಕ್ಕೆ ಪ್ರಾಮುಖ್ಯ ಸಿಗುವಂತೆ ಕಥಾನಕವನ್ನು ನಿರೂಪಿಸಿದ್ದರೂ ಕಾದಂಬರಿಯ ನಾಯಕಿ ನಿರ್ಮಲೆಯೇ ಕಾದಂಬರಿಯ ಉದ್ದಕ್ಕೂ ಸಂಪೂರ್ಣವಾಗಿ ಆವರಿಸಿಕೊಳ್ಳುತ್ತಾಳೆ. ಭೀತಿ–ಪ್ರೀತಿಗಳ ಕಾರಣದಿಂದ ಸ್ಫೋಟಗೊಂಡ ನಿರ್ಮಲೆಯ ಬಂಡಾಯವು ಕಾದಂಬರಿಯ ಮೂಲಭಿತ್ತಿಯಾಗಿದೆ. ಇದರೊಟ್ಟಿಗೆ ಕಾಣಿಸಿಕೊಳ್ಳುವ ಇತರೆ ಸ್ತ್ರೀ ಪಾತ್ರಗಳು ಭಾರತೀಯ ಸಮಾಜ, ಕುಟುಂಬಗಳ ಕೈಗನ್ನಡಿಗಳಾಗಿ ಗಮನಸೆಳೆಯುತ್ತವೆ.

ಕಾದಂಬರಿಯ ಆರಂಭದ ಭಾಗದಲ್ಲಿ ಕಾಣಿಸಿಕೊಳ್ಳುವ ವಿಶ್ವನಾಥ ಶಾನಭಾಗರು ಊರಿನ ಗೌರವಾದರಗಳಿಗೆ ಪಾತ್ರರಾದ ಅತ್ಯಂತ ಸಂಭಾವಿತ ವ್ಯಕ್ತಿ. ಈ ವಿಶ್ವನಾಥ–ಅನಸೂಯ ದಂಪತಿಗಳ ಒಬ್ಬಳೇ ಮಗಳು ನಿರ್ಮಲೆ. ವಿಶ್ವನಾಥರು ತಮ್ಮ ಮಗಳು ನಿರ್ಮಲೆಯನ್ನು ಮೆಟ್ರಿಕ್‌ವರೆಗಾದರೂ ಓದಿಸಬೇಕೆಂದು ಕಾರವಾರದಲ್ಲಿದ್ದ ತನ್ನ ತಂಗಿ ಚಂದ್ರಭಾಗಿಯ ಮನೆಯಲ್ಲಿ ಬಿಟ್ಟಿರುತ್ತಾರೆ. ಇದೇ ಸಂದರ್ಭದಲ್ಲಿ ನಿರ್ಮಲೆ ಮೆಟ್ರಿಕ್ ಕಡೆಯ ವರ್ಷದಲ್ಲಿ ಕಲಿಯುತ್ತಿದ್ದಾಗ ಶಾಲೆಯ ವಾರ್ಷಿಕೋತ್ಸವಕ್ಕೆ ಹೋಗದೆ ದುರುಳ ರಂಗಪ್ಪನ ಫೋಟೋ ಸ್ಟುಡಿಯೋದಲ್ಲಿದ್ದಾಗ 'ಇವರಿಬ್ಬರ ಮಧ್ಯದಲ್ಲಿ ಏನೋ ಭಾನಗಡಿ ನಡೆಯಿತು' ಎಂಬ ಗುಸುಗುಸು ಶಾಲೆಯ ಆವರಣದಲ್ಲಿ ಆರಂಭವಾಗಿ, ಕೇರಿಕೇರಿಗಳಲ್ಲೂ ಹರಡುತ್ತದೆ. ಈ ಸುದ್ದಿಯಿಂದ ಭಯಭೀತರಾದ ವಿಶ್ವನಾಥರು, ಕುಟುಂಬದ ಗೌರವವು ಇವಳಿಂದ ಹಾಳಾಗಬಾರದೆಂದು ಆತುರಾತುರದಲ್ಲಿ ವಾಸುದೇವನೆಂಬ ಯುವಕನೊಂದಿಗೆ ಮಗಳ ಮದುವೆ ಮಾಡುವ ಸಿದ್ಧತೆ ಮಾಡತೊಡಗುತ್ತಾರೆ. ಸಂಪ್ರದಾಯ ಮನಸ್ಥಿತಿಯ ಹಳ್ಳಿಗರ ಅಭಿವ್ಯಕ್ತಿ ಮತ್ತು ಪ್ರತಿಕ್ರಿಯೆಗಳ ಅನನ್ಯ ಭಾವವನ್ನು ಇಲ್ಲಿ ಗುರುತಿಸಬಹುದು.

ಕಾದಂಬರಿಯ ಮುಂದಿನ ಭಾಗದಲ್ಲಿ ನಿರ್ಮಲೆಯನ್ನು ವಿವಾಹವಾಗಲು ಮುಂದೆ ಬರುವ ವಾಸುದೇವನು ಒಬ್ಬ ಪ್ರತಿಭಾವಂತ, ಔದಾರ್ಯ ತುಂಬಿದ ಯುವಕನಾಗಿ ಕಾಣಿಸಿಕೊಳ್ಳುತ್ತಾನೆ. ಈತ ಉನ್ನತ ಪದವಿ ಪಡೆಯುವ ಸಾಮರ್ಥ್ಯವಿದ್ದರೂ ತಂದೆಯ ಅಕಾಲ ಮರಣದಿಂದ, ತಾಯಿಯನ್ನು ನೋಡಿಕೊಳ್ಳುವ ಸಲುವಾಗಿ ಕುಮಟೆಯ ಶಾಲೆಯಲ್ಲೇ ಮಾಸ್ತರನಾಗಿ ಉಳಿದಿರುತ್ತಾನೆ. ವಿಶ್ವನಾಥರಂಥ ಗೌರವಾನ್ವಿತರು ತಮ್ಮ ಮಗಳನ್ನು ವಾಸುದೇವನಿಗೆ ಕೊಡಲು ಬಂದಾಗ ತಮ್ಮ ಭಾಗ್ಯವೆಂದು ತಿಳಿದ ವಾಸುದೇವನ ತಾಯಿ ಸೀತಕ್ಕ ಕೂಡಲೆ ಒಪ್ಪಿಗೆ ಸೂಚಿಸುತ್ತಾರೆ. ಇತ್ತ ಸಿರ್ಸಿಯಲ್ಲಿ

ಖಾನಾವಳಿಯೊಂದನ್ನು ನಡೆಸುತ್ತಿದ್ದ ರಂಗಪ್ಪನ ತಂಗಿ ಪ್ರಿಯಾಂಗಿಯ ಬಳಿ ವಾಸುದೇವನ ಆಪ್ತ ಗೆಳೆಯ ಶ್ರೀನಿವಾಸ (ಸಿನ್ನ) ಹೋದಾಗ ಅವನೆದುರಿಗೆ ನಿರ್ಮಲೆ ಮತ್ತು ರಂಗಪ್ಪನ ಭಾನಗಡಿ ಪ್ರಕರಣವನ್ನು ಪ್ರಸ್ತಾಪಿಸುವ ಪ್ರಿಯಾಂಗಿ, ತನ್ನ ಅಣ್ಣನ ರಸಿಕತೆಯನ್ನು ಕೊಂಡಾಡುತ್ತಾಳೆ. ಇದನ್ನೆಲ್ಲ ಕೇಳಿದ ಮಾರನೇ ದಿನವೇ ಶ್ರೀನಿವಾಸ, ವಾಸುದೇವನಿಗೆ ಇವೆಲ್ಲವನ್ನೂ ತಿಳಿಸಿ ಮದುವೆಯ ಪ್ರಸ್ತಾಪವನ್ನು ಪರಿಶೀಲಿಸಿ ತೀರ್ಮಾನಿಸಬೇಕೆಂದು ಎಚ್ಚರಿಸಿದರೂ ಕೇಳದ ವಾಸುದೇವನು, ನಿರ್ಮಲೆಗಂಟಿದ ಈ ಕಳಂಕವನ್ನು ದೂರ ಮಾಡಲೆಂದು ಅವಳನ್ನೇ ಮದುವೆಯಾಗುತ್ತೇನೆಂದು ಖಡಾಖಂಡಿತವಾಗಿ ಹೇಳುತ್ತಾನೆ.

ಇತ್ತ ಕುಮಟೆಯಲ್ಲಿ ತುಂಗಕ್ಕನ ನೇತೃತ್ವದಲ್ಲಿ ಹಪ್ಪಳ ಮಾಡಲು ಸೇರಿದ ಹೆಂಗಸರು, ಶಾನಭಾಗರು ಆತ್ಯಾತುರದಿಂದ ಮಗಳ ಮದುವೆಯನ್ನು ಮಾಡಲು ಹೊರಟಿರುವ ಬಗ್ಗೆ ಹಾಗೂ ವಾಸುದೇವನ ಭೋಳೆ ಸ್ವಭಾವದ ಬಗ್ಗೆ ತಮತಮಗೆ ತಿಳಿದಂತೆ ಚರ್ಚಿಸುತ್ತಾರೆ. ತುಂಗಕ್ಕನಂತೂ ನಿರ್ಮಲೆಯ ಭಾನಗಡಿ ಸುದ್ದಿಯನ್ನು ವಾಸುದೇವನ ತಾಯಿಗೆ ಮುಟ್ಟಿಸಿ ಆಗಲಿರುವ ಪಾಪಕಾರ್ಯವನ್ನು ನಿಲ್ಲಿಸುವುದು ತನ್ನ ಕರ್ತವ್ಯವೆಂದು ಭಾವಿಸಿ ಕುಮಟೆ–ಸಿರಸಿ–ಕಾರವಾರ–ಹೆರವಟ್ಟಿಗಳಲ್ಲಿರುವ ಸಂಬಂಧಿಕರಿಗೆ ಈ ವಿಷಯವನ್ನು ಮುಟ್ಟಿಸುತ್ತಾಳೆ. ಈ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದ ವಾಸುದೇವನು ತನ್ನ ಮೂಲಸ್ವಭಾವವಾದ ಸಹಾನುಭೂತಿಯ ಹಾದಿ ಹಿಡಿಯುತ್ತಾ ರೋಗಗ್ರಸ್ಥ ಸಮಾಜದ ವಿರುದ್ಧ ಪ್ರತಿಭಟಿಸಿ, ನಿರ್ಮಲೆಯ ಪರವಾಗಿ ನಿಲ್ಲುತ್ತಾನೆ. ಅನೈತಿಕ ಮಾರ್ಗ ಹಿಡಿಯಲ್ಲಿದ್ದ ನಿರ್ಮಲೆಯ ಬದುಕಿಗೆ ಪ್ರೀತಿಯ ಮೂಲಕ ಹೊಸ ತಿರುವು ಕೊಡಲು ಪ್ರಯತ್ನಿಸುತ್ತಾನೆ.

ಈ ನಡುವೆ ಲಘಂಗ ರಂಗಪ್ಪನು ತನ್ನ ತಂಗಿ ತಾರಾಳ ಮುಖೇನ ನಿರ್ಮಲೆಯನ್ನು ಸೂರಿಪಾರ್ಕಿಗೆ ಕರೆಸಿ ಶೀಲಭಂಗಕ್ಕೆ ಯತ್ನಿಸಿದಾಗ, ನಿರ್ಮಲೆಯು ಅವನಿಗೆ ಹುಚ್ಚು ಆವೇಶದಿಂದ ಸೊಂಟಕ್ಕೆ ಬಲವಾಗಿ ಒದ್ದು ಪ್ರಜ್ಞಾಹೀನಳಾಗುತ್ತಾಳೆ. ಮಾನಸಿಕ ವಿಚಲಿತಳಾಗಿ ಸನ್ನಿ ಹಿಡಿದವಳಂತೆ ವರ್ತಿಸುತ್ತಿದ್ದ ನಿರ್ಮಲೆಯನ್ನು, ಚಂದ್ರಭಾಗಿ ಹನೇಹಳ್ಳಿಗೆ ಕರೆತಂದಾಗ ವಾಸುದೇವ ನಾನಾ ರೀತಿಯಲ್ಲಿ ಸಂತೈಯಿಸಲು ಪ್ರಯತ್ನಿಸಿ ವಿಫಲಗೊಳ್ಳುತ್ತಾನೆ. ಮುಖ ನೋಡದೆ, ತನಗಂಟಿದ ಕಳಂಕ ನಿವಾರಿಸಲೆಂದೇ ವಿವಾಹವಾಗುವ ಆದರ್ಶವನ್ನು ವ್ಯಕ್ತಪಡಿಸುವ ವಾಸುದೇವನ ಈ ರೀತಿಯ ಔದಾರ್ಯಕ್ಕೆ ಬೇಸತ್ತ ನಿರ್ಮಲೆ ಅವನನ್ನು ಧಿಕ್ಕರಿಸಿ ತಾನು ರಂಗಪ್ಪನೊಂದಿಗೆ ಹಾದರ ಮಾಡಿದ್ದು ನಿಜವೆನ್ನುತ್ತಾ ಅದಕ್ಕೆ ಪುರಾವೆಯಾಗಿ ಪಂಚಾಯಿತಿಯ ಜನರ ಮುಂದೆ ತನ್ನ ತೊಡೆಯ ಮೇಲಿನ ಕರಿಯ ಮಚ್ಚೆಯನ್ನು ತೋರಿಸಿ ಶಾಲೆಯ ಹತ್ತಿರದ ಬಾವಿಯಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ.

ಹೀಗೆ ಶಾಲೆ ಕಲಿಯುವುದು ಮುಗಿಯುವ ಮುನ್ನವೇ ತನ್ನ ಅಪ್ಪ ತನಗೆ ಮದುವೆ ಮಾಡಲು ಹೊರಟಿರುವುದು, ಜನರು ತನ್ನ ಹಾಗೂ ರಂಗಪ್ಪನ ಬಗ್ಗೆ ಆಡಿಕೊಳ್ಳುವ ಕೆಟ್ಟಮಾತುಗಳು, ತನಗಂಟಿದ ಕಳಂಕದ ನಿರ್ಮೂಲನೆಗೆ ತನ್ನನ್ನು ಮದುವೆಯಾಗಲು ಒಪ್ಪಿಕೊಂಡಿರುವ ವಾಸುದೇವನ ಔದಾರ್ಯ–ಈ ಎಲ್ಲದರಿಂದ ರೋಸಿಹೋಗುವ ನಿರ್ಮಲೆಯು ತನ್ನ ಅಪ್ಪನ ವಿರುದ್ಧ, ಚಾಡಿಕೋರ ರೋಗಗ್ರಸ್ಥ ಸಮಾಜದ ವಿರುದ್ಧ, ವಾಸುದೇವನ ಅತೀ ಔದಾರ್ಯದ ವಿರುದ್ಧ ತೀವ್ರ ಪ್ರತಿಭಟನೆಯನ್ನು

ತೋರಲು ಹೋಗಿದುರಂತ ಅಂತ್ಯ ಕಾಣುತ್ತಾಳೆ. ಚಾಡಿಕೋರ ಸಮಾಜಕ್ಕೆ ಬೇಸತ್ತು, ಮಾನಸಿಕ ತುಮುಲತೆಗೆ ಒಳಗಾಗಿ ಅಪ್ರಬುದ್ಧ ರೀತಿಯಲ್ಲಿ ಬಂಡಾಯವನ್ನು ವ್ಯಕ್ತಪಡಿಸಲು ಹೋಗುವ ನಿರ್ಮಲೆಯು, ತನ್ನ ಸಿಟ್ಟಿನಿಂದ ಸ್ಫೋಟಗೊಂಡು ತಾನೇ ಆಹುತಿಯಾಗುವುದು ವ್ಯವಸ್ಥೆಯ ವ್ಯಂಗ್ಯವಾಗಿದೆ.

ಇಲ್ಲಿ ವಾಸುದೇವನದು ಔದಾರ್ಯ, ತ್ಯಾಗ, ಕ್ಷಮಾಗುಣ, ಆದರ್ಶ ಮತ್ತು ಕುಟುಂಬ ಪ್ರೇಮವನ್ನು ಒಳಗೊಂಡ ಉದಾತ್ತ ನಾಯಕನ ಪಾತ್ರವಾಗಿದೆ. ಆದರೆ ಈ ಗುಣಗಳ ಅತಿರೇಕದ ವರ್ತನೆಯೇ ನಿರ್ಮಲೆಯ ದುರಂತಕ್ಕೆ ಕಾರಣವಾಗುವುದು ವಿಷಾದವೆನಿಸುತ್ತದೆ. ಒಂದು ರೀತಿ ವಾಸುದೇವನ ಈ ಸದ್ಗುಣಗಳೇ ಅವನ ದೌರ್ಬಲ್ಯಗಳೂ ಆಗಿವೆ. ಆಧುನಿಕ ಸಂವೇದನೆಗಳಿಗೆ ತೆರೆದುಕೊಂಡು ವೈಯಕ್ತಿಕ ಬದುಕನ್ನು ಉನ್ನತೀಕರಿಸಿಕೊಳ್ಳದ ವಾಸುದೇವ ವಿಕ್ಷಿಪ್ತನೆನಿಸುತ್ತಾನೆ. ನಿರ್ಮಲೆಯ ಸ್ವಾಭಿಮಾನ, ಸರಳತೆ ಮತ್ತು ಆಕಾಂಕ್ಷೆಗಳನ್ನು ಅರಿಯುವಲ್ಲಿ ವಾಸುದೇವ ಸೋಲುತ್ತಾನೆ. ವಾಸುದೇವನ ಅತಿನೈತಿಕತೆ ನಿರ್ಮಲೆಯನ್ನು ಅರ್ಥಮಾಡಿಕೊಳ್ಳಲು ಬಿಡುವುದಿಲ್ಲ. ನಿರ್ಮಲೆಯ ಉದ್ಧಾರಕನಾಗಲು ಹೊರಟು ಅವಳ ವಿಕ್ಷಿಪ್ತತೆಗೆ ಕಾರಣನಾಗಿ ಬಿಡುವ ವಾಸುದೇವ 'ನಿರ್ಮಲೆಯ ಮದುವೆ ಮುರಿದ ಹೊಣೆಗಾರಿಕೆಯನ್ನು ತನ್ನ ಮೇಲೆ ಹಾಕಿಕೊಳ್ಳುವಷ್ಟು' ಸಜ್ಜನಿಕೆಯಿಂದ ಬಳಲುತ್ತಾನೆ.

ಸ್ವಾಭಿಮಾನಿಯೂ, ಸುಂದರಿಯೂ ಆಗಿದ್ದ ನಿರ್ಮಲೆಗೆ ಬಗ್ಗೆ ಸಹಾನುಭೂತಿಯನ್ನು ತೋರಿಸುತ್ತಾ ವಿವಾಹವಾಗಲು ಬಂದ ವಾಸುದೇವನನ್ನು, ಸಮಾಜದಲ್ಲಿ ಕೆಟ್ಟ ಸುದ್ದಿ ಹರಡಲು ಕಾರಣನಾದ ರಂಗಪ್ಪನನ್ನು, ಸತ್ಯಾಂಶವನ್ನು ಅರಿಯದೆ ತನ್ನನ್ನು ಆರೋಪಿಯನ್ನಾಗಿ ಪರಿಗಣಿಸಿದ್ದ ವ್ಯವಸ್ಥೆಯನ್ನು ಹಾಗೂ ಸತ್ಯಾಸತ್ಯತೆಯನ್ನು ತಿಳಿಯದೆ ಮಗಳಿಗಂಟಿದ ಕಳಂಕವನ್ನು ಹೋಗಲಾಡಿಸಲು ಭೀತಿಯ ಹಾಗೂ ಆತುರದ ನಿರ್ಧಾರವನ್ನು ಕೈಗೊಂಡ ವಿಶ್ವನಾಥರ ಕ್ರಮವನ್ನು ವಿರೋಧಿಸುತ್ತಾ ನಿರ್ಮಲೆಯು ಆತ್ಮನಾಶದ ಮೂಲಕ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾಳೆ.

ಕಾದಂಬರಿಯ ಆರಂಭದಲ್ಲೇ ಸಂಭವಿಸುವ ಒಂದು ಘಟನೆಯಿಂದ ಉದ್ಭವವಾದ ಸಮಸ್ಯೆಗೆ ಸಂಬಂಧಿಸಿದಂತೆ ಮೂವರು ಭಿನ್ನವ್ಯಕ್ತಿಗಳು ಇಲ್ಲಿ ಮುಖ್ಯವಾಗುತ್ತಾರೆ. ಒಂದು ಮಗಳ ಮೇಲಿರುವ ಅಪವಾದದಿಂದ ಪೂರ್ವಿಕರ ಕಾಲದಿಂದಲೂ ಚ್ಯುತಿ ಬಂದಿರದ ಮನೆತನದ ಗೌರವಕ್ಕೆ ಕಳಂಕ ತಟ್ಟಬಹುದೆಂಬ ಭೀತಿಯಿರುವ ವಿಶ್ವನಾಥ ಶಾನಭಾಗರಿಗೆ ಸಮಾಜದ ಪ್ರತಿಕ್ರಿಯೆಗಳೇ ಮುಖ್ಯವಾಗುತ್ತವೆ. ಭೀತಿಯಾಗಿ ಆವರಿಸಿಕೊಳ್ಳುವ ಸಮಾಜದೆದುರು ವಿಶ್ವನಾಥರು ಕ್ಷಣಕ್ಷಣಕ್ಕೂ ಕುಗ್ಗಿಹೋಗುತ್ತಾರೆ. ಮನೆತನದ ಗೌರವವನ್ನು ಕಾಪಾಡಿಕೊಂಡು ಬರುವುದೇ ಅವರ ಬದುಕಿನ ಪರಮ ಗುರಿಯಾಗುತ್ತದೆ. ಹಾಗೆಯೇ ಸಮಾಜ ನಿರ್ಮಲೆಯ ಮೇಲೆ ಹೊರಿಸಿದ ಅಪವಾದವನ್ನು ಕೇಳಿಯೂ ಅವಳನ್ನು ವಿವಾಹವಾಗಲು ಒಪ್ಪಿದ ವಾಸುದೇವನ ದುರ್ಬಲ ಆದರ್ಶಪ್ರಿಯತೆ, ಕಾಡುವ ಸಮಾಜದೆದುರು ಕಂಗಾಲಾದ ನಿರ್ಮಲೆಯ ಬಗ್ಗೆ ವ್ಯಕ್ತಗೊಂಡ ಕನಿಕರ ಭಾವ ಹಾಗೆಯೇ ಸಮಾಜದೆದುರು ತಾನು ನಿಲ್ಲಬಲ್ಲೆನೆನ್ನುವ ಅವನ ಹುಂಬ ಧೈರ್ಯ, ಅದೇ ರೀತಿ ಸಮಾಜದ ಪ್ರತಿಕ್ರಿಯೆಯಿಂದ ಸಿಡಿದೆದ್ದ ನಿರ್ಮಲೆಯ ಅಪ್ರಬುದ್ಧ ಬಂಡಾಯ ಹೀಗೆ ಒಂದು ಹೆಣ್ಣಿನ ಸುತ್ತಲೂ ಸೃಷ್ಟಿಯಾಗುವ ಈ ಬಗೆಯ ಹಲವು ಸಮಸ್ಯೆಗಳನ್ನು, ವ್ಯಕ್ತಿಗಳು ಹಾಗೂ ಸಾಮಾಜಿಕ ಸ್ಪಂದನದ

ಮುಖಾಂತರ ವಿಶ್ಲೇಷಿಸುತ್ತಾ ಸಾಗುವುದು ಕಾದಂಬರಿಯ ವಿಶೇಷತೆಯಾಗಿದೆ.

ವಿಶ್ವನಾಥ ಶಾನಭಾಗ–ವಾಸುದೇವ–ನಿರ್ಮಲೆ ಈ ಪಾತ್ರಗಳು ಕ್ರಮವಾಗಿ ಭೀತಿ–ಆದರ್ಶ ಬಂಡಾಯಗಳನ್ನು ಪ್ರತಿನಿಧಿಸಿದರೂ ಈ ಮೂರು ವ್ಯಕ್ತಿತ್ವಗಳ ಸಂಘರ್ಷವೇ ಇಲ್ಲಿಯ ಎಲ್ಲಾ ದುರ್ಘಟನೆಗಳಿಗೆ ಕಾರಣವಾಗುತ್ತದೆ. ಇಲ್ಲಿ ಈ ಮೂರು ಬಾವಗಳ ಸಂಘರ್ಷವೂ ಇದೆ. ವ್ಯವಸ್ಥೆಯೊಳಗಿನ ಸ್ತ್ರೀಯರ ಹತಾಶೆ ಸ್ಥಿತಿಯನ್ನು ನಿರ್ಮಲೆ ಪಾತ್ರದ ಮೂಲಕ ಚಿತ್ತಾಲರು ಬಹಳ ಅಚ್ಚುಕಟ್ಟಾಗಿ ಇಲ್ಲಿ ಬಿಂಬಿಸಿದ್ದಾರೆ. 'ಪುರುಷಪ್ರಧಾನ' ನಿರ್ಬಂಧಗಳನ್ನು ಎದುರಿಸಲಾಗದ ಹೆಣ್ಣು ಜೀವವೊಂದು ಅಪ್ರಬುದ್ಧ ರೀತಿಯಲ್ಲಿ ಬಂಡಾಯವನ್ನು ತೋರಲು ಹೋಗಿ ದುರಂತ ಕಾಣುವುದು ಕಾದಂಬರಿಯ ಜೀವಾಳವಾಗಿದೆ. ಇಲ್ಲಿ ಸಮಾಜ ಒಂದು ಪಾತ್ರವಾಗಿ ನಿರ್ಮಲೆಯ ಸಾವಿಗೆ ಕಾರಣವಾಗುತ್ತದೆ. ವಿಶ್ವನಾಥ ಶಾನಭಾಗರಂತೆ ವಾಸುದೇವನೂ ಕೂಡ ಸಮಾಜದ ವಿಮರ್ಶೆಗೆ ಈಡಾಗುತ್ತಾನೆ. ವ್ಯವಸ್ಥೆಯನ್ನು ಅರಿಯುವ ಪ್ರಯತ್ನಗಳಿರಬೇಕು, ಇಲ್ಲವಾದರೆ ವ್ಯವಸ್ಥೆಯೇ ಕೊಲೆಗಡುಕನಾಗುತ್ತದೆ. ವಾಸ್ತವವಾಗಿ ನಿರ್ಮಲೆಯನ್ನು ರಂಗಪ್ಪ–ವಾಸುದೇವರಿಗಿಂತ ಹೆಚ್ಚು ಹಿಂಸಿಸುವುದು ಸಮಾಜವೇ ಆಗಿದೆ. ಹೀಗಾಗಿ 'ವಾಸುದೇವನ ವಿಚಾರ ಭಾವನೆಗಳನ್ನು ನಾವು ಅನುಭವಿಸುತ್ತೇವೆ. ಆದರೆ ನಿರ್ಮಲೆಯ ಮನಸ್ಸಿನ ತೊಡಕುಗಳನ್ನು ಬರೇ ನೋಡುತ್ತೇವೆ'. ಹೀಗಾದಾಗ ಪುರುಷನಾಗಿ ವಾಸುದೇವ ತರ್ಕದೊಳಗೆ ಬಂದರೆ ನಿರ್ಮಲೆ ಮನೋವಿಜ್ಞಾನದ ನೆಲೆಯ ವಿಶ್ಲೇಷಣೆಗೆ ಒಳಗಾಗುತ್ತಾಳೆ. ರಂಗಪ್ಪನು ನಿರ್ಮಲೆಯ ಸಾವಿಗೆ ಪರೋಕ್ಷವಾಗಿ ಕಾರಣಕರ್ತನಾದರೂ ನಿರ್ಮಲೆಯನ್ನು ಹೆಚ್ಚು ಭಾದಿಸುವುದು ಸಮಾಜದ ಅಲಿಖಿತ ನಿರ್ಬಂಧಿತ ವ್ಯವಸ್ಥೆಯೇ ಆಗಿದೆ.

ಪರಾಮರ್ಶನ ಕೃತಿಗಳು

1. ಯಶವಂತ ಚಿತ್ತಾಲ: ಮೂರು ದಾರಿಗಳು; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2006.
2. ಆಮೂರ. ಜಿ.ಎಸ್ : ಕನ್ನಡ ಕಥನ ಸಾಹಿತ್ಯ : ಕಾದಂಬರಿ; ಸಪ್ನ ಬುಕ್‌ಹೌಸ್, ಬೆಂಗಳೂರು, 2006
3. ಗೋಪಾಲ ಕೃಷ್ಣಯ್ಯ.ಕೆ.ಎಲ್.(ಡಾ):ಯಶವಂತ ಚಿತ್ತಾಲ; ನವಕರ್ನಾಟಕ ಪ್ರಕಾಶನ, 2006.
4. ಭಟ್ಟ.ಜಿ.ಎಸ್.(ಸಂ) : ಯಶವಂತ ಚಿತ್ತಾಲ : ಕೆಲವು ಅಧ್ಯಯನಗಳು, ಮಿತ್ರ ಪ್ರಕಾಶನ, ಮೈಸೂರು, 1981.
5. ರಾಜೇಂದ್ರ ಚೆನ್ನಿ ಪ್ರೊ.(ಸಂ) : ಯಶವಂತ ಚಿತ್ತಾಲರ ಸಾಹಿತ್ಯ ಲೋಕ, ಪ್ರಿಸಮ್ ಬುಕ್ಸ ಪ್ರೈ.ಲಿ. ಬೆಂಗಳೂರು.
6. ಸುರೇಶ ನಾರಾಯಣ ನಾಯ್ಕ (ಡಾ): ಯಶವಂತ ಚಿತ್ತಾಲರ ಬದುಕು ಮತ್ತು ಬರಹ, ಸುವರ್ಣ ಪ್ರಕಾಶನ, ಹೊನ್ನಾವರ, 2009.
7. ಹಳ್ಳಿಕೇರಿ.ಎಫ್.ಟಿ.(ಡಾ): ಯಶವಂತ ಚಿತ್ತಾಲ, ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ, 1995.
8. ಹೆಗಡೆ.ವಿ.ಡಿ.(ಡಾ) : ಯಶವಂತ ಚಿತ್ತಾಲ, ಚೇತನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಮೈಸೂರು, 2007.
9. ಶೇಷಗಿರಿರಾವ್.ಎಲ್.ಎಸ್. : ಕಾದಂಬರಿ ಮತ್ತು ಸಾಮಾನ್ಯ ಮನುಷ್ಯ; ವಸಂತ ಪ್ರಕಾಶನ, ಬೆಂಗಳೂರು, 2008.
10. ಕರೀಗೌಡ ಬೀಚನಹಳ್ಳಿ(ಡಾ): ವ್ಯಷ್ಟಿ ಮತ್ತು ಸಮಷ್ಟಿ; ಅಜಂತ ಪ್ರಕಾಶನ, ಬೆಂಗಳೂರು,1991

❖❖❖

ಸು.ರಂ. ಎಕ್ಕುಂಡಿಯವರ ಕಾವ್ಯ

ಡಾ. ತೇಜಾವತಿ ಕೆ.
ಕನ್ನಡ ಸಹಾಯಕ ಪ್ರಾಧ್ಯಾಪಕರು, ಶ್ರೀ ಕುವೆಂಪು ಮಹಾವಿದ್ಯಾಲಯ
ಪ್ರಥಮ ದರ್ಜೆ ಕಾಲೇಜು, ಕೆಂಗಲ್, ಚನ್ನಪಟ್ಟಣ

ಸುಬ್ಬಣ್ಣ ರಂಗನಾಥ ಎಕ್ಕುಂಡಿಯವರು ಕಥನ ಕವಿಯಾಗಿ ಹೆಸರು ಮಾಡಿದವರು. ಕರಾವಳಿ ತೀರದ ಹಳ್ಳಿ ಬಂಕಿಕೊಡ್ಲದಲ್ಲಿ ಮುವತ್ತೈದು ವರ್ಷಗಳ ಕಾಲ ಶಿಕ್ಷಕರಾಗಿ, ಅಲ್ಲಿಯೇ ನೆಲೆಸಿ, ಕನ್ನಡ ಕಾವ್ಯ ಪರಂಪರೆಗೆ ಬಕುಲದ ಹೂವುಗಳು ಮತ್ತು ಬೆಳ್ಳಕ್ಕಿ ಹಿಂಡಿನಂತಹ ಕವನಗಳನ್ನು ನೀಡಿದ ವಿಶಿಷ್ಟ ಕವಿ. ಸು.ರಂ. ಎಕ್ಕುಂಡಿಯವರು ಕರಾವಳಿಯ ರೈತರು, ಬೆಸ್ತರು, ದುಡಿಯುವ ಶ್ರಮಿಕರು ಇವರುಗಳ ನಡುವೆ ಜೀವನ ನಡೆಸಿದವರು. ಆದ್ದರಿಂದಲೇ ಅವರ ಕವನಗಳಲ್ಲಿ ಬಡತನ, ಹಸಿವು, ನೋವು, ಹಳ್ಳಿಯ ಶ್ರೀಮಂತ ಪ್ರಕೃತಿ ಸೌಂದರ್ಯ ಮೊದಲಾದ ಸಂಗತಿಗಳು ರೂಪು ಪಡೆದಿವೆ.

ಅವಸರದ ಬದುಕಿನಿಂದ, ಪ್ರಚಾರದ ಸದ್ದಿನಿಂದ ದೂರ ಉಳಿದು ನಿಸರ್ಗದ ಮಡಿಲಿನಲ್ಲಿ ನೆಮ್ಮದಿಯಿಂದ ಜೀವನ ನಡೆಸಿದ ಎಕ್ಕುಂಡಿಯವರು ದೈವ ಮತ್ತು ಪ್ರಕೃತಿಯನ್ನು ವ್ಯಕ್ತಿತ್ವದ ಭಾಗವಾಗಿಸಿಕೊಂಡು ಬದುಕಿದರು. ನವೋದಯ ಸಾಹಿತ್ಯ ಸಂದರ್ಭದಲ್ಲಿ ದೇವರು ಪ್ರಕೃತಿಯೇ ದೇವರ ಸ್ಥಾನವನ್ನು ಪಡೆಯಿತು. "ದಟ್ಟವಾಗಿ ಕವಿದ ಕತ್ತಲೆಯ ಪರೆ ಹರಿದು, ಹೊಂಬಣ್ಣದ ಸಂಭ್ರಮದಲ್ಲಿ ಹುಟ್ಟುವ ಸೂರ್ಯನನ್ನು ಸ್ವಾಗತಿಸುವ ಹೊಸ ದಿನದ ಹರಿಕಾರನಾಗಿ ಕೊರಳು ಬಿಚ್ಚಿ ಹಾಡುವ ಹಕ್ಕಿಯ ಉಲ್ಲಾಸ ಎಂಥ ಉತ್ಸಾಹ ಚಿಮ್ಮಿಸುತ್ತದೆ! ನನ್ನ ಕವಿತೆಯಲ್ಲಿ ನಾನು ಸದಾ ಚಿತ್ರಿಸಲಿ ಹೋಗಿದ್ದು ಇಂಥ ಹರಿಕಾರ ಹಕ್ಕಿಯ ಹಾಡನ್ನು" ಎನ್ನುತ, ಸೂರ್ಯೋದಯ, ತಂಗಾಳಿ, ಬೆಳದಿಂಗಳು, ಹಸಿರು, ಕಡಲಮಡಿಲು, ಬೆಳ್ಳಕ್ಕಿ ಸಾಲುಗಳ ದೃಶ್ಯ ವೈಭವದಲ್ಲಿ ತೀವ್ರವಾಗಿ ಮುಳುಗಿಬಿಡುತ್ತಿದ್ದ ಎಕ್ಕುಂಡಿಯವರ ಕಾವ್ಯದ ಜೀವಾಳವೇ ಸೌಂದರ್ಯ ಪ್ರಜ್ಞೆ, ಪುರಾಣದಿಂದ, ನಿಸರ್ಗದಿಂದ, ವಾಸ್ತವ ಬದುಕಿನಿಂದ ಕವಿತೆಯ ವಿಷಯಗಳನ್ನು ಆರಿಸಿಕೊಂಡರೂ ಮನುಷ್ಯನನ್ನೇ ಕಾವ್ಯದ ಕೇಂದ್ರ ಬಿಂದುವಾಗಿರಿಸಿಕೊಂಡು ಕಾವ್ಯ ರಚಿಸಿದ್ದಾರೆ.

ಕಥನ ಕವನದ ಪಾರಂಪರಿಕ ವ್ಯಾಖ್ಯೆ ಎಕ್ಕುಂಡಿಯವರಲ್ಲಿ ಬದಲಾಗಿದೆ. ಕಥೆಯುಳ್ಳ ಕವನ ಎಂಬುದಕ್ಕೆ ನೇಮಿತಗೊಳ್ಳದೆ ಕಥನವುಳ್ಳ ಕವನ ಎಂಬ ಅರ್ಥಕ್ಕೆ ಹೊರಳಿದೆ. ಕಥೆ ಮತ್ತು ಕವನಗಳ ಅರ್ಥವ್ಯಾಪ್ತಿ ಬೇರೆ ಬೇರೆ ತಾನೆ? ಇದು ನಮ್ಮ ಪ್ರಾಚೀನ ಕವಿಗಳು ಬಳಸಿದ ವಸ್ತುಕ ಮತ್ತು ವರ್ಣಕ ಎಂಬ ಮಾತುಗಳಿಗೆ ಹೊಂದುತ್ತವೆಯೋ ಎಂದು ಯೋಚಿಸಲೂ ಸಾಧ್ಯ. ಅದಿರಲಿ, ಎಕ್ಕುಂಡಿಯವರ ಕವಿತೆಗಳಲ್ಲಿ ಕಥೆಗಿಂತ ಕಥನ ಮೇಲುಗೈ ಪಡೆಯುತ್ತದೆ. ಹೀಗಾಗಿ ಇಲ್ಲಿನ ಕೆಲವು ಕವಿತೆಗಳಲ್ಲಿ ಕಥೆ ಎಂಬುದು ಇಲ್ಲಿದಿದ್ದರೂ (ಉದಾ: ದೂರದ ದಾರಿಗಳು, ಬಕುಲದ ಹೂವುಗಳು, ರಂಗವಲ್ಲಿ) ಬಲವಾದ ಕಥನ ಮಾತ್ರ ಎಲ್ಲಾ ಕವಿತೆಗಳಲ್ಲೂ ಇದ್ದೇ ಇದೆ.

ಅಪಾರವಾದ ಜೀವನಪ್ರೀತಿಯ ಎಕ್ಕುಂಡಿಯವರ ಮುಖ್ಯ ಆಸಕ್ತಿಯೆಂದರೆ

ಜೀವನ, ದೇವರು ಮತ್ತು ನಿಸರ್ಗ ಪರಂಪರೆಯೊಂದಿಗೆ ಗಾಢ ನಂಬಿಕೆ ಇಟ್ಟುಕೊಂಡೇ ನಿಸರ್ಗದೊಡನೆ ಒಡನಾಡುತ್ತಾರೆ. ಕಾವ್ಯವು ಸೌಂದರ್ಯದ ಸೃಷ್ಟಿಯಾಗಿದೆ; ಉದಾತ್ತದ ಸ್ಮೃತಿಯಾಗಿದೆ ಮತ್ತು ಅಪಾರವಾದ ಅನ್ವೇಷಣೆಯಾಗಿದೆ; ಅದು ಕಡಲಿನ ಧ್ವನಿಯ ಹಾಗೂ ಬೆಳ್ಳಕ್ಕಿಗಳ ಕರೆಯ ಪ್ರತಿಧ್ವನಿಯಾಗಿದೆ ಎಂಬ ಗಾಢವಾದ ನಂಬಿಕೆಯಿಂದಲೇ ಪ್ರಕೃತಿಯಲ್ಲಿ ಅಪಾರವಾದ ದೈವ ಕೃಪೆಯನ್ನು ಕಾಣುವ ಮನೋಭಾವ ಎಕ್ಕುಂಡಿಯವರ ಕಾವ್ಯದಲ್ಲಿ ಗೋಚರಿಸುತ್ತದೆ.

"ಬೆಟ್ಟದಲ್ಲಿ ಈ ಅಮ್ಮ, ಮನೆಯಲ್ಲಿ
ಆ ಅಮ್ಮ, ನೆಲದಮ್ಮ, ನೀಡಿರುವ ಗಿಡದ
ಹೂವು, ಒಲವು ಚಿಗುರೊಡೆದಾಗ, ಒಂದು ದಿನ
ಮರೆತಾವು, ನಮ್ಮ ಬಡಬದುಕುಗಳು ಉಂಡ ನೋವು"[1] (ಬಕುಳದ ಹೂವುಗಳು)

ಎಕ್ಕುಂಡಿಯವರಿಗೆ ಸಮಾಧಾನ, ಸಾಂತ್ವಾನ ದೊರೆಯುತ್ತಿದದ್ದು ಪ್ರಕೃತಿಯ ಮಡಿಲಿನಲ್ಲಿ ಎಂದು ಕಾಣುತ್ತದೆ. ಅಸಮಾನತೆ, ಶೋಷಣೆ, ಬದುಕಿನ ಕ್ರೌರ್ಯ, ಹಿಂಸೆಯ ಚಿತ್ರಣಗಳನ್ನು ಅವರ ರೊಟ್ಟಿ ಮತ್ತು ಕೋವಿ, ಇಬ್ಬರು ರೈತರು, ಹಿಟ್ಟು ಮತ್ತು ಮಲ್ಲಿಗೆ, ಈ ಮೊದಲಾದ ಕವಿತೆಗಳಲ್ಲಿ ಕಾಣಬಹುದಾಗಿದೆ.

ಎಕ್ಕುಂಡಿಯವರು ಕಥನದ ಜಗತ್ತು ನಂಬುವಿಕೆಯ ಬುನಾದಿಯನ್ನು ಪಡೆದಿದೆ. ನಂಬುವಿಕೆ ಎಂದೆ, ನಂಬಿಸುವಿಕೆ ಎನ್ನಲಿಲ್ಲ. ಈ ವ್ಯತ್ಯಾಸ ಗಮನಿಸಬೇಕು, ಹಾಗಾಗಿ "ಜಗತ್ತು 'ಆಗುವ' ಬಗೆ, ಅದರ ತಳಮಳ, ಇಕ್ಕಟ್ಟು, ಸಂಘರ್ಷ, ದ್ವಂದ್ವ ಶೋಧನೆ ಮೊದಲಾದವುಗಳು ಈ ಕವಿತೆಗಳಲ್ಲಿ ಲವಲೇಶವೂ ಇಲ್ಲ. ಆದ್ದರಿಂದ ಈ ಕವಿತೆಗಳ ಕಥನ ಭಿನ್ನವಾಗುತ್ತದೆ. ತನ್ನ ಬಗೆಯ ಭಿನ್ನತೆಯನ್ನು ಕಂಡುಕೊಳ್ಳಲು ಓದುಗರನ್ನು ಒತ್ತಾಯಿಸುತ್ತದೆ"[2] ಎಂದು ಕೆ.ವಿ.ನಾರಾಯಣರು ಹೇಳುವ ಮಾತುಗಳು ಎಕ್ಕುಂಡಿಯವರ "ಬಕುಲದ ಹೂವುಗಳು" ಕಾವ್ಯ ಸಂಕಲನದ ಸ್ವರೂಪವನ್ನು ಗ್ರಹಿಸಲು ನೆರವಾಗುತ್ತದೆ.

ಎಕ್ಕುಂಡಿಯವರು ವೇದ, ಉಪನಿಷತ್ತು, ಪುರಾಣದ ಜ್ಞಾನವನ್ನು ಪಡೆದಿದ್ದವರು. ಅದರೊಂದಿಗೆ ಕಾರ್ಲ್ ಮಾರ್ಕ್ಸ್‌ನ ಸಮಾಜವಾದಿ ಚಿಂತನೆಗಳಿಂದಲೂ ಪ್ರಭಾವಿತರಾಗಿದ್ದರು. ಮಧ್ವ ಮತ್ತು ಕಾರ್ಲ್‌ಮಾರ್ಕ್ಸ್ ಚಿಂತನೆಗಳನ್ನು ಹದವಾಗಿ ಮೈಗೂಡಿಸಿಕೊಂಡಿದ್ದ ಎಕ್ಕುಂಡಿಯವರ ಕಾವ್ಯದಲ್ಲಿ ನಿಸರ್ಗಪ್ರೇಮ, ಬೆರಗು ಮಾತ್ರವಲ್ಲದೆ ಸಾಮಾಜಿಕ ಸಂಗತಿಗಳ ವಾಸ್ತವಿಕ ಚಿತ್ರಣವನ್ನು ಕಾಣಬಹುದು.

"ದೂರವಿದ್ದವರನ್ನು ಹತ್ತಿರಕೆ ತರಬೇಕು
ಹರಿದ ಹೊಳೆಗೂ ಉಂಟು ಎರಡು ತೋಳು
ನೆಲನಪ್ಪಿದ ಎರಡು ದಂಡೆಗಳ
ಬಾಂಧವ್ಯ ಬೆಸೆಯಬೇಕಲ್ಲವೇ?[3]
ನಮ್ಮ ಬಾಳು. (ಬೆಳೆದ ಬಂಡೆ)

ಎರಡು ದಂಡೆಗಳ ಬೆಸೆದು ಹರಿವ ಹೊಳೆಯ ಪ್ರತಿಮೆಯು ಸಂಪ್ರದಾಯ, ಧಾರ್ಮಿಕತೆಯನ್ನು ಆಧುನಿಕ ಚಿಂತನೆ, ಸಮಾಜಕ್ಕೆ ಬೆಸೆಯುವ ಉಪಮೆಯಾಗಿ ಬಳಕೆಯಾಗಿದೆ. ಅಲ್ಲದೆ, ಹರಿಯುವ ಹೊಳೆಯು ನಿತ್ಯ ಬದಲಾಗುವ ಚಲನಶೀಲತೆಯನ್ನು ತಿಳಿಸುತ್ತದೆ. ಹಾಗೆಂದೇ ಎಕ್ಕುಂಡಿಯವರು ಗುಡಿಗೆ ಹೊರಟ ದಾರಿಯಲ್ಲಿ ಹೆಜ್ಜೆಗೊಂದು ಹೂವಿದೆ. ಪುಣ್ಯ ಪಯಣ ಸಾರುವಲ್ಲಿ ನಿಮಿಷಕ್ಕೊಂದು

ನೋವಿದೆ ಎಂದು ಬರೆಯಬಲ್ಲರು. ಹೂವು–ನೋವು ಎಕ್ಕುಂಡಿಯವರ ಕಾವ್ಯದ ಪ್ರಧಾನ ಧಾತುಗಳು, ಬಕುಳದ ಹೂವಿನೊಂದಿಗೆ ನಾಗಿಯ ಕಥೆ, ಬೆಸ್ತರ ನೋವನ್ನು ಅವರ ಕವಿತೆಗಳು ಅನಾವರಣಗೊಳಿಸುತ್ತವೆ.

ಎಕ್ಕುಂಡಿಯವರು ಸಂತಾನ, ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಬಕುಲದ ಹೂವುಗಳು, ಗೋಧಿಯ ತೆನೆಗಳು ಎಂಬ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವುಗಳ ಜೊತೆಗೆ ಕಥನ ಕವನಗಳು ಎಂಬ ಎರಡು ಸಂಕಲನಗಳೇ ಇವೆ. ಇವೆಲ್ಲವನ್ನು ಒಟ್ಟುಗೂಡಿಸಿ ಬೆಳ್ಳಕ್ಕಿ ಹಿಂಡು ಎಂಬ ಹೆಸರಿನಲ್ಲಿ ಸಮಗ್ರ ಕಾವ್ಯ ಸಂಪುಟವನ್ನು ಹೊರತರಲಾಗಿದೆ. ಎಕ್ಕುಂಡಿಯವರ ಪ್ರತಿಭೆ ಮೊದಲಿನಿಂದಲೂ ಕಥನ ಕಾವ್ಯಕ್ಕೆ ಒಲಿದು ಬಂದದ್ದು, ಮಹಾಶ್ವೇತೆ, ಉಭಯಭಾರತಿ, ಮತ್ಸ್ಯಗಂಧಿ, ಸತ್ಯವತಿಯಂಥ ಕವಿತೆಗಳು ವಿವರಗಳ ಕುಶಲವಾದ ಹೊಂದಾಣಿಕೆಯಿಂದ, ವರ್ಣಮಯತೆ ಮತ್ತು ನಿರರ್ಗಳತೆಯಿಂದ ಅಪರೂಪದ ಕೃತಿಗಳಾಗಿವೆ. ಎಕ್ಕುಂಡಿಯವರ ಕಾವ್ಯದಲ್ಲಿಯ ಚಿತ್ರಗಳೆಲ್ಲ ಸ್ಮರಣೀಯವಾದವುಗಳು. "ಸ್ತ್ರೀ ಪುರುಷರ ಸೌಂದರ್ಯದ ವರ್ಣನೆಯಲ್ಲಿ ಅವರ ಕಾವ್ಯ ಒಂದು ನಿಶ್ಚಿತವಾದ ಕ್ರಮವನ್ನು ಅನುಸರಿಸುತ್ತದೆ. ಮತ್ತು ಈ ಕ್ರಮ ತನಗೆ ತಾನೇ ಧ್ವನಿಪೂರ್ಣವಾಗಿರುತ್ತದೆ".[4] ಎಂದು ಕೀರ್ತಿನಾಥ ಕುರ್ತುಕೋಟಿಯವರು ಹೇಳಿದ್ದಾರೆ.

ಕಥೆ, ಘಟನೆಗಳ ಬಲದಿಂದ ಕಾವ್ಯದ ನಾದ, ಲಯ, ರೂಪಕ, ಮಾಯೆಯ ಬಲಗಳ್ನು ದಕ್ಕಿಸಿಕೊಂಡಾಗ ಕಥನ ಕವನಗಳ ಅನನ್ಯ ದಾಂಪತ್ಯ ಸಿದ್ಧಿಸುತ್ತದೆಂದು ಎನ್.ಎಸ್. ಲಕ್ಷ್ಮಿನಾರಾಯಣ ಭಟ್ಟರು ಹೇಳುವ ಮಾತುಗಳು ಗಮನಾರ್ಹ.

ಎಕ್ಕುಂಡಿಯವರ "ದಾಸಿಮಯ್ಯ ಮತ್ತು ಬೆಕ್ಕು" ಕಥನ ಕವನವು ವಿಶಿಷ್ಟವಾದದ್ದಾಗಿದೆ. ಕಾಯಕವನ್ನೇ ಶಿವಪೂಜೆಯಾಗಿಸಿಕೊಂಡು ಭಕ್ತ ದಾಸಿಮಯ್ಯ ಹಗಲಿರುಳು ಮಗ್ಗದಲಿ ನೇಯ್ಗೆ ಕಾಯಕದಲ್ಲೇ ದೇವರನ್ನು ಕಾಣುತ್ತ ಮಠಕ್ಕೆ ಹೋಗುವುದಿಲ್ಲ. ಒಂದು ದಿನ ಮಠಕ್ಕೆ ಹೋಗಿ ಕೈ ಮುಗಿದು ಕುಳಿತಿರಲು ಈಗ ನೆನಪಾಯಿತೆ ನಿಮಗೆ ಬಿಲ್ವಮಠವೆಂದು ಕುಹಕದ ಮಾತಾಡಿ ನಗುವ ಜನರ ನಡುವೆ ಶ್ರದ್ಧೆಯಿಂದ ಕುಳಿತಿದ್ದು, ಗದ್ದುಗೆಯ ಬಳಿ ಒಂದು ಬೆಕ್ಕು ಧ್ಯಾನದಲಿ ಎಂಬಂತೆ ಕಣ್ಣುಮುಚ್ಚಿ ಕೂತ್ತಿದ್ದು, ಬಿಲದಿಂದ ಇಲಿಯೊಂದು ಓಡಿ ಬರಲಿ ಛಂಗನೆ ಹಾರಿ, ಕಚ್ಚಿ ಹಿಡಿದು ಓಡಿತು, ಆಗ ದಾಸಿಮಯ್ಯನು ಬರಿ ಸಟುಗನ ಭಕ್ತಿಯ ಕುರಿತು ಹೇಳುತ್ತಾರೆ.

"ಬಿಲ್ವ ಮಠ ಈಗೀಗ ಬಿಲದ ಮಠವಾಗಿಹುದು.
ಯಾರಲ್ಲಿಯೂ ಇಲ್ಲ ಶಿವನ ಹುಚ್ಚು
ಸಿಕ್ಕಿದ್ದು ಸಿಕ್ಕಷ್ಟು ಮುಕ್ತಿ ಕಣ್ಮರೆಯಾಗಿ
ಬದುಕಿರುವ ಇಲಿಗಳೆ ಇಲ್ಲಿ ಹೆಚ್ಚು".[5] (ದಾಸಿಮಯ್ಯ ಮತ್ತು ಬೆಕ್ಕು)

ಶ್ರೀ ಎಕ್ಕುಂಡಿಯವರದು ಬರಿ ಅಂತರ್ಮುಖಿ ಕಾವ್ಯವಲ್ಲ, ಜಗತ್ತನ್ನು ಅವರು ಕಾವ್ಯಮಯ ದೃಷ್ಟಿಯಿಂದ ನೋಡಬಲ್ಲರು. ಇಂತಹ ನೋಟಕ್ಕೆ ಅವರ ವಿವೇಕ ಕರುಣೆಗಳು ಜಾಗೃತವಾಗುತ್ತವೆ. ಇದನ್ನು 'ಗಾಂಧೀಜಿ ಹಾಗೂ 'ಎಚ್ಚರಿಕೆ' ಕವಿತೆಗಳಲ್ಲಿ ಕಾಣಬಹುದು. 'ಮೀನುಪೇಟೆ'ಯಲ್ಲಿಯ ಕರುಣೆ ಹೃದಯ ಸ್ಪರ್ಶಿಯಾಗಿದೆ. ಉಳಿದ ಕವನಗಳಲ್ಲಿಯ 'ಇಂದ್ರಕಲೆ'ಯೇ ವಾಸ್ತವಿಕ ಸೃಷ್ಟಿಯನ್ನು ಬೆಳಗಿಸಿದೆ.

"ಕುಳಿತಿರಲ್ಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರಕು ಚಿಂದಿ".

ಮೃದುಹಾಸವೂ ಸು.ರಂ.ಎಕ್ಕುಂಡಿಯವರ ಜೀವನ ದೃಷ್ಟಿಯಲ್ಲಿ ಸ್ಥಾನ ಪಡೆದಿದೆ. 'ಸುಭದ್ರೆ'ಯಲ್ಲಿನ ಗಂಭೀರ ಹಾಸ್ಯದ ಸಂಯಮವು ತುಟಿ ಅಲುಗುವವರೆಗೆ ಅದನ್ನು ತಟಸ್ಥವಾಗಿರಿಸುವ ಕಲೆಯು ಅದ್ಭುತವಾಗಿವೆ. 'ರೈತರ ಸಭೆ'ಯಲ್ಲಿಯ ಹಾಸ್ಯಕ್ಕೆ ಚೇಳಿನ ಕೊಂಡಿಯಿದ್ದರೆ. ಕಪ್ಪೆಯ ಮದುವೆಯಲ್ಲಿ ಮಾನವರ ಮೂರ್ಖತನವನ್ನು ನೋಡಿ ದೇವತೆಗಳು ನಕ್ಕ ನಗೆಯಿದೆ ಎಂದು ಎಕ್ಕುಂಡಿಯವರ ಕವನಗಳನ್ನು ಕುರಿತು 'ಸಂತಾನ' ಕವನ ಸಂಕಲನದ ಮುನ್ನುಡಿಯಲ್ಲಿ[6] ಎಂದು ವಿ.ಕೃ.ಗೋಕಾಕ್ ಹೇಳಿದ್ದಾರೆ. ಅಲ್ಲದೆ ಎಕ್ಕುಂಡಿಯವರ ಕವಿತೆಗಳಲ್ಲಿ ಭಾವಗೀತಾಂಶವೂ ಪ್ರಮುಖವಾಗಿದೆ ಎಂದು ಗುರುತಿಸಿದ್ದಾರೆ.

'ಹಾವಾಡಿಗರ ಹುಡುಗ' ಕವನ ಸಂಕಲನದಲ್ಲಿ 'ಶಬರಿ', 'ಮಹಾಶ್ವೇತೆ' ಎಂತಹ ಕವನಗಳು ಸ್ತ್ರೀಸಂವೇದನೆಯನ್ನು ತುಂಬಾ ಸೂಕ್ಷ್ಮವಾಗಿ ಹಿಡಿದಿದ್ದಾರೆ. ಶಬರಿಯ ತಪಸ್ಸು ರಾಮ ಬರುವನೆಂಬ ನಿರೀಕ್ಷೆ ನಿಜವಾಗುವುದನ್ನು ಗೇಯ ಕಾವ್ಯದಂತೆ ಅಂತ್ಯಪ್ರಾಸದೊಂದಿಗೆ ಸುದೀರ್ಘವಾಗಿ ಹೊಳೆಹರಿವಂತೆ ಭಕ್ತಿರಸದಲ್ಲಿ ತೊಯ್ಸಿದ್ದಾರೆ.

"ಮರಳಿ ನಡೆದ ಲಕ್ಷ್ಮಣನ ಕೂಡ ಶ್ರೀರಾಮದೀನ ಬಂಧು
ಹಣ್ಣು ಕೂದಿಲಿನ ಹಣ್ಣು ಜೀವ ನೀಡಿರುವ ಹಣ್ಣು ತಿಂದು
ಕಾಡು ಕಣಿವೆಯಲಿ ಸೀಳು ದಾರಿಯಲಿ ಹೋದ ದೂರ ದೂರ
ಭಕ್ತವತ್ಸಲನ ಕರುಣೆ, ಪ್ರೀತಿಗಳಿಗಿಲ್ಲವಂತಪಾರ
ಒಲಿದು ಬಂದನಿವ ತಿಂದನೆಂಜಲವ ಒಲುಮೆಗೆಂಜಲಿಲ್ಲ"[7] (ಶಬರಿ)

ಇದೇ ಕವನಸಂಕಲನಕ್ಕೆ ಮುನ್ನುಡಿಯನ್ನು ಬರೆಯುತ್ತಾ ಪು.ತಿ.ನರಸಿಂಹಾಚಾರ್ಯರು ಹೀಗೆ ಹೇಳಿದ್ದಾರೆ "ಈ ಕವನಗಳ ವಸ್ತು ಪ್ರಧಾನವಾಗಿ ಅನುರಾಗ, ಇದು ಒಮ್ಮೆ ಪ್ರಣಯವಾಗಿ, ಮತ್ತೊಮ್ಮೆ ಭಕ್ತಿಯಾಗಿ ಪ್ರಕಟಗೊಳ್ಳುತ್ತದೆ. ಪ್ರಣಯ ಶೀಲನಾದ ಕವಿಯಿಂದ ಈ ಪುರಾತನ ಜಗತ್ತು ತನ್ನ ತಾರುಣ್ಯವನ್ನು ಪಡೆಯುತ್ತದೆ. ಸ್ತ್ರೀ ಪುರುಷರು ತಮ್ಮ ತಮ್ಮ ವೈಶಿಷ್ಟ್ಯವನ್ನು ಹೊಂದಿ ಇಂಥವರಿನೊಬ್ಬರಿಲ್ಲ ಎನ್ನಿಸಿಕೊಳ್ಳುತ್ತಾರೆ. ಹೀಗೆ ಪ್ರಕೃತಿ ಪುರುಷರಿಬ್ಬರನ್ನು ನವೀಕರಿಸುವ ಪ್ರಣಯವನ್ನು ನೈಜ ಕವಿ ಮಾತ್ರ ಸಹೃದಯರ ಮನಸ್ಸು ಮೋಹಗೊಳ್ಳುವಂತೆ ವಿಷಯೀಕರಿಸಬಲ್ಲ, ಏಕೆಂದರೆ ಕವಿತೆ ಹುಟ್ಟಿದಂದಿನಿಂದ ಕವಿಯ ಮಾತಿನಲ್ಲಿ ಪ್ರಣಯದ ಅಭಿವ್ಯಕ್ತಿ ನಡೆಯುತ್ತಲೇ ಇದೆ. ಅದು ಕಿಕ್ಕಿರಿದ ಕ್ಷೇತ್ರ, ಸಮೆದ ದಾರಿ. ಅಲ್ಲಿ ಸ್ವೋಪಜ್ಞವಾಗಿ ನವೋನವ ಎನ್ನಿಸಿಕೊಳ್ಳುವುದು ಕಲೆಯೊಂದನ್ನೇ ಹಿಡಿದು ಅಭ್ಯಾಸ ಬಲದಿಂದ ನಡೆಯುವ ಕೃತಕ ಕವಿಗೆ ಕಷ್ಟ. ಇಂಥ ಕ್ಷೇತ್ರದಲ್ಲಿ ಸಹಜ ಕವಿ ಎಕ್ಕುಂಡಿಯವರ ಕಥನ ಕವನಗಳು ಜಯಪತಾಕೆಯನ್ನು ಹಾರಿಸಿವೆ. ಇಲ್ಲಿನ 'ಶ್ವೇತಕೇತು ದೇವರ್ಷಿ: 'ಪರಿಗ್ರಹಿಸಿರೀ ಪಾರಿಜಾತ', 'ಮಹಾಶ್ವೇತೆ' ಮತ್ತು 'ಸಂತಾನ'ವೆಂಬ ಇವರ ಮತ್ತೊಂದು ಕವನ ಸಂಗ್ರಹದಲ್ಲಿ ಬಂದಿರುವ 'ಅವಧೂತ', 'ಊರ್ವಶಿ', 'ಮಿಲನ'ಗಳಲ್ಲಿ ಪ್ರಣಯದ ವಿವಿಧ ಮುಖಗಳು ಅನೇಕ ಸೂಕ್ಷ್ಮ ವಿಲಾಸಗಳೊಡನೆ ಬಹು ಸಮರ್ಪಕವಾಗಿ ಚಿತ್ರಿತವಾಗಿವೆ. ಈ ಕವನಗಳು ನಮ್ಮ ಮನಸ್ಸಿನ ಮೇಲೆ ಬಂದು ಮೋಡಿಯನ್ನು ಬೀರುತ್ತವೆ. ತಮ್ಮದೇ ಆದ ಒಂದು ಬೆರಗಿನ ವಾತಾವರಣವನ್ನು ಕಲ್ಪಿಸುತ್ತವೆ. ಆಸೆ ನಿಟ್ಟುಸಿರುಗಳ ಅಲೌಕಿಕ ಮಧೂರೋನ್ಮಾದ ಅವುಗಳಲ್ಲಿ ನಿನಾದಿಸುತ್ತದೆ. ಇವರ ಕವನಗಳು ಎಷ್ಟೋ ಪಂಕ್ತಿಗಳು ನನ್ನ ಮನಸ್ಸನ್ನು ನನ್ನಿಂದ ಬಿಡಿಸಿ ಬೀಸಿ ಎತ್ತೆತ್ತಲೋ ಒಯ್ದಿವೆ"[8] ಎನ್ನುತ್ತ ಮುಕ್ತವಾಗಿ ಎಕ್ಕುಂಡಿಯವರ ಕಾವ್ಯವನ್ನು ಪ್ರಶಂಶಿಸಿದ್ದಾರೆ.

ಎಕ್ಕುಂಡಿಯವರು ಆಕರ್ಷಕವಾದ ಶೈಲಿಯಲ್ಲಿ ನಿಸರ್ಗದ ಹಿತವಾದ ಸುಂದರ ಚಿತ್ರಗಳನ್ನು ಕಟ್ಟಿ ಕೊಡುವಂತೆಯೇ ದುಡಿಮೆಯ ಮಹತ್ವವನ್ನು ಸಾರಿದ್ದಾರೆ.

"ಕವಿಗೊಟ್ಟು ಕೇಳಯ್ಯ
ಈ ಮಣ್ಣಿನೊಳಗೆ ಆಲಿಸುವ ಕರೆಗೆ
ಹಸಿವು ಹಿಂಗಿಸುವಂಥ ಖನಿಜಗಳ ನಿಧಿಯು
ಬಾಗಿಲನು ತೆರೆಯೆಂದು ಕೂಗಿ ಕರೆಯುತಿವೆ
ಗುದ್ದಲಿಯ ತೆಗೆದುಕೊ ಕದವ ತೆರೆ ಬೇಗ
ಭಂಡಾರ ಬದುಕುಗಳ ತುಂಬಿಬಿಡು ಈಗ"[9] (ಕರೆ)

ಹಸಿವು ಹಿಂಗಿಸಲು ಕಾರ್ಯತತ್ಪರನಾಗಬೇಕಾದ ಅಗತ್ಯವನ್ನು ತಿಳಿಸುತ್ತಲೇ ಕವನದ ಮುಂದಿನ ಸಾಲುಗಳಲ್ಲಿ ತೋಡಿ ತೋಡಿ ಭೂಮಿಯನ್ನು ಬರಿದಾಗಿಸದೆ, ಪ್ರೀತಿ, ಪ್ರೇಮ, ಮನುಷ್ಯತ್ವವನ್ನು ತುಂಬಿಕೋ ಎದೆಗೆ ಎನ್ನುತ್ತಾರೆ.

ಸಂತಾನ, ಮತ್ಸ್ಯಗಂಧಿ, ಹಾವಾಡಿಗರ ಹುಡುಗ, ಬೆಳ್ಳಕ್ಕಿಗಳು, ಬಕುಳದ ಹೂಗಳ ಬಗ್ಗೆ ಕವನ ಬರೆದಂತೆ ಶಬರಿ, ಸುಧಾಮ, ಪುರಂದರದಾಸರ ಬಗ್ಗೆಯೂ ಧ್ಯಾನಿಸಿ ಬರೆದಿದ್ದಾರೆ. ಅಂತೆಯೇ ಸಾಕ್ರಟಿಸ್, ಗಾಂಧಿಯವರನ್ನು ಕುರಿತು ಚಿಂತಿಸಿದ್ದಾರೆ. ಇವರೊಟ್ಟಿಗೆ ಬಡವರು, ಶ್ರಮಜೀವಿಗಳ ಬದುಕಿಗೂ ಕಾವ್ಯದ ಕನ್ನಡಿ ಹಿಡಿದಿದ್ದಾರೆ.

"..... ನೆಲ ಜಲದೊಳಗಲೆದಾಡುತಿರಲು
ಆಗಸ ಕೇಳಿತು "ಏನು ಹೆಸರು?"
"ಪ್ರೀತಿ"
ಎಂದು ಬಂದಿತ್ತು ಗಾಳಿಯುಸಿರು,
ಒಮ್ಮೆಲ ನಕ್ಕಿತು ಸುತ್ತು ಹಸಿರು"[10] (ಪ್ರೀತಿ)

ಬದುಕು ಮುಖ್ಯವೆನ್ನುತ್ತಲೇ ಕಷ್ಟಗಳ ನಡುವೆಯೂ ಬದುಕು ಸಾಗಿಸಿದ ಎಕ್ಕುಂಡಿಯವರ ಪಾಲಿಗೆ ನಿಸರ್ಗವೇ ಮದ್ದು, ಒಲುಮೆ, ಪ್ರೀತಿಗಳೇ ಔಷಧ, ಕಂಡದ್ದು, ನಂಬಿದ್ದು, ಅನುಭವಿಸಿದ್ದು, ಚಿಂತನೆ–ಅರಿವಿಗೆ ದಕ್ಕಿದ್ದು ಎಲ್ಲವನ್ನೂ ಹದವಾಗಿ ಕಥಿಸಬಲ್ಲ, ಎಕ್ಕುಂಡಿಯವರ ಕಾವ್ಯಗಳು ಓದುಗರ ಹೃದಯಕ್ಕೆ ತಂಪು ನೀಡುತ್ತವೆ. ರಸಾನುಭವದೊಂದಿಗೆ ಅರಿವಿನ, ಒಲವಿನ ಪರಿಚಯ ಮಾಡಿಕೊಡುತ್ತವೆ.

ಕನ್ನಡ ಕಾವ್ಯ ಚರಿತ್ರೆಯಲ್ಲಿ ಎಕ್ಕುಂಡಿಯವರಿಗಿಂತ ಮುಂಚೆಯೇ ಕುವೆಂಪು, ಬೇಂದ್ರೆ, ಮಾಸ್ತಿಯವರೂ ಕಥನ ಗೀತೆಗಳನ್ನು ಬರೆದಿದ್ದರೂ ಅವರೆಲ್ಲರಿಗಿಂತ ಭಿನ್ನವಾಗಿ ಕಾವ್ಯವನ್ನೇ ಕಥನವಾಗಿಸುವ ಮೂಲಕ ವಿಶಿಷ್ಟ ಕವಿ ಎಂದೇ ಎಕ್ಕುಂಡಿಯವರು ಕಾವ್ಯರಸಿಕರ ಮನಸ್ಸಿನಲ್ಲಿ ಉಳಿದಿದ್ದಾರೆ.

ಅಡಿ ಟಿಪ್ಪಣಿಗಳು

1. ಪುಟ–385, ಸು.ರಂ.ಎಕ್ಕುಂಡಿ ಸಮಗ್ರ ಸಾಹಿತ್ಯ, ಬೆಳ್ಳಕ್ಕಿ ಹಿಂಡು.
2. ಪುಟ–258, ಕೆ.ವಿ.ನಾರಾಯಣ, ಬೇರುಕಾಂಡ ಚಿಗುರು.
3. ಪುಟ–353, ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ, ಬೆಳ್ಳಕ್ಕಿ ಹಿಂಡು.
4. ಪುಟ–311, ಕೀರ್ತಿನಾಥ ಕುರ್ತಕೋಟಿ, ನೂರು ಮರ ನೂರು ಸ್ವರ.
5. ಪುಟ–270, ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ, ಬೆಳ್ಳಕ್ಕಿ ಹಿಂಡು.

6. ಪುಟ–512, ಪೀಠಿಕೆ, 'ಸಂತಾನ' 'ಕವನ ಸಂಕಲನ', ವಿ.ಕೃ.ಗೋಕಾಕ್, ಉಲ್ಲೇಖ: ಬೆಳ್ಳಕ್ಕಿ ಹಿಂಡು.
7. ಪುಟ–93, ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ, ಸಂಪುಟ.
8. ಪುಟ–517–18, ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ.
9. ಪುಟ–212, ಸು.ರಂ.ಎಕ್ಕುಂಡಿ ಸಮಗ್ರ ಕಾವ್ಯ.

ಪರಾಮರ್ಶನ ಸಾಹಿತ್ಯ:

1. ಸುಬ್ಬಣ್ಣ ರಂಗನಾಥ ಎಕ್ಕುಂಡಿ, ಸಮಗ್ರ ಕಾವ್ಯ: ಬೆಳ್ಳಕ್ಕಿ ಹಿಂಡು, ಸಂಚಯ, ಬೆಂಗಳೂರು, 2008.
2. ಸು.ರಂ. ಎಕ್ಕುಂಡಿಯವರ ಕಾವ್ಯ–ವಿವಿಧ ಲೇಖಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, 1993.
3. ಕೀರ್ತಿನಾಥ ಕುರ್ತಕೋಟಿ, ನೂರು ಮರ ನೂರು ಸ್ವರ, ಪ್ರಸಾರಾಂಗ, ಹಂಪಿ, 1998.
4. ಕೆ.ವಿ.ನಾರಾಯಣ, ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು, 1997.

❖❖❖

ಶಿವನ ಕರುಣೆಯ
ಗಂಟೆ ರವದಲಿ
ಗುಡಿಯ ದೀಪವು ಬೆಳಗಿದೆ
ಮೊಲ್ಲೆ ದಳವದು
ಬಿಡಿಸಿ ಕಂಪನು
ದೂರ ದೂರಕು ಹರಡಿದೆ

ಭಾಷಾಂತರದಲ್ಲಿ ಮೇಲು ಕೀಳಿನ ಪ್ರಶ್ನೆ

ಡಾ. ಅಮರೇಂದ್ರ ಶೆಟ್ಟಿ ಆರ್.
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು–560104

ಭಾಷಾಂತರ ಪರಿಕಲ್ಪನೆಯು ಆರಂಭಿಕ ಹಂತದಿಂದಲೇ ವಾಗ್ವಾದಕ್ಕೆ ಒಳಗಾಗಿದೆ. ಹಾಗಾಗಿಯೇ 'ಭಾಷಾಂತರ' ಎಂಬ ಶಬ್ದದ ಮೂಲ, ಪರಿಭಾಷೆಯ ಅರ್ಥ ವಿವರಣೆ, ವ್ಯಾಖ್ಯೆಗಳು, ತತ್ವ ಮತ್ತು ನಿಯಮಗಳು ಹಾಗೂ ಸೃಜನಶೀಲ ಸಾಧ್ಯತೆಗಳು ಇತ್ಯಾದಿಗಳೆಲ್ಲ ಒಂದು ನೆಲೆಯಲ್ಲಿ ಚರ್ಚಿತಗೊಳ್ಳುತ್ತಿದ್ದರೆ, ಇನ್ನೊಂದು ನೆಲೆಯಲ್ಲಿ ಭಾಷಾಂತರದ ಪ್ರಸ್ತುತತೆ, ಮಹತ್ವ, ಲಕ್ಷ್ಯಪಠ್ಯವು ಮೂಲಪಠ್ಯದ ಜೊತೆಗೆ ಇರಿಸಿಕೊಳ್ಳಬೇಕಾದ ಸಂಬಂಧದ ಸ್ವರೂಪ, ಲಕ್ಷ್ಯಪಠ್ಯ ಹಾಗೂ ಮೂಲಪಠ್ಯದ ಸ್ಥಾನ ನಿರ್ಣಯ, ಭಾಷಾಂತರವು ಹುಟ್ಟು ಹಾಕುತ್ತಿರುವ ಸಾಂಸ್ಕೃತಿಕ ರಾಜಕಾರಣ ಇತ್ಯಾದಿಗಳ ಕುರಿತ ಚರ್ಚೆಗಳು ನಿರಂತರವಾಗಿ ಚಾಲ್ತಿಯಲ್ಲಿವೆ.

ಕ್ರಿ.ಪೂ. ಐದನೆಯ ಶತಮಾನದಲ್ಲಿ ಟೂಲಿಯಸ್ ಸಿಸಿರೋ ಪದಶಃ ಅನುವಾದದ ಔಚಿತ್ಯವನ್ನು ಪ್ರಶ್ನಿಸುವುದರೊಂದಿಗೆ ಭಾಷಾಂತರವನ್ನು ಕುರಿತ ತಾತ್ವಿಕ ಚರ್ಚೆಗಳಿಗೆ ನಾಂದಿ ಹಾಡಿದ ಎನ್ನಲಾಗುತ್ತದೆ. ಭಾಷಾಂತರದ ಪ್ರಕ್ರಿಯೆ ಇತ್ತೀಚಿನದ್ದು ಅಲ್ಲವಾದರೂ ಅದರ ಕುರಿತ ಚರ್ಚೆಗಳು ಮತ್ತು ವಾಗ್ವಾದಗಳು ಮಾತ್ರ ಹತ್ತೊಂಬತ್ತನೇ ಶತಮಾನದ ನಲ್ವತ್ತರ ದಶಕದಲ್ಲಿ ಹೆಚ್ಚು ಬಲಗೊಳ್ಳತೊಡಗಿದವು. ತೌಲನಿಕ ಸಾಹಿತ್ಯ ಮತ್ತು ಭಾಷಾಂತರವನ್ನು ಕುರಿತ ಚರ್ಚೆಗಳು ಸರಿಸುಮಾರು ಒಂದೇ ಕಾಲದಲ್ಲಿ ಮುನ್ನೆಲೆಗೆ ಬಂದವು.

ಹತ್ತೊಂಬತ್ತನೆಯ ಶತಮಾನದ ವೇಳೆಗೆ ಭಾಷಾಂತರವನ್ನು ಮೂಲಕ್ಕಿಂತ ಕೀಳು ಎಂದು ನೋಡುವ ಧೋರಣೆ ಮೊದಲಾಗಿತ್ತು. ಭಾಷಾಂತರವನ್ನು ಅಳವಡಿಕೆ, ಅನುಕರಣೆ ಮುಂತಾದ ಶಬ್ದಗಳ ಮೂಲಕ ಹೆಸರಿಸಿ ಹಿಯಾಳಿಸಲಾಗುತ್ತಿತ್ತು. ಅಂದರೆ ಭಾಷಾಂತರಕಾರ್ಯದ ಸೃಜನಶೀಲ ಸಾಧ್ಯತೆಯನ್ನಾಗಲೀ ಅದರ ಸಾಂಸ್ಕೃತಿಕ ಮಹತ್ವವನ್ನಾಗಲೀ ಒಪ್ಪಿಕೊಳ್ಳದ ಸನ್ನಿವೇಶವೊಂದು ಅಲ್ಲಿತ್ತು. ಭಾಷಾಂತರಕ್ಕೆ ಸಂಬಂಧಿಸಿದ ಬಹುತೇಕ ಎಲ್ಲ ಚರ್ಚೆ ಹಾಗೂ ವಾಗ್ವಾದಗಳಲ್ಲಿ ಮೂಲಪಠ್ಯಕ್ಕೆ ತೋರಬೇಕಾದ ವಿಧೇಯತೆಯನ್ನು, ನಿಷ್ಠೆಯನ್ನು ಪ್ರಧಾನವಾಗಿ ಪ್ರಸ್ಥಾಪಿಸಲಾಗುತ್ತದೆ. ವಿಲಮೋವಿಟ್ಜ್‌ನಂತಹ ವಿದ್ವಾಂಸ ಭಾಷಾಂತರವನ್ನು ವ್ಯಾಖ್ಯಾನಿಸುವಾಗ ಮೂಲನಿಷ್ಠೆಯ ಆಶಯವನ್ನು ತೋರುತ್ತಾನೆ. ಅವನು ಭಾಷಾಂತರಕಾರನ ಬದ್ಧತೆ ಮತ್ತು ಮೂಲಕೃತಿಗೆ ಸಲ್ಲಬೇಕಾದ ನ್ಯಾಯದ ಬಗೆಗೆ ಮಾತಾಡುವಾಗ 'ಭಾಷಾಂತರಕಾರನಿಗೆ ಪರಕಾಯ ಪ್ರವೇಶದ ಗುಣವಿರಬೇಕು' ಎನ್ನುತ್ತಾನೆ. ಪರಕಾಯ ಪ್ರವೇಶ ಎನ್ನುವ ಮಾತು ಸೂಕ್ಷ್ಮವಾಗಿ ಅನುವಾದಿತ ಪಠ್ಯವನ್ನು ಅಂಚಿಗೆ ನೂಕುವ ಪ್ರಯತ್ನವನ್ನು ಮಾಡುತ್ತದೆ. ಅಂದರೆ ಅನುವಾದ ಎಷ್ಟೇ ಶ್ರೇಷ್ಠವಾಗಿದ್ದರೂ ಮೂಲಪಠ್ಯದ್ದೇ ಹೆಚ್ಚುಗಾರಿಕೆ.

ಮೂಲ ಅಥವಾ ಮೂಲಕೃತಿಯನ್ನು ವೈಭವೀಕರಿಸುವ ಇಲ್ಲವೇ ಉತ್ಪ್ರೇಕ್ಷಿಸುವ

ವಾದಗಳ ಬೀಜವನ್ನು ಫ್ರೆಂಚ್ ಚಿಂತಕ ಘಕೋ ಹದಿನೆಂಟನೆಯ ಶತಮಾನದ ವಾಚಿಕೆಗಳಲ್ಲಿ ಗುರುತಿಸುತ್ತಾನೆ. ಅಲ್ಲಿ ಬರವಣಿಗೆಯನ್ನು ಸೃಷ್ಟಿ ಕ್ರಿಯೆಯ ಆದ್ಯ ರೂಪಕ್ಕೆ ಹೋಲಿಸಿ ಬರಹಗಾರರನ್ನು ಸೃಷ್ಟಿಕರ್ತನೊಂದಿಗೆ ಸಮೀಕರಿಸುವ ಚಿಂತನೆಗಳಿವೆ. ಮೂಲಕೃತಿ ಹಾಗೂ ಕೃತಿಕಾರನನ್ನು ವೈಭವೀಕರಿಸುವ ಇಂತಹ ನಿಲುವುಗಳು ಲಕ್ಷ್ಯಭಾಷೆ ಮತ್ತು ಸಂಸ್ಕೃತಿಗಳಿಗೆ ವಿದ್ರೋಹದ, ಬಂಡಾಯದ ಗುಣಗಳು ಇರುವುದಿಲ್ಲ ಎಂದು ನಂಬಿಸಲೆತ್ನಿಸುತ್ತವೆ. ಒಂದು ವೇಳೆ ಇದ್ದರೆ ಅದನ್ನು ಅನೈತಿಕವೆಂದು ವ್ಯಾಖ್ಯಾನಿಸಲು ಯತ್ನಿಸುತ್ತವೆ. ಹಾಗೆಯೇ ಭಾಷಾಂತರದ ಮುಖೇನ ಘಟಿಸುವ ಅಂತರ್ ಸಾಂಸ್ಕೃತಿಕ ಸಂವಹನ ಅಥವಾ ಸಂಪರ್ಕದ ಸಂದರ್ಭದಲ್ಲಿ ಮೂಲ ಹಾಗೂ ಲಕ್ಷ್ಯಭಾಷೆ ಮತ್ತು ಸಂಸ್ಕೃತಿಗಳು ಪರಸ್ಪರ ಸಮಾನವೆಂಬಂತೆ ಭಾವಿಸಿಕೊಳ್ಳಬೇಕು ಎನ್ನುವ ಕೆಲವರ ಚಿಂತನೆಗಳು ಲಕ್ಷ್ಯಭಾಷೆಯು ಭಾಷಾಂತರದ ಸಂದರ್ಭದಲ್ಲಿ ಮೂಲಕೃತಿ ಎನ್ನುವುದು ಶುದ್ಧ ಸೃಷ್ಟಿ ಹಾಗೂ ಅದರ ಲೇಖಕನು ಒಬ್ಬ ಸೃಷ್ಟಿಕರ್ತ ಎನ್ನುವ ಕಥನಗಳನ್ನು ಮೀರದಿರಲಿ ಮತ್ತು ವಿದ್ರೋಹದ ನಿಲುವನ್ನು ತಳೆಯದಿರಲಿ ಎನ್ನುವ ಮುನ್ನೆಚ್ಚರಿಕೆಯಲ್ಲಿ ಹುಟ್ಟಿದವುಗಳೇ ಹೊರತು ಭಾಷಾಂತರಗಳಿಗೆ ಸಹಜವಾಗಿಯೇ ದಕ್ಕಬೇಕಾದ ಮನ್ನಣೆಯನ್ನು ನೀಡುವ ಸದುದ್ದೇಶವೇನೂ ಅಲ್ಲಿಲ್ಲ.

ಮೂಲಪಠ್ಯದ ಪರವಾದ ಈ ಬಗೆಯ ಚಿಂತನೆಗಳು ಮೂಲಪಠ್ಯವು ಭಾಷಾಂತರದಲ್ಲಿ ತನ್ನ ಪ್ರಭಾವವನ್ನು ಕಳೆದುಕೊಳ್ಳುವ ಆತಂಕದಿಂದ, ತಾನು ಸೃಷ್ಟಿಸಿದ ಅರ್ಥಗಳು ಭಾಷಾಂತರದಲ್ಲಿ ಇಲ್ಲವಾಗಿಬಿಡುವ ಅಥವಾ ಕ್ಷೀಣಿಸುವ ಅಥವಾ ಬೇರೆಯದೇ ರೂಪಗಳನ್ನು ಧಾರಣ ಮಾಡಿಬಿಡುವ ಭೀತಿಯಲ್ಲಿ ಹುಟ್ಟಿದಂಥವುಗಳು. ಈ ಹಿನ್ನೆಲೆಯಲ್ಲಿಯೇ ಇಂಗ್ಲಿಷಿನಲ್ಲಿರುವ 'ಆಥರ್' (ಲೇಖಕ) ಮತ್ತು 'ಅಥಾರಿಟಿ' (ಅಧಿಕಾರ) ಎನ್ನುವ ಪದಗಳನ್ನು ಗಮನಿಸಿದರೆ ಮೂಲ ಕೃತಿಗೆ ನೀಡಲಾಗುವ ಅಧಿಕಾರ ಮತ್ತು ದೈವಿಕ ಪ್ರಭಾವಳಿಯನ್ನು ಅರ್ಥ ಮಾಡಿಕೊಳ್ಳಬಹುದು. ಇನ್ನೊಂದು ದಿಕ್ಕಿನಲ್ಲಿ ಭಾಷಾಂತರದ ಬಗೆಗಿನ ಚರ್ಚೆಗೆ ಒಂದು ತಾತ್ವಿಕ ನೆಲೆ ಒದಗಿಸಿಕೊಟ್ಟ ಇವಾನ್ ಜೋಹರ್‌ನಂತಹ ವಿದ್ವಾಂಸರು ಮೂಲಪಠ್ಯವನ್ನು ಪ್ರಧಾನವಾಗಿಸಿ ಲಕ್ಷ್ಯಪಠ್ಯದ ಸ್ಥಾನವನ್ನು ಕೆಳ ದಬ್ಬುವ ಪ್ರಯತ್ನ ಹಾಗೂ ನಿಲುವುಗಳನ್ನು ಬಲವಾಗಿ ಪ್ರತಿರೋಧಿಸುತ್ತಾರೆ.

ಒಟ್ಟಾರೆ ಚರಿತ್ರೆಯುದ್ದಕ್ಕೂ ಭಾಷಾಂತರಗಳು ನಡೆಯುತ್ತಲೇ ಬಂದಿದ್ದರೂ ಭಾಷಾಂತರಕಾರರು ಹಾಗೂ ವಿದ್ವಾಂಸರನ್ನು ಮತ್ತೆ ಮತ್ತೆ ಕಾಡಿದ ಹಾಗೂ ಕಾಡುತ್ತಿರುವ ಪ್ರಶ್ನೆ ಎಂದರೆ, ಭಾಷಾಂತರಕಾರನಿಗೆ ಮುಖ್ಯವಾಗಿ ಇರಬೇಕಾದುದು ಮೂಲ ಕೃತಿಯನ್ನು ಕುರಿತ ನಿಷ್ಠತೆಯೋ, ಸೃಜನಶೀಲ ಸಾಮರ್ಥ್ಯ ಹಾಗೂ ಅದಕ್ಕನುಗುಣವಾದ ಸ್ವಾತಂತ್ರ್ಯವೋ ಎನ್ನುವುದು.

ದ್ವಿ ದೃಷ್ಟಿಯ ತೌಲನಿಕ ಅಧ್ಯಯನಗಳು ಅಂದರೆ ಬೈನರಿ ಅಧ್ಯಯನಗಳು– (ಇಬ್ಬರು ಲೇಖಕರ ಅಥವಾ ಎರಡು ಭಿನ್ನ ವ್ಯವಸ್ಥೆಗಳ ಅಥವಾ ಎರಡು ಭಿನ್ನ ವ್ಯವಸ್ಥೆಯ ಪಠ್ಯಗಳ ತುಲನಾತ್ಮಕ ಅಧ್ಯಯನ) ಭಾಷಾಂತರವು ತೌಲನಿಕ ಅಧ್ಯಯನದ ಸಂದರ್ಭದಲ್ಲಿ ವಹಿಸುವ ಪಾತ್ರವನ್ನು ಒಪ್ಪಿಕೊಂಡರೂ ಸಾಹಿತ್ಯ ಕೃತಿಯೊಂದನ್ನು ಅದರ ಮೂಲ ಭಾಷೆಯಲ್ಲಿ ಓದುವುದರ ಪರವಾದ ತನ್ನ ನಿಲುವುಗಳನ್ನು ಸಡಿಲಿಗೊಳಿಸಲಿಲ್ಲ. ಅನುವಾದಿತ ಪಠ್ಯವು ಕೇವಲವೆಂದೂ ಮೂಲಪಠ್ಯಕ್ಕಿಂತ ಕೀಳೆಂದೂ ಪರೋಕ್ಷವಾಗಿ

ಕೆಲವೊಮ್ಮೆ ಪ್ರತ್ಯಕ್ಷವಾಗಿಯೂ ಹೇಳತೊಡಗಿದವು. ಭಾಷಾಂತರಿತ ಕೃತಿಯ ಓದಿಗಿಂತ ಮೂಲಪಠ್ಯ ಅಥವಾ ಆಕರಪಠ್ಯವನ್ನು ಮೂಲಭಾಷೆಯಲ್ಲಿ ಓದುವುದು ತುಂಬ ಸೂಕ್ತ ಎಂದು ಪ್ರತಿಪಾದಿಸುತ್ತಿದ್ದವು. ಹಾಗೆಯೇ ಒಂದು ಕೃತಿಯ ಅಧ್ಯಯನವನ್ನು ಭಾಷಾಂತರಿತ ಕೃತಿಯ ಮುಖೇನ ಮಾಡುವುದು ತೀರಾ ಅಪ್ರಯೋಜಕ. ಏಕೆಂದರೆ ಭಾಷಾಂತರದಲ್ಲಿ ಮೂಲಕೃತಿಯ ಸತ್ವವೆಲ್ಲ ಸೋರಿ ಹೋಗಿರುತ್ತದೆ ಎನ್ನುತ್ತಿದ್ದವು.

ಹತ್ತೊಂಬತ್ತನೆಯ ಶತಮಾನದ ವೇಳೆಗೆ ತೌಲನಿಕ ಕ್ಷೇತ್ರದಲ್ಲಷ್ಟೆ ಅಲ್ಲದೆ ಇನ್ನುಳಿದ ವಿದ್ವತ್‌ವಲಯದಲ್ಲಿಯೂ ಭಾಷಾಂತರವನ್ನು ಕುರಿತಂತೆ ಇಂತಹ ಕಡೆಗಣ್ಣಿನ ಧೋರಣೆ ವ್ಯಾಪಕವಾಗಿಯೇ ಇತ್ತು. ಇಂತಹ ನಿಲುವುಗಳ ಬಗೆಗೆ 1931ರಲ್ಲಿಯೇ ಹಿಲರಿಬೆಲಕ್ ಎನ್ನುವ ವಿದ್ವಾಂಸ ಬಲವಾಗಿಯೇ ಆಕ್ಷೇಪವೆತ್ತಿದ್ದ. ಆದರೆ ಅವನು ಎತ್ತಿದ ಆಕ್ಷೇಪಣೆಯಲ್ಲಿ ಮೇಲು ನೋಟಕ್ಕೆ ಸ್ವಲ್ಪ ಉತ್ಪ್ರೇಕ್ಷೆ ಇದ್ದುದರಿಂದ ಹಾಗೂ ಆ ಸಂದರ್ಭದಲ್ಲಿ ಭಾಷಾಂತರಪರವಾದ ಖಚಿತ ತಾತ್ವಿಕತೆಯ ಕೊರತೆಯೂ ಇದ್ದುದರಿಂದ ಬೆಲಕ್‌ನ ಮಾತಿಗೆ ಅಂತಹ ಮನ್ನಣೆ ಸಿಗಲಿಲ್ಲ.

1970ರ ದಶಕದಲ್ಲಿ ವಿದ್ವಾಂಸರ ಒಂದು ವರ್ಗವು ಭಾಷಾಂತರ ಮತ್ತು ಭಾಷಾಂತರ ಅಧ್ಯಯನಕ್ಕೆ ಭಿನ್ನ ನೆಲೆಯ ದೃಷ್ಟಿಕೋನವೊಂದನ್ನು ಧಾರಣ ಮಾಡುವ ಕೆಲಸಕ್ಕೆ ತೊಡಗಿತು. ಪ್ರಾರಂಭದಲ್ಲಿ ಇಸ್ರೇಲಿನ ಟೆಲ್ ಅವಿವ್ ವಿ.ವಿ.ಯ ಇವಾನ್ ಜೋಹಾರ್‌ನ ನೇತೃತ್ವದ ಒಂದು ಗುಂಪು ತಮ್ಮ ಉದ್ದೇಶಗಳನ್ನು ಭಾಷಾಂತರ ಅಧ್ಯಯನವೆಂದು ವಿವರಿಸಿತು. ಇವಾನ್ ಜೋಹರ್ ಭಾಷಾಂತರ ಪ್ರಕ್ರಿಯೆಗೆ ಸಂಬಂಧಿಸಿದ ದೃಷ್ಟಿಕೋನಗಳ ಸಾರವನ್ನು ಸಂಗ್ರಹವಾಗಿ ಮಂಡಿಸಲು ಆರಂಭಿಸಿದ. ಇವಾನ್ ಜೋಹರ್ ತನ್ನ 'ಟ್ರಾನ್ಸ್‌ಲೇಶನ್ ಟುಡೆ' ಎನ್ನುವ ಲೇಖನದಲ್ಲಿ ಭಾಷಾಂತರವನ್ನು ಕುರಿತ ತಿರಸ್ಕಾರದ ಧೋರಣೆಗಳನ್ನು ತುಂಬ ಖಾರವಾಗಿ ಪ್ರಶ್ನಿಸುತ್ತಾನೆ. ಮೂಲ ಕೃತಿಯಲ್ಲಿನ ಯಾವುದೋ ಒಂದು ಬಹುಮುಖ್ಯ ಸತ್ವವು ಭಾಷಾಂತರದಲ್ಲಿ ನಾಶವಾಗಿಬಿಡುತ್ತದೆ, ಭಾಷಾಂತರವು ಮೂಲಪಠ್ಯಕ್ಕೆ ವಿಶ್ವಾಸ ದ್ರೋಹ ಮಾಡಿಬಿಡುತ್ತದೆ, ಹಾಗೆಯೇ ಮೂಲಕೃತಿಯನ್ನು ಅಪಮೌಲ್ಯಗೊಳಿಸಿ ಬಿಡುತ್ತದೆ ಎನ್ನುವ ನೇತ್ಯಾತ್ಮಕ ಪರಿಭಾಷೆ ಬಳಸುವ ವಿಮರ್ಶಕರನ್ನು 'ಅಪ್ರಬುದ್ಧರು, ಅನನುಭವಿಗಳು' ಎಂದು ಜೋಹರ್ ಗೇಲಿ ಮಾಡುತ್ತಾನೆ. ಹಾಗೆಯೇ ಭಾಷಾಂತರಗಳು ಹೇಗಿರಬೇಕು ಮತ್ತು ಯಾವ ಮಾನದಂಡಗಳ ಅನುಸಾರ ಅವುಗಳ ಮೌಲ್ಯಮಾಪನ ಮಾಡಬೇಕು, ಸಾಹಿತ್ಯ ಮತ್ತು ವಿಮರ್ಶೆಯ ಯಾವ ಪರಿಕರಗಳ ಮೂಲಕ ಅವನ್ನು ಗ್ರಹಿಸಬೇಕು ಎನ್ನುವುದನ್ನು ಎಲ್ಲ ಬಲ್ಲ ವಿಮರ್ಶಕರು ಮೊದಲು ಹೇಳಬೇಕು ಎಂದು ಇವಾನ್ ಜೋಹರ್ ಆಗ್ರಹಿಸುತ್ತಾನೆ.

ಏಕ ಅಥವಾ ನಿರ್ದೇತ ಅಥವಾ ಮೂಲಪಠ್ಯದ ಕಲ್ಪನೆಯನ್ನು ಸಂರಚನೋತ್ತರವಾದಿಗಳು ಹಾಗೂ ಬೋರ್ಗೆಸ್‌ನಂತಹ ವಿದ್ವಾಂಸರು ಅಲ್ಲಗಳೆದ ನಂತರವೂ ಮೂಲ ನಿಷ್ಠೆಯ ಸ್ವಭಾವವನ್ನು ಕೆಲವರು ಬಿಡಲು ಸಿದ್ಧರಿರಲಿಲ್ಲ. ಬೋರ್ಗೆಸ್‌ನಂತೂ 'ನಿರ್ಣೀತ ಮತ್ತು ಮೂಲಪಠ್ಯದ ಪರಿಕಲ್ಪನೆಯು ಧರ್ಮಕ್ಕೆ ಮತ್ತು ನಿರಾಸಕ್ತ ಓದಿಗೆ ಮಾತ್ರ ಸಲ್ಲುತ್ತದೆ' ಎಂದು ಟೀಕಿಸುವ ಮೂಲಕ 'ಭಾಷಾಂತರದ ಸಾರ್ವಕಾಲಿಕ ಪ್ರಸ್ತುತತೆಯ' ಪರವಾಗಿ ನಿಂತ. ಆದರೆ ಮೂಲಕೃತಿಗಳ ಖಚಿತತೆಯ ಕಲ್ಪನೆ ಮತ್ತು ಭಾಷಾಂತರದಲ್ಲಿ ಅವು ವಿರೂಪಗೊಳ್ಳುತ್ತವೆ ಎನ್ನುವ ಹಠಮಾರಿ

ನಿಲುವುಗಳು ಎಂದಿನಂತೆ ಮುಂದುವರೆದವು.

1985 ರಲ್ಲಿ ಥಿಯೋ ಹಾರ್ಮನ್ಸ್ ಸಂಕಲಿಸಿದ "ದಿ ಮ್ಯಾನಿಪ್ಯುಲೇಶನ್ ಆಫ್ ಲಿಟರೇಚರ್, ಸ್ಟಡೀಸ್ ಇನ್ ಲಿಟರರಿ ಟ್ರಾನ್ಸ್‌ಲೇಶನ್" ಎಂಬ ಕೃತಿಯಲ್ಲಿ ಪ್ರಕಟವಾದ 'ಆನ್ ಡಿಸ್ಕ್ರೈಬಿಂಗ್ ಟ್ರಾನ್ಸ್‌ಲೇಶನ್' ಎನ್ನುವ ನಿಬಂಧದಲ್ಲಿ ಭಾಷಾಂತರದ 'ಗರತಿಯತನ' ಹಾಗೂ 'ಗುಣಮಟ್ಟ' ಕುರಿತಂತೆ ಆಳವಾಗಿ ಬೇರುಬಿಟ್ಟ, ಮೂಲಾನ್ವಯಿಯಾದ, ಗತ್ಯಂತರವಿಲ್ಲದೆ ರೂಢಿಯಾಗಿಬಿಟ್ಟಿರುವ ಹಲವು ಪಾರಂಪರಿಕ ನಂಬಿಕೆಗಳನ್ನು ಬಿಟ್ಟು ಮುಂದೆ ಸಾಗಬೇಕೆಂದು ಲ್ಯಾಂಬರ್ಟ್ ಮತ್ತು ವ್ಯಾನ್‌ಗಾರ್ಪ್ ಅಭಿಪ್ರಾಯ ಪಡುತ್ತಾರೆ.

ಯಾವಾಗಲೂ ಸಾಂಸ್ಕೃತಿಕವಾಗಿ ಹಾಗೂ ಅಧಿಕಾರದ ನೆಲೆಯಲ್ಲಿ ಬಲಿಷ್ಟವಾದ ಭಾಷೆ ಮತ್ತು ದೇಶದ ಕೃತಿಗಳು ಅವು ಮೂಲಪಠ್ಯವಾಗಲೀ ಲಕ್ಷ್ಯಪಠ್ಯವಾಗಲೀ ಸದಾ ಶ್ರೇಷ್ಟತೆಯ ನೆಲೆಯಲ್ಲಿಯೇ ಕಾಣಿಸಿಕೊಳ್ಳಲು ತವಕಿಸುತ್ತವೆ. ಉದಾ: ಹೆರಾಲ್ಡ್ ಫಿಟ್‌ಜೆರಾಲ್ಡನು ಪರ್ಷಿಯನ್ ಕವಿ ಉಮರ್‌ಖಯ್ಯಾಮನ 'ರುಬಾಯತ್'ಗಳನ್ನು ಜರ್ಮನಿಗೆ ಭಾಷಾಂತರಿಸಿದಾಗ ವಾಸ್ತವವಾಗಿ ಮೂಲಪಠ್ಯವಾದ ಖಯ್ಯಾಮನ ಕೃತಿಯ ಬಗೆಗೆ ತಳೆದ ಉಢಾಫೆಯ ನಿಲುವು ಕೆಲವು ರಾಷ್ಟ್ರಗಳ ಸಾಂಸ್ಕೃತಿಕ ಶ್ರೇಷ್ಟತಾ ಅಹಂಕಾರವನ್ನು ಸ್ಪಷ್ಟವಾಗಿ ಪ್ರತಿನಿಧಿಸುವಂತಿತ್ತು. ಹೀಗೆ ಭಾಷಾಂತರವು ಸೀಮಿತ ಅರ್ಥದಲ್ಲಿಯಾದರೂ ಅಧೀನ ರಾಷ್ಟ್ರಗಳ ಮೇಲೆ ಅಧಿಕಾರವನ್ನು ವಿಸ್ತರಿಸಿಕೊಳ್ಳಲು ಸಾಂಸ್ಕೃತಿಕವಾಗಿ ಬಲಿಷ್ಟವೆಂದು ಭಾವಿಸಿಕೊಂಡಿದ್ದ ರಾಷ್ಟ್ರಗಳಿಗೆ ಸಾಧನವಾಯಿತು. ಆದರೆ ಬದಲಾದ ಕಾಲಘಟ್ಟದಲ್ಲಿ ಅದೇ ಸಾಧನವನ್ನು ಕಳೆದು ಹೋದ ತಮ್ಮ ಅಸ್ಮಿತೆಗಳ ಪುನರ್ ಗಳಿಕೆಗಾಗಿ ಬಳಸಬೇಕೆನ್ನುವ ವಿಶಿಷ್ಟ ಆಲೋಚನೆಗಳು ಭಾಧಿತ ಸಂಸ್ಕೃತಿ ಮತ್ತು ರಾಷ್ಟ್ರಗಳಲ್ಲಿ ತಲೆಯೆತ್ತಿದ್ದನ್ನು ಕೂಡ ಕಾಣಬಹುದು.

ಹಾಗೆಯೇ ಜೆಕ್ ಲೇಖಕನಾದ ಜ್ಯಾನ್ ಇವ್ಯಾಂಜಲಿಸ್ಟ್ ಪುರ್ಕೇನ್ ತಾನು ಅನ್ಯ ದೇಶಗಳ ಕೃತಿಗಳನ್ನು ಅನುವಾದ ಮಾಡಿದ್ದರ ಬಗೆಗೆ ಮಾತನಾಡುತ್ತ 'ತನ್ನ ಅನುವಾದಗಳು ವಿದೇಶಿ ಸಂಸ್ಕೃತಿಗಳ ವಿನಾಶಕಾರಿ ಪರಿಣಾಮಗಳ ವಿರುದ್ಧ ಮಾಡಿದ ತತ್‌ಕ್ಷಣದ ಪ್ರತಿಕ್ರಿಯೆ ಎಂದೂ, ಈ ಮೊದಲು ಸ್ಲಾವಿಕ್ ಸಮುದಾಯ ಅಥವಾ ಸ್ಲಾವಿಕ್ ಪ್ರಪಂಚವು ಪಟ್ಟ ಹಿಂಸೆಯ ವಿರುದ್ಧ ಕೈಗೊಂಡ ಭಾಷಿಕ ಪ್ರತೀಕಾರವೆಂದೂ' ತನ್ನ ಭಾಷಾಂತರಗಳನ್ನು ಅರ್ಥೈಸುವ ಪ್ರಯತ್ನ ಮಾಡುತ್ತಾನೆ. ಯಾರಾದರೂ ಸ್ಲಾವ್ ಜನಾಂಗವನ್ನು ರಾಷ್ಟ್ರರಹಿತ ಜನಾಂಗವಾಗಿಸಲು ಯತ್ನಿಸಿದರೆ ಸ್ಲಾವ್ ಜನಾಂಗವು ತನಗೆ ಅನ್ಯಾಯ ಎಸಗಲು ಯತ್ನಿಸುವವರ ಮೇಲೆ ಉದಾತ್ತವಾದ ಪ್ರತೀಕಾರ ಮಾರ್ಗಗಳನ್ನು ಅನುಸರಿಸಿ ಅವರು ತಮ್ಮ ಮನೋವಿಶ್ವದಲ್ಲಿ ಸೃಷ್ಟಿಸಿರಬಹುದಾದ ಅತ್ಯುತ್ತಮವಾದುದನ್ನೆಲ್ಲ ವಶಪಡಿಸಿಕೊಳ್ಳಬೇಕು ಎಂದು ಕರೆ ನೀಡುತ್ತಾನೆ. ಇಲ್ಲಿ ಪುರ್ಕೇನ್ ಭಾಷಾಂತರಗಳನ್ನೇ ಪ್ರತೀಕಾರದ ಅಸ್ತ್ರವಾಗಿಸಿಕೊಳ್ಳಲು ಬಯಸಿರುವುದು ಸ್ಪಷ್ಟ. ಹಾಗೆಯೇ ಪುರ್ಕೇನ್‌ನ ನಿಲುವು ಸ್ಲಾವಿಕ್ ಅಥವಾ ಯಾವುದೇ ಭಾಷೆ ಮತ್ತು ಸಮುದಾಯಗಳ ಘನತೆಯನ್ನು ಮರು ಸ್ಥಾಪಿಸಲೆತ್ನಿಸುವ ಆಶಯಗಳಲ್ಲಿ ಮುಖ್ಯವಾದುದು.

1985ರಲ್ಲಿ ಪ್ರಕಟವಾದ ಲ್ಯಾಂಬರ್ಟ್ ಮತ್ತು ವ್ಯಾನ್ ಗಾರ್ಪ್‌ರವರ 'ದಿ ಮ್ಯಾನಿಪ್ಯುಲೇಶನ್ ಆಫ್ ಲಿಟರೇಚರ್' ಎಂಬ ನಿಬಂಧದಲ್ಲಿ 'ಭಾಷಾಂತರವು ಸಾಹಿತ್ಯದ ರೂಪುರೇಷೆಗಳನ್ನು ನಿರ್ಧರಿಸುವ ಶಕ್ತಿ ಮತ್ತು ಅದೊಂದು ಬಹು ಮುಖ್ಯವಾದ ಪಠ್ಯ

ಸಂಬಂಧೀ ಕಾರ್ಯ ತಂತ್ರ' ಎಂದು ಪ್ರತಿಪಾದಿಸಲಾಗಿದೆ. ಹಾಗೆಯೇ ಮೂಲವು ಸದಾ ಶ್ರೇಷ್ಠ, ಭಾಷಾಂತರವು ಎರಡನೇ ದರ್ಜೆಯದು ಎಂಬ ಮೂಲ ಶ್ರೇಷ್ಠತಾವಾದವನ್ನು ಆಧಾರ ರಹಿತ ಎಂದು ಈ ನಿಬಂಧವು ವಾದಿಸುತ್ತದೆ.

ಇನ್ನು ದ್ವಿಭಾಷಾ ನಿಘಂಟುಗಳ ಕಲ್ಪನೆಯು ಕೂಡ ಭಾಷಾಂತರವನ್ನು ಕುರಿತ ಸಾಂಪ್ರದಾಯಿಕ ನಂಬಿಕೆಗಳನ್ನು ಆಧರಿಸಿದೆ. ದ್ವಿ ಭಾಷಾ ನಿಘಂಟುಗಳ ತಾತ್ವಿಕತೆಯ ಪ್ರಕಾರ, ಎರಡು ಭಾಷೆಗಳ ನಡುವೆ ಭಾಷಾಂತರ ಸಾಧ್ಯವಾಗುವುದು ಅವೆರಡರ ನಡುವೆ ಶಕ್ತಿ ಸಾಮರ್ಥ್ಯಗಳಲ್ಲಿ ಸಮಾನತೆ ಇದ್ದಾಗ ಅಥವಾ ಇರುವುದರಿಂದ. ಆದರೆ ಭಾಷಾ ವಿದ್ವಾಂಸ ಎಡ್ವರ್ಡ್ ಸಫೀರ್ ಹೇಳುವುದೇ ಬೇರೆ. ಅವನು ತನ್ನ 'ಲ್ಯಾಂಗ್ವೇಜ್ ಅಂಡ್ ಪರ್ಸನಾಲಿಟಿ' ಎನ್ನುವ ಕೃತಿಯಲ್ಲಿ ಭಾಷೆಗಳ ನಡುವಿನ ಸಮಾನ ಶಕ್ತಿ ಸಾಮರ್ಥ್ಯಗಳ ಕಲ್ಪನೆಯ ಮಾತನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ. ಅವನ ಪ್ರಕಾರ ಯಾವುದೇ ಎರಡು ಭಾಷೆಗಳು ಒಂದೇ ಸಾಮಾಜಿಕ ವಾಸ್ತವವನ್ನು ಪ್ರತಿನಿಧಿಸುತ್ತವೆ ಎಂದು ಹೇಳಲು ಸಾಧ್ಯವಿಲ್ಲ ಹಾಗೂ ಆ ರೀತಿಯ ಸಾದೃಶ್ಯಗಳು ತೀರಾ ಕಡಿಮೆ. ಪ್ರತಿ ಸಮಾಜಕ್ಕೂ ಭಾಷೆಗೂ ಅದರದೇ ಆದ ಭಿನ್ನ ಬದುಕಿನ ಕ್ರಮ ಮತ್ತು ಗ್ರಹಿಕೆಯ ಲೋಕವಿದೆ. ಅವೆಲ್ಲ ಬೇರೆ ಬೇರೆ ಲೇಬಲ್ ಹಚ್ಚಿದ ಒಂದೇ ಸಮಾಜ, ಭಾಷೆ ಅಥವಾ ಲೋಕವಲ್ಲ. ಅವು ಖಚಿತಾರ್ಥದಲ್ಲಿ ಪ್ರತ್ಯೇಕ ಅಸ್ತಿತ್ವಗಳನ್ನು ಹೊಂದಿರುತ್ತವೆ ಎನ್ನುತ್ತಾನೆ.

ಇವಾನ್ ಜೋಹರ್ ಮತ್ತು ಇತರ ವಿದ್ವಾಂಸರು ಪ್ರತಿಪಾದಿಸುವ ಪಾಲಿ ಸಿಸ್ಟಂ ಥಿಯರಿ ಕೂಡ ದ್ವಿಭಾಷಾ ನಿಘಂಟುಗಳು ಹೇಳುವ ಭಾಷೆಗಳ ನಡುವಿನ ಸಮಾನ ಶಕ್ತಿ ಸಾಮರ್ಥ್ಯಗಳ ಸಿದ್ಧಾಂತವನ್ನು ಅನುಮೋದಿಸುವುದಿಲ್ಲ. ಹಾಗೆಯೇ ಎಲ್ಲ ಸಾಹಿತ್ಯ ವ್ಯವಸ್ಥೆಗಳನ್ನೂ ಒಂದೇ ದೃಷ್ಟಿಯಲ್ಲಿ ನೋಡದೆ ಅವುಗಳ ಅನನ್ಯತೆಯನ್ನು ಗೌರವಿಸಬೇಕಾಗುತ್ತದೆ ಎಂದು ವಾದಿಸುತ್ತದೆ. ಎಡ್ವರ್ಡ್ ಸಫೀರ್‌ನ ಸಿದ್ಧಾಂತವನ್ನು ಮತ್ತು ಇವಾನ್ ಜೋಹರ್‌ನ ಪಾಲಿ ಸಿಸ್ಟಂನ ಸಿದ್ಧಾಂತಗಳನ್ನೂ ಲೆಕ್ಕಿಸದೆ ಅನುವಾದಕರು ಎರಡು ಬೇರೆ ಬೇರೆ ಭಾಷಿಕ, ಸಾಹಿತ್ಯಕ, ಸಾಂಸ್ಕೃತಿಕ ಪರಿಸರದ ಕೃತಿಗಳ ನಡುವೆ ಅನುವಾದ ಕಾರ್ಯದ ಸಂದರ್ಭದಲ್ಲಿ ಸಮಾನ ಶಕ್ತಿ ಮತ್ತು ಅರ್ಹತೆಗಳಿರಬೇಕು ಎನ್ನುವ ದ್ವಿಭಾಷಾ ನಿಘಂಟುಗಳ ಕಲ್ಪನೆಯನ್ನು ಕಣ್ಣು ಮುಚ್ಚಿ ಅನುಸರಿಸಲಾರಂಭಿಸಿದರು.

ಭಾಷಾಂತರಕಾರ ಆಕರಪಠ್ಯದ ಗುಲಾಮ ಎನ್ನುವ ನಂಬಿಕೆ ವರ್ಜಿಲನ 'ಈನಿಯಡ್' ಕೃತಿಯನ್ನು ಅನುವಾದಿಸಿದ ಡ್ರೈಡನ್, 'ಅನಲ್ಸ್ ಆಫ್ ಟ್ಯಾಸಿಟಸ್' ಕೃತಿಯನ್ನು ಅನುವಾದಿಸಿದ ಪೆರ್ರಟ್ ಡಿ ಅಬ್ಲಾನ್ ಕೋರ್ಟ್ ಈ ಇಬ್ಬರಲ್ಲೂ ಇತ್ತು. ಇದು ಲಕ್ಷ್ಯಪಠ್ಯದ ಮೇಲೆ ಆಕರಪಠ್ಯಕ್ಕೆ, ಭಾಷಾಂತರಕಾರನ ಮೇಲೆ ಆಕರಪಠ್ಯದ ಲೇಖಕನಿಗೆ ಇರುವ ಹಿಡಿತವನ್ನು, ಅಧಿಪತ್ಯವನ್ನು ಸೂಚಿಸುತ್ತದೆ. 1711ರಲ್ಲಿ ಪ್ರಕಟವಾದ 'ಲೈಫ್ ಆಫ್ ಲೂಸಿಯನ್' ಕೃತಿಗೆ ಬರೆದ ಮುನ್ನುಡಿಯಲ್ಲಿ ಡ್ರೈಡನ್ 'ಭಾಷಾಂತರಕಾರ ಮೂಲ ಲೇಖಕ ಏನೇನನ್ನು ಕೊಡುತ್ತಿದ್ದಾನೋ ಅದನ್ನೆಲ್ಲ ಪಡೆದುಕೊಳ್ಳಬೇಕು. ಆಗ ಮಾತ್ರ ಅವನು ಮೂಲದಷ್ಟೇ ಜೀವಂತಿಕೆಯುಳ್ಳ ಕೃತಿಯಾಗಿ ಅದನ್ನು ಪುನಾರಚಿಸಲು ಸಾಧ್ಯ. ಪದ ಪದವನ್ನು ಬೇರೆ ಭಾಷೆಯಲ್ಲಿ ಬರೆದಿಡುವವನು ಈ ಬಗೆಯ ಪದಸಂಯೋಜನೆಯ ಜಟಿಲ ದಾರಿಯಲ್ಲಿ ಮೂಲದ ಚೈತನ್ಯಕ್ಕೇ ಧಕ್ಕೆಯುಂಟು ಮಾಡುತ್ತಾನೆ' ಎಂದು ವಾದಿಸುತ್ತಾನೆ. ಇಲ್ಲಿ ಡ್ರೈಡನ್ ಪದಕ್ಕೆ ಪದದ ಸಂಯೋಜನೆಯನ್ನು ಬೆಂಬಲಿಸುತ್ತಿದ್ದಾನೆ. ಇಲ್ಲದಿದ್ದರೆ ಅನುವಾದವೇ

ಮತ್ತೊಂದು ಮೂಲವಾಗಿಬಿಡುವ ಆತಂಕ ಅವನಿಗೆ ಇದ್ದಂತಿದೆ. ಡ್ರೈಡನ್‌ನ ಕಾಲದಲ್ಲಿ ಭಾಷಾಂತರವೆನ್ನುವುದು ಒಂದು ಸಂವೇದನಾಶೀಲವಾದ ಚಟುವಟಿಕೆ ಎನ್ನುವ ಅಭಿಪ್ರಾಯ ಸ್ವಲ್ಪ ಮಟ್ಟಿಗಾದರೂ ಇದ್ದಾಗ್ಯೂ ಸ್ವತಃ ಅನುವಾದಕನಾಗಿದ್ದ ಡ್ರೈಡನ್ ತಳೆಯುವ ಈ ಬಗೆಯ ಸಂಕೀರ್ಣ ನಿಲುವು ವಿಚಿತ್ರವೆನಿಸುತ್ತದೆ.

ಭಾಷಾಂತರಕಾರ ಮೂಲಪಠ್ಯದ ಗುಲಾಮನೆನ್ನುವ ಚಿಂತನೆಗಳು ಸ್ಪಷ್ಟವಾಗಿ ಪರಾಧೀನತಾ ತತ್ವದ ಪ್ರತಿಪಾದನೆಗಳು. ಲಕ್ಷ್ಯಪಠ್ಯದ ಮೇಲೆ ಆಕರಪಠ್ಯದ ಲೇಖಕನಿಗಿರುವ ಅಧಿಪತ್ಯವನ್ನು ನಿರ್ದಾಕ್ಷಿಣ್ಯವಾಗಿ ಬೆಂಬಲಿಸುವಂತದ್ದು. ಈ ಚಿಂತನೆಗಳು ಯೂರೋಪಿಯನ್ ದೇಶಗಳ ಸಾಮ್ರಾಜ್ಯಶಾಹಿ ಧೋರಣೆಗಳು ಪ್ರಬಲಗೊಳ್ಳುತ್ತಿದ್ದ ಕಾಲಘಟ್ಟದ ಫಲಿತಗಳು ಎನ್ನಲಾಗುತ್ತದೆ. ಆದರೆ ಇದೇ ಕಾಲಘಟ್ಟದ ಭಾಷಾಂತರಕಾರ್ತಿ ಮದಾಂ ಗೋರ್ನೆ ಈ ರೀತಿಯ ನಿಲುವುಗಳನ್ನು ಪ್ರತಿಭಟಿಸುತ್ತಾಳೆ. ಆಕೆಯ ಪ್ರಕಾರ 'ಭಾಷಾಂತರವೆಂದರೆ, ಒಂದು ಕೃತಿಯನ್ನು ಹೊಸದಾಗಿ ನಿರ್ಮಾಣ ಮಾಡುವುದು. ಭಾಷಾಂತರವು ಒಂದು ಹೊಸ ಸೃಷ್ಟಿ.'

ಇಪ್ಪತ್ತನೇ ಶತಮಾನದ ಎಂಬತ್ತರ ದಶಕದ ಸಂರಚನೋತ್ತರ ಹಂತದಲ್ಲಿ ಭಾಷಾಂತರ ಸಂಬಂಧಿತ ಚರ್ಚೆಗಳಲ್ಲಿ ಮೂಲವೆನ್ನುವ ಪರಿಕಲ್ಪನೆಯೇ ಹಲವು ನೆಲೆಗಳಿಂದ ಪ್ರಶ್ನಿಸಲ್ಪಟ್ಟಿತು. ಉದಾ: ಆಂಡ್ರೆ ಲೆಫೆವರ್ ಭಾಷಾಂತರವನ್ನು ಪುನರ್ಲೇಖನ ಎನ್ನುತ್ತಾನೆ. ಅವನ ಪ್ರಕಾರ 'ಪುನರ್ಲೇಖನ ಎನ್ನುವುದು ಅದು ವಿಮರ್ಶೆಯ ರೂಪದ್ದಾಗಿರಲಿ, ಭಾಷಾಂತರವಾಗಿರಲಿ, ಸಂಕಲೀಕರಣವಾಗಿರಲಿ ಇವೆಲ್ಲವೂ ಒಂದರ್ಥದಲ್ಲಿ ಪುನಾರಚನೆಗಳೇ. ಆದ್ದರಿಂದ ಇವುಗಳನ್ನು ಮೂಲಕ್ಕೆ ಸಮಾನವೆನ್ನುವ ನೆಲೆಯಲ್ಲಿಯೇ ನೋಡಬೇಕು' ಎನ್ನುತ್ತಾನೆ.

ತನ್ನ ಅನುವಾದಿತ ಕೃತಿಯಾದ 'ಹೋಮೇಜ್ ಟು ಸೆಕ್ಸ್ಟಸ್ ಪ್ರಾಪರ್ಟಿಯಸ್'ನ ಅನುವಾದವು ಖಾಚಿತ್ಯರಹಿತವೆಂಬ ಟೀಕೆಗಳಿಗೆ ಪ್ರತಿಕ್ರಿಯಿಸುತ್ತ ಎಜ್ರಾ ಫೌಂಡ್ 'ನನ್ನ ಉದ್ದೇಶ ಸತ್ತ ಮನುಷ್ಯನನ್ನು ಬದುಕಿಸುವುದರ ಕಡೆಗೆ ಹಾಗೂ ಸತ್ತ ಕವಿಗೆ ಓದುಗರನ್ನು ದೊರಕಿಸಿಕೊಡುವುದರ ಕಡೆಗಿತ್ತೇ ಹೊರತು ಭಾಷಾಂತರ ಮಾಡುವುದರ ಕಡೆಗಲ್ಲ' ಎನ್ನುತ್ತಾನೆ. ಫೌಂಡ್ ತನ್ನ ಅನುವಾದವನ್ನು 'ಸತ್ತ ಮನುಷ್ಯನನ್ನು ಬದುಕಿಸುವ' ಎನ್ನುವ ರೂಪಕವನ್ನು ಬಳಸಿ ಸಮರ್ಥಿಸಿಕೊಳ್ಳುತ್ತಾನೆ. ಭಾಷಾಂತರದ ಬಗೆಗಿನ ಅವನ ಮನೋಧರ್ಮವು ಮುಖ್ಯವಾಗಿ ಲಕ್ಷ್ಯ ಪಠ್ಯವನ್ನು ಹಾಗೂ ಅದರ ಪರಿಣಾಮಗಳನ್ನು ಗಮನದಲ್ಲಿ ಇಟ್ಟುಕೊಂಡಿರುವಂತದ್ದು.

ಜರ್ಮನಿಯ ವಾಲ್ಟರ್ ಬೆಂಜಮಿನ್ ಕೂಡ ಅನುವಾದ ಎನ್ನುವುದು ಮೂಲ ಕೃತಿಗೆ ಸಾವಿನ ನಂತರ ದಕ್ಕುವ ಇನ್ನೊಂದು ಬದುಕು ಎನ್ನುತ್ತಾನೆ. ಭಾಷಾಂತರ ಎಂದರೆ ಮೂಲಕೃತಿಯ ಮತ್ತು ಮೂಲ ಕೃತಿಕಾರನ ಮರು ಹುಟ್ಟು ಎನ್ನುವ ಬೆಂಜಮಿನ್‌ನ ಪ್ರಕಾರ, ವಿಶ್ವಸಾಹಿತ್ಯದ ಬಹುತೇಕ ಪ್ರಮುಖ ಕೃತಿಗಳಿಗೆ ಬೇಕಾದ ಅನುವಾದಕರು ಆ ಕೃತಿಕಾರರು ಬದುಕಿದ್ದ ಕಾಲದಲ್ಲೇ ಸಿಗುವುದಿಲ್ಲವಾದ್ದರಿಂದ ಮುಂದೆಂದೋ ಆಗುವ ಅವುಗಳ ಅನುವಾದವು ವಾಸ್ತವದಲ್ಲಿ ಆ ಕೃತಿ ಮತ್ತು ಕೃತಿಕಾರನ ಮರುಹುಟ್ಟು ಇಲ್ಲವೇ ಜೀವಿತಾವಧಿಯ ಮುಂದುವರಿಕೆ ಎನ್ನುತ್ತಾನೆ. ವಾಲ್ಟರ್ ಬೆಂಜಮಿನ್‌ನನ್ನು ಕುರಿತ 'ಡೆಸ್ ಟೂರ್ಸ್ ಡೆ ಬೇಬಲ್' ಎನ್ನುವ ನಿಬಂಧದಲ್ಲಿ ಪ್ರಸಿದ್ಧ ನಿರಚನವಾದಿ ಜಾಕ್ವೆಸ್ ಡೆರಿಡಾ, ಕೃತಿಯೊಂದರಲ್ಲಿ ಅರ್ಥ ಎಲ್ಲಿದೆಯೆಂಬ ಸಮಸ್ಯೆಯ ಬೆನ್ನು ಹತ್ತಿ ಮೂಲ

ಹಾಗೂ ಭಾಷಾಂತರಗಳ ಕುರಿತು ಮಾತನಾಡುತ್ತಾನೆ. ಡೆರಿಡಾನ ಪ್ರಕಾರ, ಆಕರಪಠ್ಯವು ಮೂಲವಲ್ಲವೇ ಅಲ್ಲ. ಅದು ಈಗಾಗಲೇ ಇರುವ ವಿಚಾರವೊಂದರ ವಿಸ್ತೃತ ರೂಪ ಮಾತ್ರ. ಅಂದರೆ ಅದು ಮೂಲತಃ ಒಂದು ಅನುವಾದವೇ ಆಗಿದೆ. ಡೆರಿಡಾನ ಈ ವಾದವು ಅಂತಿಮವಾಗಿ ಆಕರ ಮತ್ತು ಲಕ್ಷ್ಯ, ಮೂಲ ಹಾಗೂ ಭಾಷಾಂತರ ಎನ್ನುವ ದ್ವೈತ ನೆಲೆಗಳನ್ನು ಇಲ್ಲವಾಗಿಸಲು ಹವಣಿಸುತ್ತದೆ.

ವಾಲ್ಟರ್ ಬೆಂಜಮಿನ್ ಮತ್ತು ಡೆರಿಡಾರ ಲಕ್ಷ್ಯಪಠ್ಯ ಕೇಂದ್ರಿತ ಪ್ರತಿಪಾದನೆಗಳ ನಂತರ ಭಾಷಾಂತರವು ನಕಲಲ್ಲ, ಅದು ಮೂಲ ಕೃತಿಗೆ ಸಾವಿನ ತನ್ನ ಕಾಲಾನಂತರವೂ ಸಿಗುವ ಬದುಕು ಹಾಗೂ ಅದೊಂದು ಬಗೆಯಲ್ಲಿ ಮೂಲಪಠ್ಯವು ಬದುಕುವ ಉಪಾಯ, ಭಾಷಾಂತರವೆಂಬ ಮರುಹುಟ್ಟಿನ ಮೂಲಕ ಮೂಲಪಠ್ಯವು ಸಾಧಿಸಲಾದ ಜೀವನ ಸಾತತ್ಯ ಎನ್ನುವ ಅಭಿಪ್ರಾಯಗಳು ಬಲಗೊಂಡವು.

ಸಾಮಾನ್ಯವಾಗಿ ಪ್ರಬಲ ದೇಶಗಳ ಆಳ್ವಿಕೆಗೆ ಸಿಲುಕಿದ ದೇಶಗಳಲ್ಲಿ ಮೊದಮೊದಲು ನಡೆಯುವ ಭಾಷಾಂತರಗಳು ಎರಡು ವಿರುದ್ಧ ಪ್ರವೃತ್ತಿಗಳನ್ನು ತೋರುತ್ತದೆ. ಮೊದಲನೆಯದು, ತನ್ನ ದೇಶ, ಸಮಾಜ, ಸಂಸ್ಕೃತಿಯನ್ನು ಅತಿಕ್ರಮಿಸಿಕೊಂಡವರ ದುಭಾಷಿಯಂತೆ ಕೆಲಸ ಮಾಡುತ್ತ ಅವರ ಆಳ್ವಿಕೆಗೆ ದಾರಿಗಳನ್ನು ಸುಗಮಗೊಳಿಸುವುದು. ಎರಡನೆಯದು, ತನ್ನ ಸಮಾಜ, ದೇಶ, ಸಂಸ್ಕೃತಿಯ ವ್ಯವಸ್ಥೆಯಲ್ಲಿ ಆಳುವವರ ಹುನ್ನಾರಗಳ ಬಗೆಗೆ ನಾಜೂಕಾಗಿ ಎಚ್ಚರವನ್ನು ಹುಟ್ಟು ಹಾಕುತ್ತ ಅತಿಕ್ರಮಣದ ವಿರುದ್ಧದ ಸೆಣಸಾಟಕ್ಕೆ ರಂಗವನ್ನು ಸಜ್ಜುಗೊಳಿಸುವುದು. ಭಾಷಾಂತರಗಳ ಮೊದಲ ರೀತಿಯ ನಡೆ ವಸಾಹತಿಗೆ ಒಳಪಟ್ಟ ದೇಶಗಳಲ್ಲಿನ ತೀವ್ರಗತಿಯ ಸಾಂಸ್ಕೃತಿಕ ಪಲ್ಲಟಗಳಿಗೆ ಹಾಗೂ ಎರಡನೆಯ ರೀತಿಯ ನಡೆ ಆ ರಾಷ್ಟ್ರಗಳು ತಮ್ಮ ಸಾಂಸ್ಕೃತಿಕ ಅಸ್ಮಿತೆಗಳ ಉಳಿವಿಗಾಗಿ ನಡೆಸಿದ ಹೋರಾಟಗಳಿಗೆ ದಾರಿಗಳನ್ನು ತೆರೆದಿದ್ದನ್ನು ಗಮನಿಸಿಬಹುದು.

ಇದಕ್ಕೆ ಸಂಬಂಧಿಸಿದಂತೆ ಒಂದು ಸಂಗತಿಯನ್ನು ಇಲ್ಲಿ ಗಮನಿಸಬಹುದು. 1554 ರಲ್ಲಿ ಬ್ರೆಜಿಲಿಯನ್ ಇಂಡಿಯನ್ನರಿಂದ ನರಭಕ್ಷಣೆಯ ವಿಧಿಯೊಂದರಲ್ಲಿ ತಿನ್ನಲ್ಪಟ್ಟ ಪೋರ್ಚುಗೀಸ್ ಬಿಷಪ್ ಒಬ್ಬರ ವೃತ್ತಾಂತವನ್ನು ಯೂರೋಪಿಯನ್ ದೃಷ್ಟಿಕೋನವು ನಾಗರಿಕ ಜೀವನದ ಎಲ್ಲ ಸಂಹಿತೆಗಳ ಉಲ್ಲಂಘನೆ ಎನ್ನುತ್ತವೆ. ಯೂರೋಪೇತರ ದೃಷ್ಟಿಕೋನವು ಅದೊಂದು ಶಕ್ತಿ ಅವಾಹನೆಯ ಸರ್ವಮಾನ್ಯವಾದ ವಿಧಿ ಎನ್ನುತ್ತದೆ. ಈ ಹಿನ್ನೆಲೆಯಲ್ಲಿ ಪ್ರವರ್ಧಮಾನಕ್ಕೆ ಬಂದ ಅಂತ್ರಪೋಪಜಿಸ್ಟ್ ಚಳುವಳಿಯು ಈ ನರ ಭಕ್ಷಣೆಯ ಕುರಿತ ದ್ವೈತ ಅಥವಾ ಭಿನ್ನ ದೃಷ್ಟಿಕೋನವನ್ನು ಬ್ರೆಜಿಲಿಯನ್ ಮತ್ತು ಯೂರೋಪಿಯನ್ ಸಂಸ್ಕೃತಿಗಳ ಸಂಬಂಧದ ರೂಪಕದಂತೆ ನೋಡುತ್ತದೆ. ನಂತರದ ದಿನಗಳಲ್ಲಿ ಇದನ್ನು ಭಾಷಾಂತರ ಸಿದ್ಧಾಂತಗಳ ಸಂದರ್ಭದಲ್ಲಿಯೂ ಒಂದು ರೂಪಕದಂತೆ ಬಳಸಿಕೊಳ್ಳಲಾಯಿತು. ಇದನ್ನು ಭಾಷಾಂತರ ಪ್ರಕ್ರಿಯೆಗೆ ಅನ್ವಯಿಸುವಾಗ, ಇಲ್ಲಿ ಬ್ರೆಜಿಲಿಯನ್ ಲೇಖಕ ಯೂರೋಪಿಯನ್ ಸಾಹಿತ್ಯ ಪರಂಪರೆಗೆ ಅಧೀನನೂ ಆಗದೆ ಅದನ್ನು ಸಾರಾಸಗಟಾಗಿ ತಳ್ಳಿಯೂ ಹಾಕದೆ ಆ ಇನ್ನೊಂದು ಸಂಸ್ಕೃತಿಯ ಜೊತೆಗೆ ಅನುಸಂಧಾನ ಮಾಡುವ, ಸಂಪೂರ್ಣ ಹೊಸದೊಂದನ್ನು ಸೃಷ್ಟಿಸುವುದಕ್ಕಾಗಿ ಅದನ್ನು ಪೋಷಕ ಸತ್ವವನ್ನಾಗಿ ಬಳಸಿಕೊಳ್ಳುವ ಮಾರ್ಗವನ್ನು ಆರಿಸಿಕೊಳ್ಳುತ್ತಾನೆ. ಭಾಷಾಂತರಕ್ಕೆ ಸಂಬಂಧಿಸಿದಂತೆ ಈ ರೂಪಕಕ್ಕೆ ಹೊಸ ಧ್ವನಿಯೊಂದು ಲಭ್ಯವಾಗುತ್ತದೆ. ಭಾಷಾಂತರಕಾರ ಮೂಲಪಠ್ಯವನ್ನು ಮುಕ್ಕಿ

ಬಿಡುತ್ತಾನೆ ಹಾಗೂ ಅದನ್ನು ಹೊಸದಾಗಿಯೇ ಸೃಷ್ಟಿಸುತ್ತಾನೆ ಎಂದು ಪ್ರತಿಪಾದಿಸಿದ್ದ ಮದಾಂ ಗೋರ್ನೆಯ ಮಾತಿಗೆ ಇದರಿಂದ ಇನ್ನಷ್ಟು ಬಲ ಬಂದಂತಾಗುತ್ತದೆ.

ಹೆರಾಲ್ಡೋ ಮತ್ತು ಆಗಸ್ಟೋ ದ ಕ್ಯಾಂಪೋಸ್ ಭಾಷಾಂತರದ ನರಭಕ್ಷಕ ಸಿದ್ಧಾಂತದ ಮೂಲ ಸಿದ್ಧಾಂತಕಾರರು. ಅವರ ಕೃತಿಗಳು ಮೂಲ ಮತ್ತು ಲಕ್ಷ್ಯಪಥ್ಯಗಳ ನಡುವಿನ ಗಡಿ ಗೆರೆಗಳನ್ನೇ ಅಳಿಸಿಹಾಕುತ್ತವೆ. ಜರ್ಮನಿಯ ಕವಿ ಗಯಟೆಯ 'ಫೌಸ್ಟ್' ಕೃತಿಯನ್ನು ಬ್ರೆಜಿಲಿಯನ್ ಭಾಷೆಗೆ ಅನುವಾದಿಸುವಾಗ ಅದನ್ನು ಭಾಷಾಂತರವೆಂದು ಕರೆಯಲು ಕ್ಯಾಂಪೋಸ್ ಬಯಸಲಿಲ್ಲ. ಬದಲಾಗಿ ತನ್ನ ಕಾರ್ಯವನ್ನು ಅವನು ಮೂಲವನ್ನು ನುಂಗಿಹಾಕುವ, ರೂಪಾಂತರಿಸುವ, ರಕ್ತ ಹೀರುವ ಪಿಶಾಚ ಕ್ರಿಯೆ, ಅದೊಂದು ರಕ್ತ ಪೂರಣ ಕ್ರಿಯೆ ಎನ್ನುತ್ತಾನೆ. ಲಕ್ಷ್ಯ ಕೃತಿಯನ್ನು ಶಕ್ತಿವಂತವಾಗಿಸಲು ಮೂಲ ಕೃತಿಯ ರಕ್ತವನ್ನು ಭಾಷಾಂತರಕಾರ ಹೀರಿಬಿಡುವ ಇಂತಹ ಪ್ರತಿಮೆಗಳು 'ಸ್ವೀಕರಿಸುವ ಪ್ರಕ್ರಿಯೆಗೆ' ಹೊಸ ಆಯಾಮವನ್ನೇ ಕೊಡುತ್ತವೆ. ಭಾಷಾಂತರದ ನರಭಕ್ಷಕ ಸಿದ್ಧಾಂತದ ಅನುಸಾರ ಆಕರ ಮತ್ತು ಲಕ್ಷ್ಯವೆಂಬ ಪದ ಪ್ರಯೋಗವೇ ಇಲ್ಲವಾಗುತ್ತದೆ. ಅದಕ್ಕೂ ಮೊದಲು ಅವುಗಳ ನಡುವಿನ ಶ್ರೇಷ್ಠ ಹಾಗೂ ಕನಿಷ್ಠವೆಂಬ ಶ್ರೇಣೀಕೃತ ಶಕ್ತಿ ಸಂಬಂಧಗಳು ಕೂಡ ಅಳಿಸಿ ಹೋಗುತ್ತವೆ. ಭಾಷಾಂತರವನ್ನು ಅಧೀನ ಕಾರ್ಯವೆಂದು ವಿವರಿಸುವ ಸೌಮ್ಯ ರೂಪಕಗಳಿಗೆ ಹೋಲಿಸಿದರೆ ಭಾಷಾಂತರದ ನರಭಕ್ಷಕ ಸಿದ್ಧಾಂತ ಹಾಗೂ ಅದರೊಂದಿಗೆ ಸಹಮತ ತೋರುವ ಇತರ ಸಿದ್ಧಾಂತಗಳು ತಮ್ಮ ಹಿಂಸಾತ್ಮಕವೆನ್ನಿಸುವ ಭೌತಿಕ ರೂಪಕಗಳ ಬಳಕೆಯಿಂದ ವಿಶಿಷ್ಟವಾಗಿ ತೋರುತ್ತವೆ. ಕ್ಯಾಂಪೋಸ್‌ನ ಭಾಷಾಂತರ ಮತ್ತು ಭಾಷಾಂತರ ಚಿಂತನೆಗಳಿಂದ ಪ್ರಭಾವಿತಲಾದ ಎಲ್ಸ್‌ವೀರಾ 'ಭಾಷಾಂತರವು ಮೂಲದಿಂದ ಲಕ್ಷ್ಯಪಥ್ಯದ ಕಡೆಗೆ ಏಕಮುಖವಾಗಿ ಹರಿಯುವುದಲ್ಲ. ಅದು ಇಮ್ಮುಖೀ ಚಲನೆ ಹಾಗೂ ಇಮ್ಮುಖಿಯಾದ ಸಾಂಸ್ಕೃತಿಕ ಪ್ರಕ್ರಿಯೆ' ಎನ್ನುತ್ತಾನೆ.

ಭಾಷಾಂತರದ ಬೈನರಿ ದೃಷ್ಟಿಕೋನವು ಮೂಲಕೃತಿ ಹಾಗೂ ಲಕ್ಷ್ಯಪಥ್ಯಗಳನ್ನು ಎರಡು ವಿರುದ್ಧ ಧ್ರುವಗಳೆನ್ನುವಂತೆ ನೋಡುತ್ತದೆ. ಈ ಎರಡು ಧ್ರುವಗಳನ್ನು ಸ್ತ್ರೀ–ಪುರುಷ ಎನ್ನುವ ನೆಲೆಗಳಿಂದ ವಿಶ್ಲೇಷಿಸುತ್ತದೆ. ಆಕರಪಥ್ಯವೆಂದರೆ ಪೌರುಷೇಯ ಹಾಗೂ ಶಕ್ತಿಶಾಲಿ ಎನ್ನುವಂತೆ, ಲಕ್ಷ್ಯಪಥ್ಯವೆಂದರೆ ಸ್ತ್ರೀರೂಪಿ ಹಾಗೂ ಅಧೀನ ಎನ್ನುವಂತೆ ನಿರೂಪಿಸಲಾಗಿರುವುದನ್ನು ಗಮನಿಸುವ ಸ್ತ್ರೀವಾದಿ ಭಾಷಾಂತರ ಸಿದ್ಧಾಂತವು ಸ್ತ್ರೀ ಮತ್ತು ಪುರುಷ ಇವೆರಡರ ಮಧ್ಯಸ್ಥ ಸ್ಥಿತಿಯನ್ನು ಸಂಭ್ರಮಿಸುತ್ತ ಭಾಷಾಂತರ ನಡೆಯುವ ಸ್ಪೇಸನ್ನು (ನಡುವಣ ಕಾಲ ಅಥವಾ ಸ್ಥಿತಿ) ದ್ವಿಲಿಂಗಿಯನ್ನಾಗಿ ಯಾವುದಕ್ಕೂ ಸೇರದ್ದರ ಹಾಗೆ ಪುನರ್ ನಿರ್ಮಿಸುತ್ತದೆ.

ಭಾಷಾಂತರ ಸಿದ್ಧಾಂತದ ಬ್ರೆಜಿಲಿಯನ್ ಮತ್ತು ಕೆನಡಿಯನ್ ಗುಂಪುಗಳು ಯೂರೋಪಿಯನ್ ಸಾಂಸ್ಕೃತಿಕ ಅಧಿಕಾರ ಪರಂಪರೆಯನ್ನು ಮರು ಕಟ್ಟುವ, ಅವಶ್ಯಕತೆ ಬಂದರೆ ಅದರ ವಿರುದ್ಧ ಸೆಡ್ಡು ಹೊಡೆಯುವ ಹಾಗೂ ಭಾಷಾಂತರಕಾರನ ಪಾತ್ರವನ್ನು ಔನ್ನತ್ಯಕ್ಕೇರಿಸಿ ಸಂಭ್ರಮಿಸುವ ಏಕೋದ್ದೇಶವನ್ನು ಇರಿಸಿಕೊಂಡಂತಿವೆ.

ಇತ್ತೀಚಿನ ದಶಕಗಳಲ್ಲಿ ಭಾಷಾಂತರ ಸಿದ್ಧಾಂತಿಗಳಷ್ಟೇ ಅಲ್ಲದೆ ಬೇರೆ ಬೇರೆ ಜ್ಞಾನಶಿಸ್ತುಗಳಿಗೆ ಸೇರಿದವರು ಭಾಷಾಂತರದ ಚರ್ಚೆಗಳನ್ನು ಬೆಳೆಸುತ್ತ ಅದರ ಸಾಧ್ಯತೆಗಳನ್ನು ವಿಸ್ತರಿಸುತ್ತಿರುವುದರಿಂದ ಇಲ್ಲಿಯ ತನಕ ಭಾಷಾಂತರ ಕುರಿತ

ಚರ್ಚೆಗಳಲ್ಲಿ ಮೇಲುಗೈ ಸಾಧಿಸುತ್ತಿದ್ದ ನೇತ್ಯಾತ್ಮಕ ಪರಿಭಾಷೆಗಳು ಕಡಿಮೆಯಾಗುತ್ತಿವೆ. ಹಾಗೆಯೇ ಭಾಷಾಂತರದಲ್ಲಿ ಮೂಲ ಕೃತಿಗೆ ನಷ್ಟವಾಗುವುದೆನ್ನುವ ದೂರುಗಳು ಹಾಗೂ ಲಕ್ಷ್ಯಪಠ್ಯವು ಮೂಲಪಠ್ಯಕ್ಕೆ ಹೊಸ ಬದುಕು ಕೊಡುತ್ತದೆನ್ನುವ ಪ್ರತಿಪಾದನೆಗಳು ಮತ್ತೊಮ್ಮೆ ಪರಿಶೀಲನೆಗೆ ಒಳಗಾಗುವ ಅಗತ್ಯವನ್ನೂ ಸೃಷ್ಟಿಸುತ್ತಿವೆ.

ಭಾಷಾಂತರದ ಇನ್ನಿತರ ಚರ್ಚಾ ನೆಲೆಗಳು

ಭಾಷಾಂತರ ವಾಗ್ವಾದಗಳಲ್ಲಿ ಮೂಲ ಲೇಖಕ ಮತ್ತು ಭಾಷಾಂತರಕಾರ, ಮೂಲಪಠ್ಯ ಮತ್ತು ಲಕ್ಷ್ಯಪಠ್ಯ ಇವುಗಳಲ್ಲಿ ಯಾರು ಯಾವುದು ಪ್ರಧಾನ ಹಾಗೂ ಒಂದು ಸಾಂಸ್ಕೃತಿಕ ವ್ಯವಸ್ಥೆಯಲ್ಲಿ, ಸಾಹಿತ್ಯಕ ಪರಂಪರೆಯಲ್ಲಿ ಅದರಲ್ಲೂ ಮುಖ್ಯವಾಗಿ ಭಾಷಾಂತರವೆಂಬ ಸಾಂಸ್ಕೃತಿಕ ರಾಜಕಾರಣದಲ್ಲಿ ಯಾರ ಸ್ಥಾನ ಎಲ್ಲಿ? ಯಾವುದರ ಪಾತ್ರ ಹೆಚ್ಚು ಪ್ರಭಾವಶಾಲಿ? ಎನ್ನುವ ಹಲವು ಆಯಾಮಗಳ ಚರ್ಚೆ ನಡೆದಿದ್ದಾಗ್ಯೂ ಇನ್ನಿತರ ವಿಚಾರಗಳಿಗೆ ಸಂಬಂಧಿಸಿದಂತೆಯೂ ದೊಡ್ಡ ಮಟ್ಟದ ಚರ್ಚೆಗಳೇ ನಡೆದಿವೆ.

ಅವುಗಳಲ್ಲಿ ಒಂದೆಂದರೆ, ಭಾಷಾಂತರವನ್ನು ಮಾಡಲು ಸಾಧ್ಯವಿದೆಯೇ ಅಥವಾ ಸಾಧ್ಯವಿಲ್ಲವೇ ಎನ್ನುವ ಚರ್ಚೆ. ಒಂದು ಭಾಷೆಯಲ್ಲಿನ ಒಂದು ಪದ ಅಥವಾ ಉಕ್ತಿಯ ಅರ್ಥವು ಆ ಭಾಷೆಯಲ್ಲಿಯೇ ಬೇರೆ ಬೇರೆ ಸಂದರ್ಭ ಮತ್ತು ಸನ್ನಿವೇಶಗಳಿಗೆ ಅನುಸಾರವಾಗಿ ಭಿನ್ನ ಅರ್ಥಗಳನ್ನು ಹೊಮ್ಮಿಸುವಾಗ ಬೇರೊಂದು ಭಾಷೆಯಲ್ಲಿ ಅದು ಹೇಗೆ ಒಂದು ನಿರ್ದಿಷ್ಟ ಪದಕ್ಕೆ ತುಂಬ ಅತ್ಯಂತಿಕ ನೆಲೆಯಲ್ಲಿ ಸಮಾನವಾದ ರೂಪ ಮತ್ತು ಅರ್ಥಗಳನ್ನು ಪಡೆಯಲು ಸಾಧ್ಯ. ಏಕೆಂದರೆ ಭಿನ್ನ ಭಾಷೆಗಳೆಂದರೆ, ಭಿನ್ನ ಸಾಮಾಜಿಕ, ಸಾಂಸ್ಕೃತಿಕ ವ್ಯವಸ್ಥೆಗಳೆಂದೇ ಅರ್ಥ. ಒಂದು ಭಾಷೆಯ ಪ್ರತಿ ಪದಕ್ಕೂ ಅಲ್ಲಿನ ಸಾಮಾಜಿಕ, ಧಾರ್ಮಿಕ, ರಾಜಕೀಯ. ಆರ್ಥಿಕ ಹಾಗೂ ಒಟ್ಟಾರೆ ಸಾಂಸ್ಕೃತಿಕ ವ್ಯವಸ್ಥೆಯ ಜೊತೆಗೆ ಕರುಳು ಬಳ್ಳಿ ಸಂಬಂಧವಿರುತ್ತದೆ. ಆ ಕಾರಣಕ್ಕಾಗಿ ಒಂದು ಭಾಷೆಯ ಉಕ್ತಿ ಅಥವಾ ಪದ ಬೇರೊಂದು ಭಾಷೆಯಲ್ಲಿ ತನ್ನ ಮೂಲ ಅರ್ಥ ಚಹರೆಗಳನ್ನು, ರೂಪಗಳನ್ನು ಪಡೆಯುವುದು ಕಷ್ಟ ಸಾಧ್ಯ. ಹಾಗಾಗಿ ಅದು ತಾನು ತಲುಪಿದ ಭಾಷಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಿಸರದ ಅರ್ಥಗಳನ್ನೇ ಧರಿಸಬೇಕಾಗುತ್ತದೆ. ಇಲ್ಲವೇ ತಾನು ತಲುಪಿದ ಪರಿಸರದ ಅರ್ಥಗಳನ್ನು ಧರಿಸಲಾಗದೆ ಪರಕೀಯ ಅಥವಾ ಅನ್ಯ ಎನ್ನುವ ನೆಲೆಯಲ್ಲಿಯೇ ಉಳಿಯಬೇಕಾಗುತ್ತದೆ. ಅದರರ್ಥವೆಂದರೆ, ಭಾಷಾಂತರದಲ್ಲಿ ಮೂಲಪಠ್ಯವು ಲಕ್ಷ್ಯಪಠ್ಯದ ವ್ಯವಸ್ಥೆಯಲ್ಲಿ ಕರಗಿಹೋಗಬೇಕು ಇಲ್ಲವೇ ಪರಕೀಯವೆನ್ನುವ ನೆಲೆಯಲ್ಲಿ ಹೊಸಿಲಿನಾಚೆ ನಿಲ್ಲಬೇಕು. ಹಾಗಾಗಿ ಭಾಷಾಂತರಗಳು ಸಾಧ್ಯವಿಲ್ಲ ಎನ್ನುವ ವಾದಗಳಿವೆ. ಈ ರೀತಿಯ ಧೋರಣೆಗಳೇ ಪೋಪ್ ಡಮಾಸಸ್‌ರವರ ಆಜ್ಞೆಯನುಸಾರ ಸಂತ ಜೆರೋಮ್ ಬೈಬಲ್ಲಿನ ಹೊಸ ಒಡಂಬಡಿಕೆಯನ್ನು ಭಾಷಾಂತರ ಮಾಡಿದಂದಿನಿಂದ ಅಥವಾ ಇನ್ನೂ ಹಿಂದಕ್ಕೆ ಹೋಗಬೇಕೆಂದರೆ ಟೂಲಿಯಸ್ ಸಿಸಿರೋನ ಕಾಲದಿಂದ ಕ್ರಿ.ಶ. 17ನೇ ಶತಮಾನದ ತನಕ ಮುಂದುವರೆದವು.

ಭಿನ್ನ ಭಾಷೆ, ಅವುಗಳ ಭಿನ್ನ ಸಂರಚನೆ ಹಾಗೂ ಭಿನ್ನ ಸಾಂಸ್ಕೃತಿಕ ವ್ಯವಸ್ಥೆಗಳ ಕಾರಣದಿಂದ ಭಾಷಾಂತರವನ್ನು ಮಾಡಲಾಗುವುದಿಲ್ಲ ಎನ್ನುವುದನ್ನು ವಿರೋಧಿಸುವವರು ದೊಡ್ಡ ಸಂಖ್ಯೆಯಲ್ಲಿಯೇ ಇದ್ದಾರೆ. ಅವರ ಪ್ರಕಾರ, ಎಲ್ಲ ಭಾಷೆ,

ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಸರಗಳಿಗೆ ಅನ್ವಯವಾಗುವ ವಿಚಾರಗಳು, ಅರ್ಥಗಳು, ಪ್ರಕ್ರಿಯೆಗಳು, ನಂಬಿಕೆಗಳು, ಹಾಗೂ ಮಾನವ ಸಂವೇದನೆಗಳು ಕೆಲವಾದರೂ ಮನುಷ್ಯ ಜಗತ್ತಿನಲ್ಲಿ ಇರುವುದರಿಂದ ಹಾಗೂ ಎಲ್ಲ ಕಾಲ ದೇಶಗಳ ಮನುಷ್ಯನ ಮೂಲ ಪ್ರವೃತ್ತಿಗಳು, ನಿಸರ್ಗದೊಂದಿಗೆ ಅವನು ಹೊಂದಿರುವ ಸಂಬಂಧದ ಸ್ವರೂಪ ಇತ್ಯಾದಿಗಳಲ್ಲಿ ಬಹುಮಟ್ಟಿಗೆ ಸಾಮ್ಯತೆಯೂ ಇರುವುದರಿಂದ ಒಂದು ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರ ಅಥವಾ ವ್ಯವಸ್ಥೆಯು ಮತ್ತೊಂದಕ್ಕೆ ಪೂರ್ಣ ಅಪರಿಚಿತವಾಗಿ ಇರುವುದಿಲ್ಲ. ಹಾಗೆಯೇ ಅವು ದ್ವೀಪದಂತೆ ಪ್ರತ್ಯೇಕವಾಗಿ ನಿಲ್ಲಲಾಗುವುದಿಲ್ಲ. ಭಾಷಾಂತರಕಾರರು ಈ ಸಂಸ್ಕೃತಿ ಮತ್ತು ಭಾಷೆಗಳನ್ನು ಪರಸ್ಪರ ಹತ್ತಿರ ತಂದು ಅವುಗಳ ನಡುವೆ ಇರಬಹುದಾದ ಅಪರಿಚಿತತೆಯನ್ನು ದೂರ ಮಾಡುತ್ತಾರೆ. ಆ ಮೂಲಕ ಮನುಕುಲವನ್ನು ಬೆಸೆಯುವ ಕೆಲಸವನ್ನೂ ಮಾಡುತ್ತಾರೆ. ಈ ಎಲ್ಲ ಕಾರಣಗಳ ಹಿನ್ನೆಲೆಯಲ್ಲಿಯೇ ಭಾಷಾಂತರ ಪ್ರಕ್ರಿಯೆ ಸಾವಿರಾರು ವರ್ಷಗಳಿಂದ ನಿರಂತರವಾಗಿ ನಡೆಯುತ್ತಿದೆ.

ಭಾಷಾಂತರ ಪ್ರಕ್ರಿಯೆಯಲ್ಲಿ ತೊಡಗುವವರಿಗೆ ಭಾಷಾಂತರ ಸಿದ್ಧಾಂತಗಳ ಅವಶ್ಯಕತೆ ಇದೆಯೇ ಎನ್ನುವ ವಾದವೂ ಚಾಲ್ತಿಯಲ್ಲಿದೆ. ಒಳ್ಳೆಯ ಭಾಷಾಂತರ ಎನ್ನುವುದು ಭಾಷಾಂತರಕಾರನಿಗಿರುವ ಪ್ರತಿಭೆಯನ್ನು ಅವಲಂಬಿಸಿದೆಯೇ ಹೊರತು ಅಲ್ಲಿ ಸಿದ್ಧಾಂತಗಳ ಪಾತ್ರವೇನೂ ಇಲ್ಲ. ಹಾಗೆಯೇ ಭಾಷಾಂತರವನ್ನು ಶಾಸ್ತ್ರೀಯವಾಗಿ ಕಲಿಯುವ ಅವಶ್ಯಕತೆಯೇನಿಲ್ಲ. ಭಾಷಾಂತರ ಸಿದ್ಧಾಂತಗಳಿಂದ ಭಾಷಾಂತರಕಾರ ಹಾಗೂ ಭಾಷಾಂತರದ ಗುಣಾತ್ಮಕತೆಯೇನೂ ಹೆಚ್ಚಳವಾಗುವುದಿಲ್ಲ. ಭಾಷಾಂತರವೆನ್ನುವುದು ಒಂದು ಕಲೆ ಹಾಗೂ ಅದು ವ್ಯಕ್ತಿಗೆ ಜನ್ಮ ದತ್ತವಾಗಿ ಬರುವಂತದ್ದು. ಹಾಗಾಗಿ ಭಾಷಾಂತರಕ್ಕೆ ಸಿದ್ಧಾಂತದ ಹಂಗಿಲ್ಲ ಎನ್ನುವ ಅಭಿಪ್ರಾಯ ಕೆಲವರಲ್ಲಿದೆ.

ಆದರೆ ಭಾಷಾಂತರಕ್ಕೆ ಸಿದ್ಧಾಂತದ ತಿಳುವಳಿಕೆಯ ಅಗತ್ಯವನ್ನು ಪ್ರತಿಪಾದಿಸುವವರು, ಒಬ್ಬ ವ್ಯಕ್ತಿಗೆ ಎರಡು ಅಥವಾ ಅದಕ್ಕಿಂತ ಹೆಚ್ಚು ಭಾಷೆಗಳು ತಿಳಿದಿದೆ ಅಂದ ಕೂಡಲೆ ಭಾಷಾಂತರವನ್ನು ಮಾಡಲಾಗುವುದಿಲ್ಲ. ಆ ಭಾಷೆಗಳ ಜ್ಞಾನವನ್ನು ಭಾಷಾಂತರ ಪ್ರಕ್ರಿಯೆಯಲ್ಲಿ ಹೇಗೆ ಸೃಜನಶೀಲವಾಗಿ ಬಳಸಿಕೊಳ್ಳಬೇಕು ಎನ್ನುವ ತಿಳುವಳಿಕೆಯೂ ಇರಬೇಕಾಗುತ್ತದೆ. ಭಾಷಾಂತರದಲ್ಲಿ ಕ್ರಿಯಾಶೀಲವಾಗಿ ಭಾಗಿಯಾಗುವ ಎರಡು ಭಾಷೆಗಳು, ಅವು ಪ್ರತಿನಿಧಿಸುವ ಸಂಸ್ಕೃತಿಗಳು, ಸಮಾಜಗಳು, ಆ ಕೃತಿಗಳಲ್ಲಿನ ಬಹು ಜ್ಞಾನ ಶಿಸ್ತಿನ ನೆಲೆಗಳು ಇತ್ಯಾದಿಗಳನ್ನು ಗ್ರಹಿಸುವ, ಅರ್ಥೈಸುವ ಬಗೆ ಹೇಗೆ ಹಾಗೂ ಲಕ್ಷ್ಯ ಪಠ್ಯ, ಮೂಲ ಪಠ್ಯಗಳ ಅನನ್ಯತೆಗಳನ್ನು ಮಾನ್ಯ ಮಾಡುವ ಬಗೆ ಹೇಗೆ ಮುಂತಾದವುಗಳೆಲ್ಲ ನಿಯಮ. ತತ್ವ, ಸೂತ್ರ, ಸಿದ್ಧಾಂತಗಳ ರೂಪದಲ್ಲಿ ಲಭ್ಯವಿದ್ದರೆ ಅದನ್ನು ಅರಿಯುವುದರ ಮೂಲಕ ಭಾಷಾಂತರವೆನ್ನುವುದು ಕೇವಲ ಉತ್ಸಾಹದ ಕೆಲಸವಲ್ಲ. ಬದಲಾಗಿ ಅದೊಂದು ಸೃಜನಶೀಲ ಕೆಲಸವೆನ್ನುವ ಎಚ್ಚರ ಸಾಧ್ಯವಾಗುತ್ತದೆ ಎನ್ನುತ್ತಾರೆ.

ಇವುಗಳೊಂದಿಗೆ, ಭಾಷಾಂತರಕಾರ ಆಕರಪಠ್ಯದ ಭಾಷೆಗೆ ಸೇರಿದವನಾಗಿರಬೇಕೇ? ಲಕ್ಷ್ಯಪಠ್ಯದ ಭಾಷೆಗೆ ಸೇರಿದವನಾಗಿರಬೇಕೇ ಎನ್ನುವ ಚರ್ಚೆಗಳೂ ಇವೆ. ಭಾಷಾಂತರಕಾರ ಉದ್ದೇಶಿತ ಭಾಷೆಗೆ ಅಂದರೆ ಲಕ್ಷ್ಯಪಠ್ಯದ ಭಾಷೆಗೆ ಸೇರಿದವನಾಗಿರಬೇಕು. ಏಕೆಂದರೆ, ಅವನು ಲಕ್ಷ್ಯಪಠ್ಯದ ಭಾಷೆಗೆ ಸೇರಿದವನಾಗಿದ್ದರೆ, ತನ್ನ ಸಂಸ್ಕೃತಿಗೆ

ಬೇಕಾದ್ದೇನು ಬೇಡವಾದದ್ದೇನು ಎನ್ನುವ ತಿಳುವಳಿಕೆ ಅವನಿಗಿರುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಹಾಗೆಯೇ ಆಕರಪಠ್ಯ ಭಾಷೆ ಮತ್ತು ಸಂಸ್ಕೃತಿಗಳ ತಿಳುವಳಿಕೆ ಭಾಷಾಂತರಕಾರನಿಗೆ ಇರಲೇಬೇಕಾಗುತ್ತದೆ. ಭಾಷಾಂತರಿಸುತ್ತಿರುವ ಪಠ್ಯದ ಸಾಂಸ್ಕೃತಿಕ ಮಹತ್ವವೇ ತಿಳಿದಿಲ್ಲದಿದ್ದರೆ ಭಾಷಾಂತರದಲ್ಲಿ ಅಭಾಸಗಳು ಉಂಟಾಗುತ್ತವೆ ಎನ್ನುವುದು ಕೆಲವರ ವಾದ. ಮತ್ತೂ ಕೆಲವರು, ಎರಡೂ ಭಾಷೆ ಮತ್ತು ಸಂಸ್ಕೃತಿಗಳ ನಿಕಟ ಪರಿಚಯ ಭಾಷಾಂತರಕಾರನಿಗೆ ಇದ್ದರೆ ಅಲ್ಲಿ ಯಶಸ್ವಿ ಭಾಷಾಂತರವೊಂದು ಘಟಿಸುತ್ತದೆ ಎನ್ನುತ್ತಾರೆ.

ಹಾಗೆಯೇ ಭಾಷಾಂತರವೆನ್ನುವುದು ಕಲೆಯೋ ವಿಜ್ಞಾನವೋ ಎನ್ನುವ ವಾಗ್ವಾದಗಳು, ಭಾಷಾಂತರವು ಮೂಲಪಠ್ಯವನ್ನು ಓದಿದಂತೆ ಅನ್ನಿಸಬೇಕೋ ಇಲ್ಲ ಭಾಷಾಂತರಿತ ಪಠ್ಯ ಎನ್ನುವ ಅರಿವನ್ನು ಓದಿನ ಸಂದರ್ಭದಲ್ಲಿ ಮೂಡಿಸುತ್ತಿರಬೇಕೋ ಎನ್ನುವಂತಹ ಹಲವು ಬಗೆಯ ವಾಗ್ವಾದಗಳು ಭಾಷಾಂತರ ಕ್ಷೇತ್ರದಲ್ಲಿ ಚಾಲ್ತಿಯಲ್ಲಿವೆ.

❖❖❖

ಗೋಲ ಹನಿಯುತ
ವ್ಯೋಮ ಕೇಶನ
ಶಿರವ ತಣ್ಣಗೆ ಇರಿಸಿರೆ
ಹರಿದ ನೀರದು
ಪಾಣಿ ಪೀಠದ
ಎದೆಗೆ ಸೊಗವನೆ ಎರೆದಿರೆ

ನಾಟ್ಯಮಯೂರಿ
ಹೊಯ್ಸಳೇಶ್ವರ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ಕಥನ

ಕಿರಣ ವಲ್ಲೇಪುರೆ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ–585106

ಮರುಳಯ್ಯ ಸಾ.ಶಿ. ಅವರು ರಚಿಸಿದ 'ನಾಟ್ಯಮಯೂರಿ' ದ್ವಾರಸಮುದ್ರದ ಹೊಯ್ಸಳ ಸಾಮ್ರಾಜ್ಯದ ಅರಸ ವಿಷ್ಣುವರ್ಧನನ ಪಟ್ಟದರಸಿ ಶಾಂತಲೆಯ ಕಥನವನ್ನೊಳಗೊಂಡ ಐತಿಹಾಸಿಕ ಕಾದಂಬರಿಯಾಗಿದೆ. ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ತಿಮಬ್ಬೆ, ಅಕ್ಕಮಹಾದೇವಿ ಅಂತೆಯೇ ಶಾಂತಲೆಯೂ ಪ್ರಮುಖಳಾಗಿದ್ದಾಳೆ. ಶಾಂತಲೆ ಕುರಿತು ಕನ್ನಡದಲ್ಲಿ ಕೆ.ವಿ.ಅಯ್ಯರ್ ಅವರು 'ಶಾಂತಲಾ', ಮ.ನ. ಮೂರ್ತಿ ಅವರು 'ನಾಟ್ಯರಾಣಿ ಶಾಂತಲಾ', ಕೆ.ವಿ. ರಾಜೇಶ್ವರಿ ಅವರು 'ನಾಟ್ಯ ಸರಸ್ವತಿ ಶಾಂತಲಾ', ಸಿ.ಕೆ. ನಾಗರಾಜ ಅವರು 'ಪಟ್ಟಮಹಾದೇವಿ ಶಾಂತ್ತಲಾದೇವಿ 1, 2', ವೈ.ಕೆ. ಸಂಧ್ಯಾ ಶರ್ಮ ಅವರು 'ನೃತ್ಯ ಸರಸ್ವತಿ' ಎಂಬ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದ್ದಾರೆ. ಸಾ.ಶಿ. ಮರುಳಯ್ಯನವರ 'ನಾಟ್ಯಮಯೂರಿ' ಚಿಕ್ಕ ಕಾದಂಬರಿಯಾಗಿದ್ದು; ಇಲ್ಲಿ ಲೇಖಕರು ಶಾಂತಲೆಯ ಬದುಕು, ಗೆಳೆತನ, ಪ್ರೇಮ, ವಿವಾಹ, ದಾಂಪತ್ಯ, ಗುರುಭಕ್ತಿ, ನೃತ್ಯ, ಸೌಂದರ್ಯ, ವ್ಯಕ್ತಿತ್ವ, ಆದರ್ಶತನ, ಮಾನವೀಯತೆ, ನೋವು, ಸಾವು –ಎಲ್ಲವನ್ನು ತಮ್ಮದೇ ಅಧ್ಯಯನದ ನೆಲೆಯಲ್ಲಿ ಕಲಾತ್ಮಕವಾಗಿ ಸೆರೆಹಿಡಿದಿದ್ದಾರೆ. ಒಟ್ಟು ಹತ್ತು ಅಧ್ಯಾಯಗಳಲ್ಲಿ ಇಲ್ಲಿನ ಕಥೆ ನಿರೂಪಣೆಗೊಂಡಿದೆ.

ಶಾಂತಲೆ ಕಾದಂಬರಿಯ ಕೇಂದ್ರ ಪಾತ್ರ. ಇವಳು ನೃತ್ಯದಲ್ಲಿ ಪ್ರವೀಣಳು. ತಂದೆ ಮಾರಸಿಂಗಯ್ಯ ಮತ್ತು ತಾಯಿ ಮಾಚಿಕಬ್ಬೆ. ಶಾಂತಲೆ ಮತ್ತು ಲಕ್ಷ್ಮಿಯರು ಶಿವ–ಪಾರ್ವತಿಯ ವೇಶ ಧರಿಸಿ ಶಿವಗಂಗೆಯ ಹೊನ್ನಮ್ಮನ ಗುಡಿಯ ಮುಂದೆ 'ಶಿವನತಾಂಡವನೃತ್ಯ' ಮಾಡುವ ಸಂದರ್ಭವೊಂದರ ಮೂಲಕ ಕಾದಂಬರಿಯ ಕಥೆ ಆರಂಭವಾಗುತ್ತದೆ. ಆ ಸಂದರ್ಭದಲ್ಲಿ ನೊಳಂಬವಾಡಿಯವರೊಂದಿಗಿನ ಯುದ್ಧದಲ್ಲಿ ವಿಷ್ಣುವರ್ಧನನು ಗೆಲುವು ಸಾಧಿಸಿ ದ್ವಾರಸಮುದ್ರಕ್ಕೆ ಹಿಂದಿರುಗುವಾಗ ದಾರಿ ಮಧ್ಯೆ ಶಿವಗಂಗೆಯಲ್ಲಿ ಶಾಂತಲೆಯ ನೃತ್ಯ ನೋಡಿ ಬೆರಗಾಗುತ್ತಾನೆ. "ಭಾವುಕನಾದ ರಾಜಕುಮಾರ ವಿಷ್ಣುವರ್ಧನನ ಮನಸ್ಸನ್ನು ಸೂರೆಗೊಂಡದ್ದು ಶಾಂತಲೆಯ ವಸಂತನರ್ತನ... ಅವಳ ಚೆಲುವು, ಚೆದುರು, ಹಾವ, ಭಾವ, ನಡೆಯ ಮೋಡಿ, ಕುಣಿತದ ಗತ್ತು, ಬಳುಕುವ ನಡು 'ಎಲ್ಲವೂ ಮೆಚ್ಚಾದವು.'[1] ಇಲ್ಲಿಯೇ ನಾಟ್ಯಮಯೂರಿ ಶಾಂತಲೆ ಮತ್ತು ಯುವರಾಜ ವಿಷ್ಣುವರ್ಧನರ ನಡುವೆ ಶಾಂತಲೆಯ ತಂದೆ ಡಣಾಯಕರಾದ ಮಾರಸಿಂಗಯ್ಯರ ಮೂಲಕ ಪರಸ್ಪರ ಪರಿಚಯವೂ ಆಗುತ್ತದೆ. ಶಾಂತಲೆಯೂ ಯುವರಾಜನಿಗೆ ಮನಸೋಲುತ್ತಾಳೆ. ನಂತರದಲ್ಲಿ ತಂದೆ ಮಾರಸಿಂಗಯ್ಯನೊಂದಿಗೆ ಯುವರಾಜರ ಬಗ್ಗೆ ಮಾತನಾಡಿ ಯುವರಾಜರ ಬಗ್ಗೆ ತಿಳಿದುಕೊಳ್ಳುತ್ತಾಳೆ. ಇತ್ತ ವಿಷ್ಣುವರ್ಧನನು ಸಹ ದಾರಿ ಮಧ್ಯೆ ತನ್ನ ಆತ್ಮೀಯ ಸ್ನೇಹಿತ ಬಪ್ಪರಸನೊಂದಿಗೆ

ಶಾಂತಲೆಯ ಬಗ್ಗೆ ಮಾತನಾಡುತ್ತ ಅವಳ ಬಗ್ಗೆ ತಿಳಿದುಕೊಳ್ಳುತ್ತಾನೆ. ಬಪ್ಪರಸನು ಶಾಂತಲೆಯ ಕುರಿತು ಅವಳು "ಗುಣವತಿ, ರೂಪವತಿ... ನಾಟ್ಯಕ್ಕೆ ನಿಂತರೆ ಅಪ್ಸರೆಯರು ನಾಚಬೇಕು, ಹಾಡತೊಡಗಿದರೆ ಗಂಧರ್ವರು ತಲೆತಗ್ಗಿಸಬೇಕು; ವೀಣೆಯನ್ನು ಹಿಡಿದು ಮೇಳದ ಮೇಲೆ ಕೈಆಡಿಸುತ್ತ ಕುಳಿತಳೆಂದರೆ ಸಾಕ್ಷಾತ್ ಸರಸ್ವತಿ!..."[2] ಎಂದು ಅವಳ ಗುಣ ಸ್ವಭಾವವನ್ನು ಬಣ್ಣಿಸುತ್ತಾನೆ. ಯುವರಾಜನು ಶಾಂತಲೆಯನ್ನು ಮದುವೆಯಾಗಲು ಇಚ್ಛಿಸುತ್ತಾನೆ. ಮಿತ್ರ ಬಪ್ಪರಸನು ವಿಷಯವನ್ನು ರಾಜಮಾತೆಗೆ ತಿಳಿಸಿ ಅನುಮತಿಯೂ ಪಡೆಯುತ್ತಾನೆ. ಈ ಮಧ್ಯೆ ವಿಷ್ಣುವರ್ಧನನಿಗೆ ನೊಳಂಬ ರಾಜಲೆ, ಪಲ್ಲವ ಬೊಮ್ಮಲೆ, ಬನವಾಸಿಯ ಬಿಜ್ಜಲೆಯ ಮದುವೆ ಸಂಬಂಧದ ಓಲೆಯೂ ಬರುತ್ತದೆ.

ರಾಜಮಾತೆಯಾದ ಏಚಲಾದೇವಿಯು ಯುದ್ಧದ ವಿಜಯೋತ್ಸವ ಮತ್ತು ಯುವರಾಜನ ಕಿರೀಟಧಾರಣಾ ಮಹೋತ್ಸವಕ್ಕೆ ಶಿವಗಂಗೆಯ ಡಣಾಯಕರಾದ ಮಾರಸಿಂಗಯ್ಯನವರಿಗೆ ಕುಟುಂಬ ಜೊತೆಯಲ್ಲಿ ಬರುವಂತೆ ಪತ್ರದ ಮೂಲಕ ಆಹ್ವಾನ ನೀಡುತ್ತಾರೆ. ಇದೇ ನೆಪದಲ್ಲಿ ಭಾವಿ ಸೊಸೆ ಶಾಂತಲೆಯನ್ನು ನೋಡುವ, ಮಾತನಾಡುವ ಪೂರ್ವ ಯೋಜನೆಯು ಅವರದ್ದಾಗಿರುತ್ತದೆ. ದ್ವಾರಸಮುದ್ರಕ್ಕೆ ಬಂದ ಶಾಂತಲೆಯು ಮೊದಲು ರಾಜಮಾತೆಯ ಪಾದಗಳಿಗೆ ವಂದಿಸುತ್ತಾಳೆ. ಅವಳ ಈ ಸಂಸ್ಕೃತಿ, ಸಜ್ಜನಿಕೆಯ ನಡೆ ರಾಜಮಾತೆಗೆ ಆನಂದವನ್ನುಂಟು ಮಾಡುತ್ತದೆ. "ಇಂತಹ ಸುಲಕ್ಷಣ ಸಂಪನ್ನೆ ಮಹಾರಾಣಿಯಾಗುವುದು ನಾಡಿನ ಪುಣ್ಯ; ನಮ್ಮ ಮನೆಗೆ ಸೊಸೆಯಾಗಿ ಬರುವುದು ನಮ್ಮ ಭಾಗ್ಯವಿಶೇಷ"[3] ಎಂದುಕೊಳ್ಳುತ್ತಾಳೆ. ಅಲ್ಲಿ ನಡೆದ ಸಂಗೀತಗೋಷ್ಠಿಯಲ್ಲಿ ಶಾಂತಲೆಯು ಆರಂಭದಲ್ಲಿ ವೀಣೆ ನುಡಿಸುತ್ತಾಳೆ. ನಂತರದಲ್ಲಿ ಹಾಡನ್ನು ಹಾಡುತ್ತಾಳೆ. ಶಾಂತಲೆಯು ನೃತ್ಯದಂತೆಯೆ ಸಂಗೀತದಲ್ಲಿಯೂ ಪ್ರವೀಣಳಾಗಿದ್ದಳು. ಅಂದಿನ ಅವಳ ಹಾಡು ಎಲ್ಲರಿಗೂ ಮೆಚ್ಚುಗೆಯಾಗುತ್ತದೆ. ರಾಜಮಾತೆಯಂತೂ ಖುಷಿಯಿಂದ ಶಾಂತಲೆಯನ್ನು ಅಪ್ಪಿಕೊಳ್ಳುತ್ತಾರೆ. "ಶಾಂತಲೆ ನೀನು ನಮ್ಮ ಮನೆಯ ಜ್ಯೋತಿ. ಅಷ್ಟೇ ಅಲ್ಲ, ಈ ಸಾಮ್ರಾಜ್ಯದ ಸಕಲ ಸಂಪದಕ್ಕೂ ನೀನು ರಾಜಲಕ್ಷ್ಮಿ. ಇಂದಿನಿಂದ ಕತ್ತಲಾಗಿದ್ದ ಅರಮನೆ ನಿನ್ನಿಂದ ಬೆಳಗಬೇಕಾಗಿದೆ. ಹೊಯ್ಸಳರು ಚಾಲುಕ್ಯರಿಂದ ಸಂಪೂರ್ಣ ಸ್ವತಂತ್ರರಾಗಿ ಸಾಮ್ರಾಟರಾಗಿ ಬಾಳಬೇಕಾಗಿದೆ. ನಿನ್ನಂಥವಳು ನಮ್ಮ ಮನೆಗೆ ಸೊಸೆಯಾಗಿ ಬರುವುದರಿಂದ ಅದು ವೃದ್ಧಿಯಾದಿತು. ನಿನ್ನ ಶೀಲ, ಸದ್ಗುಣ, ಸೌಜನ್ಯಗಳಿಂದ ನಾಡಿನ ಆತ್ಮಬಲ ಹೆಚ್ಚೀತು "[4] ಎಂದು ಹೇಳಿ ಮದುವೆಯ ಪ್ರಸ್ತಾಪವನ್ನು ಮಾಡುತ್ತಾರೆ. ಶಾಂತಲೆಯು ಇಲ್ಲಿ ವಿಷ್ಣುವರ್ಧನನ ಬಹುಪತ್ನಿತ್ವಕ್ಕೂ ಸಮ್ಮತಿ ಸೂಚಿಸಿತ್ತಾಳೆ. ಮಂತ್ರಿ ಪದವಿಯ ಪ್ರಸ್ತಾಪ ಬಂದಾಗಲೂ ಅನುಭವಿ ಗಂಗರಾಜರ ಹೆಸರನ್ನು ಸೂಚಿಸಿ ಪ್ರಬುದ್ಧತೆ ಮೆರೆಯುತ್ತಾಳೆ. ವಿವಾಹೋತ್ಸವ, ಮರುದಿನ ಪಟ್ಟಾಭಿಷೇಕೋತ್ಸವವೂ ಅದ್ಧೂರಿಯಾಗಿ ನಡೆಯುತ್ತದೆ. ಇಲ್ಲಿ ವಿಷ್ಣುವರ್ಧನನು ಶಾಂತಲೆ, ಬೊಮ್ಮಲೆ, ರಾಜಲೆ, ಬಿಜ್ಜಲೆ, ಲಕ್ಷ್ಮಿ– ಈ ಐವರನ್ನು ಮದುವೆಯಾಗುತ್ತಾನೆ. ನಂತರ ಉದಯಾದಿತ್ಯನಿಗೆ ಯುವರಾಜ ಪಟ್ಟಾಭಿಷೇಕ ಕೂಡ ಮಾಡಲಾಗುತ್ತದೆ.

ಶಾಂತಲೆಯು ತನ್ನ ಗುರು ಅಮರಶಿಲ್ಪಿ ಜಕ್ಕಣಾಚಾರಿಯ ದರ್ಶನಕ್ಕೆ ಹಾಗೂ ವೇಲಾಪುರಿಯಲ್ಲಿ ವಿಜಯನಾರಾಯಣ ದೇವಾಲಯ ನಿರ್ಮಾಣ ಕುರಿತು ಮಾತನಾಡಲು ತನ್ನ ಪತಿ ವಿಷ್ಣುವರ್ಧನನ ಜೊತೆ ಹೋಗುತ್ತಾಳೆ. ಮೊದಲೇ

ದೇವಾಲಯ ನಿರ್ಮಿಸಲು ನಿರಾಕರಿಸಿದ ಜಕ್ಕಣಾಚಾರಿಯ ಬಗ್ಗೆ ವಿಷ್ಣುವರ್ಧನನಿಗೆ ಕೋಪವಿದ್ದರೂ ಶಾಂತಲೆಯ ವಿನಂತಿಯ ಮೇರೆಗೆ ಬಳ್ಳಿಗಾವಿಗೆ ಹೋಗುತ್ತಾನೆ. ಆಗ ಮಹತ್ಕಾರ್ಯದಲ್ಲಿ ನಿರತರಾದ ಜಕ್ಕಣಾಚಾರ್ಯರಿಗೆ ತಿಳಿಯದ ಹಾಗೆ ಅವರಿಗೆ ನಡೆಸುವ ತಾಂಬೂಲದ ಕೈಂಕರ್ಯದ ಸೇವೆಯನ್ನು ಮಾಡುತ್ತಾರೆ. ಬೆಳಗಿನ ಜಾವದಲ್ಲಿ ವಿಷಯ ತಿಳಿದ ಜಕ್ಕಣಾಚಾರಿಯು 'ಮಹಾಪ್ರಭುಗಳು ತನ್ನ ಈ ಉದ್ಧಟತನವನ್ನು ಕ್ಷಮಿಸಬೇಕು' ಎಂದು ಕೇಳಿಕೊಳ್ಳುತ್ತಾನೆ. ನಂತರದಲ್ಲಿ ತನ್ನ ಹೆಸರು ಯಾರಿಗೂ ಹೇಳದಂತೆ ಮಾತು ಪಡೆದು ದೇವಾಲಯ ನಿರ್ಮಾಣಕ್ಕೆ ಒಪ್ಪಿಗೆ ನೀಡಿ, ನಾಲ್ಕೈದು ವರ್ಷದಲ್ಲಿ ಒಂದಲ್ಲಾ ಎರಡು ದೇವಾಲಯ ನಿರ್ಮಿಸಿ ಕಣ್ಮರೆಯಾಗುತ್ತಾರೆ. ಶಿಲ್ಪಕಲೆಗೆ ಈ ದೇವಾಲಯಗಳು ಜಗತ್ಪ್ರಸಿದ್ಧವಾಗಿವೆ. ಇಲ್ಲಿ ಶಾಂತಲೆಯು ಗುರುವಿನ ಭೇಟಿಗೆ ಬರಿಗಾಲಲ್ಲಿ ನಡೆಯುವುದು, ಅವರ ಸೇವೆ ಮಾಡುವುದು ಅವಳಲ್ಲಿದ್ದ ಅಪಾರವಾದ ಗುರುಭಕ್ತಿಯನ್ನು ತಿಳಿಸುತ್ತದೆ.

ಒಂದು ದಿನ ಶಾಂತಲೆಯು ತನ್ನ ರಾಜ್ಯದ ಪ್ರದೇಶದಲ್ಲಿ ಸಂಚರಿಸುವಾಗ ಬನದಮ್ಮನಹಳ್ಳಿಯಲ್ಲಿ ಭೂಮಿಯಲ್ಲಿ ಸಿಕ್ಕ ಬಂಗಾರದ ಹಂಚಿಕೆಗೆ ಸಂಬಧಿಸಿದಂತೆ ಜನರು ಪಂಚಾಯಿತಿಗೆ ನೆರೆದಿರುತ್ತಾರೆ. ಅಲ್ಲಿ ಬಂಗಾರ ರಾಜ್ಯದ ಬೊಕ್ಕಸ ಸೇರಲಿ ಎಂಬ ಮಾತು ಬಂದಾಗ ರಾಣಿ ಮಧ್ಯ ಪ್ರವೇಶಿಸಿ ಇದು ನಿಮ್ಮ ಬಂಗಾರ ನಿಮ್ಮ ಹಳ್ಳಿಯ ಏಳಿಗೆಗೆ ಬಳಕೆಯಾಗಲಿ ಎಂದು ಹೇಳುತ್ತಾಳೆ. ಅಲ್ಲಿನ ಜನರು ರಾಣಿಯನ್ನು ಕಂಡು ಸಂಭ್ರಮ ಪಟ್ಟುಕೊಳ್ಳುತ್ತಾರೆ. ಮುಂದೆ ಆ ಬಂಗಾರದಲ್ಲಿ ದ್ವಾರಸಮುದ್ರದಲ್ಲಿ ಕಲಾದೇಗುಲವನ್ನು ನಿರ್ಮಿಸಲು ತಿರ್ಮಾನಿಸಲಾಗುತ್ತದೆ. ಬನದಮ್ಮನಹಳ್ಳಿಯ ಬಂಗಾರದ ಜೊತೆಗೆ ರಾಜ್ಯದ ಬೊಕ್ಕಸದಿಂದಲೂ ಹಣ ನೀಡಿ ದೇವಾಲಯ ನಿರ್ಮಾಣ ಕಾರ್ಯ ನಡೆಯುತ್ತದೆ. ಆಗ ಕಲ್ಯಾಣಿ ಚಾಲುಕ್ಯರು ದ್ವಾರಸಮುದ್ರದ ಮೇಲೆ ಯುದ್ಧ ಸಾರುತ್ತಾರೆ. ಆ ಸಂದರ್ಭದಲ್ಲಿ ಹಣದ ಅಭಾವ ಎದುರಾದಾಗ ಜನರ ಮೇಲೆ ತೆರಿಗೆ ವಿಧಿಸುವುದನ್ನು ತಡೆದು ತನ್ನಲ್ಲಿದ್ದ ಬಂಗಾರದ ಒಡವೆಗಳನ್ನು ನೀಡಿ ಹಣದ ಅಭಾವ ಆಗದ ಹಾಗೆ ಶಾಂತಲೆ ನೋಡಿಕೊಳ್ಳುತ್ತಾಳೆ. ಆ ಯುದ್ಧದಲ್ಲಿ ಹೊಯ್ಸಳರು ಗೆಲುವು ಸಾಧಿಸುತ್ತಾರೆ. ಸಂಕಟದ ಸಂದರ್ಭದಲ್ಲಿ ಪ್ರಜೆಗಳ ಮತ್ತು ರಾಜ್ಯದ ಹಿತರಕ್ಷಣೆ ಕಾಯುವಲ್ಲಿ ಶಾಂತಲೆ ಯಶಸ್ವಿಯಾಗುತ್ತಾಳೆ. ಅಲ್ಲದೇ ಅವಳು ವಿಷ್ಣುವರ್ಧನನ ಕಾಲದಲ್ಲಿ ಕೆಲವು ಐತಿಹಾಸಿಕ ದೇವಾಲಯಗಳನ್ನು ನಿರ್ಮಿಸುವಲ್ಲಿಯೂ ಪ್ರಮುಖ ಕಾರಣಿಕೃರ್ತಳಾಗಿರುತ್ತಾಳೆ. ಅವಳ ಎಲ್ಲಾ ಸದ್ಗುಣಗಳನ್ನು ಈ ಕಾದಂಬರಿ ಸೆರೆಹಿಡಿದಿದೆ.

ಶಾಂತಲೆಯ ಬದುಕಿನಲ್ಲಿ ಎಲ್ಲವೂ ಒಳ್ಳೆಯದೇ ಆಗುತ್ತಿರುವ ಸಂದರ್ಭದಲ್ಲಿ ಏಕಕಾಲದಲ್ಲಿ ಅನೇಕ ನೋವಿನ ಘಟನೆಗಳು ಎದುರಾಗುತ್ತವೆ. ರಾಜಮಾತೆ ಏಚಲಾದೇವಿಯ ಸಾವು, ತನ್ನ ಏಕೈಕ ಮಗು ಬಲ್ಲಾಳನ ಸಾವು, ತಾಯಿ ಮಾಚಿಕಬ್ಬೆಯ ಸಾವು, ಉದಯಾದಿತ್ಯನ ಹತ್ತು ವರ್ಷದ ಮಗು ಎರೆಯಂಗ ಕುದುರೆ ಕಾಲಿಗೆ ಸಿಕ್ಕಿ ಸತ್ತದ್ದು – ಎಲ್ಲವೂ ಶಾಂತಲೆಯ ಮನಸ್ಸನ್ನು ಕದಡುತ್ತವೆ. ಮುಂದೆ ತನ್ನ ಪಟ್ಟದರಸಿ ಪದವಿಯನ್ನು ಬೇರೆ ರಾಣಿಗೆ ನೀಡುವಂತೆ ವಿಷ್ಣುವರ್ಧನನಿಗೆ ಹೇಳುತ್ತಾಳೆ. ತನ್ನ ಮಗನ ಸಾವು, ಯುವರಾಜ ಉದಯಾದಿತ್ಯನ ಮಗನ ಸಾವು ಆಗಿದ್ದು, ಮುಂದೆ ರಾಜ್ಯಭಾರದ ಅನುಕೂಲಕ್ಕೆ ಪಟ್ಟದರಸಿ ಪದವಿ ಬೇರೆಯವರಿಗೆ ನೀಡಿದರೆ ಅವಳಿಗೆ ಹುಟ್ಟುವ ಮಗು ಯುವರಾಜನಾಗಿ ರಾಜ್ಯ ಕಾಯುತ್ತಾನೆ ಎಂಬುದು ಅವಳ ಆಶಯ.

ಮುಂದಿನ ಸಿಂಹಾಸನಕ್ಕೆ ಅರಮನೆಯಲ್ಲಿ ಕಲಹಗಳಾಗಬಾರದು ಎಂಬುದು ಶಾಂತಲೆಯ ವಿಚಾರವಾಗಿರುತ್ತದೆ. ಆದರೆ ವಿಷ್ಣುವರ್ಧನನು ಅದನ್ನು ನಿರಾಕರಿಸುತ್ತಾನೆ. ಆಗ ಅವನು ಹೇಳಿದ 'ನೀನು ಬದುಕಿರುವರೆಗೂ ಪಟ್ಟದರಸಿ ಪಟ್ಟ ಯಾರಿಗೂ ನೀಡುವುದಿಲ್ಲ' ಎಂಬ ಮಾತು ಅವಳ ತಲೆಯಲ್ಲಿ ಸುತ್ತುತ್ತಿರುತ್ತದೆ. ಆಗ ಅವಳಿಗೆ ನಾನ್ಯಾವ ಸೌಭಾಗ್ಯಕ್ಕೆ ಬದುಕಿರಬೇಕು ಎಂದೆನಿಸಿ ಶಿವಗಂಗೆ ನಾಡಿಗೆ ಹೋಗಿ ಹೊನ್ನಮ್ಮನ ಗುಡಿಯ ಬಂಡೆಯ ಮೇಲೆ ಸಲ್ಲೇಖನ ವ್ರತ ಕೈಗೊಳ್ಳುತ್ತಾಳೆ. ಇದನ್ನು ತಡವಾಗಿ ತಿಳಿದ ವಿಷ್ಣು ಅಲ್ಲಿಗೆ ಹೋಗಿ ಶಾಂತಲೆಯನ್ನು ಕಂಡು 'ನೀನು ಯಾಕೆ ಈ ಸಾಹಸಕ್ಕೆ ಕೈ ಹಾಕಿದೆ?', 'ನಿನ್ನ ಹಿಂದೆ ನಾನು ಬರುವೆ' ಎಂದು ಹೇಳುತ್ತಾನೆ. ಆಗ ಶಾಂತಲೆ "ಬೇಡಿ ನನ್ನ ಸ್ವಾಮಿ... ಬೇಡಿ ನನ್ನ ದೊರೆ... ನಾನು ಹೋದರೆ ನಷ್ಟವಿಲ್ಲ... ಆದರೆ ನಾಡಾಳುವ ದಣಿ ಅಳಿದರೆ ಸಾಮ್ರಾಜ್ಯ ಅನಾಥವಾಗುತ್ತದೆ. ಬೇಡಿ... ಯಾವುದೇ ಕೆಟ್ಟ ಸಾಹಸಕ್ಕೆ ಕೈ ಹಾಕಬೇಡಿ... ನನ್ನನ್ನು ಮರೆತು ಬಿಡಿ..."[5] ಎಂದು ಹೇಳಿ ಕಣ್ಮುಚ್ಚುತ್ತಾಳೆ. ಅವಳು ತನ್ನ ಸಾವಿನ ಸಮಯದಲ್ಲೂ ರಾಜ್ಯದ ರಕ್ಷಣೆ ಬಗ್ಗೆ ಆಲೋಚಿಸಿರುವುದು ರಾಜ್ಯದ ಬಗ್ಗೆ ಅವಳಿಗಿದ್ದ ಅಪಾರ ಶ್ರದ್ಧೆಯನ್ನು ಸೂಚಿಸುತ್ತದೆ. ಶಾಂತಲೆಯ ಸಾವಿನೊಂದಿಗೆ ಇಲ್ಲಿನ ಕಥೆ ಅಂತ್ಯವಾಗುತ್ತದೆ.

ಶಾಂತಲೆಯ ಸಾವಿನ ಬಗೆಗೆ ಎರಡು ಕಥನಗಳಿವೆ. ಒಂದು ಅವಳು ಶಿವಗಂಗೆಯ ಬೆಟ್ಟದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಳೆಂಬುದು; ಇನ್ನೊಂದು ಅವಳು ಜೈನ ಧರ್ಮದ ಅನುಯಾಯಿ ಆಗಿದ್ದು ಕಠಿಣ ಸಲ್ಲೇಖನ ವ್ರತ ಕೈಗೊಂಡು ಸತ್ತಳೆಂಬುದು. ಈ ಕಾದಂಬರಿ ಎರಡನೆಯ ಕಥನವನ್ನು ನಿರೂಪಿಸಿದೆ.

ಕಾದಂಬರಿಯು ಶಾಂತಲೆಯ ನೃತ್ಯಕಲೆ, ಸೌಂದರ್ಯ, ಗುರುಭಕ್ತಿ, ಮಾನವೀಯತೆ, ರಾಷ್ಟ್ರಪ್ರೇಮ, ಪ್ರಜೆಗಳ ಹಿತರಕ್ಷಣೆ – ಮುಂತಾದ ಗುಣಗಳ ಮೇಲೆ ಹೆಚ್ಚು ಬೆಳಕನ್ನು ಚೆಲ್ಲುತ್ತದೆ. ಅಲ್ಲದೇ ನೊಳಂಬವಾಡಿಯವರೊಂದಿಗಿನ ಯುದ್ಧದಲ್ಲಿ, ತಲಕಾಡಿನ ಗಂಗರಾಜ ಆದಿಮನೊಂದಿಗಿನ ಯುದ್ಧದಲ್ಲಿ ಮತ್ತು ಕಲ್ಯಾಣಿ ಚಾಲುಕ್ಯರೊಂದಿಗಿನ ಯುದ್ಧದಲ್ಲಿ ವಿಜಯ ಸಾಧಿಸಿದ ವಿಷ್ಣುವರ್ಧನನ ವೀರತೆಯು ಇಲ್ಲಿ ಚಿತ್ರಿತಗೊಂಡಿದೆ. ಅಮರಶಿಲ್ಪಿ ಜಕ್ಕಣಾಚಾರಿಯ ಜೀವನ ವೃತ್ತಾಂತ ಹಾಗೂ ಶಿಲ್ಪಕಲೆಯ ಚಿತ್ರಣವೂ ಇಲ್ಲಿ ಕಾಣಸಿಗುತ್ತದೆ. 'ನಾಟ್ಯಮಯೂರಿ' ಚಿಕ್ಕ ಕಾದಂಬರಿ ಆಗಿದ್ದರೂ ಸಹ ಸಂಕ್ಷಿಪ್ತ ರೂಪದಲ್ಲಿ ಹೊಯ್ಸಳ ಸಾಮ್ರಾಜ್ಯದ ಅನೇಕ ಘಟನೆಗಳನ್ನು ನಿರೂಪಿಸುತ್ತದೆ.

ಕೊನೆ ಟಿಪ್ಪಣಿಗಳು

1. ನಾಟ್ಯಮಯೂರಿ : ಮರುಳಯ್ಯ ಸಾ. ಶಿ., ಪು–6, 7
2. ಅದೇ, ಪು–17
3. ಅದೇ, ಪು–28
4. ಅದೇ, ಪು–32
5. ಅದೇ, ಪು–91

ಆಕರಗ್ರಂಥ

1. ನಾಟ್ಯಮಯೂರಿ : ಮರುಳಯ್ಯ ಸಾ. ಶಿ., ಸಪ್ನ ಬುಕ್ ಹೌಸ, ಬೆಂಗಳೂರು, 2024

❖❖❖

ಹರಿದಾಸ ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ಒಂದು ಐತಿಹಾಸಿಕ ಅಧ್ಯಯನ

ಮೋಹನ ರೆಡ್ಡಿ ಜಿ.
ಸಹಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಳಬಾಗಿಲು

ಪೀಠಿಕೆ

ಹರಿದಾಸ ಸಾಹಿತ್ಯದಲ್ಲಿ ಸ್ಥೂಲವಾಗಿ ಷಟ್ಪ್ರಜ್ಞೆಗಳನ್ನು ಗುರುತಿಸಬಹುದು. 1. ವ್ಯಷ್ಟಿ ಪ್ರಜ್ಞೆ, 2. ಸಮಷ್ಟಿ ಪ್ರಜ್ಞೆ, 3. ಸಿದ್ಧಾಂತ ಪ್ರಜ್ಞೆ, 4. ಭಾಷಾ ಪ್ರಜ್ಞೆ, 5. ಸಾಮಾಜಿಕ ಪ್ರಜ್ಞೆ, 6. ನೈತಿಕ ಪ್ರಜ್ಞೆ.

ಹರಿದಾಸರು ಪ್ರಮುಖವಾಗಿ ಸಮಾಜದಲ್ಲಿ ಬದುಕಿ ಬಾಳಿದ್ದರಿಂದ ತಮ್ಮ ಸಮಾಜಕ್ಕೆ ತೀವ್ರ ಸ್ಪಂದಿಸಿದ್ದಾರೆ. ತಮ್ಮ ಸುತ್ತಮುತ್ತಲಿನ ಸಮಾಜದ ಜನರಲ್ಲಿ ಆರೋಗ್ಯಕರ ಬದಲಾವಣೆಯನ್ನು ತರುವುದಕ್ಕಾಗಿ ಕೀರ್ತನೆಗಳನ್ನು ಹಾಡಿ–ಹಾಡಿಸಿ, ಕುಣಿದು–ಕುಣಿಸಿ, ಸಾಮಾಜಿಕ ಪ್ರವಾಹದಲ್ಲಿ ಮಿಂದು ಎದ್ದಿದ್ದಾರೆ. ಬಹುಶಃ ಎಲ್ಲಾ ಕೀರ್ತನೆಗಳಲ್ಲಿ ಸಾಮಾಜಿಕಪ್ರಜ್ಞೆ ಬಹು ವ್ಯಾಪಕವಾಗಿ, ಪರಿಣಾಮಕಾರಿಯಾಗಿ ಮೂಡಿದೆ.

ಈ ಜಗತ್ತಿನ ಸೃಷ್ಟಿಯ ಹಿಂದೆ ಸಾಮಾಜಿಕ ಪ್ರಜ್ಞೆ ಇದೆ. ಈ ಜಗತ್ತಿನ ಸೃಷ್ಟಿಯಿಂದ ಜಗದೊಡೆಯನಾದ ಶ್ರೀಹರಿಗೆ ಯಾವ ಪ್ರಯೋಜನವೂ ಇಲ್ಲ. ಆದರೆ ಎಲ್ಲಾ ಜೀವರಾಶಿಗಳಿಗೆ ತಮ್ಮ ತಮ್ಮ ಸ್ವರೂಪಕ್ಕೆ ತಕ್ಕಂತೆ ವಿಕಾಸ ಹೊಂದಿ, ಉಚಿತ ಸಾಧನ ಮಾಡಿಕೊಂಡು ಉದ್ಧಾರವಾಗಲು ಅವಕಾಶವಿದೆ. ಶ್ರೀಹರಿಯು ಜನರ ಮೇಲಿನ ಕರುಣೆ, ಕಳಕಳಿಯಿಂದಾಗಿ ಈ ಜಗತ್ತನ್ನು ನಿರ್ಮಿಸಿದ ಹಾಗೂ ಪಾಲಿಸುತ್ತಿರುವ **"ಸೋಯಂ ವಿಹಾರ ಇಹಮೆ"** ಎನ್ನುತ್ತದೆ ಶಾಸ್ತ್ರ. ಇವು ಸಮಾಜದ ಬಗ್ಗೆ ಇರುವ ಕಳಕಳಿ ಪ್ರಜ್ಞೆಯನ್ನು ವ್ಯಕ್ತಪಡಿಸುತ್ತವೆ.

ಶ್ರೀ ಮಧ್ವಾಚಾರ್ಯರು ಸಜ್ಜನರ ಕಲ್ಯಾಣಕ್ಕಾಗಿ ಗ್ರಂಥ ರಚಿಸಿ ಹರಿದಾಸರಿಗೆ ಹೆದ್ದಾರಿಯನ್ನು ನಿರ್ಮಿಸಿದರು. ಅವರ ಲೇಖನಿಯಿಂದ ಬಂದದ್ದೆಲ್ಲ ಹರಿದಾಸ ಸಾಹಿತ್ಯವೇ. ಮುಂದೆ ಕನ್ನಡ ಭಾಷೆಯಲ್ಲಿ ವಿಜೃಂಭಿಸಿದ ದಾಸ ಸಾಹಿತ್ಯಕ್ಕೆ ಮೂಲ ಪ್ರೇರಣೆ ಮುಖ್ಯ ಹೂರಣ ಆಚಾರ್ಯ ಮಧ್ವರ ಸರ್ವಮೂಲವೇ. ಈ ಹಿನ್ನೆಲೆಯಲ್ಲಿ ನೋಡಿದಾಗ ಸಜ್ಜನ ಸಮಾಜದ ಮೇಲಿನ ಕರುಣೆ ಹಾಗೂ ಸಾಮಾಜಿಕ ಉದ್ಧಾರದ ಪ್ರಜ್ಞೆಯೇ ಮೂಲವಾಗಿದೆ. ಈ ಸಾಮಾಜಿಕ ಪ್ರಜ್ಞೆಯೇ ಮುಂದೆ ಬಂದ ಎಲ್ಲಾ ಹರಿದಾಸರಲ್ಲಿ ಕೃತಿಗಳಲ್ಲಿ ಬೃಹನ್ನಾಡಿಯಾಗಿ ಮಿಂಚಿದೆ.

ಹರಿದಾಸ ಸಾಹಿತ್ಯದಲ್ಲಿ ಸಾಮಾಜಿಕಪ್ರಜ್ಞೆ

ಹರಿದಾಸ ಸಾಹಿತ್ಯ ಹುಟ್ಟಿದ್ದೇ ಸಾಮಾಜಿಕ ಪ್ರಜ್ಞೆಯಿಂದಾಗಿ; ಬಹುಶಃ ಎಲ್ಲಾ ಹರಿದಾಸರು ತಮ್ಮ ವೈಯಕ್ತಿಕ ಜೀವನದಲ್ಲಿ ಒಂದಲ್ಲಾ ಒಂದು ಸಂಘರ್ಷಕ್ಕೆ ಸಿಲುಕಿದವರೇ. ಹಾಗಾಗಿ ಸಾಮಾಜಿಕ ಜೀವನವನ್ನು ಗಂಭೀರವಾಗಿ ಪರಿಗಣಿಸಿದರು.

ಸ್ವಾರ್ಥವನ್ನು ಮೀರಿ ನಿಂತು ಸಮಾಜದಲ್ಲಿ ಹಿತಮಿತವಾಗಿ ಬೆರೆತು ಸಮಾಜದ ಉದ್ಧಾರಕ್ಕಾಗಿ ಪ್ರಾಮಾಣಿಕ ಚಿಂತನವನ್ನು ನಡೆಸಿ ಸಮಾಜವನ್ನು ಋಜುಮಾರ್ಗದತ್ತ ಕೊಂಡೊಯ್ಯಲು ನಿರ್ದಿಷ್ಟ ಮಾಧ್ಯಮವನ್ನು ಕಂಡುಕೊಂಡರು. ಅದರ ಪರಿಣಾಮವೇ ನಾದಮಾಧುರ್ಯವೂ ಭಾವಗಾಂಭೀರ್ಯವೂ ಅರ್ಥಸೌಂದರ್ಯವೂ ಸಿದ್ಧಾಂತ ಪ್ರಾಚುರ್ಯವೂ ಆದ ಕನ್ನಡ ಕೀರ್ತನೆಗಳು. ಸ್ವಾರ್ಥ ರೂಪವಾದ ಆತ್ಮೋದ್ಧಾರದ ಚಿಂತೆಯಷ್ಟೇ ದಾಸರ ಕೀರ್ತನೆಗಳಲ್ಲಿ ಕಂಡುಬರುವುದಿಲ್ಲ. ಸಾಮಾಜಿಕ ಕಳಕಳಿಯನ್ನು ಹೊಂದಿದಾಗ ದಾಸರು ತಮಗೆ ತಿಳಿದದ್ದು ಇತರರಿಗೂ ತಿಳಿಯಬೇಕು ಎಂದು ಚಿಂತಿಸಿ ಸಾಮಾಜಿಕ ಸ್ವಾಸ್ಥ್ಯವನ್ನು ಚಿರಂತವಾಗಿಸಲು ಹೆಣಗಾಡಿದರು. ಸಮಾಜದ ಗುಣದೋಷಗಳನ್ನು, ಏರುಪೇರುಗಳನ್ನು ಒಲವು ನಲಿವುಗಳನ್ನು ಒಳಹೊಕ್ಕು ನೋಡಿದರು. ಆ ಜನರಲ್ಲಿಯ ಅಸ್ವಸ್ಥತೆಗಳನ್ನು, ಜಿಡ್ಡುಗಟ್ಟಿದ ಮೂಢನಂಬಿಕೆಗಳನ್ನು, ತಿಳಿಹೇಳಿ ತಮ್ಮೊಡನೆ ಬದುಕುತ್ತಿದ್ದ ಜನರನ್ನು ತಿದ್ದಿ ತಿಳಿಹೇಳುವ ಕೈಂಕರ್ಯವನ್ನೇ ಶ್ರೀಹರಿಯ ಸೇವೆ ಎಂದು ತಿಳಿದು ತಮ್ಮ ಕೃತಿಗಳನ್ನು ರಚಿಸಿದರು.

ಆದರ್ಶ ಜೀವನ ಹರಿದಾಸರ ಚಿಂತನೆಯ ಗುರಿ. ಈ ಗುರಿಯನ್ನು ತಲುಪುವುದಕ್ಕಾಗಿ ಒಂದು ಮಾಧ್ಯಮ ಬೇಕು. ಈ ಮಾಧ್ಯಮವೇ ಹರಿದಾಸಸಾಹಿತ್ಯವಾಗಿ, ಅದರ ಫಲವೇ ಸಾಮಾಜಿಕ ಪ್ರಜ್ಞೆಯಾಗಿ ಹೆಮ್ಮರವಾಗಿ ಬೆಳೆದು ನಿಂತಿದೆ. ಆತ್ಮವಿಮರ್ಶೆಯ ರೂಪದಲ್ಲಿಯೂ ಅಭಿವ್ಯಕ್ತವಾದುದು ಈ ಹರಿದಾಸ ಸಾಹಿತ್ಯದ ಹಿರಿಮೆ. ಆತ್ಮವಿಮರ್ಶೆಯ ಮೂಲಕ ಸಮಾಜವಿಮರ್ಶೆ ಮಾಡುವುದು ವಚನ ಸಾಹಿತ್ಯದಂತೆಯೇ ದಾಸಸಾಹಿತ್ಯದಲ್ಲಿಯೂ ನಡೆದಿದೆ. ಬದುಕು ಬರಹದಲ್ಲಿ ಏಕರೂಪತೆಯನ್ನು ಸಾಧಿಸಿದ್ದೇ ಎಲ್ಲಾ ಹರಿದಾಸರ ಘನತೆ. ಮನಸ್ಸಿನಲ್ಲಿದ್ದಂತೆ ಮಾತು, ಮಾತಿನಂತೆ ಕ್ರಿಯೆ ಅವರಲ್ಲಿದ್ದುದರಿಂದಲೇ ಸಮಾಜ ಹರಿದಾಸರನ್ನು ಗೌರವಿಸಿತು.

ಅಸತ್ಯ, ಅಶುದ್ಧತೆಗಳನ್ನು ಪ್ರಶ್ನಿಸಿ ಖಂಡಿಸುವುದು, ಸ್ವತಃ ತನ್ನನ್ನು ಸತ್ಯದ ಅಲುಗಿಗೆ ಹಿಡಿದು ಆತ್ಮಶೋಧನೆಯನ್ನು ಮಾಡಿಕೊಳ್ಳುವುದು ಹೀಗೆ ಹರಿದಾಸರ ಸಾಮಾಜಿಕ ಪ್ರಜ್ಞೆಯನ್ನು ನಾವು ಕಾಣಬಹುದಾಗಿದೆ. ಮನುಷ್ಯ ಸಮಾಜದ ಮಧ್ಯದಲ್ಲಿ ಬದುಕುವಾಗ ತನ್ನ ಸುತ್ತಲಿನ ಪರಿಸರ, ವ್ಯಕ್ತಿ, ಸಮಾಜದ ಒಳಿತು, ಕೆಡಕು, ಸುಖ, ದುಃಖ, ನೋವು, ನಲಿವು, ನ್ಯಾಯ, ಅನ್ಯಾಯ ಆಚಾರ, ಅನಾಚಾರ, ಮೋಸ, ವಂಚನೆ– ಇವುಗಳನ್ನು ಕಂಡಾಗ ಪ್ರತಿಕ್ರಿಸುವುದು; ಅದರೊಂದಿಗೆ ಅವುಗಳನ್ನು ಕುರಿತಾಗಿ ತನ್ನ ಅನಿಸಿಕೆ ಅಭಿಲಾಷೆಗಳನ್ನು ವ್ಯಕ್ತಪಡಿಸುವುದು ಇದೆಲ್ಲ ಸಾಮಾಜಿಕ ಪ್ರಜ್ಞೆ. ತಾನು ಜೀವಿಸುತ್ತಿದ್ದ ಸಮಾಜದಲ್ಲಿ ಅರ್ಥಪೂರ್ಣವಾಗಿ ಬದುಕಿ ವಾಸ್ತವತೆಯನ್ನು ಅನುಭವಿಸಿ ಎಲ್ಲರೊಂದಿಗೆ ಹಿತಮಿತವಾಗಿ ಬೆರೆತು ಬಾಳುವುದೇ ಸಾಮಾಜಿಕ ಪ್ರಜ್ಞೆ.

ಈ ಸಿದ್ಧಾಂತಕ್ಕೆ ಹರಿದಾಸರು ಹಲವು ರೀತಿಯಲ್ಲಿ ಸ್ಪಂದಿಸಿದ್ದಾಗಿ ಯಥಾವತ್ತಾಗಿ ತಮ್ಮ ಕೃತಿಗಳಲ್ಲಿ ಚಿತ್ರಿಸಿ ಅಭಿವ್ಯಕ್ತ ಮಾಡಿದ್ದಾರೆ.

ಕಾಣದ ಪರಕ್ಕೆ ಜೋತು ಬಿದ್ದು ಕೂಡುವುದಕ್ಕಿಂತ ಇಹವನ್ನು ಗೆದ್ದು ಪರವನ್ನು ಪಡೆಯುವುದೇ ಸಾಮಾಜಿಕ ಪ್ರಜ್ಞೆಯ ಹಿಂದಿರುವ ಸೂತ್ರ. ಅದಕ್ಕೆಂದೇ ಹರಿದಾಸರು ಹಾಡಿದರು–

"ಈಸಬೇಕು ಇದ್ದು ಜಯಿಸಬೇಕು" ಎಂಬುದಾಗಿ. ಹರಿದಾಸರು ಸಮಾಜಮುಖಿಯಾಗಿ ಕೆಲಸ ಮಾಡಿದವರು. "ಎಲ್ಲರೂ ಮಾಡೋದು ಹೊಟ್ಟೆಗಾಗಿ,

ಗೇಣು ಬಟ್ಟೆಗಾಗಿ" ಎಂಬ ಶುದ್ಧ ಸತ್ಯ ತತ್ವವನ್ನು ಬಿತ್ತರಿಸಿದಾಗ ಸಮಾಜ ಸಾಮೂಹಿಕವಾಗಿ ಅವರ ವಾಣಿಯನ್ನು ಅನುಮೋದಿಸಿತು. ಜೀವನದ ಮೌಲ್ಯಗಳನ್ನು ಅಮೂಲಾಗ್ರವಾಗಿ ಕನ್ನಡದ ನಾಣ್ಣುಡಿಯಲ್ಲಿ ಒತ್ತು ಕಟ್ಟಿ ಹೇಳಿದಾಗ ಎಲ್ಲಾ ಸ್ತರದ ಜನರು ಅವರ ಕೀರ್ತನೆಗಳನ್ನು ಹಾಡಿ ಕುಣಿಯತೊಡಗಿದರು.

ಆಧ್ಯಾತ್ಮಿಕ ಭದ್ರ ತಳಹದಿಯ ಮೇಲೆ ವ್ಯಕ್ತಿಯ ನಿತ್ಯ ಜೀವನದ ನೈಜ ನಡತೆಗಳನ್ನು ತಮ್ಮ ಕೀರ್ತನೆಗಳ ಮೂಲಕ ಚಿತ್ರಿಸಿದರು. ಮತಪ್ರಜ್ಞೆ ತಾತ್ವಿಕ ಶ್ರದ್ಧೆ ಜೀವನ ನೀತಿ ಸೂಚಿಗಳ ಭದ್ರ ಬುನಾದಿಯ ಮೇಲೆ ಆದರ್ಶಮಯವಾದ ಎಲ್ಲರಿಗೂ ಒಪ್ಪುವಂತಹ ಸುಂದರ ಸಾಮಾಜಿಕ ಮಂದಿರವನ್ನು ಹೆಣೆದರು. ಸಮಾಜದ ಸಕಲರಿಗೂ ಅನ್ವಯಿಸುವಂತಹ ಸಮಷ್ಠಿ ಪ್ರಜ್ಞೆ ದಾಸರ ಕೀರ್ತನೆಗಳ ಮುಖ್ಯ ಧ್ವನಿ.

ನಮ್ಮ ಸುತ್ತಲೂ ಇರುವ ಜನರ ಅನ್ಯಾಯ, ಹಿಂಸೆ, ಅಪನಂಬಿಕೆ, ಮೂಢನಂಬಿಕೆಗಳನ್ನು ಯಥಾವತ್ತಾಗಿ ಹೇಳಲು ನೈತಿಕ ಧೈರ್ಯ ಬೇಕು. ಭಾರೀ ಎದೆಗಾರಿಕೆ ಬೇಕು. ಭಿಡೆ ಮುಲಾಜು ಮೀರಿ ನಿಲ್ಲುವ ಗಟ್ಟಿತನ ಬೇಕು. ನಿಸ್ಪೃಹ ಬದುಕು ರೂಡಿಸಿಗೊಂಡಾಗ ಮಾತ್ರ ಅಂತಹ ಮಾತು ಬರಲು ಸಾಧ್ಯ. ಇಂತಹ ವ್ಯಕ್ತಿತ್ವವನ್ನು ಹರಿದಾಸರು ಮಾತ್ರ ಹೊಂದಿದ್ದಾರೆ. ಮಠ ಮಾನ್ಯ, ಸ್ವಕೀಯರು ಪರಕೀಯರು, ಪಂಡಿತ ಪಾಮರ, ಬಡವ ಬಲ್ಲಿದ, ಗೃಹಸ್ಥ, ಸ್ವಾಮಿ ಎಂಬ ಭೇದ ಅವರಿಗಿರಲಿಲ್ಲ. ಸಮಾಜದಲ್ಲಿ ತಾಂಡವ ಮಾಡುತ್ತಿದ್ದ ಲೋಭ ಮೋಹ ವಂಚನೆ ಡಾಂಬಿಕತೆ ನಾಸ್ತಿಕತೆ ಅನೈತಿಕತೆ ಹಿಂಸೆ ಮೇಲು ಕೀಲುಗಳನ್ನು ತಮ್ಮ ಕೀರ್ತನೆಗಳ ಮೂಲಕ ಹೊರ ಹಾಕಿದರು. ಅವುಗಳನ್ನು ಖಂಡಿಸಿ ಸುಮ್ಮನಿರದೇ ಅವುಗಳಿಂದ ಹೊರಬರುವ ಋಜು ಮಾರ್ಗವನ್ನು ಅವರಿಗೆ ಬೋಧಿಸಿದರು. ಅಂತಹ ಜನರು ಬದಲಾಗಿ ಶುದ್ಧ ಜೀವನಕ್ಕೆ ಬಂದಾಗ ಅವರನ್ನು ಅಂತಃಕರಣದಿಂದ ಮಾತನಾಡಿಸಿದರು. ಅವರ ನಂಬಿಕೊಂಡು ತಮ್ಮ ಜೊತೆ ಜೊತೆಯಾಗಿ ಜೀವನದ ಸಂಗ್ರಾಮದಲ್ಲಿ ಧುಮುಕಿದರು. ಆದ್ದರಿಂದಲೇ ಸಮಾಜದ ಮುಂದೆ ತಲೆ ಎತ್ತಿ ನಿಂತು ನುಡಿಯುವ ಹವಣು ಅವರಿಗೆ ಸಾಧಿಸಿತ್ತು. "ಡೊಂಕು ಬಾಲದ ನಾಯಕರೆ ನೀವೇನೂಟವ ಮಾಡಿದಿರಿ" ಎಂದಾಗಲೀ, 'ಉದರ ವೈರಾಗ್ಯವಿದು ನಮ್ಮ ಪದುಮನಾಭನಲ್ಲಿಲೇಶಭಕುತಿಯಿಲ್ಲ' ಎಂದು ಹಾಡಲು ಅವರಿಗೆ ಸಾಧ್ಯವಾಯಿತು.

ಇತರರನ್ನು ಹೀಗಳೆದು ವಿಡಂಬನೆ ಮಾಡಿ ಅಪಹಾಸ್ಯ ಮಾಡಿ ಇತರರ ದೋಷಗಳನ್ನು ಪಟ್ಟಿ ಮಾಡಿ ನಕ್ಕು ಸುಮ್ಮನೆ ಕೂಡುವ ಜಾಯಮಾನ ಹರಿದಾಸರದ್ದಲ್ಲ. ಆತ್ಮ ಶೋಧನೆಯನ್ನು, ವಿಮರ್ಶೆಯನ್ನು ಮಾಡಿಕೊಂಡ ದಾಸರು ಸಾಮಾಜಿಕ ಮೌಲ್ಯಗಳ ಪ್ರಸಾರ–ಪ್ರಚಾರ ಮಾಡಿದರು. ಹರಿದಾಸರು ತಮ್ಮ ಕಾಲಕ್ಕೆ ತಾವು ಬದುಕಿದ ಸಮಾಜಕ್ಕೆ ತಕ್ಕಂತೆ ಜನಾಭಿಮುಖವಾದ ಸಾಹಿತ್ಯ ನಿರ್ಮಿಸಿದರು. ಹೀಗಾಗಿ ದಾಸರ ಕೀರ್ತನೆಗಳಲ್ಲಿ ತಾಳ, ಲಯ, ಶೈಲಿ, ವಿಷಯಗಳಲ್ಲಿ ಕಾಲಕ್ಕೆ ತಕ್ಕ ಬದಲಾವಣೆಗಳನ್ನು ನಾವು ಕಾಣುತ್ತೇವೆ. ಶ್ರೀಪಾದರಾಜರಿಂದ ಪ್ರಾರಂಭಿಸಿ ಗುರು ಗೋವಿಂದ ದಾಸರವರೆಗೆ ಚೆಲ್ಲುವರಿದ ದಾಸ ಸಾಹಿತ್ಯದ ಭತ್ತಿಯಲ್ಲಿ ಇದನ್ನು ಕಾಣಬಹುದಾಗಿದೆ. ಇಂದಿಗೂ ನಿತ್ಯ ಹಾಡುವವರಿಂದಾಗಿ, ಭಜಿಸುವವರಿಂದಾಗಿ ಹರಿದಾಸ ಸಾಹಿತ್ಯ ಜೀವಂತ ಸಾಹಿತ್ಯ, ವಿಶ್ವ ಸಾಹಿತ್ಯ.

ಲೋಕ ಶಿಕ್ಷಣಕ್ಕಾಗಿ ತಮ್ಮನ್ನೇ ಮೀಸಲಿಟ್ಟ ಹರಿದಾಸರು ವ್ಯಾಸಕೂಟದಿಂದಲೇ

ಪ್ರೇರಣೆ ಪೋಷಣೆಗಳನ್ನು ಪಡೆದರೂ ಜನ ಮುಖ ಕ್ರಾಂತಿಯನ್ನು ಆರಂಭಿಸಿ ತನ್ಮೂಲಕ ಅಭೂತಪೂರ್ವ ಯಶಸ್ಸನ್ನು ಸಾಧಿಸಿದ್ದು ಸರ್ವವಿದಿತ. ಆದ್ದರಿಂದ ಹರಿದಾಸರು ಸಂಸ್ಕೃತಿ ಶಿಕ್ಷಕರು. ಹರಿದಾಸರ ವ್ಯಕ್ತಿತ್ವಕ್ಕೆ ಎರಡು ಮುಖ ಒಂದು ತಾವು ಹಾಗೂ ಭಗವಂತ, ಇನ್ನೊಂದು ತಾವು ಹಾಗೂ ಸುತ್ತಲಿನ ಸಮಾಜ. ಇದೇ ಅವರ ಸಮಾಜ ಪ್ರಜ್ಞೆಯ ಒಳಗುಟ್ಟು. ಸಾಮಾಜಿಕ ಬದುಕಿನಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿ ಆಧ್ಯಾತ್ಮವನ್ನು ಅರಳಿಸುವುದೇ ಅವರ ಕರ್ತವ್ಯವಾಗಿತ್ತು. ಸಮನ್ವಯ ದೃಷ್ಟಿ ಪರಮತಸಹಿಷ್ಣತೆ ಕೂಡ ಹರಿದಾಸರಲ್ಲಿ ಇಲ್ಲದಿಲ್ಲ.

"ಜಂಗಮರು ಜಗತ್ಪಾವನರು!
ಲಿಂಗಾಂಗಗಳು ನಿಸ್ಸಂಗಿಗಳು!
ಹಿಂಗದೆ ಸೀತಾಂಗಣಭಕ್ತರ ಪದ ಉಂಗುಟ ತೊಳೆದು
ಅಗ್ಗಣಿ ಧರಿಸೋ"

ಎಂದು ದಾಸರಿಗೆ ಹಾಡಲು ಸಾಧ್ಯವಾಯಿತು.

ತಪ್ಪಿತಸ್ಥರು ನರಕಕ್ಕೆ ಭಾಜನರು ಎಂದು ಹಿಯಾಳಿಸದೆ, "ಆದದ್ದಾಯಿತು ಇನ್ನಾದರೂ ಒಳ್ಳೆಯ ಹಾದಿ ಹಿಡಿಯೋ ಪ್ರಾಣಿ" ಎಂಬುದಾಗಿ ಎಚ್ಚರಿಸುವ ಅವರ ಮಾತಿನಲ್ಲಿ ಸಾಮಾಜಿಕ ಪ್ರಜ್ಞೆ ಸಾಂದ್ರ ಸುಂದರವಾಗಿ ಮೂಡಿಬಂದಿದೆ.

ಉಪಸಂಹಾರ

ಹರಿದಾಸರ ಮುಖ್ಯ ಉದ್ದೇಶವು ಅಧ್ಯಾತ್ಮ ಮತ್ತು ಭಕ್ತಿಯನ್ನು ಉದ್ದೀಪಿಸುವುದಾದರೂ ಅಂತಹ ಅಧ್ಯಾತ್ಮ ಸಾಧನೆಗೆ ಅಡ್ಡಿಯಾಗುವ ಲೌಕಿಕ ವಿಚಾರಗಳನ್ನು ತಿದ್ದಿಕೊಳ್ಳಬೇಕು ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿ ಸಮಜದಲ್ಲಿದ್ದ ತೋರಿಕೆಯ ಭಕ್ತಿ, ಅಹಂಕಾರ, ಮೇಲು–ಕೀಳು ಎನ್ನುವ ಪ್ರವೃತ್ತಿ ಇವುಗಳ ಬಗೆಗೆಲ್ಲ ತಮ್ಮ ಕೀರ್ತನೆಗಳ ಮೂಲಕ ಸಮಾಜದಲ್ಲಿ ಜಾಶಗೃತಿಯನ್ನು ಉಂಟುಮಡಲು ದಾಸರು ಯತ್ನಿಸಿದರು. ಶ್ರೀಪಾದರಾಜರು, ವ್ಯಾಸರಾಯರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರ ಕೀರ್ತನೆಗಳ ಹಿನ್ನೆಲೆಯಲ್ಲಿ ಸಾಮಾಜಿಕ ಪ್ರಜ್ಞೆಯುಳಿರುವುದನ್ನು ನಾವು ಕಾಣಬಹುದು.

ಪರಾಮರ್ಶನ ಸಾಹಿತ್ಯ

1. ಲಕ್ಷ್ಮೀನಾರಾಯಣ ಹೆಚ್.ಪಿ., ಹರಿದಾಸ ಸಾಹಿತ್ಯ ಅಧ್ಯಯನ, ರಂಗ ವಿಠಲ ಪ್ರಕಾಶನ, ಶ್ರೀ ಪಾದರಾಜ ಮಠ ಮುಳಬಾಗಿಲು 2012. ಪುಟ 185.
2. ಅದೇ., ಪುಟ 186.
3. ಲಕ್ಷ್ಮೀನಾರಾಯಣ ಹೆಚ್ ಪಿ, ಶ್ರೀ ಪಾದರಾಜ ದರ್ಶನ, ಶ್ರೀ ಪಾದರಾಜ ಮಠ, ಮುಳಬಾಗಿಲು. 2013. ಪುಟ 239.
4. ಅರಳು ಮಲ್ಲಿಗೆ ಪಾರ್ಥಸಾರಥಿ (ಸಂ.), ಶ್ರೀಶ್ರೀಪಾದರಾಜ ಸಂಪುಟ, ಶ್ರೀ ಪಾದರಾಜಮಠ. ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು, 2016, ಪುಟ 25.
5. ಡಾ. ನಾಗರತ್ನ ಟಿ ಎನ್., ಹರಿದಾಸ ಸಾಹಿತ್ಯ ಸೌರಭ, ಮೈಸೂರು ವಿಶ್ವವಿದ್ಯಾಲಯ ಮೈಸೂರು 2007. ಪುಟ 147.

6. ಡಾ. ತಿಪ್ಪೇರುದ್ರಸ್ವಾಮಿ ಎಚ್, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿವಿಕೆಮೂರ್ತಿ ಪ್ರಕಾಶನ, ಮೈಸೂರು 1968. ಪುಟ 89.
7. ಡಾ. ಸುನಂದಮ್ಮ ಆರ್., ದಾಸಸಾಹಿತ್ಯದಲ್ಲಿ ಜಾನಪದ ಅಂಶಗಳು, ಲಾವಣ್ಯ ಪ್ರಿಂಟರ್ಸ್, ಬೆಂಗಳೂರು 1994. ಪುಟ 126.
8. ಬೇಲೂರು ಕೇಶವದಾಸರು, ಶ್ರೀ ಕರ್ನಾಟಕ ಭಕ್ತ ವಿಜಯ, ಮೈಸೂರು, 1994. ಪುಟ 124.
9. ಡಾ. ವರದರಾಜ ರಾವ್.(ಸಂ.), ಶ್ರೀ ಪಾದರಾಜರ ಕೃತಿಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1987. ಪುಟ 163.
10. ಲಕ್ಷ್ಮೀನಾರಾಯಣ ಹೆಚ್.ಪಿ. ಹರಿದಾಸ ಸಾಹಿತ್ಯ ಅಧ್ಯಯನ, ರಂಗ ವಿಠಲ ಪ್ರಕಾಶನ, ಶ್ರೀ ಪಾದರಾಜ ಮಠ ಮುಳಬಾಗಿಲು 2012. ಪುಟ 189

❖❖❖

ನದಿಯ ನೀರಲಿ
ಮಿಂದ ಗೊಲ್ಲನು
ಹಾಡ ಹಾಡಿದ ಮುದದಲೆ
ಹಾಡ ಕೇಳಿದ
ಗೋವ ಕಿವಿಯದು
ನಿಮಿರಿ ನಿಂತಿತು ಚಣದಲೆ

ಕೊಕಟನೂರ ಗ್ರಾಮದ ಪ್ರಾದೇಶಿಕ ಚರಿತ್ರೆ

ಡಾ. ಸದ್ದಾಮ ಹುಸೇನ ಇ. ಮುಜಾವರ
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ಮತ್ತು ಪುರಾತತ್ವ ವಿಭಾಗ
ಅಂಜುಮನ್ ಕಲಾ, ವಿಜ್ಞಾನ & ವಾಣಿಜ್ಯ ಮಹಾವಿದ್ಯಾಲಯ, ವಿಜಯಪುರ–586104

ಪ್ರಸ್ತಾವನೆ

ಯಾವದೇ ಒಂದು ದೇಶ, ಸಾಮ್ರಾಜ್ಯ ನಿರ್ಮಾಣವಾಗಿವೆ ಎಂದಾದರೆ ಅದಕ್ಕೆ ತನ್ನದೇ ಆದ ಒಂದು ಇತಿಹಾಸ ಇರುತ್ತದೆ. ಅದೇ ರೀತಿ ಒಂದು ಹಳ್ಳಿ ಇದೆ ಎಂದರೆ ಇದು ಕೂಡಾ ಇತಿಹಾಸ ಇರುತ್ತದೆ. ಕೆಲವು ಕಡೆಗಳಲ್ಲಿ ಇತಿಹಾಸದ ದಾಖಲೆಗಳು ಲಭ್ಯವಾಗುತ್ತವೆ. ಇನ್ನು ಕೆಲವು ಕಡೆಗಳಲ್ಲಿ ಈ ಗ್ರಾಮಗಳ ಚರಿತ್ರೆಯನ್ನು ಗಮನಿಸಲು ದಾಖಲೆಗಳು ಲಭ್ಯವಾಗದೆಯು ಕೂಡಾ ಇರಬಹುದು. ಆದರೆ ಮೌಖಿಕ ದಾಖಲೆಗಳು ಸಿಗುತ್ತವೆ. ಅದರಂತೆ ಅಥಣಿ ತಾಲೂಕಿನ ಕೊಕಟನೂರ ಗ್ರಾಮವು ತನ್ನದೇಯಾದ ಒಂದು ಇತಿಹಾಸವನ್ನು ಹೊಂದಿದೆ. ಇದಕ್ಕೆ ಅನೇಕ ದಾಖಲೆಗಳು ಇವೆ. ಇಲ್ಲಿ ಶಾಸನಾಧಾರಿತವಾದವು, ಕೆಲವು ಸನ್ನದು ದಾಖಲೆಗಳು ಇರುವಂತೆಯೇ ವಕ್ಕ್ಗಳಿಂದ ಸಂಗ್ರಹಿಸಿದ ಮೌಖಿಕ ಇತಿಹಾಸವೂ ಇದೆ.

ಕೊಕಟನೂರ ಗ್ರಾಮದ ಪರಿಚಯ

ಬೆಳಗಾವಿ ಜಿಲ್ಲೆಯ ಸಂಸ್ಕೃತಿಕ ಇತಿಹಾಸವನ್ನು ವಸ್ತುನಿಷ್ಟವಾಗಿ ರಚಿಸುವಾಗ ಅಥಣಿ ಪರಿಸರದ ಕೊಡುಗೆ ಅಪಾರವಾಗಿದೆ. ಪ್ರಾಚೀನ ಶಾಸನಗಳು, ಸ್ಮಾರಕಗಳು, ದೇಗುಲಗಳು, ಕೋಟೆ ಕೊತ್ತಲುಗಳು, ಜೊತೆಜೊತೆಗೆ ಸಾಹಿತ್ಯಿಕ ಕುರುಹುಗಳು ಇತ್ಯಾದಿಯನ್ನು ಒಳಗೊಂಡು ಕರ್ನಾಟಕದ ಇತಿಹಾಸವನ್ನು ಅರ್ಥೈಸಿಕೊಳ್ಳಲು ಸಹಕರಿಸುವ ಪ್ರದೇಶಗಳಲ್ಲಿ ಕೊಕಟನೂರ ಗ್ರಾಮವು ಒಂದು.

ಇಂದು ಇತಿಹಾಸ ಎಂದಾಗ, ನಾವು ಈಗಾಲೆ ಓದಿರುವ ಹಾಗೂ ಓದುತ್ತಲಿರುವ ಪ್ರಸಿದ್ಧ ಸಾಮ್ರಾಜ್ಯಗಳು ಶ್ರೇಷ್ಟ ಮನೆತನಗಳು ಆದ ಕದಂಬರು, ಗಂಗರು, ಶಾತವಾಹನರು, ಬಾದಾಮಿಯ ಚಾಲುಕ್ಯರು ಕಂಚಿಯ ಪಲ್ಲವರು ಕಲಚೂರಿಗಳು ಹೊಯ್ಸಳರು, ಉತ್ತರದ ಮುಸ್ಲಿಂ ದಾಳಿಕೋರರು ಮುಂತಾದ ಚಿತ್ರಣವೇ ಮೂಡುತ್ತದೆ. ಇಂತಹ ಬೃಹತ್ ಸಾಮ್ರಾಜ್ಯಗಳ ಕಾಲದಲ್ಲಿ ಅಂತಹ ರಾಜ್ಯಗಳ ಯಾವುದೋ ಒಂದು ಮೂಲೆಯಲ್ಲಿರುವ ಇತಿಹಾಸದಲ್ಲಿ ನಾವು ಕೇಳಿರದ ಆದರೆ ಬಹುದೊಡ್ಡ ಸಾಮ್ರಾಜ್ಯವೊಂದರ ಇತಿಹಾಸಕ್ಕೆ ಚಿರಕಾಣಿಕೆಯನ್ನು ನೀಡಿದ ಮರೆಯಲ್ಲಿರುವ ಮಾಣಿಕ್ಯಗಳೆ ನಮ್ಮ ಗ್ರಾಮಗಳು. ಅಂತಹ ನಿರ್ಲಕ್ಷಿತ ಪ್ರದೇಶಗಳ ಒಟ್ಟಾರೆ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಅಧ್ಯಯನಕ್ಕೆ ತೆಗೆದುಕೊಂಡಾಗ ನಮಗೆ ಹೊಸ ಆಯಾಮ ಕಾಣಸಿಗುತ್ತದೆ.

ಇಂತಹ ಸಾಂಸ್ಕೃತಿಕವಾದ ಶ್ರೀಮಂತ ಇತಿಹಾಸವನ್ನು ನೀಡುವ ಗ್ರಾಮಗಳಲ್ಲಿ ಕೊಕಟನೂರ ಗ್ರಾಮವು ಕೂಡಾ ಒಂದು. ಪ್ರಾಚೀನ ಕಾಲದ ವಿವಿಧ ಜನವಸತಿ ಇತಿಹಾಸ

ಕಾಲದ ಸ್ಮಾರಕಗಳು, ದೇಗುಲಗಳು, ಶಾಸನಗಳು, ನಾಣ್ಯಗಳು ಕೋಟೆ ಕೊತ್ತಲುಗಳು ವಾಡೆಗಳು ಇಂದು ಕೊಕಟನೂರಿನ ಪರಿಸರದಲ್ಲಿ ಕಾಣಬಹುದಾಗಿದೆ. ಕೊಕಟನೂರ ಗ್ರಾಮದ ಸುತ್ತಲಿನ ಅಂದರೆ ಅಥಣಿ ತಾಲೂಕಿನ ಕೆಲ ಗ್ರಾಮಗಳಲ್ಲಿ ಲಭ್ಯವಾಗಿರುವ ಹಲವು ಶಾಸನಗಳು ಶಿಲಾಯುಗದ ಚಿತ್ರಣವನ್ನು ಬಿಡಿಸಿಟ್ಟರೆ ಈ ಪ್ರದೇಶದಲ್ಲಿನ ಕೆಲ ಗ್ರಾಮಗಳು ಇತಿಹಾಸ ಪೂರ್ವಯುಗದ ಅಮೂಲ್ಯ ಮಾಹಿತಿಯನ್ನು ತೆರೆದಿಡುತ್ತವೆ. ಇಂತಹ ಕೆಲ ಗ್ರಾಮಗಳಲ್ಲಿ ವಿದ್ವಾಂಸರುಗಳಾದ ಡಾ. ಆರ್.ಎಸ್. ಪಂಚಮುಖಿ ಡಾ. ಅ. ಸುಂದರ ಹಾಗೂ ಖ್ಯಾತ ಸಂಶೋಧಕರುಗಳಾದ ಡಾ.ಬಿ.ಆರ್. ಹಿರೇಮಠ. ಶ್ರೀಮತಿ ಡಾ. ಹನುಮಾಕ್ಷಿ ಗೂಗಿ, ಡಾ.ಜಿ.ಎನ್.ಉಪಾಧ್ಯ, ಡಾ.ವ್ಹಿ.ಎಸ್. ಮಾಳಿ, ಪ್ರೊ. ಆರ್.ಎನ್. ಗುರವ ಮೊದಲಾದ ಸಂಶೋಧಕರು ಹಾಗೂ ವಿದ್ವಾಂಸರುಗಳು ಸಂಶೋಧನೆಗಳನ್ನು ಕೈಗೊಂಡು ಇಲ್ಲಿನ ಅಮೂಲ್ಯ ಮಾಹಿತಿಯನ್ನು ತಾವುಗಳು ಕಟ್ಟಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ.

ಅಥಣಿ ತಾಲೂಕಿನ ಐನಾಪೂರ, ರೋಲಿ, ಸಿಂದಗಿ, ಗ್ರಾಮಗಳಲ್ಲಿ ಆದಿ ಶಿಲಾಯುಗ ಸಂಸ್ಕೃತಿಯ ವಿವಿಧ ಉಪಕರಣಗಳು ಲಭ್ಯವಾಗಿವೆ. ಅಥಣಿ ತಾಲೂಕಿನಲ್ಲಿ ಬರುವ ಶೇಗುಣಸಿ, ಸತ್ತಿ, ಸಪ್ತಸಾಗರ ಮಂಗಸೂಳಿ, ಕೊಕಟನೂರಿನ ಹತ್ತಿರದ ಕೊಡಗಾನೂರ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಿವೆ. ಕೊಕಟನೂರಿಗೆ ಹತ್ತಿರದ ಇನ್ನೊಂದು ಪ್ರಮುಖ ಗ್ರಾಮಗಳಾದ ಐಗಳಿ, ಬನ್ನೂರ ಕೊಟ್ಟಲಗಿ ಬನ್ನೂರ ತೆಲಸಂಗಗಳಲ್ಲಿ ಕಬ್ಬಿಣಯುಗದ ಕುರುಹುಗಳು ಲಭ್ಯವಾಗಿವೆ.

ಅಥಣಿ ಪರಿಸರವು ಕನ್ನಡ ನಾಡನ್ನಾಳುತ್ತ ಬಂದ ವಿವಿಧ ಅರಸು, ಮಹಾಮಂಡಳೇಶ್ವರ, ಮಹಾಸಾಮಂತ, ಪ್ರಭುಗಾವುಂಡ, ಗಾವುಂಡ ಮನೆತನಗಳ ನೇರ ಪ್ರಭಾವಕ್ಕೆ ಒಳಪಡುತ್ತ ಮುಂದುವರಿದು ಬಂದಿರುವುದು ಚಾರಿತ್ರಿಕ ದಾಖಲೆಗಳಿಂದ ಮನದಟ್ಟಾಗುತ್ತದೆ. ಈ ಭಾಗವು ಪ್ರಮುಖವಾಗಿ ಕದಂಬರು, ಬಾದಾಮಿ ಚಾಲುಕ್ಯರು ರಾಷ್ಟ್ರಕೂಟರು ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಯಾದವರು ಬಿಜಾಪೂರ (ವಿಜಯಪುರ)ದ ಆದಿಲ್ ಷಾಹಿಗಳಿಂದ ಆಳಲ್ಪಟ್ಟಿವೆ.

ಕೊಕಟನೂರಿನಲ್ಲಿ ದೊರೆತ ಪ್ರಮುಖ ಶಾಸನಗಳ ವಿವರಣೆ

ಶಾಸನಗಳನ್ನು ಆಧಾರವಾಗಿಟ್ಟು ಈಗ ಕೊಕಟನೂರಿನ ಐತಿಹಾಸಿಕ ಪರಿಚಯವನ್ನು ಮಾಡಿಕೊಳ್ಳಬಹುದು. ಅಥಣಿ ತಾಲೂಕಿನ ಶಾಸನಗಳಲ್ಲಿ ಕೊಕಟನೂರ ಗ್ರಾಮವನ್ನು "ಕೊರ್ಗ್ಗಟನೂರು", "ಕೊಗ್ಗಟನಗ್ರಹಾರ" ಎಂದು ಹೆಸರಿಸಲಾಗಿದೆ. ಕೊರ್ಗಟ್ಟನೆಂಬ ವ್ಯಕ್ತಿ ಈ ಗ್ರಾಮದ ಸ್ಥಾಪಕನಾಗಿರಬಹುದೆಂದು ವಿದ್ವಾಂಸರಾದ ಡಾ. ವ್ಹಿ.ಎಸ್. ಮಾಳಿ ಅಭಿಪ್ರಾಯಪಟ್ಟಿದ್ದಾರೆ. ಈ ಕೊಕಟನೂರ ಗ್ರಾಮವು "ಕರಹಡ", "ನಾಲ್ಸಾಸಿರ" ಕರಹಡ 4000 ಪ್ರಾಂತ ಅದರ ಉಪ ವಿಭಾಗ "ಕನ್ನಂಬಡೆ ಮುನ್ನೂರು", "ಕನ್ನಂಬಡೆ 300" ಹಾಗೂ "ಮಿರಿಂಜೆ ಮುಸ್ಸಾಸಿರ" ಮಿರಿಂಜೆ 3000ರಲ್ಲಿ ಬರುತ್ತಿದ್ದವು ಎಂಬ ಮಾಹಿತಿಯನ್ನು ಕೊಕಟನೂರ ಹಾಗೂ ತೆಲಸಂಗದ ಶಾಸನಗಳು ತಿಳಿಸುತ್ತವೆ. ಇದು ಒಂದು ಪ್ರಮುಖ ಅಗ್ರಹಾರವಾಗಿತ್ತು.

ಹಿಂದೆ ಕೊಕಟನೂರ ಗ್ರಾಮವೇ ವಿಶೇಷವಾದ ವೇದಾಧ್ಯನದ ಕೇಂದ್ರವಾಗಿದ್ದು ಈ ಪ್ರದೇಶಕ್ಕೆ ಸುಮಾರು ಸಾವಿರಕ್ಕೂ ಅಧಿಕ ವೇದಪಟುಗಳು ಇಲ್ಲಿಗೆ ಬಂದು

ವೇದಾಧ್ಯಯನವನ್ನು ಮಾಡುತ್ತಿದ್ದರು. ಈ ಗ್ರಾಮದಲ್ಲಿನ ಪಾಪನಾಶಿ ದೇವಾಲಯದ ಹತ್ತಿರ ಈ ವೇದಾಧ್ಯಯನದ ಪ್ರಕ್ರಿಯೆಯು ಸಾಗುತ್ತಿತ್ತು ಎಂಬುದು ಇಲ್ಲಿನ ಶಾಸನಾದಿ ದಾಖಲೆಗಳಿಂದ ತಿಳಿದುಬರುತ್ತದೆ. ವಿಶೇಷವಾಗಿ ಇಲ್ಲಿ ತಪೋಧನ ವಿದ್ಯಾರ್ಥಿಗಳಿಗೆ (ಮಠದ ಸ್ಥಾನಾಚಾರ್ಯರಾಗುವ) ತರಬೇತಿಯನ್ನು ನೀಡಲಾಗುತ್ತಿತ್ತು ಗೊತ್ತಾಗುತ್ತದೆ. ಕ್ರಿ.ಶ.1050–51ರಲ್ಲಿ ರಚಿತವಾದ ಒಂದು ಪ್ರಮುಖ ಶಾಸನವು 'ಕಲ್ಯಾಣ ಚಾಲುಕ್ಯ ಸಾಮ್ರಾಟ ತ್ರೈಲೋಕ್ಯ ಮಲ್ಲನಿಗೆ ಸಂಬಂಧಿಸಿದ್ದಾಗಿದೆ.

ಅದರಂತೆ "ಕರಹಡ ನಾಲ್ಸಾಸಿರ" ಕರಹಡ 4000 ಪ್ರಾಂತ ಹಾಗೂ "ಮಿರಿಂಜೆ ಮುಸ್ಸಾಸಿರ"(ಮಿರಿಂಜೆ 3000)ವನ್ನು ಆಳುತ್ತಿದ್ದ ತ್ರೈಲೋಕ್ಯಮಲ್ಲನ ಮಹಾಮಂಡಳೇಶ್ವರ "ಜೊಗೆಪೆಯ್ಯ" ಅರಸ ಹಾಗೂ ಅವನ ರಾಣಿ ಪೊಲ್ಲಿಕಬ್ಬೆ ತ್ರೈಪುರುಷ(ಶಿವ, ವಿಷ್ಣು, ಬ್ರಹ್ಮ) ದೇವಾಲಯಕ್ಕೆ ದಾನ ಬಿಟ್ಟ ವಿಷಯ ಈ ಶಾಸನದಲ್ಲಿ ಉಲ್ಲೇಖವಿದೆ. ಅದರಂತೆ ಕಲಚೂರಿಗಳ ಮನೆತನದ ಬಿಜ್ಜಳ ಹಾಗೂ ಅವನ ಮಗ ರಾಯಮುರಾರಿ ಸೋವಿದೇವನ ಕಾಲದಲ್ಲಿ ರಚನೆಗೊಂಡ ಶಾಸನಗಳು ಇವಾಗಿವೆ. ಈಗಿನ ಕಲ್ಮೇಶ್ವರ ದೇವಾಲಯದ ಹೊರಗೋಡೆಯಲ್ಲಿರುವ ಶಾಸನದಲ್ಲಿ ಪೆರ್ಮಾಡಿಯ ಮಗ ಬಿಜ್ಜಳನಿಗೆ "ಮೈಲುಗಿ" ಎಂಬ ಸಹೋದರನಿದ್ದನೆಂದು ತಿಳಿಸುತ್ತದೆ. ಅಲ್ಲದೆ ಬಿಜ್ಜಳ "ಪಾಪನಾಶಿ" ದೇವಾಲಯಕ್ಕೆ ದತ್ತಿಬಿಟ್ಟ ಅಸ್ಪಷ್ಟ ಶಾಸನವಿದೆ. ಬಿಜ್ಜಳ ಹಾಗೂ ಅವನ ನಂತರ ಪಟ್ಟಕ್ಕೆ ಬಂದ ರಾಯಮುರಾರಿ ಸೋವಿದೇವನಿಂದ ದತ್ತಿಯನ್ನು ಪಡೆದ ಪಾಪನಾಶಿ ದೇವಾಲಯಕ್ಕೆ ಹೊಂದಿಕೊಂಡು ಒಂದು ಮಠವಿದ್ದು ಅದೊಂದು(ಅಗ್ರಹಾರ) ಆಗಿತ್ತೆಂಬುದನ್ನು ಹಾಗೂ ಕ್ರಿ.ಶ. 1169ರ ಶಾಸನದಲ್ಲಿ ರಾಯಮುರಾರಿ ಸೋವಿದೇವನು ಆಚಾರ್ಯ ವಿದ್ಯಾರಾಶಿ ಪಂಡಿತರಿಗೆ ಜನವಾಡ ಗ್ರಾಮವನ್ನು ದಾನವಾಗಿ ಬಿಟ್ಟ ವಿಷಯ ತಿಳಿದುಬರುತ್ತದೆ. ವಿದ್ಯಾರಾಶಿ ಪಂಡಿತರು ಪಾಪನಾಶಿ ದೇವಾಲಯದ ಸ್ಥಾನಾಚಾರ್ಯರು ಆಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕೊಕಟನೂರಿನ ಇನ್ನೊಂದು ಶಾಸನ ದೇವಗಿರಿ ಯಾದವರ ಪ್ರಸಿದ್ಧ ಅರಸನಾದ "ಸಿಂಘಣದೇವನ" ಕ್ರಿ.ಶ.1210–35 ಕಾಲದ್ದಾಗಿದೆ. ಇದು ಚಂದ್ರೇಶ್ವರ ದೇವಾಲಯದಲ್ಲಿದ್ದು. ಇದರಲ್ಲಿ ಅರಸನಾದ ಸಿಂಘಣ ದೇವನು ಹಲವಾರು ಬಿರುದುಗಳನ್ನು ಪಡೆದುಕೊಂಡಿದ್ದನು. ಎಂದು ತಿಳಿದುಬರುತ್ತದೆ. ಈ ಶಾಸನದಲ್ಲಿ ಉಲ್ಲೇಖಿಸಿರುವಂತೆ ಸಮಸ್ತ ಭುವನಕ್ಕೆ ಅಧಿಪತಿಯಾಗಿರುವವನು ಉದಾ: ಸಮಸ್ತ ಭುವನಾಶ್ರಯಂ, ಶ್ರೀಪೃಥ್ವಿ ವಲ್ಲಭಂ, ಮಹಾರಾಜಾಧಿರಾಜ, ಪರಮೇಶ್ವರ ಯಾದವಕುಲಕಮಲಕಲಿಕಾವಿಕಾಸಂ, ಯಾದವ ನಾರಾಯಣಂ, ಪ್ರತಾಪ ಚಕ್ರವರ್ತಿ ಇತ್ಯಾದಿ ಬಿರುದಾವಳಿಗಳು ಉಪಾಧಿಗಳು ನಮಗೆ ಲಭ್ಯವಾಗುತ್ತವೆ. ಈ ಶಾಸನದಲ್ಲಿ ಬಾಯ್ಯಿ ದೇವನ ವೃತ್ತಾಂತವನ್ನು ಕುರಿತು ಹೇಳಲಾಗಿದೆ. ಕೊಗ್ಗಟ್ಟನೂರಿನ ಅಗ್ರಹಾರದಲ್ಲಿ 'ಭಾಯಿದೇವ'ನೆಂಬ ಶೈವ ಬ್ರಾಹ್ಮಣನು ಪ್ರಸಿದ್ಧನಾಗಿದ್ದನು. ಆತನ ಶಿಷ್ಯರಲ್ಲಿ ಮಲ್ಲಿದೇವನು ಅಥವಾ ಮಲ್ಲರಸಯ್ಯನು ಬಹಳ ಪ್ರಸಿದ್ಧನಾಗಿದ್ದನು. ಅಥಣಿ ತಾಲೂಕಿನ ಅನೇಕ ಗ್ರಾಮಗಳಲ್ಲಿ 'ಅಗ್ರಹಾರ'ಗಳೆಂಬ ವಿದ್ಯಾಕೇಂದ್ರಗಳಿದ್ದ ಬಗ್ಗೆ ಶಾಸನಗಳಿಂದ ತಿಳಿದು ಬರುತ್ತದೆ.

ಕೊಕಟನೂರ, ಸತ್ತಿ, ಮದಭಾವಿ, ತೆಲಸಂಗ, ಕಾಗವಾಡ, ಕೊಟ್ಟಲಗಿ, ಐನಾಪೂರ, ಇತ್ಯಾದಿ. ಈ ವಿದ್ಯಾಕೇಂದ್ರಗಳಿಗೆ ದಾನಕೊಟ್ಟ ಅನೇಕ ಉದಾಹರಣೆಗಳನ್ನು ಶಾಸನಗಳಲ್ಲಿ

ಉಲ್ಲೇಖಿಸಲಾಗಿದೆ. ಕೊರ್ಗಟನೂರಿನ ವೈಶಾಗ್ರಣಿ 'ಕೂಚಿಶಟ್ಟಿ' ಇಲ್ಲಿ ತ್ರೈಪುರುಷ ದೇವಾಲಯವನ್ನು ನಿರ್ಮಿಸಿ, ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ಮತ್ತು ಓದಿಸುವ ಪಂಡಿತರಿಗೆ ದಾನಕೊಟ್ಟ ವಿಷಯ ಕ್ರಿ.ಶ.1050–51ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಕೊಕಟನೂರಿನ ಚಾರಿತ್ರಿಕ ದೇಗುಲಗಳು ಹಾಗೂ ಸ್ಮಾರಕಗಳು

ದೇವಾಲಯಗಳು ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ಪೂಜೆ, ಆರಾಧನೆ, ಧಾನ, ದತ್ತಿ, ನ್ಯಾಯ ವ್ಯವಸ್ಥೆ, ವಿವಿಧ ಸೇವಾಕಾರ್ಯಗಳು, ದೇವದಾಸಿ ಪದ್ಧತಿ, ವಾಸ್ತುಶಿಲ್ಪ, ಹೀಗೆ ಹತ್ತಾರು ಸಂಗತಿಗಳೊಂದಿಗೆ ದೇವಾಲಯಗಳು ಸಂಬಂಧ ಪಡೆದಿವೆ.

ಖ್ಯಾತ ಸಂಶೋಧಕರಾದ ಎಮ್. ಚಿದಾನಂದಮೂರ್ತಿ ಅವರು ಆ ಕುರಿತು ಹೀಗೆ ಹೇಳುತ್ತಾರೆ. "ಪ್ರಾಚೀನ ಕರ್ನಾಟಕದಲ್ಲಿಯಾದರೋ, ಅವು ಜೀವಂತ ಕೇಂದ್ರಗಳು ಮಾತ್ರವಲ್ಲಾ; ಇಡೀ ನಾಡಿನ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರಗಳು ಆಗಿದ್ದವು... ಭಾರತದ ಉಳಿದ ಕಡೆ ಹೇಗಾದರೂ ಇರಲಿ, ಪ್ರಾಚೀನ ಕರ್ನಾಟಕದ ಜೀವನದ ಅವಿಭಾಜ್ಯ ಅಂಗಗಳಾಗಿ ಕಾಣಿಸುತ್ತವೆ ಈ ನಮ್ಮ ದೇವಸ್ಥಾನಗಳು." ಕೊಕಟನೂರ ಗ್ರಾಮವು ಇದಕ್ಕೆ ಹೊರತಾಗಿಲ್ಲ. ಪ್ರಾಚೀನ ಕಾಲದ ಕುರುಹುಗಳಿಂದ ಹಿಡಿದು ಪ್ರಸ್ತುತ ಕಾಲದವರೆಗಿನ ಅನೇಕ ದೇಗುಲಗಳು ಹಾಗೂ ಕಟ್ಟಡಗಳನ್ನು ಇಲ್ಲಿ ಕಾಣಬಹುದಾಗಿದೆ.

ಕೊಕಟನೂರ ಗ್ರಾಮದ ದೇವಾಲಯಗಳನ್ನು ಪ್ರಮುಖವಾಗಿ ಎರಡು ಭಾಗಗಳಾಗಿ ಅಧ್ಯಯನಕ್ಕೆ ತೆಗೆದುಕೊಂಡು ನೋಡಿದಾಗ ನಮಗೆ ಊರ ಒಳಗಿರುವ ದೇವಾಲಯಗಳು ಹಾಗೂ ಊರ ಹೊರಗಿರುವ ದೇವಾಲಯಗಳು ಎಂದು ಎರಡು ಬಗೆಯಲ್ಲಿ ನಾವು ವಿಭಾಗಿಸಬಹುದಾಗಿದೆ.

ತ್ರಯಂಬಕೇಶ್ವರ ದೇವಸ್ಥಾನ ಅಥವಾ ಕಲ್ಮೇಶ್ವರ ದೇವಸ್ಥಾನ

ಕೊಕಟನೂರು ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಒಂದು ಪ್ರಮುಖ ಗ್ರಾಮ. ಅಥಣಿಯಿಂದ 16ಕಿ.ಮೀ ಧೂರದಲ್ಲಿರುವ ಈ ಸ್ಥಳ ಪ್ರಾಚೀನ ಸ್ಥಳವು ಹೌದು. ಕೊಕಟನೂರಿನ ಶಾಸನಗಳಲ್ಲಿ ಕೆಲವು ದೇವಾಲಯಗಳು ಉಲ್ಲೇಖಿತವಾಗಿವೆ. ಅಂತಹ ಪ್ರಮುಖವಾದ ದೇವಾಲಯಗಳಲ್ಲಿ ತ್ರಯಂಬಕೇಶ್ವರ ಅಥವಾ ಸ್ಥಳೀಯವಾಗಿ ಕಲ್ಮೇಶ್ವರ ಎಂದು ಕರೆಯಲ್ಪಡುವ ದೇವಾಲಯವು ಒಂದು. ಪೂರ್ವಕ್ಕೆ ಅಭಿಮುಖವಾಗಿರುವ ತ್ರಯಂಬಕೇಶ್ವರ ದೇವಾಲಯವು ಪವೇಶ ದ್ವಾರದ ಮುಂಭಾಗದಲ್ಲಿ ನಾಲ್ಕು ಸ್ಥಂಭಗಳ ಮುಖಮಂಟಪವನ್ನು ಹೊಂದಿದೆ.

ಬಹುತೇಕ ಈ ದೇವಾಲಯವು ಕೊಕಟನೂರಿನಲ್ಲಿ ಲಭ್ಯವಾಗಿರುವ ಶಾಸನಗಳಲ್ಲಿರುವ ಪುರಾತನ ತ್ರೈಪುರುಷ ದೇವಾಲಗಿರಬಹುದು ಎಂದು ಪ್ರಖ್ಯಾತವಾದ ಇತಿಹಾಸತಜ್ಞ ಸೂರ್ಯನಾಥ ಕಾಮತರು ಅಭಿಪ್ರಾಯವನ್ನು ಪಟ್ಟಿದ್ದಾರೆ. ಮಹಾಮಂಡಳೇಶ್ವರ ಜೊಗಪ್ಪರಸನು ಕೂಚಿ ಶೆಟ್ಟಿಯೆಂಬುವನೊಡನೆ ಸೇರಿ ನಿರ್ಮಿಸಿದ ಈ ದೇವಾಲಯಕ್ಕೆ "ಜನ್ನವಾಡ" ಅಂದರೆ ಇಂದಿನ ಅಥಣಿ ತಾಲೂಕಿನ ನದಿತಟದ ಗ್ರಾಮವಾಗಿರುವ ಜನವಾಡ ಗ್ರಾಮವನ್ನು ದಾನಮಾಡಿರುವುದಾಗಿ

ಶಾಸನವು ತಿಳಿಸುತ್ತದೆ. ಮಧ್ಯದ ನವರಂಗದಲ್ಲಿ ಕಲ್ಯಾಣದ ಚಾಲುಕ್ಯರ ಕಾಲದ ಅತ್ಯಂತ ಸುಂದರ ಕೆತ್ತನೆಯ ನಾಲ್ಕು ಸ್ಥಂಭಗಳಿದ್ದು ಒಳಭಾವಣಿಯಲ್ಲಿ ಆಳಕ್ಕೆ ಕೆತ್ತಿದ ಸುಂದರ ಭುವನೇಶ್ವರಿ ಇದೆ. ಗರ್ಭಗೃಹದ ಪ್ರವೇಶದ್ವಾರದ ಎರಡು ಬದಿಗಳಲ್ಲಿ ಜಾಲಂಧ್ರಗಳಿವೆ. ಮುಖಮಂಟಪದಲ್ಲಿರುವ ಅಲಂಕೃತ ಸದಾ ಸ್ಫೂರ್ತಿಯನ್ನು ನೀಡಿದ ಪೀಠ ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ತಾಂಡವೇಶ್ವರ, ಮಹಿಷಾಸುರ ಮರ್ದಿನಿ ಇತ್ಯಾದಿ ದೇವತೆಗಳ ಸುಂದರವಾದ ಉಬ್ಬು ಶಿಲ್ಪಗಳಿವೆ.

ಈ ದೇವಾಲಯದಲ್ಲಿ ಮೂರು ಶಾಸನಗಳು ಇವೆ. ಕಲ್ಮೇಶ್ವರ ಗುಡಿಯೊಳಗೆ ಇರುವ ಕ್ರಿ.ಶ.1235ರ ಯಾದವ ಸಿಂಘಣ ಶಾಸನವು ಕರಹಡ ನಾಲ್ಸಾಸಿರ ಉಪವಿಭಾಗವಾಗಿದ್ದ ಕನ್ನಂಬಡ ಮುನ್ನೂರರಲ್ಲಿ ಸೇರಿದ ಕೊರ್ಗಟನೂರು "ಮಹಾಗ್ರಹಾರದ ಮಹಾಪ್ರಭು ಪರವಾರಬಲ್ಲಹ ಮಲ್ಲಮಯ್ಯನು ಪರವಾರ ಬಲ್ಲಪ ಭಾವರಸನಿಗೆ ಸೇರಿದ್ದ ಭಾವ ಶುದ್ಧ ದೇವಾಲಯಕ್ಕೆ ಭೂಮಿ ಹಾಗೂ ತೋಟವನ್ನು ದಾನ ಮಾಡಿದ್ದನೆಂದು ಉಲ್ಲೇಖವಿದೆ". ಅದೇ ದೇವಾಲಯಕ್ಕೆ ಸಂಬಂಧಿಸಿದ ದತ್ತಿ ಶಾಸನವು ಆಗ ಕನ್ನಂಬಡದ ದೇಶಿಯ ದಣ್ಣಾಯಕ ನಾಗರಸನ ಹೆಸರಿನಲ್ಲಿ ನೀಡಿರುವಂತೆ ತೋರುತ್ತದೆ. ಅಲ್ಲಿಯೇ ಇರುವ ಬಹಳವೇ ಹಾಳಾಗಿರುವ ಮೂರನೆಯ ಶಾಸನವು ಕೊರ್ಗಟನೂರು ಪಾಪನಾಶಿ ದೇವಾಲಯಕ್ಕೆ ನೀಡಿರುವ ಕೆಲ ದಾನಗಳನ್ನು ಉಲ್ಲೇಖಿಸುತ್ತದೆ.

ಗ್ರಂಥ ಋಣ

1. ಮಾಳಿ ವ್ಹಿ.ಎಸ್., ಅಥಣಿ ತಾಲೂಕಿನ ಸಮಗ್ರ ದರ್ಶನ
2. ಅಶೋಕ ನರೋಡೆ, ಅಥಣಿ ತಾಲೂಕಿನ ಹಿರಿಮೆಗರಿಮೆ
3. ಸೂರ್ಯನಾಥ ಕಾಮತ, ಕರ್ನಾಟಕ ಗೆಝೆಟಿಯರ್ ದಶಮಾನೋತ್ಸವದ ಸಂಚಿಕೆ
4. ಬಾಳಣ್ಣ ಶೀಗಿಹಳ್ಳಿ (ಸಂ), ಬೆಳಗಾವಿ ಜಿಲ್ಲೆಯ ವೀರಶೈವ ದೇಸಗತಿಗಳು

❖❖❖

ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಒಂದು ಒಳನೋಟ

ಡಾ. ಸುಂದ್ರೇಶ ಎನ್.
ಸಹಾಯಕ ಪ್ರಾಧ್ಯಾಪಕರು, ಮುಖ್ಯಸ್ಥರು, ಇತಿಹಾಸ ವಿಭಾಗ
ಸರ್ಕಾರಿ ಪ್ರಥಮದರ್ಜೆ ಕಾಲೇಜು, ಬನ್ನೂರು, ಮೈಸೂರು ಜಿಲ್ಲೆ

ಪೀಠಿಕೆ

ಕನ್ನಡ ನಾಡು ನುಡಿ ಸಂಸ್ಕೃತಿಗಳ ರಕ್ಷಣೆಗಾಗಿ ಮತ್ತು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣದ ಕನಸನ್ನು ಹೊತ್ತು ನೂರು ವರ್ಷಗಳ ಹಿಂದೆ ಪ್ರಕಟವಾದ ಆಲೂರು ವೆಂಕಟರಾಯರ 'ಕರ್ನಾಟಕ ಗತವೈಭವ' ಗ್ರಂಥವು ಅಂದಿಗಿಂತ ಇಂದು ಹೆಚ್ಚು ಪ್ರಸ್ತುತ ಎನಿಸುವಂತಿರುವುದು ವಿಪರ್ಯಾಸವೇ ಸರಿ. 1920ರ ದಶಕದಲ್ಲಿ ಈ ಕೃತಿಯು ಕನ್ನಡಿಗರಲ್ಲಿ ಭಾಷಾಭಿಮಾನ ಮೂಡಿಸಿ ಕನ್ನಡತನವನ್ನು ಗಟ್ಟಿಗೊಳಿಸುವ ಮತ್ತು ಕರ್ನಾಟಕವನ್ನು ಕಟ್ಟುವ ಪ್ರಯತ್ನ ಮಾಡಿದ್ದು ಈಗ ಇತಿಹಾಸವಾಗಿದೆ. ಈ ಕೃತಿಯಲ್ಲಿ 15 ಪ್ರಕರಣಗಳ(ಅಧ್ಯಾಯಗಳು) ಮೂಲಕ ಕನ್ನಡಿಗರಿಗೆ ತಮ್ಮ ನೆಲ, ಜಲ, ನಾಡು, ನುಡಿ, ಇತಿಹಾಸದ ವೈಭವ ವರ್ಣನೆಗಳು, ಭವ್ಯಸ್ಮಾರಕಗಳು, ಧಾರ್ಮಿಕ ಔನತ್ಯ, ವಿಸ್ತಾರ ಇವೆಲ್ಲವುಗಳ ಜೊತೆ ಕರ್ನಾಟಕ ಒಂದು ಮೃತರಾಷ್ಟ್ರವಲ್ಲ ಬದಲು ಅದೊಂದು ಭವ್ಯ ಇತಿಹಾಸ ಹೊಂದಿರುವ ರಾಜ್ಯ ಎಂದು ಹಲವಾರು ಇತಿಹಾಸದ ನಿದರ್ಶನಗಳ ಮೂಲಕ ಅಂದರೆ ಶಾಸನಗಳು, ಸ್ಮಾರಕಗಳು, ಸಾಹಿತ್ಯಾತ್ಮಕ ವರ್ಣನೆಗಳ ಮೂಲಕ ತಿಳಿಸಿದ್ದಾರೆ. ಲೇಖಕರ ಉದ್ದೇಶವೇ ಭಾವನಾತ್ಮಕವಾಗಿ ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸುವುದು; ಕನ್ನಡದ ಮನಸ್ಸುಗಳನ್ನು ಜಾಗೃತಗೊಳಿಸುವುದು. ಆಲೂರರು ಪಟ್ಟ ಶ್ರಮವನ್ನು ಮತ್ತೆ ನೆನೆಪಿಸುವ ಕಾರ್ಯದ ಭಾಗವಾಗಿ ಈ ಲೇಖನವಿದೆ.

ಮೊದಲನೆಯದಾಗಿ ಆಲೂರು ವೆಂಕಟರಾಯರು ಈ ಕೃತಿಯನ್ನು ಬರೆಯಲು ಸ್ಫೂರ್ತಿಯಾಗಿದ್ದು 1905ರ ಮೇ 04ರಂದು ಆನೆಗುಂದಿಯ ಆಕಸ್ಮಿಕ ದರ್ಶನ. ಅಲ್ಲಿಂದ ಅವರಿಗೆ ಉಂಟಾದ ಮಿಂಚಿನ ಸ್ಫುರಣವು ಕರ್ನಾಟಕದ ಇನ್ನಿತರ ಇತಿಹಾಸ ಪ್ರಸಿದ್ಧ ಕ್ಷೇತ್ರ ವೀಕ್ಷಿಸಲು ಸ್ಫೂರ್ತಿ ನೀಡಿತು. ಈ ಕೃತಿಯು ಕರ್ನಾಟಕದ ಯುವಜನತೆಗೆ ಇತಿಹಾಸ ದೇವಿಯ ಮಂದಿರಕ್ಕೆ ಹೋಗುವ ದಾರಿ ತೋರಿಸುವ ಕೈಕಂಬ ಎಂದು ಹೇಳಿದ್ದಾರೆ. ಹೀಗೆ ದೇವಿಯ ರೂಪಕದ ಮೂಲಕವೇ ಅವರು ಕನ್ನಡವನ್ನು ಕಡಂಡರಿಸಿದ್ದಾರೆ. ಮತ್ತೊಂದು ವಿಶೇಷವೆಂದರೆ ಶಾಂತಕವಿಗಳಿಂದ ಕೃತಿಯನ್ನು ಓದಿಸಿ ಅವರ ಕವಿತೆಯನ್ನು ಈ ಗ್ರಂಥಕ್ಕೆ ಕೊಟ್ಟಿರುವುದು ವಿಶೇಷ. ಗ್ರಂಥದ ಮೊದಲ ಎರಡು ಪ್ರಕರಣಗಳಂತೂ ಓದುಗರ ಅಂತಃಕರಣವನ್ನೇ ಅಲುಗಾಡಿಸುವಷ್ಟು ಭಾವೋಜ್ಜ್ವಲವಾಗಿ ಸ್ಫೂರ್ತಿದಾಯಕವಾಗಿದೆ.

ಈ ಗ್ರಂಥದ ಆರಂಭದ ಪ್ರಸ್ತಾವನೆಯಲ್ಲಿಯೇ ಬಾಲಗಂಗಾಧರ ತಿಲಕರ ಮಾತನ್ನು ಉಲ್ಲೇಖಿಸುತ್ತಾ "ಮಹಾರಾಷ್ಟ್ರ ಬೇರೆ ಕರ್ನಾಟಕ ಬೇರೆ ಅಲ್ಲ ಎರಡರಲ್ಲಿಯೂ ಒಂದೇ ರಕ್ತವೂ ಹರಿಯುತ್ತಿದೆ. ಎರಡು ದೇಶಗಳ ಭಾಷೆಯು

ಮುಂಚೆ ಒಂದೇ ಅಂದರೆ ಕನ್ನಡವಾಗಿತ್ತು. ಭಾಷೆಯ ವಿಷಯದಲ್ಲಿ ಮಹಾರಾಷ್ಟ್ರವು ಕುಲಗೆಟ್ಟು ಮರಾಠಿಯಗಿರುತ್ತದೆ."* ಈ ಉಲ್ಲೇಖ ಕೊಡುತ್ತಾ ಮಹಾರಾಷ್ಟ್ರದಲ್ಲಿಯೂ ಕನ್ನಡ ಭಾಷೆಯೇ ಪ್ರಚಲಿತದಲ್ಲಿತ್ತು ಎಂದು ಓದುಗರ ಗಮನ ಸೆಳೆದಿದ್ದಾರೆ. ಜೊತೆಗೆ ಕರ್ನಾಟಕ ರಾಜ್ಯವು ಆಗಿನ ಕಾಲಕ್ಕೆ ಭಾರತದ ಇತರ ರಾಜ್ಯಗಳಿಗಿಂತ ಉತ್ತಮವಾದ ಇತಿಹಾಸ ಸಂಸ್ಕೃತಿಯ ಕಲಾ ವೈಭವವನ್ನು ಎಲ್ಲಾ ಕ್ಷೇತ್ರಗಳಲ್ಲೂ ಕಂಡಿತ್ತು ಎಂಬುದನ್ನು ನೆನಪಿಸುತ್ತಾರೆ.

ಮೊದಲನೇ ಪ್ರಕರಣದಲ್ಲಿ ಕನ್ನಡಿಗರಲ್ಲಿ ಕುಂದಿರುವ ಆತ್ಮವಿಶ್ವಾಸವನ್ನು ಚೈತನ್ಯವನ್ನು ತುಂಬಲು ಇತಿಹಾಸದ ಜ್ಞಾನದ ಅವಶ್ಯಕತೆ ಇದೆ ಎಂದು ಹೇಳುತ್ತಾ ನಮ್ಮ ಪೂರ್ವಜರ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ಸರಿಪಡಿಸಿಕೊಳ್ಳಲು ಇತಿಹಾಸದ ಜ್ಞಾನದ ಅವಶ್ಯಕತೆ ಇದೆ. ನಮ್ಮ ದೇಶದ ಇತಿಹಾಸವನ್ನು ನಮ್ಮ ಜನರೇ ಬರೆಯುವುದು ರಾಷ್ಟ್ರದ ಪ್ರಗತಿಗೆ ಅವಶ್ಯಕ ಎಂದಿದ್ದಾರೆ. ಬಂಗಾಳಿಗಳು, ಮರಾಠಿಗರು, ತೆಲಗರು, ತಮಿಳರು, ಗೂರ್ಜರು ಎಲ್ಲರೂ ತಮ್ಮ ತಮ್ಮ ಪ್ರಾಂತ್ಯಗಳ ಇತಿಹಾಸವನ್ನು ಅಭಿಮಾನಪೂರ್ವಕವಾಗಿ ಅಭ್ಯಾಸ ಮಾಡಿ ತಮ್ಮ ಜನರನ್ನು ಚೇತನಗೊಳಿಸುತ್ತಿದ್ದಾರೆ; ಅದರೆ ನಮ್ಮ ಕರ್ನಾಟಕದ ಜನ ಮಾತ್ರ ಇನ್ನೂ ಕುಂಭಕರ್ಣನಿದ್ದೆಯಲ್ಲಿದ್ದಾರೆ. ಕನ್ನಡಿಗರೇ ಈ ವಿಷಾದವನ್ನು ಹೋಗಲಾಡಿಸಿ ನಿಮ್ಮ ಮೇಲಿನ ನಿರಬಿಮಾನತೆಯ ಮುಸುಕನ್ನು ಹೊರತೆಗೆಯಲು ನೀವು ನಿಮ್ಮ ಇತಿಹಾಸಕ್ಕೆ ಶರಣಾಗಿರಿ ಎಂದು ಕನ್ನಡಿಗರನ್ನು ಬಡಿದೆಬ್ಬಿಸಿದ್ದಾರೆ.

ಎರಡನೇ ಪ್ರಕರಣದಲ್ಲಿ ಕರ್ನಾಟಕದ ವಿಸ್ತಾರದ ಬಗ್ಗೆ ಹೇಳುತ್ತಾ ಕನ್ನಡಿಗರಿಗೆ ತಮ್ಮ ಗಡಿಯ ಬಗ್ಗೆ ಮಾಹಿತಿಯನ್ನು ಕೊಡುತ್ತಾ ಜೊತೆಗೆ ಎಚ್ಚರಿಸುವ ಕೆಲಸ ಮಾಡಿದ್ದಾರೆ. 8 ಮತ್ತು 9ನೇ ಶತಮಾನದಲ್ಲಿ ರಚಿತವಾದ ಶ್ರೀವಿಜಯನ ಕವಿರಾಜಮಾರ್ಗದಲ್ಲಿ ಹೇಳಿರುವಂತೆ ವಿಕಾವೇರಿಯಿಂದ ಗೋದಾವರಿವರಮಿರ್ದ ವಸುಧಾತಳವಳಯ ಭಾವಿಸೆ ಕರ್ನಾಟಕ ಜನಪರವದನಾವನೊಲಿದು ಬಣ್ಣಿಸುವನು ನಾಡದಾ ಕನ್ನಡದೋಳ್ಹಿ ಎಂದು ಗಡಿಯ ಬಗ್ಗೆ ಮಾಹಿತಿ ನೀಡುತ್ತದೆ. ಹಾಗೇಯೇ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಸಿಕ್ಕಿರುವ ಶಾಸನಗಳು, ವೀರಗಲ್ಲುಗಳು ಸಿಕ್ಕಿದ್ದು ಅವುಗಳ ಮೂಲಕ ಮಹಾರಾಷ್ಟ್ರ ಮತ್ತು ಆಂಧ್ರದ ಗ್ರಾಮಗಳಲ್ಲಿಯು ಕನ್ನಡದ ಹೆಸರಿರುವ ಗ್ರಾಮಗಳಿದ್ದು ನಮ್ಮ ಕರ್ನಾಟಕದ ಗಡಿಯು ಉತ್ತರದವರೆಗೂ ವಿಸ್ತರಿಸಿತ್ತು ಎಂದು ಹಲವೂ ನಿದರ್ಶನಗಳ ಮೂಲಕ ಮಾಹಿತಿ ನೀಡಿದ್ದಾರೆ.

ನಾಲ್ಕನೇ ಪ್ರಕರಣದಲ್ಲಿ ವಿಕರ್ನಾಟಕದ ವಿಭೂತಿಗಳುಹಿ ಎಂದು ಪ್ರಾರಂಭಿಸಿ ಕರ್ನಾಟಕದಲ್ಲಿ ದೊಡ್ಡ ದೊಡ್ಡ ಅರಸರು, ಕವಿಗಳು ಮತ್ತು ಧರ್ಮಸೇವಕರುಗಳು ನೆಲೆಸಿದ್ದು ನಮ್ಮ ಪೂರ್ವಜರು ಅತ್ಯಂತ ವೈಭವಯುತವಾದ ರಾಜ್ಯವಾಳಿದ್ದರ ಬಗ್ಗೆ ತಿಳಿಸಿದ್ದಾರೆ. ರಾಮಾಯಾಣ, ಮಹಾಭಾರತದಲ್ಲಿಯೂ ಕರ್ನಾಟಕದ ಬಗ್ಗೆ ಉಲ್ಲೇಖಗಳಿದ್ದು ತಿಳಿಸುತ್ತಾ ಕನ್ನಡಿಗರು ಉತ್ತರದಲ್ಲಿ ಬಂಗಾಳದಿಂದ ದಕ್ಷಿಣದಲ್ಲಿ ಸಿಂಹಳದವರೆಗೂ ಆಳ್ವಿಕೆ ಮಾಡಿದ್ದು 6 ರಿಂದ 16ನೇ ಶತಮಾನದವರೆಗೂ ಅತ್ಯಂತ ವೈಭವಯುತವಾದ ಸಾಮ್ರಾಜ್ಯವನ್ನು ಕಟ್ಟಿ ವಿಜ್ರಂಭಿಸಿದವರು.... ಕರ್ನಾಟಕಸ್ಥರೇ... ಪುಲಿಕೇಶಿ, ನೃಪತುಂಗ, ಗೋವಿಂದ, ದೃವ, ತೈಲಪ, ವಿಕ್ರಮಾದಿತ್ಯ, ಮಹಾಮಹಿಮ ರಾಜರು ನಮ್ಮ ಪಾಲಿಗೆ ಸಿಕ್ಕಿದ್ದು ನಮ್ಮ ಘನವಾದ ಪುಣ್ಯ ಎಂದು ಭಾವಿಸಿ ಕದಂಬ,

ಗಂಗ, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಯಾದವರು, ಸೇವುಣರು, ಇವರೆಲ್ಲ ಅರಸರು ಆಳ್ವಿಕೆ ಮಾಡಿದ್ದು ಕರ್ನಾಟಕದ ಕಾಡುಕಗ್ಗಾದ ಕನ್ನಡ ಭಾಷೆಯನ್ನು ಅಪಮಾನ ಎಂದು ತಿಳಿಯಲಿಲ್ಲ ನಮ್ಮ ಕನ್ನಡ ಭಾಷೆಯನ್ನು ಶೂರರು, ವೀರರು ಆದ ಅವರು ಎಂದು ಅಪಮಾನವೆಂದು ಎಣಿಸಲಿಲ್ಲ. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಎಂಬ ಮೂರು ಮತಗಳ ಸ್ಥಾಪನಾಚಾರ್ಯರು ನಮ್ಮ ಪವಿತ್ರ ಭೂಮಿಯಲ್ಲಿಯೇ ತಮ್ಮ ಕಾರ್ಯಕ್ಷೇತ್ರವನ್ನು ಮಾಡಿಕೊಂಡು ಬದುಕು ಸವೆಸಿದ್ದಾರೆ. ಬಸವಣ್ಣ, ಭಾಸ್ಕರಚಾರ್ಯ, ಬಿಲ್ಹಣ, ವಿಜ್ಞಾನೇಶ್ವರ, ವಿದ್ಯಾರಣ್ಯರು ಕನ್ನಡ ತಾಯಿಯ ಮಕ್ಕಳಲ್ಲವೇ? ಆದಿಪಂಪ, ರನ್ನ, ಪೊನ್ನ, ಜನ್ನ, ಕನಕದಾಸ, ಪುರಂದರದಾಸ ಕನ್ನಡಿಗರಲ್ಲವೇ? ಕನ್ನಡಿಗರೇ ನಿಮ್ಮ ಭಾಗ್ಯ ಎಷ್ಟೆಂದು ವರ್ಣಿಸಬೇಕು? ಕರ್ನಾಟಕ ಇತಿಹಾಸದಲ್ಲಿ ಮತ್ತೊಂದು ವಿಶೇಷವೆಂದರೆ ವಿಕನ್ನಡ ತಮಿಳು ಹೊರತು ಇತರ ಜನಾಂಗಗಳೆಲ್ಲಾ ಬಹುಮಟ್ಟಿಗೆ ಬದಲಾಯಿಸಿ ಹೋಗಿವೆ. ಅಂದರೆ ಅಶೋಕ, ಚಂದ್ರಗುಪ್ತ ಆಡುತ್ತಿದ್ದ ಭಾಷೆಗೂ ಈಗೀನ ಜನರು ಆಡುತ್ತಿರುವ ಭಾಷೆಗೂ ವ್ಯತ್ಯಾಸ ಮತ್ತು ಬೇರೆ ಬೇರೆ ಇದೆ ಮರಾಠಿಗರು, ಬಂಗಾಳಿಗಳು ತಮ್ಮ ರಾಜ್ಯಗಳ ಪ್ರಾಚೀನ ರಾಜರು ಮರಾಠಿ, ಬಂಗಾಲಿ ಭಾಷೆಯನ್ನೆ ಆಡುತ್ತಿದ್ದರೆ? ಎಂದು ಹೇಳಲುಬಾರದು. ಆದರೆ ಕನ್ನಡಿಗರು ಮಾತ್ರ ಧೈರ್ಯದಿಂದ ಹೇಳಬಹುದು– ನಮ್ಮ ಹಿಂದಿನ ಅರಸರೆಲ್ಲರೂ ಕನ್ನಡ ಭಾಷೆಯನ್ನೆ ಆಡುತ್ತಿದ್ದರು. ಈ ತರದ ಅಭಿಮಾನವು ಮತ್ತಾರಿಗೂ ಸಿಕ್ಕುವುದಿಲ್ಲ ಎಂದು ಹೇಳಿ ನಮ್ಮ ಭವ್ಯ ಇತಿಹಾಸದ ಮೆಲಕನ್ನು ಹಾಕಿ ಹೋಲಿಕೆ ಮಾಡಿ ಹೇಳಿದ್ದಾರೆ.

ಐದನೇ ಪ್ರಕರಣದಲ್ಲಿ–ಕರ್ನಾಟಕದಲ್ಲಿ ಸಾಕಷ್ಟು ಶಿಲಾಲಿಪಿಗಳು, ತಾಮ್ರಪಟಗಳು, ವೀರಗಲ್ಲುಗಳು, ನಾಣ್ಯಗಳು, ಪ್ರಾಚೀನ ಕಟ್ಟಡಗಳು, ವಾಙ್ಮಯಗಳು, ತಾಳೆಯೋಲೆಗಳು, ಪ್ರವಾಸಿಗರ ಬರವಣಿಗೆಗಳು, ಪರಂಪಾನುಗತ ಕಥೆಗಳು, ಸ್ಥಳಪುರಾಣಗಳು, ಆಚಾರಗಳು, ಧಾರ್ಮಿಕ ವಿಚಾರಗಳು ಇಂತಹ ಸಾಧನ ಸಾಮಾಗ್ರಿಗಳನ್ನು ಸಂಗ್ರಹಿಸುವುದರ ಮೂಲಕ ಕನ್ನಡದ ಸಂಶೋಧಕರು ಕರ್ನಾಟಕದ ಭವ್ಯ ಇತಿಹಾಸವನ್ನು ಸಂರಕ್ಷಿಸಬೇಕು ಮತ್ತು ಕನ್ನಡಿಗರು ತಮ್ಮ ನಿರಭಿಮಾನವನ್ನು ಬಿಟ್ಟು 1500 ವರ್ಷಗಳ ಕಾಲ ಆಳಿದ ಕರ್ನಾಟಕದ ವೈಭವವನ್ನು ದಾಖಲಿಸಲು ಪ್ರಯತ್ನಿಸಬೇಕು. ಕರ್ನಾಟಕದ ಇತಿಹಾಸಕ್ಕೆ ಮುಖ್ಯ ಸಾಧನವಾದ ಶಿಲಾಲಿಪಿಗಳನ್ನು ಸಂರಕ್ಷಿಸಿ ಅವುಗಳನ್ನು ಉದ್ಧರಿಸುವುದೇ ಕನ್ನಡಿಗರ ಮೊದಲ ಕರ್ತವ್ಯವಾಗಬೇಕು ಎಂದು ಹೇಳಿ ಎಚ್ಚರಿಸುವ ಕಾರ್ಯ ಮಾಡಿದ್ದಾರೆ.

ಆರರಿಂದ ಹನ್ನೆರೆಡನೇ ಪ್ರಕರಣಗಳಲ್ಲಿ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಕನ್ನಡದ ಪ್ರಖ್ಯಾತ ರಾಜವಂಶಗಳು, ಇತಿಹಾಸ, ಕಾಲಾನುಕ್ರಮ, ಸ್ಮಾರಕಗಳು, ವೈಭವ, ಸಾಹಸಗಳನ್ನು ಅತ್ಯಂತ ಜಾಗರೂಕತೆಯಿಂದ ವರ್ಣಿಸುವ ಮೂಲಕ ಇತಿಹಾಸದ ಗತವೈಭವವನ್ನು ಕನ್ನಡಿಗರ ಮುಂದೆ ಮರುಕಳಿಸಿದ್ದಾರೆ.

ಹನ್ನೆರಡನೆ ಪ್ರಕರಣದಲ್ಲಿ ಹೂಯನ್ಸ್‌ತ್ಸಾಂಗ್, ನಿಕೋಲೋಕೌಂಟಿ, ಅಬ್ದುಲ್ ರಜ್ಜಾಕ್, ಬಾರ್ಬೋಸಾ, ನ್ಯೂನಿಜ್, ಪಯಾಜ್ ಇಂತಹ ಮಹಾನ್ ಪ್ರವಾಸಿಗರೆಲ್ಲಾ ತಮ್ಮ ಪ್ರವಾಸ ಕಥನಗಳಲ್ಲಿ ಕರ್ನಾಟಕದ ಮನೋಹರವಾದ ಸೌಂದರ್ಯದ ಸೋಬಗನ್ನು ಹಂಪಿ, ಐಹೋಳೆ, ಪಟ್ಟದಕಲ್ಲು ಇವುಗಳ ವೈಭವಗಳನ್ನು ವರ್ಣಿಸಿರುವುದನ್ನು ತಿಳಿಸುತ್ತಾ ಪ್ರತಿಯೊಬ್ಬ ಕನ್ನಡಿಗರು ಈ ಕರ್ನಾಟಕದ ವೈಭವವನ್ನು

ನೋಡಿ ಕಣ್ತುಂಬಿಕೊಳ್ಳಬೇಕೆಂದು ವಿವರಿಸಿದ್ದಾರೆ.

ಹದಿಮೂರನೇ ಪ್ರಕರಣದಲ್ಲಿ ಕರ್ನಾಟಕದಲ್ಲಿರುವ ಅಮೋಘವಾದ ಸ್ಮಾರಕಗಳಾದ ಬಾದಾಮಿ, ಕಾರ್ಲೆ, ಕನ್ಹೇರಿ, ಅಜಂತಾ, ಚಾಲುಕ್ಯರ ದೇವಾಲಯಗಳು ವೆರೂಳಿನ ಪ್ರಸಿದ್ಧ ಕೈಲಾಸ ದೇವಾಲಯಗಳಿಗೆ ಸ್ವತಃ ಭೇಟಿಕೊಟ್ಟು ದೇವಾಲಯದ ಪ್ರತಿ ಚಿತ್ರಣವನ್ನು ಪ್ರಕಟಿಸಿದ್ದಾರೆ. ಹಾಗೇಯೆ ಮುಂದುವರೆಸಿ ಜಕಣಾಚಾರ್ಯರ ರೋಮಾಂಚನಕಾರಿ ಕಥೆಯನ್ನು ಹೇಳಿ ಬೇಲೂರು ಚೆನ್ನಕೇಶವನ ಮೂರ್ತಿ ನಿರ್ಮಾಣದ ಸ್ವಾರಸ್ಯಕರ ಕಥೆ ಹೇಳಿ ಕನ್ನಡಿಗರಿಗೆ ಕರ್ನಾಟಕದಲ್ಲಿರುವ ಈ ಅಮೋಘ ಸ್ಮಾರಕಗಳನ್ನು ನೋಡಿ ನೀವು ಧನ್ಯರಾಗಬಾರದೇ? ಎಂದು ಪ್ರಶ್ನಿಸಿ ಜಾಗೃತಗೊಳಿಸುವ ಪ್ರಯತ್ನ ಮಾಡಿದ್ದಾರೆ.

ಹದಿನಾಲ್ಕನೇ ಪ್ರಕರಣದಲ್ಲಿ ಕರ್ನಾಟಕದ ಅರಸರ ಕಾಲದಲ್ಲಿ ಧರ್ಮಜಾಗೃತಿ ಮತ್ತು ಅರಸರ ಧಾರ್ಮಿಕ ಪರಧರ್ಮಸಹಿಷ್ಣುತೆಯನ್ನು ಇಡೀ ದೇಶವೇ ಧರ್ಮಾಚಾರ್ಯರ ವಿಷಯದಲ್ಲಿ ಕರ್ನಾಟಕಕ್ಕೆ ಋಣಿಯಾಗಬೇಕು ಎಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ಏಕೆಂದರೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಕನಕದಾಸರು, ಪುರಂದರದಾಸರು ಹುಟ್ಟಿದ್ದು ಇಲ್ಲಿಯೇ... ಕರ್ನಾಟಕದ ಪ್ರತಿಯೊಂದು ರಾಜಮನೆತನದ ಸ್ಥಾಪನೆಯಲ್ಲಿ ಧಾರ್ಮಿಕ ಗುರುಗಳ ಪ್ರೋತ್ಸಾಹದ ಮೂಲಕ ಸಾಮ್ರಾಜ್ಯ ಸ್ಥಾಪಿಸಿರುವುದು ಅತ್ಯಂತ ಗಮನಾರ್ಹ... ಉದಾ: ಗಂಗರು–ಸಿಂಹನಂದಿ, ಹೋಯ್ಸಳ–ಸುದತ್ತಾ ಚಾರ್ಯರು, ವಿಜಯನಗರ–ವಿದ್ಯಾರಣ್ಯರು ಈ ಪ್ರಕರಣಗಳ ತಾತ್ಪರ್ಯ ಕನ್ನಡಿಗರೇ ನಮ್ಮಲ್ಲಿ ಅತ್ಯಂತ ಶ್ರೀಮಂತ ಧಾರ್ಮಿಕ ಸಾಮರಸ್ಯದ ಸಂಪತ್ತು ಇದ್ದು ಇದನ್ನು ಬಳಸಿಕೊಂಡು ಸಾಮರಸ್ಯದಿಂದ ಕರ್ನಾಟಕವನ್ನು ಕಟ್ಟೋಣ ಎಂದು ಹೇಳಿ ಜಾಗೃತ ಮಾಡಿದ್ದಾರೆ.

ಹದಿನೈದನೇ ಪ್ರಕರಣದ ವಾಙ್ಮಯವೈಭವದಲ್ಲಿ ಟಾಲೆಮಿ, ಮಾಮುಲರ್, ಗ್ರೀಕ್ ನಾಟಕಗಳಲ್ಲಿ ಕರ್ನಾಟಕದ ಸ್ಥಳಗಳ ಉಲ್ಲೇಖಗಳು ಕನ್ನಡ ರಾಜಮನೆತನಗಳು ಆಶ್ರಯವಿತ್ತ ಕವಿವರ್ಯರು ಕನ್ನಡ ದೇಶದ ಬಗ್ಗೆ ಕೊಟ್ಟಿರುವ ವರ್ಣನೆಗಳನ್ನು ತಿಳಿಸಿದ್ದಾರೆ. ಜೊತೆಗೆ ಸಂಸ್ಕೃತ ಮತ್ತು ಕನ್ನಡ ವಾಙ್ಮಯಕ್ಕೆ ನಮ್ಮ ಕರ್ನಾಟಕಸ್ಥರು ಮಾಡಿದ ಸೇವೆಯು ಅಪಾರ ಎಂದು ತಿಳಿಸಿದ್ದಾರೆ. ನಮ್ಮ ನಾಡಲ್ಲೂ ನಳಂದ ಮಾದರಿಯಲ್ಲಿ **"ಸಾಲೋಟಗಿ"** ಎಂಬ ವಿಶ್ವವಿದ್ಯಾನಿಲಯವಿತ್ತೆಂದು ಹೇಳುತ್ತಾ ಕೊನೆಯ ಭಾಗದಲ್ಲಿ ವಿಜಯನಗರ ಸಾಮ್ರಾಜ್ಯದಲ್ಲಿ ಹರಿಹರನ ಕಾಲದಲ್ಲಿದ್ದ ಶ್ರೀನಾಥ ಎಂಬ ತೆಲುಗು ಕವಿಯು ತನ್ನ ಭೀಮೆಶ್ವರ ಪುರಾಣದಲ್ಲಿ ವಿನನ್ನ ಕವಿತೆಯ ಪ್ರೌಢಿಮೆ ನೋಡಿದರೆ ಅದು ಸಂಸ್ಕೃತ ಭಾಷೆಯೆನ್ನುವರು, ಮಾತಿನ ರೀತಿ ನೊಡಿದರೆ ತೆಲುಗು ಭಾಷೆ ಎನ್ನುವರು, ಯಾರು ಏನೇ ಹೇಳಿದರು ನನಗೇನು ಕೊರತೆ? ನನ್ನ ಕವಿತ್ವವು ನಿಜವಾಗಿ ಕರ್ನಾಟಕ ಭಾಷೆಹಿ ಎಂದು ಕರ್ನಾಟಕ ಅಭಿಮಾನವನ್ನು ತೋರಿದ್ದಾರೆ.

ಕೊನೆಯಲ್ಲಿ ಪ್ರತಿಯೊಬ್ಬ ಕನ್ನಡಿಗರು ಮಾಡಬೇಕಾದ ಕರ್ತವ್ಯವನ್ನು ವಿಕನ್ನಡಿಗರೇ ನಾವು ನಮ್ಮ ಆಲಸ್ಯವನ್ನು ತಳ್ಳೋಣ ಭ್ರಾಮಕ ಕಲ್ಪನೆಗಳ್ನು ಬಿಟ್ಟುಬಿಡೋಣ ಮುಂದಿನ ಮಾರ್ಗಕ್ಕೆ ಹತ್ತೋಣ ನಮ್ಮ ಆಶಾವೃಕ್ಷವನ್ನು ಕೊಳೆಯಿಸಿಬಿಡುವಂತಹ ಹೊಳೆಗಳನ್ನು ಕೊಲ್ಲಲು ಇತಿಹಾಸವೇ ಮದ್ದು. ಕನ್ನಡಿಗರೇ ಕರ್ನಾಟಕ ಸಂಸ್ಕೃತಿಯೆಂಬ ಗುಪ್ತಗಾಮಿನಿಯಾದ ಗಂಗೆಯನ್ನು ಮೇಲಕ್ಕೆ ಎತ್ತಿತರೋಣ ವಿಎಂದು ಹೇಳಿ ಗ್ರಂಥವನ್ನು ನಿಲ್ಲಿಸಿದ್ದಾರೆ.

ಪರಾಮರ್ಶನ ಸಾಹಿತ್ಯ

26–11–1907, ಗುರ್ಲಹೊಸುರಿನಲ್ಲಿ ಮಾಡಿದ ಭಾಷಣ ಅವತರಣಿಕೆ, ಪುಟ–5–ಕರ್ನಾಟಕ ಗತವೈಭವ

ವೆಂಕಟೇಶ ಭೀಮರಾವ್ ಆಲೂರ–ಕರ್ನಾಟಕ ಗತವೈಭವ, (ಧಾರವಾಡ–1920, 2ನೇ ಆವೃತ್ತಿ)

ವೆಂಕಟೇಶ ಸಾಂಗಲಿ–ಆಲೂರು ವೆಂಕಟರಾಯರು (ಜೀವನ ಮತ್ತು ಕಾರ್ಯ), (67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ)

ವಿಭಾಗೀಯ ಪತ್ರಾಗಾರ ಇಲಾಖೆ ಮೈಸೂರು ಇಲ್ಲಿಯ ದಾಖಲೆಗಳು

❖❖❖

ಸೂರ್ಯನೇರಿದ
ನೀಲಿ ಬಾನನು
ತುಂಬಿ ಚೇತನ ಕಣದೊಳು
ತುಂಬಿ ಹೀರಿತು
ತುಂಬಿ ಬಂಡನು
ತುಂಬಿ ಜೇನಿನ ಎದೆಯೊಳು

ಜನ್ನನ 'ಯಶೋಧರ ಚರಿತೆ' ಕಾವ್ಯದ ಹೆಚ್ಚುಗಾರಿಕೆ

ಡಾ. ವಿಜಯೇಂದ್ರ ಕುಮಾರ್ ಜಿ.ಎಲ್.
ಕನ್ನಡ ಸಹ ಪ್ರಾಧ್ಯಾಪಕ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿಡ್ಲಘಟ್ಟ–562105

ಪೀಠಿಕೆ

ಕವಿಜನ್ನ ಕ್ರಿ.ಶ.12ನೇ ಶತಮಾನದ ಕೊನೆಯ ಮತ್ತು 13ನೇ ಶತಮಾನದ ಆರಂಭ ಕಾಲದವ. ಈತನ ಕಾವ್ಯಕೃತಿಗಳು: 'ಯಶೋಧರ ಚರಿತೆ' ಮತ್ತು 'ಅನಂತನಾಥ ಪುರಾಣ'. ಈ ಎರಡೂ ಕೃತಿಗಳು ಚಂಪೂಶೈಲಿಯಲ್ಲಿದ್ದು, ಜೈನಧರ್ಮದ ತಾತ್ವಿಕತೆಯನ್ನು ಮಂಡಿಸುವ ಉದ್ದೇಶದಿಂದ ರಚಿತವಾದವುಗಳು. ಕಾಮಶಾಸ್ತ್ರಕ್ಕೆ ಸಂಬಂಧಿಸಿದ 'ಅನುಭವ ಮುಕುರ' ಎಂಬ ಕೃತಿಯನ್ನು ಜನ್ನ ಬರೆದಿದ್ದಾನೆ ಎಂದು ಹೇಳಲಾಗುತ್ತದೆ. ಆದರೆ ಈ ಕೃತಿ ಲಭ್ಯವಿಲ್ಲ. ಜನ್ನನಿಗೆ ಹೆಚ್ಚು ಜನಪ್ರಿಯತೆ ತಂದುಕೊಟ್ಟ ಕೃತಿ 'ಯಶೋಧರ ಚರಿತೆ'.

'ಯಶೋಧರ ಚರಿತೆ' ಮೂಲತಃ ಜೈನಧರ್ಮದ ಸ್ಥಳೀಕರಣಕ್ಕಾಗಿ ರಚಿಸಲ್ಪಟ್ಟ ಕಾವ್ಯ. ಜನ್ಮಾಂತರಗಳ ಕಲ್ಪನೆ, ಅಣುವ್ರತಗಳು, ಜೈನಗುರುಪರಂಪರೆಯ ವಿವರಗಳನ್ನು ನೀಡುವ; ಸಂಕಲ್ಪಹಿಂಸೆ ಮಾಡಿದ ಒಂದೇ ಒಂದು ಕಾರಣದಿಂದ ಜೀವವು ಎಷ್ಟೆಲ್ಲಾ ಜನ್ಮಗಳಲ್ಲಿ ಪರಿತಪಿಸಬೇಕಾಗುತ್ತದೆ ಎಂಬುದನ್ನು ಪರಿತಪಿಸಿದವರ ಬಾಯಲ್ಲೇ ಹೇಳಿಸುವುದರ ಮೂಲಕ ಮನಃಪರಿವರ್ತನೆ ಮಾಡುವ ಕಾವ್ಯ – ಯಶೋಧರ ಚರಿತೆ. ಕಾವ್ಯರಚನೆಯ ಉದ್ದೇಶವೇನು ಎಂಬುದನ್ನು ಯಶೋಧರ ಚರಿತೆಯ ಮೊದಲನೆಯ ಅವತಾರದಲ್ಲಿ ಕವಿಜನ್ನ ನೇರವಾಗಿಯೆ ಹೇಳುತ್ತಾನೆ:

ಶ್ರಾವಕಜನದುಪವಾಸಂ
ಜೀವದಯಾಷ್ಟಮಿಯೊಳಾಗೆ ಪಾರಣೆ ಕವಿಗ
ಳ್ಗೀ ವಸ್ತುಕಥನದಿಂದು
ಭಾವಿಸೆ ಕವಿಭಾಳಲೋಚನಂ ವಿರಚಿಸಿದಂ[1] (24)

ಒಂದು ನಿರ್ದಿಷ್ಟ ಸಂದರ್ಭದಲ್ಲಿ (ಜೀವದಯಾಷ್ಟಮಿಯಂದು) ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ (ಪಾರಣೆಗಾಗಿ) ಒಂದು ನಿರ್ದಿಷ್ಟ ಕೇಳುಗ ವರ್ಗವನ್ನು (ಶ್ರಾವಕಜನರನ್ನು) ಗುರಿಯಾಗಿಸಿಕೊಂಡು ನಿರೂಪಿಸುತ್ತಿರುವ ಕಥನವಿದು ಎಂಬ ಸ್ಪಷ್ಟನೆ ಈ ಪದ್ಯದಲ್ಲಿದೆ. ನಾವು ಅರ್ಥ ಮಾಡಿಕೊಳ್ಳಬೇಕಾದ ಸಂಗತಿಯೆಂದರೆ, ಇಲ್ಲಿ ಯಶೋಧರನ ಕಥೆಯನ್ನು ಜೈನತತ್ವ ಮಂಡನೆಗಾಗಿ ದುಡಿಸಿಕೊಳ್ಳಲಾಗಿದೆ. ಆದರೆ ಈ ಕಾವ್ಯದ ಹೆಚ್ಚುಗಾರಿಕೆ ಇರುವುದು ಕವಿಯ ಉದ್ದೇಶವನ್ನೂ ಮೀರಿ ಕಾವ್ಯ ಬೆಳೆದಿರುವುದರಲ್ಲಿ. ಪ್ರಸ್ತುತ ಲೇಖನದಲ್ಲಿ ಈ ಕುರಿತು ಚರ್ಚಿಸಲಾಗಿದೆ.

*****

'ಯಶೋಧರ ಚರಿತೆ' ಆರಂಭವಾಗುವುದೇ ಹೊಯ್ಸಳರ ಚಾರಿತ್ರಿಕ ವಿವರಗಳೊಂದಿಗೆ; ಕವಿಜನ್ನನ ವೈಯಕ್ತಿಕ ವಿಚಾರಗಳ ನಿರೂಪಣೆಯೊಂದಿಗೆ[2]. ಆದರೂ ಈ ಕಾವ್ಯವು, ಪಂಪನ ವಿಕ್ರಮಾರ್ಜುನ ವಿಜಯದ ಹಾಗೆ, ಚಾರಿತ್ರಿಕ ವಿವರಗಳ

ಕಾರಣಕ್ಕೆ ಮುಖ್ಯವಾಗುವುದಿಲ್ಲ. ಇದು ಮುಖ್ಯವಾಗುವುದು ಹಿಂಸೆ–ಅಹಿಂಸೆಗಳ ತಾತ್ವಿಕ ಸಂಘರ್ಷದ ಕಾರಣಕ್ಕಾಗಿ. ಈ ಕಾವ್ಯದಲ್ಲಿ ಹಿಂಸೆಯು ಬದುಕಿನ ವಾಸ್ತವದ ಪ್ರತೀಕವಾಗಿದ್ದರೆ, ಅಹಿಂಸೆಯೆಂಬುದು ಬದುಕಿನಲ್ಲಿ ಮನುಷ್ಯ ಸಾಧಿಸಬೇಕಾದ ಆದರ್ಶದ ಪ್ರತೀಕವಾಗಿದೆ.

'ಯಶೋಧರ ಚರಿತೆ' ಮೇಲುನೋಟಕ್ಕೆ ಅಹಿಂಸಾ ತತ್ವದ ಪ್ರತಿಪಾದನೆಯಾಗಿಯೇ ಕಾಣುತ್ತದೆ. ಆದರೆ ಕೃತಿಯ ಒಳಗಿನ ವಿವರಗಳನ್ನು ಕಂಡರೆ, ಹಿಂಸೆಯ ಹಲವು ರೂಪಗಳ ಅನಾವರಣವೇ 'ಯಶೋಧರ ಚರಿತೆ' ಎಂದು ಹೇಳಬೇಕಾಗುತ್ತದೆ. ಹರಕೆ ಸಲ್ಲಿಸುವ, ಬೇಟೆಯಾಡುವ, ಬಲಿ ನೀಡುವ, ಆತ್ಮಾರ್ಪಣೆ ಮಾಡಿಕೊಳ್ಳುವ, ಕೊಲ್ಲುವ, ಕೊಲೆಯ ಬಲೆಗೆ ಬೀಳುವ–ಈ ದೈಹಿಕ ಹಿಂಸೆಗಳಿಗಿಂತ ಅತ್ಯಂತ ಭಯಂಕರ ಹಿಂಸೆಯಾಗಿ ಕವಿ ಕಾಣಿಸುವುದು ಸಂಕಲ್ಪ ಹಿಂಸೆ ಮತ್ತು ಆ ಸಂಕಲ್ಪ ಹಿಂಸೆಯ ದೀರ್ಘಕಾಲೀನ ಪರಿಣಾಮಗಳನ್ನು[3]. ಹಿಟ್ಟಿನ ಕೋಳಿಯನ್ನು ಕೊಂದ ಕಾರಣಕ್ಕಾಗಿ ಯಶೋಧರ ಮತ್ತು ತಾಯಿ ಚಂದ್ರಮತಿ ಆರು ಜನ್ಮಗಳಲ್ಲಿ ಪ್ರಾಣಿ ಪಕ್ಷಿಗಳಾಗಿ ಹುಟ್ಟುವುದು, ಎಲ್ಲೇ ಹುಟ್ಟಿದರೂ ಕೊನೆಗೆ ಅರಮನೆಗೇ ಬಂದು ಸೇರುವುದು, ಒಂದು ಕಾಲಕ್ಕೆ ರಾಜನಾಗಿ ರಾಜಮಾತೆಯಾಗಿ ಮೆರೆದಿದ್ದವರು ಹಿಂದಿನ ಜನ್ಮಾವಳಿಗಳ ನೆನಪುಗಳೊಂದಿಗೆಯೇ ಅಂದು ತಮ್ಮ ಆಳಾಗಿದ್ದವರ ಎಂಜಲನ್ನವನ್ನ ತಿಂದು ಬದುಕುವಂತಾಗುವ ಪರಿಸ್ಥಿತಿ ಪುನರಾವರ್ತನೆಯಾಗುತ್ತದೆ. ಇಲ್ಲಿ, ಸುತ್ತುವಿಕೆ ಮತ್ತು ಹಿಂದಿನ ಜನ್ಮಾವಳಿಗಳ ನೆನಪೇ ಸಾವಿಗಿಂತ ದೊಡ್ಡ ಹಿಂಸೆ ಎನಿಸುತ್ತದೆ.

ಉದ್ದೇಶ ಸಾಧನೆಗಾಗಿ ಒಬ್ಬರು ಮತ್ತೊಬ್ಬರನ್ನು ದೀವವಾಗಿ ಬಳಸಿಕೊಳ್ಳುವುದು, ಬಲಿಹಾಕುವುದು ಕಾವ್ಯದಲ್ಲಿ ಬಹಳ ಸಹಜ ಪ್ರಕ್ರಿಯೆ ಎಂಬಂತೆ ಕಾಣುತ್ತದೆ. ಯಶೋದರನನ್ನು ಬಲಿ ಹಾಕಲು ಮನ್ಮಥ ಅಮೃತಮತಿಯನ್ನು ದೀವವಾಗಿ ಬಳಸಿಕೊಳ್ಳುತ್ತಾನೆ. ಅಮೃತಮತಿ ತನ್ನ ಉದ್ದೇಶ ಸಾಧನೆಗಾಗಿ ದಾಸಿಯನ್ನು ಬಳಸಿಕೊಳ್ಳುತ್ತಾಳೆ. ಕವಿ ಜನ್ನ ಯಶೋಧರನ ವ್ಯಕ್ತಿತ್ವದ ಔನ್ನತ್ಯವನ್ನು ಹೇಳುವುದಕ್ಕೆ ಅಮೃತಮತಿಯ ವ್ಯಕ್ತಿತ್ವವನ್ನು ಗರಿಷ್ಠ ಕೆಳಮಟ್ಟಕ್ಕೆ ಇಳಿಸಿ ಬಲಿ ತೆಗೆದುಕೊಳ್ಳುತ್ತಾನೆ. ಅಂತಿಮವಾಗಿ ಜೈನ ಧರ್ಮದ ಅಹಿಂಸಾ ತತ್ವವನ್ನು ಎತ್ತಿ ಹಿಡಿಯುವುದಕ್ಕೆ ಇದೇ ಕವಿ ಜನ್ನ ಯಶೋಧರನನ್ನೂ, ಅವನ ತಾಯಿ ಚಂದ್ರಮತಿಯನ್ನೂ ಬಲಿ ಹಾಕುತ್ತಾನೆ. ಬಲಿ–ಈ ಕಾವ್ಯದ ಕೇಂದ್ರ ವಸ್ತು.[4]

ಕಾವ್ಯದ ಉದ್ದಕ್ಕೂ ಪ್ರಾಣಿಬಲಿ, ನರಬಲಿ, ಆತ್ಮಬಲಿಗಳು ಭಕ್ತಿಯ ಪರಾಕಾಷ್ಠೆಯ ಆಚರಣೆಯಾಗಿ ಕಾಣುತ್ತವೆ. ಮುನಿದ ದೇವಿಯನ್ನು ಶಾಂತಗೊಳಿಸಲು ಗರ್ಭ ಧರಿಸಿದ ಕುರಿಯನ್ನು ಬಲಿ ಕೊಡುವಂತೆ ತಾಯಿ ಚಂದ್ರಮತಿ ಸೂಚಿಸುವುದು; ಇದಕ್ಕೆ ಯಶೋಧರ ಸಮ್ಮತಿಸದಿದ್ದಾಗ, ಹಿಟ್ಟಿನ ಕೋಳಿಯನ್ನಾದರೂ ಬಲಿ ಕೊಡಲು ಒತ್ತಡ ಹಾಕುವುದು; ಅದಕ್ಕೂ ಒಪ್ಪದಿದ್ದಲ್ಲಿ ತನ್ನನ್ನೇ ದೇವಿಗೆ ತಾನು ಬಲಿಕೊಟ್ಟುಕೊಳ್ಳುತ್ತೇನೆ ಎಂದು ಹೆದರಿಸುವುದು; ತಾಯಿಯ ಈ ಜೀವ ಬೆದರಿಕೆಗೆ ಹೆದರಿ, ಒಲ್ಲದ ಮನಸ್ಸಿನಿಂದಲೇ ಯಶೋಧರ ಸಂಕಲ್ಪ ಹಿಂಸೆ ಮಾಡುವುದು; ಮುಂದೆ ಈ ಸಂಕಲ್ಪ ಹಿಂಸೆಯ ಪರಿಣಾಮಗಳನ್ನು ತಾಯಿ ಮತ್ತು ಮಗ ಇಬ್ಬರೂ ಅನುಭವಿಸುವುದು–ಹೀಗೆ ಹಿಂಸೆಯ ಸುತ್ತ ಚಕ್ರಗತಿಯಲ್ಲಿ ಸುತ್ತುತ್ತಲೇ ಸಾಗುವ ಘಟನಾವಳಿಗಳುಳ್ಳ ಈ ಕಾವ್ಯದ ಕೇಂದ್ರ ವಸ್ತು 'ಬಲಿ'. ಕಾವ್ಯಸಂದರ್ಭದಲ್ಲಿ 'ಬಲಿ' ಎಂಬುದಕ್ಕೆ ಆಹುತಿ(Victim) ಎಂಬ

ಅರ್ಥವೂ ಇದೆ. ತ್ಯಾಗ(Sacrifice)ಎಂಬರ್ಥವೂ ಇದೆ.

ಅಷ್ಟಾವಂಕನ ಸೆಳೆತಕ್ಕೆ ಒಳಗಾದ ಅಮೃತಮತಿ ಯಶೋಧರನಿಂದ ವಿಮುಖಳಾಗುವ; ದಾಂಪತ್ಯವನ್ನು ಮೀರಿದ ತನ್ನ ಪ್ರೇಮಕ್ಕೆ ತನ್ನದೇ ಆದ ಹೊಸ ವ್ಯಾಖ್ಯಾನ ನೀಡುವ; ಹೊಸ ಪ್ರೇಮ ಸಿದ್ಧಾಂತವನ್ನೇ ಮಂಡಿಸುವ ಅನಿರೀಕ್ಷಿತ ಬೆಳವಣಿಗೆಗಳು ಯಶೋಧರ ಚರಿತೆಯ ಕಥಾವಸ್ತುವಿನ ದಿಕ್ಕನ್ನು ಮತ್ತು ಆ ಮೂಲಕ ಕಾವ್ಯೋದ್ದೇಶವನ್ನೇ ಬದಲಿಸುತ್ತವೆ. ಕಾವ್ಯದಲ್ಲಿ ಘಟಿಸುವ ಈ ಅನಿರೀಕ್ಷಿತ ಬೆಳವಣಿಗೆಗಳು ಉತ್ತರವಿಲ್ಲದ ಹಲವು ಪ್ರಶ್ನೆಗಳು ಏಳುವಂತೆ ಮಾಡುತ್ತವೆ.

ಕಾವ್ಯದ ಒಳಗಿನ ವಿವರಗಳನ್ನೇ ಆಧರಿಸಿ ಹೇಳುವುದಾದರೆ, ಅಮೃತಮತಿ ಯಶೋಧರನ 'ಮನಃಪ್ರಿಯೆ' ಆಗಿದ್ದವಳು. ಪರಸ್ಪರರ ಪ್ರೀತಿಯನ್ನೇ ಧಾರೆಯೆರೆದಂತೆ ಹುಟ್ಟಿದ ಮಗನಿಗೆ ಯಶೋಧರ ಮತ್ತು ಅಮೃತಮತಿಯರಿಬ್ಬರೂ ತಂತಮ್ಮ ಹೆಸರುಗಳ ಪೂರ್ವಾರ್ಧ ಮತ್ತು ಉತ್ತರಾರ್ಧ ಭಾಗಗಳನ್ನು ಸೇರಿಸಿ 'ಯಶೋಮತಿ' ಎಂದು ನಾಮಕರಣ ಮಾಡಿದ್ದಾರೆ. ವರ್ಷಗಳು ಕಳೆದು, ಮಗ ಈಗ ಬೆಳೆದು ದೊಡ್ಡವನಾಗಿದ್ದಾನೆ. ಯಶೋಧರ ಮತ್ತು ಅಮೃತಮತಿ ಪ್ರೇಮ–ಕಾಮಗಳನ್ನು ಅನುಭವಿಸುತ್ತಾ, ಅನ್ಯೋನ್ಯವಾಗಿ ಆದರ್ಶ ದಂಪತಿಗಳಾಗಿ ಬದುಕು ಸಾಗಿಸಿದ್ದಾರೆ. ಇಬ್ಬರಲ್ಲೂ ಪರಸ್ಪರ ಗೌರವಾದರಗಳಿವೆ. ರತಿ ಸುಖಕ್ಕೂ ಕೊರತೆಯಿಲ್ಲ.

ಆದರೂ, ತನ್ನ ಮನಃಸಂತೋಷಕ್ಕಾಗಿ ಎಂದಿನಂತೆ ಹಾಡಿಕೊಳ್ಳುತ್ತಿದ್ದ ಮಾವುತನ ಹಾಡಿಗೆ ಅಮೃತಮತಿ ಇದ್ದಕ್ಕಿದ್ದಂತೆ ಚಂಚಲಗೊಂಡಿದ್ದು ಏಕೆ? ಇದು ನಿಜವೇ ಆಗಿದ್ದಲ್ಲಿ, ಈ ದಂಪತಿಗಳ ಸಂಬಂಧದ ವಿಚಾರದಲ್ಲಿ ಕವಿ ಬಳಸುವ 'ಮನಃಪ್ರಿಯೆ' ಮತ್ತು 'ಹೃದಯಪ್ರಿಯರ್' ಎಂಬ ಶಬ್ದಗಳಿಗೆ ಇರುವ ಅರ್ಥವಾದರೂ ಏನು?– ಹೀಗೆ ಪ್ರಶ್ನೆಗಳ ಸರಮಾಲೆಯೇ ಏಳುತ್ತದೆ. ಮಾವುತನ ಹಾಡಿನ ಏರಿಳಿತಗಳಿಗೆ, ಆ ಹಾಡಿನ ಹೊಸತನಕ್ಕೆ ಅಮೃತಮತಿ ಅಕ್ಷರಶಃ ಸ್ವಾಧೀನ ಕಳೆದುಕೊಳ್ಳುವ ಪರಿ ಮತ್ತು ಆಕೆಯ ಮನಸ್ಸು–ದೇಹಗಳಲ್ಲಾಗುವ ಬದಲಾವಣೆಗಳು ಎಂತಹವರನ್ನೂ ಆಶ್ಚರ್ಯಗೊಳಿಸುತ್ತವೆ.

.... ವಿಕಲ
ಸ್ವಾಂತೆಗೆ ನೋಡುವ ಕೂಡುವ
ಚಿಂತೆ ಕಡಲ್ವರಿದುದಂದು ಬೆಳಗಪ್ಪಿನೆಗಂ[5] (32)

ಪೂರ್ವಾಪರ ತಿಳಿಯದೆಯೇ 'ಪ್ರಸಾದವನ್ನು ದಾನವಾಗಿ ಕೊಡುವಂತೆ' ಮನಸ್ಸನ್ನು ಕೊಟ್ಟುಬಿಡುತ್ತಾಳೆ ಅಮೃತಮತಿ ಹಾಡುಗಾರನಿಗೆ. ಬೆಳಗಾದದ್ದೇ ತಡ, ತನ್ನ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ದಾಸಿಯನ್ನು ಕರೆದು, ತನ್ನ ಮನಸ್ಸನ್ನೇ ತೆಗೆದು ಅವಳ ಮುಂದಿಡುತ್ತಾಳೆ! ಈಗ ಆಘಾತಕ್ಕೆ ಒಳಗಾಗುವ ಸರದಿ ದಾಸಿಯದು!

ದಾಸಿಯು ಅಮೃತಮತಿಯ ಸೂಚನೆಯಂತೆ, ತನಗೆ ಇಷ್ಟವಿಲ್ಲದಿದ್ದರೂ ಒಲ್ಲದ ಮನಸ್ಸಿನಿಂದಲೇ, ಹಾಡುಗಾರನನ್ನು ಹುಡುಕಿಕೊಂಡು ಹೊರಡುತ್ತಾಳೆ. ಆದರೆ ಆತನ ಭಯಂಕರ–ಅಸಹ್ಯ–ಕುರೂಪ ರೂಪವನ್ನು ಕಂಡು, ಕಣ್ಣಿಗೂ ಮನಸ್ಸಿಗೂ ವಾಕರಿಕೆ ಬಂದಂತಾಗಿ, ಒಂದು ಕ್ಷಣವೂ ಅಲ್ಲಿ ನಿಲ್ಲಲಾರದೆ ಇದ್ದಕ್ಕಿದ್ದಂತೆ ಮರಳುತ್ತಾಳೆ:

...ಆತನ ರೂಪುಗಂಡು ಕಣ್ಗಂ
ಮನಕ್ಕಮುದ್ಗಾರವೆತ್ತು ಭೋಂಕನೆ ಮಗುಳ್ದಳ್[6] (33)

ನಿಜಕ್ಕೂ ದಾಸಿಗೆ ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆಕೆಯ ರೂಪವನ್ನು ಆ 'ಅಧಮನ್' ಅಷ್ಟಾವಂಕನೊಂದಿಗೆ ಹೋಲಿಸುತ್ತಾ, ಆತ ಆಕೆಗೆ ಯೋಗ್ಯನಲ್ಲ ಎಂಬ ನಿರ್ಧಾರಕ್ಕೆ ಬರುತ್ತಾಳೆ: ಬೆಂದ ಬಿದಿಗೆ ಕಣ್ಣಿಲ್ಲಕ್ಕುಂ[7] ಎನ್ನುತ್ತಾಳೆ.

ಆದರೂ 'ಹೆಣ್ಣಾದವಳು ಅಯೋಗ್ಯರಲ್ಲಿ ಮನರಂಜನೆಯನ್ನು ಪಡೆಯುತ್ತಾಳೆ' ಎಂಬ ಉಕ್ತಿ ನೆನಪಾಗಿ, ಕಣ್ಣೆದುರಿನ ಸತ್ಯವನ್ನು ಒಪ್ಪಿಕೊಳ್ಳಲಾರದೆ ಸಹನೆ ಕಳೆದುಕೊಳ್ಳುತ್ತಾಳೆ. ಇದಕ್ಕೆಲ್ಲ ಅವಕಾಶ ಮಾಡಿಕೊಟ್ಟ 'ಸುಟ್ಟುಹೋದ ಆ ವಿಧಿಗೆ ಕಣ್ಣಿಲ್ಲ' ಎಂದು ವಿಧಿಯನ್ನೇ ಶಪಿಸುತ್ತಾಳೆ. ವಾಸ್ತವವಾಗಿ, ಪ್ರೇಮದಲ್ಲಿ ಕುರುಡಳಾಗಿರುವುದು ಒಡತಿ ಅಮೃತಮತಿ. ಆದರೆ ದಾಸಿ ನಿಂದಿಸುವುದು ಅಮೃತಮತಿಯನ್ನಲ್ಲ, ಅಷ್ಟಾವಂಕನನ್ನು ಮತ್ತು ವಿಧಿಯನ್ನು!

ಹೇಗಾದರೂ ಮಾಡಿ, ಅಮೃತಮತಿಯ ಮನಸ್ಸನ್ನು ಪರಿವರ್ತನೆ ಮಾಡಲೇಬೇಕೆಂದು ನಿರ್ಧರಿಸಿ, ಹೀಗೆ ಪ್ರಶ್ನಿಸುತ್ತಾಳೆ:

ಕಂತುವಿನ ಕಯ್ಯ ಕೂರಸಿ
ಯಂತಿರೆ ಗರಗರಿಕೆವಡೆದು ಪೊಳೆವಸಿಯಳೆ ನೀ
ನಿಂತಪ್ಪ ಕಾಮದೇವಂ
ಗೆಂತೆಂತಾಯ್ದರಸಿ ಕೂರ್ತೆಯೆಂದಾನರಿಯೆಂ[8] (36)

ಆದರೆ ದಾಸಿಯ ಈ ವ್ಯಂಗ್ಯವನ್ನು ಸರಿಯಾಗಿ ಗ್ರಹಿಸದ ಅಮೃತಮತಿ, 'ಹೇಳು ಹೇಳು ದಾಸೀ. ನನ್ನ ಪ್ರಿಯಕರನು ಅಷ್ಟೊಂದು ಚೆಲುವನೇ! ನೀನು, ತಡ ಮಾಡಿ, ನನ್ನನ್ನು ಕೊಲ್ಲುತ್ತಿದ್ದೀಯಾ' ಎನ್ನುತ್ತಾಳೆ. ಆಗ ಬೇರೆ ದಾರಿಯೇ ಇಲ್ಲದೆ ಅಷ್ಟಾವಕ್ರನ ಕುರೂಪವನ್ನು, ಆತನ ಕೆದರಿದ ತಲೆಗೂದಲಿನಿಂದ ಹಿಡಿದು ಸೊಂಟ ಮುರಿದ ಕಾಲುಗಳವರೆಗೂ, ಎಷ್ಟು ಸಾಧ್ಯವೋ ಅಷ್ಟೂ ಅಸಹ್ಯವೆನ್ನಿಸುವಂತೆ ದಾಸಿ ವರ್ಣಿಸುತ್ತಾಳೆ. ಈ ಮಾತುಗಳನ್ನು ಕೇಳಿಯಾದರೂ ಸರಿ. ಅಮೃತಮತಿ ತನ್ನ ಪ್ರೇಮದ ನಿರ್ಧಾರದಿಂದ ಹಿಂದೆ ಸರಿಯಬಹುದು ಎಂಬ ನಿರೀಕ್ಷೆ ದಾಸಿಯದು.

ಅಷ್ಟಾವಂಕನನ್ನು ಕಣ್ಣಾರೆ ನೋಡದೆಯೇ, ಅವನ ಬಗೆಗೆ ಏನನ್ನು ತಿಳಿಯದೆಯೇ, ಅಮೃತಮತಿ ಪ್ರೇಮದಲ್ಲಿ ಎಷ್ಟು ಮುಂದುವರೆದಿದ್ದಾಳೆಂದರೆ ಮತ್ತೆ ಹಿಂತಿರುಗಿ ಬರಲಾಗದಷ್ಟು! ಹಾಗಾಗಿ, ಅಮೃತಮತಿ ಅಷ್ಟಾವಂಕನ ರೂಪವನ್ನು, ಆತನ ಬಗೆಗಿನ ತನ್ನ ಪ್ರೇಮವನ್ನು ಸಮರ್ಥಿಸಿಕೊಳ್ಳುತ್ತಾಳೆ.

ಕರಿದಾದೊಡೆ ಕತ್ತುರಿಯಂ
ಮುರುಡಾದೊಡೆ ಮಲಯಜಂಗಳಂ ಕೊಂಕಿದೊಡೇಂ
ಸ್ಮರಚಾಪಮನಿಳಿಕಯ್ವರೆ
ಮರುಳೇ ಪೊಲ್ಲಮೆಯೆ ಲೇಸು ನಲ್ಲರ ಮೆಯ್ಯೊಳ್[9] (42)

ಪ್ರೇಮದಲ್ಲಿ ಹುಚ್ಚಳಾದ ಅಮೃತಮತಿ ದಾಸಿಯನ್ನೇ 'ಹುಚ್ಚೀ' ಎಂದು ಗದರಿಕೊಂಡು, ಆಕೆಯ ಬಾಯಿ ಮುಚ್ಚಿಸುತ್ತಾಳೆ. ಪ್ರೇಮದ ಸಮರ್ಥನೆಗೆ ಇಳಿಯುವ ಅಮೃತಮತಿ, ಪ್ರೇಮಕ್ಕೆ ಹೊಸ ವ್ಯಾಖ್ಯಾನವನ್ನೇ ನೀಡುತ್ತಾಳೆ. ತನ್ನದೇ ಆದ ಹೊಸ ಪ್ರೇಮ ಸಿದ್ಧಾಂತವನ್ನೇ ಮಂಡಿಸುತ್ತಾಳೆ: ಒಲವಾದೊಡೆ ರೂಪಿನ ಕೋಟಲೆಯೇವುದೊ[10] ಎಂದು ಪ್ರಶ್ನಿಸುತ್ತಾಳೆ. ಇಲ್ಲಿ, ಅಮೃತಮತಿ ಕೇಳುವ ಪ್ರಶ್ನೆಗಳಿಗೆ ದಾಸಿಯ ಬಳಿ ಉತ್ತರಗಳಿಲ್ಲ.

ಹಾಗಾಗಿ ಅಮೃತಮತಿ ತನ್ನ ದಾಸಿಗೇ ಲಂಚಕೊಟ್ಟು, ಮಾವುತನ ಬಳಿಗೆ ಕಳುಹಿಸುತ್ತಾಳೆ. ತಾನು ಹೇಳಿದ್ದನ್ನು ಯಥಾವತ್ತಾಗಿ ಆತನಿಗೆ ಹೇಳುವಂತೆ ಮಾಡಿ, ಅಂದಿನಿಂದ ರಾತ್ರಿ–ಹಗಲುಗಳಲ್ಲಿ ತನ್ನ ಬಿಡುವಿನ ಸಮಯವನ್ನು ಮಾವುತನೊಂದಿಗೆ ಕಳೆಯುತ್ತಾಳೆ. ಬೇವನ್ನು ಇಷ್ಟಪಟ್ಟ ಕಾಗೆಗೆ ಮಾವಿನ ಬಗ್ಗೆ ಆಸಕ್ತಿ ಇಳಿದು ಹೋಗುವಂತೆ, ಆ ಅಷ್ಟಾವಂಕನಲ್ಲಿ ರುಚಿ ಕಂಡುಕೊಂಡ ಅಮೃತಮತಿಗೆ ತನ್ನ ಪತಿ ಯಶೋಧರನ ಬಗೆಗಿನ ಆಸಕ್ತಿ ಇಳಿದುಹೋಗುತ್ತದೆ.

ಕಾವ್ಯದ ಉದ್ದಕ್ಕೂ ಘಟಿಸುವ ಈ ಅನಿರೀಕ್ಷಿತ ಘಟನೆಗಳಿಗೆ ಕವಿ ಜನ್ನ, ಒಂದೆಡೆ ಇದಕ್ಕೆಲ್ಲಾ 'ವಿಧಿ' ಕಾರಣವೆನ್ನುತ್ತಾನೆ. ಮತ್ತೊಂದೆಡೆ ನೀತಿ–ಅನೀತಿ, ಪಾಪ–ಪುಣ್ಯಗಳ ಪರಿಭಾಷೆಯಲ್ಲಿ ಅಮೃತಮತಿಯ ಚಾರಿತ್ರ್ಯವನ್ನು ಕಟಕಟೆಯಲ್ಲಿ ನಿಲ್ಲಿಸುತ್ತಾನೆ. ಕಾಮವಿಕಾರಕ್ಕೆ ಒಳಗಾಗಿ ದಾರಿ ತಪ್ಪಿದ ಜಾರೆ, ಕುಟಿಲೆ, ಸ್ವಂತ ಗಂಡನನ್ನೂ ಅತ್ತೆಯನ್ನೂ ವಿಷದ ಲಡ್ಡುಗೆ ಕೊಟ್ಟು ಕೊಂದ ಕಡುಪಾಪಿ ಎಂದು ನಿಂದಿಸುತ್ತಾನೆ.

'ಜೀವದಯೆ ಜೈನ ಧರ್ಮ' ಎಂಬ ತಾತ್ವಿಕತೆಯನ್ನು ನಿರೂಪಿಸುವುದು; ಕೇವಲ ಸಂಕಲ್ಪ ಹಿಂಸೆ ಮಾಡಿದ ಏಕೈಕ ಕಾರಣದಿಂದಲೇ ಜೀವವೊಂದು ಹೇಗೆ ಹಲವು ಜನ್ಮಗಳಲ್ಲಿ ಪ್ರಾಣಿ–ಪಕ್ಷಿಗಳಾಗಿ ಪರಿತಪಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡುವುದು– 'ಯಶೋಧರ ಚರಿತೆ' ಕಾವ್ಯದ ಉದ್ದೇಶ. ಕವಿ ಜನ್ನನ ದೃಷ್ಟಿಯಲ್ಲಿ ಅಮೃತಮತಿಯ ಕಾಮವಿಕಾರ ಮತ್ತು ಕೊಲೆಪಾತಕತನಕ್ಕಿಂತ ಹೆಚ್ಚು ಘೋರವಾದುದು ಯಶೋಧರ ಮತ್ತು ಚಂದ್ರಮತಿ ಮಾಡಿದ ಸಂಕಲ್ಪ ಹಿಂಸೆ.

ಜೀವದಯೆ ಜೈನಧರ್ಮಂ
ಜೀವಹಿತಂ ನಂಬುಬರ್ಗೆ ಹಿಂಸೆಯ ಮೋಹಂ
ಭಾವಿತಮೆ ತಪ್ಪಿನುಡಿದಿರ್
ಕಾವರೆ ಕಣೆಗೊಳ್ವೊಡಬ್ಬೆ ಬಾರಿಪರೊಳರೇ[11] **(19)**

ಆದರೂ ಅಮೃತಮತಿಯನ್ನು ಧರ್ಮದ ತಾತ್ವಿಕತೆಯ ಮೂಲಕ ಮತ್ತು ಪುರುಷ ಪ್ರಧಾನ ಸಮಾಜದ ಮೌಲ್ಯಗಳ ಮೂಲಕ ಕವಿಜನ್ನ ಕಟುವಿಮರ್ಶೆಗೆ ಒಳಪಡಿಸಿರುವುದನ್ನು ಕಾಣಬಹುದು. ಇವನ ಕಾವ್ಯದ ಹಲವು ಓದುಗರೂ ಸಹ ಇದೇ ಕೆಲಸವನ್ನು, ಅಂದರೆ, ಅಮೃತಮತಿ ತಪ್ಪಿತಸ್ಥಳೆಂದು ತೀರ್ಪು ನೀಡುವ ಕೆಲಸವನ್ನು ಮಾಡಿದ್ದಾರೆ.[12]

ಅಮೃತಮತಿ ತನ್ನ ಇರುಳ ಬದುಕು ಬಯಲಾಗಿರಬೇಕೆಂದು ಊಹಿಸಿ, ಗಂಡ ಯಶೋಧರನನ್ನೂ ಮತ್ತು ಯಶೋಧರನ ತಾಯಿ ಚಂದ್ರಮತಿಯನ್ನೂ ತನ್ನ ಮನೆಗೆ ಆತಿಥಿಗಳಾಗಿ ಒತ್ತಾಯ ಮಾಡಿ ಆಹ್ವಾನಿಸಿ ವಿಷದ ಲಡ್ಡುಗೆಗಳನ್ನು ಸಾಕು ಎನ್ನಿಸುವಷ್ಟು ಬಡಿಸಿ ಕೊಲ್ಲುತ್ತಾಳೆ. ಅಮೃತಮತಿ ಎಂಬ ಈಕೆಯ ಹೆಸರಿಗೂ ಈಕೆಯ ಕೃತ್ಯಗಳಿಗೂ ತಾಳೆಯಾಗುವುದೇ ಇಲ್ಲ.

ತಾನು ಸತ್ತು 'ಧೂಮಪ್ರಭೆ' ಎಂಬ ನರಕಕ್ಕೆ ಹೋದರೂ, ಬಯಸಿದಂತೆ ಬದುಕಿ, ಒಮ್ಮೆಯೂ ತನ್ನ ಕೃತ್ಯಗಳ ಬಗೆಗೆ ಪಶ್ಚಾತ್ತಾಪ ಪಡದ ಈ ಅಮೃತಮತಿಯನ್ನು ಅರ್ಥ ಮಾಡಿಕೊಳ್ಳುವುದು ಹೇಗೆ? 'ಯಶಸ್ಸನ್ನು ಧರಿಸಿದವನು' ಎಂಬರ್ಥದ ಹೆಸರಿರುವ ಯಶೋಧರನು ವೈಯಕ್ತಿಕ ಜೀವನದಲ್ಲಿ ಸೋಲಿನ ಸರಮಾಲೆಯನ್ನೇ ಅನುಭವಿಸಿದ್ದು ಏಕೆ? ಅಹಿಂಸಾ ತತ್ವವನ್ನು ನಿರೂಪಿಸುವ ಉದ್ದೇಶವುಳ್ಳ ಈ ಕಾವ್ಯದ ಉದ್ದಕ್ಕೂ ಹಿಂಸಾತ್ಮಕ ಪ್ರತಿಮೆಗಳೇ ಎದುರಾಗುತ್ತವೆ. ಇದು ಏನನ್ನು ಸೂಚಿಸುತ್ತದೆ?

ಹೀಗೆ ಹಲವು ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದುಬಿಡುವುದು; ಆ ಮೂಲಕ ಓದುಗರನ್ನು ತಾತ್ವಿಕ ಚಿಂತನೆಗೆ ಹಚ್ಚುವಂತೆ ಮಾಡುವುದು– 'ಯಶೋಧರ ಚರಿತೆ' ಕಾವ್ಯದ ಹೆಚ್ಚುಗಾರಿಕೆ. ವಾಸ್ತವವಾಗಿ, ಅಮೃತಮತಿಯ ಪ್ರಣಯದ ಕಥೆಯನ್ನು ಹೇಳುವುದು ಕವಿ ಜನ್ನನ ಮುಖ್ಯ ಉದ್ದೇಶವಲ್ಲ. ಅಹಿಂಸಾ ತತ್ವದ ನಿರೂಪಣೆಯ ತನ್ನ ಉದ್ದೇಶ ಸಾಧನೆಗಾಗಿ, ಅಮೃತಮತಿಯ ಚಾರಿತ್ರ್ಯದ ಕಥೆಯನ್ನು ಮೆಟ್ಟಿಲನ್ನಾಗಿ ಬಳಸಿಕೊಂಡಿದ್ದಾನೆ. ಇಡೀ ಕಾವ್ಯವೇ ವೈರುಧ್ಯದಂತೆ ಕಾಣುತ್ತದೆ.

ಇಲ್ಲಿ ಕವಿ ಹೇಳಲು ಬಯಸುವುದೇ ಒಂದನ್ನು. ಕಾವ್ಯ ಧ್ವನಿಸುವುದೇ ಮತ್ತೊಂದನ್ನು. ಪಿತೃವ್ಯವಸ್ಥೆಯ ಮೌಲ್ಯಗಳ ನೆಲೆಯಲ್ಲಿ ನಿಂತು ನೋಡಿದಾಗ, ಧರ್ಮದ ನೆಲೆಯಲ್ಲಿ ನಿಂತು ನೋಡಿದಾಗ, ವಿಧಿವಾದದ ಕನ್ನಡಿಯಲ್ಲಿ ನೋಡಿದಾಗ, ಕರ್ಮ ಸಿದ್ಧಾಂತದ ಪ್ರತಿಪಾದನೆಯಾಗಿ ನೋಡಿದಾಗ, ಸ್ತ್ರೀವಾದೀ ನೆಲೆಯಲ್ಲಿ ನಿಂತು ನೋಡಿದಾಗ – ಈ ಕಾವ್ಯ ನಮಗೆ ಭಿನ್ನವಾಗಿ ಕಾಣುತ್ತದೆ. ಕಾವ್ಯದ ಧ್ವನಿ ಸಹ ಭಿನ್ನವಾಗಿ ಕೇಳುತ್ತದೆ. ಕವಿಯನ್ನು ಮೀರಿ ಕಾವ್ಯ ಬೆಳೆದಿರುವುದರಿಂದ ಇದು ಸಾಧ್ಯವಾಗಿದೆ. ಇದೇ 'ಯಶೋಧರ ಚರಿತೆ'ಯ ಹೆಚ್ಚುಗಾರಿಕೆ.

ಕೊನೆ ಟಿಪ್ಪಣಿಗಳು

1. ಜನ್ನ ಕವಿಯ ಯಶೋಧರ ಚರಿತೆ, ತೆಕ್ಕುಂಜ ಗೋಪಾಲಕೃಷ್ಣಭಟ್ಟ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015, ಒಂದನೆಯ ಅವತಾರ, ಪು.18
2. ಒಂದನೆಯ ಅವತಾರದ 08ನೇ ಪದ್ಯದಿಂದ 23ನೇ ಪದ್ಯದವರೆಗೆ ಮೊದಲಿಗೆ ಹೊಯ್ಸಳ ರಾಜರ ಚಾರಿತ್ರಿಕ ವಿವರಗಳನ್ನು ನೀಡಿ, ಆನಂತರ ಅವರ ಆಸ್ಥಾನಕವಿಯಾದ ತನ್ನ ವೈಯಕ್ತಿಕ ವಿಚಾರಗಳನ್ನು ಕವಿ ರನ್ನ ಹೇಳಿಕೊಂಡಿದ್ದಾನೆ.
3. ಅಭಯರುಚಿ ಮತ್ತು ಅಭಯಮತಿಯರು ಚಂಡಮಾರಿ ದೇವಾಲಯದ ಆವರಣ ಹೊಕ್ಕಾಗ, ಪುರಜನರ ಧಾರ್ಮಿಕ ಆಚರಣೆಯ ಭಾಗವಾಗಿ, ಕಾಣುವ ಹಿಂಸಾತ್ಮಕ ದೃಶ್ಯಗಳು ಅತ್ಯಂತ ಹಸಿಹಸಿ ಎನ್ನಿಸುತ್ತವೆ. ಆದರೂ ಈ ದೃಶ್ಯಗಳಿಗಿಂತ ಅಮೃತಮತಿ ಬಡಿಸಿದ ವಿಷದ ಲಡ್ಡುಗೆಗಳನ್ನು ತಿಂದು ಸತ್ತ ಯಶೋಧರ ಮತ್ತು ಚಂದ್ರಮತಿಯರು ಆರು ಜನ್ಮಗಳಲ್ಲಿ ಪ್ರಾಣಿಪಕ್ಷಿಗಳಾಗಿ ಹುಟ್ಟಿ ನರಳುವ ವಿವರಗಳಲ್ಲಿ ಹೆಚ್ಚಿನ ಹಿಂಸೆಯಿದೆ ಎನ್ನುವುದನ್ನು ನಾವು ಮನಗಾಣಬೇಕು.
4. ಈ ಥೀಮ್ ಹಿನ್ನೆಲೆಯಲ್ಲಿಯೇ ಗಿರೀಶ್ ಕಾರ್ನಾಡರ 'ಹಿಟ್ಟಿನ ಹುಂಜ ಅಥವಾ ಬಲಿ' (1980)ನಾಟಕ ರಚನೆಯಾಗಿರುವುದನ್ನು ಗಮನಿಸಬಹುದು.
5. ಅದೇ, ಎರಡನೆಯ ಅವತಾರ, ಪು.35
6. ಅದೇ, ಎರಡನೆಯ ಅವತಾರ, ಪು.36
7. ಅದೇ, ಎರಡನೆಯ ಅವತಾರ, ಪು.36
8. ಅದೇ, ಎರಡನೆಯ ಅವತಾರ, ಪು.36
9. ಅದೇ, ಎರಡನೆಯ ಅವತಾರ, ಪು.38
10. ಅದೇ, ಎರಡನೆಯ ಅವತಾರ, ಪು.38
11. ಅದೇ, ಮೂರನೆಯ ಅವತಾರ, ಪು.48
12. ನಿದರ್ಶನಕ್ಕಾಗಿ ಕುವೆಂಪು ಅವರ 'ಯಶೋಧರ ಚರಿತೆಯಲ್ಲಿ ಅಮೃತಮತಿಯ ಕಾಮವಿಕಾರ ನಿರೂಪಣೆಯ ಉದ್ದೇಶ' ಎಂಬ ಲೇಖನವನ್ನು ಗಮನಿಸಬಹುದು. ಆಕರ ಕೃತಿ: ದ್ರೌಪದಿಯ ಶ್ರೀಮುಡಿ, ಕುವೆಂಪು, ಉದಯರವಿ ಪ್ರಕಾಶನ, 2014.

❖❖❖

ಸಣ್ಣಕತೆಗಾರರಾಗಿ ತ.ರಾ. ಸುಬ್ಬರಾಯ

ಡಾ. ತಿಪ್ಪೇಸ್ವಾಮಿ ಡಿ.ಎಸ್.
ಸಹ ಪ್ರಾಧ್ಯಾಪಕರು
ವಿ.ಎಂ.ಕೆ.ಎಸ್.ಆರ್. ವಸ್ತ್ರದ ಕಲಾ, ವಿಜ್ಞಾನ ಹಾಗೂ
ವಿ.ಎಸ್. ಬಿ. ವಾಣಿಜ್ಯ ಮಹಾವಿದ್ಯಾಲಯ, ಹುನಗುಂದ

ಪ್ರಗತಿಶೀಲ ಕಾಲಘಟ್ಟದಲ್ಲಿ ಅ.ನ.ಕೃರವರ ಶಿಷ್ಯರೆಂದೇ ಹೆಸರಾದ ತ.ರಾ.ಸು (ತಳಕಿನ ರಾಮಸ್ವಾಮಯ್ಯನವರ ಮಗ ಸುಬ್ಬರಾಯ) ಅವರು ಕಾದಂಬರಿಗಳ ಸಾರ್ವಭೌಮರೆಂದೇ ಪ್ರಸಿದ್ಧರು. ಸಾಂಪ್ರದಾಯಿಕ ಮನೆತನದಲ್ಲಿ ಹುಟ್ಟಿ ಸಾಹಿತ್ಯಿಕ ಪರಿಸರದಲ್ಲಿ ಬೆಳೆದ ಇವರು ವಿದ್ಯಾರ್ಜನೆಯ ಅವಧಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದತ್ತ ಆಕರ್ಷಿತರಾದರು. ಆನಂತರ ಬದುಕಿನ ಬವಣೆಗಳನ್ನು ಅನುಭವಿಸಿ, ವೃತ್ತಿರಂಗಭೂಮಿ ಪ್ರವೇಶಿಸಿದರು, ಜೀವನನಿರ್ವಹಣೆಗಾಗಿ ಪ್ರತ್ರಿಕಾಲಯಗಳಲ್ಲಿ ಕೆಲಸ ಮಾಡಿ, ನಂತರ ಸರಿಸುಮಾರು ನಾಲ್ವತ್ತರ ದಶಕದಲ್ಲಿ ತಮ್ಮ ಸಾಹಿತ್ಯಕೃಷಿಯನ್ನು ಆರಂಭಿಸಿದ ತ.ರಾ.ಸು. ಅವರು ಕಾದಂಬರಿಕ್ಷೇತ್ರದಲ್ಲಿ ಮೂಡಿದ ಸಾಧನೆ ಅದ್ವಿತೀಯವಾದುದು. ಸುಮಾರು ಐವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು ಮತ್ತು ಸುಮಾರು ಇಪ್ಪತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದ ತ.ರಾ.ಸು ಅವರು ಪ್ರಗತಿಶೀಲ ಸಾಹಿತ್ಯದಲ್ಲಿರುವ ಅಂಶಗಳನ್ನೇ ಅವುಗಳಲ್ಲಿ ತಂದಿದ್ದಾರೆ.

ಹೊಸಗನ್ನಡ ಗದ್ಯಸಾಹಿತ್ಯದಲ್ಲಿ ತ.ರಾ.ಸು ಅವರ ಬರವಣಿಗೆ ಎಂದು ಖಚಿತವಾಗಿ ಗುರುತಿಸಲು ಸಾಧ್ಯವಾಗುವಷ್ಟರ ಮಟ್ಟಿದೆ ಅವರದೇ ವೈಶಿಷ್ಟವಿದೆ. ಕಥೆಯ ಕುತೂಹಲ, ಸನ್ನಿವೇಶ, ಜ್ವಲಂತತೆಯನ್ನು ಅವರು ಅದ್ಭುತವಾಗಿ ನಿರ್ವಹಿಸಬಲ್ಲರು; ಬದುಕಿನ ಹೃದಯ ಸ್ಪಂದನವನ್ನು ಯಶಸ್ವಿಯಾಗಿ ಕೇಳಬಲ್ಲರು ಹೊಸಜೀವನ ಸಮಸ್ಯೆಗಳನ್ನು ಕೇಳಬಲ್ಲ ಇವರು ಒಳಪದರವನ್ನು ಕೂಡ ಬಿಚ್ಚಿತೋರಿಸಬಲ್ಲರು, ಎಲ್.ಎಸ್. ಶೇಷಗಿರಿರಾವ್ ಅವರು ಪ್ರಗತಿಶೀಲರ ಪೈಕಿ ಕಲೆಗಾರಿಕೆ, ಚಿತ್ರಮಯವಾದ ಭಾಷೆ, ಕಣ್ಣಿಗೆ ಕಟ್ಟುವಂತೆ ವರ್ಣಿಸುವ ಶೈಲಿ ತ.ರಾ.ಸು. ಅವರದು; ಅದು ಭಾವುಕತೆಗೆ ಅಂಟುವ ಬರಹ ಎನ್ನುತ್ತಾರೆ.

ಬದುಕನ್ನು ಅರ್ಥೈಸುವ ಬಗೆ, ಅದಕ್ಕೆ ನೀಡುವ ಸ್ವತಂತ್ರ ವಿನ್ಯಾಸ, ಅವರ ಶೈಲಿ, ತಂತ್ರ, ಸಂಭಾಷಣೆ ಗಮನಿಸಿದಾಗ ನವೋದಯ ಬುನಾದಿಯ ಪ್ರಗತಿಶೀಲ ಕಟ್ಟಡದಲ್ಲಿ ನಿಂತು ನವ್ಯದ ಧ್ವನಿ ಹೊರಡಿಸಿದ್ದಾರೆ ಎನಿಸುತ್ತದೆ.

ನಿರರ್ಗಳತೆ, ಸ್ಪಷ್ಟತೆ, ಓಜಸ್ಸು ಅವರ ಗದ್ಯಶೈಲಿಯ ಲಕ್ಷಣಗಳು. ಪಾತ್ರಗಳಲ್ಲಿ ಜೀವತುಂಬಿ ಓದುಗರಿಗೆ ಸ್ಫೂರ್ತಿ ತುಂಬಿ, ವಾಕ್‌ಶ್ರೀ, ಭಾಷಾಶ್ರೀ, ಸಾಹಿತ್ಯಶ್ರೀಯ ತ್ರಿವೇಣಿ ಸಂಗಮದಲ್ಲಿ ಮೀಯಿಸುವ ಬರಹಶೈಲಿ ಅವರದು.

ತ.ರಾ.ಸು. ಅವರ ಪ್ರಗತಿಶೀಲ ದೃಷ್ಟಕೋನ ಪ್ರಧಾನವಾಗಿ ಕಾಣಿಸಿಕೊಡಿದ್ದು ಮೊದಲು ಸಣ್ಣ ಕತೆಗಳಲ್ಲಿಯೇ. ಇವರ ಕಥಾಸಂಕಲನಗಳು ನಾಲ್ಕು. ಅವುಗಳೆಂದರೆ, ರೂಪಸಿ(1946), ತೊಟ್ಟಿಲು ತೂಗಿತು(1947), ಗಿರಿಮಲ್ಲಿಗೆಯ ನಂದನದಲ್ಲಿ(1955),

ಇದೇ ನಿಜವಾದ ಸಂಪತ್ತು(1965). ಹೀಗೆ ಇಪ್ಪತ್ತಕ್ಕೂ ಹೆಚ್ಚು ಕಥೆಗಳನ್ನು ಬರೆದ ತ.ರಾ.ಸು. ಅವರು ಪ್ರಗತಿಶೀಲ ಸಾಹಿತ್ಯದ ಅಂಶಗಳಾದ ಧಾರ್ಮಿಕ ಕುರುಡು ನಂಬಿಕೆ, ಸ್ತ್ರೀಶೋಷಣೆ, ವೇಶ್ಯಾಸಮಸ್ಯೆ, ಬಡತನ, ಅತೃಪ್ತಕಾಮ ಮುಂತಾದ ಅಂಶಗಳ ಮೇಲೆ ಕಥೆಗಳನ್ನು ಬರೆದಿದ್ದಾರೆ.

ಇವರ ಮೊದಲ ಕಥಾಸಂಕಲನವಾದ 'ರೂಪಸಿ'ಯ ಕಥೆಗಳೆಲ್ಲವೂ ಗುಂಡು ಹೆಣ್ಣಿನ ಆಕರ್ಷಣೆಯ ವಸ್ತುವನ್ನು ಹೊಂದಿವೆ. ಈ ಸಂಕಲನದ ಮೊದಲ ಕಥೆ 'ರೂಪಸಿ'ಯಲ್ಲಿ ನಾಯಕ ವೇಲಾಯುಧ ಬಡವ. ಒಬ್ಬ ಶ್ರೀಮಂತ ಯುವಕ ಧಾರಾಳವಾಗಿ ಇವನಿಗೆ ಸಹಾಯ ಮಾಡಿದ್ದುದರಿಂದ, ವೇಲಾಯುಧ ನಿನಗೇನು ಕೇಳು ಬೇಕು ಕೊಡುವೆ ಎಂದಾಗ ಗೆಳೆಯ 'ರೂಪಸಿ'ಯನ್ನು ಬೇಡುತ್ತಾನೆ. ಆ ರೂಪಸಿ ಸುಂದರ ಮಾಯಾಮೋಹಕ ರೂಪಿನವಳು. ವೇಲಾಯುಧ ಅವಳನ್ನೇನೊ ಕೊಡುತ್ತಾನೆ. ಆದರೆ ಅವಳಿಂದ ದೂರವಿರುವಂತೆ ಹೇಳುತ್ತಾನೆ. ಆದರೆ ಆಯುವಕ ಅವಳಿಗೆ ಸಂಪೂರ್ಣವಾಗಿ ಮನಸೋತು ಎಚ್ಚರಿಕೆಯನ್ನು ಮರೆತು ಅವಳನ್ನು ಸೇರಲು ಅಣಿಯಾಗುತ್ತಾನೆ. ಅಷ್ಟರಲ್ಲಿ ಅವನನ್ನು ಎಚ್ಚರಿಸಿದ ವೇಲಾಯುಧ ಸರ್ವನಾಶವನ್ನು ತಪ್ಪಿಸುತ್ತಾನೆ. ಈ ರೀತಿ ಶ್ರೀಮಂತ ಯುವಕ ರೂಪಸಿಯನ್ನು ಅನುಭವಿಸದೆ, ವೇಲಾಯುಧನ ಮನಸ್ಸಿಗೂ ತೃಪ್ತಿಕೊಡದೆ, ನಿರ್ಭಾಗ್ಯನಾದೆ ಎಂದು ಹಳಹಳಿಸುವ ಕತೆಯನ್ನು ಹೊಂದಿದೆ.

'ಏಕೆ ಬರಲಿಲ್ಲ' ಎಂಬ ಕಥೆಯಲ್ಲಿ ತನಗೆ ನೃತ್ಯ ಕಲಿಸುತ್ತಿದ್ದ ಮೂರ್ತಿಯ ಯೌವ್ವನದ ಆಕರ್ಷಣೆಗೆ ಒಳಗಾಗಿ ಶಿಷ್ಯೆ ಲಲಿತೆಯಲ್ಲಿ ಸುಪ್ತಬಯಕೆ ಗರಿಗೆದರಿ ಉನ್ಮತ್ತತೆ ಹೆಚ್ಚಾಗಿ ಅವನ ಎದೆಗೊರಗಿ ತನ್ನ ಪ್ರೇಮಕಾಮದ ನಿವೇದನೆ ಮಾಡಿಕೊಳ್ಳುತ್ತಾಳೆ ಆಗ ಮೂರ್ತಿ ಅವಳ ಬಾಲಿಶ ವರ್ತನೆಗೆ ಮರುಗಿ ಮರುದಿನದಿಂದ ಇನ್ನು ನಾನು ಬರುವುದಿಲ್ಲವೆಂದು ಚೀಟಿ ಬರೆದು ಕಳುಹಿಸುತ್ತಾನೆ. ಅವನು ಬರೆದದ್ದನ್ನು ಕಂಡು ಲಲಿತೆಯ ತಾಯಿ ಮೇಸ್ಟ್ರು ಏಕೆ ಬರಲ್ಲಿಲ್ಲ? ಎಂದು ಕೇಳುತ್ತಾಳೆ. ಕಲೆಯ ಆರಾಧಕನಾದ ಮೂರ್ತಿ, ಲಲಿತಳ ವಿದ್ಯೆ ಬಯಸಿದನೆ ಹೊರತು ಅವಳ ಮೈಯನ್ನು ಬಯಸಿದ ಕಾಮದ ಬೊಂಬೆ ಅಲ್ಲ ಎಂಬ ಅರಿವಿನ ಸಿದ್ಧಾಂತ ಈ ಕಥೆಯಲ್ಲಿದೆ.

ಇನ್ನು 'ಮೂರು ನಗು' ಕಥೆಯಲ್ಲಿ ಕಥಾನಾಯಕ ಸುಂದರ ಹೆಂಡತಿ ಮನೆಯಲ್ಲಿದ್ದರೂ ಕೂಡ ಥಳುಕಿನ ಹೆಣ್ಣು ಕ್ಯಾಥರೀನಳಿಗೆ ಮರುಳಾದವನು ಕೊನೆಗೆ ಬೀದಿದೀಪಕ್ಕಿಂತಲೂ ಮನೆ ಹಿತಮಿತ ಬೆಳಕೇ ಶ್ರೇಷ್ಠ ಎಂದು ಅರಿವಾಗಿ ಹೆಂಡತಿಯ ಬಳಿ ಹಿಂದಿರುಗುತ್ತಾನೆ. ಆ ಸಂದರ್ಭದಲ್ಲಿ ಅವಳು ನಗುವ ಮೂರು ಸಲದ ನಗುವೇ ಕಥೆಯ ಶೀರ್ಷಿಕೆಯಾಗಿದೆ.

'ಸಾಕ್ಷಾತ್ಕಾರ' ಕಥೆಯಲ್ಲಿ ತಾನು ಒಲ್ಲೆನೆಂದು ತಿರಸ್ಕರಿಸಿದ ಸೋದರಮಾವನ ಮಗಳು ಬೇರೆ ಮುದುವೆಯಾಗಿ ಸುಖಜೀವನ ನಡೆಸುತ್ತಿರುವಾಗ ಅವಳ ಸೌಂದರ್ಯಕ್ಕೆ ಮನಸೋತು ನೀನನ್ನ ವಶವಾಗದಿದ್ದಾರೆ ನಾನು ಸಾಯುತ್ತೇನೆ ಎಂದು ಹಠಹಿಡಿದ, ಬೇರೆ ದಾರಿಯಿಲ್ಲದ ಆಕೆ ತನ್ನ ದೇಹವನ್ನು ಆತನಿಗೆ ಅರ್ಪಿಸುತ್ತಾಳೆ. ನಂತರ ಆಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ ಲಲಿತಾಳ ಬಲಿದಾನ ಈತನ ಕಣ್ಣು ತರೆಸುತ್ತದೆ. ಆನಂತರ ನಿಜವಾದ ಪ್ರೀತಿಯ ಸಾಕ್ಷಾತ್ಕಾರವಾಗುತ್ತದೆ.

ಇನ್ನೂ ಗೆಲುವಿಗೆ ಸೋಲು ಕಥೆ ತಾನು ವಶಪಡಿಸಿಕೊಂಡ ಹೆಣ್ಣು ಎಂದೂ

ತನ್ನವಳೇ ಎಂದು ದರ್ಪ ತೋರಿಸಲು ಹೋಗಿ ಮುಖಭಂಗಿತನಾಗುತ್ತಾನೆ.

ತ.ರಾ.ಸು. ಅವರ 'ತೊಟ್ಟಿಲು ತೂಗಿತು' ಸಂಕಲನದಲ್ಲಿಯೂ ಭಾವಾತಿರೇಕದ ಛಾಯೆ ಇದೆ. 'ಲೂಸಿಯ ಪ್ರಯಾಣ' ತಾತ ಮೊಮ್ಮಗಳ ನಡುವಿನ ಪ್ರೀತಿಯ ಸುತ್ತ ಹೆಣೆದ ಕಥೆಯಾಗಿದೆ. ಮತ್ತೊಂದಡೆ ಬರಗಾಲದಲ್ಲಿ ಅನಾಥೆಯಾದ ಯುವತಿಯನ್ನು ಕಾಮತೃಪ್ತಿಗಾಗಿ ರೇಷನ್ ಅಂಗಡಿಯ ಗುಮಾಸ್ತ ಬಳಸಿಕೊಳ್ಳುತ್ತಾನೆ. ಕೊನೆಯಲ್ಲಿ ಆಕೆಯ ಮಗು ಸಾಯುವ ಕರುಣಾಜನಕ ಕಥೆ ಇದು. ಇದೇ ಸಂಕಲನದ ಕೊನೆಯ ಕತೆ 'ಉರಿಗಣ್ಣು' ಬಡತನದ ಅನುಕಂಪದ ಕಥೆಯಾಗಿದೆ. ಇನ್ನು 'ಗಿರಿಮಲ್ಲಿಗೆಯ ನಂದನದಲ್ಲಿ' ಸಂಕಲನದಲ್ಲಿಯೂ ಓದುಗರ ಹೃದಯವನ್ನು ತಟ್ಟುವ ಕಥೆಗಳಿವೆ. ಹೆಣ್ಣಿನ ಸೌಂದರ್ಯವೇ ಅವಳಿಗೆ ಮುಳುವಾದದ್ದನ್ನು ಚಿತ್ರಿಸಿದ್ದಾರೆ.

ಹೀಗೆ ತ.ರಾ.ಸು. ಅವರ ಕಥೆಗಳಲ್ಲಿ ಬಡತನ, ನಿರುದ್ಯೋಗ್ಯ, ಹಸಿವು, ಕಾಮ, ಭೋಗಲಾಲಸೆ, ಸ್ತ್ರೀಯರ ಅಸಹಾಯಕತೆ, ಸ್ವಾರ್ಥ, ಮತ್ಸರ, ದ್ವೇಷ, ಪುರುಷರ ದಬ್ಬಾಳಿಕೆ, ಶೋಷಣೆ ಮುಂತಾದ ವಸ್ತುಗಳನ್ನು ಭಾವಪ್ರಚೋದಕವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಸಮಾಜದ ಹಲವು ಮುಖಗಳನ್ನು ಅವರ ಕಥೆಗಳು ಚಿತ್ರಿಸುತ್ತವೆ. ಆದರೆ ಸಮಾಜದ ಸಂಕೀರ್ಣತೆಯನ್ನು ಸೂಕ್ಷ್ಮವಾಗಿ ಚಿತ್ರಿಸುವ ಬದಲು ಹೆಚ್ಚಿನ ಕಥೆಗಳು ಭಾವನಾತ್ಮಕವಾಗಿ ಓದುಗರನ್ನು ತಟ್ಟುವಂತಹ ಶೈಲಿಯನ್ನು ಹೊಂದಿವೆ.

ಪರಾಮರ್ಶನ ಸಾಹಿತ್ಯ

1) ಶಾ.ಮಂ.ಕೃಷ್ಣರಾಯ; ತ.ರಾಸು. ಬದುಕು ಬರಹ
2) ಶೇಷಗಿರಿರಾವ್ ಎಲ್.ಎಸ್ : ಹೊಸಗನ್ನಡ ಸಾಹಿತ್ಯಚರಿತ್ರೆ
3) ಹಂ.ಪ. ನಾಗರಾಜಯ್ಯ (ಸಂ); ಪ್ರಗತಿಶೀಲ ಕಾದಂಬರಿಕಾರ ಪ್ರೇಮಚಂದ್ರ
4) ಗಿರಿಡ್ಡಿ ಗೋವಿಂದರಾಜ; ವಸ್ತು ಮತ್ತುತಂತ್ರ
5) ತ.ರಾ.ಸು; ಚದುರಂಗದ ಮನೆ
6) ತ.ರಾ.ಸು; ಹಿಂದಿರುಗಿ ನೋಡಿದಾಗ
7) ಕನ್ನಡ ಪ್ರಭ ವರದಿ; 19–04–1982
8) ಎಚ್.ಜೆ. ಲಕ್ಕಪ್ಪಗೌಡ; ತ.ರ.ಸು. ಬದುಕು ಬರಹ
9) ನಂದಾ ಚಿಂಚೇವಾಡಿ; ತ.ರಾ.ಸು ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು(ಸಂಶೋಧನ ಗ್ರಂಥ)

❖❖❖

ಕನ್ನಡದಲ್ಲಿ ಅಶ್ವಶಾಸ್ತ್ರ ಸಾಹಿತ್ಯ

ಡಾ. ಕಲ್ಲಯ್ಯ ಎಸ್. ಹಿರೇಮಠ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಶ್ರೀ ಅನ್ನದಾನೇಶ್ವರ ಕಲಾ ವಿಜ್ಞಾನ ವಾಣಿಜ್ಯ ಮಹಾವಿದ್ಯಾಲಯ & ಸ್ನಾತಕೋತ್ತರ ಕೇಂದ್ರ, ನರೇಗಲ್ಲ – 582119

ಕನ್ನಡದಲ್ಲಿ ಶಾಸ್ತ್ರ ಸಾಹಿತ್ಯದ ಹುಟ್ಟು ಬೆಳವಣಿಗೆಯನ್ನು ಕುರಿತು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಕನ್ನಡ ಕಾವ್ಯಗಳಲ್ಲಿ ಅಧ್ಯಯನದ ದೃಷ್ಟಿಯಿಂದ ಆಗಮಿಕ ಲೌಕಿಕ ಕಾವ್ಯಗಳನ್ನು ವಿಭಾಗಿಸಿಕೊಂಡಂತೆ, ಶಾಸ್ತ್ರಕೃತಿಗಳಲ್ಲೂ ಆಗಮಿಕ–ಲೌಕಿಕ ಶಾಸ್ತ್ರ ಎಂಬ ಪರಂಪರೆಯನ್ನು ಹಾಕಿಕೊಂಡು ಕೃತಿರಚನೆ ಮಾಡಿದ್ದನ್ನು ಕಾಣಬಹುದು. ಕ್ರಿ.ಶ. 5ನೆಯ ಶತಮಾನಕ್ಕಿಂತ ಹಿಂದೆಯೇ ಜೈನರು ಸಂಸ್ಕೃತ, ಪ್ರಾಕೃತ ಭಾಷೆಯಲ್ಲಿ ಧಾರ್ಮಿಕ ಗ್ರಂಥಗಳನ್ನು ಜೊತೆಗೆ ಶಾಸ್ತ್ರಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಧರ್ಮಪ್ರಸಾರ ಮಾಡಲು ಹೊರಟರು. ಶಬ್ದಾಗಮ, ಯುಕ್ತ್ಯಾಗಮ, ಪರಮಾಗಮಗಳ ಮೇಲಿನ ಗ್ರಂಥಗಳಿಗೂ ಕಾವ್ಯ, ನಾಟಕ, ಅಲಂಕಾರಗಳ ಜೊತೆಗೆ ಶಾಸ್ತ್ರಗಳ ವಿಷಯವನ್ನು ಪ್ರಸ್ತಾಪಿಸುತ್ತವೆ.

ಕವಿಚರಿತೆಕಾರರು ಹೇಳುವಂತೆ ಕ್ರಿ.ಶ.2ನೆಯ ಶತಮಾನದಲ್ಲಿ ರಚನೆಗೊಂಡ ನಾಗಾರ್ಜುನ ಕಕ್ಷಪುಟ ಎಂಬ ವೈದ್ಯಗ್ರಂಥ, ಸಮಂತ ಭದ್ರನ ಶಿಷ್ಯನಾದ ಆರ್ಯದೇವನ ತತ್ವಾರ್ಥ ಸೂತ್ರ ಟೀಕೆ, ತುಂಬಲೂರಾಚಾರ್ಯನ ಕಾಲದಲ್ಲಿದ್ದ ಶ್ಯಾಮಕುಂದಾಚಾರ್ಯ ಕರ್ನಾಟಕ ಭಾಷೆಯಲ್ಲಿ ಪ್ರಾಭೃತವನ್ನು ರಚಿಸಿದ್ದರ ಬಗ್ಗೆ ಅನೇಕ ವಿಷಯಗಳು ತಿಳಿದು ಬರುತ್ತವೆ. ಜೈನಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥಗಳು ಕ್ರಿ.ಶ.200ರ ಕಾಲಘಟ್ಟದಲ್ಲಿ ರಚನೆಯಾಗಿವೆ ಎಂಬ ರಂ.ಶ್ರೀ. ಮುಗಳಿಯವರ ಅಭಿಪ್ರಾಯಗಳು ಶಾಸ್ತ್ರಕೃತಿಗಳ ಪರಂಪರೆಗೆ ಸಾಕ್ಷಿಯಾಗುತ್ತವೆ. ಹುಮ್ಮಚ ಶಾಸನ ತಿಳಿಸುವಂತೆ ಕ್ರಿ.ಶ.800ರಲ್ಲಿದ್ದ ಗಂಗರಾಜ ಸೈಗೊಟ್ಟ ಶಿವಮಾರ ರಚಿತ 'ಗಜಾಷ್ಟಕ' ಕೀರ್ತಿವರ್ಮನ ಗೋವೈದ್ಯ, ಜಗದ್ದಳ ಸೋಮನಾಥನ ಕಲ್ಯಾಣಕಾರಕ, ಶ್ರೀಧರನ ವೈದ್ಯಾಮೃತ, ವೈದ್ಯಶಾಸ್ತ್ರದ ಸಾಳ್ವನ ವೈದ್ಯಸಾಂಗತ್ಯ, ದೇವೇಂದ್ರ ಮುನಿಯ ಬಾಲಗ್ರಹಚಿಕಿತ್ಸೆ, ಮಂಗರಾಜನ ಕ್ರಿ.ಶ.1360ರ ಕಾಲಘಟ್ಟದ ಖಗೇಂದ್ರಮಣಿದರ್ಪಣ, ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧಿಸಿದ ಜಾತಕತಿಲಕ, ರಟ್ಟಕವಿಯ ರಟ್ಟಮತ, ಚಾಕರಾಜನ ಶಕುನ ಪ್ರಪಂಚ ಲಕ್ಷಣಾಂಕನ ಶಕುನಸಾರ, ಕಾಮಶಾಸ್ತ್ರಕ್ಕೆ ಸಂಬಂಧಿಸಿದಂತೆ ಚಂದ್ರರಾಜನ ಮದನತಿಲಕ, ಕಲ್ಲರಸನ ಜನವಶ್ಯ, ಕವಿಮಲ್ಲನ ಮನ್ಮಥ ವಿಜಯ, ಸೂಪಶಾಸ್ತ್ರಕ್ಕೆ ಸಂಬಂಧಿಸಿದಂತೆ, ಲೋಕೋಪಕಾರ, ಮಂಗರಸನ ಕೃತಿಗಳು ವಿಪುಲವಾದ ಮಾಹಿತಿಯ ಕಣಜಗಳಾಗಿವೆ.

ಅಶ್ವಶಾಸ್ತ್ರದ ಪರಂಪರೆಯನ್ನು ಕುರಿತು ಹೇಳುವುದಾದರೆ, ಚೀನಾದ ಚಕ್ರವರ್ತಿ ಪೋಹೀ ಕ್ರಿ.ಶ. ಪೂರ್ವ 3568 ವರ್ಷಗಳಷ್ಟು ಹಿಂದೆಯೇ ಕುದುರೆಗಳನ್ನು ಆಮದು ಮಾಡಿಕೊಂಡ ವಿಚಾರ ಪುರಾತನ ಚೀನೀ ಕಡತಗಳಿಂದ ತಿಳಿದುಬರುತ್ತದೆ. ಹರಪ್ಪ ಮತ್ತು ಮಹೆಂಜೊದಾರೊ ಸಂಸ್ಕೃತಿಯ ಅವಶೇಷಗಳಲ್ಲೂ ಕುದುರೆಯ ಎಲುಬುಗಳು ದೊರೆಕಿವೆ. ಲೋಥಾಲ್‌ನಲ್ಲಿ ಮೂರು ಕುದುರೆಯ ಮಣ್ಣಿನ ಗೊಂಬೆಗಳು ಲಭ್ಯವಾಗಿವೆ. ಆದ್ದರಿಂದ ಆರ್ಯ ಪೂರ್ವಯುಗದ ಭಾರತೀಯರಿಗೆ ಕುದುರೆಯ ಬಗ್ಗೆ ಸ್ಪಷ್ಟವಾದ

ಅರಿವು ಇತ್ತೆಂಬುದು ಗೊತ್ತಾಗುತ್ತದೆ. ಭಾರತೀಯರಿಗೆ ವೇದಕಾಲದಿಂದಲೂ ಕುದುರೆಗಳ ಪರಿಚಯವಿದೆ. ಅಶ್ವಮೇಧದ ಉಲ್ಲೇಖಗಳು, ರಾಮಾಯಣ–ಮಹಾಭಾರತ ಕಾಲಕ್ಕೆ ಯುದ್ಧದಲ್ಲಿ ಕುದುರೆಗಳನ್ನು ಬಳಸಿದ ಸಂಗತಿಗಳಿವೆ.

ಭಾರತದ ಮೇಲೆ ಅಲೆಕ್ಸಾಂಡರ್ ದಾಳಿ ಮಾಡಿದ ಕಾಲಕ್ಕೆ ಪೂರೂರವನಲ್ಲಿ 4,000 ಕುದುರೆಗಳಿದ್ದವು. ಮಾಳವ ಮತ್ತು ಕ್ಷುದ್ರಕರಲ್ಲಿ 3,000 ಕುದುರೆಗಳಿದ್ದವು. ಅಂಬಷ್ಟರಲ್ಲಿ 6,000 ಕುದುರೆಗಳಿದ್ದವು. ಶಿಬಿ ಪ್ರಾಂತವಾಸಿಗಳಲ್ಲಿ 3,000 ಕುದುರೆಗಳಿದ್ದವು. ಉಗ್ರಸೇನನಲ್ಲಿ 20,000 ಕುದುರೆಗಳಿದ್ದವು. ಅಲೆಕ್ಸಾಂಡರ್‌ನನ್ನು ಎದುರಿಸುವಲ್ಲಿ ಭಾರತೀಯ ದೊರೆಗಳು ಯುದ್ಧರಂಗಕ್ಕೆ ಕುದುರೆಗಳನ್ನು ತಂದಿದ್ದರು. ಪ್ರಾಚೀನ ಭಾರತದಲ್ಲಿ ಅಶ್ವ ಪಡೆಯ ಮುಖ್ಯಸ್ಥನಿಗೆ 8,000 ಪಣಗಳು, ಅಧ್ಯಕ್ಷ (ಮೇಲ್ವಿಚಾರಕ)ರಿಗೆ 4,000 ಪಣ, ವೈದ್ಯರಿಗೆ 2,000 ಪಣಗಳನ್ನು ವೇತನವಾಗಿ ಕೊಡುತ್ತಿದ್ದರು. ಯುದ್ಧ ರಂಗದಲ್ಲಿ ಹೋರಾಡಲು ಮತ್ತು ಸಾಮಾನು ಸಾಗಾಣಿಕೆಗಾಗಿ ಅಸಂಖ್ಯಾತ ಕುದುರೆಗಳನ್ನು ಬಳಸುತ್ತಿದ್ದರು.

ಸಾಮವೇದದಲ್ಲಿ ಮರುತರು ಅತ್ಯಂತ ಬಲಶಾಲಿ ಯೋಧರು. ಅಶ್ವದ ಮೇಲೆ ಕುಳಿತು ಸ್ವರ್ಗವನ್ನು ಗೆದ್ದವರು ಎಂದಿದೆ. ಧೂಳನ್ನೆಬ್ಬಿಸುತ್ತ ಬರುವ ಅಶ್ವಾರೋಹಗಳ ಚಿತ್ರ ಅಥರ್ವವೇದದಲ್ಲಿದೆ. ಕಾಂಭೋಜದಲ್ಲಿ ಶಿಕ್ಷಣ ಪಡೆದ ಕುದುರೆಗಳಿಂದ ಉತ್ತಮ ಬಲವನ್ನು ರಚಿಸಿದರೆ ದೂರದ ವೈರಿಗಳನ್ನು ಗೆಲ್ಲಬಹುದೆಂದು ಅಭಿಲಕ್ಷಿತಾರ್ಥ ಚಿಂತಾಮಣಿಯಲ್ಲಿದೆ. ಸಿಂಧು, ಯವನ, ಕಾಂಭೋಜದಲ್ಲಿ ಹುಟ್ಟಿದ ಶಿಕ್ಷಿತ ಕುದುರೆಗಳಿಂದ ದೂರದ ವೈರಿಗಳನ್ನು ಸೋಲಿಸಬಹುದು. ಸೈಂದವರು ಶ್ರೇಷ್ಠ ತುರಗಗಳನ್ನು ಕಾಣಿಕೆಯಾಗಿ ತಂದಿರುವರೆಂದು ಯಶಸ್ತಿಲಕ ಚಂಪುವಿನಲ್ಲಿದೆ.

ಸೊರಬದ ಒಂದು ಶಾಸನದಲ್ಲಿ 'ಬಿಲ್ವಿಲ್ಲಳ್ಳುದುರೆ ಕುದುರೆಯೊಳ್ಕಿಟ್ಟ ಅತಿತುಮುಲ ಕಾಳಗ ಪೆಟ್ಟಿ (ಎ.ಕ.3, ಸೊರಬ, 10–5, ಸು. 800) ಎಂದಿದೆ. ಕವಿರಾಜಮಾರ್ಗದಲ್ಲಿ ಕುದುರೆ ತಗುಳ್ದುವಾದೆಸೆಯ ಬಲ್ಲವರಂ ಸುಪಿದಾನೆ ಮೆಟ್ಟಿದವು (ಕವಿರಾ 1–120) ಎಂದಿದೆ. ಕುಮಾರ ರಾಮನ ಸಾಂಗತ್ಯದಲ್ಲಿ – ಗುಗ್ಗರಿ ಗಲ್ಲುಂಡುಗಲ್ಲು ಮೊರಡಿ ಬೆಟ್ಟ ನುಗ್ಗುಗಲ್ಲುದುವುರೆಗಲ್ಲುಗಳ ಮೊಗ್ಗರದೊಳ್ಕಾಲಾಡ ಬಾರದು ಬಲದುರ್ಗವದಿಳೆಗೆ (ಕುರಾಸಂ–20–96), ಕತ್ತೆಮೊಗ ಕುದುರೆ ಮೊಗದವರ ದೇಶಂಗಳಂ ಕಂಡನಾ ಕಲಿಪಾರ್ಥನು (ಜೈಮಿಭಾ 16–20). ಆನೆ ಆನೆಯೊಂದಿಗೆ ಕುದುರೆ ಕುದುರೆಯೊಂದಿಗೆ ಕಾಲಾಳು ಕಾಲಾಳಿನೊಂದಿಗೆ ಹೋರಾಡಿದರೆಂದು ಪೊನ್ನನ ಕಾವ್ಯದಲ್ಲಿದೆ. ಒಟ್ಟಾರೆಯಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕುದುರೆಯ ಬಗೆಗೆ ಬೇಕಾದಷ್ಟು ವಿವರಗಳು ಸಿಗುತ್ತವೆ.

ಅಶ್ವಶಾಸ್ತ್ರದ ಕುರಿತಾಗಿ ಇರುವ ಪ್ರಧಾನಕೃತಿಗಳಲ್ಲಿ ಪ್ರಮುಖವಾಗಿ ರಾಮಚಂದ್ರ ಕವಿಯ ಅಶ್ವಶಾಸ್ತ್ರ, ಬಾಚರಸನ ಶಾಲಿಹೋತ್ತನಮತ, ಅಭಿನವಚಂದ್ರನ ಅಶ್ವಶಾಸ್ತ್ರ, ಪದ್ಮಣಪಂಡಿತನ ಹಯಶಾಸ್ತ್ರ, ಅಶ್ವಪರೀಕ್ಷೆ ಸಚಿತ್ರ ಜಯದತ್ತನ ಅಶ್ವವೈದ್ಯಕ, ನಕುಲನ ಅಶ್ವಚಿಕಿತ್ಸಿಕಮ್, ಶಾಲಿಹೋತ್ತನ ಹಯಾಯುರ್ವೇದ, ಹಿರಿಯಣ್ಣ ಕವಿಯ ಹಯರತ್ನಶ್ರೇಣಿ, ಹೇಮಸೂರಿಯ ಅಶ್ವಶಾಸ್ತ್ರ, ಭೋಜನ ಶಾಲಿಹೋತ್ರ, ಅಶ್ವವೈದ್ಯ ಸಚಿತ್ರ, ಈ ಎಲ್ಲಾ ಕೃತಿಗಳು ಅಶ್ವಶಾಸ್ತ್ರದ ಕುರಿತು ನಿಖರವಾದ ಮಾಹಿತಿಯನ್ನು ನೀಡುವ ಪ್ರಮುಖ ಕೃತಿಗಳಾಗಿವೆ.

ಚಾವುಂಡರಾಯನ ಲೋಕೋಪಕಾರ, ಕೆಳದಿ ಬಸವರಾಜನ ಶಿವತತ್ತ್ವರತ್ನಕಾರ, ಸೋದೆಯ ಸದಾಶಿವರಾಯನ ಸದಾಶಿವನೀತಿ, ಇಮ್ಮಡಿ ಗುರುಸಿದ್ಧನ ಹಾಲಸ್ಯಪುರಾಣ,

ಚಂದ್ರರಾಜನ ಮದನ ತಿಲಕ, ಸರ್ವಜ್ಞ ಸೋಮೇಶ್ವರನ ಮಾನಸೋಲ್ಲಾಸ, ಮುಮ್ಮಡಿ ಕೃಷ್ಣರಾಜ ಒಡೆಯರ ಸೌಗಂಧಿಕಾಪರಿಣಯ ಮುಂತಾದ ಪುರಾಣ–ಕಾವ್ಯಗಳು ಕುದುರೆಯ ಕುರಿತು ಬಹಳಷ್ಟು ಮಾಹಿತಿಯನ್ನು ಆನುಷಂಗಿಕವಾಗಿ ಒದಗಿಸುತ್ತವೆ.

'ಶಾಸ್ತ್ರ' ಎಂದಾಗ ಕುದುರೆಯ ಕುರಿತು ವಿವೇಚಿಸಬಹುದಾದ ಅಶ್ವಪ್ರಬೇಧಗಳು, ಜನನ, ವಂಶ, ಬಣ್ಣ, ಆಕಾರ, ಅಂಗರಚನೆ, ಸ್ವಭಾವ, ಗುಣ–ಅವಗುಣಗಳು, ಸುಳಿಗಳು, ತಳಿಗಳು, ಪ್ರಕಾರಗಳು, ಶಿಕ್ಷಣ, ರೋಗ, ಚಿಕಿತ್ಸೆ, ಬಳಕೆ ವಿಧಿವಿಧಾನ ಮುಂತಾದವುಗಳ ಕುರಿತು ಸಮಗ್ರ ಅಧ್ಯಯನವಾಗಿದೆ. ಶಾಲಿಹೋತ್ರನ ಅಶ್ವಶಾಸ್ತ್ರದ ಪ್ರಕಾರ 54 ಕುದುರೆಯ ಉತ್ಪತ್ತಿಕ್ಷೇತ್ರಗಳಿದ್ದು, ಅವುಗಳನ್ನು ಹೀಗೆ ಗುರುತಿಸಬಹುದು.

ಅಜಾನ, ಕಾಂಭೋಜ, ಬ್ಲಾಹೀಕ, ವನಾಯುಜ, ಗಾಂಧಾರ, ಅರಟ್ಟ, ಸಿಂಧು, ಚಾಂಪೇಯ, ತೈತಿಲ, ಮೋಚಕ, ಎಪಮೋಚಕ, ತ್ರೈಗರ್ತ, ಅರ್ಜುನ, ಸಾವಿತ್ರ, ಯೌಧೇಯ, ಯಾವನ, ಹ್ರಸ್ವಯಾವನ, ತುಖಾರ, ಕಾಂದಾರ, ಪಾರ್ವತ, ಓರಸ, ಆವರ್ತ, ಕಾಶ್ಮೀರ, ಶಕಾನಕ, ಉತ್ತರಮದ್ರ, ದಕ್ಷಿಣಮದ್ರ, ಯವನಾಂತದ್ವೀಪ, ಕೈಕಯ, ಅಪರಾಂತ, ಅಂಬಷ್ಟ, ವಾಸಾಂತಕ, ಸೌವೀರ, ದಾದರ, ಸೈವಕ, ಕ್ಷುದ್ರಕ, ಐರಾವತ, ಮಾಲವ, ಆವಂತಿ, ಕಳಿಂಗ, ಮೌತುರು, ವನವಾಸ, ತ್ರಿರಿಂಗ, ಕಥನ, ಪ್ರಾವೃತಕ, ಸೌರಾಷ್ಟ್ರ, ಸಾಲ್ವ, ಕುರುಕ್ಷೇತ್ರ, ಪಾಂಚಾಲ, ಪ್ರೋಥಜ, ಕುಕ್ಕುರ, ಹ್ರಸ ಕುಕ್ಕುರ, ಹೈಮವತ, ಅಮವತ್ಯುತ್ತರ, ಮಾಗಧಗಳು, ಯಾವ ಯಾವ ಕ್ಷೇತ್ರಗಳಲ್ಲಿ ಕುದುರೆಗಳು ಹುಟ್ಟುತ್ತವೆಯೋ ಅಂತಹ ಕುದುರೆಗಳನ್ನು ಅದೇ ಹೆಸರಿನಿಂದ ಕರೆಯುತ್ತಾರೆ.

ಕಾಂಭೋಜಾಶ್ವಗಳ ಲಕ್ಷಣಗಳನ್ನು ಉದಾಹರಣೆಗಾಗಿ ಈ ರೀತಿಯಾಗಿ ನೋಡಬಹುದು. 'ಸಮವಾದ ಮೊಣಗಂಟು, ಹಿಮ್ಮಡಿ, ತೊಡೆಭಾಗ, ಗುಂಡಾದ ಗೊರಸುಗಳು, ಪುಷ್ಟವಾದ ದೇಹ, ದಪ್ಪಗಿರುವ ಬಾಲ, ಮೊನಚಾದ ಕಿವಿಗಳು ಇರುವ ಕುದುರೆಗಳು ತುಂಬಾ ಸ್ನೇಹ ಶೀಲವಾದವುಗಳು, ಮನೋಹರವಾದವುಗಳು, ಉತ್ಸಾಹಶಾಲಿಗಳು, ಇನ್ನೊಂದು ಹೆಣ್ಣು ಕುದುರೆಯನ್ನು ಕಂಡಾಗ ಕೆನೆಯುವುದಿಲ್ಲ. ತಿದ್ದಿತೀಡಿದ ಮುಳಲಕ್ಷಣ, ಗಂಭೀರನಾದ, ಸ್ವಾಮಿಹಿತಕಾರಿತ್ವ, ಪರಾಕ್ರಮ ಒಳ್ಳೆ ಸಂಚಾರವುಳ್ಳವು ಕಾಂಭೋಜಾಶ್ವಗಳು. ಹೀಗೆ ಇನ್ನೂ ಅನೇಕ ಜಾತಿಯ ಕುದುರೆಗಳ ಲಕ್ಷಣಗಳನ್ನು ತಿಳಿದುಕೊಳ್ಳಬಹುದು.

ಮುಮ್ಮಡಿ ಕೃಷ್ಣರಾಜ ಒಡೆಯರು ಸೌಗಂಧಿಕಾ ಪರಿಣಯದಲ್ಲಿ ಕುದುರೆಗಳ ಉತ್ಪತ್ತಿಗೆ ಪ್ರಮುಖವಾಗಿ ಏಳು ಸ್ಥಾನಗಳನ್ನು ನಿರ್ದೇಶಿಸುತ್ತಾರೆ.

ಸಾಮವೇದ ಸದಾಶಿವ ನೀತಿಯಲ್ಲಿ–ತುರಗಲಕ್ಷಣ ಮತ್ತು ಅವುಗಳ ಮಹತ್ವವನ್ನು ಕುರಿತು ಈ ರೀತಿಯಾಗಿ ಚರ್ಚಿಸಲಾಗಿದೆ.

ತನು ಗತಿಸುಳಿಗಳು ಗಂಧ

ಧ್ವನಿ ಸತ್ವವು ಕಾಂತಿವರ್ಣವಿದುಮಷ್ಟ ವಿಧಂ

ಘನವಾದ ತುರಗ ಕಾಯದೊ

ಳನಿತುಂ ಶುಭಮಶುಭ ಮೆಂಬುದಿದುಮು ಭಯವಿಧಂ (ಸ.ನೀ. 1–1)

ಶಾಸ್ತ್ರಕಾರನಾದ ಸದಾಶಿವನು ಎಂಟು ಪ್ರಕಾರದಿಂದ ಕುದುರೆಯ ಲಕ್ಷಣವನ್ನು ಗುರುತಿಸಿ ತನು, ಗತಿ, ಸುಳಿ, ಗಂಧ, ಧ್ವನಿ, ಸತ್ವ, ಕಾಂತಿ ವರ್ಣಗಳಿಂದ ಮಹತ್ವದ ಅಂಶಗಳನ್ನು ಶುಭ–ಅಶುಭದಿಂದ ವಿವರಿಸಿದ್ದಾನೆ.

ಆಯುಷ್ಯ ಲಕ್ಷಣ, ಶಾರೀರಿಕ ಲಕ್ಷಣ, ರೇಖೆಯ ಲಕ್ಷಣ, ವಾತ, ಪಿತ್ತ ಲಕ್ಷಣ,

ಶರೀರ ಲಕ್ಷಣ, ಛಾಯಾ ಲಕ್ಷಣ, ಗತಿಲಕ್ಷಣ, ಗಂಧ, ಸ್ವರಲಕ್ಷಣ, ಪ್ರೋಥಲಕ್ಷಣ, ದಂತಲಕ್ಷಣ ಮುಂತಾದವುಗಳಿಂದ ಅಶ್ವಗಳ ಲಕ್ಷಣಗಳನ್ನು ಗುರುತಿಸಬಹುದು. ಸುಳಿಗಳು ಮತ್ತು ಚೇಷ್ಟೆಗಳಿಂದ ಒಡೆಯನಿಗಾಗುವ ಶುಭ–ಅಶುಭಗಳನ್ನು ನಿರ್ಧರಿಸಬಹುದು. ಉದಾಹರಣೆಗೆ–ಹಣೆಯಲ್ಲಿ ಬಲಸುಳಿಯಾಗಿ ಎರಡು ಇದ್ದರೆ ಯುದ್ಧಕ್ಕೆ ಹೋದಲ್ಲಿ ವೈರಿಯನ್ನು ಕೊಂದು ಒಡೆಯನಿಗೆ ಜಯವನ್ನುಂಟು ಮಾಡುವುದು. ಕುದುರೆಯ ಹಣೆಯಲ್ಲಿ ನಾಲ್ಕು ಸುಳಿ ಚೌಕವಾಗಿ ಇರಲು ಅದನ್ನಾಳುವವನು ಲೋಕ ಪ್ರಸಿದ್ಧನಾಗುವನು. ಒಂದು ವೇಳೆ ಕುದುರೆಯ ಎರಡು ಕಣ್ಣಿನಲ್ಲಿ ನೀರು ಸುರಿಯುತ್ತ ದುಃಖದಿಂದ ಲದ್ದಿಯನ್ನು ಹಾಕುತ್ತ ಗತ್ತವ ಮಾಡುತ್ತ ಹುಂಕರಿಸುತ್ತ ಇರಲು ಅದರ ಒಡೆಯನಿಗೆ ಅತಿಶಯವಾದ ಭಯವನ್ನುಂಟು ಮಾಡುವುದು... ಇತ್ಯಾದಿ.

ಕುದುರೆಗೆ ಬರುವ ರೋಗ, ಚಿಕಿತ್ಸೆ–ಆರೈಕೆ ಕುರಿತು ಅನೇಕ ಶಾಸ್ತ್ರಕೃತಿಗಳು ಮಹತ್ವದ ವಿಚಾರಗಳನ್ನು ತಿಳಿಯಪಡಿಸುತ್ತವೆ. ಕುದುರೆಗಳಿಗೆ ಬರುವ ರೋಗಗಳು ಅವುಗಳಿಗೆ ಚಿಕಿತ್ಸೆ, ಆರೈಕೆ ಕುರಿತು ಪ್ರಾಯೋಗಿಕವಾಗಿ ಶಾಸ್ತ್ರರೂಪದಲ್ಲಿ ಬರೆದು ಇಟ್ಟಿರುವುದು ಅವರ ಪಾಂಡಿತ್ಯಪೂರ್ಣ ಪ್ರಜ್ಞೆಗೆ ಸಾಕ್ಷಿ. ಚಾವುಂಡರಾಯನು ತನ್ನ ಲೋಕೋಪಕಾರ ಕೃತಿಯಲ್ಲಿ ಕುದುರೆಗೆ ಬರುವ ರೋಗಗಳನ್ನು ಕುರಿತು ಪ್ರಸ್ತಾಪಿಸುತ್ತಾ ಈ ಕೆಳಗಿನಂತೆ ವಿವರಿಸುತ್ತಾನೆ.

ಒಡೆದಿದೆ ರೋಮಂ ಮೆಯರ ಮರ
ವಡೆಬಾಯೊಳ್ ಕೊಳೆನಾಟೆ ಮೇಹುಗೊಳ್ಳದೆ ನಿಲೆನೀ
ರಡಕೆ ಪಿರಿದಾಗೆ ಝೊಂಪಿಸೆ
ನಿಡುಸಯ್ಯೆ ಹಯಂಕರಂ ಜ್ವರಾರ್ತನೆನಿಕ್ಕುಂ (9–234)

ಕುದುರೆಗಳಿಗೆ ರೋಮ ಎದ್ದಿರುವ ಮೈ ಮರಗಟ್ಟಿರುವ ಬಾಯಿಯು ನಾರುತ್ತಿರುವ, ಮೇವು ತಿನ್ನದೆ ಇರುವ, ನೀರಡಿಕೆ ಇಲ್ಲದಿರುವ, ತೂಕಡಿಸುತ್ತಿರುವ, ಶ್ವಾಸ ಬಿಡುತ್ತಿರುವ (ಉಸಿರಾಟ ಹೆಚ್ಚುತ್ತಿರುವ) ಈ ಎಲ್ಲಾ ಗುಣಲಕ್ಷಣಗಳು ಕುದುರೆಗಳಿಗೆ ಕಂಡು ಬಂದರೆ ಜ್ವರ ಬಂದಿದೆ ಎಂದು ತಿಳಿಸಿದ್ದಾನೆ. ಕುದುರೆ ಬಂದಿರುವ 'ವಾತಜ್ವರ' ಗುಣಮುಖವಾಗಲು ಅಂಟಲೆಕ್ಕಿಯ ಬೇರು, ನುಗ್ಗಿಯ ಬೇರು, ಕೋಲು ಮಕ್ಕನ ತೊಗಟೆ, ಅತಿಬಜೆ, ವಿಳಂಗ, ಮಂಗರುಳಿ, ಜೆತಿಸುಡೆ, ಪರ್ಪಾಟಕಿಯ ಕಷಾಯವನ್ನು ಕೊಡುವುದರಿಂದ ವಾತಜ್ವರ ಉಪಶಮನವಾಗುತ್ತದೆ. ಹಾಲಿನೊಳಗೆ ಕಾಕ ಝಂಗೆಯ ಬೇರನರೆದು ಕುಡಿಸಲು ರಕ್ತಶೂಲಿರೋಗ ಮಾಯವಾಗುತ್ತದೆ. ಹೀಗೆ ಸಾಕಷ್ಟು ವಿಚಾರಗಳನ್ನು ಶಾಸ್ತ್ರಕಾರರು ವ್ಯಕ್ತಪಡಿಸುತ್ತಾರೆ.

ಕುದುರೆಗೆ ನೀರಾಜನ ವಿಧಿವಿಧಾನವೊಂದಿದ್ದು ಎಲ್ಲಾ ವಿಧಗಳಲ್ಲಿ ಕುದುರೆಗೆ ಮಜ್ಜನ, ಅಲಂಕಾರ ವೈಭವಗಳನ್ನು ರಾಜಮರ್ಯಾದೆಯಿಂದ ಮಾಡುವ ಪದ್ಧತಿ ರಾಜಮಹಾರಾಜರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಬೃಹತ್ ಸಂಹಿತೆಯಲ್ಲಿ ವರಹಮಿಹಿರನ 44ನೆಯ ಅಧ್ಯಾಯದ ಎಲ್ಲ 28 ಶ್ಲೋಕಗಳೂ ನೀರಾಜನ ವಿಧಿಗೆ ಮೀಸಲಾಗಿವೆ. ಮಹಾನವಮಿಯಲ್ಲಿ ಕುದುರೆಗೆ ನೀರಾಜನವನ್ನು ಮಾಡುವುದರಿಂದ ವೈರಿಯನ್ನು ಗೆಲ್ಲಬಹುದು. ಆಶ್ವೀಜ ಶುದ್ಧ ಬಿದಿಗೆಯ ದಿನ ಕುದುರೆಗೆ ರಕ್ಷೆಯನ್ನು ಕಟ್ಟುವುದರಿಂದ ಅರಸನಿಗೆ ಸಂತೋಷ ಉಂಟಾಗುವುದು.

ಅಶ್ವಶಿಕ್ಷಣವನ್ನು ಕುರಿತು ಅಭಿನವಚಂದ್ರ ತನ್ನ ಪ್ರಸಿದ್ಧ ಕೃತಿಯಾದ ಅಶ್ವಶಾಸ್ತ್ರದಲ್ಲಿ ಈ ರೀತಿಯಾಗಿ ಹೇಳುತ್ತಾನೆ.

ಆಚಾರ್ಯಂ ಶಿಷ್ಯನ ಶೀ
ಲಾಚಾರಮನಟೆದು ಶಿಕ್ಷೆಗೆಯ್ವದು ತತ್ಸೂ
ವ್ರಾಚಾರ್ಯ ವಿರಚಿತಮಿದದು (10–11)

ಗುರು ಆಚಾರ್ಯ, ನೀತಿಯುಳ್ಳ ಶಿಷ್ಯರಿಗೆ ಕುದುರೆ ಶಾಸ್ತ್ರವನ್ನು ಉಪದೇಶ ಮಾಡಬೇಕು. ದುರಾಚಾರಿಗಳಿಗೆ, ನೀತಿ ಬಿಟ್ಟವರಿಗೆ ಇಂತಹ ಶಿಷ್ಯ ಪರಂಪರೆಯುಳ್ಳವರಿಗೆ ಶಾಸ್ತ್ರವನ್ನು ಹೇಳಲಾಗದು ಎಂದು ಸಲಹೆ ನೀಡಿದ್ದಾನೆ.

ಕರ್ನಾಟಕದಲ್ಲಷ್ಟೇ ಅಲ್ಲ; ಇಡೀ ಭಾರತದ ರಾಜಪರಂಪರೆಯಲ್ಲಿ ಕುದುರೆಗಳಿಗೆ ವಿಶೇಷ ಮಹತ್ತ್ವವಿದೆ. ಕೆಲವು ರಾಜರ ಕುದುರೆಗಳ ಹೆಸರುಗಳು ಕೂಡ ಪ್ರಸಿದ್ಧವಾಗಿವೆ. ಕುದುರೆಶಿಲ್ಪಗಳು, ಕುದುರೆ ಪ್ರಯಾಣ ಶಿಲ್ಪ, ಶತ್ರುಪಕ್ಷದ ಕುದುರೆ ಶಿಲ್ಪ, ವೀರನ ಪಕ್ಷದ ಕುದುರೆ ಶಿಲ್ಪ, ಉಭಯ ಪಕ್ಷಗಳ ಕುದುರೆ ಶಿಲ್ಪ, ಕುದುರೆ ಸವಾರನ ಶಿಲ್ಪ, ದೇವರ ಕುದುರೆಗಳು, ಹೀಗೆ ವಿವಿಧ ರೀತಿಯ ಕುದುರೆಶಿಲ್ಪಗಳನ್ನು ನೋಡಿದಾಗ ಸಾವಿರಾರು ವರ್ಷಗಳಿಂದ ಕುದುರೆಯು ಮಾನವಸಂಸ್ಕೃತಿಯ ಅವಿಭಾಜ್ಯ ಅಂಗವೇ ಆಗಿರುವುದು ಗೊತ್ತಾಗುತ್ತದೆ. ಹೀಗಾಗಿ ಅಶ್ವಶಾಸ್ತ್ರಕ್ಕೆ ಇಷ್ಟೊಂದು ಮಹತ್ತ್ವ ಸಿಕ್ಕಿರುವುದು ಕೂಡ ಅಶ್ಚರ್ಯವಲ್ಲ.

ಆಕರ ಗ್ರಂಥಗಳು

1. ಅನಂತರಂಗಾಚಾರ್ ಎಸ್., ಪಂಪಭಾರತ(ಸಂ.), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
2. ಉತ್ತಂಗಿ ಚನ್ನಪ್ಪ, ಸರ್ವಜ್ಞನ ತ್ರಿಪದಿಗಳು(ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2004
3. ಕಲಬುರ್ಗಿ ಎಂ.ಎಂ., ಸರ್ವಜ್ಞ ಸೋಮೇಶ್ವರ ವಿರಚಿತ ಮನಸೋಲ್ಲಾಸ ಸಂ. 1.2.(ಕನ್ನಡ ಅನುವಾದ) ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1996
4. ಪರಮಶಿವಮೂರ್ತಿ ಡಿ.ವಿ., ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999
5. ಮಂಜುನಾಥನ್ ಜಿ.ಜಿ., ಅಭಿನವಚಂದ್ರ ವಿರಚಿತ ಅಶ್ವಶಾಸ್ತ್ರ(ಸಂ.), ಮೈಸೂರು ವಿಶ್ವವಿದ್ಯಾನಿಲಯ, 1987
6. ಮಂಜುನಾಥನ್ ಜಿ.ಜಿ., ತುರುಗ ಲಕ್ಷಣ(ಸಂ.), ಕ.ಅ.ಸಂಸ್ಥೆ, ಮೈಸೂರು ವಿವಿ., ಮೈಸೂರು, 1987
7. ಮಂಜುನಾಥನ್ ಜಿ.ಜಿ., ಶಾಲಿಹೋತ್ರನಮತ(ಸಂ.), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, 1987
8. ರಂಗಸ್ವಾಮಿ ಎ., ಚಾವುಂಡರಾಯನ ಲೋಕೋಪಕಾರ: ಒಂದು ಅಧ್ಯಯನ, ದರ್ಶನಕೀರ್ತಿ ಪ್ರಕಾಶನ, ಮೈಸೂರು 1996
9. ರಾಮಚಂದ್ರ ಕವಿ ಕೆ.ಬಿ., ಅಶ್ವಶಾಸ್ತ್ರದ ಟೀಕು (ಅಪ್ರಕಟಿತ ಕೃತಿ)227 ನೇ ಕ್ರಮಾಂಕದ ಹಸ್ತಪ್ರತಿ, ಕ.ಅ.ಸಂಸ್ಥೆ, ಮೈಸೂರು ವಿವಿ.
10. ಶೇಷ ಅಯ್ಯಂಗಾರ್ ಹೆಚ್., ಲೋಕೋಪಕಾರಂ(ಸಂ.), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2003
11. ಶ್ರೀಧರ ಎಚ್.ಜಿ., ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಶಿ.ಕಾರಂತ ಅ. ಕೇಂದ್ರ, ಪುತ್ತೂರು. 2002
12. ಸೀತಾರಾಮಯ್ಯ ಎಂ.ವಿ., ಶಾಸ್ತ್ರಸಾಹಿತ್ಯ, ಪ್ರಸಾರಾಂಗ ಬೆಂಗಳೂರು ವಿವಿ.
13. ಹಳ್ಳಿಕೇರಿ, ಎಫ್. ಟಿ., ಹಿರಿಯಣ್ಣ ಕವಿಯ ಹಯರತ್ನಶ್ರೇಣಿ (ಸಂ.), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2003
14. ಅಶ್ವಪರೀಕ್ಷೆ 227ನೇ ಕ್ರಮಾಂಕದ ಹಸ್ತಪ್ರತಿ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ

❖❖❖

ಪಂಜೆಯವರ ಬಾಲಕಥೆಗಳು

ರೇಶ್ಮಾ ಭಟ್
ಕನ್ನಡ ಉಪನ್ಯಾಸಕಿ, ಸ.ಪ್ರ..ದ. ಕಾಲೇಜು, ವಾಮದಪದವು

ಪಂಜೆಯವರ ಸಾಹಿತ್ಯವನ್ನು ಹೊಸಗನ್ನಡ ಅರುಣೋದಯದ ಕಾಲದಲ್ಲಿ ಇಟ್ಟು ನೋಡುವುದು ಸರಿಯಾದ ಕ್ರಮ. ಯೂರೋಪಿನ ಸಾಹಿತ್ಯವನ್ನು ಇಂಗ್ಲಿಶ್ ಭಾಷೆಯ ಮೂಲಕ ಓದಿಕೊಂಡು ಇಂತಹ ಸಾಹಿತ್ಯ ತನ್ನ ನೆಲದಲ್ಲೂ ಹುಟ್ಟಿ ಬರಬೇಕೆಂಬ ಪ್ರೀತಿ ಅವರ ಒಟ್ಟು ಬರೆಹಗಳಲ್ಲಿ ಕಂಡುಬಂದರೆ, ತನ್ನ ಸುತ್ತಲಿನ ಲೋಕಜೀವನವನ್ನು ಚಿತ್ರಿಸಿ ಮಕ್ಕಳಿಗೆ ತೋರಬೇಕು: ಅದು ಮಾಹಿತಿಯ ಜೊತೆಗೆ ಮನರಂಜನೆಯನ್ನೂ ಅವರಿಗೆ ಒದಗಿಸಬೇಕು ಎನ್ನುವ ಕಾಳಜಿ ಅವರು ಬರೆದ ಮಕ್ಕಳ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ. ಆ ಕಾಲದ ಲೇಖಕರಿಗೆ ಹಿರಿಯರಾಗಿ ಶ್ರದ್ಧೆಯಿಂದ ಆ ಜವಾಬುದಾರಿಯನ್ನು ನಿರ್ವಹಿಸಿದ ಮಹಾನ್ ಮಾರ್ಗದರ್ಶಕ ಚೇತನ ಪಂಜೆ ಮಂಗೇಶರಾಯರದು. ಪಠ್ಯಪುಸ್ತಕಗಳಲ್ಲಿಯೂ, ಅವರ ಬಾಲಸಾಹಿತ್ಯ ಮಂಡಲದ ಪ್ರಕಟಣೆಗಳಲ್ಲಿಯೂ 'ಕವಿಶಿಷ್ಯ' ಎನ್ನುವ ಹೆಸರಿನಲ್ಲಿ ಬರೆಯುತ್ತಿದ್ದ ಅವರ ಪದ್ಯಗಳು ಆಗ ಸಾಹಿತ್ಯಾಸಕ್ತರ ಗಮನ ಸೆಳೆದಿದ್ದವು. ತುಳುನಾಡಿನಲ್ಲಿ ನೆಲೆಸಿದ್ದ ಕೊಂಕಣಿ ಮಾತನಾಡುವ ಸಾರಸ್ವತ ಬ್ರಾಹ್ಮಣನೊಬ್ಬ ಕನ್ನಡದಲ್ಲಿ ಕೊಡಗಿನ ನಾಡಗೀತೆಯಾಗಬಲ್ಲಂತಹ ಒಂದು ಹಾಡನ್ನು ರಚಿಸಬಲ್ಲನೆಂದರೆ ಅದು ನಮ್ಮ ದೇಶದ ಬಹು ಬಾಷಾ ಒಕ್ಕೂಟ ವ್ಯವಸ್ಥೆಯ ಒಕ್ಕಟ್ಟನ್ನು ತೋರಿಸುತ್ತದೆ. ಅಷ್ಟೇ ಅಲ್ಲ, ನಾಗರಹಾವಿನ ಕೊನೆಯ ಹಾವಾಡಿಗನ ಪುಂಗಿ ಕನ್ನಡ ಗೀತೆಗಳ ಲೋಕಕ್ಕೆ ಪ್ರವೇಶ ಮಾಡುವ ಎಲ್ಲರನ್ನೂ ಬರಮಾಡಿಕೊಳ್ಳುವ ಸ್ವಾಗತ ನಿನದವಾಗುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಕಥೆಗಳಿಗೆ ಒಂದು ಸುಂದರ ಅಡಿಪಾಯವನ್ನು ನಿರ್ಮಿಸಿದವರು ಪಂಜೆಯವರು. ಇವರ ಕಥೆಗಳನ್ನು ಶಿಶು ಸಾಹಿತ್ಯ ಹಾಗೂ ಬಾಲ ಸಾಹಿತ್ಯ ಎಂದು ವಿಂಗಡಿಸುತ್ತಾರೆ. ಶಿಶು ಸಾಹಿತ್ಯವೆಂದರೆ ಐದರಿಂದ ಹತ್ತು ವರ್ಷದ ಮಕ್ಕಳಿಗಾಗಿ, ಬಾಲ ಸಾಹಿತ್ಯ ಹತ್ತರಿಂದ ಹದಿನೈದು ವರ್ಷದ ಮಕ್ಕಳಿಗಾಗಿ. ಪಂಜೆಯವರ ಕಾಲದಲ್ಲಿ ಅಂದರೆ ಇಪ್ಪತ್ತನೆಯ ಶತಮಾನದ ಮೊದಲ ದಶಕಗಳಲ್ಲಿ ಮಕ್ಕಳ ಕಥೆಗಳು ಅಲಭ್ಯವಿದ್ದ ಸಂದರ್ಭದಲ್ಲಿ ಆ ಕೊರತೆಯನ್ನು ನೀಗಿಸಲು ಶಿಕ್ಷಕರಾಗಿದ್ದ ಪಂಜೆಯವರು ಈ ಕೆಲಸಕ್ಕೆ ತೊಡಗಿದರು ಎಂಬುದು ಗುರುತಿಸಬೇಕಾದ ಅಂಶ. ಕಥೆಗಳು ಮಕ್ಕಳ ಶಿಕ್ಷಣದ ಒಂದು ಭಾಗ ಎಂದೇ ಅವರು ತಿಳಿದಿದ್ದರು. ಅವರ ಮಕ್ಕಳ ಕಥೆಗಳು ರಂಗುರಂಗಿನ ಕಾಮನಬಿಲ್ಲಿನಂತೆ ಆಕರ್ಷಕ ಮಾತ್ರವಲ್ಲ ಅದು ಮಾಹಿತಿಕೋಶವು ಕೂಡ. ಮಾಹಿತಿಗಳು ಕಥೆಯ ಒಳಗೇ ಹೆಣೆದುಕೊಂಡಿರುವುದರಿಂದ ಅದು ಓದುವಿಕೆಯ ಓಘಕ್ಕೆ ಅಡ್ಡಿಯಾಗದಂತಿದೆ. ಒಂದು ಮಗು ಮುಂದೆ ಈ ಲೋಕದಲ್ಲಿ ಬದುಕಿ ಬಾಳಬೇಕಾದರೆ ಅದು ಇಲ್ಲಿನ ವಿದ್ಯಮಾನಗಳನ್ನು ಕೊಂಚಮಟ್ಟಿಗಾದರೂ ತಿಳಿದಿರಬೇಕು; ಮಗುವಿಗೆ ಸಾಹಿತ್ಯ

ಲೋಕಕ್ಕೂ ನಿಜಜೀವನಕ್ಕೂ ಒಂದು ಒಳ್ಳೆಯ ಪ್ರವೇಶವನ್ನು ಕೊಡಬಲ್ಲಂತಹ ಗುಣವನ್ನು ಕಥೆಗಳು ಹೊಂದಿರಬೇಕು ಎಂಬುದು ಪಂಜೆಯವರ ನಿಲುವು.

ಒಂದನೇ ಇಯತ್ತೆಯ ಮಕ್ಕಳಿಗಾಗಿ ಏಳು ಕಥೆಗಳುಳ್ಳ 'ಸಚಿತ್ರ ಬಾಲ ಕಥಾವಳಿ' ಎಂಬ ಕಥಾಸಂಕಲನವನ್ನು ಬಾಸೆಲ್ ಮಿಶನ್ ಪ್ರಕಟಿಸಿತ್ತು. ಅದಕ್ಕೆ 'ಉಪಾಧ್ಯಾಯರಿಗೆ ಸೂಚನೆ' ಎಂಬ ಮುನ್ನುಡಿಯನ್ನು ಪಂಜೆಯವರು ಬರೆದಿದ್ದರು. ಆನಂತರ ಇದನ್ನು ಮೂರನೆಯ ತರಗತಿಯ ಮಕ್ಕಳ ಪೂರಕ ಓದಿಗೆ ಇರಿಸಲಾಗಿತ್ತು. ಈ ಮುನ್ನುಡಿಯಲ್ಲಿ ಪಂಜೆಯವರು ಕಥೆಗಳ ಮೂಲಕ ಮಕ್ಕಳಿಗೆ ಭಾಷೆಯ ಪರಿಚಯ ಮಾಡಿಕೊಡಬೇಕೆಂಬುದನ್ನು ಒತ್ತಿ ಹೇಳಿದ್ದಾರೆ. ಅವರ ಕಥೆಗಳ ಮೂಲ ಉದ್ದೇಶವೂ ಇದೇ ಆಗಿತ್ತು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದು ಒಂದು ಶತಮಾನದ ನಂತರದ ಈ ಹೊತ್ತಿನ ಅಗತ್ಯವೂ ಆಗಿದೆ ಎಂದರೆ ಪಂಜೆಯವರ ದೂರದೃಷ್ಟಿಯ ಪರಿಚಯ ಆಗುತ್ತದೆ.

ಪಂಜೆಯವರು ಮಕ್ಕಳಿಗಾಗಿ ಒಟ್ಟು ಮೂವತ್ತೆಂಟು ಕಥೆಗಳನ್ನು ಬರೆದಿದ್ದರೂ ಅವುಗಳಲ್ಲಿ ಮೂವತ್ತನಾಲ್ಕು ಕಥೆಗಳು ಮಾತ್ರ ಲಭ್ಯವಿವೆ. ಇವರ ಕಥೆಗಳ ಹೆಸರುಗಳೂ ಆಕರ್ಷಕವಾಗಿವೆ. 'ಅಂಗಳ ದುಗ್ಗು', 'ಇಲಿಗಳ ಥಕ್ಕಥೈ' 'ಗುಡು ಗುಡು ಗುಮ್ಮಟ ದೇವರು' 'ಅರ್ಗಣೆ ಮುದ್ದೆ' 'ಮೆಣಸಿನ ಕಾಳಪ್ಪ' 'ಹೇನು ಸತ್ತು ಕಾಗೆ ಬಡವಾಯಿತು', 'ಬೆಲ್ಲದ ಬೈಲು ಬೆರ್ಚಪ್ಪ', 'ಹೆಡ್ಡ ದೂಮನ ಕಥೆ', 'ಬಿಟ್ಟೀ ಬಸವಯ್ಯ', 'ಬೆಕ್ಕಿನ ಬಿಡಾರ ಬೇರೆ', 'ಬಾ ಪುರುಲೆ ಬಾ', 'ಮಾತಾಡೋ ರಾಮಪ್ಪ'... ಹೀಗೆ ಪಟ್ಟಿ ಬೆಳೆಯುತ್ತದೆ. ಈ ಕಥೆಗಳ ಮುಖ್ಯ ಲಕ್ಷಣವೆಂದರೆ ವಾಕ್ಯಗಳ ಪುನರಾವರ್ತನೆ. ಇದು ಪಂಜೆಯವರ ಕಥಾತಂತ್ರ ಮಾತ್ರವಲ್ಲದೆ ಮಕ್ಕಳಿಗೂ ಇಷ್ಟವಾಗುವ ಒಂದು ವಿಧಾನ. 'ಅಂಗಳ ದುಗ್ಗು' ಕಥೆಯ ಒಂದು ಉದಾಹರಣೆಯನ್ನು ನೋಡೋಣ.

'ಕಾಗಕ್ಕಾ ಕಾಗಕ್ಕಾ ಕಾಳನ್ನು ಬಿತ್ತುವೆಯಾ?
ಗುಬ್ಬಕ್ಕಾ ಗುಬ್ಬಕ್ಕಾ ಕೆಯ್ ಕೊಯ್ಯುವೆಯಾ?
ಗಿಳಿಯಕ್ಕಾ ಗಿಳಿಯಕ್ಕಾ ಅಕ್ಕಿ ಅರೆಯುವೆಯಾ?
ದೋಸೆ ಹೊಯ್ಯುವೆಯಾ?'

ಹೀಗೆ ಮುಂದುವರಿಯುತ್ತಾ ಇದು ಕೆಲಸದ ಪರಿಚಯವನ್ನು ಮಗುವಿಗೆ ಮಾಡಿಸುವುದರ ಜೊತೆಗೆ ಯಾವ ಕೆಲಸಕ್ಕೆ ಯಾವ ಕ್ರಿಯಾ ಪದ ಬಳಸಬೇಕು ಎಂಬ ಭಾಷಾಜ್ಞಾನವನ್ನೂ ನೀಡುತ್ತಾ ಸಾಗುತ್ತದೆ. ಕನ್ನಡವನ್ನು ಮಾತೃಭಾಷೆಯಾಗಿ ಹೊಂದಿಲ್ಲದ ಮಕ್ಕಳಿಗೆ ಈ ಕಥೆಗಳು ಭಾಷಾವೃದ್ಧಿಗೆ ಕೀಲಿಕೈಯಾಗಿ ಒದಗಿ ಬರುತ್ತವೆ. ಇಷ್ಟೇ ಅಲ್ಲದೆ ಪಂಜೆಯವರು ಬಳಸುವ ಕೆಲವು ಅಚ್ಚಕನ್ನಡದ ಪದಗಳು ಮಗುವಿನ ಪದಬಳಕೆಯ ಹರಹನ್ನು ಹೆಚ್ಚಿಸುತ್ತವೆ. ಉದಾಹರಣೆಗೆ 'ನೆಲವು' 'ನೆಲು', 'ಚಕ್ಕಲ ಕುಲಿ', 'ತಿವಾಸಿ', 'ಮಷಾಲು', 'ಕದಿಕೆ', 'ತೆವರಿ', 'ಕೆಲಸಿ' 'ಹೊಡೆ', 'ಹುಣಿಸೆ ಪಚ್ಚೆ', 'ಮಂಡ'... ಹೀಗೆ ಇಂದು ಅಪರೂಪವಾದ ಹಲವಾರು ಪದಗಳನ್ನು ಪಂಜೆಯವರು ತಮ್ಮ ಕಥೆಗಳಲ್ಲಿ ಬಳಸಿದ್ದಾರೆ. ನೊಗದ ಹಗ್ಗ, ನೇಗಿಲ ಮೊನೆ, ಏತದ ಕೀಲು, ಕುಡುಗೋಲಿನ ಬಾಯಿ, ಕದಿಕೆಯ ತೂತು, ಗದ್ದೆಯ ಕಟ್ಟಹುಣಿ, ಮುಟ್ಟಾಳೆ ಹೀಗೆ... ಕೃಷಿ ಚಟುವಟಿಕೆಗಳ ಸಂದರ್ಭಗಳಲ್ಲಿ ಬಳಕೆಯಾಗುವ ಹೆಸರುಗಳು, ಜಗಲಿ, ಉಗ್ರಾಣ, ಚಾವಣಿ, ಅಂಗಳ... ಮುಂತಾದ, ಮನೆಗೆ ಸಂಬಂಧಿಸಿದ ಹೆಸರುಗಳು, ಸಂಡಿಗೆ, ಸಜ್ಜಿಗೆ, ಮಂಡಿಗೆ, ಶಾವಿಗೆ ಇತ್ಯಾದಿ ಸ್ಥಳೀಯ ತಿಂಡಿ ತಿನಿಸುಗಳ ಹೆಸರುಗಳು, ದೋತರ, ದುಪ್ಪಟಿ, ಸೀರೆ, ಶಾಲೆ, ರವಕೆ ಕಣ, ಅಂಗೀಚೀಟು, ಎಲವಸ್ತ್ರ ಮುಂತಾದ ಜವಳಿಯ ಹೆಸರುಗಳು, ಹಾಲು, ಬೆಣ್ಣೆಯಂತಹ ಹೈನಿಗೆ ಸಂಬಂಧಪಟ್ಟ ಹೆಸರುಗಳು...

ವಜ್ರ, ಮುತ್ತು, ಮಾಣಿಕ್ಯ ಮುಂತಾದ ಬೆಲೆಬಾಳುವ ಕಲ್ಲು ಹಾಗೂ ಲೋಹಗಳ ಹೆಸರುಗಳು, ಮಂತ್ರಿ, ತಳವಾರ, ಪಟ್ಟಣಸೆಟ್ಟಿ, ಮುಂತಾದ ಆಡಳಿತದ ಹುದ್ದೆಗಳು..., ಉಮ್ರಾ, ಅಮೀರ್, ಖಿದಾವಂದ್, ಖಲೀಫಾ, ಸುಲ್ತಾನ, ಕೊತ್ತವಾಲ, ಇಮ್ರಾನ, ಜಹಪನಾ, ಮುಂತಾದ ಅರೆಬಿಕ್, ಪರ್ಷಿಯನ್ ಪದಗಳು... ಇವೆಲ್ಲ ಕಥೆಗಳ ಜೊತೆ ಜೊತೆಯಲ್ಲಿಯೆ ನಡೆದುಕೊಂಡು ಬರುತ್ತವೆ.

ಪಂಜೆಯವರ ಕಥೆಗಳಲ್ಲಿ ಪ್ರಾಣಿ, ಪಕ್ಷಿಗಳು ಮುಖ್ಯ ಪಾತ್ರಗಳಾಗಿ ಬರುವುದು ಮಾತ್ರವಲ್ಲದೆ ಇವುಗಳ ಒಳ ತಳಿಗಳ ಹೆಸರುಗಳನ್ನೂ ಮಕ್ಕಳ ತಿಳುವಳಿಕೆಗಾಗಿ ನೀಡುತ್ತಾರೆ. ಉದಾಹರಣೆಗೆ ಕಪ್ಪೆಗಳಲ್ಲಿ ಹೊಂಗಪ್ಪೆ, ನೀರ್ಗಪ್ಪೆ, ಮನೆಗಪ್ಪೆ, ಮರಗಪ್ಪೆ.... ಏಡಿಗಳಲ್ಲಿ ಕಡಲೇಡಿ, ಹೊಳೆಯೇಡಿ, ಕೆರೆಯೇಡಿ, ಕಾರೇಡಿ ಇತ್ಯಾದಿ. ಏಣಿ, ಹಗ್ಗ, ಮಳೆಯ ಹನಿ, ಮೆಣಸಿನ ಕಾಳು, ಹುಲ್ಲಿನ ಬೆರ್ಚಪ್ಪ, ಇತ್ಯಾದಿ ನಿರ್ಜೀವ ವಸ್ತುಗಳೂ ಇಲ್ಲಿ ಪಾತ್ರಗಳಾಗಿ ಬರುತ್ತವೆ. 'ನಾನು ಏನು ಮಾಡಲಿ?' ಎಂಬ ಕಥೆಯಲ್ಲಿ ನಮ್ಮ ಕಸುಬುದಾರರ ಹೆಸರುಗಳೆಲ್ಲವೂ ಬರುತ್ತವೆ. ಕ್ಷೌರಿಕ, ಜೇಡ, ಕುಂಬಾರ, ಗಾಣಿಗ, ಬಡಗಿ, ಕಮ್ಮಾರ, ಸಮಗಾರ, ಕಟುಕ, ಕುರುಬ, ಪಂಡಿತ, ಜೋಯಿಸ... ಹೀಗೆ ಕಸುಬುಗಳ ಪರಿಚಯದ ಜೊತೆಗೆ ಕಸುಬುದಾರರ ಪರಿಚಯವೂ ಮಕ್ಕಳಿಗೆ ಆಗುತ್ತದೆ.

ಅವರಿಗೆ ಕಥೆಗಳಲ್ಲಿ ನೀತಿಗಿಂತ ಮನರಂಜನೆಯೇ ಮುಖ್ಯ ಉದ್ದೇಶವಾಗಿರುವುದು ಗೋಚರಿಸುತ್ತದೆ. ಹಾಗೆಯೇ ಕೆಲವು ಕಥೆಗಳಲ್ಲಿ ನೀತಿಯೂ ಕಥೆಯ ಅಂಗವಾಗಿ ಬರುತ್ತದೆ. ಇಂಗ್ಲಿಷ್ ಕಥೆ 'ಕಿಂದರಿ ಜೋಗಿ'ಯ ರೂಪಾಂತರವಾದ 'ಕೊಳಲ ಜೋಗಿ'ಯ ಕಥೆಯಿದೆ. ಪ್ರಸಿದ್ಧ ಜನಪದ ಕಥೆಯಾದ 'ಸಿಂಡರೆಲಾ'ವನ್ನು ಹೋಲುವ, ಮಲತಾಯಿಯಿಂದ ಹಿಂಸೆಗೊಳಗಾದ 'ಕುಂಟು ಕರಿಕಲ್ಲಮ್ಮ'ನ ಕಥೆಯಿದೆ. 'ಬ್ರಾಹ್ಮಣ ಬೈರಾಗಿ' ಪಂಚತಂತ್ರದ ವಿಶ್ವಾಸ ಪ್ರಕರಣದ ಒಂದು ಕಥೆಯ ರೂಪಾಂತರವಾಗಿದೆ. ಹಾಗೆಯೇ 'ಬೊಕ್ಕಬಾಯಿ ಕೊಕ್ಕರಾಜ' ಎಂಬ ಕಥೆಯ ಒಳಗೆ ಪಂಚತಂತ್ರ ಭೇದ ಪ್ರಕರಣದ ಒಂದು ಕಥೆ ಸಾಂದರ್ಭಿಕವಾಗಿ ಬರುತ್ತದೆ. ಹೀಗೆ ಜಗತ್ ಸಾಹಿತ್ಯದ ಒಳ್ಳೆಯ ಕಥೆಗಳು ಕನ್ನಡದ ಮಕ್ಕಳಿಗೂ ಸಿಗಲಿ ಎಂಬ ಉದ್ದೇಶದಿಂದ ಅದನ್ನು ರೂಪಾಂತರಗೊಳಿಸಿ ಕೊಟ್ಟಿದ್ದಾರೆ ಪಂಜೆಯವರು.

ಇವರ ಕೆಲವು ಕಥೆಗಳಲ್ಲಿ ಬರುವ ಪಾತ್ರಗಳ ಹೆಸರುಗಳು ಕೂಡ ಗಮನ ಸೆಳೆಯುವಂತಿವೆ. ಕೊಕ್ಕರೆಗೆ 'ಬೊಕ್ಕಬಾಯಿ ಕೊಕ್ಕರಾಜ' ಎಂದೂ, ಹೊಂಗಪ್ಪೆಗೆ 'ಗದ್ದೆ ಮನೆ ಗೌರಮ್ಮ' ಎಂದೂ, ಏಡಿಗೆ 'ಜೇಡಿಮನೆ ಏಡಿಯಮ್ಮಾ' ಎಂಬ ಹೆಸರುಗಳನ್ನಿಟ್ಟು ಕರೆಯುತ್ತಾರೆ. ಈ 'ಬೊಕ್ಕಬಾಯಿ ಕೊಕ್ಕರಾಜ'ನ ಕಥೆಯಂತೂ ಮಕ್ಕಳಿಗೆ ಭರಪೂರ ಮಾಹಿತಿ ನೀಡುವ ಒಂದು ಕೋಶದಂತಿದೆ. ಕಪ್ಪೆ, ಏಡಿ, ಕೊಕ್ಕರೆಗಳ ಜೀವನ ಚಿತ್ರಣದಿಂದ ಹಿಡಿದು ಮನುಷ್ಯರ ಅನೇಕ ರೀತಿ ರಿವಾಜುಗಳನ್ನೂ ಇದು ಮಕ್ಕಳಿಗೆ ಪರಿಚಯಿಸುತ್ತದೆ. ಕಪ್ಪೆ ಕೊಕ್ಕರೆಗಳ ಮದುವೆಗೆ ಆಕಾಶದ ಮಿಂಚು ದೀಪಮಾಲೆಯಾಗಿ, ಗುಡುಗು ತಮಟೆಯಾಗಿ, ಗಾಳಿ ನಾದಸ್ವರವಾಗಿ, ಮಳೆ ಸೇಸೆಯಾಗಿ, ಕಪ್ಪೆಗಳ ವಟವಟವು ಸೋಬಾನೆಯಾಯಿತು ಎಂದು ಹೇಳುತ್ತಾರೆ. ಶಿಶು ಬಾಣಂತಿಯರನ್ನು ನೋಡಲು ಹೋಗುವವರು ಹಾಲು, ಬೆಣ್ಣೆ, ಎಲೆ, ಅಡಿಕೆ ಕೊಂಡು ಹೋಗುವುದು, ಕುಂಟು ಕರಿಕಲ್ಲಮ್ಮ ಎರಡು ಹೊತ್ತು ಮನೆಯನ್ನು ಸಾರಿಸಿ ರಂಗೋಲೆ ಇಕ್ಕಿ, ಹಾಲು, ನೀರು, ಕಾಡಿಗೆ ಕುಂಕುಮಗಳನ್ನು ದೀಪದೊಂದಿಗೆ ಮನೆಯ ಹೆಬ್ಬಾಗಿಲ ಬಳಿ ಇಡುವುದು

ಇತ್ಯಾದಿ. ಇಲ್ಲೆಲ್ಲಾ ನಮ್ಮ ಸಂಸ್ಕೃತಿ ಪರಂಪರೆಗಳು ಉಳಿದು ಮುಂದಿನ ಪೀಳಿಗೆಗೂ ಹರಿಯಬೇಕು ಎನ್ನುವ ಪಂಜೆಯವರ ಪ್ರೀತಿ ಕಾಳಜಿಗಳು ಎದ್ದು ತೋರುತ್ತವೆ.

ಪಂಜೆಯವರ ಕಥೆಗಳಲ್ಲಿ ಗುರುತಿಸಬಹುದಾದ ಇನ್ನೊಂದು ಅಂಶವೆಂದರೆ ಪ್ರಾದೇಶಿಕ ವಿವರಗಳು. ಬೆಳಗ್ಗಿನ ಗಂಜಿಯೂಟ, ವಿನಾಯಕನ ಚೌತಿಯಂತಹ ವಿಶೇಷ ದಿನಗಳಲ್ಲಿ ಉದ್ದಿನ ಕಡುಬು ಮಾಡುವ ಪದ್ಧತಿ, ದನಗಳನ್ನು ಮೇಯಲು ಗುಡ್ಡೆಗೆ ಬಿಡುವುದು, ಗದ್ದೆ ಕೃಷಿಯ ವಿವರಗಳು, ನವರಾತ್ರಿಯ ದಶಮಿಯ ದಿನದಂದು ಹೊಸ ಅಕ್ಕಿ ಊಟ ಮಾಡುವುದು, ಕದಿರು ಕಟ್ಟುವುದು, ವಿಷು ಸಂಕ್ರಮಣ ಹಬ್ಬಕ್ಕೆ ತಯಾರಿ ಏನು ಮಾಡುವುದು? ಎಂದು ಎರಡು ಪಾತ್ರಗಳು ಯೋಚಿಸುವುದು, ದಾರೆಹುಳಿಗಳನ್ನು ಗಿಳಿಗೆ ತಿನ್ನಲು ನೀಡುವುದು... ಇವೆಲ್ಲ ತುಳುನಾಡು ಕರಾವಳಿ ಭಾಗದ ವಿವರಗಳೇ ಆಗಿವೆ. ಕೆಲವು ಕಥೆಗಳ ಒಳಗೆ ಗಾದೆಗಳೂ ಮಿಂಚಿ ಮರೆಯಾಗುತ್ತವೆ. 'ಊರಿಗೊಂದಾದರೆ ಪೋರಗೊಂದು' 'ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು' 'ಬಳ್ಳಿಗೆ ಕುಂಬಳಕಾಯಿ ಭಾರವೇ?' 'ಬಾಯಾರಿದವನ ಬಳಿ ಭಾಗೀರತಿ ಬಂದಂತಾಯ್ತು'... ಮುಂತಾದ ಗಾದೆಗಳು ಒಂದು ಜೀವಂತ ಸಂಸ್ಕೃತಿಯ ಪ್ರತಿಬಿಂಬಗಳು. ಇವುಗಳನ್ನು ಪ್ರಾಥಮಿಕ ಹಂತದಲ್ಲೇ ಮಕ್ಕಳಿಗೆ ಪರಿಚಯಿಸಿದರೆ ಅವರಾಡುವ ಭಾಷೆಯೂ ಜೀವಂತಿಕೆಯಿಂದ ಕಂಗೊಳಿಸುತ್ತದೆ ಎಂಬುದು ಪಂಜೆಯವರ ಆಳದೃಷ್ಟಿಗೊಂದು ಸಾಕ್ಷಿ. ಇವರ ಎಲ್ಲಾ ಕಥೆಗಳು ಸುಖವಾಗಿಯೇ ಅಂತ್ಯಗೊಂಡು ಮಕ್ಕಳ ಮನಸ್ಸನ್ನು ಅರಳಿಸುತ್ತವೆ.

ಪಂಜೆಯವರು ಆಧುನಿಕ ಕನ್ನಡ ಸಾಹಿತ್ಯವೆಂಬ ಖಾಲಿ ಗದ್ದೆಯಲ್ಲಿ ಆರಂಬ ಸುರು ಮಾಡಿದ ಪ್ರಾರಂಭದ ರೈತರು. ಇವರ ಆರಂಬ ಪ್ರಾಯೋಗಿಕ ಕೃಷಿಯಿಂದಲೇ ಪ್ರಾರಂಭವಾಯಿತು ಎಂಬುವುದು ಅವರು ಈ ಮಕ್ಕಳ ಕಥೆಗಳಲ್ಲಿ ಮಾಡಿದ ಪ್ರಯೋಗಗಳಿಂದ ತಿಳಿದುಬರುತ್ತದೆ. 'ಹೊಟ್ಟೆಯ ಅವಯವಗಳೂ' ಕಥೆಯಲ್ಲಿ ನಮ್ಮ ದೇಹದ ಅಂಗಾಂಗಳ ಪರಿಚಯ ಮಾಡಿಸುವುದಲ್ಲದೆ ಅವುಗಳ ಕಾರ್ಯವಿಧಾನಗಳನ್ನೂ ಮಕ್ಕಳಿಗೆ ಕಥೆಯ ಜೊತೆ ಜೊತೆಗೆ ತಿಳಿಸುತ್ತಾ ಸಾಗುತ್ತಾರೆ. 'ಅಮ್ಮನನ್ನು ಹೇಗೆ ಕೂಗಬೇಕು' ಕಥೆಯಲ್ಲಿ ನಾಯಿ ಬೊಗಳುವುದು, ಕುದುರೆ ಕೆನೆಯುವುದು, ಕಾಗೆ ಕರ್ರೆನ್ನುವುದು, ಹಾವು ಬುಸುಗುಟ್ಟುವುದು, ಕಪ್ಪೆಯು ವಟಗುಟ್ಟುವುದು, ಎತ್ತು ಗುಟುರು ಹಾಕುವುದು ಮುಂತಾದ ಪ್ರಾಣಿಗಳ ಕೂಗುಗಳನ್ನು ಮಕ್ಕಳಿಗೆ ಪರಿಚಯಿಸುತ್ತಾರೆ.

'ಕಾಲು ಕೊಟ್ಟು ಬಾಳು ತಂದೆ, ಥೈ ಥಕ್ಕ ಥೈ
ಬಾಳು ಕೊಟ್ಟು ಗಡಿಗೆ ತಂದೆ, ಥೈ ಥಕ್ಕ ಥೈ
ಗಡಿಗೆ ಕೊಟ್ಟು ಹಣ್ಣು ತಂದೆ, ಥೈ ಥಕ್ಕ ಥೈ
ಹಣ್ಣು ಕೊಟ್ಟು ಎತ್ತು ತಂದೆ, ಥೈ ಥಕ್ಕ ಥೈ
ಎತ್ತು ಕೊಟ್ಟು ಎಣ್ಣೆ ತಂದೆ, ಥೈ ಥಕ್ಕ ಥೈ
ಎಣ್ಣೆ ಕೊಟ್ಟು ಗಂಡ ತಂದೆ, ಥೈ ಥಕ್ಕ ಥೈ

'ಇಲಿಗಳ ಥಕಥೈ' ಕಥೆಯಲ್ಲಿ ಗೂಡಿನಲ್ಲಿದ್ದ ಗಂಡು ಇಲಿಯನ್ನು ಬಿಡಿಸಿದ ನಂತರ ಹೆಣ್ಣು ಇಲಿ ಗಂಡು ಇಲಿಗಳು ಕೈ ಕೈ ಹಿಡಿದು ಹೀಗೆ ಸಂತೋಷದಿಂದ ಕುಣಿಯುವುದು ಮಕ್ಕಳನ್ನು ಕಥಾಲೋಕದ ಕಡೆ ಸೆಳೆಯುವಂತಿದೆ.

ಪಂಜೆಯವರು ಮಕ್ಕಳ ಕಥೆಯ ಲಕ್ಷಣಗಳನ್ನು ಕುರಿತು ತಮ್ಮ 'ಬಾಲ ಸಾಹಿತ್ಯ' ಕುರಿತ ಭಾಷಣದಲ್ಲಿ ಹೇಳಿದ್ದಾರೆ.

1. ಕಥಾವಿಷಯವು ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು
2. ಮಕ್ಕಳ ಕಥೆಗಳಲ್ಲಿ ಒಂದಿಷ್ಟು ಅದ್ಭುತರಸವಿರಬೇಕು
3. ಧರ್ಮ ಬೋಧನೆಯು ಅಂತರಂಗದಲ್ಲಿ ಅಡಗಿದ್ದಿರಬೇಕು
4. ಪ್ರಯೋಗಿಸತಕ್ಕ ಭಾಷೆಯು ಸುಲಭವಿರಬೇಕು
5. ಹೇಳಿಕೆಗಿಂತ ಸಂಭಾಷಣೆ ಅಧಿಕವಿರಬೇಕು

ಈ ಎಲ್ಲಾ ಲಕ್ಷಣಗಳಿಗೆ ಅವರ ಕಥೆಗಳೇ ಲಕ್ಷ್ಯವಾಗಿರುವುದನ್ನು ಗಮನಿಸಬಹುದು. 'ಈ ಬಗೆಯ ಸಾಹಿತ್ಯವು ಚಿಕ್ಕವರ ಶಿಕ್ಷಣದಲ್ಲಿ ಬಹಳ ಸಹಕಾರಿ ಎಂಬುದನ್ನು ಮನಗಂಡು, ಅದನ್ನು ಪ್ರಚಾರಕ್ಕೆ ತರಲು ಪ್ರಯತ್ನ ಮಾಡಿದವರಲ್ಲಿ ನಾನೊಬ್ಬನೆಂದು ಹೇಳಿಕೊಳ್ಳುವಷ್ಟು ಹೆಮ್ಮೆ ನನಗಿದೆ...' ಎಂಬ ಪಂಜೆಯವರ ಮಾತನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು.

ಇಲ್ಲಿನ ಕೆಲವು ಕಥೆಗಳಲ್ಲಿ ಕಥೆಯ ಅಂಶ ಏನೂ ಇಲ್ಲದಿದ್ದರೂ ಅದು ಪದಗಳೊಡನೆ ಆಡುವ ಆಟವಾಗಿ ಪರಿಣಮಿಸುತ್ತವೆ. ಮಕ್ಕಳ ಕಲಿನಲಿ ಶಿಕ್ಷಣ ವ್ಯವಸ್ಥೆಗೆ ಸರಿಯಾಗಿ ಹೊಂದಿಕೊಳ್ಳುತ್ತವೆ. ಈ ಆಟವನ್ನು ಆಡುತ್ತಾ ಮಕ್ಕಳು ಹೊಸ ಹೊಸ ಪದಗಳನ್ನು ಕಲಿಯುತ್ತಾ ಹೋಗಬಹುದು. ಯಾವುದಾದರು ಶೀರ್ಷಿಕೆ ಕೊಟ್ಟು ಶಿಕ್ಷಕರು ತರಗತಿಯೊಳಗೇ ಈ ಆಟವನ್ನು ಆಡಿಸಬಹುದು; ಅಷ್ಟೇ ಅಲ್ಲ ಯಾವ ಭಾಷೆಯಲ್ಲಾದರೂ ಈ ಆಟವನ್ನು ಆಡಬಹುದು. ಮಕ್ಕಳ ಕ್ರಿಯಾಶೀಲತೆಯನ್ನು ಹೆಚ್ಚಿಸಲು ಇದೊಂದು ಸುಲಭದ ವಿಧಾನ. 'ಸೋಮಾರಿ ಮಲ್ಲ' ಎಂಬ ಒಂದು ಕಥೆಯಲ್ಲಿ ಮಲ್ಲ ತನ್ನ ಒಡತಿ ಹೇಳುವ ಯಾವ ಕೆಲಸವನ್ನು ಮಾಡದೆ ಎಲ್ಲಕ್ಕೂ ಒಂದೊಂದು ಸಬೂಬು ಸೇರಿಸುತ್ತಾ ಹೋಗುತ್ತಾನೆ.

'ಮುಸುರೆ ಬೆಳಗೊ ಮಲ್ಲ!
ಕೆಸರಲಿ ಬಿದ್ದೇನಲ್ಲಾ!
ಬತ್ತ ಕುಟ್ಟೋ ಮಲ್ಲಾ!
ಒನಕೆ ತಾಗೀತಲ್ಲಾ!..'

ಕೊನೆಗೆ ಊಟಕ್ಕೆ ಕರೆದಾಗ ಮಾತ್ರ ಅವನು ಬೇಗನೆ ಚಾಪೆಯಿಂದ ಎದ್ದು ಬರುತ್ತಾನೆ. ಇಂಥಾ ಕಥೆಗಳನ್ನು ಭಾಷಾ ಶಿಕ್ಷಕರು ಕ್ರಿಯಾತ್ಮಕವಾಗಿ ಬಳಸಿಕೊಳ್ಳಬಹುದು.

ಹಾಗೆಯೇ ನಾಮಪದ ಕ್ರಿಯಾಪದಗಳ ಪರಿಚಯ ಮಾಡಿಸುವ ಕೆಲವು ಸಾಲುಗಳನ್ನು ನೋಡೋಣ

'ಅರರೆ ಕೊಡಲಿ, ಹರಿತ ಕೊಡಲಿ
ಮರದ ಬಡಕೆ ಏಟು ಕೊಡಲಿ'
'ಓವೋ ಗುದ್ದಲಿ, ಉಕ್ಕು ಗುದ್ದಲಿ,
ಬಾವಿ ತೋಡಲಿ, ಕಲ್ಲು ಗುದ್ದಲಿ!'
'ಒರತೆ ನೀರೆ! ಹೊಳೆವ ತಾರೆ
ಹರಿದು ಬಾರೆ, ನೀರು ತಾರೆ'

ಹೀಗೆ ಯಾವ ಕೋಣದಿಂದ ನೋಡಿದರೂ ಕರ್ನಾಟಕದ ಮಕ್ಕಳ ಸಾಹಿತ್ಯಕ್ಕೆ ಪಂಜೆಯವರು ಹಾಕಿಕೊಟ್ಟ ತಳಪಾಯ ಗಟ್ಟಿಯಾಗಿಯೇ ಇದೆ. ಆದರೆ ಅದರ ಮೇಲೆ ಕಟ್ಟಬಹುದಾದಷ್ಟು ಸುಂದರ ಕಟ್ಟಡವನ್ನು ನಾವು ಕಟ್ಟಿದ್ದೇವೆಯೇ? ಎಂದು ನಮ್ಮನ್ನು ನಾವು ಕೇಳಿಕೊಳ್ಳಬೇಕಾಗಿದೆ.

❖❖❖

* ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗ ಬೇಕೆಂಬುದು ನಮ್ಮ ಅಪೇಕ್ಷೆ.

* ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278-2192

* ಯುಜಿಸಿ ಕೇರ್ ಲಿಸ್ಟ್‌ನಲ್ಲಿ ಇದೆ.

* ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.

* ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.

* ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.

* ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.

* ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಅವಶ್ಯಕತೆಗಳನ್ನು ಪೂರೈಸಿರಬೇಕು.

* ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ವರ್ಡ್‌ಫೈಲ್‌ನಲ್ಲಿ ಕಳುಹಿಸಬೇಕು. (ಯೂನಿಕೋಡ್ ಬೇಡ)

* ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.

* ಚಂದಾ ಕಳುಹಿಸಿದವರು ದಯವಿಟ್ಟು ಆ ಬಗ್ಗೆ ವಿವರವನ್ನು ಈಮೇಲ್ ಮೂಲಕ ಅಥವಾ ಪತ್ರ ಮೂಲಕ ತಿಳಿಸಬೇಕು. ಈಗಾಗಲೇ ಕೆಲವು ಚಂದಾ ಬಂದುದು ಯಾರಿಂದ ಎಂದು ಗೊತ್ತಾಗದೆ ಪತ್ರಿಕೆ ಕಳುಹಿಸಲು ಸಾಧ್ಯವಾಗುತ್ತಿಲ್ಲ.

* ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ–574219
ಮಿಂಚಂಚೆ : chinthanabayalu@gmail.com
ಜಾಲತಾಣ : www.chinthanabayalu.in

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 14, Issue 1, July - September 2025

Edited, Published, Printed & Owned by

Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
chinthanabayalu@gmail.com
www.chinthanabayalu.in

Printed at

Aakrithi Prints
Light House Hill Road, Mangaluru - 575 001

Pages : 232

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com